॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೭

ದ್ರೋಣಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ದ್ರೋಣಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತವಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀಪದ್ಮಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ದ್ರೋಣಪರ್ವ - ಭಾಗ ೧೭

© ಶತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-74-3

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	X + 498 = 508
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ಶತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಪ್ರಹ್ಲಾದ ದೇಶಪಾಂಡೆ ಹಾಗೂ ಎಂ. ಶರತ್ ಚಂದ್ರ
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು.
ಮುದ್ರಕರು	-	**ಪವನ್ ಪ್ರಿಂಟರ್ಸ್**, ಬೆಂಗಳೂರು-18 **ಮೊಬೈಲ್** : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.



ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಯನೀನ್ನುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೭

ದ್ರೋಣಪರ್ವ

ಪುಟ ಸಂ.

೪. ಪ್ರತಿಜ್ಞಾಪರ್ವ

69. ಅಭಿಮನ್ಯುವಿನ ವಿಷಯದಲ್ಲಿ ಅರ್ಜುನನ ಶಂಕೆ. ಯುಧಿಷ್ಠಿರನಿಂದ ಅವನ ವಧೆಯ ಪ್ರಕಾರವನ್ನು ತಿಳಿದು ಜಯದ್ರಥ ವಧೆಯ ಶಪಥಪೂರ್ವಕ ಪ್ರತಿಜ್ಞೆ. 01

70. ಅರ್ಜುನ ಪ್ರತಿಜ್ಞೆಯನ್ನು ಕೇಳಿ ಚಕಿತನಾದ ಸೈಂಧವನಿಗೆ ದ್ರೋಣ-ದುರ್ಯೋಧರಿಂದ ಆಶ್ವಾಸನೆ. 33

71. ಕೃಷ್ಣನಿಂದ ಅರ್ಜುನನಿಗೆ ಜಯದ್ರಥನಿಗೆ ದ್ರೋಣಾದಿಗಳ ಆಶ್ವಾಸನೆಯ ಕಥನ ಮತ್ತು ಅರ್ಜುನನಿಂದ ತನ್ನ ಸಾಮರ್ಥ್ಯದ ಕಥನ 40

72. ಕೃಷ್ಣನಿಂದ ಸುಭದ್ರೆಯ ಸಮಾಶ್ವಾಸನೆ 53

73. ಕೃಷ್ಣನ ಮಾತುಗಳನ್ನು ಕೇಳಿ ಸುಭದ್ರೆಯ ವಿಲಾಪ. ಕೃಷ್ಣನ ಸಮಾಧಾನ. ರಾತ್ರಿಯಲ್ಲಿ ಅರ್ಜುನನಿಂದ ಶಿವಪೂಜೆ, ಕೃಷ್ಣ-ದಾರುಕ ಸಂಭಾಷಣೆ 59

74. ಸ್ವಪ್ನದಲ್ಲಿ ಕೃಷ್ಣನು ಅರ್ಜುನನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಿ ಶಿವನಿಂದ ಪಾಶುಪತಾಸ್ತ್ರ ಕೊಡಿಸುವುದು. 78

75. ಪ್ರಾತಃಆಹ್ನಿಕವನ್ನು ಪೂರೈಸಿದ ಯುಧಿಷ್ಠಿರನ ಬಳಿಗೆ ಕೃಷ್ಣನ ಆಗಮನ ಮತ್ತು ಜಯದ್ರಥನ ವಧೆಯ ವಿಷಯದಲ್ಲಿ ಅವನಿಗೆ ಸಮಾಶ್ವಾಸನ. 97

76. ಸೈಂಧವನ ಬಳಿ ಹೋಗುವ ಅರ್ಜುನನಿಂದ ಸಾತ್ಯಕಿಯನ್ನು ಕುರಿತು ಯುಧಿಷ್ಠಿರನ ರಕ್ಷಣೆಯ ಆದೇಶ 109

೫. ಜಯದ್ರಥವಧಪರ್ವ

77. ಧೃತರಾಷ್ಟ್ರನ ವಿಲಾಪ ಮತ್ತು ಮುಂದಿನ ಯುದ್ಧ ಕಥನ ಪ್ರಾರ್ಥನೆ 127

78. ಸಂಜಯನಿಂದ ಧೃತರಾಷ್ಟ್ರ ನಿಂದಾಪೂರ್ವಕವಾಗಿ ಯುದ್ಧ ಕಥನ ದ್ರೋಣರಿಂದ ಪದ್ಮಗರ್ಭವ್ಯೂಹ ರಚನೆ 138

79. ಅರ್ಜುನನ ರಣರಂಗ ಪ್ರವೇಶ ಮತ್ತು ಅವನ ಯುದ್ಧದ ವರ್ಣನೆ 149

80. ಅರ್ಜುನನಿಂದ ದುಶ್ಶಾಸನನ ಪರಾಜಯ. ದ್ರೋಣರ ಜೊತೆಯಲ್ಲಿ ಸ್ವಲ್ಪ ಯುದ್ಧವನ್ನು ಮಾಡಿ ಅನಂತರ ಅರ್ಜುನನ ವ್ಯೂಹ ಪ್ರವೇಶ. 162

81. ಅರ್ಜುನನಿಂದ ಶ್ರುತಾಯುಧ ಮತ್ತು ಸುದಕ್ಷಿಣರ ವಧೆ 180

82. ಅರ್ಜುನನಿಂದ ಶ್ರುತಾಯು ಮೊದಲಾದವರ ವಧೆ 196

83. ದುರ್ಯೋಧನನಿಂದ ದ್ರೋಣರ ನಿಂದನೆ. ದ್ರೋಣರಿಂದ ದುರ್ಯೋಧನನಿಗೆ ಕವಚಧಾರಣೆ 210

84. ರಾಜರ ದ್ವಂದ್ವ ಯುದ್ಧಗಳು 227

85. ದ್ರೋಣ-ಧೃಷ್ಟದ್ಯುಮ್ನರ ಯುದ್ಧ. ದ್ರೋಣರಿಂದ ತಮ್ಮ ರಥಕ್ಕೆ ಬಂದ ಧೃಷ್ಟದ್ಯುಮ್ನನ ಉಚ್ಚಾಟನೆ. 244

86. ದ್ರೋಣ-ಸಾತ್ಯಕಿಯರ ಯುದ್ಧ. ಬಾಯಾರಿದ ಅಶ್ವಗಳಿಗಾಗಿ ಅರ್ಜುನನಿಂದ ಸರೋವರ ನಿರ್ಮಾಣ 251

87. ಅಶ್ವಗಳನ್ನು ಬಿಚ್ಚಿ, ನೀರನ್ನು ಕುಡಿಸಿ, ಸಮಾಧಾನ ಮಾಡಿ ಕೃಷ್ಣನಿಂದ ಸೈಂಧವನ ಕಡೆಗೆ ರಥದ ಪ್ರಯಾಣ 274

88. ಜಯದ್ರಥನ ಕಡೆಗೆ ಸಾಗುವ ಅರ್ಜುನನಿಗೆ ದುರ್ಯೋಧನನಿಂದ ತಡೆ 283

89. ದುರ್ಯೋಧನನು ತಡೆಯುತ್ತಿರಲು ಕೃಷ್ಣನಿಂದ ಅರ್ಜುನನಿಗೆ ಅವನ ದುಷ್ಕೃತ್ಯಗಳ ಜ್ಞಾಪನೆ. ಅರ್ಜುನನನ್ನು ಕುರಿತು ದುರ್ಯೋಧನನ ವಿಯೋಚನ 292

90. ಅರ್ಜುನನಿಂದ ದುರ್ಯೋಧನನ ಪರಾಜಯ ಮತ್ತು ಸೈಂಧವನ ಕಡೆಗೆ ಅರ್ಜುನನ ಗಮನ 300

91. ಭೂರಿಶ್ರವ ಮೊದಲಾದ ಎಂಟು ಮಹಾರಥರ ಜೊತೆಯಲ್ಲಿ ಅರ್ಜುನನ ಯುದ್ಧ 310

92. ಸಂಜಯನಿಂದ ಸೈನ್ಯದ ರಥ-ಧ್ವಜಗಳ ವರ್ಣನೆ 317

93. ದ್ರೋಣ-ಯುಧಿಷ್ಠಿರರ ಯುದ್ಧ. ದ್ರೋಣರಿಂದ ಯುಧಿಷ್ಠಿರನ ಪರಾಜಯ 325

94. ಸಂಕುಲ ಯುದ್ಧ. ಬೃಹತ್ಕ್ಷತ್ರನಿಂದ ಕ್ಷೇಮಧೂರ್ತಿಯ ವಧೆ
ದ್ರೌಪದಿಯ ಪುತ್ರರಿಂದ ಶಲಸ ವಧೆ ಮತ್ತು ಭೀಮಸೇನನಿಂದ
ಅಲಂಬುಸನ ಪರಾಜಯ 335

95. ಘಟೋತ್ಕಚನಿಂದ ಅಲಂಬುಸನ ವಧೆ 351

96. ಅರ್ಜುನನ ಜೀವಿತ ವಿಷಯದಲ್ಲಿ ಸಂಶಯವನ್ನು ಹೊಂದಿದ
ಯುಧಿಷ್ಠಿರನಿಂದ ಅವನ ಸಹಾಯಕ್ಕಾಗಿ ಹೋಗಲು ಸಾತ್ಯಕಿಗೆ ಒತ್ತಾಯ 369

97. ಯುಧಿಷ್ಠಿರನ ಮಾತಿಗೆ ಸಾತ್ಯಕಿಯ ಉತ್ತರ. ಭೀಮಾದ್ಯರಿಂದ ತನ್ನ
ರಕ್ಷಣೆಯನ್ನು ಹೇಳಿ ಪುನಃ ಯುಧಿಷ್ಠಿರನಿಂದ ಒತ್ತಾಯ 391

98. ಸಂಕುಲಯುದ್ಧ 402

99. ಅರ್ಜುನನ ಬಳಿಗೆ ಹೋಗುತ್ತಾ ಕೃತವರ್ಮನ ಜೊತೆಯಲ್ಲಿ
ಸಾತ್ಯಕಿಯ ಯುದ್ಧ. 419

100. ತನ್ನ ಸೈನ್ಯದ ಪರಾಜಯವನ್ನು ಕೇಳಿ ಧೃತರಾಷ್ಟ್ರನ ಶೋಕ.
ಅವನನ್ನು ನಿಂದಿಸಿ ಸಂಜಯನಿಂದ ಕೃತವರ್ಮರ ಪರಾಕ್ರಮದ ವರ್ಣನೆ 434

101. ಸಾತ್ಯಕಿಯ ಜಲಸಂಧನ ವಧೆ. 486

★ ★ ★ ★ ★

ಮಹಾಭಾರತ

ದ್ರೋಣಪರ್ವ

೪. ಪ್ರತಿಜ್ಞಾಪರ್ವ

ಅರವತ್ತೊಂಬತ್ತನೆಯ ಅಧ್ಯಾಯ

ಅಭಿಮನ್ಯುವಿನ ವಿಷಯದಲ್ಲಿ ಅರ್ಜುನನ ಶಂಕೆ. ಯುಧಿಷ್ಠಿರನಿಂದ ಅವನ ವಧೆಯ ಪ್ರಕಾರವನ್ನು ತಿಳಿದು ಜಯದ್ರಥವಧೆಯ ಶಪಥಪೂರ್ವಕ ಪ್ರತಿಜ್ಞೆ.

ಧೃತರಾಷ್ಟ್ರ:

ಅಥ ಸಂಶಪ್ತಕೈಃ ಸಾರ್ಧಂ ಯುದ್ಧ್ಯಮಾನೇ ಧನಂಜಯೇ ।
ಅಭಿಮನ್ಯೌ ಹತೇ ಚಾಪಿ ಬಾಲೇ ಬಲವತಾಂ ವರೇ ॥ ೧ ॥

ಮಹರ್ಷಿಸತ್ತಮೇ ಯಾತೇ ಯುಧಿಷ್ಠಿರಪುರೋಗಮಾಃ ।
ಪಾಂಡವಾಃ ಕಮಥಾಽಕಾರ್ಷುಃ ಶೋಕೇನ ಹತಚೇತಸಃ ॥ ೨ ॥

ಧೃತರಾಷ್ಟ್ರ– ಅರ್ಜುನನು ಸಂಶಪ್ತಕರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿರುವಾಗ, ಬಲಿಷ್ಠರಲ್ಲಿ ಶ್ರೇಷ್ಠನಾದ, ಬಾಲಕನಾದ ಅಭಿಮನ್ಯುವು ಹತನಾಗಿ,

ಮಹರ್ಷಿ ಶ್ರೇಷ್ಠರಾದ ವ್ಯಾಸರು ಹೊರಟುಹೋಗುತ್ತಿರಲು, ಶೋಕದಿಂದ ಕೂಡಿದ ಮನಸ್ಸುಳ್ಳ ಯುಧಿಷ್ಠಿರ ಮೊದಲಾದ ಪಾಂಡವರು ಅನಂತರ ಏನು ಮಾಡಿದರು?

ಕಥಂ ಸಂಶಪ್ತಕೇಭ್ಯೋ ವಾ ನಿವೃತ್ತೋ ವಾನರಧ್ವಜಃ ।
ಕೇನ ವಾ ಕಥಿತಸ್ತಸ್ಯ ಪ್ರಶಾಂತಃ ಸುತಪಾವಕಃ ।
ಏತನ್ಮೇ ಶಂಸ ತತ್ತ್ವೇನ ಸರ್ವಮೇವೇಹ ಸಂಜಯ ॥ ೩ ॥

ಕಪಿಧ್ವಜನಾದ ಅರ್ಜುನನು ಸಂಶಪ್ತಕರಿಂದ ಹೇಗೆ ಹಿಂದಿರುಗಿದನು? ಅವನ ಪುತ್ರನೆಂಬ ಅಗ್ನಿಯು ಶಾಂತವಾಯಿತು ಎಂದು ಅವನಿಗೆ ಯಾರು ಹೇಳಿದರು? ಎಲೈ ಸಂಜಯನೇ, ಇದೆಲ್ಲವನ್ನೂ ನನಗೆ ಯಥಾರ್ಥವಾಗಿ ಹೇಳು.

ಸಂಜಯಃ

ಶೃಣು ರಾಜನ್ ಯಥಾ ತೇಭ್ಯೋ ನಿವೃತ್ತಃ ಕೃಷ್ಣಸಾರಥಿಃ ।
ತತಃ ಸರ್ವಾಣಿ ಸೈನ್ಯಾನಿ ದಹನ್ ಕೃಷ್ಣಗತಿರ್ಯಥಾ ॥ ೪ ॥

ಸಂಜಯ– ಎಲೈ ರಾಜನೇ, ಕೃಷ್ಣಸಾರಥಿಯಾದ ಅರ್ಜುನನು ಅಗ್ನಿಯಂತೆ ಎಲ್ಲ ಸೈನ್ಯವನ್ನು ಸುಡುತ್ತಾ ಹೇಗೆ ಹಿಂದಿರುಗಿದನೆಂದು ಕೇಳು.

ಸಂಪ್ರಯಾತೇಽಸ್ತಮಾದಿತ್ಯೇ ಸಂಧ್ಯಾಕಾಲ ಉಪಸ್ಥಿತೇ ।
ಆಯಾಂತಮಾತ್ಮಶಿಬಿರಂ ನಿಮಿತ್ತೈರಘಶಂಸಿಭಿಃ ॥ ೫ ॥

ಯಚ್ಚಾಸೀನ್ಮಾನಸಂ ತಸ್ಯ ಯಚ್ಚ ಕೃಷ್ಣೇನ ಭಾಷಿತಮ್ ।
ಯಥಾ ಚ ಕಥಿತಸ್ತಸ್ಯ ನಿಹತಃ ಸುತಪಾವಕಃ ॥ ೬ ॥

ವಿಸ್ತರೇಣೈವ ಮೇ ಸರ್ವಂ ಬ್ರುವತಃ ಶೃಣು ಮಾರಿಷ ॥ ೭ ॥

ಸೂರ್ಯನು ಅಸ್ತಪರ್ವತದ ಕಡೆಯಲ್ಲಿ ಹೋಗುತ್ತಾ, ಸಂಧ್ಯಾಕಾಲವು ಸಮೀಪಿಸುತ್ತಿರಲು, ತನ್ನ ಶಿಬಿರಕ್ಕೆ ಹಿಂದಿರುಗುವ ಅರ್ಜುನನಿಗೆ ಪಾಪ ಸೂಚಕವಾದ ಅಪಶಕುನಗಳನ್ನು ನೋಡಿ ಮನಸ್ಸಿನಲ್ಲಿ ಏನಾಯಿತು? ಕೃಷ್ಣನು ಏನು ಮಾತನಾಡಿದನು? ತನ್ನ ಸುತನೆಂಬ ಅಗ್ನಿಯು ಹತನಾದನೆಂದು ಹೇಗೆ ಕೇಳಿದನು? ಎಲೈ ಪೂಜ್ಯನೇ, ಇವೆಲ್ಲವನ್ನೂ ವಿಸ್ತಾರವಾಗಿ ಹೇಳುವೆನು, ಅದನ್ನು ಕೇಳು.

ತಸ್ಮಿನ್ನಹನಿ ನಿರ್ವೃತ್ತೇ ಘೋರೇ ಪ್ರಾಣಭೃತಾಂ ಕ್ಷಯೇ ।
ಆದಿತ್ಯೇಽಸ್ತಂ ಗತೇ ಶ್ರೀಮಾನ್ ಸಂಧ್ಯಾಕಾಲ ಉಪಸ್ಥಿತೇ ॥ ೮ ॥

ವ್ಯಪಯಾತೇಷು ಸೈನ್ಯೇಷು ವಾಸಾಯ ಭರತರ್ಷಭಃ ।
ಹತ್ವಾ ಸಂಶಪ್ತಕವ್ರಾತಾನ್ ದಿವ್ಯೈರಸ್ತ್ರೈಃ ಕಪಿಧ್ವಜಃ ।
ಆಯಾತ್ ಸ್ವಶಿಬರಂ ಜಿಷ್ಣುರ್ಹತ್ವಮಾಸ್ಥಾಯ ತಂ ರಥಮ್ ॥ ೯ ॥

ಗಚ್ಛನ್ನೇವ ಚ ಗೋವಿಂದಂ ಸನ್ನಕಂಠೋಽಭ್ಯಭಾಷತ ॥ ೧೦ ॥

ದೇಹಧಾರಿಗಳು ವಿನಾಶವನ್ನು ಹೊಂದಿದ ಆ ಹಗಲು ಸಂಪನ್ನಗೊಂಡು, ಆದಿತ್ಯನು ಅಸ್ತಂಗತನಾಗಿ, ಕಾಂತಿಯುಕ್ತವಾದ ಸಂಧ್ಯಾಕಾಲವು ಉಪಸ್ಥಿತವಾಗಿರಲು ಎಲ್ಲ ಸೈನ್ಯಗಳೂ ವಿಶ್ರಾಂತಿಗಾಗಿ ಹಿಂದಿರುಗಿದವು. ಭರತಶ್ರೇಷ್ಠನಾದ, ಕಪಿಧ್ವಜನಾದ ಅರ್ಜುನನು ತನ್ನ ದಿವ್ಯಾಸ್ತ್ರಗಳಿಂದ ಸಂಶಪ್ತಕಗಣಗಳನ್ನು ಕೊಂದು ಜೈತ್ರರಥವನ್ನು ಏರಿ ತನ್ನ ಶಿಬಿರದ ಕಡೆಗೆ ಬಂದನು. ಶಿಬಿರದ ಕಡೆಗೆ ಹೋಗುತ್ತಲೇ ಅವನು ಉಡುಗಿ ಹೋದ ಕಂಠದಿಂದ ಕೃಷ್ಣನ ಜೊತೆಗೆ ಮಾತನಾಡಿದನು.

ಕಿನ್ನು ಮೇ ಹೃದಯಂ ತ್ರಸ್ತಂ ವಾಕ್ಯಂ ಸಜ್ಜತಿ ಕೇಶವ ।
ಸ್ಪಂದತೇಽಂಗಾನ್ಯನಿಷ್ಟಾನಿ ಗಾತ್ರೈಃ ಸೀದಾಮಿ ಚಾಚ್ಯುತ ॥ ೧೧ ॥

ಅನಿಷ್ಟಂ ಚೈವ ಮೇ ಶ್ಲಿಷ್ಟಂ ಹೃದಯಾನ್ನಾಪಸರ್ಪತಿ ।
ಭೂಮ್ಯಾಂ ದಿವಿ ತಥಾಽತ್ಯುಗ್ರಾ ಉತ್ಪಾತಾಸ್ತ್ವಾಶಯಂತಿ ಮಾಮ್ ।
ಬಹುಪ್ರಕಾರಾ ದೃಶ್ಯಂತೇ ಸರ್ವ ಏವಾಘಶಂಸಿನಃ ॥ ೧೨ ॥

ಅಪಿ ಸ್ವಸ್ತಿ ಭವೇದ್ ರಾಜ್ಞಃ ಸಾಮಾತ್ಯಸ್ಯ ಗುರೋರ್ಮಮ ॥ ೧೩ ॥

ಎಲೈ ಕೇಶವನೇ, ಏಕೆ ನನ್ನ ಧ್ವನಿಯು ಗಾಬರಿಗೊಂಡಿದೆ? ಮಾತು ಏಕೆ ಉಡುಗಿ ಹೋಗುತ್ತಿದೆ? ಅಂಗಗಳು ಏಕೆ ಅದರುತ್ತಿವೆ? ಅಚ್ಯುತನೇ, ಎಲ್ಲ ದೇಹವೂ ಕುಸಿಯುತ್ತಿದೆ. ನನ್ನ ಮನಸ್ಸನ್ನು ಆಂಟಿಕೊಂಡಿರುವ ಅನಿಷ್ಟಭಾವನೆಗಳು ನನ್ನನ್ನು ಬಿಟ್ಟು ಹೋಗುತ್ತಿಲ್ಲ. ಭೂಮಿಯಲ್ಲಿ ಮತ್ತು ಅಂತರಿಕ್ಷದಲ್ಲಿ ಕಾಣುವ ಕ್ರೂರವಾದ ಅಪಶಕುನಗಳು ನನಗೆ ಭಯವನ್ನುಂಟು ಮಾಡುತ್ತಿವೆ. ಅವೆಲ್ಲವೂ ದೊಡ್ಡ ಅಪಚಾರವನ್ನು ಬಹುವಿಧವಾಗಿ ಸೂಚಿಸುತ್ತಿವೆ. ನನ್ನ ಹಿರಿಯನಾದ, ಅಮಾತ್ಯಸಹಿತನಾದ ಧರ್ಮರಾಜನಿಗೆ ಕ್ಷೇಮವಷ್ಟೆ?

ವಾಸುದೇವಃ

ವ್ಯಕ್ತಂ ಶಿವಂ ಸಹಭ್ರಾತುಃ ಸಾಮಾತ್ಯಸ್ಯ ಭವಿಷ್ಯತಿ ।
ಮಾ ಶುಚಃ ಕಿಂಚಿದೇವಾನ್ಯತ್ ತತ್ರಾನಿಷ್ಟಂ ಭವಿಷ್ಯತಿ ॥ ೧೪ ॥

ವಾಸುದೇವ– ಅಮಾತ್ಯರಿಂದ ಮತ್ತು ತಮ್ಮಂದಿರಿಂದ ಒಡಗೂಡಿದ ನಿನ್ನ ಅಣ್ಣನಿಗೆ ಖಂಡಿತವಾಗಿ ಮಂಗಳವಾಗುವುದು. ಶೋಕಪಡಬೇಡ. ಬೇರೆ ಯಾವುದೋ ಅಲ್ಪವಾದ ಅನಿಷ್ಟವು ಸಂಭವಿಸಿದೆ.

ಸಂಜಯಃ

ತತಃ ಸಂಧ್ಯಾಮುಪಾಸ್ಯೈವ ವೀರೌ ವೀರಾವಸಾದನೇ ।
ಕಥಯಂತೌ ರಣೇ ವೃತ್ತಂ ಪ್ರಯಾತೌ ರಥಮಾಸ್ಥಿತೌ ॥ ೧೫ ॥

ಸಂಜಯ– ಅನಂತರ ಶತ್ರುವೀರರನ್ನು ವಿನಾಶಪಡಿಸಿದ ಅವರಿಬ್ಬರೂ ಸಂಧ್ಯೋಪಾಸನೆಯನ್ನು ಮಾಡಿ, ಯುದ್ಧದಲ್ಲಿ ನಡೆದ ವೃತ್ತಾಂತವನ್ನು ಹೇಳಿಕೊಳ್ಳುತ್ತಾ ರಥವನ್ನೇರಿ ಹೊರಟರು.

ತತಃ ಸ್ವಶಿಬಿರಂ ಪ್ರಾಪ್ತೌ ಹತಾಮಿತ್ರೌ ಹತದ್ವಿಷೌ ।
ವಾಸುದೇವಾರ್ಜುನೌ ಚೈವ ಕೃತ್ವಾ ಕರ್ಮ ಸುದುಷ್ಕರಮ್ ॥ ೧೬ ॥

ವಾಸುದೇವಾರ್ಜುನರು ಅತ್ಯಂತ ದುಷ್ಕರವಾದ ಕರ್ಮವನ್ನು ಮಾಡಿ ತಮ್ಮ ಶತ್ರುಗಳನ್ನೂ ಮತ್ತು ದ್ವೇಷಿಗಳನ್ನೂ ಕೊಂದು ತಮ್ಮ ಶಿಬಿರವನ್ನು ಸೇರಿದರು.

ಧ್ವಸ್ತಾಕಾರಂ ಸಮಾಲಕ್ಷ್ಯ ಸಂವೀಕ್ಷ್ಯ ಪರವೀರಹಾ ।
ಬೀಭತ್ಸುರಬ್ರವೀತ್ ಕೃಷ್ಣಮಸ್ವಸ್ಥಹೃದಯಸ್ತದಾ ॥ ೧೭ ॥

ಆಗ ಪರವೀರಘಾತಕನಾದ ಅರ್ಜುನನು ಕಾಂತಿಹೀನವಾಗಿದ್ದ ತನ್ನ ಶಿಬಿರವನ್ನು ಗಮನಿಸಿ ಚೆನ್ನಾಗಿ ನೋಡಿ ಅಸ್ವಸ್ಥವಾದ ಮನಸ್ಸುಳ್ಳವನಾಗಿ ಕೃಷ್ಣನನ್ನು ಕುರಿತು ಹೇಳಿದನು.

ನಾದ್ಯ ನರ್ದಂತಿ ತೂರ್ಯಾಣಿ ಮಂಗಲಾನಿ ಜನಾರ್ದನ ।
ಮಿಶ್ರಾ ದುಂದುಭಿನಿರ್ಘೋಷೈಃ ಶಂಖಾ ಆಡಂಬರೈಃ ಸಹ ॥ ೧೮ ॥

ಎಲೈ ಜನಾರ್ದನನೇ, ಈ ದಿವಸ ಶಂಖಧ್ವನಿಗಳಿಂದ ಮಿಶ್ರಿತವಾದ, ದುಂದುಭಿ ಘೋಷಗಳಿಂದಲೂ ಮಿಶ್ರಿತವಾದ ಮಂಗಳವಾದ್ಯಗಳು ಮೊಳಗುತ್ತಿಲ್ಲ.

ವೀಣಾ ನ ಸಾಧು ವಾದ್ಯಂತೇ ಶಮ್ಯಾತಾಳರವೈಃ ಸಹ ।
ಮಂಗಲಾನಿ ಚ ಗೀತಾನಿ ನಾದ್ಯ ಗಾಂತಿ ಪಠಂತಿ ಚ ॥ ೧೯ ॥

ತಾಳಶಬ್ದಗಳ ಜೊತೆಯಲ್ಲಿ ವೀಣೆಗಳು ಸರಿಯಾಗಿ ನುಡಿಸಲ್ಪಡುತ್ತಿಲ್ಲ. ಮಂಗಳ ಗೀತೆಗಳನ್ನು ಯಾರೂ ಹಾಡುತ್ತಿಲ್ಲ ಮತ್ತು ಪಠಿಸುತ್ತಿಲ್ಲ.

ಸ್ತುತಿಮಂಗಲಸಂಯುಕ್ತಾ ಮಮಾನೀಕೇಷು ವಂದಿನಃ ।
ಯೋಧಾಶ್ಚಾಪಿ ಚ ಮಾಂ ದೃಷ್ಟ್ವಾ ನಿವರ್ತಂತೇ ಹ್ಯಧೋಮುಖಾಃ ।
ಕರ್ಮಾಣಿ ಚ ಯಥಾಪೂರ್ವಂ ಕೃತ್ವಾ ನಾಭಿವದಂತಿ ಮಾಮ್ ॥ ೨೦ ॥

ನನ್ನ ಸೈನ್ಯದಲ್ಲಿರುವ ಮಂಗಳಸಹಿತವಾದ ಸ್ತುತಿಗಳನ್ನು ಮಾಡುವ ವಂಧಿಗಳು ಮತ್ತು ಯೋಧರೂ ಸಹ ನನ್ನನ್ನು ನೋಡಿ ಮುಖವನ್ನು ತಗ್ಗಿಸಿ ಹೊರಟು ಹೋಗುತ್ತಿದ್ದಾರೆ. ಮೊದಲಿನಂತೆ ಕರ್ಮಗಳನ್ನು ಮಾಡಿ ನನ್ನನ್ನು ಮಾತನಾಡಿಸುತ್ತಿಲ್ಲ.

ಅಪಿ ಸ್ವಸ್ತಿ ಭವೇದದ್ಯ ಭ್ರಾತೃಭ್ಯೋ ಮಮ ಮಾಧವ ॥ ೨೧ ॥

ನ ಹಿ ಶುದ್ಧ್ಯತಿ ಮೇ ಭಾವೋ ದೃಷ್ಟ್ವಾ ಸ್ವಜನಮಾಕುಲಮ್ ।
ಅಪಿ ಪಾಂಚಾಲರಾಜಸ್ಯ ವಿರಾಟಸ್ಯ ಚ ಮಾನದ ।
ಸರ್ವೇಷಾಂ ಚೈವ ಯೋಧಾನಾಂ ಸಾಮಗ್ರ್ಯಂ ಸ್ಯಾನ್ಮಮಾಚ್ಯುತ ॥೨೨॥

ಎಲೈ ಮಾಧವನೇ, ಈ ದಿವಸ ನನ್ನ ಸಹೋದರರಿಗೆ ಕ್ಷೇಮವಪ್ಪೆ? ಸ್ವಜನರು ದುಃಖಾತುರರಾಗಿರುವುದನ್ನು ನೋಡಿ ನನ್ನ ಮನಸ್ಸಿಗೆ ಸಮಾಧಾನವಾಗುತ್ತಿಲ್ಲ. ಎಲೈ ಅಚ್ಯುತನೇ, ಮಾನದನೇ, ಪಾಂಚಾಲರಾಜನಿಗೆ, ವಿರಾಟರಾಜನಿಗೆ ಮತ್ತು ಎಲ್ಲ ಯೋಧರಿಗೆ ಕ್ಷೇಮವಪ್ಪೆ? (ಯಾವ ಹಾನಿಯೂ ಆಗಿಲ್ಲವಪ್ಪೆ?)

ನ ಚ ಮಾಽಭ್ಯೇತಿ ಸೌಭದ್ರಃ ಪ್ರಹೃಷ್ಟೈರ್ಭರ್ತೃಭಿಃ ಸಹ ।
ರಣಾದಾಯಾಂತಮುಚಿತಂ ಪ್ರತ್ಯುದ್ಯಾತಿ ಹಸನ್ನಿವ ॥ ೨೩ ॥

ಯುದ್ಧದಿಂದ ಹಿಂದಿರುಗಿದ ನನ್ನನ್ನು ಎದುರುಗೊಳ್ಳಲು ಯೋಗ್ಯವಾದ ರೀತಿಯಲ್ಲಿ ಮುಗುಳ್ನಗುತ್ತಾ ಸಹೋದರರ ಜೊತೆಯಲ್ಲಿ ಈ ದಿನ ಅಭಿಮನ್ಯುವು ನನ್ನೆಡೆಗೆ ಬರುತ್ತಿಲ್ಲ.

ಸಂಜಯಃ

ಏವಂ ಸಂಕಥಯಂತೌ ತೌ ಪ್ರವಿಷ್ಟೌ ಶಿಬಿರಂ ಸ್ವಕಮ್ ।
ದದೃಶಾತೇ ಭೃಶಾಸ್ವಸ್ಥಾನ್ ಪಾಂಡವಾನ್ ನಷ್ಟಚೇತಸಃ ॥ ೨೪ ॥

ಸಂಜಯ– ಹೀಗೆ ಮಾತನಾಡಿಕೊಳ್ಳುತ್ತಾ ಅವರು ತಮ್ಮ ಶಿಬಿರಕ್ಕೆ ಬಂದು, ಬಹಳ ಅಸ್ವಸ್ಥರಾಗಿ ನಷ್ಟಪ್ರಜ್ಞರಾಗಿದ್ದ ಪಾಂಡವರನ್ನು ನೋಡಿದರು.

ದೃಷ್ಟ್ವಾ ಭ್ರಾತೄಂಶ್ಚ ಪುತ್ರಾಂಶ್ಚ ವಿಮನಾ ವಾನರಧ್ವಜಃ ।
ಅಪಶ್ಯಂಸ್ತತ್ರ ಸೌಭದ್ರಮಿದಂ ವಚನಮಬ್ರವೀತ್ ॥ ೨೫ ॥

ಕಪಿಧ್ವಜನಾದ ಅರ್ಜುನನು ಸಹೋದರರನ್ನೂ ಮತ್ತು ಪುತ್ರರನ್ನೂ ನೋಡಿ ಅಭಿಮನ್ಯುವನ್ನು ಕಾಣದೆ ಖೇದದಿಂದ ಕೂಡಿದ ಮನಸ್ಸಿನಿಂದ ಅಲ್ಲಿ ಈ ಮಾತನ್ನು ಆಡಿದನು.

ಮುಖವರ್ಣೋ ಽಪ್ರಸನ್ನೋ ವಃ ಸರ್ವೇಷಾಮೇವ ದೃಶ್ಯತೇ ।
ನ ಚಾಭಿಮನ್ಯುಂ ಪಶ್ಯಾಮಿ ನಚ ಮಾಮಭಿನಂದಥ ॥ ೨೬ ॥

ನಿಮ್ಮೆಲ್ಲರ ಮುಖಕಾಂತಿಯು ಕುಂದಿಹೋಗಿರುವುದು ಕಂಡು ಬರುತ್ತಿದೆ. ಅಭಿಮನ್ಯುವನ್ನು ನಾನು ಕಾಣುತ್ತಿಲ್ಲ ಮತ್ತು ನೀವು ನನ್ನನ್ನು ಅಭಿನಂದಿಸುತ್ತಿಲ್ಲ.

ಶ್ರುತೋ ಯಥಾ ಮೇ ದ್ರೋಣೇನ ಪದ್ಮವ್ಯೂಹೋ ವಿನಿರ್ಮಿತಃ ।
ನ ಚ ವಸ್ತ್ಯ ಭೇತ್ತಾ ಽಸ್ತಿ ಅಭಿಮನ್ಯುಮೃತೇ ಶಿಶುಮ್ ॥ ೨೭ ॥

ದ್ರೋಣರು ಪದ್ಮವ್ಯೂಹವನ್ನು ರಚಿಸಿದ್ದಾರೆಂದು ನಾನು ಕೇಳಿದೆನು. ಮಗುವಾದ ಅಭಿಮನ್ಯುವೊಬ್ಬನನ್ನು ಬಿಟ್ಟು ಅದನ್ನು ಭೇದಿಸುವವರು ನಿಮ್ಮಲ್ಲಿ ಯಾರೂ ಇಲ್ಲ.

ನೋಪದಿಷ್ಟಶ್ಚ ಮೇ ತಸ್ಯ ಭಿತ್ತ್ವಾ ಽನೀಕಸ್ಯ ನಿರ್ಗಮಃ ।
ಕಚ್ಚಿನ್ನ ಬಾಲೋ ಯುಷ್ಮಾಭಿಃ ಪರಾನೀಕಂ ಪ್ರವೇಶಿತಃ ॥ ೨೮ ॥

ನಾನು ಅವನಿಗೆ ಪದ್ಮವ್ಯೂಹವನ್ನು ಭೇದಿಸಿ ಹೊರಗೆ ಬರುವ ರೀತಿಯನ್ನು ಉಪದೇಶಿಸಿಲ್ಲ. ನೀವೆಲ್ಲರೂ ಸೇರಿ ಆ ಬಾಲಕನನ್ನು ಶತ್ರುಸೈನ್ಯವನ್ನು ಪ್ರವೇಶ ಮಾಡುವಂತೆ ಮಾಡಿಲ್ಲವಷ್ಟೆ?

ಭಿತ್ತ್ವಾನೀಕಂ ನರವ್ಯಾಘ್ರಃ ಪರೇಷಾಂ ಬಹುಭಿರ್ಯುಧಿ ।
ಕಚ್ಚಿನ್ನ ನಿಹತಃ ಶೇತೇ ಸೌಭದ್ರಃ ಪರವೀರಹಾ ॥ ೨೯ ॥

ನರವ್ಯಾಘ್ರನೂ, ಪರವೀರಘಾತಕನೂ ಆದ ಅಭಿಮನ್ಯುವು ಶತ್ರುಗಳ ವ್ಯೂಹವನ್ನು ಭೇದಿಸಿ, ಬಹಳ ಯೋಧರಿಂದ ಸುತ್ತುವರಿಯಲ್ಪಟ್ಟು ಹತನಾಗಿ ಮಲಗಿಲ್ಲವಷ್ಟೆ?

ಲೋಹಿತಾಕ್ಷಂ ಮಹಾಬಾಹುಂ ಜಾತಂ ಸಿಂಹಮಿವಾದ್ರಿಷು ।
ಉಪೇಂದ್ರಸದೃಶಂ ಬ್ರೂತ ಕಥಮಾಯೋಧನೇ ಹತಃ ॥ ೩೦ ॥

ಅರುಣಾಕ್ಷನೂ, ಮಹಾಬಾಹುವೂ, ಪರ್ವತದಲ್ಲಿ ಸಿಂಹದಂತೆ ಜನಿಸಿದವನೂ, ಕೃಷ್ಣಸದೃಶನೂ ಆದ ಅವನು ಯುದ್ಧದಲ್ಲಿ ಹೇಗೆ ಹತನಾದನು ಎಂದು ಹೇಳಿ.

ಸುಕುಮಾರಂ ಮಹೋತ್ಸಾಹಂ ವಾಸವಸ್ಯಾತ್ಮಜಾತ್ಮಜಮ್ ।
ಸದಾ ಮಮ ಪ್ರಿಯಂ ಬ್ರೂತ ಕಥಮಾಯೋಧನೇ ಹತಃ ॥ ೩೧ ॥

ಸುಕುಮಾರನೂ, ಮಹೋತ್ಸಾಹವುಳ್ಳವನೂ, ಇಂದ್ರನ ಪುತ್ರನ ಪುತ್ರನೂ, ನನಗೆ ಯಾವಾಗಲೂ ಪ್ರಿಯನಾದವನೂ ಆದ ಅವನು ಹೇಗೆ ಯುದ್ಧದಲ್ಲಿ ಹತನಾದನು ಎಂದು ಹೇಳಿ.

ವಾಷ್ಣೇಯದಯಿತಂ ಶೂರಂ ಮಯಾ ಸತತಲಾಲಿತಮ್ ।
ಅಂಬಾಯಾಶ್ಚ ಪ್ರಿಯಂ ನಿತ್ಯಂ ಕೋऽವಧೀತ್ ಕಾಲಚೋದಿತಃ ॥೩೨॥

ಕೃಷ್ಣನಿಗೆ ಬಹಳ ಪ್ರಿಯನಾದ, ಶೂರನಾದ, ನನ್ನಿಂದ ಯಾವಾಗಲೂ ಲಾಲಿಸಲ್ಪಟ್ಟ, ತಾಯಿಗೂ ಪ್ರಿಯನಾದ ಅವನನ್ನು ಮೃತ್ಯುಗ್ರಸ್ತನಾದ ಯಾವನು ಸಂಹರಿಸಿದನು?

ಸದೃಶೋ ವೃಷ್ಣಿಸಿಂಹಸ್ಯ ಕೇಶವಸ್ಯ ಮಹಾತ್ಮನಃ ।
ವಿಕ್ರಮಶ್ರುತಮಾಹಾತ್ಮ್ಯೈಃ ಕಥಮಾಯೋಧನೇ ಹತಃ ॥ ೩೩ ॥

ಪರಾಕ್ರಮ, ವಿದ್ಯೆ ಮತ್ತು ಮಹಿಮೆಗಳಲ್ಲಿ ಮಹಾತ್ಮನಾದ, ವೃಷ್ಣಿಸಿಂಹನಾದ ಕೇಶವನಿಗೆ ಸದೃಶನಾದ ಅವನು ಯುದ್ಧದಲ್ಲಿ ಹೇಗೆ ಕೊಲ್ಲಲ್ಪಟ್ಟನು?

ಸುಭದ್ರಾಯಾಃ ಪ್ರಿಯಂ ನಿತ್ಯಂ ದ್ರೌಪದ್ಯಾಃ ಕೇಶವಸ್ಯ ಚ ।
ಯದಿ ಪುತ್ರಂ ನ ಪಶ್ಯಾಮಿ ಯಾಸ್ಯಾಮಿ ಯಮಸಾದನಮ್ ॥ ೩೪ ॥

ಸುಭದ್ರೆಗೂ, ದ್ರೌಪದಿಗೂ, ಕೇಶವನಿಗೂ ಯಾವಾಗಲೂ ಪ್ರಿಯನಾದ ನನ್ನ ಪುತ್ರನನ್ನು ನೋಡದಿದ್ದರೆ ನಾನು ಯಮಪಟ್ಟಣಕ್ಕೆ ಹೋಗುವೆನು.

ಮಹೋತ್ಸಾಹಂ ಮಹಾವೀರ್ಯಂ ದೀರ್ಘರಾಜೀವಲೋಚನಮ್ ।
ಯದಿ ಪುತ್ರಂ ನ ಪಶ್ಯಾಮಿ ಯಾಸ್ಯಾಮಿ ಯಮಸಾದನಮ್ ॥ ೩೫ ॥

ಮಹೋತ್ಸಾಹವುಳ್ಳವನೂ, ಮಹಾವೀರ್ಯನೂ, ದೀರ್ಘಪದ್ಮನೇತ್ರನೂ ಆದ ನನ್ನ ಪುತ್ರನನ್ನು ನೋಡದಿದ್ದರೆ ನಾನು ಯಮಪಟ್ಟಣಕ್ಕೆ ಹೋಗುವೆನು.

ಮೃದುಕುಂಚಿತಕೇಶಾಂತಂ ಬಾಲಂ ಬಾಲಮೃಗೇಕ್ಷಣಮ್ ।
ಮತ್ತದ್ವಿರದವಿಕ್ರಾಂತಂ ಸಾಲಪೋತಮಿವೋದ್ಗತಮ್ ॥ ೩೬ ॥

ಸ್ಮಿತಾಭಿಭಾಷಿಣಂ ದಾಂತಂ ಗುರುಪ್ರೇಷ್ಯಕರಂ ಸದಾ ।
ಬಾಲಂ ಚಾಬಾಲಕರ್ಮಾಣಂ ಪ್ರಿಯೋದ್ಯಂ ವೀತಮತ್ಸರಮ್ ॥ ೩೭ ॥

ಭಕ್ತಾನುಕಂಪಿನಂ ದಾಂತಂ ನ ಚ ದೀನಾನುಸಾರಿಣಮ್ ।
ಕೃತಜ್ಞಂ ಜ್ಞಾನಸಂಪನ್ನಂ ಕೃತಾಸ್ತ್ರಮನಿವರ್ತಿನಮ್ ॥ ೩೮ ॥

ಯುದ್ಧಾಭಿನಂದಿನಂ ನಿತ್ಯಂ ದ್ವಿಷತಾಮಭವರ್ಧನಮ್ ।
ಸ್ವೇಷಾಂ ಪ್ರಿಯಹಿತೇ ಯುಕ್ತಂ ಪಿತೃಣಾಂ ಜಯಗೃದ್ಧಿನಮ್ ॥ ೩೯ ॥

ನ ಚ ಪೂರ್ವಪ್ರಹರ್ತಾರಂ ಸಂಗ್ರಾಮೇ ನಷ್ಟಸಂಭ್ರಮಮ್ ।
ಯದಿ ಪುತ್ರಂ ನ ಪಶ್ಯಾಮಿ ಯಾಸ್ಯಾಮಿ ಯಮಸಾದನಮ್ ॥ ೪೦ ॥

ಮೃದುವಾದ ಗುಂಗರುಕೂದಲುಳ್ಳವನೂ, ಬಾಲನೂ, ಎಳೆಯ ಜಿಂಕೆಯ ಕಣ್ಣುಳ್ಳವನೂ, ಮದಗಜದ ಪರಾಕ್ರಮವುಳ್ಳವನೂ, ಸಾಲವೃಕ್ಷದ ಮರಿಯಂತೆ ಎತ್ತರವಾಗಿದ್ದವನೂ, ಮಂದಹಾಸಪೂರ್ವಕವಾಗಿ ಮಾತನಾಡುವವನೂ, ಇಂದ್ರಿಯ

ನಿಗ್ರಹವುಳ್ಳವನೂ, ಯಾವಾಗಲೂ ಹಿರಿಯರ ಮಾತನ್ನು ನಡೆಸಿಕೊಡುವವನೂ, ಬಾಲನಾಗಿದ್ದರೂ ಬಾಲರಿಗೆ ಮೀರಿದ ಕರ್ಮವನ್ನು ಮಾಡುವವನೂ, ಪ್ರಿಯವಾದ ಸಂಭಾಷಣೆಯುಳ್ಳವನೂ, ಮತ್ಸರವನ್ನು ತೊರೆದವನೂ, ಭಕ್ತಾನುಕಂಪಿಯೂ, ದೀನರನ್ನು ಅನುಸರಿಸದವನೂ, ಕೃತಜ್ಞನಾದವನೂ, ಜ್ಞಾನಸಂಪನ್ನನಾದವನೂ, ಅಸ್ತ್ರಾರಂಗತನಾದವನೂ, ಯುದ್ಧದಲ್ಲಿ ಹಿಮ್ಮೆಟ್ಟದವನೂ, ಯಾವಾಗಲೂ ಯುದ್ಧವನ್ನು ಬಯಸುವವನೂ, ಶತ್ರುಗಳಿಗೆ ಮಹಾನಾಶವನ್ನು ಉಂಟುಮಾಡುವವನೂ, ತನ್ನವರಿಗೆ ಪ್ರಿಯಚಿತ್ತವನ್ನು ಮಾಡುವುದರಲ್ಲಿ ರತನಾದವನೂ, ಪಿತೃಗಳ ಜಯವನ್ನು ಬಯಸುವವನೂ, ಯುದ್ಧದಲ್ಲಿ ಮೊದಲು ಪ್ರಹಾರ ಮಾಡದಿದ್ದವನೂ, ಗಾಬರಿಗೊಳ್ಳದವನೂ ಆದ ನನ್ನ ಪುತ್ರನನ್ನು ನೋಡದಿದ್ದರೆ ನಾನು ಯಮಪಟ್ಟಣಕ್ಕೆ ಹೋಗುವೆನು.

ಸುನಸಂ ಸುಲಲಾಟಂ ತಂ ಸುಭ್ರೂತ್ವದಶನಚ್ಛದಮ್ ।
ಅಪಶ್ಯತಸ್ತದ್ವದನಂ ಕಾ ಶಾಂತಿರ್ಹೃದಯಸ್ಯ ಮೇ ॥ ೪೧ ॥

ಒಳ್ಳೆಯ ನಾಸಿಕವನ್ನೂ, ಹಣೆಯನ್ನೂ, ಕಣ್ಣುಮತ್ತು ತುಟಿಗಳನ್ನು ಹೊಂದಿದವನೂ ಆದ ಅವನ ಮುಖವನ್ನು ನೋಡದಿದ್ದರೆ ನನ್ನ ಮನಸ್ಸಿಗೆ ಹೇಗೆ ಶಾಂತಿಯಾದೀತು?

ತಂತ್ರೀಸ್ವನಸುಖಂ ರಮ್ಯಂ ಪುಂಸ್ಕೋಕಿಲಸಮಧ್ವನಿಮ್ ।
ಅಶೃಣ್ವತಃ ಸ್ವನಂ ತಸ್ಯ ಕಾ ಶಾಂತಿರ್ಹೃದಯಸ್ಯ ಮೇ ॥ ೪೨ ॥

ತಂತಿಯ ನಾದದಂತೆ ಸುಖಕರವಾದ ನಾದವುಳ್ಳವನೂ, ಮನೋಹರನಾದವನೂ, ಪುಂಸ್ಕೋಕಿಲಕ್ಕೆ ಸಮವಾದ ಧ್ವನಿಯುಳ್ಳವನೂ ಆದ ನನ್ನ ಪುತ್ರನ ಧ್ವನಿಯನ್ನು ಕೇಳದಿದ್ದರೆ ನನ್ನ ಹೃದಯಕ್ಕೆ ಹೇಗೆ ಶಾಂತಿಯಾದೀತು?

ರೂಪಂ ಚಾಪ್ರತಿರೂಪಂ ತತ್ ತ್ರಿದಶೈರಪಿ ದುರ್ಲಭಮ್ ।
ಅಪಶ್ಯತೋ ಹಿ ವೀರಸ್ಯ ಕಾ ಶಾಂತಿರ್ಹೃದಯಸ್ಯ ಮೇ ॥ ೪೩ ॥

ದೇವತೆಗಳಿಗೂ ದುರ್ಲಭವಾದ ಅಪ್ರತಿಮವಾದ ರೂಪವನ್ನು ಹೊಂದಿದ್ದ ವೀರನಾದ ನನ್ನ ಪುತ್ರನನ್ನು ನೋಡದಿದ್ದರೆ ನನ್ನ ಹೃದಯಕ್ಕೆ ಹೇಗೆ ಶಾಂತಿಯಾದೀತು?

ಅಭವಾದನದಕ್ಷಂ ತಂ ಪಿತ್ರ್ಯಾಣಾಂ ವಚನೇ ರತಮ್ ।
ನಹ್ಯಹಂ ಯದಿ ಪಶ್ಯಾಮಿ ಕಾ ಶಾಂತಿರ್ಹೃದಯಸ್ಯ ಮೇ ॥ ೪೪ ॥

ಹಿರಿಯರನ್ನು ನಮಸ್ಕರಿಸುವುದರಲ್ಲಿ ಚತುರನಾದ, ಪಿತೃಗಳ ವಚನವನ್ನು ಪಾಲಿಸುವುದರಲ್ಲಿ ನಿರತನಾದ ಅವನನ್ನು ನೋಡದಿದ್ದರೆ ನನ್ನ ಹೃದಯಕ್ಕೆ ಹೇಗೆ ಶಾಂತಿಯಾದೀತು?

ಸುಕುಮಾರಃ ಸದಾ ವೀರೋ ಮಹಾರ್ಹಶಯನೋಚಿತಃ ।
ಭೂಮಾವನಾಥವಚ್ಚೇತೇ ನೂನಂ ನಾಥವತಾಂ ವರಃ ॥ ೪೫ ॥

ಸುಕುಮಾರನೂ, ವೀರನೂ, ಯಾವಾಗಲೂ ಶ್ರೇಷ್ಠವಾದ ಶಯನಗಳಿಗೆ ಯೋಗ್ಯನಾದವನೂ, ಸನಾಥರಲ್ಲಿ ಶ್ರೇಷ್ಠನಾದವನೂ ಆದ ಅವನು ಈ ದಿನ ಭೂಮಿಯ ಮೇಲೆ ಅನಾಥನಾಗಿ ಬಿದ್ದಿದ್ದಾನೆ.

ಶಯಾನಂ ಸಮುಪಾಸಂತೇ ಯಂ ಪುರಾ ಪರಮಸ್ತ್ರಿಯಃ ।
ತಮದ್ಯ ವಿಪ್ರವಿದ್ಧಾಂಗಮ್ ಉಪಾಸಂತೇऽಶಿವಾಃ ಶಿವಾಃ ॥ ೪೬ ॥

ಯಾವನ ಶಯನವನ್ನು ಹಿಂದೆ ಸುಂದರಿಯರಾದ ಸ್ತ್ರೀಯರು ಸೇವಿಸುತ್ತಿದ್ದರೋ ಅಂತಹ ಅವನು ಈ ದಿನ ಅಂಗಗಳಲ್ಲಿ ಗಾಯಗೊಂಡು ಅಮಂಗಳವಾದ ನರಿಗಳಿಂದ ಉಪಾಸಿಸಲ್ಪಡುತ್ತಿದ್ದಾನೆ.

ಯಃ ಪುರಾ ಬೋದ್ಧ್ಯತೇ ಸುಪ್ತಃ ಸೂತಮಾಗಧವಂದಿಭಿಃ ।
ತಮದ್ಯ ಬೋಧಯಿಷ್ಯಂತಿ ಶಾಪದಾ ವಿಕೃತೈಃ ಸ್ವರೈಃ ॥ ೪೭ ॥

ಮಲಗಿ ನಿದ್ರಿಸುತ್ತಿದ್ದ ಯಾವ ಅವನನ್ನು ಸೂತ-ಮಾಗಧ-ವಂದಿಗಳು ಎಬ್ಬಿಸುತ್ತಿದ್ದರೋ ಅಂತಹ ಅವನು ಈ ದಿನ ಮಾಂಸಾಹಾರಿ ಪ್ರಾಣಿಗಳ ವಿಕೃತ ಸ್ವರಗಳಿಂದ ಎಚ್ಚರಿಸಲ್ಪಡುವನು.

ಛತ್ರಚ್ಚಾಯಾಸಮುಚಿತಂ ತಸ್ಯ ತದ್ ವದನಂ ಶುಭಮ್ ।
ನೂನಮದ್ಯ ರಜೋಧ್ವಸ್ತಂ ರಣೇ ರೇಣುಃ ಕರಿಷ್ಯತಿ ॥ ೪೮ ॥

ಛತ್ರಚ್ಛಾಯೆಗೆ ಯೋಗ್ಯವಾದ ಆವನ ಸುಂದರವಾದ ಮುಖವನ್ನು ಈ ದಿನ ಧೂಳುಗಳು ರಣರಂಗದಲ್ಲಿ ಮಲಿನವನ್ನಾಗಿ ಮಾಡುತ್ತವೆ.

ಹಾ ಪುತ್ರಕಾವಿತೃಪ್ತಸ್ಯ ಸತತಂ ಪುತ್ರದರ್ಶನೇ ।
ಮಂದಪುಣ್ಯಸ್ಯ ಕಾಲೇನ ಯಥಾ ಮೇ ನೀಯಸೇ ಬಲಾತ್ ॥ ೪೯ ॥

ಅಯ್ಯೋ ಪುತ್ರನೇ, ನಿನ್ನ ದರ್ಶನದಲ್ಲಿ ತೃಪ್ತಿಯನ್ನೇ ಹೊಂದದ ಮಂದಭಾಗ್ಯನಾದ ನನ್ನಿಂದ ಮೃತ್ಯುವು ನಿನ್ನನ್ನು ಬಲಾತ್ಕಾರದಿಂದ ಎಳೆದೊಯ್ಯುತ್ತಿದ್ದಾನೆ!

ಸಾऽದ್ಯ ಸಂಯಮನೀ ನೂನಂ ಸತಾಂ ಸುಕೃತಿನಾಂ ಗತಿಃ ।
ಸ್ವಭಾಭಿರ್ಮಂಡಿತಾ ರಮ್ಯಾ ತ್ವಯಾऽತ್ಯರ್ಥಂ ವಿರಾಜಿತಾ ॥ ೫೦ ॥

ಈ ದಿನ ನಿನ್ನ ಕಾಂತಿಯಿಂದ ಅಲಂಕೃತವಾಗಿ ಬಹಳವಾಗಿ ಶೋಭಿಸುವ ಮನೋಹರವಾದ ಯಮಪುರವಾದ ಸಂಯಮನಿಯು ಪುಣ್ಯವನ್ನು ಮಾಡಿದ ಸಜ್ಜನರಿಗೆ ಗತಿಯಾಗಿದೆ.

ನೂನಂ ವೈವಸ್ವತಶ್ಚ ತ್ವಾಂ ವರುಣಶ್ಚ ಪ್ರಿಯಾತಿಥಿಮ್ ।
ಶತಕ್ರತುರ್ಧನೇಶಶ್ಚ ಪ್ರಾಪ್ತಮರ್ಚಂತ್ಯಭೀರುಕಮ್ ॥ ೫೧ ॥

ಖಂಡಿತವಾಗಿ ಪ್ರಿಯಾತಿಥಿಯಾಗಿ ಬಂದ ನಿರ್ಭಯನಾದ ನಿನ್ನನ್ನು ಯಮನೂ, ವರುಣನೂ, ಇಂದ್ರನೂ, ಕುಬೇರನೂ ಅರ್ಚಿಸುತ್ತಾರೆ.

ಸಂಜಯಃ

ಏವಂ ವಿಲಪ್ಯ ಬಹುಲಂ ಭಿನ್ನಪೋತೋ ವಣಿಗ್ ಯಥಾ ।
ದುಃಖೇನ ಮಹತಾऽऽವಿಷ್ಟೋ ಯುಧಿಷ್ಠಿರಮಪೃಚ್ಛತ ॥ ೫೨ ॥

ಸಂಜಯ– ಹೀಗೆ ನಾವೆಯು ಒಡೆದುಹೋದ ವರ್ತಕನಂತೆ ಬಹಳವಾಗಿ ವಿಲಾಪವನ್ನು ಮಾಡಿ, ಬಹಳ ದುಃಖದಿಂದ ಕೂಡಿದವನಾಗಿ ಯುಧಿಷ್ಠಿರನನ್ನು ಪ್ರಶ್ನೆ ಮಾಡಿದನು.

ಕಥಂ ತ್ವಯಿ ಚ ಭೀಮೇ ಚ ಧೃಷ್ಟದ್ಯುಮ್ನೇ ಚ ಜೀವತಿ ।
ಸಾತ್ಯಕೇ ಶಕ್ರವಿಕ್ರಾಂತೇ ಸೌಭದ್ರೋ ನಿಹತಃ ಪರೈಃ ॥ ೫೩ ॥

ನೀನೂ, ಭೀಮನೂ, ಧೃಷ್ಟದ್ಯುಮ್ನನೂ, ಇಂದ್ರಪರಾಕ್ರಮವುಳ್ಳ ಸಾತ್ಯಕಿಯೂ ಜೀವಿಸಿರುವಾಗ ಅಭಿಮನ್ಯುವು ಶತ್ರುಗಳಿಂದ ಹೇಗೆ ಹತನಾದನು?

ಕಂಚಿತ್ ಸ ಕದನಂ ಕೃತ್ವಾ ಪರೇಷಾಂ ಪಾಂಡುನಂದನಃ ।
ಸ್ವರ್ಗತೋಽಭಿಮುಖಃ ಸಂಖೇ ಯುದ್ಧ್ಯಮಾನೋ ಮಹಾರಥೈಃ ॥೫೪॥

ಪಾಂಡುನಂದನನಾದ ಅವನು ರಣರಂಗದಲ್ಲಿ ಮಹಾರಥರ ಜೊತೆಯಲ್ಲಿ ಯುದ್ಧವನ್ನು ಮಾಡಿ, ಶತ್ರುಗಳಿಗೆ ಅಭಿಮುಖವಾಗಿಯೇ ಯುದ್ಧವನ್ನು ಮಾಡುತ್ತಾ ಸ್ವರ್ಗಕ್ಕೆ ಹೋದನಷ್ಟೆ?

ಸ ನೂನಂ ಬಹುಭಿರ್ಯುಕ್ತೈರ್ಯುದ್ಧ್ಯಮಾನೋ ನರರ್ಷಭೈಃ ।
ಅಸಹಾಯಃ ಸಹಾಯಾರ್ಥಂ ಮಾಮನುಧ್ಯಾತವಾನ್ ಧ್ರುವಮ್ ॥

ಖಂಡಿತವಾಗಿ ಅವನು ಅನೇಕ ನರಶ್ರೇಷ್ಠರಾದ ಶತ್ರುಗಳ ಜೊತೆಯಲ್ಲಿ ಅಸಹಾಯವಾಗಿ ಯುದ್ಧವನ್ನು ಮಾಡುತ್ತಾ, ಸಹಾಯವನ್ನು ಅಪೇಕ್ಷಿಸಿ ನನ್ನನ್ನು ಚಿಂತಿಸಿರುತ್ತಾನೆ.

ಪೀಡ್ಯಮಾನಃ ಶರೈರ್ಬಾಲಃ ತಾತ ಸಾದ್ಧಭಿಧಾವ ಮಾಮ್ ।
ಇತಿ ವಿಪ್ರಲಪನ್ ಮನ್ಯೇ ನೃಶಂಸೈರ್ಬಹುಭಿರ್ಹತಃ ॥ ೫೬ ॥

ಶತ್ರುಗಳ ಬಾಣದಿಂದ ಪೀಡಿತನಾದ ಬಾಲಕನು ಅಪ್ಪ ನನ್ನ ಬಳಿಗೆ ಓಡಿ ಬಾ ಎಂದು ಕಿರುಚುತ್ತಿರುವಾಗಲೇ ಕ್ರೂರರಾದ ಅನೇಕರು ಸೇರಿ ಅವನನ್ನು ಕೊಂದಿದ್ದಾರೆ ಎಂದು ತಿಳಿಯುತ್ತೇನೆ.

ಅಥವಾ ಮತ್ಸೂತಶ್ಚ ಸ್ತ್ರೀಯೋ ಮಾಧವಸ್ಯ ಚ ।
ಸುಭದ್ರಾಯಾಂ ಚ ಸಂಭೂತಃ ಸ ನೈವಂ ವಕ್ತುಮರ್ಹತಿ ॥ ೫೭ ॥

ಅಥವಾ ನನ್ನಿಂದ ಜನಿಸಿದ, ಕೃಷ್ಣನ ಸೋದರಳಿಯನಾದ, ಸುಭದ್ರೆಯ ಮಗನಾದ ಅವನು ಹಾಗೆ ಕಿರುಚಿರಲಾರ!

ವಜ್ರಾಯಸಾಶ್ಮಭಿಸ್ತುಲ್ಯಂ ಹೃದಯಂ ಸುದೃಢಂ ಮಮ ।
ಅಪಶ್ಯತೋ ದೀರ್ಘಬಾಹುಂ ರಕ್ತಾಕ್ಷಂ ಯನ್ನ ದೀರ್ಯತೇ ॥ ೫೮ ॥

ದೀರ್ಘಬಾಹುವೂ, ರಕ್ತನೇತ್ರನೂ ಆದ ಅವನನ್ನು ನೋಡದೆ ಬಿರಿದು ಹೋಗದಿರುವ ನನ್ನ ಹೃದಯವು ವಜ್ರದಂತೆ, ಕಬ್ಬಿಣದಂತೆ, ಕಲ್ಲುಬಂಡೆಯಂತೆ ಅತ್ಯಂತ ಕಠಿಣವಾದುದು.

ಕಥಂ ಬಾಲೇ ಮಹೇಷ್ವಾಸೇ ನೃಶಂಸಾ ಮರ್ಮಭೇದಿನಃ ।
ಸ್ವಸ್ರೀಯೇ ವಾಸುದೇವಸ್ಯ ಮಮ ಪುತ್ರೇಽಕ್ಷಿಪನ್ ಶರಾನ್ ॥ ೫೯ ॥

ನೃಶಂಸರೂ, ಮರ್ಮಭೇದಿಗಳೂ ಆದ ಶತ್ರುಗಳು ಬಾಲಕನೂ, ವಾಸುದೇವನ ಸೋದರಳಿಯನೂ ಆದ ನನ್ನ ಪುತ್ರನ ಮೇಲೆ ಹೇಗೆ ಬಾಣಪ್ರಯೋಗವನ್ನು ಮಾಡಿದರು?

ಯೋ ಮಾಂ ನಿತ್ಯಮದೀನಾತ್ಮಾ ಪ್ರತ್ಯುದ್ಗಮ್ಯಾಭಿನಂದತಿ ।
ಉಪಯಾಂತಂ ರಿಪೂನ್ ಹತ್ವಾ ಸೋಽದ್ಯ ಮಾಂ ಕಿಂ ನ ಪಶ್ಯತಿ॥೬೦॥

ಯಾವನು ಯುದ್ಧದಿಂದ ಹಿಂದಿರುಗುವ ನನ್ನನ್ನು ಸಂತೋಷದಿಂದ ಎದುರುಗೊಂಡು ಅಭಿನಂದಿಸುತ್ತಿದ್ದನೋ ಅಂತಹ ಅಭಿಮನ್ಯುವು ಶತ್ರುಗಳನ್ನು ಕೊಂದು ಹಿಂದಿರುಗುತ್ತಿರುವ ನನ್ನನ್ನು ಈ ದಿನ ಏಕೆ ನೋಡುತ್ತಿಲ್ಲ?

ನೂನಂ ಸ ಪಾತಿತಃ ಶೇತೇ ಧರಣ್ಯಾಂ ರುಧಿರೋಕ್ಷಿತಃ ।
ಶೋಭಯನ್ ಮೇದಿನೀಂ ಗಾತ್ರೈಃ ಆದಿತ್ಯ ಇವ ಪಾತಿತಃ ॥ ೬೧ ॥

ಈ ದಿನ ಅವನು ರಕ್ತಸಿಕ್ತನಾಗಿ ಭೂಮಿಯ ಮೇಲೆ ಬಿದ್ದ ಸೂರ್ಯನಂತೆ ತನ್ನ ಶರೀರದಿಂದ ಭೂಮಿಗೆ ಕಾಂತಿಯನ್ನು ನೀಡುತ್ತಾ ಭೂಮಿಯ ಮೇಲೆ ಬಿದ್ದಿದ್ದಾನೆ.

ಸುಭದ್ರಾಮಭಿಶೋಚಾಮಿ ಯಾ ಪುತ್ರಮಪಲಾಯಿನಮ್ ।
ರಣೇ ವಿನಿಹತಂ ಶ್ರುತ್ವಾ ಶೋಕಾರ್ತಾ ಚಾತಿನಂಕ್ಷ್ಯತಿ ॥ ೬೨ ॥

ಯುದ್ಧದಲ್ಲಿ ಹಿಮ್ಮೆಟ್ಟದಿರುವ ತನ್ನ ಪುತ್ರನು ಯುದ್ಧದಲ್ಲಿ ಹತನಾದನೆಂಬ ವಾರ್ತೆಯನ್ನು ಕೇಳಿ ಶೋಕಾರ್ತವಾಗಿ ಬಹಳವಾಗಿ ನಾಶವನ್ನು ಹೊಂದುವ ಸುಭದ್ರೆಯನ್ನು ಕುರಿತು ನಾನು ಶೋಕಪಡುತ್ತೇನೆ.

ಶ್ರುತ್ವಾ ನಿಪತಿತಂ ಶೂರಮ್ ಅನಘಂ ಕೃತಲಾಘವಮ್ ।
ಸುಭದ್ರಾ ವಕ್ಷ್ಯತೇ ಕಿಂ ಮಾಮಭಿಮನ್ಯುಮಪಶ್ಯತೀ ।
ದ್ರೌಪದೀಂ ಚಾಪಿ ದುಃಖಾರ್ತಾಂ ಕಿಂ ವಾ ವಕ್ಷ್ಯಾಮಿ ತಾಮಹಮ್ ॥

ಶೂರನೂ, ದೋಷರಹಿತನೂ, ಕ್ಷಿಪ್ರಹಸ್ತನೂ ಆದ ಪುತ್ರನನ್ನು ಕಾಣದೆ ಅವನು ಹತನಾಗಿದ್ದಾನೆಂದು ಕೇಳಿ ಸುಭದ್ರೆಯು ನನಗೆ ಏನು ಹೇಳುವಳು? ದುಃಖಾರ್ತಳಾದ ದ್ರೌಪದಿಗಾದರೂ ನಾನು ಏನು ಹೇಳಲಿ?

ಹೃಷ್ಯಾನಾಂ ಧಾರ್ತರಾಷ್ಟ್ರಾಣಾಂ ಸಿಂಹನಾದೋ ಮಯಾ ಶ್ರುತಃ ।
ಯುಯುತ್ಸುಶ್ಚಾಪಿ ಕೃಷ್ಣೇನ ಶ್ರುತೋ ವೀರಾನುಪಾಲಭನ್ ॥ ೬೫ ॥

ಸಂತೋಷಗೊಂಡ ದುರ್ಯೋಧನಾದಿಗಳ ಸಿಂಹನಾದವನ್ನು ನಾನು ಕೇಳಿದೆನು. ಕೃಷ್ಣನೂ ಸಹ ಯುಯುತ್ಸುವು ಕೌರವವೀರರನ್ನು ನಿಂದಿಸುವುದನ್ನು ಕೇಳಿದನು.

ಅಶಕ್ನುವಂತಃ ಪಾರ್ಥಸ್ಯ ಬಾಲಂ ಹತ್ವಾ ಮಹಾರಥಾಃ ।
ಕಿನ್ನ ಲಜ್ಜಂತ್ಯಧರ್ಮಜ್ಞಾಃ ಪಾರ್ಥಿವಾ ದೃಶ್ಯತಾಂ ಬಲಮ್ ॥ ೬೬ ॥

ಅರ್ಜುನನನ್ನು ಎದುರಿಸಲು ಸಾಮರ್ಥ್ಯವಿಲ್ಲದ ಅಧರ್ಮಜ್ಞರಾದ ಶತ್ರುಮಹಾರಥರು ಬಾಲಕನನ್ನು ಕೊಂದು ನಾಚಿಕೆಪಡುವುದಿಲ್ಲವೇ? ಎಲೈ ರಾಜರೇ (ಕೌರವ ರಾಜರೇ), ನನ್ನ ಬಲವನ್ನು ನೋಡಿ.

ಕಿಂ ತಯೋರ್ವಿಪ್ರಿಯಂ ಕೃತ್ವಾ ಕೇಶವಾರ್ಜುನಯೋರ್ಮೃಧೇ ।
ಸಿಂಹವನ್ನದತ ಪ್ರೀತಾಃ ಶೋಕಕಾಲ ಉಪಸ್ಥಿತೇ ॥ ೬೭ ॥

ಯುದ್ಧದಲ್ಲಿ ಕೃಷ್ಣಾರ್ಜುನರಿಗೆ ಅಪ್ರಿಯವನ್ನುಂಟು ಮಾಡಿ, ನಿಮಗೆ ಶೋಕಕಾಲವು ಪ್ರಾಪ್ತವಾಗಿರುವಾಗ ಏಕೆ ಸಂತೋಷದಿಂದ ಸಿಂಹದಂತೆ ಗರ್ಜಿಸುತ್ತಿದ್ದೀರಿ?

ಆಗಮಿಷ್ಯತಿ ವಃ ಕ್ಷಿಪ್ರಂ ಫಲಂ ಪಾಪಸ್ಯ ಕರ್ಮಣಃ ।
ಅಧರ್ಮೋ ಹಿ ಕೃತಸ್ತೀವ್ರಃ ಕಥಂ ಸ್ಯಾದಫಲಶ್ಚಿರಮ್ ॥ ೬೮ ॥

ನೀವು ಮಾಡಿದ ಪಾಪಕರ್ಮದ ಫಲವು ಶೀಘ್ರವಾಗಿಯೇ ನಿಮಗೆ ಬರಲಿದೆ. ತೀವ್ರವಾದ ಅಧರ್ಮದ ಫಲವು ಹೇಗೆ ಬಹುಕಾಲ ಬರದಿರಲು ಸಾಧ್ಯ ?

ಸಂಜಯಃ

ಇತಿ ತಾನ್ ಪರಿಭಾಷನ್ ವೈ ಕುಂತ್ಯಾಃ ಪುತ್ರೋ ಮಹಾದ್ಯುತಿಃ ।
ಅಪಾಯಾಚ್ಚಸ್ತ್ರಮುತ್ಸೃಜ್ಯ ಕೋಪಾದ್ ದುಃಖಸಮನ್ವಿತಃ ॥ ೬೯ ॥

ಸಂಜಯ– ಕುಂತೀಪುತ್ರನೂ, ಮಹಾದ್ಯುತಿಯೂ ಆದ ಅರ್ಜುನನು ಕೌರವರಾಜರನ್ನು ಕುರಿತು ಹೀಗೆ ಮಾತನಾಡುತ್ತಾ ಕೋಪದಿಂದಲೂ, ದುಃಖದಿಂದಲೂ ಕೂಡಿದವನಾಗಿ ಶಸ್ತ್ರವನ್ನು ಎಸೆದು ಅಲ್ಲಿಂದ ಹೊರಟನು.

ಶ್ರೀಭಗವಾನ್

ಕಿಮರ್ಥಮೇತನ್ನಾಖ್ಯಾತಂ ತ್ವಯಾ ಪಾರ್ಥ ರಣೇ ಮಮ ।
ಅಧಕ್ಷ್ಯಂ ತಾನಹಂ ಸರ್ವಾಂಸ್ತತ್ರ ಕ್ರೂರಾನ್ ಮಹಾರಥಾನ್ ॥ ೭೦ ॥

ಶ್ರೀಭಗವಾನ್– ಎಲೈ ಪಾರ್ಥನೇ (ಯುಧಿಷ್ಠಿರನೇ), ಈ ವಿಷಯವನ್ನು ನೀನು ಮೊದಲೇ ನನಗೆ ಏಕೆ ಹೇಳಲಿಲ್ಲ? ನಾನು ಆ ಕ್ರೂರರಾದ ಮಹಾರಥರೆಲ್ಲರನ್ನೂ ಆಗಲೇ ಕೊಂದುಬಿಡುತ್ತಿದ್ದೆ.

ಸಂಜಯಃ

ಪುತ್ರಶೋಕಾರ್ದಿತಂ ಪಾರ್ಥಂ ಧ್ಯಾಯಂತಂ ಸಾಶ್ರುಲೋಚನಮ್ ।
ನಿಗೃಹ್ಯ ವಾಸುದೇವಸ್ತಂ ಪುತ್ರಾಧಿಭರಭಿಪ್ಲುತಮ್ ।
ಮೈವಮಿತ್ಯಬ್ರವೀತ್ ಕೃಷ್ಣಃ ತೀವ್ರಶೋಕಸಮನ್ವಿತಮ್ ॥ ೭೧ ॥

ಸಂಜಯ– ಪುತ್ರಶೋಕದಿಂದ ಪೀಡಿತನಾದವನೂ, ಅವನನ್ನೇ ಚಿಂತಿಸಿ ಅಶ್ರುಲೋಚನನೂ ಆದ ಅರ್ಜುನನನ್ನು ತಡೆದು, ತೀವ್ರಶೋಕಸಮನ್ವಿತನಾಗಿ ಪುತ್ರನ ಚಿಂತೆಯಿಂದ ಪೂರ್ಣವಾಗಿ ತುಂಬಿದ ಮನಸ್ಸುಳ್ಳ ಅವನನ್ನು ಕುರಿತು ಹೀಗೆ ಮಾಡಬೇಡ ಎಂದು ಹೇಳಿದನು.

ಶ್ರೀಭಗವಾನ್

ಸರ್ವೇಷಾಮೇವ ಪಂಥಾ ವೈ ಶೂರಾಣಾಂ ಕುರುನಂದನ ।
ಕ್ಷತ್ರಿಯಾಣಾಂ ವಿಶೇಷೇಣ ಯೇಷಾಂ ನಃ ಶಸ್ತ್ರಜೀವಿಕಾ ॥ ೭೨ ॥

ಶ್ರೀಭಗವಾನ್– ಎಲೈ ಕುರುನಂದನನೇ, ಇದು ಎಲ್ಲರೂ ಹೋಗುವ ಮಾರ್ಗ. ವಿಶೇಷವಾಗಿ ಶಸ್ತ್ರವನ್ನು ಹಿಡಿದು ಜೀವಿಸುವ ಕ್ಷತ್ರಿಯರಾದ ನಮ್ಮ ಮಾರ್ಗ.

ಏಷಾ ವೈ ಯುದ್ಧ್ಯಮಾನಾನಾಂ ಶೂರಾಣಾಂ ಕುರುನಂದನ ।
ವಿಹಿತಾ ಧರ್ಮಶಾಸ್ತ್ರೇಗತಿರ್ಮತಿಮತಾಂ ವರ ॥ ೭೩ ॥

ಎಲೈ ಮೇಧಾವಿಗಳಲ್ಲಿ ಶ್ರೇಷ್ಠನೇ, ಕುರುನಂದನನೇ, ಯುದ್ಧವನ್ನು ಮಾಡುವ ಶೂರರು ಹೋಗಬೇಕಾದುದು ಇದೇ ಮಾರ್ಗದಲ್ಲಿ ಎಂದು ಧರ್ಮಶಾಸ್ತ್ರವನ್ನು ತಿಳಿದವರು ವಿಧಾನ ಮಾಡಿದ್ದಾರೆ.

ಧ್ರುವಂ ಯುದ್ಧೇ ಹಿ ಮರಣಂ ಶೂರಾಣಾಮನಿವರ್ತಿನಾಮ್ ।
ಗತಃ ಪುಣ್ಯಕೃತಾಂ ಲೋಕಾನ್ ಅಭಿಮನ್ಯುರ್ನ ಸಂಶಯಃ ॥ ೭೪ ॥

ಯುದ್ಧದಲ್ಲಿ ಹಿಮ್ಮೆಟ್ಟದಿರುವ ಶೂರರಿಗೆ ಮರಣವು ನಿಶ್ಚಿತವಾದುದು. ಅಭಿಮನ್ಯುವು ಪುಣ್ಯವಂತರು ಪಡೆಯುವ ಲೋಕಗಳಿಗೆ ಹೋಗಿದ್ದಾನೆ. ಇದರಲ್ಲಿ ಸಂಶಯವಿಲ್ಲ.

ಏತದ್ ವೈ ಸರ್ವವೀರಾಣಾಂ ಕಾಂಕ್ಷಿತಂ ಭರತರ್ಷಭ ।
ಸಂಗ್ರಾಮೇಽಭಿಮುಖಾ ಮೃತ್ಯುಂ ಪ್ರಾಪ್ನುಯಾಮೇತಿ ಮಾನದ॥ ೭೫ ॥

ಎಲೈ ಭರತಶ್ರೇಷ್ಠನೇ, ಇದು ಎಲ್ಲ ವೀರರು ಅಪೇಕ್ಷಿಸುವಂತಹದು. ಎಲೈ ಮಾನದನೇ, ಯುದ್ಧದಲ್ಲಿ ಶತ್ರುಗಳಿಗೆ ಅಭಿಮುಖವಾಗಿ ಮೃತ್ಯುವನ್ನು ಹೊಂದೋಣ ಎಂಬುದೇ ಸರ್ವವೀರರ ಆಸೆ.

ಸ ತು ವೀರಾನ್ ರಣೇ ಹತ್ವಾ ರಾಜಪುತ್ರಾನ್ ಮಹಾಬಲಾನ್ ।
ವೀರಾಣಾಂ ಕಾಂಕ್ಷಿತಂ ಮೃತ್ಯುಂ ಸಂಪ್ರಾಪ್ತೋಽಭಿಮುಖೋ ರಣೇ ॥

ಅಭಿಮನ್ಯುವಾದರೂ ಯುದ್ಧದಲ್ಲಿ ವೀರರಾದ, ಮಹಾಬಲಿಷ್ಠರಾದ ರಾಜಪುತ್ರರನ್ನು ಕೊಂದು ಶತ್ರುಗಳಿಗೆ ಅಭಿಮುಖವಾಗಿ ವೀರರು ಬಯಸುವ ಮೃತ್ಯುವನ್ನು ಹೊಂದಿದ್ದಾನೆ.

ಮಾ ಶುಚೋ ಪುರುಷವ್ಯಾಘ್ರ ಪೂರ್ವೈರೇಷ ಸನಾತನಃ ।
ಧರ್ಮಕೃದ್ಭಿಃ ಕೃತೋ ಧರ್ಮಃ ಕ್ಷತ್ರಿಯಾಣಾಂ ರಣೇ ಕ್ಷಯಃ ॥ ೭೭ ॥

ಎಲೈ ಪುರುಷವ್ಯಾಘ್ರನೇ, ಶೋಕಪಡಬೇಡ. ಇದು ವೇದವಿಹಿತವಾದ ಪೂರ್ವದಿಂದಲೂ ನಡೆದುಕೊಂಡು ಬಂದ ಧರ್ಮ. ಕ್ಷತ್ರಿಯರಿಗೆ ಯುದ್ಧದಲ್ಲಿ ವಿನಾಶವೆಂಬುದು ಧರ್ಮವನ್ನು ತಿಳಿದವರು ಕ್ಲೃಪ್ತಿ ಮಾಡಿರುವ ಧರ್ಮಮಾರ್ಗ.

ಇಮೇ ತೇ ಭ್ರಾತರಃ ಸರ್ವೇ ದೀನಾ ವೈ ಭ್ರಾತೃವತ್ಸಲಾಃ ।
ತ್ವಯಿ ಶೋಕಸಮಾವಿಷ್ಟೇ ನೃಪಾಶ್ಚ ಸುಹೃದಸ್ತವ ॥ ೭೮ ॥

ನೀನು ಶೋಕದಿಂದ ಕೂಡಿರಲು ಭ್ರಾತೃವತ್ಸಲರಾದ ಈ ನಿನ್ನ ಎಲ್ಲ ಸಹೋದರರು, ರಾಜರು ಮತ್ತು ಸುಹೃದರು ದೈನ್ಯದಿಂದ ಕೂಡಿದ್ದಾರೆ.

ಏತಾನ್ ವೈ ವಚಸಾ ಸಾಮ್ನಾ ಸಮಾಶ್ವಾಸಯ ಮಾನದ ।
ವಿದಿತಂ ವೇದಿತವ್ಯಂ ತೇ ನ ಶೋಕಂ ಕರ್ತುಮರ್ಹಸಿ ॥ ೭೯ ॥

ಎಲೈ ಮಾನದನೇ, ಇವರನ್ನು ಒಳ್ಳೆಯ ಮಾತುಗಳಿಂದ ಸಮಾಧಾನಪಡಿಸು. ತಿಳಿಯಬೇಕಾದುದನ್ನು ತಿಳಿದುದಾಯಿತು. ಶೋಕವನ್ನು ಪಡುವುದು ಉಚಿತವಲ್ಲ.

ಸಂಜಯಃ

ಏವಮಾಶ್ವಾಸಿತಃ ಪಾರ್ಥಃ ಕೃಷ್ಣೇನಾದ್ಭುತಕರ್ಮಣಾ ।
ತತೋಽಬ್ರವೀತ್ ತದಾ ಭ್ರಾತೄನ್ ಸರ್ವಾನ್ ಪಾರ್ಥಃ ಸಗದ್ಗದಮ್ ॥

ಸಂಜಯ– ಹೀಗೆ ಅದ್ಭುತ ಕರ್ಮವನ್ನು ಮಾಡುವ ಕೃಷ್ಣನಿಂದ ಸಮಾಧಾನ ಪಡಿಸಲ್ಪಟ್ಟ ಅರ್ಜುನನು ಆಗ ತನ್ನ ಎಲ್ಲ ಸಹೋದರರನ್ನೂ ಕುರಿತು ಗದ್ಗದವಾದ ಕಂಠದಿಂದ ಮಾತನಾಡಿದನು.

ಸ ದೀರ್ಘಬಾಹುಃ ಪೃಥ್ವಂಸೋ ದೀರ್ಘರಾಜೀವಲೋಚನಃ ।
ಅಭಿಮನ್ಯುರ್ಯಥಾವೃತ್ತಃ ಶ್ರೋತುಮಿಚ್ಛಾಮ್ಯಹಂ ತಥಾ ॥ ೮೧ ॥

ದೀರ್ಘಬಾಹುವೂ, ವಿಶಾಲವಕ್ಷಸ್ಸ್ಥಲವುಳ್ಳವನೂ, ದೀರ್ಘವಾದ ಪದ್ಮದಳದಂತಿದ್ದ ನೇತ್ರವನ್ನುಳ್ಳವನೂ ಆದ ಅಭಿಮನ್ಯುವು ಯುದ್ಧದಲ್ಲಿ ಹೇಗೆ ನಡೆದುಕೊಂಡನು ಎಂಬುದನ್ನು ನಾನು ಕೇಳಲು ಬಯಸುತ್ತೇನೆ.

ಸನಾಗಸ್ಯಂದನಹಯಾನ್ ಸಂಗ್ರಾಮೇ ನಿಹತಾನ್ ಮಯಾ ।
ಕ್ಷಿಪ್ರಂ ದ್ರಕ್ಷ್ಯಂತಿ ತೇ ನೂನಂ ಮಮ ಪುತ್ರಸ್ಯ ವೈರಿಣಃ ॥ ೮೨ ॥

ನನ್ನ ಪುತ್ರನಿಗೆ ಶತ್ರುಗಳಾದವರು ಯುದ್ಧದಲ್ಲಿ ಅವರ ರಥಾಶ್ವ-ಗಜಗಳ ಜೊತೆಯಲ್ಲಿ ಅವರು ನನ್ನಿಂದ ಹತರಾಗುವುದನ್ನು ಶೀಘ್ರದಲ್ಲಿಯೇ ನೋಡುವರು.

ಕಥಂ ಚ ವಃ ಕೃತಾಸ್ತ್ರಾಣಾಂ ಸರ್ವೇಷಾಂ ಶಸ್ತ್ರಪಾಣಿನಾಮ್ ।
ಸೌಭದ್ರೋ ನಿಧನಂ ಗಚ್ಛೇದ್ ವಜ್ರಿಣಾऽಪಿ ಸಮಾಗತಃ ॥ ೮೩ ॥

ಅಸ್ತ್ರಪಾರಂಗತರೂ, ಶಸ್ತ್ರಧಾರಿಗಳೂ ಆದ ನೀವೆಲ್ಲರೂ ಇರುವಾಗ ಇಂದ್ರನೇ ಬಂದರೂ ಸಹ ಅಭಿಮನ್ಯುವು ಹೇಗೆ ನಿಧನವನ್ನು ಹೊಂದಿಯಾನು?

ಯದ್ಯೇವಮಹಮಜ್ಞಾಸ್ಯಮ್ ಅಶಕ್ತಾನ್ ಮಮ ರಕ್ಷಣೇ ।
ಪುತ್ರಸ್ಯ ಪಾಂಡುಪಾಂಚಾಲಾ ಮಯಾಗುಪ್ತೋ ಭವೇತ್ತು ಸಃ ॥ ೮೪ ॥

ಪಾಂಡು-ಪಾಂಚಾಲರು ನನ್ನ ಪುತ್ರನನ್ನು ರಕ್ಷಿಸಲು ಅಸಮರ್ಥರು ಎಂದು ತಿಳಿದಿದ್ದರೆ ನಾನೇ ಅವನನ್ನು ರಕ್ಷಿಸುತ್ತಿದ್ದೆ.

ಕಥಂ ಚ ವೋ ರಥಸ್ಥಾನಾಂ ಶರವರ್ಷಾಣಿ ಮುಂಚತಾಮ್ ।
ಸೌಭದ್ರೋ ನಿಧನಂ ನೀತಃ ಕದರ್ಥೀಕೃತ್ಯ ವಃ ಪರೈಃ ॥ ೮೫ ॥

ರಥದಲ್ಲಿ ಕುಳಿತು ನೀವು ಬಾಣಗಳ ಮಳೆಯನ್ನು ಕರೆಯುತ್ತಿರುವಾಗ ನಿಮ್ಮನ್ನು ತುಚ್ಛೀಕರಿಸಿ ಹೇಗೆ ಶತ್ರುಗಳಿಂದ ಅಭಿಮನ್ಯುವು ಹತನಾದನು?

ಅಹೋ ವಃ ಪೌರುಷಂ ನಾಸ್ತಿ ನ ಚ ವೋऽಸ್ತಿ ಪರಾಕ್ರಮಃ ।
ಯತ್ರಾಭಿಮನ್ಯುಃ ಸಮರೇ ಪಶ್ಯತಾಂ ವೋ ನಿಪಾತಿತಃ ॥ ೮೬ ॥

ನಿಮ್ಮ ಕಣ್ಣೆದುರಿಗೇ ಅಭಿಮನ್ಯುವು ಯುದ್ಧದಲ್ಲಿ ಹತನಾದನೆಂದ ಮೇಲೆ ನಿಮಗೆ ಪೌರುಷವಾಗಲೀ, ಪರಾಕ್ರಮವಾಗಲೀ ಇಲ್ಲ.

ಆತ್ಮಾನಮೇವ ಗರ್ಹೇಯಂ ಯದಹಂ ವೈ ಸುದುರ್ಬಲಾನ್ ।
ಯುಷ್ಮಾನಾಜ್ಞಾಯ ನಿರ್ಯಾತೋ ಭೀರೂನಕೃತನಿಶ್ರಮಾನ್ ॥ ೮೭ ॥

ಅತ್ಯಂತ ದುರ್ಬಲರೂ, ಭಯಗ್ರಸ್ತರೂ, ಯುದ್ಧ ಪರಿಶ್ರಮವಿಲ್ಲದವರೂ ಆದ ನಿಮ್ಮನ್ನು ನಂಬಿ ನಾನು ಯುದ್ಧಕ್ಕೆ ಹೊರಟುದರಿಂದ ನಾನು ನನ್ನನ್ನೇ ನಿಂದಿಸಿಕೊಳ್ಳುತ್ತೇನೆ.

ಆಹೋಸ್ವಿದ್ ಭೂಷಣಾರ್ಥಾನಿ ವರ್ಮಚಾಸ್ತ್ರಾಯುಧಾನಿ ವಃ ।
ವಾಚಶ್ಚ ವದತಾಂ ಸತ್ಸು ಮಮ ಪುತ್ರಮರಕ್ಷತಾಮ್ ॥ ೮೮ ॥

ಅಥವಾ ನನ್ನ ಪುತ್ರನನ್ನು ರಕ್ಷಿಸದ ನಿಮ್ಮ ಕವಚಗಳು, ಆಯುಧಗಳು ಮತ್ತು ಸಜ್ಜನರ ಮುಂದೆ ಆಡುವ ನಿಮ್ಮ ಒಳ್ಳೆಯ ಮಾತುಗಳು ಎಲ್ಲವೂ ಆಲಂಕಾರಕ್ಕಾಗಿ ಮಾತ್ರ ಇವೆಯೇ?

ಸಂಜಯಃ

ಏವಮುಕ್ತ್ವಾ ತತೋ ವಾಕ್ಯಮತಿಷ್ಠದ್ ವೈ ವರಾಸಿಮಾನ್ ।
ನ ಸ್ಮಾಶಕ್ಯತ ಬೀಭತ್ಸುಂ ಕೇನಚಿತ್ ಪ್ರಸಮೀಕ್ಷಿತುಮ್ ॥೮೯॥

ಸಂಜಯ– ಶ್ರೇಷ್ಠ ಖಡ್ಗಧಾರಿಯಾದ ಅರ್ಜುನನು ಹೀಗೆ ಮಾತನಾಡಿ ಅನಂತರ ಎದ್ದು ನಿಂತನು. ಆಗ ಅರ್ಜುನನನ್ನು ನೋಡಲು ಯಾರೂ ಶಕ್ತರಾಗಲಿಲ್ಲ.

ತಮಂತಕಮಿವ ಕ್ರುದ್ಧಂ ನಿಃಶ್ವಸಂತಂ ಪುನಃಪುನಃ ।
ಮಹೇಂದ್ರಮಿವ ತಿಷ್ಠಂತಂ ವಜ್ರೋದ್ಯತಮಹಾಭುಜಮ್ ॥ ೯೦ ॥

ಪುತ್ರಶೋಕಾಭಿಸಂತಪ್ತಮಶ್ರುಪೂರ್ಣಮುಖಂ ತದಾ ।
ನ ಭಾಷಿತುಂ ಶಕ್ನುವಂತಿ ದ್ರಷ್ಟುಂ ವಾಽಪಿ ತದಾಽರ್ಜುನಮ್ ।
ಅನ್ಯತ್ರ ವಾಸುದೇವಾದ್ಧಿ ಜ್ಯೇಷ್ಠಾದ್ ವೈ ಪಾಂಡುನಂದನಾತ್ ॥ ೯೧ ॥

ಯಮನಂತೆ ಕ್ರುದ್ಧನಾದ, ಪುನಃ ಪುನಃ ನಿಟ್ಟುಸಿರನ್ನು ಬಿಡುವ, ಕೈಯಲ್ಲಿ ಎತ್ತಿಹಿಡಿದ ವಜ್ರವನ್ನು ಧರಿಸಿದ ಮಹಾಭುಜನಾದ ಮಹೇಂದ್ರನಂತೆ ಇರುವ, ಪುತ್ರಶೋಕ ಸಂತಪ್ತನೂ, ಕಣ್ಣೀರಿನಿಂದ ಕೂಡಿದ ಮುಖವುಳ್ಳವನೂ ಆದ ಅರ್ಜುನನನ್ನು ನೋಡಲು ಅಥವಾ ಅವನೊಡನೆ ಮಾತನಾಡಲು ಕೃಷ್ಣನನ್ನು ಮತ್ತು ಜ್ಯೇಷ್ಠ ಪಾಂಡುನಂದನನಾದ ಧರ್ಮರಾಜನನ್ನು ಬಿಟ್ಟು ಬೇರೆ ಯಾರಿಗೂ ಶಕ್ತಿ ಇರಲಿಲ್ಲ.

ಸರ್ವಾವಸ್ಥಾಸ್ವಪಿ ಹಿತಾವರ್ಜುನಸ್ಯ ಮನೋನುಗೌ ।
ಬಹುಮಾನಾತ್ ಪ್ರಿಯತ್ವಾಚ್ಚ ತಾವೇನಂ ವಕ್ತುಮರ್ಹತಃ ॥ ೯೨ ॥

ಎಲ್ಲ ಅವಸ್ಥೆಗಳಲ್ಲಿಯೂ ಅರ್ಜುನನ ಮನಸ್ಸಿಗೆ ಅನುಸಾರವಾಗಿ ಅವನ ಮೇಲೆ ಬಹುಮಾನದಿಂದಲೂ, ಪ್ರೀತಿಯಿಂದಲೂ ಅವನ ಹಿತವನ್ನು ನುಡಿಯುವ ಯುಧಿಷ್ಠಿರ-ಕೃಷ್ಣರಿಬ್ಬರೇ ಅವನ ಜೊತೆಯಲ್ಲಿ ಮಾತನಾಡಲು ಸಮರ್ಥರಾಗುತ್ತಾರೆ.

ತತಸ್ತಂ ಪುತ್ರಶೋಕೇನ ಭೃಶಂ ಪೀಡಿತಮಾನಸಮ್ ।
ರಾಜೀವಲೋಚನಂ ಕ್ರುದ್ಧಂ ರಾಜಾ ವಚನಮಬ್ರವೀತ್ ॥ ೯೩ ॥

ಆಗ ಪುತ್ರಶೋಕದಿಂದ ಬಹಳವಾಗಿ ಪೀಡಿತವಾದ ಮನಸ್ಸುಳ್ಳ ರಾಜೀವ ಲೋಚನನಾದ, ಕ್ರುದ್ಧನಾದ ಅರ್ಜುನನನ್ನು ಕುರಿತು ಧರ್ಮರಾಜನು ಮಾತನಾಡಿದನು.

ತ್ವಯಿ ಯಾತೇ ಮಹಾಬಾಹೋ ಸಂಶಪ್ತಕವಧಂ ಪ್ರತಿ ।
ಯತತೇ ರಾಜಭಿಃ ಸಾರ್ಧಮಾಚಾರ್ಯೋ ಗ್ರಹಣೇ ಮಮ ॥ ೯೪ ॥

ಎಲೈ ಮಹಾಬಾಹುವೇ, ನೀನು ಸಂಶಪ್ತಕರ ವಧೆಗಾಗಿ ಹೊರಟು ಹೋಗುತ್ತಿರಲು ದ್ರೋಣಾಚಾರ್ಯರು ಉಳಿದ ರಾಜರ ಸಹಾಯದಿಂದ ನನ್ನನ್ನು ಹಿಡಿಯುವ ಪ್ರಯತ್ನವನ್ನು ಮಾಡಿದರು.

ವ್ಯೂಢಾನೀಕಂ ತತೋ ದ್ರೋಣಂ ಯತಮಾನಂ ಮಹಾಮೃಧೇ ।
ಪ್ರತಿವ್ಯೂಹ್ಯ ಸಹಾನೀಕಾಃ ಪ್ರತ್ಯರುಂದ್ಧ್ಮ ವಯಂ ಬಲಮ್ ॥ ೯೫ ॥

ತಮ್ಮ ಸೈನ್ಯವನ್ನು ವ್ಯೂಹಗೊಳಿಸಿ ರಣರಂಗದಲ್ಲಿ ಪ್ರಯತ್ನವನ್ನು ಪಡುತ್ತಿದ್ದ ದ್ರೋಣರಿಗೆ ಎದುರಾಗಿ ನಾವು ಪ್ರತಿವ್ಯೂಹವನ್ನು ರಚಿಸಿ ನಮ್ಮ ಸೈನ್ಯದ ಜೊತೆಯಲ್ಲಿ ನಾವು ಅವರ ಸೈನ್ಯವನ್ನು ತಡೆದೆವು.

ಸ ವಾರ್ಯಮಾಣಃ ಸಂಗ್ರಾಮೇ ಮಯಿ ಚಾಪಿ ಸುರಕ್ಷಿತೇ ।
ಅಸ್ಮಾನಪ್ಯಹನತ್ ಕ್ರುದ್ಧಃ ಪೀಡಯನ್ ನಿಶಿತೈಃ ಶರೈಃ ॥ ೯೬ ॥

ಹೀಗೆ ತಡೆಯಲ್ಪಟ್ಟ ದ್ರೋಣರು ನಾನೂ ಸುರಕ್ಷಿತವಾಗಿರುತ್ತಿರಲು ಕೋಪಗೊಂಡು ನನ್ನವರನ್ನು ಬಾಣಗಳಿಂದ ಪೀಡಿಸುತ್ತಾ ಸಂಹಾರ ಮಾಡಿದರು.

ತೇ ಪೀಡ್ಯಮಾನಾ ದ್ರೋಣೇನ ದ್ರೋಣಾನೀಕಂ ನ ಶಕ್ನುಮಃ ।
ಪ್ರತಿವೀಕ್ಷಿತುಮಪ್ಯಾಜೌ ಭೇತ್ತುಂ ಹಿ ಕುತ ಏವ ನಃ ॥ ೯೭ ॥

ದ್ರೋಣರಿಂದ ಹೀಗೆ ಪೀಡಿಸಲ್ಪಟ್ಟ ನಾವು ದ್ರೋಣರ ಸೈನ್ಯವನ್ನು ನೋಡಲೂ ಸಾಧ್ಯವಾಗಲಿಲ್ಲ. ಇನ್ನು ಆ ಸೈನ್ಯವನ್ನು ಭೇದಿಸಲು ಸಾಮರ್ಥ್ಯವು ಎಲ್ಲಿಂದ ಬರಬೇಕು?

ವಯಂ ತ್ವಪ್ರತಿಮಂ ವೀರ್ಯೇ ಸರ್ವೇ ಸೌಭದ್ರಮಾತ್ಮಜಮ್ ।
ದ್ರೋಣಾನೀಕಮಿದಂ ಭಂಧಿ ದ್ವಾರಂ ಸಂಜನಯಸ್ವ ನಃ ॥ ೯೮ ॥

ನಾವೆಲ್ಲರೂ ಪರಾಕ್ರಮದಲ್ಲಿ ಅಪ್ರತಿಮನಾದ, ಶಿಶುವಾದ ಅಭಿಮನ್ಯುವನ್ನು ಕುರಿತು ಈ ದ್ರೋಣರ ಸೈನ್ಯವನ್ನು (ವ್ಯೂಹವನ್ನು) ಭೇದಿಸಿ ನಮಗೆ ಒಂದು ದ್ವಾರವನ್ನು ಉಂಟು ಮಾಡಿಕೊಡು ಎಂದು ಹೇಳಿದವು.

ಸ ತಥಾ ಚೋದಿತೋಽಸ್ಮಾಭಿಃ ಸದಶ್ವ ಇವ ವೀರ್ಯವಾನ್ ।
ಅಸಹ್ಯಮಪಿ ತಂ ಭಾರಂ ವೋಢುಮೇವೋಪಚಕ್ರಮೇ ॥ ೯೯ ॥

ಹೀಗೆ ನಮ್ಮಿಂದ ಪ್ರೇರಿಸಲ್ಪಟ್ಟ ಅವನು ಪರಾಕ್ರಮಶಾಲಿಯಾದ ಒಳ್ಳೆಯ ಆಶ್ವದಂತೆ ತನಗೆ ಮೀರಿದ್ದರೂ ಸಹ ಆ ಭಾರವನ್ನು ಹೊರಲು ಉಪಕ್ರಮಿಸಿದನು.

ತವ ಚೈವೋಪದೇಶೇನ ವೀರ್ಯೇಣ ಚ ಸಮನ್ವಿತಃ ।
ಪ್ರಾವಿಶತ್ ತದ್ ಬಲಂ ಬಾಲಃ ಸುಪರ್ಣ ಇವ ಸಾಗರಮ್ ॥೧೦೦॥

ನಿನ್ನ ಉಪದೇಶದಿಂದಲೂ ಮತ್ತು ತನ್ನ ಪರಾಕ್ರಮದಿಂದಲೂ ಯುಕ್ತನಾದ ಬಾಲಕನಾದ ಅವನು ಗರುಡನು ಸಾಗರವನ್ನು ಪ್ರವೇಶಿಸಿದಂತೆ ಶತ್ರುಸೈನ್ಯವನ್ನು ಪ್ರವೇಶಿಸಿದನು.

ತೇಽನ್ವಯಾಮ ವಯಂ ವೀರಂ ಸಾತ್ವತೀಪುತ್ರಮಾಹವೇ ।
ಪ್ರವೇಷ್ಟುಕಾಮಾಸ್ತೇನೈವ ಯೇನ ಸ ಪ್ರಾವಿಶಚ್ಚಮೂಮ್ ॥ ೧೦೧ ॥

ನಾವು ರಣರಂಗದಲ್ಲಿ ಸುಭದ್ರೆಯ ಪುತ್ರನಾದ ಆ ವೀರನನ್ನು ಹಿಂಬಾಲಿಸಿದೆವು ಮತ್ತು ಅವನು ಹೋದ ದ್ವಾರದಿಂದಲೇ ಆ ಸೈನ್ಯವನ್ನು ಪ್ರವೇಶಿಸಲು ಬಯಸಿದೆವು.

ತತಃ ಸೈಂಧವಕೋ ರಾಜಾ ಕ್ಷುದ್ರಸ್ತಾತ ಜಯದ್ರಥಃ ।
ವರದಾನೇನ ರುದ್ರಸ್ಯ ಸರ್ವಾನ್ ನಃ ಪ್ರತ್ಯವಾರಯತ್ ॥ ೧೦೨ ॥

ಆಗ ಪ್ರೀತಿಪಾತ್ರನೇ, ಸಿಂಧುದೇಶದ ರಾಜನಾದ ಕ್ಷುದ್ರನಾದ ಜಯದ್ರಥನು ರುದ್ರದೇವರಿಂದ ಪಡೆದ ವರದ ಬಲದಿಂದ ನಮ್ಮೆಲ್ಲರನ್ನೂ ತಡೆದನು.

ತತೋ ದ್ರೋಣಃ ಕೃಪಃ ಕರ್ಣೋ ದ್ರೌಣಿಶ್ಚ ಸಬೃಹದ್ಬಲಃ ।
ಕೃತವರ್ಮಾ ಚ ತಂ ವೀರಂ ಷಡ್ರಥಾಃ ಪರ್ಯವಾರಯನ್ ॥ ೧೦೩ ॥

ಆಗ ದ್ರೋಣರು, ಕೃಪರು, ಕರ್ಣ, ಅಶ್ವತ್ಥಾಮರು, ಬೃಹದ್ಬಲ ಮತ್ತು ಕೃತವರ್ಮ ಈ ಆರು ಮಹಾರಥರು ವೀರನಾದ ಅಭಿಮನ್ಯುವನ್ನು ಸುತ್ತುವರಿದರು.

ಪರಿವಾರ್ಯ ಚ ತೈಃ ಕ್ಷುದ್ರೈಃ ಯುಧಿ ಬಾಲೋ ಮಹಾರಥೈಃ ।
ಯತಮಾನಃ ಪರಂ ಶಕ್ತ್ಯಾ ಬಹುಭಿರ್ವಿರಥೀಕೃತಃ ॥ ೧೦೪ ॥

ಮಹಾರಥರಾದ ಮತ್ತು ಕ್ಷುದ್ರರಾದ ಆವರೆಲ್ಲರೂ ಯುದ್ಧದಲ್ಲಿ ಬಾಲಕನನ್ನು ಸುತ್ತುವರಿದ ಮೇಲೆ ಅವನು ಶಕ್ತಿಯನ್ನು ಮೀರಿ ಪ್ರಯತ್ನಪಟ್ಟರೂ ಆ ಅನೇಕರು ಅವನ ರಥವನ್ನು ನಾಶಗೊಳಿಸಿದರು.

ತತೋ ದೌಃಶಾಸನಿಃ ಪಾಪಃ ತಥಾ ತೈರ್ವಿರಥೀಕೃತಮ್ ।
ಸಂಶಯಂ ಪರಮಂ ಪ್ರಾಪ್ತಂ ದಿಷ್ಟಾಂತೇನಾಭ್ಯಯೋಜಯತ್ ॥೧೦೫॥

ಅನಂತರ ಪಾಪಿಯಾದ ದುಶ್ಶಾಸನನ ಪುತ್ರನು, ಅವರು ವಿರಥನನ್ನಾಗಿ ಮಾಡಿ ಪ್ರಾಣ ಸಂಶಯಕ್ಕೆ ಒಳಗಾಗಿಸಿದ ಅಭಿಮನ್ಯುವನ್ನು ಮರಣ ಹೊಂದಿಸಿದನು.

ಗದಾಹಸ್ತೋಽಭ್ಯಯಾತ್ ತೂರ್ಣಂ ಜಿಘಾಂಸುರಪರಾಜಿತಮ್ ॥
ಗದಿನಂ ತ್ವಥ ತಂ ದೃಷ್ಟ್ವಾ ವಾಸವಸ್ಯಾತ್ಮಜಾತ್ಮಜಃ ।
ಸ ಜಗ್ರಾಹ ಗದಾಂ ವೀರೋ ಗದಾಯುದ್ಧವಿಶಾರದಃ ॥ ೧೦೭ ॥

ದುಶ್ಶಾಸನ ಪುತ್ರನು ಕೈಯಲ್ಲಿ ಗದೆಯನ್ನು ಹಿಡಿದು ಶೀಘ್ರವಾಗಿ ಅಪರಾಜಿತನಾದ ಅವನನ್ನು ಕೊಲ್ಲಲು ಬಯಸಿ ಅವನ ಕಡೆಗೆ ಧಾವಿಸಿದನು. ಕೈಯಲ್ಲಿ ಗದೆಯನ್ನು ಹಿಡಿದ ದುಶ್ಶಾಸನ ಪುತ್ರನನ್ನು ನೋಡಿ, ಗದಾಯುದ್ಧವಿಶಾರದನೂ, ವೀರನೂ, ಇಂದ್ರನ ಮಗನ ಮಗನೂ ಆದ ಅಭಿಮನ್ಯುವು ತಾನೂ ಕೈಯಲ್ಲಿ ಗದೆಯನ್ನು ಹಿಡಿದನು.

ಗದಾಮಂಡಲಮಾರ್ಗಸ್ಥೌ ಸರ್ವಕ್ಷತ್ರಸ್ಯ ಪಶ್ಯತಃ ।
ತೌ ಸಂಪ್ರಜಹ್ರತುರ್ವೀರಾವನ್ಯೋನ್ಯಸ್ಯಾಂತರೈಷಿಣೌ ॥ ೧೦೮ ॥

ಗದಾಮಂಡಲಗಳ ಮಾರ್ಗಗಳಲ್ಲಿ ಪರಿಣತರಾದ ಅವರು ಎಲ್ಲ ಕ್ಷತ್ರಿಯರು ನೋಡುತ್ತಿರುವಂತೆಯೇ ಪರಸ್ಪರರ ದೌರ್ಬಲ್ಯವನ್ನು ಅನ್ವೇಷಿಸುತ್ತಾ, ಪರಸ್ಪರವಾಗಿ ಹೊಡೆದಾಡಿದರು.

ತಾವನ್ಯೋನ್ಯಂ ಗದಾಗ್ರಾಭ್ಯಾಂ ತಾಡಿತೌ ಯುದ್ಧದುರ್ಮದೌ ।
ಇಂದ್ರಧ್ವಜಾವಿವೋತ್ಪಾಟ್ಯೌ ಗತಸತ್ತ್ವೌ ಮಹೀಂ ಗತೌ ॥ ೧೦೯ ॥

ಯುದ್ಧದುರ್ಮದರಾದ ಅವರಿಬ್ಬರೂ ಶ್ರೇಷ್ಠವಾದ ಗದೆಗಳಿಂದ ಪರಸ್ಪರವಾಗಿ ಹೊಡೆಯಲ್ಪಟ್ಟು ಹಗ್ಗವನ್ನು ಬಿಚ್ಚಿಬಿಟ್ಟ ಇಂದ್ರಧ್ವಜಗಳಂತೆ ಪ್ರಾಣಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದರು.

ಸ ತು ಹತ್ವಾ ಸಹಸ್ರಾಣಿ ದ್ವಿಪಾಶ್ವರಥಪತ್ತಿನಾಮ್ ।
ರಾಜಪುತ್ರಶತಂ ಚಾಗ್ರ್ಯಂ ವೀರಾಂಶ್ಚಾಲಕ್ಷಿತಾನ್ ಬಹೂನ್ ॥ ೧೧೦ ॥

ಅಷ್ಟೌ ರಥಸಹಸ್ರಾಣಿ ನವದಂತಿಶತಾನಿ ಚ ।
ಬೃಹದ್ಬಲಂ ಚ ರಾಜಾನಂ ಸ್ವರ್ಗೇಣ ಸಮಯೋಜಯತ್ ॥ ೧೧೧ ॥

ಅಭಿಮನ್ಯುವಾದರೂ ಸಹಸ್ರ ಗಜಾಶ್ವ-ರಥ ಪದಾತಿಗಳನ್ನೂ ಶ್ರೇಷ್ಠರಾದ, ನೂರು ರಾಜಕುಮಾರರನ್ನೂ, ಅನಾಮಧೇಯರಾದ ಇನ್ನೂ ಅನೇಕ ವೀರರನ್ನೂ ಕೊಂದು, ಎಂಟು ಸಹಸ್ರ ರಥಗಳನ್ನೂ, ಒಂಬೈನೂರು ಗಜಗಳನ್ನೂ ಮತ್ತು ಬೃಹದ್ಬಲರಾಜನನ್ನೂ ಸ್ವರ್ಗಕ್ಕೆ ಕಳುಹಿಸಿದನು.

ಗತಃ ಸುಕೃತಿನಾಂ ಲೋಕಾನ್ ಯೇ ಚ ಸ್ವರ್ಗಜಿತಾಂ ಶುಭಾಃ ।
ಅದೀನಸ್ತ್ರಾಸ್ತಯನ್ ಶತ್ರೂನ್ ನಂದಯಿತ್ವಾ ಚ ಬಾಂಧವಾನ್ ॥೧೧೨॥

ಯುದ್ಧದಲ್ಲಿ ದೀನನಾಗದೆ, ಬಂಧುಗಳನ್ನು ಹೆದರಿಸಿ, ಬಾಂಧವರಿಗೆ ಸಂತೋಷವನ್ನುಂಟು ಮಾಡಿ, ಪುಣ್ಯವಂತರು ಹೊಂದುವ ಶುಭವಾದ ಸ್ವರ್ಗಲೋಕವನ್ನು ಅವನು ಹೊಂದಿದ್ದಾನೆ.

ಅಸಕೃನ್ನಾಮ ವಿಶ್ರಾವ್ಯ ಪಿತೃಣಾಂ ಮಾತುಲಸ್ಯ ಚ ।
ವೀರೋ ದಿಷ್ಟಾಂತಮಾಪನ್ನಃ ಶೋಚಯನ್ ಬಾಂಧವಾನ್ ಬಹೂನ್ ॥

ವೀರನಾದ ಅವನು ಪಿತೃಗಳ ಮತ್ತು ಸೋದರ ಮಾವನ ಹೆಸರನ್ನು ಅನೇಕ ಬಾರಿ ಘೋಷಿಸುತ್ತಾ, ಅನೇಕ ಬಂಧುಗಳಿಗೆ ಶೋಕವನ್ನುಂಟು ಮಾಡುತ್ತಾ ಮರಣವನ್ನು ಹೊಂದಿದನು.

ತತಃ ಸ್ಮ ಶೋಕಸಂತಪ್ತಾ ಭವತಾऽದ್ಯ ಸಮೇಯುಷಃ ॥೧೧೪॥

ಏತಾವದೇವ ನಿರ್ವೃತ್ತಮಸ್ಮಾಕಂ ಶೋಕವರ್ಧನಮ್ ।
ಸ ಚೈವಂ ಪುರುಷವ್ಯಾಘ್ರಃ ಸ್ವರ್ಗಲೋಕಮವಾಪ್ತವಾನ್ ॥ ೧೧೫ ॥

ಎಲೈ ಪುರುಷವ್ಯಾಘ್ರನೇ, ಆದ್ದರಿಂದ ನಾವೂ ಸಹ ಶೋಕಸಂತಪ್ತರಾಗಿ ಈಗ ನಿನ್ನ ಸಮಾಗಮವನ್ನು ಹೊಂದಿದ್ದೇವೆ. ನಮ್ಮ ಶೋಕಕ್ಕೆ ಕಾರಣವಾದ ವಿಷಯವು ಇಷ್ಟು ಮಾತ್ರ ನಡೆಯಿತು. ಆ ಪುರುಷವ್ಯಾಘ್ರನಾದ ಅಭಿಮನ್ಯುವಾದರೂ ಸ್ವರ್ಗಲೋಕವನ್ನು ಹೊಂದಿದನು.

ಸಂಜಯಃ

ತತೋऽರ್ಜುನೋ ವಚಃ ಶ್ರುತ್ವಾ ಧರ್ಮರಾಜೇನ ಭಾಷಿತಮ್ ।
ಹಾ ಪುತ್ರ ಇತಿ ನಿಃಶ್ವಸ್ಯ ವ್ಯಥಿತೋ ನ್ಯಪತದ್ ಭುವಿ ॥೧೧೬॥

ಸಂಜಯ– ಆಗ ಅರ್ಜುನನು ಧರ್ಮರಾಜನು ಆಡಿದ ಮಾತುಗಳನ್ನು ಕೇಳಿ ಅಯ್ಯೋ ಪುತ್ರನೇ ಎಂದು ನಿಟ್ಟುಸಿರನ್ನು ಬಿಟ್ಟು ವ್ಯಥೆಯಿಂದ ಭೂಮಿಯ ಮೇಲೆ ಬಿದ್ದು ಮೂರ್ಛೆ ಹೋದನು.

ವಿಷಣ್ಣವದನಾಃ ಸರ್ವೇ ಪರಿಗೃಹ್ಯ ಧನಂಜಯಮ್ ।
ನೇತ್ರೈರನಿಮಿಷೈರ್ದೀನಾಃ ಪ್ರತ್ಯವೇಕ್ಷನ್ ಪರಸ್ಪರಮ್ ॥೧೧೭॥

ವಿಷಣ್ಣ ಮುಖವುಳ್ಳ ಎಲ್ಲರೂ ಅರ್ಜುನನನ್ನು ಹಿಡಿದುಕೊಂಡು, ರೆಪ್ಪೆಯನ್ನು ಮುಚ್ಚದೆ ದೈನ್ಯದಿಂದ ಒಬ್ಬರನ್ನೊಬ್ಬರು ನೋಡಿದರು.

ಪ್ರತಿಲಭ್ಯ ತತಃ ಸಂಜ್ಞಾಂ ವಾಸವಿಃ ಕ್ರೋಧಮೂರ್ಚ್ಛಿತಃ ।
ಕಂಪಮಾನೋ ದ್ವರೇಣೇವ ನಿಃಶ್ವಸಂಶ್ಚ ಪುನಃಪುನಃ ॥೧೧೮॥

ಪಾಣಿಂ ಪಾಣೌ ವಿನಿಷ್ಪಿಷ್ಯ ದಂತಾನ್ ಕಟಕಟಾಪ್ಯ ಚ ।
ತ್ರಿಶಿಖಾಂ ಭ್ರುಕುಟೀಂ ಕೃತ್ವಾ ಕ್ರೋಧಸಂರಕ್ತಲೋಚನಃ ।
ಉನ್ಮತ್ತ ಇವ ರೋಷೇಣ ಸ್ಮಯನ್ ವಚನಮಬ್ರವೀತ್ ॥೧೧೯॥

ಸ್ವಲ್ಪ ಹೊತ್ತಿನ ಮೇಲೆ ಅರ್ಜುನನು ಪ್ರಜ್ಞೆಯನ್ನು ಮರಳಿ ಪಡೆದು, ಕ್ರೋಧ ಮೂರ್ಛಿತನಾಗಿ, ಜ್ವರದಿಂದಲೋ ಎಂಬಂತೆ ನಡುಗುತ್ತಾ, ಪುನಃ ಪುನಃ ನಿಟ್ಟುಸಿರನ್ನು ಬಿಡುತ್ತಾ, ಕೈಯಿಂದ ಕೈಯನ್ನು ಉಜ್ಜುತ್ತಾ, ದಂತಗಳನ್ನು ಕಡಿಯುತ್ತಾ, ಹುಬ್ಬುಗಳನ್ನು ಗಂಟಿಕ್ಕಿ ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ಹುಚ್ಚನಂತೆ ರೋಷದಿಂದ ನಗುತ್ತಾ ಮಾತನಾಡಿದನು.

ಸತ್ಯಂ ವಃ ಪ್ರತಿಜಾನಾಮಿ ಶ್ವೋ ಹಂತಾಸ್ಮಿ ಜಯದ್ರಥಮ್ ।
ನ ಚೇದ್ ವಧಭಯಾತ್ ತ್ರಸ್ತೋ ಧಾರ್ತರಾಷ್ಟ್ರಾನ್ ಪ್ರಹಾಸ್ಯತಿ ॥

ವಧೆಗೆ ಹೆದರಿ ಜಯದ್ರಥನು ನಾಳೆ ಒಂದು ಪಕ್ಷ ದುರ್ಯೋಧನಾದಿಗಳನ್ನು ತ್ಯಜಿಸದಿದ್ದರೆ ನಾಳೆ ಅವನನ್ನು ಕೊಲ್ಲುವೆನು ಎಂದು ಸತ್ಯಪ್ರತಿಜ್ಞೆಯನ್ನು ನಿಮ್ಮೆದುರಿಗೆ ಮಾಡುತ್ತಿದ್ದೇನೆ.

ನ ಚ ಮಾಂ ಶರಣಂ ಗಚ್ಛೇತ್ ಕೃಷ್ಣಂ ವಾ ಪುರುಷೋತ್ತಮಮ್ ।
ಭವಂತಂ ವಾ ಮಹಾರಾಜ ಶ್ವೋ ಹಂತಾಸ್ಮಿ ಜಯದ್ರಥಮ್ ॥೧೨೧॥

ನನಗಾಗಲೀ, ಪುರುಷೋತ್ತಮನಾದ ಕೃಷ್ಣನಿಗಾಗಲೀ, ಎಲೈ ಮಹಾರಾಜನೇ ಅಥವಾ ನಿನಗಾಗಲೀ ಶರಣಾಗದಿದ್ದರೆ ನಾಳೆ ಜಯದ್ರಥನನ್ನು ಕೊಲ್ಲುವೆನು.

ಮಯಿ ವಿಸ್ಮೃತಸೌಹಾರ್ದಂ ದುರ್ಯೋಧನಹಿತೇ ರತಮ್ ।
ಪಾಪಂ ಬಾಲವಧೇ ಹೇತುಂ ಶ್ವೋ ಹಂತಾಸ್ಮಿ ಜಯದ್ರಥಮ್ ॥೧೨೨॥

ನನ್ನ ಸ್ನೇಹವನ್ನು ಮರೆತು ದುರ್ಯೋಧನನ ಹಿತದಲ್ಲಿ ರತನಾಗಿ ಬಾಲವಧೆಗೆ ಕಾರಣನಾದ ಪಾಪಿಯಾದ ಜಯದ್ರಥನನ್ನು ನಾಳೆ ಕೊಲ್ಲುವೆನು.

ರಕ್ಷಮಾಣಾಶ್ಚ ತಂ ಸಂಖೇ ಯೇ ಮಾಂ ಯೋತ್ಸ್ಯಂತಿ ಕೇಚನ ।
ರಾಜನ್ ದ್ರೋಣಮುಖಾಂಸ್ತಾಂಸ್ತಾನ್ ವಾರಯಿಷ್ಯಾಮ್ಯಹಂ ಶರೈಃ ॥

ಎಲೈ ರಾಜನೇ, ಅವನನ್ನು ರಕ್ಷಿಸುತ್ತಾ ನನ್ನ ಜೊತೆಯಲ್ಲಿ ಯಾರು ಯುದ್ಧವನ್ನು ಮಾಡುವರೋ ಅಂತಹ ದ್ರೋಣ ಮೊದಲಾದವರೆಲ್ಲರನ್ನೂ ನನ್ನ ಬಾಣಗಳಿಂದ ತಡೆಯುವೆನು.

ಏವಂ ಯದಿ ನ ಸಂಗ್ರಾಮೇ ಕುರ್ಯಾಂ ಶ್ವಃ ಪುರುಷೋತ್ತಮ ।
ಮಾ ಸ್ಮ ಪುಣ್ಯಕೃತಾಂ ಲೋಕಾನ್ ಪ್ರಾಪ್ನುಯಾಂಶೂರಸಮ್ಮತಾನ್ ॥

ಎಲೈ ಪುರುಷೋತ್ತಮನೇ, ನಾಳೆ ಯುದ್ಧದಲ್ಲಿ ನಾನು ಈ ಕಾರ್ಯವನ್ನು ಮಾಡದಿದ್ದರೆ ಶೂರರಿಗೆ ಸಮ್ಮತವಾದ ಪುಣ್ಯವಂತರ ಲೋಕವು ನನಗೆ ದೊರೆಯುವುದು ಬೇಡ.

ಯೇ ಲೋಕಾ ಮಾತೃಘಾತಿನಾಂ ಯೇ ಲೋಕಾಃ ಪಿತೃಘಾತಿನಾಮ್ ।
ಯೇ ಗುರೋರ್ದಾರಗಾಮೀನಾಂ ಪಿಶುನಾನಾಂ ಚ ಯಾ ಗತಿಃ ॥

ಪಾಯಸಂ ಪಯಸಾऽನ್ನಂ ವಾ ಶಾಕಂ ಕೃಸರಮೇವ ವಾ ।
ಸಂಯಾವಾಪೂಪಮಾಂಸಾನಿ ಯೇ ಚ ಲೋಕಾ ವೃಥಾऽಶ್ನತಾಮ್ ॥

ಸಾಧೂನ್ ನಿಂದಯತಾಂ ಚಾಪಿ ಯೇ ಚಾಪಿ ಪರಿವಾದಿನಾಮ್ ।
ಯೇ ಚ ನಿಕ್ಷೇಪಹಾರೀಣಾಂ ಯೇ ಚ ವಿಶ್ವಾಸಘಾತಿನಾಮ್ ॥೧೨೭॥

ಭುಕ್ತಪೂರ್ವಾಂ ಸ್ತ್ರಿಯಂ ಚಾಪಿ ನಿಂದತಾಮಘಶಂಸಿನಾಮ್ ।
ಬ್ರಾಹ್ಮಣಾನ್ ನಿಘ್ನತಾಂ ಯೇ ಚ ಯೇ ಚ ಗೋಘಾತಿನಾಮಪಿ ॥

ಅದತ್ತಾ ದೇವತಾಭ್ಯಶ್ಚ ಅತಿಥಿಭ್ಯಸ್ತಥೈವ ಚ ।
ತಾನಿಹೈವೋಪಗಚ್ಛೇಯಂ ನ ಚೇದ್ ಹನ್ಯಾಂ ಜಯದ್ರಥಮ್ ॥೧೨೯॥

ತಾಯಿಯನ್ನು ಕೊಂದವರಿಗೆ ಯಾವ ಲೋಕವೋ; ತಂದೆಯನ್ನು ಕೊಂದವರಿಗೆ ಯಾವ ಲೋಕವೋ; ಗುರುಪತ್ನಿಯನ್ನು ಗಮನ ಮಾಡಿದವರಿಗೆ ಯಾವ ಲೋಕವೋ; ಚಾಡಿಕೋರರಿಗೆ ಯಾವ ಗತಿಯೋ; ಪಾಯಸವನ್ನಾಗಲೀ, ಕ್ಷೀರಾನ್ನವನ್ನಾಗಲೀ, ಶಾಕವನ್ನಾಗಲೀ, ಯಜ್ಞ ಹವಿಸ್ಸನ್ನಾಗಲೀ, ಗಂಜಿ-ಅಪೂಪ ಅಥವಾ ಮಾಂಸವನ್ನಾಗಲೀ ವ್ಯರ್ಥವಾಗಿ ಭುಂಜಿಸುವವರಿಗೆ ಯಾವ ಲೋಕಗಳೋ; ಸಜ್ಜನರನ್ನು ನಿಂದಿಸುವವರಿಗೆ

ಸಜ್ಜನರ ಜೊತೆಯಲ್ಲಿ ಜಗಳವಾಡುವವರಿಗೆ, ವಿಶ್ವಾಸ ಘಾತಕರಿಗೆ, ರಕ್ಷಣೆಗಿಟ್ಟ ವಸ್ತುವನ್ನು ಅಪಹಾರ ಮಾಡುವವರಿಗೆ ಯಾವ ಲೋಕಗಳೋ; ಹಿಂದೆ ಭೋಗಿಸಿದ ಸ್ತ್ರೀಯನ್ನು ನಿಂದಿಸುವವರಿಗೆ, ಇನ್ನೊಬ್ಬರಿಗೆ ಕೇಡನ್ನು ಬಯಸುವವರಿಗೆ, ಬ್ರಾಹ್ಮಣರನ್ನು ಕೊಲ್ಲುವವರಿಗೆ, ಗೋಹತ್ಯೆಯನ್ನು ಮಾಡುವವರಿಗೆ ಯಾವ ಲೋಕಗಳೋ; ದೇವತೆಗಳಿಗೆ ಮತ್ತು ಋಷಿಗಳಿಗೆ ನೀಡದೆ ಭುಂಜಿಸುವವರಿಗೆ ಯಾವ ಲೋಕಗಳೋ, ಜಯದ್ರಥನನ್ನು ಕೊಲ್ಲದಿದ್ದರೆ ನನಗೆ ಇಲ್ಲಿಯೇ ಅಂತಹ ಲೋಕಗಳು ದೊರೆಯಲಿ.

ವೇದಾಧ್ಯಯನಮತ್ಯರ್ಥಂ ಶಾಸಿತಂ ದ್ವಿಜಸತ್ತಮಃ ।
ಕಾಲದ್ರವ್ಯಮಿತಂ ಕೃತ್ವಾ ಯೋಽಧ್ಯಾಪಯತಿ ಮೂಢಧೀಃ ॥೧೩೦॥

ಭೃತಕಃ ಸ ತು ವಿಜ್ಞೇಯಃ ಸರ್ವಕರ್ಮಬಹಿಷ್ಕೃತಃ ।
ತಸ್ಯ ಯಾ ಗತಿರುದ್ದಿಷ್ಟಾ ತತ್ತಂಕ್ಷ್ಯಾ ಭುಂಜತಸ್ತದಾ ॥ ೧೩೧ ॥

ಅವಮನ್ಯಮಾನೋ ಯಾನ್ ಯಾತಿ ವೃದ್ಧಾನ್ ಸಾಧೂನ್ ಗುರೂಂಶ್ಚಥಾ ।
ಸಂಸ್ಪೃಶನ್ ಬ್ರಾಹ್ಮಣಂ ಗಾಂ ಚ ಪದಾಽಗ್ನಿ ಚಾಪಿ ಯೋ ವ್ರಜೇತ್ ॥

ಯೋಽಪ್ಸು ಮೂತ್ರಂ ಪುರೀಷಂ ವಾ ಶ್ಲೇಷ್ಮಾಣಂ ವಾಽಪಿ ಮುಂಚತಿ ।
ಗಚ್ಛೇಯಂ ತಾಂ ಗತಿಂ ಕೃಚ್ಛ್ರಾಂ ನ ಚೇದ್ಹನ್ಮಿ ಜಯದ್ರಥಮ್ ॥೧೩೩॥

ಗುರುಗಳಿಂದ ಅಧ್ಯಯನ ಮಾಡಿದ ವೇದವನ್ನು ಯಾವ ಮೂಢನಾದ ಬ್ರಾಹ್ಮಣನು ಕಾಲ-ದ್ರವ್ಯ ಮಿತಿಯನ್ನು ಇಟ್ಟುಕೊಂಡು ಅಧ್ಯಾಪನ ಮಾಡಿಸುತ್ತಾನೆಯೋ ಅವನನ್ನು ಭೃತಕ ಎಂದು ತಿಳಿಯಬೇಕು. ಅವನು ಎಲ್ಲ ಸತ್ಕರ್ಮದಿಂದಲೂ ಬಹಿಷ್ಕೃತನಾದವನು. ಅವನಿಗೆ ಎಂತಹ ಗತಿಯೋ; ಅವನ ಸಹಪಂಕ್ತಿಯಲ್ಲಿ ಭೋಜನ ಮಾಡುವವರಿಗೆ ಎಂತಹ ಗತಿಯೋ; ಹಿರಿಯರನ್ನೂ, ಸಜ್ಜನರನ್ನೂ ಮತ್ತು ಗುರುಗಳನ್ನೂ ಅವಮಾನ ಮಾಡುತ್ತಾ ಹೋಗುವವನಿಗೆ ಯಾವ ಗತಿಯೋ; ಬ್ರಾಹ್ಮಣನನ್ನು, ಗೋವನ್ನು, ಅಗ್ನಿಯನ್ನು ಪಾದದಿಂದ ಸ್ಪರ್ಶ ಮಾಡುತ್ತಾ ನಡೆಯುವವನಿಗೆ ಯಾವ ಗತಿಯೋ; ಜಲದಲ್ಲಿ ಮಲ-ಮೂತ್ರ-ಶ್ಲೇಷ್ಮಗಳನ್ನು ವಿಸರ್ಜಿಸುವವನಿಗೆ ಯಾವ ಗತಿಯೋ, ನಾಳೆ ಜಯದ್ರಥನನ್ನು ಕೊಲ್ಲದಿದ್ದರೆ ಅಂತಹ ದುರ್ಗತಿಯನ್ನು ನಾನು ಹೊಂದಿಯೇನು!

ನಗ್ನಸ್ಯ ಸ್ನಾಯಮಾನಸ್ಯ ಯಾ ಚ ವಂಧ್ಯಾತಿಥೇರ್ಗತಿಃ ।
ಉತ್ಕೋಶಕಾನೃತಾನಾಂ ಚ ವಂಚಕಾನಾಂ ಚ ಯಾ ಗತಿಃ ॥ ೧೩೪ ॥

ಸೂಚಕಾತ್ಮಾಪಹಾರೀಣಾಂ ಯಾ ಚ ಮಿಥ್ಯಾಭಿಶಂಸಿನಾಮ್ ।
ಭೃತ್ಯೈಃ ಸಂದೃಶ್ಯಮಾನಾನಾಂ ಪುತ್ರದಾರಾಶ್ರಿತೈಸ್ತಥಾ ॥ ೧೩೫ ॥

ಅಸಂವಿಭಜ್ಯ ಕ್ಷುದ್ರಾಣಾಂ ಯಾ ಗತಿರ್ಮೃಷ್ಟಮಶ್ನತಾಮ್ ।
ತಾಂ ಗಚ್ಛೇಯಂ ಗತಿಂ ಘೋರಾಂ ನ ಚೇದ್ದನ್ಮಿ ಜಯದ್ರಥಮ್ ॥೧೩೬॥

ನಗ್ನವಾಗಿ ಸ್ನಾನ ಮಾಡುವವನಿಗೆ, ಅತಿಥಿಯನ್ನು ವ್ಯರ್ಥವಾಗಿ ಕಳುಹಿಸುವವನಿಗೆ, ಕಿರುಚಿ ಹಿರಿಯರನ್ನು ನಿಂದಿಸುವವನಿಗೆ, ಸುಳ್ಳು ಮಾತನಾಡುವವನಿಗೆ ಮತ್ತು ವಂಚಕರಿಗೆ ಯಾವ ಗತಿಯೋ; ಚಾಡಿಕೋರರಿಗೆ, ಆತ್ಮಘಾತಕರಿಗೆ, ಮಿಥ್ಯಾರೂಪವನ್ನು ಮಾಡುವವರಿಗೆ, ಭೃತ್ಯರನ್ನು ಪತ್ನಿ-ಪುತ್ರರನ್ನು ಅವಲಂಬಿಸಿ ಜೀವಿಸುವವರಿಗೆ, ಮೃಷ್ಟಾನ್ನವನ್ನು ವಿಭಾಗವನ್ನು ಮಾಡಿ ಹಂಚದೆ ಭುಂಜಿಸುವ ಕ್ಷುದ್ರರಿಗೆ ಯಾವ ಘೋರವಾದ ಗತಿಯು ಆಗುತ್ತದೆಯೋ ನಾಳೆ ಜಯದ್ರಥನನ್ನು ಕೊಲ್ಲದಿದ್ದರೆ ಆ ಗತಿಯು ನನಗಾಗಲಿ.

ಸಂಶ್ರಿತಂ ಚಾಪಿ ಯಸ್ಸ್ಯಕ್ತ್ವಾ ಸಾಧುಸದ್ವಚನೇ ರತಮ್ ।
ನೈನಂ ಭರತಿ ದುಷ್ಟಾತ್ಮಾ ನಿಂದತೇ ಚೋಪಕಾರಿಣಮ್ ॥ ೧೩೭ ॥

ಅರ್ಹತೇ ಪ್ರಾತಿವೇಶ್ಯಾಯ ಶ್ರಾದ್ಧಂ ಯೋ ನ ದದಾತಿ ಹ ।
ಅನರ್ಹತೇ ಚ ಯೋ ದದ್ಯಾದ್ ವೃಷಲೀಪತಯೇಽಪಿ ಚ ॥ ೧೩೮ ॥

ಮದ್ಯಪೋ ಭಿನ್ನಮರ್ಯಾದಃ ಕೃತಘ್ನೋ ಭರ್ತ್ಯನಿಂದಕಃ ।
ತೇಷಾಂ ಗತಿಮಿಯಾಂ ಕ್ಷಿಪ್ರಂ ನ ಚೇದ್ದನ್ಮಿ ಜಯದ್ರಥಮ್ ॥ ೧೩೯ ॥

ತನ್ನನ್ನು ಆಶ್ರಯಿಸಿದ ತನ್ನ ಮಾತನ್ನು ಪಾಲಿಸುವ ಸಜ್ಜನನಾದ ವ್ಯಕ್ತಿಯನ್ನು ಪರಿತ್ಯಜಿಸಿ ಪೋಷಿಸದ ದುಷ್ಟಾತ್ಮನಿಗೆ ಯಾವ ಗತಿಯೋ; ಉಪಕಾರವನ್ನು ಮಾಡಿದವನನ್ನು ನಿಂದಿಸುವವನಿಗೆ ಯಾವ ಗತಿಯೋ; ಯೋಗ್ಯನಾದ ಕುಟುಂಬಿಯಾದ ಬ್ರಾಹ್ಮಣನಿಗೆ ಶ್ರಾದ್ಧವನ್ನು ಕೊಡದವನಿಗೆ ಯಾವ ಗತಿಯೋ; ಅನರ್ಹನಾದ ವೃಷಲೀಪತಿಗೆ ಶ್ರಾದ್ಧವನ್ನು ಕೊಡುವವನಿಗೆ ಯಾವ ಗತಿಯೋ;

ಮದ್ಯಪಾನ ಮಾಡುವವನಿಗೆ, ನೀತಿಯ ಎಲ್ಲೆಯನ್ನು ಮೀರಿದವನಿಗೆ, ಕೃತಘ್ನನಾದವನಿಗೆ, ಸ್ವಾಮಿಯನ್ನು ನಿಂದಿಸುವವನಿಗೆ ಯಾವ ಗತಿಯೋ ಅವೆಲ್ಲವೂ ಜಯದ್ರಥನನ್ನು ಕೊಲ್ಲದಿದ್ದರೆ ನನಗೆ ಶೀಘ್ರವಾಗಿ ಆಗಲಿ.

ಧರ್ಮಾದಪೇತಾ ಯೇ ಚಾನ್ಯೇ ಯೇ ಚಾತ್ಮಾಪರಿಕೀರ್ತಿತಾಃ ।
ಯೇ ಮಯಾ ಕೀರ್ತಿತಾಶ್ಚಾತ್ರ ತೇಷಾಂ ಗತಿಮವಾಪ್ನುಯಾಮ್ ॥೧೪೦॥

ನಾನು ಇಲ್ಲಿಹೇಳದ ಧರ್ಮಭ್ರಷ್ಟರಾದ ಪುರುಷರಿಗೆ ಯಾವ ಗತಿಯೋ; ನಾನು ಹೇಳಿದ ಪುರುಷರಿಗೆ ಯಾವ ಗತಿಯೋ ಅಂತಹ ಗತಿಯು ನನಗಾಗಲಿ.

ಯದಿ ವ್ಯುಷ್ಟಾಮಿಮಾಂ ರಾತ್ರಿಂ ಶ್ವೋ ನ ಹನ್ಯಾಂ ಜಯದ್ರಥಮ್ ।
ಇಮಾಂ ಚಾಪ್ಯಪರಾಂ ಭೂಯಃ ಪ್ರತಿಜ್ಞಾಂ ಮೇ ನಿಬೋಧತ ॥೧೪೧॥

ಈ ರಾತ್ರಿಯು ಕಳೆದ ಮೇಲೆ ನಾಳೆ ಜಯದ್ರಥನನ್ನು ಕೊಲ್ಲದಿದ್ದರೆ ನೀವೆಲ್ಲರೂ ಈ ನನ್ನ ಇನ್ನೊಂದು ಪ್ರತಿಜ್ಞೆಯನ್ನು ತಿಳಿಯಿರಿ.

ಇಹೈವಂ ಚ ಪ್ರವೇಕ್ಷ್ಯಾಮಿ ಜ್ವಲಿತಂ ಜಾತವೇದಸಮ್ ।
ಗಾಂಡೀವಹಸ್ತೋ ರಾಜ್ಞಾಂ ಚ ಸಮಕ್ಷಂ ಪೃಥಿವೀಪತೇ ॥ ೧೪೨ ॥

ಅನಸ್ತಮಿತ ಆದಿತ್ಯೇ ನ ಚೇದ್ ಹನ್ಮಿ ಜಯದ್ರಥಮ್ ।
ಯದ್ಯಸ್ಮಿನ್ನಹತೇ ಪಾಪೇ ಸೂರ್ಯಾಸ್ತಮುಪಯಾಸ್ಯತಿ ॥ ೧೪೩ ॥

ಸೂರ್ಯನು ಮುಳುಗುವುದರೊಳಗೆ ಜಯದ್ರಥನನ್ನು ಕೊಲ್ಲದಿದ್ದರೆ, ಜಯದ್ರಥನನ್ನು ಕೊಲ್ಲದೆ ಸೂರ್ಯನು ಮುಳುಗಿದರೆ, ಎಲೈ ರಾಜನೇ, ಇಲ್ಲಿಯೇ ರಾಜರ ಎದುರಿನಲ್ಲಿ ಗಾಂಡೀವವನ್ನು ಹಿಡಿದು ಜ್ವಲಿಸುವ ಅಗ್ನಿಯನ್ನು ಪ್ರವೇಶ ಮಾಡುವೆನು.

ಅಸುರಸುರಮನುಷ್ಯಾಃ ಪಕ್ಷಿಣೋ ವೋರಗಾ ವಾ
ಪಿತೃರಜನಿಚರಾ ವಾ ಬ್ರಹ್ಮದೇವರ್ಷಯೋ ವಾ ।
ಚರಮಚರಮಪೀದಂ ಯತ್ ಪರಂ ಚಾಪಿ ತಸ್ಮಾತ್
ತದಪಿ ಮಮ ರಿಪುಂ ತಂ ರಕ್ಷಿತುಂ ನೇಹ ಶಕ್ತಾಃ ॥ ೧೪೪ ॥

ಸುರಾಸುರ-ಮನುಷ್ಯರಾಗಲೀ, ಪಕ್ಷಿಗಳು-ಸರ್ಪಗಳು-ಪಿತೃಗಳು-ರಾಕ್ಷಸರಾಗಲೀ, ಬ್ರಹ್ಮಋಷಿಗಳು-ದೇವರ್ಷಿಗಳಾಗಲೀ, ಈ ಚರಾಚರ ಜಗತ್ತೇ ಆಗಲೀ, ಅದಕ್ಕಿಂತ ಶ್ರೇಷ್ಠವಾದುದೇ ಆಗಲೀ ಯಾರೂ ಸಹ ನನ್ನ ಶತ್ರುವನ್ನು ರಕ್ಷಿಸಲು ಸಮರ್ಥರಾಗುವುದಿಲ್ಲ.

ಯದಿ ವಿಶತಿ ರಸಾತಳಂ ತದಗ್ರ್ಯಂ
ವಿಯದಪಿ ದೇವಪುರಂ ದಿತೇಃ ಪುರಂ ವಾ ।
ನಿಶಿತಶರವರೈರಹಂ ಪ್ರಸಹ್ಯ
ಶೃಣುತ ಹಿ ಸಿಂಧುಪತೇಃ ಶಿರೋ ಹರಿಷ್ಯೇ ॥ ೧೪೫ ॥

ಜಯದ್ರಥನು ಶ್ರೇಷ್ಠವಾದ ರಸಾತಳ ಲೋಕವನ್ನು ಹೊಕ್ಕರೂ, ಅಂತರಿಕ್ಷವನ್ನು, ದೇವಪುರವನ್ನು ಅಥವಾ ದೈತ್ಯಪುರವನ್ನು ಪ್ರವೇಶ ಮಾಡಿದರೂ ನನ್ನ ನಿಶಿತವಾದ ಶ್ರೇಷ್ಠವಾದ ಬಾಣಗಳಿಗೆ ವಶಪಡಿಸಿ ಸಿಂಧುಪತಿಯ ಶಿರಸ್ಸನ್ನು ಕತ್ತರಿಸುವೆನು. ಈ ಪ್ರತಿಜ್ಞೆಯನ್ನು ಎಲ್ಲರೂ ಕೇಳಿ.

ಸಂಜಯಃ

ಏವಮುಕ್ತ್ವಾ ವಿಚಿಕ್ಷೇಪ ಗಾಂಡೀವಂ ಸವ್ಯದಕ್ಷಿಣಮ್ ।
ತಸ್ಯ ಸರ್ವಮತಿಕ್ರಮ್ಯ ಧನುಃಶಬ್ದೋಽಸ್ಪೃಶದ್ ದಿವಮ್ ॥ ೧೪೬ ॥

ಸಂಜಯ– ಹೀಗೆ ಹೇಳಿ ಅರ್ಜುನನು ಗಾಂಡೀವವನ್ನು ಬಲಭಾಗದಲ್ಲಿ ಮತ್ತು ಎಡಭಾಗದಲ್ಲಿ ಹಿಡಿದು ಎಳೆದನು. ಆದರಿಂದ ಉಂಟಾದ ಶಬ್ದವು ಉಳಿದೆಲ್ಲ ಶಬ್ದಗಳನ್ನೂ ಮೀರಿ ಅಂತರಿಕ್ಷವೆಲ್ಲವನ್ನೂ ವ್ಯಾಪಿಸಿತು.

ಅರ್ಜುನೇನ ಪ್ರತಿಜ್ಞಾತೇ ಪಾಂಚಜನ್ಯಂ ಜನಾರ್ದನಃ ।
ಪ್ರದಧ್ಮೌ ತತ್ರ ಸಂಕ್ರುದ್ಧೋ ದೇವದತ್ತಂ ಧನಂಜಯಃ ॥ ೧೪೭ ॥

ಅರ್ಜುನನು ಹೀಗೆ ಪ್ರತಿಜ್ಞೆ ಮಾಡುತ್ತಿರಲು ಕೃಷ್ಣನು ಪಾಂಚಜನ್ಯ ಶಂಖವನ್ನು ಊದಿದನು. ಆಗ ಧನಂಜಯನು ಕೋಪದಿಂದ ದೇವದತ್ತ ಶಂಖವನ್ನು ಊದಿದನು.

ಸ ಪಾಂಚಜನ್ಯೋಽಚ್ಯುತವಕ್ತ್ರವಾಯುನಾ
ಭೃಶಂ ಸುಪೂರ್ಣೋದರನಿಃಸೃತಧ್ವನಿಃ ।

ಜಗತ್ ಸಪಾತಾಳವಿಯದ್ದಿಗೀಶ್ವರಂ
ಪ್ರಕಂಪಯಾಮಾಸ ಯುಗಾತ್ಯಯೇ ಯಥಾ ॥ ೧೪೮ ॥

ಕೃಷ್ಣನ ಮುಖದಿಂದ ಹೊರಟ ವಾಯುವಿನಿಂದ ಪೂರ್ಣವಾಗಿ ತುಂಬಿದ ಪಾಂಚಜನ್ಯ ಶಂಖದಿಂದ ಹೊರಟ ಶ್ರೇಷ್ಠವಾದ ಧ್ವನಿಯು ಪಾತಾಳ, ಆಂತರಿಕ್ಷ, ದಿಕ್ಪಾಲಕರು ಇವರಿಂದ ಸಹಿತವಾದ ಎಲ್ಲ ಲೋಕಗಳನ್ನೂ ಯುಗಾವಸಾನದಲ್ಲಿಯೋ ಎಂಬಂತೆ ನಡುಗಿಸಿತು.

ತತೋ ವಾದಿತ್ರನಿರ್ಘೋಷಾಃ ಪ್ರಾದುರಾಸನ್ ಸಹಸ್ರಶಃ ।
ಸಿಂಹನಾದಾಶ್ಚ ಪಾಂಡೂನಾಂ ಪ್ರತಿಜ್ಞಾತೇ ಮಹಾತ್ಮನಾ ॥ ೧೪೯ ॥

ಅನಂತರ ಸಹಸ್ರ ಸಂಖ್ಯೆಯಲ್ಲಿ ವಾದ್ಯಘೋಷಗಳು ಉಂಟಾದವು. ಮಹಾತ್ಮನಾದ ಅರ್ಜುನನು ಪ್ರತಿಜ್ಞೆಯನ್ನು ಮಾಡುತ್ತಿರಲು ಪಾಂಡವರ ಸಿಂಹನಾದಗಳೂ ಉಂಟಾದವು.

ಅನೃತ್ಯದಿವ ಗಾಂಡೀವಂ ಶರಾಸ್ತೂಣೇಗತಾ ಮುದಾ ।
ನಿರಾಕ್ರಾಮನ್ನಿವ ತದಾ ಸ್ವಯಮೇವ ಮೃಧೈಷಿಣಃ ॥ ೧೫೦ ॥

ಗಾಂಡೀವ ಧನುಸ್ಸು ಕುಣಿಯುವಂತೆ ತೋರಿತು. ಬತ್ತಳಿಕೆಯಲ್ಲಿದ್ದ ಬಾಣಗಳು ಯುದ್ಧವನ್ನು ಬಯಸಿ ಸಂತೋಷದಿಂದ ತಾವೇ ಹೊರಗೆ ಬರುತ್ತಿರುವಂತೆ ತೋರಿದವು.

ಭೀಮಸೇನಸ್ತು ಸಂಹೃಷ್ಟಃ ಪ್ರತ್ಯಭಾಷತ ಭಾರತ ।
ಧನಂಜಯಮಭಿಪ್ರೇಕ್ಷ್ಯ ಹರ್ಷಗದ್ಗದಯಾ ಗಿರಾ ॥ ೧೫೧ ॥

ಪ್ರತಿಜ್ಞೋದ್ಘಶಬ್ದೇನ ಕೃಷ್ಣಶಂಖಸ್ವನೇನ ಚ ।
ನಿಹತೋ ಧಾರ್ತರಾಷ್ಟ್ರೋಽಯಂ ಸಾನುಬಂಧಃ ಸುಯೋಧನಃ ॥೧೫೨॥

ಎಲೈ ಭಾರತನೇ, ಸಂತೋಷಗೊಂಡ ಭೀಮಸೇನನಾದರೂ ಧನಂಜಯನನ್ನು ನೋಡಿ, ಹರ್ಷಗದ್ಗದವಾದ ಮಾತುಗಳಿಂದ, ನಿನ್ನ ಪ್ರತಿಜ್ಞಾ ವಾಕ್ಯದಿಂದ ಉಂಟಾದ ಶಬ್ದದಿಂದಲೂ ಮತ್ತು ಕೃಷ್ಣನ ಶಂಖಧ್ವನಿಯಿಂದಲೂ ಪರಿವಾರ ಸಹಿತನಾದ, ಧೃತರಾಷ್ಟ್ರ ಪುತ್ರನಾದ ಸುಯೋಧನನು ಹತನಾಗಿದ್ದಾನೆ ಎಂದು ಹೇಳಿದನು.

ಅಥ ಮೃದಿತತಮಾಗ್ರ್ಯದಾಮಮಾಲ್ಯಂ
ತವ ಸುತಶೋಕಮಯಂ ಚ ರೋಷಜಾತಮ್ ।
ವ್ಯಪನುದತಿ ಮಹಾಪ್ರಭಾವಮೇತನ್-
ನರವರ ವಾಕ್ಯಮಿದಂ ಮಹಾರ್ಥಮಿಷ್ಟಮ್ ॥ ೧೫೩ ॥

ಎಲೈ ಪುರುಷಶ್ರೇಷ್ಠನೇ, ದುರ್ಯೋಧನನ ರೋಷದಿಂದ ಉಂಟಾದ ನಿನ್ನ ಸುತನ ಶೋಕಕ್ಕೆ ಕಾರಣವಾದ, ಗಂಧಮಾಲ್ಯಗಳನ್ನು ನಾಶಮಾಡುವ, ಮಹಾಪ್ರಭಾವ-ಶಾಲಿಯಾದ ಈ ವಾಕ್ಯಗಳು ನಿನ್ನ ಶತ್ರುಗಳದೊಡ್ಡ ಇಷ್ಟಾರ್ಥವನ್ನು ನಾಶ ಮಾಡುತ್ತವೆ (ಎಂದು ಭೀಮಸೇನನು ಹೇಳಿದನು).

ಸಂಜಯಃ

ಅಥ ಶಂಖೈಶ್ಚ ಭೇರೀಭಿಃ ಪಣವೈಃ ಸೈನಿಕಾಸ್ತಥಾ ।
ಸಸೂತಮಾಗಧಾ ಜಿಷ್ಣುಂ ಸ್ತುತಿಭಿಃ ಸಮಪೂಜಯನ್ ॥ ೧೫೪ ॥

ಸಂಜಯ– ಆಗ ಶಂಖ-ಭೇರಿ-ಪಣವಗಳಿಂದ ಸಹಿತರಾದ ಸೈನಿಕರೂ, ಸೂತ-ಮಾಗಧರೂ ಸಹ ಸ್ತೋತ್ರಗಳಿಂದ ಅರ್ಜುನನನ್ನು ಪೂಜಿಸಿದರು.

ತದಾ ಭೀಮಂ ಬಲಂ ಸರ್ವಂ ತೇನ ನಾದೇನ ಮೋಹಿತಮ್ ।
ತಾವಕಂ ತನ್ಮಹಾರಾಜ ವಿಷಣ್ಣಂ ಸಮಪದ್ಯತ ॥ ೧೫೫ ॥

ಎಲೈ ಮಹಾರಾಜನೇ, ಆಗ ನಿನ್ನ ಭಯಂಕರವಾದ ಸೈನ್ಯವೆಲ್ಲವೂ ಆ ನಾದದಿಂದ ಮೋಹಿತವಾಗಿ ವಿಷಾದವನ್ನು ಹೊಂದಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನಸಪ್ತತಿತಮೋಽಧ್ಯಾಯಃ ॥

॥ ಪ್ರತಿಜ್ಞಾಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತನೆಯ ಅಧ್ಯಾಯ

ಅರ್ಜುನನ ಪ್ರತಿಜ್ಞೆಯನ್ನು ಕೇಳಿ ಚಕಿತನಾದ ಸೈಂಧವನಿಗೆ
ದ್ರೋಣ-ದುರ್ಯೋಧನರಿಂದ ಆಶ್ವಾಸನೆ.

ಸಂಜಯಃ

ಶ್ರುತ್ವಾ ತು ತಂ ಮಹಾಶಬ್ದಂ ಪಾಂಡೂನಾಂ ಪುತ್ರಗೃದ್ಧಿನಾಮ್ ।
ಚಾರೈಃ ಪ್ರವೇದಿತಸ್ತ್ರಃ ಸಮುತ್ಥಾಯ ಜಯದ್ರಥಃ ॥ ೧ ॥

ಸಂಜಯ– ಪುತ್ರನನ್ನು ಹಂಬಲಿಸುವ ಪಾಂಡವರ ಮಹಾಶಬ್ದವನ್ನು ಕೇಳಿ ಎದ್ದು ನಿಂತು ಚಾರರಿಂದ ವಿಷಯವನ್ನು ತಿಳಿದು ಜಯದ್ರಥನು ಹೆದರಿದನು.

ಶೋಕಸಮ್ಮೂಢಹೃದಯೋ ದುಃಖೇನಾಭ್ಯಾಹತೋ ಭೃಶಮ್ ।
ಮಜ್ಜಮಾನ ಇವಾಗಾಧೇ ವಿಪುಲೇ ಶೋಕಸಾಗರೇ ।
ಜಗಾಮ ಸಮಿತಿಂ ರಾಜ್ಞಾಂ ಸೈಂಧವೋ ವಿಮೃಶನ್ ಬಹು ॥ ೨ ॥

ಶೋಕದಿಂದ ತುಂಬಿದ ಹೃದಯವುಳ್ಳವನಾಗಿ, ಬಹಳ ದುಃಖಪೀಡಿತನಾಗಿ ಅಗಾಧವೂ, ವಿಸ್ತಾರವೂ ಆದ ಶೋಕಸಾಗರದಲ್ಲಿ ಮುಳುಗುವವನಂತೆ ಸೈಂಧವನು ಬಹಳ ಯೋಚನೆಯನ್ನು ಮಾಡುತ್ತಾ ರಾಜರ ಸಮುದಾಯವಿದ್ದಲ್ಲಿಗೆ ಹೋದನು.

ಸ ತೇಷಾಂ ನರದೇವಾನಾಂ ಸಕಾಶೇ ಪರ್ಯದೇವಯತ್ ।
ಅಭಿಮನ್ಯುಪಿತುರ್ಭೀತಃ ಸವ್ರೀಡೋ ವಾಕ್ಯಮಬ್ರವೀತ್ ॥ ೩ ॥

ಆವನು ಆ ರಾಜರ ಎದುರಿನಲ್ಲಿ ಗೋಳಾಡಿದನು. ಅಭಿಮನ್ಯುವಿನ ತಂದೆಗೆ ಹೆದರಿ ನಾಚಿಕೆಯಿಂದ ಮಾತನಾಡಿದನು.

ಪಾಂಡೋಃ ಕ್ಷೇತ್ರೇ ಯಸ್ತು ಜಾತಃ ಶಕ್ರೇಣ ಕಿಲ ಕಾಮಿನಾ ।
ಸ ನಿನೀಷತಿ ದುರ್ಬುದ್ಧಿರ್ಮಾಂ ಕಿಲೈಕಂ ಯಮಕ್ಷಯಮ್ ॥ ೪ ॥

ಸ್ವಸ್ತಿ ವೋಽಸ್ತು ಗಮಿಷ್ಯಾಮಿ ಸ್ವಗೃಹಂ ಜೀವಿತೇಪ್ಸಯಾ ॥ ೫ ॥

ಪಾಂಡುವಿನ ಪತ್ನಿಯಲ್ಲಿ ಕಾಮಿಯಾದ ಇಂದ್ರನಿಂದ ಜನಿಸಿದ ದುರ್ಬುದ್ಧಿಯುಳ್ಳ ಪುತ್ರನು ನನ್ನೊಬ್ಬನನ್ನು ಯಮಲೋಕಕ್ಕೆ ಕಳುಹಿಸಲು ಬಯಸುತ್ತಾನೆ. ನಿಮಗೆ ಕ್ಷೇಮವಾಗಲಿ. ಜೀವವನ್ನು ಉಳಿಸಿಕೊಳ್ಳಲು ನಾನು ಮನೆಗೆ ಹೋಗುವೆನು.

ಅಥವಾ ಸ್ಥ ಪ್ರತಿಬಲಾಃ ತ್ರಾತುಂ ಮಾಂ ಕ್ಷತ್ರಿಯರ್ಷಭಾಃ ।
ಪಾರ್ಥೇನ ಪಾರ್ಥಿವಾ ವೀರಾಸ್ತದ್ ದದದ್ಧ್ವಂ ಮಮಾಭಯಮ್ ॥೬॥

ಅಥವಾ ವೀರರೂ, ಕ್ಷತ್ರಿಯಶ್ರೇಷ್ಠರೂ ಆದ ನೀವು ಪಾರ್ಥನಿಗೆ ಎದುರಾಗಿ ನಿಂತು ನನ್ನನ್ನು ರಕ್ಷಣೆಯನ್ನು ಮಾಡುವುದಾದರೆ ನನಗೆ ಅಭಯವನ್ನು ಕೊಡಿ.

ದ್ರೋಣದುರ್ಯೋಧನಕೃಪಾಃ ಕರ್ಣಮದ್ರೇಶಬಾಹ್ಲಿಕಾಃ ।
ದುಃಶಾಸನಾದಯಃ ಶಕ್ತಾಃ ತ್ರಾತುಮಭ್ಯಂತಕಾರ್ದಿತಮ್ ॥ ೭ ॥

ದ್ರೋಣ-ದುರ್ಯೋಧನ-ಕೃಪರೂ, ಕರ್ಣ-ಶಲ್ಯ-ಬಾಹ್ಲಿಕರೂ, ದುಶ್ಶಾಸನ ಮೊದಲಾದವರೂ ಯಮನ ಹಿಡಿತಕ್ಕೆ ಸಿಕ್ಕಿದವರನ್ನೂ ರಕ್ಷಿಸಲು ಸಮರ್ಥರಾದವರು.

ಕಿಮಂಗಾಃ ಪುನರೇಕೇನ ಫಲ್ಗುನೇನ ಜಿಘಾಂಸತಾ ।
ನ ತ್ರಾಸ್ಯಂತಿ ಭವಂತೋ ಮಾಂ ಸಮಸ್ತಾಃ ಪತಯಃ ಕ್ಷಿತೇಃ ॥ ೮ ॥

ಎಲೈ ಪ್ರೀತಿಪಾತ್ರರೇ, ಹೀಗಿರುವಾಗ ಕೊಲ್ಲಲು ಬಯಸುವ ಒಬ್ಬ ಅರ್ಜುನನಿಂದ ಕ್ಷಿತಿಪತಿಗಳಾದ ನೀವೆಲ್ಲರೂ ಸೇರಿ ನನ್ನನ್ನು ರಕ್ಷಿಸಲಾರಿರಾ?

ಪ್ರತಿಜ್ಞಾಂ ಪಾಂಡವೇಯಾನಾಂ ಶ್ರುತ್ವಾ ಮಮ ಮಹದ್ ಭಯಮ್ ।
ಸೀದಂತಿ ಮಮ ಗಾತ್ರಾಣಿ ಮುಮೂರ್ಷೋರಿವ ಪಾರ್ಥಿವಾಃ ॥ ೯ ॥

ಪಾಂಡವರ ಪ್ರತಿಜ್ಞೆಯನ್ನು ಕೇಳಿ ನನಗೆ ದೊಡ್ಡ ಭಯವುಂಟಾಗಿದೆ. ಎಲೈ ರಾಜರೇ, ಮರಣವು ಸನ್ನಿಹಿತವಾದ ಮನುಷ್ಯನಂತೆ ನನ್ನ ಅಂಗಾಂಗಗಳು ಕುಸಿಯುತ್ತಿವೆ.

ವಧೋ ನೂನಂ ಪ್ರತಿಜ್ಞಾತೋ ಮಮ ಗಾಂಡೀವಧನ್ವನಾ ।
ತಥಾ ಹಿ ಹೃಷ್ಟಾಃ ಕ್ರೋಶಂತಿ ಶೋಕಕಾಲೇಽಪಿ ಪಾಂಡವಾಃ ॥ ೧೦ ॥

ಶೋಕಕಾಲದಲ್ಲಿಯೂ ಪಾಂಡವರು ಸಂತೋಷದಿಂದ ಕಿರುಚುತ್ತಿದ್ದಾರೆ. ಆದ್ದರಿಂದ ಗಾಂಡೀವ ಧನುರ್ಧಾರಿಯಾದ ಅರ್ಜುನನು ನನ್ನ ವಧೆಯನ್ನು ಪ್ರತಿಜ್ಞೆ ಮಾಡಿದ್ದಾನೆಂಬುದು ನಿಶ್ಚಿತವಾಗುತ್ತದೆ.

ತನ್ನ ದೇವಾ ನ ಗಂಧರ್ವಾ ನಾಸುರಾ ನ ಚ ರಾಕ್ಷಸಾಃ ।
ಶಕ್ನುವಂತ್ಯನ್ಯಥಾಕರ್ತುಂ ಕುತ ಏವ ನರಾಧಿಪಾಃ ॥ ೧೧ ॥

ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರರಾಗಲೀ ಅಥವಾ ರಾಕ್ಷಸರಾಗಲೀ ಅರ್ಜುನನ ಪ್ರತಿಜ್ಞೆಯನ್ನು ವ್ಯತ್ಯಾಸ ಮಾಡಲಾರರು. ಇನ್ನು ರಾಜರುಗಳು ಹೇಗೆ ಮಾಡಿಯಾರು?

ತಸ್ಮಾನ್ಮಾಮನುಜಾನೀಧ್ವಂ ಭದ್ರಂ ವೋಽಸ್ತು ನರಾಧಿಪಾಃ ।
ಅದರ್ಶನಂ ಗಮಿಷ್ಯಾಮಿ ನ ಮಾಂ ದ್ರಕ್ಷ್ಯಂತಿ ಪಾಂಡವಾಃ ॥ ೧೨ ॥

ಆದ್ದರಿಂದ ನನಗೆ ಅನುಮತಿಯನ್ನು ಕೊಡಿ. ರಾಜರೇ ನಿಮಗೆ ಕ್ಷೇಮವಾಗಲಿ. ಪಾಂಡವರು ನನ್ನನ್ನು ಕಾಣದಂತೆ ನಾನು ಎಲ್ಲಾದರೂ ಅದೃಶ್ಯನಾಗುವೆನು.

ಸಂಜಯಃ

ಏವಂ ವಿಲಪಮಾನಂ ತಂ ಭಯವ್ಯಾಕುಲಚೇತಸಮ್ ।
ಆತ್ಮಕಾರ್ಯಗರೀಯಸ್ತ್ವಾದ್ ರಾಜಾ ದುರ್ಯೋಧನೋಽಬ್ರವೀತ್ ॥

ಸಂಜಯ– ಭಯದಿಂದ ವ್ಯಾಕುಲವಾದ ಮನಸ್ಸಿನಿಂದ ಹೀಗೆ ವಿಲಾಪವನ್ನು ಮಾಡುತ್ತಿದ್ದ ಸೈಂಧವನನ್ನು ಕುರಿತು ತನ್ನ ಕಾರ್ಯವು ದೊಡ್ಡದಾದುದರಿಂದ ರಾಜನಾದ ದುರ್ಯೋಧನನು ಮಾತನಾಡಿದನು.

ನ ಭೇತವ್ಯಂ ನರವ್ಯಾಘ್ರ ಕೋ ಹಿ ತ್ವಾ ಪುರುಷರ್ಷಭ ।
ಮಧ್ಯೇ ಕ್ಷತ್ರಿಯವೀರಾಣಾಂ ತಿಷ್ಠಂತಂ ಪ್ರಾರ್ಥಯೇತ್ ಪುಮಾನ್ ॥

ಎಲೈ ನರವ್ಯಾಘ್ರನೇ, ಹೆದರಬೇಡ. ಎಲೈ ಪುರುಷಶ್ರೇಷ್ಠನೇ, ಕ್ಷತ್ರಿಯವೀರರ ಮಧ್ಯೆ ಇರುವ ನಿನ್ನನ್ನು ಯಾವ ಮನುಷ್ಯನು ಯುದ್ಧಕ್ಕಾಗಿ ಆಹ್ವಾನಿಸುವನು?

ಏಷಾಂ ಹಿ ನರದೇವಾನಾಂ ಮತ್ತಮಾತಂಗಗಾಮಿನಾಮ್ ।
ಸಂಘಾತಮುಪಯಾತಾನಾಮಪಿ ಬಿಭ್ಯೇತ್ ಪುರಂದರಃ ॥ ೧೫ ॥

ಮತ್ತಗಜಗಾಮಿಗಳಾದ ಈ ರಾಜರ ಸಮುದಾಯಕ್ಕೆ ಬಂದು ಸೇರಿದವರನ್ನು ಕಂಡು ಇಂದ್ರನೂ ಹೆದರಿಯಾನು!

ಅಹಂ ವೈಕರ್ತನಃ ಕರ್ಣಃ ಚಿತ್ರಸೇನೋ ವಿವಿಂಶತಿಃ ।
ಭೂರಿಶ್ರವಾಃ ಶಲಃ ಶಲ್ಯೋ ವೃಷಸೇನೋ ದುರಾಸದಃ ॥ ೧೬ ॥

ಪುರುಮಿತ್ರೋ ಜಯೋ ಭೋಜಃ ಕಾಂಬೋಜೋ ಬಾಹ್ಲಿಕಃ ಕೃಪಃ ।
ಸತ್ಯವ್ರತೋ ಮಹಾಬಾಹುರ್ವಿಕರ್ಣೋ ದುರ್ಮುಖಿಃ ಸಹಃ ॥ ೧೭ ॥

ದುಃಶಾಸನಃ ಸುಬಾಹುಶ್ಚ ಕಳಿಂಗಶ್ಚಾಪ್ಯುದಾಯುಧಃ ।
ವಿಂದಾನುವಿಂದಾವಾವಂತ್ಯೌ ದ್ರೌಣಿಶ್ಚ ಸಹಸೌಬಲಃ ॥ ೧೮ ॥

ಏತೇ ಚಾನ್ಯೇ ಚ ಬಹವೋ ನಾನಾಜನಪದೇಶ್ವರಾಃ ।
ಸಸೈನ್ಯಾಸ್ತ್ವಭಿಯಾಸ್ಯಂತಿ ವೈತು ತೇ ಮಾನಸೋ ಜ್ವರಃ ॥೧೯॥

ನಾನು, ವೈಕರ್ತನನಾದ ಕರ್ಣ, ಚಿತ್ರಸೇನ, ವಿವಿಂಶತಿ, ಭೂರಿಶ್ರವ, ಶಲ, ಶಲ್ಯ, ಶತ್ರುಗಳಿಂದ ಸೋಲಿಸಲು ಅಸಾಧ್ಯನಾದ ವೃಷಸೇನ, ಪುರುಮಿತ್ರ, ಜಯ, ಭೋಜ, ಕಾಂಬೋಜ ರಾಜ, ಬಾಹ್ಲಿಕ, ಕೃಪ, ಸತ್ಯವ್ರತ, ಮಹಾಬಾಹುವಾದ ವಿಕರ್ಣ, ದುರ್ಮುಖ, ಸಹ, ದುಶ್ಶಾಸನ, ಸುಬಾಹು, ಕಳಿಂಗ ರಾಜನಾದ ಉದಾಯುಧ, ಅವಂತಿದೇಶದ ವಿಂದಾನುವಿಂದರು, ಶಕುನಿಯಿಂದ ಕೂಡಿದ ಅಶ್ವತ್ಥಾಮರು, ಇನ್ನೂ ನಾನಾ ದೇಶದ ರಾಜರಾದ ಅನೇಕರೂ ಸಹ ತಮ್ಮ ಸೈನ್ಯದ ಜೊತೆಯಲ್ಲಿ ನಿನ್ನ ಜೊತೆಯಲ್ಲಿ ಬರುವರು. ನಿನ್ನ ಮನಸ್ಸಿನ ಆತಂಕವು ನಾಶವಾಗಲಿ.

ಮಾಯಾವೀ ಬಲವಾನ್ ಶೂರೋ ರಾಕ್ಷಸಶ್ಚಾಪ್ಯಲಂಬುಸಃ ।
ಇಮೇ ಚ ತ್ವಾಽಭಿಗೋಪ್ಸ್ಯಂತಿ ಸೈನ್ಯೇನ ಮಹತಾ ವೃತಾಃ ॥ ೨೦ ॥

ಮಾಯಾವಿಯೂ, ಬಲಿಷ್ಠನೂ, ಶೂರನೂ, ರಾಕ್ಷಸನೂ ಆದ ಅಲಂಬುಸನು ಮತ್ತು ದೊಡ್ಡ ಸೈನ್ಯದಿಂದ ಕೂಡಿದ ರಾಜರು ನಿನ್ನನ್ನು ರಕ್ಷಿಸುವರು.

ತ್ವಂ ಚಾಪಿ ರಥಿನಾಂ ಶ್ರೇಷ್ಠಃ ಸ್ವಯಂ ಶೂರೋಽಸಿ ಪಾರ್ಥಿವ ।
ಕಥಂಚ ಪಾಂಡವೇಯೇಭ್ಯೋ ಭಯಂ ಪಶ್ಯಸಿ ಸೈಂಧವ ॥ ೨೧ ॥

ಎಲೈ ಪಾರ್ಥಿವನೇ, ನೀನೂ ಸಹ ಶ್ರೇಷ್ಠನಾದ ರಥನೂ ಮತ್ತು ಶೂರನೂ ಆಗಿದ್ದೀಯೆ. ಎಲೈ ಸೈಂಧವನೇ, ನೀನಾದರೂ ಪಾಂಡವರಿಗೆ ಏಕೆ ಹೆದರುವಿ?

ಅಕ್ಷೋಹಿಣ್ಯೋ ಮಹಾವೀರ್ಯ ಮದೀಯಾಸ್ತವ ರಕ್ಷಣೇ ।
ಯತ್ತಾ ಯೋತ್ಸ್ಯಂತಿ ಮಾ ಭೈಷೀಃ ಸೈಂಧವ ವೈತು ತೇ ಭಯಮ್ ॥

ಎಲೈ ಸೈಂಧವನೇ, ಮಹಾಪರಾಕ್ರಮಿಯೇ, ನನ್ನ ಆಕ್ಷೋಹಿಣಿ ಪರಿಮಿತವಾದ ಸೈನ್ಯಗಳು ನಿನ್ನನ್ನು ರಕ್ಷಣೆ ಮಾಡಲು ಎಚ್ಚರಿಕೆಯಿಂದ ಯುದ್ಧ ಮಾಡುವವು. ನಿನ್ನ ಭಯವು ದೂರವಾಗಲಿ.

ಸಂಜಯಃ

ಏವಮಾಶ್ವಾಸಿತೋ ರಾಜ್ಞಾ ಪುತ್ರೇಣ ತವ ಸೈಂಧವಃ ।
ದುರ್ಯೋಧನೇನ ಸಹಿತೋ ದ್ರೋಣಂ ರಾತ್ರ್ಯಾವುಪಾಗಮತ್ ॥ ೨೩ ॥

ಸಂಜಯ– ಹೀಗೆ ನಿನ್ನ ಪುತ್ರನಿಂದ ಸಮಾಧಾನಗೊಳಿಸಲ್ಪಟ್ಟ ಸೈಂಧವನು ರಾತ್ರಿಯಲ್ಲಿ ದುರ್ಯೋಧನನ ಜೊತೆಯಲ್ಲಿ ದ್ರೋಣರ ಬಳಿಗೆ ಹೋದನು.

ಉಪಸಂಗೃಹ್ಯ ಚರಣೌ ದ್ರೋಣಸ್ಯ ಚ ವಿಶಾಂಪತಿಃ ।
ಉಪೋಪವಿಶ್ಯ ಪ್ರಣತಃ ಪರ್ಯಪೃಚ್ಛದಿದಂ ತದಾ ।
ಆರ್ಜುನಸ್ಯಾತ್ಮನಶ್ಚಾರ್ಥೇ ವಿಶೇಷಂ ಪರ್ಯಪೃಚ್ಛತ ॥ ೨೪ ॥

ರಾಜನಾದ ದುರ್ಯೋಧನನು ದ್ರೋಣರ ಪಾದಗಳನ್ನು ಹಿಡಿದು ನಮಸ್ಕಾರ ಮಾಡಿ, ಸಮೀಪದಲ್ಲಿ ಕುಳಿತುಕೊಂಡು ಅರ್ಜುನನಿಗೂ ಮತ್ತು ತನಗೂ ಇರುವ ವಿಶೇಷವನ್ನು ಪ್ರಶ್ನೆ ಮಾಡಿದನು.

ದುರ್ಯೋಧನಃ

ನಿಮಿತ್ತೇ ದೂರಪಾತಿತ್ವೇ ಲಘುತ್ವೇ ದೃಢವೇಧನೇ ।
ಬ್ರವೀತು ಭಗವಾನ್ ಮಹ್ಯಂ ವಿಶೇಷಂ ಫಲ್ಗುನಸ್ಯ ಚ ॥ ೨೫ ॥

ದುರ್ಯೋಧನ– ದೂರಪ್ರಯೋಗವನ್ನು ಮಾಡುವುದರಲ್ಲಿ, ಕ್ಷಿಪ್ರಕಾರಿತ್ವ ವಿಷಯದಲ್ಲಿ, ದೃಢವಾಗಿ ಗಾಯಗೊಳಿಸುವ ವಿಷಯದಲ್ಲಿ ಪೂಜ್ಯರಾದ ನೀವು ನನಗೂ ಮತ್ತು ಅರ್ಜುನನಿಗೂ ಇರುವ ವ್ಯತ್ಯಾಸವನ್ನು ಹೇಳಬೇಕು.

ವಿದ್ಯಾವಿಶೇಷಮಾಚಾರ್ಯ ಜ್ಞಾತುಮಿಚ್ಛಾಮಿ ತತ್ತ್ವತಃ ।
ಆರ್ಜುನಸ್ಯಾತ್ಮನಶ್ಚೈವ ಯಥಾತತ್ತ್ವಂ ಬ್ರವೀಹಿ ಮೇ ॥ ೨೬ ॥

ಎಲೈ ಆಚಾರ್ಯರೇ, ವಿಶೇಷ ವಿದ್ಯೆಯ ವಿಷಯದಲ್ಲಿ ಅರ್ಜುನನಿಗೂ ಮತ್ತು ನನಗೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಲು ಬಯಸುತ್ತೇನೆ. ನೀವು ಅದನ್ನು ಯಥಾರ್ಥವಾಗಿ ಹೇಳಬೇಕು.

ದ್ರೋಣಃ

ಸಮಮಾಚಾರ್ಯಕಂ ತಾತ ತವ ಚೈವಾರ್ಜುನಸ್ಯ ಚ ।
ಯೋಗಾದ್ ದುಃಖೋಚಿತತ್ವಾಚ್ಚ ತಸ್ಮಾತ್ ತ್ವದಧಿಕೋಽರ್ಜುನಃ ॥೨೭॥

ದ್ರೋಣ- ಪ್ರೀತಿಪಾತ್ರನೇ, ನಿನಗೂ ಮತ್ತು ಅರ್ಜುನನಿಗೂ ನಾನು ಸಮಾನವಾಗಿ ಗುರುವಾಗಿದ್ದೇನೆ. ಹಗಲೂ-ರಾತ್ರಿಯೂ ಅಭ್ಯಾಸವನ್ನು ಮಾಡುವುದರಿಂದಲೂ ಮತ್ತು ದುಃಖವನ್ನು ಸಹಿಸುವ ಸ್ವಭಾವವುಳ್ಳವನಾದ್ದರಿಂದಲೂ ಅರ್ಜುನನು ನಿನಗಿಂತ ಶ್ರೇಷ್ಠನಾದವನು.

ನ ತು ತೇ ಯುಧಿ ಸಂತ್ರಾಸಃ ಪಾರ್ಥಾತ್ ಕಾರ್ಯಃ ಕಥಂಚನ ।
ಅಹಂ ಹಿ ರಕ್ಷಿತಾ ತಾತ ಭಯಾತ್ ತ್ವಾಂ ಶ್ವೋ ನ ಸಂಶಯಃ ॥೨೮॥

ನೀನು ಅರ್ಜುನನಿಗೆ ಹೆದರಿ ಯುದ್ಧದಲ್ಲಿ ಭಯಪಡುವ ಅವಶ್ಯಕತೆ ಇಲ್ಲ. ಏಕೆಂದರೆ ಎಲೈ ಪ್ರೀತಿಪಾತ್ರನೇ, ನಾಳೆಯ ದಿವಸ ನಾನು ನಿನ್ನನ್ನು ಭಯದಿಂದ ರಕ್ಷಿಸುವೆನು. ಇದರಲ್ಲಿ ಸಂಶಯವಿಲ್ಲ.

ನ ಹಿ ಮದ್ಬಾಣಗುಪ್ತಸ್ಯ ಪ್ರಭವಂತ್ಯಮರಾ ಅಪಿ ।
ವ್ಯೂಹಿಷ್ಯಾಮಿ ಚ ತಂ ವ್ಯೂಹಂ ಯಂ ಪಾರ್ಥೋ ನ ತರಿಷ್ಯತಿ ॥೨೯॥

ನನ್ನ ಬಾಣಗಳಿಂದ ರಕ್ಷಿತನಾದವನ ಮೇಲೆ ದೇವತೆಗಳೂ ಕೈಮಾಡಲಾರರು. ಅರ್ಜುನನು ದಾಟಲು ಸಾಧ್ಯವಾಗದಂತೆ ನಾಳೆ ವ್ಯೂಹವನ್ನು ರಚಿಸುವೆನು.

ತಸ್ಮಾದ್ ಯುದ್ಧಸ್ವ ಮಾ ಭೈಸ್ತ್ವಂ ಸ್ವಧರ್ಮಮನುಪಾಲಯ ।
ಪಿತೃಪೈತಾಮಹಂ ಮಾರ್ಗಮನುಯಾಹಿ ಮಹಾರಥ ॥ ೩೦ ॥

ಆದ್ದರಿಂದ ಎಲೈ ಮಹಾರಥನೇ, ಯುದ್ಧವನ್ನು ಮಾಡು, ಹೆದರಬೇಡ. ನಿನ್ನ ಧರ್ಮವನ್ನು ಪಾಲಿಸು. ಪಿತೃ-ಪಿತಾಮಹರ ಮಾರ್ಗದಲ್ಲಿ ನಡೆಯುವವನಾಗು.

ಅಧೀತಾ ವಿಧಿವದ್ ವೇದಾ ಅಗ್ನಯಃ ಸುಹುತಾಸ್ತ್ವಯಾ ।
ಇಷ್ಟಂ ಚ ಬಹುಭಿರ್ಯಜ್ಞೈರ್ನ ತೇ ಮೃತ್ಯುಭವಂ ಭಯಮ್ ॥ ೩೧ ॥

ಶಾಸ್ತ್ರೋಕ್ತ ರೀತಿಯಲ್ಲಿ ವೇದಗಳನ್ನು ಅಧ್ಯಯನ ಮಾಡಿದ್ದೀಯೆ. ಅಗ್ನಿಗಳಲ್ಲಿ ಚೆನ್ನಾಗಿ ಹೋಮವನ್ನು ಮಾಡಿದ್ದೀಯೆ. ಅನೇಕ ವಿಧವಾದ ಯಜ್ಞಗಳನ್ನು ಮಾಡಿದ್ದೀಯೆ. ನೀನು ಮರಣಕ್ಕೆ ಹೆದರಬೇಕಾದ ಕಾರಣವಿಲ್ಲ.

ದುರ್ಲಭಂ ಮಾನುಷೈರ್ಮಂದೈರ್ಮಹಾಭಾಗ್ಯಮವಾಪ್ಯ ತು ।
ಭುಜವೀರ್ಯಾರ್ಜಿತಾಲ್ಲೋಕಾನ್ ದಿವ್ಯಾನ್ ಪ್ರಾಪ್ಸ್ಯಸುತ್ತಮಾನ್ ॥

ಮನುಷ್ಯರಿಗೆ ದುರ್ಲಭವಾದ ಮಹಾಭಾಗ್ಯವನ್ನು ಹೊಂದಿ, ನಿನ್ನ ಭುಜಬಲದಿಂದ ಗಳಿಸಿದ ದಿವ್ಯವಾದ ಲೋಕಗಳನ್ನು ಹೊಂದುವಿ.

ಕುರವಃ ಪಾಂಡವಾಶ್ಚೈವ ವೃಷ್ಣಯೋಽನ್ಯೇ ಚ ಮಾನವಾಃ ।
ಅಹಂ ಚ ಸಹ ಪುತ್ರೇಣ ಅಧ್ರುವಾ ಇತಿ ಚಿಂತ್ಯತಾಮ್ ॥ ೩೩ ॥

ಕುರುಗಳೂ, ಪಾಂಡವರೂ, ವೃಷ್ಣಿಗಳೂ, ಉಳಿದ ಮನುಷ್ಯರೂ, ನಾನೂ, ನನ್ನ ಪುತ್ರನೂ ಎಲ್ಲರೂ ನಶ್ವರರೆಂದು ತಿಳಿಯುವವನಾಗು.

ಪರ್ಯಾಯೇಣ ವಯಂ ಸರ್ವೇ ಕಾಲೇನ ಬಲಿನಾ ಹತಾಃ ।
ಪರಲೋಕಂ ಗಮಿಷ್ಯಾಮಃ ಸ್ವೈಃ ಸ್ವೈಃ ಕರ್ಮಭಿರಸ್ತಿತಾಃ ॥ ೩೪ ॥

ಬಲಿಷ್ಠವಾದ ಮೃತ್ಯುವು ನಮ್ಮೆಲ್ಲರನ್ನೂ ಪರ್ಯಾಯ ಕ್ರಮದಿಂದ ಕೊಲ್ಲುವುದು. ನಮ್ಮ ನಮ್ಮ ಕರ್ಮಗಳ ಜೊತೆಯಲ್ಲಿ ನಾವು ಪರಲೋಕಕ್ಕೆ ಹೋಗುವೆವು.

ತಪಸ್ತಪ್ತ್ವಾ ತು ಯಾಲ್ಲೋಕಾನ್ ಪ್ರಾಪ್ನುವಂತಿ ಯಶಸ್ವಿನಃ ।
ಕ್ಷತ್ರಧರ್ಮಾಶ್ರಿತಾ ವೀರಾಃ ಕ್ಷತ್ರಿಯಾಃ ಪ್ರಾಪ್ನುವಂತಿ ತಾನ್ ॥ ೩೫ ॥

ಕೀರ್ತಿವಂತರಾದವರು ತಪಸ್ಸನ್ನು ಮಾಡಿ ಯಾವ ಲೋಕಗಳನ್ನು ಹೊಂದುತ್ತಾರೆಯೋ, ಕ್ಷತ್ರಿಯ ಧರ್ಮವನ್ನು ಪಾಲಿಸುವ ವೀರರಾದ ಕ್ಷತ್ರಿಯರು ಆ ಲೋಕಗಳನ್ನು ಹೊಂದುತ್ತಾರೆ.

ಸಂಜಯಃ

ಏವಮಾಶ್ವಾಸಿತೋ ರಾಜಾ ಭಾರದ್ವಾಜೇನ ಸೈಂಧವಃ ।
ವ್ಯಪಾನುದದ್ ಭಯಂ ಪಾರ್ಥಾದ್ ಯುದ್ಧಾಯ ಚ ಮನೋ ದಧೇ ॥

ಸಂಜಯ– ಹೀಗೆ ದ್ರೋಣರಿಂದ ಆಶ್ವಾಸನೆಗೊಳಿಸಲ್ಪಟ್ಟ ಸೈಂಧವನು ತನ್ನ ಅರ್ಜುನನ ಭಯವನ್ನು ಕಳೆದುಕೊಂಡು ಯುದ್ಧವನ್ನು ಮಾಡುವುದಾಗಿ ನಿಶ್ಚಯಿಸಿದನು.

ತತಃ ಪ್ರಹರ್ಷಃ ಸೈನ್ಯಾನಾಂ ತಸ್ಯ ಚಾಸೀದ್ ವಿಶಾಂಪತೇ ।
ವಾದಿತ್ರಾಣಾಂ ಧ್ವನಿಶ್ಚೋಗ್ರಃ ಸಿಂಹನಾದರವೈಃ ಸಹ ॥ ೩೭ ॥

ಎಲೈ ರಾಜನೇ, ಅನಂತರ ಅವನ ಸೈನ್ಯಕ್ಕೆ ಬಹಳ ಹರ್ಷವುಂಟಾಯಿತು. ವೀರರ ಸಿಂಹನಾದಗಳಿಂದ ಸಹಿತವಾದ ವಾದ್ಯಗಳ ಶ್ರೇಷ್ಠವಾದ ಧ್ವನಿಯು ಉಂಟಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತತಿತಮೋऽಧ್ಯಾಯಃ ॥

॥ ಪ್ರತಿಜ್ಞಾಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

ಕೃಷ್ಣನಿಂದ ಅರ್ಜುನನಿಗೆ, ಜಯದ್ರಥನಿಗೆ ದ್ರೋಣಾದಿಗಳ ಆಶ್ವಾಸನೆಯ ಕಥನ ಮತ್ತು ಅರ್ಜುನನಿಂದ ತನ್ನ ಸಾಮರ್ಥ್ಯದ ಕಥನ.

ಸಂಜಯಃ

ಪ್ರತಿಜ್ಞಾತೇ ತು ಪಾರ್ಥೇನ ಸಿಂಧುರಾಜವಧೇ ತದಾ ।
ವಾಸುದೇವೋ ಮಹಾಬುದ್ಧಿರ್ದನಂಜಯಮಭಾಷತ ॥ ೧ ॥

ಸಂಜಯ– ಅರ್ಜುನನು ಸಿಂಧುರಾಜನ ವಧೆಯನ್ನು ಪ್ರತಿಜ್ಞೆ ಮಾಡುತ್ತಿರಲು ಮಹಾಬುದ್ಧಿವಂತನಾದ ಕೃಷ್ಣನು ಅರ್ಜುನನನ್ನು ಕುರಿತು ಹೇಳಿದನು.

ಭ್ರಾತೄಣಾಂ ಪಾರ್ಥಿವಾನಾಂ ಚ ತ್ವಯಾ ಮಧ್ಯೇ ಪ್ರತಿಶ್ರುತಮ್ ।
ಸೈಂಧವಂ ಶ್ವೋऽಸ್ಮಿ ಹಂತೇತಿ ತತ್ ಸಾಹಸಮಿದಂ ಕೃತಮ್ ॥ ೨ ॥

ಸಹೋದರರ ಮತ್ತು ರಾಜರ ಮಧ್ಯದಲ್ಲಿ ನೀನು ನಾಳೆಯ ದಿವಸ ಸೈಂಧವನನ್ನು ಕೊಲ್ಲುವೆನು ಎಂದು ಪ್ರತಿಜ್ಞೆಯನ್ನು ಮಾಡಿದ್ದೀಯೆ. ಇದು ಸಾಹಸದ ಕೆಲಸ.

ಅಸಮ್ಮಂತ್ರ್ಯ ಮಯಾ ಸಾರ್ಧಮತಿಭಾರೋಽಯಮುದ್ಯತಃ ।
ಕಥಂ ಸರ್ವಸ್ಯ ಲೋಕಸ್ಯ ನಾಪಹಾಸ್ಯಾ ಭವೇಮಹಿ ॥ ೩ ॥

ನನ್ನ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡದೆ ನೀನು ದೊಡ್ಡ ಭಾರವನ್ನು ಹೊರಲು ನಿರ್ಧರಿಸಿದ್ದೀಯೆ. ನಾವು ನಾಳೆ ಎಲ್ಲ ಲೋಕಕ್ಕೂ ಹೇಗೆ ಹಾಸ್ಯಾಸ್ಪದರಾಗಲಾರೆವು?

ಧಾರ್ತರಾಷ್ಟ್ರಸ್ಯ ಶಿಬಿರೇ ಯೇ ತು ಪ್ರಣಿಹಿತಾಶ್ಚರಾಃ ।
ತ ಇಮೇ ಸಮನುಪ್ರಾಪ್ತಾಃ ಪ್ರವೃತ್ತಿಂ ಕಥಯಂತಿ ನಃ ॥ ೪ ॥

ದುರ್ಯೋಧನನ ಶಿಬಿರಕ್ಕೆ ಹೋಗಿದ್ದ ನಮ್ಮ ಈ ಗೂಢಚಾರರು ಹಿಂದಿರುಗಿ ಬಂದು ಅಲ್ಲಿನಡೆದ ವಾರ್ತೆಯನ್ನು ಹೇಳುತ್ತಿದ್ದಾರೆ.

ಸಂಶ್ರುತೇ ಸಿಂಧುರಾಜಸ್ಯ ವಧೇ ಗಾಂಡೀವಧನ್ವನಾ ।
ಸಿಂಹನಾದಃ ಸವಾದಿತ್ರಃ ಸುಮಹಾನಿಹ ತೈಃ ಶ್ರುತಃ ॥ ೫ ॥

ಅರ್ಜುನನು ಸೈಂಧವನ ವಧೆಯನ್ನು ಪ್ರತಿಜ್ಞೆ ಮಾಡಿದಾಗ ಇಲ್ಲಿ ಉಂಟಾದ ದೊಡ್ಡ ಸಿಂಹನಾದವನ್ನು ಮತ್ತು ವಾದ್ಯಘೋಷವನ್ನು ಅವರು ಕೇಳಿದ್ದಾರೆ.

ತೇನ ಶಬ್ದೇನ ವಿತ್ರಸ್ತಾ ಧಾರ್ತರಾಷ್ಟ್ರಾಃ ಸಬಾಂಧವಾಃ ।
ನಾಕಸ್ಮಾತ್ ಸಿಂಹನಾದೋಽಯಮಿತಿ ಸರ್ವೇ ವ್ಯವಸ್ಥಿತಾಃ ॥ ೬ ॥

ಈ ಸಿಂಹನಾದವು ನಿಷ್ಕಾರಣವಾಗಿರಲು ಸಾಧ್ಯವಿಲ್ಲ ಎಂದು ನಿಶ್ಚಯಿಸಿ, ಆ ಶಬ್ದದಿಂದ ಬಂಧುಗಳಿಂದ ಸಹಿತರಾದ ದುರ್ಯೋಧನಾದಿಗಳು ಹೆದರಿದ್ದಾರೆ.

ಸುಮಹಾಂಶ್ಚಾತ್ರ ಸಂಬಾಧಃ ಕೌರವಾಣಾಂ ಮಹಾಭುಜ ।
ಆಸೀನ್ನರಾಶ್ವಪತ್ತೀನಾಂ ರಥಘೋಷಶ್ಚ ಭೈರವಃ ॥ ೭ ॥

ಎಲೈ ಮಹಾಭುಜನೇ, ಆಗ ಕೌರವ ರಥಾಶ್ವ-ಗಜಗಳ ಭಯಂಕರವಾದ ದೊಡ್ಡ ಸಮಾಗಮವುಂಟಾಯಿತು. ರಥಘೋಷವೂ ಉಂಟಾಯಿತು.

ಅಭಿಮನ್ಯೋರ್ವಧಂ ಶ್ರುತ್ವಾ ಧ್ರುವಮಾರ್ತೋ ಧನಂಜಯಃ ।
ರಾತ್ರೌ ನಿರ್ಯಾಸ್ಯತಿ ಕ್ರೋಧಾದಿತಿ ಸರ್ವೇ ವ್ಯವಸ್ಥಿತಾಃ ॥ ೮ ॥

ಅಭಿಮನ್ಯುವಿನ ವಧೆಯನ್ನು ಕೇಳಿ ಅರ್ಜುನನು ಆರ್ತನಾಗಿ ಕ್ರೋಧದಿಂದ ರಾತ್ರಿಯೇ ಇಲ್ಲಿಗೆ ಹೊರಟು ಬರುವನು ಎಂದು ಅವರೆಲ್ಲರೂ ನಿಶ್ಚಯಿಸಿದರು.

ತೈಶ್ಚಾರೇಭ್ಯ ಇಯಂ ಕೃತ್ಸ್ನಾ ಶ್ರುತಾ ಸತ್ಯವತಸ್ತವ ।
ತೈರ್ಯತದ್ಭಿರಿಯಂ ಸತ್ಯಾ ನಾಸತ್ಯಾ ವದತಸ್ತವ ।
ಪ್ರತಿಜ್ಞಾ ಸಿಂಧುರಾಜಸ್ಯ ವಧೇ ರಾಜೇವಲೋಚನ ॥ ೯ ॥

ಎಲೈ ರಾಜೀವಲೋಚನನೇ, ಅವರೂ ಸಹ ತಮ್ಮ ಚಾರರಿಂದ ನಮ್ಮ ಶಿಬಿರದಲ್ಲಿ ನಡೆದ ಎಲ್ಲವನ್ನೂ ಸತ್ಯವಂತನಾದ ನೀನು ಭೀಮಾದಿಗಳ ಸಹಾಯದಿಂದ ಮಾಡಲು ಹೊರಟಿರುವ, ಎಂದೂ ಅಸತ್ಯವಾಗದ ನಿನ್ನ ಸತ್ಯಪ್ರತಿಜ್ಞೆಯನ್ನೂ ಅವರು ತಿಳಿದರು.

ತತೋ ವಿಮನಸಃ ಸರ್ವೇ ತ್ರಸ್ತಾಃ ಕ್ಷುಭಿತಮಾನಸಾಃ ।
ಆಸನ್ ಸುಯೋಧನಾಮಾತ್ಯಾಃ ಸ ಚ ರಾಜಾ ಜಯದ್ರಥಃ ॥ ೧೦ ॥

ಆಗ ದುರ್ಯೋಧನನ ಅಮಾತ್ಯರು ಮತ್ತು ರಾಜನಾದ ಆ ಸೈಂಧವನು ಮನಸ್ಸಿನಲ್ಲಿ ಕ್ಷೋಭೆಗೊಂಡು, ಹೆದರಿ ಉತ್ಸಾಹರಹಿತರಾದರು.

ಅಥೋತ್ಥಾಯ ಸಹಾಮಾತ್ಯೈಃ ದೀನಃ ಸ್ವಶಿಬಿರಾತ್ ಕಿಲ ।
ಆಯಾತ್ ಸೌವೀರಸಿಂಧೂನಾಮೀಶ್ವರೋ ಭೃಶದುಃಖಿತಃ ॥ ೧೧ ॥

ಆನಂತರ ಸಿಂಧುಸೌವೀರರಾಜನಾದ ಜಯದ್ರಥನು ಬಹಳ ದುಃಖಿಗೊಂಡು ತನ್ನ ಅಮಾತ್ಯರ ಜೊತೆಯಲ್ಲಿ ದೀನನಾಗಿ ಎದ್ದು ತನ್ನ ಶಿಬಿರದಿಂದ ಹೊರಟು ಬಂದನು.

ಸಮ್ಮಂತ್ರ್ಯ ಕಾಲೇ ಸಾಮಾತ್ಯಃ ಸರ್ವಾನ್ಸ್ವಶ್ರೇಯಸೀಂ ಕ್ರಿಯಾಮ್ ।
ಸುಯೋಧನಮಿದಂ ವಾಕ್ಯಮುಕ್ತವಾನ್ ರಾಜಸಂಸದಿ ॥ ೧೨ ॥

ಅವನು ತನ್ನ ಅಮಾತ್ಯರ ಜೊತೆಯಲ್ಲಿ ತನಗೆ ಕ್ಷೇಮವನ್ನುಂಟು ಮಾಡುವ ಮಾರ್ಗವನ್ನು ಮಂತ್ರಾಲೋಚನೆ ಮಾಡಿ ರಾಜರ ಸಮುದಾಯದಲ್ಲಿ ಸುಯೋಧನನನ್ನು ಕುರಿತು ಈ ಮಾತನ್ನು ಆಡಿದನು.

ಮಾಮಸೌ ಪುತ್ರಹಂತೇತಿ ಶ್ವೋಽಭಿಯಾತಾ ಧನಂಜಯಃ ।
ಪ್ರತಿಜ್ಞಾತೋ ಹಿ ಸೇನಾಯಾ ಮಧ್ಯೇ ತೇನ ವಧೋ ಮಮ ॥ ೧೩ ॥

ನಾನು ಅಭಿಮನ್ಯುವನ್ನು ಕೊಂದಿದ್ದೇನೆಂಬ ಕಾರಣದಿಂದ ನಾಳೆ ಧನಂಜಯನು ನನ್ನ ಮೇಲೆ ಎರಗಲಿದ್ದಾನೆ. ಅವನ ಸೈನ್ಯದ ಮಧ್ಯದಲ್ಲಿ ನನ್ನ ವಧೆಯನ್ನು ಪ್ರತಿಜ್ಞೆ ಮಾಡಿದ್ದಾನೆ.

ತನ್ನ ದೇವಾ ನ ಗಂಧರ್ವಾ ನಾಸುರೋರಗರಾಕ್ಷಸಾಃ ।
ಉತ್ಸಹಂತೇऽನ್ಯಥಾಕರ್ತುಂ ಯದುಕ್ತಂ ಸವ್ಯಸಾಚಿನಾ ॥ ೧೪ ॥

ಅರ್ಜುನನು ಮಾಡಿದ ಪ್ರತಿಜ್ಞೆಯನ್ನು ವ್ಯತ್ಯಾಸ ಮಾಡಲು ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರ-ಉರಗ-ರಾಕ್ಷಸರಾಗಲಿ ಪ್ರಯತ್ನಪಡಲಾರರು.

ತೇ ಮಾಂ ರಕ್ಷತ ಸಂಗ್ರಾಮೇ ಮೂರ್ಧ್ನಿ ಮಾ ವೋ ಧನಂಜಯಃ ।
ಪಾದಂ ಕೃತ್ವಾऽऽಪ್ನುಯಾಲ್ಲಕ್ಷ್ಮೀಂ ಯುಕ್ತಂ ಪ್ರತಿವಿಧೀಯತಾಮ್ ॥೧೫॥

ಅಂತಹ ನೀವು ಯುದ್ಧದಲ್ಲಿ ನನ್ನನ್ನು ರಕ್ಷಿಸಿ. ನಿಮ್ಮ ಶಿರಸ್ಸಿನ ಮೇಲೆ ತನ್ನ ಕಾಲನ್ನು ಊರಿ ಅರ್ಜುನನು ವಿಜಯಲಕ್ಷ್ಮಿಯನ್ನು ಹೊಂದುವುದು ಬೇಡ. ಈ ವಿಷಯದಲ್ಲಿ ಯೋಗ್ಯವಾದ ಕಾರ್ಯವನ್ನು ಮಾಡುವವರಾಗಿ.

ಅಥ ರಕ್ಷಾ ನ ಮೇ ಸಮ್ಯಕ್ ಕ್ರಿಯತೇ ಕುರುನಂದನ ।
ಅನುಜಾನೀಹಿ ಮಾಂ ರಾಜನ್ ಯಾಸ್ಯಾಮಿ ಸ್ವಗೃಹಾನಹಮ್ ॥ ೧೬ ॥

ಅಥವಾ ಕುರುನಂದನನಾದ ದುರ್ಯೋಧನನೇ, ಸರಿಯಾಗಿ ನನ್ನ ರಕ್ಷಣೆಯನ್ನು ಮಾಡಲು ಸಾಧ್ಯವಾಗದಿದ್ದರೆ ನನಗೆ ಅನುಮತಿಯನ್ನಾದರೂ ಕೊಡು. ಎಲೈ ರಾಜನೇ, ನಾನು ನನ್ನ ಮನೆಗೆ ಹಿಂದಿರುಗುವೆನು.

ಶ್ರೀಭಗವಾನ್

ಅವಾಕ್ಕಿರಾಸ್ತೇ ವ್ಯವಮುಕ್ತೋ ವಿಮನಾಃ ಸ ಸುಯೋಧನಃ ।
ಶ್ರುತ್ವಾಭಿಶಪ್ತವಂತಂ ತಂ ಧ್ಯಾನಮೇವಾನ್ವಪದ್ಯತ ॥ ೧೭ ॥

ಶ್ರೀಭಗವಾನ್– ಹೀಗೆ ಹೇಳಲ್ಪಟ್ಟ ಸುಯೋಧನನು ತಲೆಯನ್ನು ತಗ್ಗಿಸಿ, ಉತ್ಸಾಹ ಹೀನನಾಗಿ, ಶಾಪಕ್ಕೆ ಒಳಗಾದ (ಪ್ರತಿಜ್ಞೆಗೆ ವಿಷಯನಾದ) ಸೈಂಧವನನ್ನು ತಿಳಿದು ಯೋಚನಾ ಪರವಶನಾದನು.

ತಮಾರ್ತಮಭಿಸಂಪ್ರೇಕ್ಷ್ಯ ರಾಜಾ ಸ ಕಿಲ ಸೈಂಧವಃ ।
ಸಾಮ್ನೈವಾತ್ಮಹಿತಂ ವಾಕ್ಯಂ ಸಾಕ್ಷೇಪಮಿದಮುಕ್ತವಾನ್ ॥ ೧೮ ॥

ದುರ್ಯೋಧನನು ಆರ್ತನಾಗಿರುವುದನ್ನು ಗಮನಿಸಿ ರಾಜನಾದ ಸೈಂಧವನು ಮೃದುವಾಗಿಯೇ ಆತ್ಮಹಿತವನ್ನು ಸಾಧಿಸುವ ಈ ಆಕ್ಷೇಪಕರವಾದ ಮಾತುಗಳನ್ನು ಆಡಿದನು.

ನಾಹಂ ಪಶ್ಯಾಮಿ ಭವತಾಂ ತಥಾವೀರ್ಯಂ ಧನುರ್ಧರಮ್ ।
ಯೋಽರ್ಜುನಸ್ಯಾಸ್ತ್ರಮಸ್ತ್ರೇಣ ಪ್ರತಿಹನ್ಯಾನ್ಮಹಾಮೃಧೇ ॥ ೧೯ ॥

ದೊಡ್ಡ ಯುದ್ಧದಲ್ಲಿ ಅರ್ಜುನನ ಅಸ್ತ್ರವನ್ನು ತನ್ನ ಅಸ್ತ್ರದಿಂದ ನಿವಾರಿಸುವಂತಹ ಅರ್ಜುನನಂತಹ ಪರಾಕ್ರಮವುಳ್ಳ ಯಾವ ಧನುರ್ಧಾರಿಯನ್ನೂ ನಾನು ನಿಮ್ಮಲ್ಲಿ ಕಾಣುತ್ತಿಲ್ಲ.

ವಾಸುದೇವಸಹಾಯಸ್ಯ ಗಾಂಡೀವಂ ಧುನ್ವತೋ ರಣೇ ।
ಅರ್ಜುನಸ್ಯಾಗ್ರತೋ ಯೋದ್ಧುಂ ಬಿಭಿಯಾದಪಿ ದೇವರಾಟ್ ॥ ೨೦ ॥

ವಾಸುದೇವನ ಸಹಾಯವನ್ನು ಹೊಂದಿ ಯುದ್ಧದಲ್ಲಿ ಗಾಂಡೀವ ಧನುಸ್ಸನ್ನು ತೂಗಾಡಿಸುವ ಅರ್ಜುನನ ಎದುರಿಗೆ ಯುದ್ಧವನ್ನು ಮಾಡಲು ದೇವೇಂದ್ರನೂ ಸಹ ಹೆದರಿಯಾನು!

ಮಹೇಶ್ವರೋಽಪಿ ಪಾರ್ಥೇನ ಶ್ರೂಯತೇ ಯುಧಿ ತೋಷಿತಃ ।
ಪದಾತಿನಾ ಮಹಾವೀರ್ಯೋ ಗಿರೌ ಹೈಮವತೇ ತದಾ ॥ ೨೧ ॥

ಅರ್ಜುನನು ಹಿಮಾಲಯಪರ್ವತದಲ್ಲಿ ಬರಿಗಾಲಿನಲ್ಲಿ ನಿಂತು ಮಹಾಪರಾಕ್ರಮಿಯಾದ ರುದ್ರನನ್ನೂ ಯುದ್ಧದಲ್ಲಿ ಸಂತೋಷಪಡಿಸಿದನೆಂದು ಕೇಳಿದ್ದೇನೆ.

ದಾನವಾನಾಂ ಸಹಸ್ರಾಣಿ ಹಿರಣ್ಯಪುರವಾಸಿನಾಮ್ ।
ಜಘಾನೈಕರಥೇನೈವ ದೇವರಾಜಪ್ರಚೋದಿತಃ ॥ ೨೨ ॥

ಇಂದ್ರನಿಂದ ಪ್ರೇರಿತನಾಗಿ ಅರ್ಜುನನು ಒಂದು ರಥದಲ್ಲಿ ಹೋಗಿ ಹಿರಣ್ಯಪುರ ವಾಸಿಗಳಾದ ಸಹಸ್ರಾರು ದಾನವರನ್ನು ಸಂಹರಿಸಿದನು.

ಸಮಾಯುಕ್ತೋ ಹಿ ಕೌಂತೇಯೋ ವಾಸುದೇವೇನ ಧೀಮತಾ ।
ಸಾಮರಾನಪಿ ಲೋಕಾಂಸ್ತ್ರೀನ್ ನಿಹನ್ಯಾದಿತಿ ಮೇ ಮತಿಃ ॥ ೨೩ ॥

ಕುಂತೀಪುತ್ರನಾದ ಅರ್ಜುನನು ಮೇಧಾವಿಯಾದ ಕೃಷ್ಣನ ಜೊತೆಯಲ್ಲಿ ಸಮಾಗಮವನ್ನು ಹೊಂದಿದರೆ ದೇವತೆಗಳಿಂದ ಸಹಿತವಾದ ಮೂರುಲೋಕಗಳನ್ನೂ ಕೊಂದಾನು ಎಂದು ನನ್ನ ಅಭಿಪ್ರಾಯ.

ಸೋಽಹಮಿಚ್ಛಾಮ್ಯನುಜ್ಞಾತುಂ ರಕ್ಷಿತುಂ ವಾ ಮಹಾಭುಜ ।
ದ್ರೋಣೇನ ಸಹಪುತ್ರೇಣ ವೀರೇಣ ಯದಿ ಮನ್ಯಸೇ ॥ ೨೪ ॥

ಎಲೈ ಮಹಾಭುಜನೇ, ಆದ್ದರಿಂದ ನಾನು ನಿನ್ನ ಒಪ್ಪಿಗೆ ಇದ್ದರೆ ಪುತ್ರಸಹಿತರಾದ ವೀರರಾದ ದ್ರೋಣರಿಂದ ರಕ್ಷಿಸಲ್ಪಡಲು ಅಥವಾ ಮನೆಗೆ ಹೋಗಲು ಅನುಮತಿಯನ್ನು ಬಯಸುತ್ತಿದ್ದೇನೆ.

ಶ್ರೀಭಗವಾನ್

ಸ ರಾಜ್ಞಾ ಸ್ವಯಮಾಚಾರ್ಯೋ ಭೃಶಮಾಕ್ರಂದಿತೋಽರ್ಜುನ ।
ಸಂವಿಧಾನಂ ಚ ವಿಹಿತಂ ಮಂತ್ರಯಿತ್ವಾ ನರರ್ಷಭೈಃ ॥ ೨೫ ॥

ಶ್ರೀಭಗವಾನ್– ಎಲೈ ಅರ್ಜುನನೇ, ಹೀಗೆ ದ್ರೋಣರ ಎದುರಿನಲ್ಲಿ ರಾಜನಾದ ಸೈಂಧವನು ಸ್ವತಃ ಗೋಳಾಡಿದುದನ್ನು ನೋಡಿ ದ್ರೋಣರು ರಾಜರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಅದಕ್ಕೆ ಪ್ರತಿಕ್ರಿಯೆಯನ್ನು ವಿಧಾನ ಮಾಡಿದರು.

ಕರ್ಣೋ ಭೂರಿಶ್ರವಾ ದ್ರೌಣಿರ್ವೃಷಸೇನಶ್ಚ ದುರ್ಜಯಃ ।
ಕೃಪಶ್ಚ ಮದ್ರರಾಜಶ್ಚ ಷಡೇತೇಽಸ್ಯ ಪುರೋಗಮಾಃ ॥ ೨೬ ॥

ಕರ್ಣ, ಭೂರಿಶ್ರವ, ಅಶ್ವತ್ಥಾಮರು, ದುರ್ಜಯನಾದ ವೃಷಸೇನ, ಕೃಪರು ಮತ್ತು ಮದ್ರರಾಜನಾದ ಶಲ್ಯ - ಈ ಆರು ಮಹಾರಥರು ಸೈಂಧವನ ಮುಂದಿರುತ್ತಾರೆ.

ಎಲೈ ಜನಾರ್ದನನೇ, ಸಾಧ್ಯರು, ರುದ್ರರು, ಅಶ್ವಿನೀದೇವತೆಗಳಿಂದ ಸಹಿತರಾದ ವಸುಗಳು, ಮರುತ್ತುಗಳು, ಮಹೇಂದ್ರನಿಂದ ಸಹಿತರಾದ ಭೂತಗಳು, ವಿಶ್ವೇದೇವತೆಗಳು, ಅಸುರರು, ಪಿತೃಗಳು, ಸಿದ್ಧ-ಗಂಧರ್ವರು, ಸುಪರ್ಣಾದಿ ಪಕ್ಷಿಗಳು, ಸಾಗರಗಳು ಮತ್ತು ಪರ್ವತಗಳು, ಅಂತರಿಕ್ಷ-ಆಕಾಶ-ಪೃಥಿವಿಗಳು, ದಿಕ್ಕುಗಳು ಮತ್ತು ದಿಗೀಶ್ವರರು, ಗ್ರಾಮದ ಮತ್ತು ಅರಣ್ಯದ ಭೂತಗಳು, ಸ್ಥಾವರ-ಚಂಗಮ ಪ್ರಾಣಿಗಳು ಸೈಂಧವನ ರಕ್ಷಣೆಗಾಗಿ ಬಂದರೂ ಈ ನನ್ನ ಹರಿತವಾದ ಬಾಣಗಳಿಂದ ಯುದ್ಧದಲ್ಲಿ ಸೈಂಧವನು ಹತನಾಗುವುದನ್ನು ನೀನು ನೋಡುವಿ. ಕೃಷ್ಣನೇ, ಧನುಸ್ಸನ್ನು ಹಿಡಿದು ಸತ್ಯ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ.

ಯಸ್ಯ ಗೋಪ್ತಾ ಮಹೇಷ್ವಾಸೋ ದ್ರೋಣಃ ಪಾಪಸ್ಯ ದುರ್ಮತೇಃ ।
ತಮೇವ ಪ್ರಥಮಂ ದ್ರೋಣಮಭಿಯಾಸ್ಯಾಮಿ ಸಂಯುಗೇ ॥ ೩೯ ॥

ಪಾಪಿಯೂ, ದುರ್ಮತಿಯೂ ಆದ ಅವನಿಗೆ ಮಹಾಧನುರ್ಧಾರಿಯಾದ ದ್ರೋಣರು ರಕ್ಷಕರಾದರೆ ಮೊದಲು ಯುದ್ಧದಲ್ಲಿ ಆ ದ್ರೋಣರ ಮೇಲೆಯೇ ಎರಗುವೆನು.

ತಸ್ಮಿನ್ ಯುದ್ಧಮಿದಂ ಬದ್ಧಂ ಮನ್ಯತೇ ಯತ್ ಸುಯೋಧನಃ ।
ತಸ್ಯಾತ್ ತಸ್ಯೈವ ಸೇನಾಗ್ರಂ ಭಿತ್ತ್ವಾ ಯಾಸ್ಯಾಮಿ ಸೈಂಧವಮ್ ॥೪೦॥

ಸುಯೋಧನನು ಈ ಯುದ್ಧವು ದ್ರೋಣರಲ್ಲಿಯೇ ಕೇಂದ್ರೀಕೃತವಾಗಿದೆ ಎಂದು ತಿಳಿಯುವುದರಿಂದ ದ್ರೋಣರ ಸೇನೆಯನ್ನೇ ಭೇದಿಸಿ ನಾನು ಸೈಂಧವನ ಬಳಿಗೆ ಹೋಗುವೆನು.

ದ್ರಷ್ಟಾ ಶ್ವೋಽಸಿ ಮಹೇಷ್ವಾಸಾನ್ ರಥಿನಸ್ತಿಗ್ಮಚೇತಸಃ ।
ಮಯಾ ನಿಪಾತಿತಾನ್ ಸಂಖೇ ವಜ್ರೇಣೇವ ಗಿರಿವ್ರಜಾನ್ ॥ ೪೧ ॥

ಮಹಾಧನುರ್ಧಾರಿಗಳೂ, ತೀಕ್ಷ್ಣಪರಾಕ್ರಮವುಳ್ಳ ರಥರೂ ನಾಳೆಯ ದಿವಸ ಯುದ್ಧದಲ್ಲಿ ವಜ್ರಾಯುಧದಿಂದ ಪರ್ವತಸಮೂಹಗಳು ಬಿದ್ದಂತೆ ನನ್ನಿಂದ ಬೀಳಿಸಲ್ಪಡುವುದನ್ನು ನೀನು ನಾಳೆ ನೋಡುವಿ.

ನರನಾಗಾಶ್ವದೇಹೇಭ್ಯೋ ವಿಸ್ರವಿಷ್ಯತಿ ಶೋಣಿತಮ್ ।
ಪತದ್ಭ್ಯಃ ಪತಿತೇಭ್ಯಶ್ಚ ಮಯಾ ನ್ಯಸ್ತೈಃ ಶಿತೈಃ ಶರೈಃ ॥ ೪೨ ॥

ನಾನು ಪ್ರಯೋಗಿಸಿದ ಹರಿತವಾದ ಬಾಣಗಳಿಂದ ಹೊಡೆಯಲ್ಪಟ್ಟು ಬಿದ್ದಿರುವ ಮತ್ತು ಬೀಳುತ್ತಿರುವ ನರ-ಗಜಾಶ್ವ ದೇಹಗಳಿಂದ ನಾಳೆ ರಕ್ತವು ಸುರಿಯುವುದು.

ಗಾಂಡೀವಪ್ರಭವಾ ಬಾಣಾ ಮನೋಽನಿಲಸಮಾ ಜವೇ ।
ನೃನಾಗಾಶ್ವಾನ್ ವಿದೇಹಾಸೂನ್ ಕರ್ತಾರಶ್ಚ ಸಹಸ್ರಶಃ ॥ ೪೩ ॥

ಗಾಂಡೀವ ಧನುಸ್ಸಿನಿಂದ ಹೊರಹೊಮ್ಮುವ ಮನೋವೇಗ ಮತ್ತು ವಾಯುವೇಗಕ್ಕೆ ಸಮಾನವೇಗವುಳ್ಳ ಬಾಣಗಳು ಸಹಸ್ರ ಸಂಖ್ಯೆಯಲ್ಲಿ ನರ-ಗಜಾಶ್ವರಗಳನ್ನು ಪ್ರಾಣ ವಿಹೀನರನ್ನಾಗಿ ಮಾಡುವವು.

ಶಕ್ರಾದ್ ಭೀಷ್ಮಾತ್ ಕೃಪಾದ್ ದ್ರೋಣಾದ್
ದೇವಾದ್ ರುದ್ರಾಚ್ಚ ಯನ್ನಯಾ ।
ಉಪಾತ್ತಮಸ್ತ್ರಂ ತದ್ ಘೋರಂ ದ್ರಷ್ಟಾರೋ ಯುಧಿ ಶತ್ರವಃ ॥ ೪೪ ॥

ನಾನು ಇಂದ್ರನಿಂದಲೂ, ಭೀಷ್ಮರಿಂದಲೂ, ಕೃಪರಿಂದಲೂ, ದ್ರೋಣರಿಂದಲೂ, ರುದ್ರದೇವನಿಂದಲೂ ಪಡೆದ ಘೋರವಾದ, ಉತ್ತಮವಾದ ಅಸ್ತ್ರಗಳನ್ನು ನಾಳೆ ಯುದ್ಧದಲ್ಲಿ ಶತ್ರುಗಳು ನೋಡುವರು.

ಬ್ರಾಹ್ಮೇಣಾಸ್ತ್ರೇಣ ಚಾಸ್ತ್ರಾಣಿ ಹನ್ಯಮಾನಾನಿ ಸಂಯುಗೇ ।
ಮಯಾ ದ್ರಕ್ಷ್ಯಸಿ ಸರ್ವೇಷಾಂ ಶಿರೋಭಿಶ್ಚಾರುಕುಂಡಲೈಃ ॥ ೪೫ ॥

ಶತ್ರುಗಳ ಅಸ್ತ್ರವು ನನ್ನ ಬ್ರಹ್ಮಾಸ್ತ್ರದಿಂದ ವಿನಾಶಗೊಳಿಸಲ್ಪಟ್ಟು ಯುದ್ಧದಲ್ಲಿ ಶತ್ರುಗಳ ಸುಂದರವಾದ ಕುಂಡಲಗಳನ್ನು ಧರಿಸಿದ ಶಿರಸ್ಸುಗಳ ಜೊತೆಯಲ್ಲಿ ಕೆಳಗೆ ಉರುಳುವುದನ್ನು ನೀನು ನೋಡುವಿ.

ಶರವೇಗಸಮುತ್ಥೈಃ ಶಿರೋಭಿಶ್ಚಾರುಕುಂಡಲೈಃ ।
ಮಯಾ ದ್ರಕ್ಷ್ಯಸಿ ವಿಸ್ತೀರ್ಣಾಂ ಕೀರ್ಯಮಾಣಾಂ ಚ ಮೇದಿನೀಮ್ ॥

ನನ್ನ ಬಾಣಗಳ ವೇಗಕ್ಕೆ ಸಿಲುಕಿ ಕತ್ತರಿಸಲ್ಪಟ್ಟ ಚಾರುಕುಂಡಲಗಳಿಂದ ಧರಿಸಲ್ಪಟ್ಟ ಮನೋಹರವಾದ ಶಿರಸ್ಸುಗಳಿಂದ ಹರಡಿರುವುದನ್ನು ನೀನು ನೋಡುವಿ.

ಕ್ರವ್ಯಾದಾಂಸ್ತರ್ಪಯಿಷ್ಯಾಮಿ ದ್ರಾವಯಿಷ್ಯಾಮಿ ಶಾತ್ರವಾನ್ ।
ಸುಹೃದೋ ನಂದಯಿಷ್ಯಾಮಿ ಕ್ಷುದ್ರಂ ಹತ್ವಾ ಜಯದ್ರಥಮ್ ॥ ೪೭ ॥

ನಾನು ಕ್ಷುದ್ರನಾದ ಜಯದ್ರಥನನ್ನು ಕೊಂದು ಮಾಂಸಾಹಾರಿ ಪ್ರಾಣಿಗಳನ್ನು ಸಂತೋಷಪಡಿಸುವೆನು. ಶತ್ರುಗಳನ್ನು ಓಡಿಸುವೆನು ಮತ್ತು ಸುಹೃಜ್ಜನರನ್ನು ಸಂತೋಷ ಪಡಿಸುವೆನು.

ಬಹ್ವಾಗಸೃತ್ ಕುಸಂಬಂಧೀ ಪಾಪದೇಶಸಮುದ್ಭವಃ ।
ಮಯಾ ಸೈಂಧವಕೋ ರಾಜಾ ಹತಃ ಸ್ವಾಂಸ್ತ್ರಾಸಯಿಷ್ಯತಿ ॥ ೪೮ ॥

ಬಹಳ ಅಪರಾಧವನ್ನು ಮಾಡಿದವನೂ, ಕೆಟ್ಟ ಸಂಬಂಧಿಕನೂ, ಪಾಪದೇಶದಲ್ಲಿ ಹುಟ್ಟಿದವನೂ ಆದ ಆ ಕ್ರೂರಿ ಸೈಂಧವ ರಾಜನು ನಾಳೆ ಹತನಾಗಿ ತನ್ನವರೆಲ್ಲರಿಗೂ ಭಯವನ್ನುಂಟು ಮಾಡುವನು.

ಸರ್ವೇ ಕ್ಷೀರಾನ್ನಭೋಕ್ತಾರಃ ಪಾಪಾಚಾರಾ ನರಾಧಮಾಃ ।
ಮಯಾ ಸರಾಜಕಾ ಬಾಣೈಃ ಛಿನ್ನಾ ನಶ್ಯಂತಿ ಸೈಂಧವಾಃ ॥೪೯॥

ಸೈಂಧವ ದೇಶದ ಪಾಪಾಚಾರವುಳ್ಳ, ಕ್ಷೀರಾನ್ನ ಭೋಜಿಗಳಾದ, ಎಲ್ಲ ನರಾಧಮರೂ ರಾಜನ ಜೊತೆಯಲ್ಲಿ ನನ್ನ ಬಾಣಗಳಿಂದ ಕತ್ತರಿಸಲ್ಪಟ್ಟು ನಾಶವನ್ನು ಹೊಂದುತ್ತಾರೆ.

ತಥಾ ಪ್ರಭಾತೇ ಕರ್ತಾಸ್ಮಿ ಯಥಾ ಕೃಷ್ಣ ಸುಯೋಧನಃ ।
ನಾನ್ಯಂ ಧನುರ್ಧರಂ ಲೋಕೇ ಮಂಸ್ಯತೇ ಮತ್ಸಮಂ ಯುಧಿ ॥ ೫೦ ॥

ನಾನು ನಾಳೆ ಯುದ್ಧದಲ್ಲಿ ನನ್ನನ್ನು ಬಿಟ್ಟು ನನಗೆ ಸಮನಾದ ಇನ್ನೊಬ್ಬ ಧನುರ್ಧಾರಿಯು ಲೋಕದಲ್ಲಿ ಇಲ್ಲ ಎಂದು ಸುಯೋಧನನು ತಿಳಿಯುವಂತೆ ಕಾರ್ಯವನ್ನು ಮಾಡುವೆನು.

ಗಾಂಡೀವಂ ಚ ಧನುರ್ದಿವ್ಯಂ ಯೋದ್ಧಾರಂ ಚ ಧನಂಜಯಮ್ ।
ಯಂತಾರಂ ಚ ಹೃಷೀಕೇಶಂ ಕೋಽತಿವರ್ತೇತ ಸಂಯುಗೇ ॥ ೫೧ ॥

ದಿವ್ಯವಾದ ಗಾಂಡೀವ ಧನುಸ್ಸು, ಯೋಧನಾದ ಧನಂಜಯ ಮತ್ತು ಸಾರಥಿಯಾದ ಹೃಷೀಕೇಶ ಇವರನ್ನು ಯುದ್ಧದಲ್ಲಿ ಯಾವನು ದಾಟಿಯಾನು?

ಯಥಾ ಹಿ ಲಕ್ಷ್ಮ ವೈ ಚಂದ್ರೇ ಸಮುದ್ರೇ ಚ ಯಥಾ ಜಲಮ್ ।
ಏವಮೇತಾಂ ಪ್ರತಿಜ್ಞಾಂ ಮೇ ಸತ್ಯಂ ವಿದ್ಧಿ ಜನಾರ್ದನ ॥ ೫೨ ॥

ಎಲೈ ಜನಾರ್ದನನೇ, ಚಂದ್ರನಲ್ಲಿರುವ ಚಿಹ್ನೆಯಂತೆ, ಸಮುದ್ರದ ಜಲದಂತೆ ಈ ನನ್ನ ಪ್ರತಿಜ್ಞೆಯನ್ನು ಸತ್ಯವಾದುದೆಂದು ತಿಳಿ.

ಮಾಽವಮಂಸ್ಥಾ ಮಮಾಸ್ತ್ರಾಣಿ ಮಾಽವಮಂಸ್ಥಾಶ್ಚ ಗಾಂಡಿವಮ್ ।
ಮಾಽವಮಂಸ್ಥಾ ಇಮೌ ಬಾಹೂ ಮಾಽವಮಂಸ್ಥಾ ಧನಂಜಯಮ್ ॥

ನನ್ನ ಅಸ್ತ್ರಗಳನ್ನು ಕಡೆಗಣಿಸಬೇಡ. ಗಾಂಡೀವ ಧನುಸ್ಸನ್ನು ಅವಮಾನಗೊಳಿಸಬೇಡ. ಈ ನನ್ನ ಬಾಹುಗಳನ್ನು ಅವಮಾನಗೊಳಿಸಬೇಡ. ಧನಂಜಯನಾದ ನನ್ನನ್ನು ಅವಮಾನಗೊಳಿಸಬೇಡ.

ಗಾಂಡೀವಂ ಚ ಧನುರ್ದಿವ್ಯಂ ಯೋದ್ಧಾ ಚಾಹಂ ಜನಾರ್ದನ ।
ತ್ವಂ ತು ಯಂತಾ ಹೃಷೀಕೇಶ ಕಿನ್ನು ಸ್ಯಾದಜಿತಂ ಮಯಾ ॥ ೫೪ ॥

ತವ ಪ್ರಸಾದಾದ್ ಭಗವನ್ ಕಿಮಿವಾಸ್ತಿ ರಣೇ ಮಮ ।
ಅವಿಷಹ್ಯಂ ಹೃಷೀಕೇಶ ಕಂ ಜಾನನ್ ಮಾಂ ವಿಗರ್ಹಸೇ ॥ ೫೫ ॥

ಎಲೈ ಜನಾರ್ದನನೇ, ಧನುಸ್ಸು ದಿವ್ಯವಾದ ಗಾಂಡೀವರೂಪವಾದುದು. ಯೋಧನಾದವನು ನಾನು ಮತ್ತು ಹೃಷೀಕೇಶನೇ ಸಾರಥಿಯಾಗಿರುವವನು ನೀನು. ನಾನು ಏನನ್ನು ಗೆಲ್ಲಲು ಸಾಧ್ಯವಿಲ್ಲ? ಎಲೈ ಭಗವಂತನಾದ ಹೃಷೀಕೇಶನೇ, ನಿನ್ನ ಅನುಗ್ರಹದಿಂದ ನನಗೆ ಯುದ್ಧದಲ್ಲಿ ಅಸಾಧ್ಯವಾದುದು ಯಾವುದಿದೆ? ಎಲ್ಲವನ್ನೂ ತಿಳಿದರೂ ಏಕೆ ನನ್ನನ್ನು ಹೀಯಾಳಿಸುತ್ತಿದ್ದೀಯೆ?

ಯಥಾ ಹಿ ಯಾತ್ವಾ ಸಂಗ್ರಾಮಂ ನ ಜಿತೋ ವೈ ಜಯಾಮಿ ಚ ।
ತೇನ ಸತ್ಯೇನ ಸಂಗ್ರಾಮೇ ಹತಂ ವಿದ್ಧಿ ಜಯದ್ರಥಮ್ ॥ ೫೬ ॥

ನಾನು ಇದುವರೆಗೆ ಯುದ್ಧಕ್ಕೆ ಹೋಗಿ ಪರಾಜಿತನಾಗದೆ ಜಯವನ್ನೇ ಗಳಿಸಿದ್ದರೆ ಆ ಸತ್ಯದಿಂದ ಯುದ್ಧದಲ್ಲಿ ಸೈಂಧವನು ಹತನಾಗಿದ್ದಾನೆಂದು ತಿಳಿ.

ಧ್ರುವಂ ವೈ ಬ್ರಾಹ್ಮಣೇ ಸತ್ಯಂ ಧ್ರುವಂ ಸಾಧುಷು ಸಸ್ಥಿತಿಃ ।
ಶ್ರೀರ್ಧ್ರುವಾಽಪಿ ಚ ದಕ್ಷೇಷು ಧ್ರುವೋ ನಾರಾಯಣೇ ಜಯಃ ॥೫೭॥

ಬ್ರಾಹ್ಮಣರಲ್ಲಿ ಸತ್ಯವು ನಿತ್ಯವಾದುದು. ಸಜ್ಜನರಲ್ಲಿ ವಿನಯವು ನಿತ್ಯವಾದುದು. ದಕ್ಷರಾದವರಲ್ಲಿ ಸಂಪತ್ತು ನಿತ್ಯವಾದುದು. ನಾರಾಯಣನಲ್ಲಿ ಜಯವು ನಿತ್ಯವಾದುದು.

ತ್ವಂ ಚ ಮಾಧವ ಸರ್ವಂ ತತ್ ತಥಾ ಪ್ರತಿವಿಧಾಸ್ಯಸಿ ।
ಯಥಾ ರಿಪೂಣಾಂ ಮಿಷತಾಂ ಪ್ರಮಥಿಷ್ಯಾಮಿ ಸೈಂಧವಮ್ ॥ ೫೮ ॥

ಎಲೈ ಮಾಧವನೇ, ನಾನು ಶತ್ರುಗಳು ನೋಡುತ್ತಿರುವಂತೆಯೇ ಸೈಂಧವನನ್ನು ನಾಶ ಮಾಡುವಂತೆ ನೀನು ಎಲ್ಲವನ್ನೂ ವ್ಯವಸ್ಥೆ ಮಾಡುವಿ.

ಸಂಜಯಃ

ಏವಮುಕ್ತ್ವಾ ಹೃಷೀಕೇಶಂ ಸ್ವಯಮಾತ್ಮಾನಮಾತ್ಮನಾ ।
ಸಂದಿದೇಶಾರ್ಜುನೋ ನರ್ದನ್ ವಾಸವಿಃ ಕೇಶವಂ ಪ್ರಭುಮ್ ॥೫೯॥

ಯಥಾ ಪ್ರಭಾತಾಂ ರಜನೀಂ ಕಲ್ಪಿತಃ ಸ್ಯಾದ್ ರಥೋತ್ತಮಃ ।
ತಥಾ ಕಾರ್ಯಂ ತ್ವಯಾ ಕೃಷ್ಣ ಪ್ರತಿಜ್ಞಾ ಸ್ಯಾದ್ ಯಥಾ ಧ್ರುವಾ ॥೬೦॥

ಸಂಜಯ- ಕೃಷ್ಣನನ್ನು ಕುರಿತು ಹೀಗೆ ಹೇಳಿ, ತನ್ನ ಸಾಮರ್ಥ್ಯವನ್ನು ತಾನೇ ಪ್ರಕಟನೆ ಮಾಡುತ್ತಾ, ಸಿಂಹನಾದವನ್ನು ಮಾಡುತ್ತಾ ಇಂದ್ರಪುತ್ರನಾದ ಅರ್ಜುನನು ಪ್ರಭುವಾದ ಕೇಶವನನ್ನು ಕುರಿತು ಎಲೈ ಕೃಷ್ಣನೇ, ರಾತ್ರಿಯು ಕಳೆದು ನಾಳೆಯ ಪ್ರಾತಃಕಾಲದಲ್ಲಿ ನನ್ನ ಪ್ರತಿಜ್ಞೆಯು ನೆರವೇರುವಂತೆ ರಥವನ್ನು ಹೇಗೆ ಅಣಿಗೊಳಿಸಬೇಕೋ ಹಾಗೆ ನೀನು ಮಾಡಬೇಕು ಎಂದು ಆದೇಶವನ್ನು ನೀಡಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವ್ಯಾಸಿಕ್ಯಾಂ
ದ್ರೋಣಪರ್ವಣಿ ಏಕಸಪ್ತತಿತಮೋಽಧ್ಯಾಯಃ ॥

॥ ಪ್ರತಿಜ್ಞಾಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

ಕೃಷ್ಣನಿಂದ ಸುಭದ್ರೆಯ ಸಮಾಶ್ವಾಸನೆ.

ಸಂಜಯಃ

ತಾಂ ನಿಶಾಂ ಭೃಶಶೋಕಾರ್ತೌ ನಿಃಶ್ವಸಂತಾವಿವೋರಗೌ ।
ವಾಸುದೇವಾರ್ಜುನೌ ವೀರೌ ನ ಸ್ವಪ್ನಮುಪಲೇಭತುಃ ॥ ೧ ॥

ಬಹಳ ಶೋಕದಿಂದ ಕೂಡಿದ, ವೀರರಾದ ಕೃಷ್ಣಾರ್ಜುನರು ಸರ್ಪಗಳಂತೆ ಉಸಿರು ಬಿಡುತ್ತಾ ಆ ರಾತ್ರಿ ನಿದ್ರೆಯನ್ನು ಮಾಡಲಿಲ್ಲ.

ನರನಾರಾಯಣೌ ಕ್ರುದ್ಧೌ ಜ್ಞಾತ್ವಾ ದೇವಾಃ ಸವಾಸವಾಃ ।
ವ್ಯಥಿತಾಶ್ಚಿಂತಯಾಮಾಸುಃ ಕಿಂಸ್ವಿದೇತದ್ ಭವಿಷ್ಯತಿ ॥ ೨ ॥

ನರನಾರಾಯಣರು ಕ್ರೋಧಗೊಂಡಿರುವುದನ್ನು ತಿಳಿದು ಇಂದ್ರಸಹಿತರಾದ ದೇವತೆಗಳು ವ್ಯಥೆಯಿಂದ ಕೂಡಿ ಏನಾಗುವುದೋ ಎಂದು ಚಿಂತಿಸಿದರು.

ವವುಶ್ಚ ದಾರುಣಾ ವಾತಾ ರೂಕ್ಷಾ ಘೋರಾಭಿಶಂಸಿನಃ ।
ಸಕಬಂಧಸ್ತಥಾऽऽದಿತ್ಯೇ ಪರಿಘಃ ಸಮದೃಶ್ಯತ ॥ ೩ ॥

ವಾಯುಗಳು ದಾರುಣವಾಗಿ ಮತ್ತು ಒರಟಾಗಿ ಘೋರಫಲವನ್ನು ಸೂಚಿಸುತ್ತಾ ಬೀಸಿದವು. ಸೂರ್ಯನ ಸುತ್ತಲೂ ಕಬಂಧ (ನೀರು) ಸಹಿತವಾದ ಪರಿಘವು (ವರ್ತುಲವು) ಕಾಣಿಸಿಕೊಂಡಿತು.

ಉಲ್ಕಾಶನ್ಯಶ್ಚ ನಿಷ್ಪೇತುಃ ಸನಿರ್ಘಾತಾಃ ಸವಿದ್ಯುತಃ ।
ಚಚಾಲ ಚಾಪಿ ಪೃಥಿವೀ ಸಶೈಲವನಕಾನನಾ ॥ ೪ ॥

ಸಿಡಿಲಿನಂತಹ ಉಲ್ಕೆಗಳು ಮಿಂಚು ಮತ್ತು ಸಿಡಿಲುಗಳೊಡನೆ ಬಿದ್ದವು. ವನ, ಪರ್ವತ ಸಹಿತವಾದ ಪೃಥಿವಿಯು ನಡುಗಿತು.

ಚುಕ್ಷುಭುಶ್ಚ ಮಹಾರಾಜ ಸಾಗರಾ ಮಕರಾಲಯಾಃ ।
ಪ್ರತಿಸ್ರೋತಃಪ್ರವೃತ್ತಾಸ್ತು ಗಂತುಂ ವೈ ನಿಮ್ನಗಾಸ್ತದಾ ॥ ೫ ॥

ಮಹಾರಾಜನೇ, ಮಕರಾದಿಗಳಿಗೆ ಆಶ್ರಯವಾದ ಸಾಗರಗಳು ಕ್ಷೋಭೆಗೊಂಡವು. ನದಿಗಳು ವಿರುದ್ಧ ದಿಕ್ಕಿನಲ್ಲಿ ಹರಿಯಲು ಪ್ರಾರಂಭಿಸಿದವು.

ಗಜಾಶ್ವನರನಾಶಾರ್ಥಂ ಪ್ರವೃತ್ತಮಧರೋತ್ತರಮ್ ।
ಕ್ರವ್ಯಾದಾನಾಂ ಪ್ರಮೋದಾರ್ಥಂ ಯಮರಾಷ್ಟ್ರವಿವೃದ್ಧಯೇ ॥ ೬ ॥

ಗಜಾಶ್ವ-ನರಗಳ ವಿನಾಶಕ್ಕಾಗಿ, ಮಾಂಸಾಹಾರಿ ಪ್ರಾಣಿಗಳ ಸಂತೋಷಕ್ಕಾಗಿ, ಯಮರಾಷ್ಟ್ರದ ಅಭಿವೃದ್ಧಿಗಾಗಿ ಎಲ್ಲವೂ ತಲೆಕೆಳಗಾಯಿತು.

ವಾಹನಾನಿ ಶಕೃನ್ಮೂತ್ರಂ ಮುಮುಚೂ ರುರುದುಶ್ಚ ಹ ।
ದೀನಾಶ್ಚ ಪಾರ್ಥಿವಾಃ ಸರ್ವೇ ನಾಶಂಸುರ್ಜಯಮಾತ್ಮನಃ ।
ತಾನ್ ದೃಷ್ಟ್ವಾ ದಾರುಣಾನ್ ಸರ್ವಾನಮಾತ್ಯಾ ರೋಮಹರ್ಷಣಾನ್ ॥

ಸರ್ವೇ ತೇ ವ್ಯಥಿತಾ ಸೇನಾ ತ್ವದೀಯಾ ಭರತರ್ಷಭ ।
ಶ್ರುತ್ವಾ ಮಹಾಬಲಸ್ಯೋಗ್ರಾಂ ಪ್ರತಿಜ್ಞಾಂ ಸವ್ಯಸಾಚಿನಃ ।

ಅಶ್ವಾದಿ ವಾಹನಗಳು ಮಲ-ಮೂತ್ರಗಳನ್ನು ಸ್ರವಿಸಿದವು ಮತ್ತು ರೋದಿಸಿದವು. ರಾಜರೆಲ್ಲರೂ ದೈನ್ಯದಿಂದ ಕೂಡಿ ತಮ್ಮ ಜಯದ ಆಸೆಯನ್ನು ತೊರೆದರು. ಆ ರೋಮಾಂಚಕಾರಿಯಾದ, ದಾರುಣವಾದ ಎಲ್ಲ ಅಪಶಕುನಗಳನ್ನೂ ನೋಡಿ ನಿನ್ನ ಎಲ್ಲ ಅಮಾತ್ಯರೂ ವ್ಯಥೆಗೊಂಡರು. ಮಹಾಬಲಿಷ್ಠನಾದ ಅರ್ಜುನನ ಪ್ರತಿಜ್ಞೆಯನ್ನು ಕೇಳಿ ಎಲೈ ಭರತರ್ಷಭನೇ, ನಿನ್ನ ಸೇನೆ ಎಲ್ಲವೂ ವ್ಯಥೆಗೊಂಡಿತು.

ಅಥ ಕೃಷ್ಣಂ ಮಹಾಬಾಹುರಬ್ರವೀತ್ ಪಾಕಶಾಸನಿಃ ॥ ೮ ॥

ಆಶ್ವಾಸಯ ಸುಭದ್ರಾಂ ತ್ವಂ ಭಗಿನೀಂ ಸ್ನುಷಯಾ ಸಹ ।
ಶ್ವಶ್ರೂಸ್ನುಷೇ ಭೃಶಾಯಸ್ತೇ ವಿಶೋಕೇ ಕುರು ಮಾಧವ ॥ ೯ ॥

ಸಾಮ್ನಾ ಸತ್ಯೇನ ಯುಕ್ತೇನ ವಚಸಾSSಶ್ವಾಸಯ ಪ್ರಭೋ ॥ ೧೦ ॥

ಆಗ ಮಹಾಬಾಹುವಾದ ಪಾಕಶಾಸನಿಯಾದ ಅರ್ಜುನನು ಕೃಷ್ಣನನ್ನು ಕುರಿತು ಮಾಧವನೇ, ಸೊಸೆಯಾದ ಉತ್ತರೆಯಿಂದ ಕೂಡಿದ ನಿನ್ನ ತಂಗಿಯಾದ ಸುಭದ್ರೆಯನ್ನು ಸಮಾಧಾನಗೊಳಿಸು. ಆತ್ತೆ-ಸೊಸೆಯರಿಬ್ಬರೂ ಬಹಳವಾಗಿ ದುಃಖಿತರಾಗಿದ್ದಾರೆ.

ಅವರ ಶೋಕವನ್ನು ಪರಿಹರಿಸು. ಎಲೈ ಪ್ರಭುವೇ, ಮೃದುವಾದ ಸತ್ಯವಚನದಿಂದ ಅವರನ್ನು ಸಮಾಧಾನಗೊಳಿಸು ಎಂದು ಹೇಳಿದನು.

ಸಂಜಯಃ

ತತೋऽರ್ಜುನಗೃಹಂ ಗತ್ವಾ ವಾಸುದೇವಃ ಸುದುರ್ಮನಾಃ ।
ಭಗಿನೀಂ ಶೋಕಸಂತಪ್ತಾಮಾಶ್ವಾಸಯತ ದುಃಖಿತಾಮ್ ॥ ೧೧ ॥

ಸಂಜಯ– ಅನಂತರ ವಾಸುದೇವನು ಬಹಳ ಬೇಸರಗೊಂಡ ಮನಸ್ಸಿನಿಂದ ಅರ್ಜುನನ ಮನೆಗೆ ಹೋಗಿ ಶೋಕ ಸಂತಪ್ತಳಾಗಿ, ದುಃಖಿತಳಾಗಿದ್ದ ತನ್ನ ತಂಗಿಯನ್ನು ಸಮಾಧಾನಗೊಳಿಸಿದನು.

ವಾಷ್ಣೇಯಿ ಶೋಕಂ ಮಾ ಕಾರ್ಷೀಃ ಕುಮಾರಂ ಪ್ರತಿ ಸಸ್ನುಷಾ ।
ಸರ್ವೇಷಾಂ ಪ್ರಾಣಿನಾಂ ಭೀರು ನಿಷ್ಠೈಷಾ ಕಾಲನಿರ್ಮಿತಾ ॥ ೧೨ ॥

ಎಲೌ ವಾಷ್ಣೇಯಿಯೇ, ಸೊಸೆಯಿಂದ ಸಹಿತಳಾದ ನೀನು ಕುಮಾರನ ವಿಷಯದಲ್ಲಿ ಶೋಕಪಡಬೇಡ. ಎಲೌ ಭೀರುವೇ, ಎಲ್ಲ ಪ್ರಾಣಿಗಳಿಗೂ ಇಂತಹ ಒಂದು ಅವಸಾನವು ಕಾಲನಿರ್ಮಿತವಾದುದು.

ಕುಲೇ ಜಾತಸ್ಯ ವೀರಸ್ಯ ಕ್ಷತ್ರಿಯಸ್ಯ ವಿಶೇಷತಃ ।
ಸದೃಶಂ ಮರಣಂ ಹ್ಯೇತತ್ ತವ ಪುತ್ರಸ್ಯ ಮಾ ಶುಚಃ ॥ ೧೩ ॥

ನಿನ್ನ ಪುತ್ರನ ಮರಣವು ಸತ್ಕುಲದಲ್ಲಿ, ಅದರಲ್ಲೂ ವಿಶೇಷವಾಗಿ ಕ್ಷತ್ರಿಯ ಕುಲದಲ್ಲಿ ಪ್ರಸೂತನಾದ ವೀರನಿಗೆ ಉಚಿತವಾದುದು. ಶೋಕಪಡಬೇಡ.

ದಿಷ್ಟ್ಯಾ ಮಹಾರಥೋ ವೀರಃ ಪಿತುಸ್ತುಲ್ಯಪರಾಕ್ರಮಃ ।
ಕ್ಷತ್ರೇಣ ವಿಧಿನಾ ಪ್ರಾಪ್ತೋ ವೀರಾಭಿಲಷಿತಾಂ ಗತಿಮ್ ॥ ೧೪ ॥

ದೇವರ ದಯದಿಂದ ನಿನ್ನ ಪುತ್ರನು ವೀರನೂ, ಮಹಾರಥನೂ, ತಂದೆಗೆ ಸದೃಶವಾದ ಪರಾಕ್ರಮವುಳ್ಳವನೂ ಆಗಿ, ಕ್ಷತ್ರಿಯ ಸಂಪ್ರದಾಯದಂತೆ ವೀರರು ಬಯಸುವ ಗತಿಯನ್ನು ಹೊಂದಿದ್ದಾನೆ.

ಜಿತ್ವಾ ಚ ಬಹುಶಃ ಶತ್ರೂನ್ ಪ್ರೇಷಯಿತ್ವಾ ಚ ಮೃತ್ಯವೇ ।
ಗತಃ ಪುಣ್ಯಕೃತಾಂ ಲೋಕಾನ್ ಸರ್ವಕಾಮದುಹೋಽಕ್ಷಯಾನ್ ॥೧೫॥

ಅನೇಕ ಶತ್ರುಗಳನ್ನು ಗೆದ್ದು, ಅವರನ್ನು ಯಮಲೋಕಕ್ಕೆ ಕಳುಹಿಸಿ, ಪುಣ್ಯವಂತರು ಪಡೆಯುವ ಸರ್ವಕಾಮ ಪರಿಪೂರ್ಣವಾದ ಅಕ್ಷಯಲೋಕಗಳನ್ನು ಹೊಂದಿದ್ದಾನೆ.

ತಪಸಾ ಬ್ರಹ್ಮಚರ್ಯೇಣ ಪ್ರಜ್ಞಯಾ ಚ ಶ್ರುತೇನ ಚ ।
ಸಂತೋ ಯಾಂ ಗತಿಮಿಚ್ಛಂತಿ ಪ್ರಾಪ್ತಸ್ತಾಂ ತವ ಪುತ್ರಕಃ ॥ ೧೬ ॥

ತಪಸ್ಸಿನಿಂದಲೂ, ಬ್ರಹ್ಮಚರ್ಯದಿಂದಲೂ, ಪ್ರಜ್ಞೆಯಿಂದಲೂ, ವಿದ್ಯೆಯಿಂದಲೂ ಸಜ್ಜನರು ಯಾವ ಗತಿಯನ್ನು ಪಡೆಯಲು ಬಯಸುತ್ತಾರೆಯೋ ನಿನ್ನ ಚಿಕ್ಕ ವಯಸ್ಸಿನ ಮಗನು ಅಂತಹ ಗತಿಯನ್ನು ಹೊಂದಿದ್ದಾನೆ.

ವೀರಸೂರ್ವೀರಪತ್ನೀ ತ್ವಂ ವೀರಶ್ವಶುರಬಾಂಧವಾ ।
ಮಾ ಶುಚಸ್ತನಯಂ ಭದ್ರೇ ಗತಃ ಸ ಪರಮಾಂ ಗತಿಮ್ ॥ ೧೭ ॥

ನೀನು ವೀರಪುತ್ರನನ್ನು ಪಡೆದವಳು. ವೀರನ ಪತ್ನಿ. ವೀರರಾದ ಮಾವಂದಿರನ್ನು ಮತ್ತು ಬಂಧುಗಳನ್ನು ಹೊಂದಿದವಳು. ಎಲೌ ಮಂಗಳಸ್ವರೂಪಳಾದವಳೇ, ಮಗನನ್ನು ಕುರಿತು ಶೋಕಪಡಬೇಡ, ಅವನು ಶ್ರೇಷ್ಠವಾದ ಗತಿಯನ್ನು ಹೊಂದಿದ್ದಾನೆ.

ಸ್ವಾಧ್ಯಾಯಯುಕ್ತಂ ಬ್ರಾಹ್ಮಣೇ ಯಾಚತಾರಂ
ಗೌರ್ವೋಢಾರಂ ಶೀಘ್ರಗಂತಾರಮಶ್ವಾ ।
ದಾಸಂ ಶೂದ್ರಾ ಕರ್ಮಕರಂ ತು ವೈಶ್ಯಾ
ಶೂರಂ ಸೂತೇ ತ್ವದ್ವಿಧಾ ರಾಜಪುತ್ರೀ ॥ ೧೮ ॥

ಬ್ರಾಹ್ಮಣ ವನಿತೆಯು ಭಿಕ್ಷೆಯಿಂದ ಜೀವನ ಮಾಡುವ ಸ್ವಾಧ್ಯಾಯಶೀಲ ಮಗನನ್ನು ಪ್ರಸವಿಸುತ್ತಾಳೆ. ಗೋವು ಭಾರವನ್ನು ಹೊರುವ ಕರುವನ್ನೂ, ಅಶ್ವವು ಶೀಘ್ರವಾಗಿ ನಡೆಯುವ ಮರಿಯನ್ನೂ, ಶೂದ್ರಳು ಸೇವೆ ಮಾಡುವ ದಾಸನನ್ನೂ, ವೈಶ್ಯರು ಕರ್ಮ ಕುಶಲನಾದ ಪುತ್ರನನ್ನೂ ಪಡೆಯುತ್ತಾಳೆ. ನಿನ್ನಂತಹ ರಾಜಕುಮಾರಿಯು ಶೂರನನ್ನು ಪ್ರಸವಿಸುತ್ತಾಳೆ.

ಧ್ರುವಂ ಪ್ರಾಪ್ಸ್ಯತ್ಯಸೌ ಪಾಪಃ ಸೈಂಧವೋ ಬಾಲಘಾತಕಃ ।
ಅಸ್ಯಾವಲೇಪಸ್ಯ ತು ಫಲಂ ಸಸುಹೃದ್ಗಣಬಾಂಧವಃ ॥ ೧೯ ॥

ಬಾಲಘಾತಕನಾದ, ಪಾಪಿಯಾದ ಸೈಂಧವನು ತನ್ನ ಸುಹೃದ್ಗಣ, ಬಾಂಧವರ ಜೊತೆಯಲ್ಲಿ ಇಂತಹ ದುಷ್ಕಾರ್ಯಕ್ಕೆ ಯೋಗ್ಯವಾದ ಫಲವನ್ನು ಖಂಡಿತವಾಗಿ ಹೊಂದುವನು.

ಅಸ್ಯಾಂ ನಿಶಾಯಾಂ ವ್ಯುಷ್ಟಾಯಾಂ ನಿರ್ದಯಃ ಪಾಪಕರ್ಮಕೃತ್ ।
ಮೋಕ್ಷ್ಯತೇ ನ ಹಿ ಪಾರ್ಥಸ್ಯ ಪ್ರವಿಷ್ಟೋಽಪ್ಯಮರಾವತೀಮ್ ॥ ೨೦ ॥

ಈ ರಾತ್ರಿಯು ಕಳೆದ ಮೇಲೆ ನಿರ್ದಯನೂ, ಪಾಪಕರ್ಮವನ್ನು ಮಾಡಿದವನೂ ಆದ ಸೈಂಧವನು ಅಮರಾವತಿಯನ್ನೇ ಹೊಕ್ಕರೂ ಅರ್ಜುನನ ಬಾಣಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಶ್ವಃ ಶಿರಃ ಪಾದಮೂಲಂ ತೇ ಸೈಂಧವಸ್ಯಾಹೃತಂ ಧ್ರುವಮ್ ।
ಪದ್ಭ್ಯಾಂ ಪ್ರಮಥಿತಾಸಿ ತ್ವಂ ವಿಶೋಕಾ ಭವ ಮಾ ರುದಃ ॥ ೨೧ ॥

ನಾಳೆಯ ದಿವಸ ನಿನ್ನ ಪಾದಮೂಲಕ್ಕೆ ತಂದೊಪ್ಪಿಸುವ ಸೈಂಧವನ ಶಿರಸ್ಸನ್ನು ನೀನು ಪಾದದಿಂದ ಮರ್ದಿಸುವಿ. ಶೋಕವನ್ನು ಬಿಡು, ಅಳಬೇಡ.

ಕ್ಷತ್ರಧರ್ಮಂ ಪುರಸ್ಕೃತ್ಯ ಗತಃ ಶೂರಃ ಸತಾಂ ಗತಿಮ್ ।
ವಯಂ ಚ ಪ್ರಾಪ್ನುಯಾಮೇಹ ಯೇ ಚಾನ್ಯೇ ಶಸ್ತ್ರಜೀವಿನಃ ॥ ೨೨ ॥

ನಾವು ಮತ್ತು ಉಳಿದ ಶಸ್ತ್ರಜೀವಿಗಳು ಯಾವ ಸದ್ಗತಿಯನ್ನು ಪಡೆಯುವೆವೋ ಅಂತಹ ಸದ್ಗತಿಯನ್ನು ಕ್ಷತ್ರಿಯ ಧರ್ಮವನ್ನು ಅನುಸರಿಸಿದ, ಶೂರನಾದ ನಿನ್ನ ಪುತ್ರನು ಪಡೆದಿದ್ದಾನೆ.

ವ್ಯೂಢೋರಸ್ಕೋ ಮಹಾಬಾಹುರನಿವರ್ತೀ ರಿಪುಪ್ರಣುತ್ ।
ಗತಸ್ತವ ವರಾರೋಹೇ ಪುತ್ರಃ ಸ್ವರ್ಗಂ ಜಹಿ ಜ್ವರಮ್ ॥ ೨೩ ॥

ಎಲೌ ಸುಂದರಿಯೇ, ವಿಸ್ತಾರವಾದ ವಕ್ಷಸ್ಸ್ಥಲವನ್ನು ಹೊಂದಿ, ಮಹಾಬಾಹುವಾದ ನಿನ್ನ ಪುತ್ರನು ಯುದ್ಧದಿಂದ ಹಿಮ್ಮೆಟ್ಟದೆ, ಶತ್ರುಗಳನ್ನು ಮರ್ದಿಸಿ ಸ್ವರ್ಗಕ್ಕೆ ಹೋಗಿದ್ದಾನೆ. ನಿನ್ನ ಮನಸ್ಸಿನ ತಾಪವನ್ನು ಬಿಡು.

ಅನುಜಾತಃ ಪಿತುಃ ಪಕ್ಷಂ ಮಾತೃಪಕ್ಷಂ ಚ ವೀರ್ಯವಾನ್ ।
ಸಹಸ್ರಶೋ ರಿಪೂನ್ ಹತ್ವಾ ಹತಃ ಶೂರೋ ಮಹಾರಥಃ ॥ ೨೪ ॥

ಪರಾಕ್ರಮಶಾಲಿಯಾದ ಅವನು ತಂದೆಯ ವಂಶಕ್ಕೆ ಮತ್ತು ತಾಯಿಯ ವಂಶಕ್ಕೆ ಅನುಗುಣವಾಗಿ ಜನಿಸಿ, ಮಹಾರಥನಾಗಿ, ಸಹಸ್ರಾರು ಶತ್ರುಗಳನ್ನು ಕೊಂದು ಶೂರನಾಗಿ ತಾನೂ ಹತನಾಗಿದ್ದಾನೆ.

ಆಶ್ವಾಸಯ ಸುಷಾಂ ದೀನಾಂ ಮಾ ಶುಚಃ ಕ್ಷತ್ರಿಯಾ ಹ್ಯಸಿ ।
ಶ್ವಃ ಪ್ರಿಯಂ ಸುಮಹಚ್ಶ್ರುತ್ವಾ ವಿಶೋಕಾ ಭವಿತಾಸಿ ಹಿ ॥ ೨೫ ॥

ದೀನಳಾಗಿರುವ ಸೊಸೆಯಾದ ಉತ್ತರೆಯನ್ನು ಸಮಾಧಾನ ಮಾಡು. ಶೋಕ ಪಡಬೇಡ. ನೀನು ಕ್ಷತ್ರಿಯಳಾಗಿದ್ದೀಯಷ್ಟೆ? ನಾಳೆಯ ದಿವಸ ನೀನು ದೊಡ್ಡ ಪ್ರಿಯ ವಾರ್ತೆಯನ್ನು ಕೇಳಿ ಶೋಕರಹಿತಳಾಗುವಿ.

ಯತ್ ಪಾರ್ಥೇನ ಪ್ರತಿಜ್ಞಾತಂ ತತ್ ತಥಾ ನ ತದನ್ಯಥಾ ।
ಚಿಕೀರ್ಷಿತಂ ಹಿ ತೇ ಭರ್ತುರ್ನ ಭವೇಜ್ಜಾತು ನಿಷ್ಫಲಮ್ ॥ ೨೬ ॥

ಅರ್ಜುನನು ಏನು ಪ್ರತಿಜ್ಞೆ ಮಾಡಿದ್ದಾನೆಯೋ ಅದು ಹಾಗೆಯೇ ಆಗುತ್ತದೆ. ಬೇರೆ ರೀತಿ ಆಗುವುದಿಲ್ಲ. ನಿನ್ನ ಪತಿಯ ಉದ್ದೇಶವು ಎಂದೂ ವ್ಯರ್ಥವಾಗುವುದಿಲ್ಲ.

ಯದಿ ಸಮನುಜಪನ್ನಾಗಾಃ ಪಿಶಾಚಾ
ರಜನಿಚರಾಃ ಸಗಣಾಃ ಸುರಾಸುರಾಶ್ಚ ।
ರಣಗತಮಭಿಯಾಂತಿ ಸಿಂಧುರಾಜಂ
ನ ಸ ಭವಿತಾ ಸಹ ತೈರಪಿ ಪ್ರಭಾತೇ ॥ ೨೭ ॥

ನಾಳೆಯ ದಿವಸ ಮನುಷ್ಯ-ಸರ್ಪ-ಪಿಶಾಚಿಗಳೂ, ಗಣಸಹಿತರಾದ ರಾಕ್ಷಸರೂ, ಸುರಾಸುರರೂ, ಯುದ್ಧಗತನಾದ ಸೈಂಧವನ ಜೊತೆಯಲ್ಲಿ ಅವನ ಸಹಾಯಕ್ಕೆ ಬಂದರೂ ಅವರ ಜೊತೆಯಲ್ಲಿ ಅವನೂ ಸಹ ಉಳಿಯುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿಸಪ್ತತಿತಮೋಽಧ್ಯಾಯಃ ॥

॥ ಪ್ರತಿಜ್ಞಾಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ಮೂರನೆಯ ಅಧ್ಯಾಯ

ಕೃಷ್ಣನ ಮಾತುಗಳನ್ನು ಕೇಳಿ ಸುಭದ್ರೆಯು ವಿಲಾಪ. ಕೃಷ್ಣನ ಸಮಾಧಾನ. ರಾತ್ರಿಯಲ್ಲಿ ಅರ್ಜುನನಿಂದ ಶಿವಪೂಜೆ, ಕೃಷ್ಣ-ದಾರುಕರ ಸಂಭಾಷಣೆ.

ಸಂಜಯಃ

ಏತಚ್ಛ್ರುತ್ವಾ ವಚಸ್ತಸ್ಯ ಕೇಶವಸ್ಯ ಮಹಾತ್ಮನಃ ।
ಸುಭದ್ರಾ ಪುತ್ರಶೋಕಾರ್ತಾ ವಿಲಲಾಪ ಸುದುಃಖಿತಾ ॥ ೧ ॥

ಸಂಜಯ– ಮಹಾತ್ಮನಾದ ಆ ಕೇಶವನ ಈ ಮಾತುಗಳನ್ನು ಕೇಳಿ, ಪುತ್ರ ಶೋಕಾರ್ತಳಾದ ಸುಭದ್ರೆಯು ಬಹಳ ದುಃಖದಿಂದ ವಿಲಾಪವನ್ನು ಮಾಡಿದಳು.

ಹಾ ಪುತ್ರ ಮಮ ಮಂದಾಯಾಃ ಕಥಂ ಸಂಯುಗಮೇಯಿವಾನ್ ।
ನಿಧನಂ ಪ್ರಾಪ್ತವಾಂಸ್ತಾತ ಪಿತುಸ್ತುಲ್ಯಪರಾಕ್ರಮಃ ॥ ೨ ॥

ಅಯ್ಯೋ ಮಂದಭಾಗ್ಯಳಾದ ನನ್ನ ಪುತ್ರನೇ, ಪ್ರೀತಿಪಾತ್ರನೇ, ತಂದೆಗೆ ಸಮಾನವಾದ ಪರಾಕ್ರಮವುಳ್ಳವನೇ, ಯುದ್ಧಕ್ಕೆ ಹೋಗಿ ನೀನು ಹೇಗೆ ಮರಣವನ್ನು ಹೊಂದಿದೆ?

ಕಥಮಿಂದೀವರಶ್ಯಾಮಂ ಸುದಂಷ್ಟ್ರಂ ಚಾರುಲೋಚನಮ್ ।
ಮುಖಂ ತೇ ದೃಶ್ಯತೇ ವತ್ಸ ಕುಂಠಿತಂ ರಣರೇಣುನಾ ॥ ೩ ॥

ಇಂದೀವರದಂತೆ (ನೀಲಕಮಲ) ಶ್ಯಾಮವರ್ಣದಿಂದ ಕೂಡಿದ, ಮನೋಹರವಾದ ದಂತಗಳನ್ನು ಮತ್ತು ಕಣ್ಣುಗಳನ್ನು ಹೊಂದಿದ ನಿನ್ನ ಮುಖವು ಎಲೈ ವತ್ಸನೇ, ರಣರಂಗದ ಧೂಳಿನಿಂದ ಆವೃತವಾಗಿ ಹೇಗೆ ಕಾಣುತ್ತದೆ?

ನೂನಂ ಶೂರಂ ನಿಪತಿತಂ ತ್ವಾಂ ಪಶ್ಯಂತ್ಯನಿವರ್ತಿನಮ್ ।
ಸುಶಿರೋಗ್ರೀವಬಾಹ್ವಂಸಂ ವ್ಯೂಢೋರಸ್ಕಂ ತನೂದರಮ್ ॥ ೪ ॥

ಚಾರೂಪಚಿತಸರ್ವಾಂಗಂ ಸ್ಪಷ್ಟಂ ಶಸ್ತ್ರಕೃತಾಚಿತಮ್ ।
ಭೂತಾನಿ ತ್ವಾಂ ನಿರೀಕ್ಷಂತೇ ಭೂಮೌ ಚಂದ್ರಮಿವೋದಿತಮ್ ॥ ೫ ॥

ಶೂರನೇ, ವಿಸ್ತಾರವಾದ ವಕ್ಷಸ್ಸುಳ್ಳವನೂ, ಕೃಶವಾದ ಉದರವುಳ್ಳವನೂ, ಒಳ್ಳೆಯ ಶಿರಸ್ಸು, ಕತ್ತು, ಬಾಹು ಮತ್ತು ಭುಜವುಳ್ಳವನೂ, ಚೆನ್ನಾಗಿ ಬೆಳೆದ ಸರ್ವಾವಯವಗಳುಳ್ಳವನೂ, ಒಳ್ಳೆಯ ನೇತ್ರವುಳ್ಳವನೂ ಆದ ನೀನು ಶಸ್ತ್ರದಿಂದ ಉಂಟಾದ ಗಾಯಗಳಿಂದ ತುಂಬಿದವನಾಗಿ ಉದಯಿಸಿದ ಚಂದ್ರನು ಭೂಮಿಯ ಮೇಲೆ ಬಿದ್ದಂತೆ ಬಿದ್ದಿರುವುದನ್ನು ಭೂತಗಳು ನೋಡುತ್ತವೆ.

ಶಯನೀಯಂ ಪುರಾ ಯಸ್ಯ ಸ್ತರ್ಧ್ಯಾಸ್ತರಣಸಂವೃತಮ್ ।
ಭೂಮಾವದ್ಯ ಕಥಂ ಶೇಷೇ ವಿಪ್ರವಿದ್ಧಃ ಸುಖೋಚಿತಃ ॥ ೬ ॥

ಯಾವನ ಹಾಸಿಗೆಯ ಹಿಂದೆ ಒಳ್ಳೆಯ ಹೊದಿಕೆಗಳಿಂದ ಕೂಡಿದ್ದಿತೋ ಅಂತಹ ಸುಖೋಚಿತನಾದ ನೀನು ಈ ದಿನ ಭೂಮಿಯ ಮೇಲೆ ಎಸೆಯಲ್ಪಟ್ಟು ಹೇಗೆ ಮಲಗಿದ್ದೀಯೆ?

ಯೋಽನ್ವಾಸ್ಯತ್ ಪುರಾ ವೀರೋ ವರಸ್ತ್ರೀಭಿರ್ಮಹಾಭುಜಃ ।
ಕಥಮನ್ವಾಸ್ಯಸೇ ಸೋಽದ್ಯ ಶಿವಾಭಿಃ ಪತಿತೋ ಮೃಧೇ ॥ ೭ ॥

ಮಹಾಭುಜನಾದ, ವೀರನಾದ ನಿನ್ನನ್ನು ಹಿಂದೆ ಶಯನದಲ್ಲಿ ಸುಂದರಿ ಸ್ತ್ರೀಯರು ಉಪಾಸನೆ ಮಾಡುತ್ತಿದ್ದರು. ಅಂತಹ ನೀನು ನೆಲದ ಮೇಲೆ ಬಿದ್ದು ನರಿಗಳಿಂದ ಹೇಗೆ ಸುತ್ತುವರಿಯಲ್ಪಟ್ಟಿದ್ದೀಯೆ?

ಯಃ ಸ್ತೂಯಸೇ ಪುರಾ ಹೃಷ್ಟೈಃ ಸೂತಮಾಗಧವಂದಿಭಿಃ ।
ಸೋಽದ್ಯ ಕ್ರವ್ಯಾದ್ಗಣೈರ್ಘೋರೈರ್ವಿನದದ್ಭಿರುಪಾಸ್ಯಸೇ ॥ ೮ ॥

ಯಾವ ನಿನ್ನನ್ನು ಹಿಂದೆ ಸೂತ-ಮಾಗಧ-ವಂದಿಗಳು ಸಂತೋಷದಿಂದ ಸ್ತೋತ್ರ ಮಾಡುತ್ತಿದ್ದರೋ ಅಂತಹ ನೀನು ಈ ದಿನ ನಿನ್ನ ಸುತ್ತಲೂ ನಿಂತಿರುವ ಘೋರವಾದ ಮಾಂಸಾಹಾರಿ ಪ್ರಾಣಿಗಳ ಗಣದಿಂದ ಕಿರುಚಲ್ಪಡುತ್ತಿದ್ದೀಯೆ.

ಪಾಂಡವೇಷು ಚ ನಾಥೇಷು ವೃಷ್ಣಿವೀರೇಷು ಚಾಭಿಭೋ ।
ಪಾಂಚಾಲೇಷು ಚ ವೀರೇಷು ಹತಃ ಕೇನಾಸ್ಯನಾಥವತ್ ।
ಯತ್ರ ತ್ವಂ ಕೇಶವೇ ನಾಥೇ ಸತ್ಯನಾಥೋ ಯಥಾ ಹತಃ ॥ ೯ ॥

ಎಲೈ ಶತ್ರುಜಯಶೀಲನೇ, ಪಾಂಡವರು, ವೃಷ್ಣಿವೀರರು, ಪಾಂಚಾಲ ವೀರರು ನಾಥರಾಗಿರುವಾಗ, ಕೇಶವನು ನಾಥನಾಗಿರುವಾಗ, ಅನಾಥನಂತೆ ಹೇಗೆ ಹತನಾಗಿದ್ದೀಯೆ?

ಅತೃಪ್ತದರ್ಶನಾ ಪುತ್ರ ದರ್ಶನಸ್ಯ ತವಾನಘ ।
ಮಂದಭಾಗ್ಯಾ ಗಮಿಷ್ಯಾಮಿ ವ್ಯಕ್ತಮದ್ಯ ಯಮಕ್ಷಯಮ್ ॥ ೧೦ ॥

ಪುತ್ರನೇ, ಅನಘನೇ, ನಿನ್ನ ದರ್ಶನದಿಂದ ನನಗೆ ತೃಪ್ತಿಯೇ ಆಗಿಲ್ಲ. ಮಂದಭಾಗ್ಯಳಾದ ನಾನೂ ಈ ದಿನ ಯಮಪಟ್ಟಣಕ್ಕೆ ಹೋಗುವೆನು.

ವಿಶಾಲಾಕ್ಷಂ ಸುಕೇಶಾಂತಂ ಚಾರುಹಾಸಂ ಸುಗಂಧಿ ಚ ।
ತವ ಪುತ್ರ ಕದಾ ವಕ್ತ್ರಂ ಭೂಯೋ ದ್ರಕ್ಷ್ಯಾಮಿ ನಿರ್ವ್ರಣಮ್ ॥ ೧೧ ॥

ವಿಶಾಲವಾದ ಕಣ್ಣುಳ್ಳ, ಒಳ್ಳೆಯ ಬೈತಲೆಯುಳ್ಳ, ಸುಂದರವಾದ ಮುಗುಳ್ನಗೆಯುಳ್ಳ, ಒಳ್ಳೆಯ ಗಂಧವುಳ್ಳ, ವ್ರಣರಹಿತವಾದ ನಿನ್ನ ಮುಖವನ್ನು ಎಲೈ ಪುತ್ರನೇ, ನಾನು ಇನ್ನೊಮ್ಮೆ ಯಾವಾಗ ನೋಡುವೆನು?

ಧಿಗ್ ಬಲಂ ಭೀಮಸೇನಸ್ಯ ಧಿಕ್ ಪಾರ್ಥಸ್ಯ ಧನುಷ್ಮತಃ ।
ಧಿಗ್ ಬಲಂ ವೃಷ್ಣಿವೀರಾಣಾಂ ಪಾಂಚಾಲಾನಾಂ ಚ ಧಿಗ್ ಬಲಮ್ ॥

ಧಿಕ್ ಕೇಕಯಾಂಸ್ತಥಾ ಮತ್ಸ್ಯಾನ್ ಚೇದಿಪಾಂಡವಸೃಂಜಯಾನ್ ।
ಯೇ ತ್ವಾಂ ರಣಗತಂ ವೀರಂ ನಾರಕ್ಷನ್ ವಿನಿಪಾತಿತಮ್ ॥ ೧೩ ॥

ರಣರಂಗಗತನಾದ ನಿನ್ನನ್ನು ನಿನ್ನ ನಿಪಾತವು ಉಂಟಾದರೆ ರಕ್ಷಿಸದ ಭೀಮಸೇನನ ಬಲಕ್ಕೆ ಧಿಕ್ಕಾರವಿರಲಿ. ಧನುರ್ಧಾರಿಯಾದ ಅರ್ಜುನನ ಬಲಕ್ಕೆ ಧಿಕ್ಕಾರವಿರಲಿ. ವೃಷ್ಣಿವೀರರ ಬಲಕ್ಕೆ ಧಿಕ್ಕಾರವಿರಲಿ. ಪಾಂಚಾಲರಿಗೆ ಧಿಕ್ಕಾರವಿರಲಿ. ಕೇಕಯರಿಗೆ, ಮತ್ಸ್ಯರಿಗೆ, ಚೇದಿಗಳಿಗೆ, ಪಾಂಡವರಿಗೆ ಮತ್ತು ಸೃಂಜಯರಿಗೆ ಧಿಕ್ಕಾರವಿರಲಿ.

ಸ್ತ್ರೀಯಂ ವಾಸುದೇವಸ್ಯ ಗೃಧ್ರಾಸ್ತಂ ಪರ್ಯುಪಾಸತೇ ।
ಕಥಂ ತ್ವಾತಿರಥಂ ವೀರಂ ಪಶ್ಯಾಮ್ಯದ್ಯ ನಿಪಾತಿತಮ್ ॥ ೧೪ ॥

ವಾಸುದೇವನ ಸೋದರಳಿಯನನ್ನು ಈ ದಿನ ಹದ್ದುಗಳು ಸುತ್ತುವರಿದಿವೆ. ಅತಿರಥನೂ, ವೀರನೂ ಆದ ಅವನು ಬಿದ್ದಿರುವುದನ್ನು ನಾನು ಈ ದಿನ ಹೇಗೆ ನೋಡಲಿ?

ಅದ್ಯ ಪಶ್ಯಾಮಿ ಪೃಥಿವೀಂ ಶೂನ್ಯಾಮಿವ ಗತತ್ವಿಷಮ್ ।
ಅಭಿಮನ್ಯುಮಪಶ್ಯಂತೀ ಶೋಕವ್ಯಾಕುಲಲೋಚನಾ ॥ ೧೫ ॥

ಅಭಿಮನ್ಯುವನ್ನು ಕಾಣದೆ ಶೋಕದಿಂದ ತುಂಬಿದ ಕಣ್ಣುಳ್ಳ ನನಗೆ ಈ ದಿನ ಭೂಮಿಯು ಕಾಂತಿಹೀನವಾಗಿ ಶೂನ್ಯವಾದಂತೆ ಕಾಣುತ್ತಿದೆ.

ಸಾಕ್ಷಾನ್ಮಘವತಃ ಪೌತ್ರಂ ಪುತ್ರಂ ಗಾಂಡೀವಧನ್ವನಃ ।
ಸ್ವಸ್ರೀಯಂ ವಾಸುದೇವಸ್ಯ ತಂ ಗೃಧ್ರಾಃ ಪರ್ಯುಪಾಸತೇ ॥ ೧೬ ॥

ಇಂದ್ರನ ಸಾಕ್ಷಾತ್ ಮೊಮ್ಮಗನನ್ನು, ಗಾಂಡೀವಧಾರಿಯಾದ ಅರ್ಜುನನ ಮಗನನ್ನು, ಕೃಷ್ಣನ ಸೋದರಳಿಯನನ್ನು ಹದ್ದುಗಳು ಸುತ್ತುವರಿದಿವೆ!

ಹಾ ದೃಷ್ಟ್ವೋ ವೀರ ನಷ್ಟಶ್ಚ ರಮ್ಯಸ್ವಪ್ನ ಇವಾಸಿ ಮೇ ।
ಅಹೋ ಹ್ಯನಿತ್ಯಂ ಮಾನುಷ್ಯಂ ಜಲಬುದ್ಬುದವಚ್ಚಲಮ್ ॥ ೧೭ ॥

ಅಯ್ಯೋ ಪುತ್ರನೇ, ಸ್ವಲ್ಪ ಕಾಲ ನಿನ್ನನ್ನು ನೋಡಿ ಕಳೆದುಕೊಂಡ ಮೇಲೆ ಈಗ ನೀನು ನಷ್ಟವಾದ ಸುಂದರವಾದ ಸ್ವಪ್ನದಂತೆ ತೋರುತ್ತಿದ್ದೀಯೆ. ಅಯ್ಯೋ ಮನುಷ್ಯ ಜೀವನವು ನೀರಿನ ಗುಳ್ಳೆಯಂತೆ ಅನಿತ್ಯವಾದುದು ಮತ್ತು ಚಂಚಲವಾದುದು!

ಇಮಾಂ ತೇ ತರುಣೀಂ ಭಾರ್ಯಾಂ ಪುತ್ರಾಧಿಭರಭಪ್ಲುತಾಮ್ ।
ಉತ್ತರಾಮುತ್ತಮಾಂ ಜಾತ್ಯಾ ಸುಶೀಲಾಂ ಪ್ರಿಯಭಾಷಿಣೀಮ್ ॥ ೧೮ ॥

ಶನಕೈಃ ಪರಿರಭ್ಯೈನಾಂ ಸುಪ್ತಾಂ ಮಮ ಯಶಸ್ವಿನೀಮ್ ।
ಸುಕುಮಾರೀಂ ವಿಶಾಲಾಕ್ಷೀಂ ಪೂರ್ಣಚಂದ್ರನಿಭಾನನಾಮ್ ॥ ೧೯ ॥

ಬಾಲಪಲ್ಲವತನ್ವಂಗೀಂ ಮತ್ತಮಾತಂಗಗಾಮಿನೀಮ್ ।
ಬಿಂಬಾಧರೋಷ್ಠೀಮಬಲಾಮಭಿಮನ್ಯೋ ಪ್ರಹರ್ಷಯ ॥ ೨೦ ॥

ಈ ನಿನ್ನ ಭಾರ್ಯೆಯೂ, ತರುಣಿಯೂ, ಉದರದಲ್ಲಿರುವ ಗರ್ಭದ ಚಿಂತೆಯಿಂದ ಕೂಡಿದವಳೂ, ಶ್ರೇಷ್ಠಳಾದವಳೂ, ಸ್ವಾಭಾವಿಕವಾಗಿಯೇ ಸುಶೀಲಳಾದವಳೂ, ಪ್ರಿಯಭಾಷಿಣಿಯಾದವಳೂ, ಕೀರ್ತಿವಂತಳೂ, ಸುಕುಮಾರಿಯೂ, ವಿಶಾಲಾಕ್ಷಿಯೂ, ಪೂರ್ಣಚಂದ್ರನಂತಹ ಮುಖವುಳ್ಳವಳೂ, ಎಳೆಯ ಚಿಗುರಿನಂತೆ ಕೋಮಲವಾದ ಶರೀರವುಳ್ಳವಳೂ, ಮದಗಜದ ನಡಿಗೆಯನ್ನು ಹೊಂದಿದವಳೂ, ಬಂಜಾಧರೆಯೂ, ಅಬಲೆಯೂ ಆದ ಉತ್ತರೆಯನ್ನು ಎಲೈ ಅಭಿಮನ್ಯುವೇ, ಮೆಲ್ಲನೆ ಆಲಿಂಗಿಸಿ ಸಂತೋಷಗೊಳಿಸು.

ತ್ವಯಾ ವಿನಾ ಕಥಂ ಪುತ್ರ ಜೀರ್ಣಾಂ ಪತಿತಮಾನಸಾಮ್ ।
ಇಮಾಂ ಸಂಧಾರಯಿಷ್ಯಾಮಿ ವಿವತ್ಸಾಮಿವ ಧೇನುಕಾಮ್ ॥ ೨೧ ॥

ಎಲೈ ಪುತ್ರನೇ, ವತ್ಸವನ್ನು ಕಳೆದುಕೊಂಡ ಧೇನುವಂತಿರುವ ನಾನು ನೀನಿಲ್ಲದೆ ಬಸವಳಿದು, ಮನೋಗ್ಲಾನಿಗೆ ಒಳಗಾದ ಇವಳನ್ನು ಹೇಗೆ ಪೋಷಿಸುವೆನು?

ಅಹೋ ಹ್ಯಕಾಲೇ ಪ್ರಸ್ಥಾನಂ ಕೃತವಾನಸಿ ಪುತ್ರಕ ।
ವಿಹಾಯ ಫಲಕಾಲೇ ಮಾಂ ಸುಗೃದ್ಧಾಂ ತವ ದರ್ಶನೇ ॥ ೨೨ ॥

ಎಲೈ ಪುತ್ರನೇ, ಯಾವಾಗಲೂ ನಿನ್ನ ದರ್ಶನವನ್ನು ಬಯಸುವ ನನ್ನನ್ನು ಫಲಕಾಲದಲ್ಲಿ ತೊರೆದು ಅಕಾಲದಲ್ಲಿ ಪ್ರಯಾಣವನ್ನು ಮಾಡಿದ್ದೀಯೆ.

ನೂನಂ ಗತಿಃ ಕೃತಾಂತಸ್ಯ ಪ್ರಾಜ್ಞೈರಪಿ ಸುದುಸ್ತರಾ ।
ಯತ್ರ ತ್ವಂ ಕೇಶವೇ ನಾಥೇ ಸತ್ಯನಾಥೋ ಯಥಾ ಹತಃ ॥ ೨೩ ॥

ಕೃತಾಂತನ ನಿಯಮವನ್ನು ಖಂಡಿತವಾಗಿಯೂ ಪ್ರಾಜ್ಞರೂ ದಾಟಲಾರರು. ಏಕೆಂದರೆ ಕೇಶವನು ನಾಥನಾಗಿದ್ದರೂ ನೀನು ಅನಾಥನಂತೆ ಮೃತನಾಗಿದ್ದೀಯೆ.

ಯಜ್ವನಾಂ ದಾನಶೀಲಾನಾಂ ಬ್ರಾಹ್ಮಣಾನಾಂ ಕೃತಾತ್ಮನಾಮ್ ।
ಚರಿತಬ್ರಹ್ಮಚರ್ಯಾಣಾಂ ಪುಣ್ಯತೀರ್ಥಾವಗಾಹಿನಾಮ್ ॥ ೨೪ ॥

ಕೃತಜ್ಞಾನಾಂ ವದಾನ್ಯಾನಾಂ ಗುರುಶುಶ್ರೂಷಿಣಾಮಪಿ ।
ಸಹಸ್ರದಕ್ಷಿಣಾನಾಂ ಚ ಯಾ ಗತಿಸ್ತಾಮವಾಪ್ನುಹಿ ॥ ೨೫ ॥

ಯಾಗವನ್ನು ಮಾಡುವವರಿಗೆ, ದಾನಶೀಲರಾದವರಿಗೆ, ಜಿತೇಂದ್ರಿಯರಾದ ಬ್ರಾಹ್ಮಣರಿಗೆ, ಬ್ರಹ್ಮಚರ್ಯವನ್ನು ಅನುಷ್ಠಾನ ಮಾಡಿದವರಿಗೆ, ಪುಣ್ಯತೀರ್ಥಗಳಲ್ಲಿ ಸ್ನಾನ ಮಾಡಿದವರಿಗೆ, ಕೃತಜ್ಞರಾದವರಿಗೆ, ಉದಾರಿಗಳಾದವರಿಗೆ, ಗುರುಶುಶ್ರೂಷೆಯನ್ನು ಮಾಡಿದವರಿಗೆ, ಸಹಸ್ರ ದಕ್ಷಿಣೆಯನ್ನು ಕೊಟ್ಟವರಿಗೆ ಯಾವ ಗತಿಯಾಗುತ್ತದೆಯೋ ಅಂತಹ ಗತಿಯನ್ನು ಹೊಂದುವವನಾಗು.

ಯಾ ಗತಿರ್ಯುದ್ಧ್ಯಮಾನಾನಾಂ ಶೂರಾಣಾಮನಿವರ್ತಿನಾಮ್ ।
ಅಪರಾಙ್ಮುಖಾನಾಂ ಸಮರೇ ತಾಂ ಗತಿಂ ವ್ರಜ ಪುತ್ರಕ ॥ ೨೬ ॥

ಯುದ್ಧದಲ್ಲಿ ಹಿಮ್ಮೆಟ್ಟದೆ ಶೂರರಿಗೆ, ಯುದ್ಧವನು ಮಾಡುವ ಯಾವ ಗತಿಯಾಗುತ್ತದೆಯೋ ಎಲೈ ಪುತ್ರನೇ, ಅಂತಹ ಗತಿಯನ್ನು ಹೊಂದುವವನಾಗು.

ಗೋಸಹಸ್ರಪ್ರದಾತೄಣಾಂ ಕ್ರತುದಾನಾಂ ಚ ಯಾ ಗತಿಃ ।
ವೈದೇಶಿಕಾನಾಂ ಚಾಭಿಮತಂ ದದತಾಂ ಯಾ ಗತಿರ್ಭವೇತ್ ॥ ೨೭ ॥

ಬ್ರಹ್ಮಚರ್ಯೇಣ ಯಾಂ ಯಾಂತಿ ಮುನಯಃ ಸಂಶಿತವ್ರತಾಃ ।
ಏಕಪತ್ನ್ಯಶ್ಚ ಯಾಂ ಯಾಂತಿ ತಾಂ ಗತಿಂ ವ್ರಜ ಪುತ್ರಕ ॥ ೨೮ ॥

ಸಹಸ್ರ ಗೋದಾನ ಮಾಡಿದವರಿಗೆ, ಯಜ್ಞದಲ್ಲಿ ಅನ್ನಾದಿಗಳನ್ನು ದಾನ ಮಾಡಿದವರಿಗೆ, ಉಪದೇಶವನ್ನು ಮಾಡಿದವರಿಗೆ, ದಾನವನ್ನು ಮಾಡಿದವರಿಗೆ ಅಭಿಮತವಾದ ಯಾವ ಗತಿಯೋ, ಬ್ರಹ್ಮಚರ್ಯ ಪಾಲಿಸಿದ, ವ್ರತಶೀಲರಾದ ಮುನಿಗಳು ಯಾವ ಗತಿಯನ್ನು ಹೊಂದುತ್ತಾರೆಯೋ, ಪತಿವ್ರತೆಯರು ಯಾವ ಗತಿಯನ್ನು ಹೊಂದುತ್ತಾರೆಯೋ, ಎಲೈ ಪುತ್ರನೇ, ಅಂತಹ ಗತಿಯನ್ನು ಹೊಂದುವವನಾಗು.

ರಾಜ್ಞಾಂ ಸುಚರಿತೈರ್ಯಾ ಚ ಗತಿರ್ಭವತಿ ಶಾಶ್ವತೀ ।
ಯಾ ಗತಿರ್ನ್ಯಸ್ತದಂಡಾನಾಂ ತಾಂ ಗತಿಂ ವ್ರಜ ಪುತ್ರಕ ।
ಚತುರಾಶ್ರಮಿಣಾಂ ಪುಣ್ಯೈಃ ಪಾವಿತಾನಾಂ ಸುರಕ್ಷಿತೈಃ ॥ ೨೯ ॥

ಶುಭಾಚಾರವುಳ್ಳ ರಾಜರಿಗೆ ಯಾವ ಶಾಶ್ವತವಾದ ಗತಿಯಾಗುವುದೋ, ನ್ಯಸ್ತದಂಡರಾದ ಸಂನ್ಯಾಸಿಗಳಿಗೆ ಯಾವ ಗತಿಯಾಗುವುದೋ, ಪವಿತ್ರರಾದ

ಚತುರಾಶ್ರಮಿಗಳು ಸಂಪಾದಿಸಿ ರಕ್ಷಿಸಿದ ಪುಣ್ಯಗಳಿಂದ ಯಾವ ಗತಿಯಾಗುವುದೋ ಅಂತಹ ಗತಿಯನ್ನು ಹೊಂದುವವನಾಗು.

ದೀನಾನುಕಂಪಿನಾಂ ಯಾ ಚ ಸತತಂ ಸಂವಿಭಾಗಿನಾಮ್ ।
ಪೈಶುನ್ಯಾಚ್ಚ ನಿವೃತ್ತಾನಾಂ ತಾಂ ಗತಿಂ ವ್ರಜ ಪುತ್ರಕ ॥ ೩೦ ॥

ದೀನರ ಮೇಲೆ ದಯೆಯನ್ನು ತೋರಿಸುವವರಿಗೆ, ಸತತವಾಗಿ ಅನ್ನದಾನವನ್ನು ಮಾಡಿ ಭುಂಜಿಸುವವರಿಗೆ, ಚಾಡಿಯನ್ನು ಹೇಳುವುದರಿಂದ ನಿವೃತ್ತರಾದವರಿಗೆ ಯಾವ ಗತಿಯೋ, ಎಲೈ ಪುತ್ರನೇ, ಅಂತಹ ಗತಿಯನ್ನು ಹೊಂದುವವನಾಗು.

ವ್ರತಿನಾಂ ಧರ್ಮಶೀಲಾನಾಂ ಗುರುಶುಶ್ರೂಷಿಣಾಮಪಿ ।
ಅಮೋಘಾತಿಥೀನಾಂ ಯಾ ಚ ತಾಂ ಗತಿಂ ವ್ರಜ ಪುತ್ರಕ ॥ ೩೧ ॥

ಕೃಚ್ಛ್ರೇಷು ಯಾ ಧಾರಯತಾಮಾತ್ಮಾನಂ ವ್ಯಸನೇಷು ಚ ।
ಗತಿಃ ಶೋಕಾಗ್ನಿದಗ್ಧಾನಾಂ ತಾಂ ಗತಿಂ ವ್ರಜ ಪುತ್ರಕ ॥ ೩೨ ॥

ಮಾತಾಪಿತ್ರೋಶ್ಚ ಶುಶ್ರೂಷಾಂ ಕಲ್ಪಯಂತೀಹ ಯೇ ಸದಾ ।
ಸ್ವದಾರನಿರತಾನಾಂ ಚ ಯಾ ಗತಿಸ್ತಾಮವಾಪ್ನುಹಿ ॥ ೩೩ ॥

ವ್ರತಾನುಷ್ಠಾನ ಮಾಡಿದವರಿಗೆ, ಧರ್ಮಶೀಲರಾದವರಿಗೆ, ಗುರುಶುಶ್ರೂಷೆಯನ್ನು ಮಾಡಿದವರಿಗೆ, ಅತಿಥಿಗಳನ್ನು ಎಂದೂ ನಿರಾಶೆ ಮಾಡದವರಿಗೆ ಯಾವ ಗತಿಯೋ; ಕಷ್ಟ ಬಂದಾಗ, ವ್ಯಸನ ಉಂಟಾದಾಗ ಯಾರು ಧೈರ್ಯದಿಂದ ಅದನ್ನು ಧರಿಸುತ್ತಾರೆಯೋ ಅಂತಹವರಿಗೆ, ಶೋಕಾಗ್ನಿದಗ್ಧರಾದರೂ ಆತ್ಮಸಂಯಮ ಉಳ್ಳವರಿಗೆ ಯಾವ ಗತಿಯೋ; ಯಾವಾಗಲೂ ತಂದೆ-ತಾಯಿಗಳ ಸೇವೆಯನ್ನು ಮಾಡುವವರಿಗೆ, ತನ್ನ ಪತ್ನಿಯಲ್ಲಿಯೇ ನಿರತರಾದವರಿಗೆ ಯಾವ ಗತಿಯೋ, ಎಲೈ ಪುತ್ರನೇ, ಅಂತಹ ಗತಿಯನ್ನು ಹೊಂದುವವನಾಗು.

ಋತುಕಾಲೇ ಸ್ವಕಾಂ ಪತ್ನೀಂ ಗಚ್ಛತಾಂ ಯಾ ಮನೀಷಿಣಾಮ್ ।
ಅನನ್ಯದಾರಸೇವೀನಾಂ ತಾಂ ಗತಿಂ ವ್ರಜ ಪುತ್ರಕ ॥ ೩೪ ॥

ಎಲೈ ಪುತ್ರನೇ, ಋತುಕಾಲದಲ್ಲಿ ತಮ್ಮ ಪತ್ನಿಯನ್ನು ಭೋಗಿಸುವ ವಿವೇಕಿಗಳಿಗೆ ಯಾವ ಗತಿಯೋ, ಅನ್ಯರ ಪತ್ನಿಯನ್ನು ಸೇವಿಸದವರಿಗೆ ಯಾವ ಗತಿಯೋ, ಅಂತಹ ಗತಿಯನ್ನು ಹೊಂದುವವನಾಗು.

ಸಾಮ್ನಾ ಯೇ ಸರ್ವಭೂತಾನಿ ಗಚ್ಛಂತಿ ಗತಮತ್ಸರಾಃ ।
ನಾರುಂತುದಾನಾಂ ಕ್ಷಮಿಣಾಂ ಯಾ ಗತಿಸ್ತಾಮವಾಪ್ನುಹಿ ॥ ೩೫ ॥

ಮಾತ್ಸರ್ಯರಹಿತವಾಗಿ ಯಾರು ಎಲ್ಲ ಪ್ರಾಣಿಗಳನ್ನೂ ಮಾರ್ದವದಿಂದ ನೋಡಿಕೊಳ್ಳುತ್ತಾರೆಯೋ, ಮರ್ಮಭೇದಕವಾದ ಮಾತುಗಳನ್ನು ಆಡುವುದಿಲ್ಲವೋ, ಕ್ಷಮಾಶೀಲರೋ ಅವರಿಗೆ ಉಂಟಾಗುವ ಗತಿಯು ನಿನಗಾಗಲಿ.

ಮಧುಮಾಂಸನಿವೃತ್ತಾನಾಂ ಮದಾದ್ ದಂಭಾತ್ ತಥಾऽನೃತಾತ್ ।
ಪರೋಪತಾಪಾದನ್ಯಾಯಾತ್ ತಾಂ ಗತಿಂ ವ್ರಜ ಪುತ್ರಕ ॥ ೩೬ ॥

ಮಧುಮಾಂಸಗಳನ್ನು ತ್ಯಜಿಸಿದವರಿಗೆ, ಮದದಿಂದಲೂ ದರ್ಪದಿಂದಲೂ ಮತ್ತು ಅನೃತದಿಂದಲೂ ನಿವೃತ್ತರಾದವರಿಗೆ, ಅನ್ಯಾಯದಿಂದ ಇನ್ನೊಬ್ಬರನ್ನು ಹಿಂಸಿಸುವುದರಿಂದಲೂ ನಿವೃತ್ತರಾದವರಿಗೆ ಉಂಟಾಗುವ ಗತಿಯು ನಿನಗಾಗಲಿ.

ಯಜ್ವಾನಃ ಸರ್ವಧರ್ಮಜ್ಞಾ ಜ್ಞಾನತೃಪ್ತಾ ಜಿತೇಂದ್ರಿಯಾಃ ।
ಯಾಂ ಗತಿಂ ಸಾಧವೋ ಯಾಂತಿ ತಾಂ ಗತಿಂ ವ್ರಜ ಪುತ್ರಕ ॥ ೩೭ ॥

ಎಲೈ ಪುತ್ರನೇ, ಯಾಗವನ್ನು ಮಾಡುವ, ಸರ್ವಧರ್ಮಗಳನ್ನು ತಿಳಿದ, ಜ್ಞಾನತೃಪ್ತರಾದ, ಜಿತೇಂದ್ರಿಯರಾದ ಸಜ್ಜನರಿಗೆ ಯಾವ ಗತಿಯೋ ಅಂತಹ ಗತಿಯು ನಿನಗಾಗಲಿ.

ಸಂಜಯಃ

ಏವಂ ವಿಲಪತೀಂ ದೀನಾಂ ಸುಭದ್ರಾಂ ಶೋಕಕರ್ಶಿತಾಮ್ ।
ಉಪಾಗಚ್ಛತ್ ಪಾಂಚಾಲೀ ಉತ್ತರಾಸಹಿತಾ ತದಾ ॥ ೩೮ ॥

ಸಂಜಯ– ಹೀಗೆ ಶೋಕಕರ್ಶಿತಳಾಗಿ ವಿಲಾಪವನ್ನು ಮಾಡುತ್ತಿದ್ದ ಸುಭದ್ರೆಯು ಇದ್ದಲ್ಲಿಗೆ ಉತ್ತರಾ ಸಹಿತಳಾದ ದ್ರೌಪದಿಯು ಬಂದಳು.

ಸಾ ಪ್ರಕಾಮಂ ರುದಿತ್ವಾ ಚ ವಿಲಪ್ಯ ಚ ಸುದುಃಖಿತಾ ।
ಉನ್ಮತ್ತವತ್ ತದಾ ರಾಜನ್ ವಿಸಂಜ್ಞಾ ಪತಿತಾ ಕ್ಷಿತೌ ॥ ೩೯ ॥

ಆವಳು (ಸುಭದ್ರೆಯು) ಬಹಳವಾಗಿ ಅತ್ತು ದುಃಖದಿಂದ ಕೂಡಿ ಹುಚ್ಚಳಂತೆ ವಿಲಾಪವನ್ನು ಮಾಡಿ, ಎಲೈ ರಾಜನೇ, ಮೂರ್ಛೆಯನ್ನು ಹೊಂದಿ ಭೂಮಿಯ ಮೇಲೆ ಬಿದ್ದಳು.

ಸೋಪಚಾರಸ್ತು ಕೃಷ್ಣಸ್ತಾಂ ದುಃಖಿತಾಂ ಭೃಶದುಃಖಿತಃ ।
ಸಿಕ್ತ್ವಾಂಭಸಾ ಸಮಾಶ್ವಾಸ್ಯ ತತ್ತದುಕ್ತ್ವಾ ಹಿತಂ ವಚಃ ॥ ೪೦ ॥

ವಿಸಂಜ್ಞಕಲ್ಪಾ ರುದತೀಮಪವಿದ್ಧಾಂ ಪ್ರವೇಪತೀಮ್ ।
ಭಗಿನೀಂ ಪುಂಡರೀಕಾಕ್ಷ ಇದಂ ವಚನಮಬ್ರವೀತ್ ॥ ೪೧ ॥

ಕೃಷ್ಣನು ದುಃಖಿತಳಾದ ಅವಳನ್ನು ನೋಡಿ, ತಾನೂ ಬಹಳ ದುಃಖಿತನಾಗಿ ಅವಳಿಗೆ ಉಪಚಾರಪೂರ್ವಕವಾಗಿ ನೀರನ್ನು ಚುಮುಕಿಸಿ, ಸಮಾಧಾನವನ್ನು ಮಾಡಿ, ಆ ಕಾಲಕ್ಕೆ ಹಿತವಾದ ಮಾತುಗಳನ್ನು ಆಡಿ, ಮೂರ್ಛೆ ಹೋದಂತಿದ್ದು ಅಳುತ್ತಾ ನಡುಗುತ್ತಾ ನೆಲದ ಮೇಲೆ ಬಿದ್ದಿದ್ದ ತನ್ನ ತಂಗಿಯನ್ನು ಕುರಿತು ಪುಂಡರೀಕಾಕ್ಷನು ಮಾತನಾಡಿದನು.

ಮಾನುಶೋಚೀಃ ಸುಭದ್ರೇ ತ್ವಂ ಸ್ನುಷಾಂ ಚಾಶ್ವಾಸಯೋತ್ತರಾಮ್ ।
ಗತೋಽಭಿಮನ್ಯುಃ ಪ್ರಥಿತಾಂ ಗತಿಂ ಕ್ಷತ್ರಿಯಪುಂಗವಃ ॥ ೪೨ ॥

ಎಲೌ ಸುಭದ್ರೆಯೇ, ಶೋಕವನ್ನು ಪಡಬೇಡ. ನಿನ್ನ ಸೊಸೆಯಾದ ಉತ್ತರೆಯನ್ನು ಸಮಾಧಾನಗೊಳಿಸು. ಕ್ಷತ್ರಿಯ ಶ್ರೇಷ್ಠನಾದ ಅಭಿಮನ್ಯುವು ಶ್ರೇಷ್ಠವಾದ, ಪ್ರಖ್ಯಾತವಾದ ಗತಿಯನ್ನು ಹೊಂದಿದ್ದಾನೆ.

ಯೇ ಚಾನ್ಯೇ ಚ ಕುಲೇ ಸಂತಃ ಪುರುಷಾಣಾಂ ವರಾನನೇ ।
ಸರ್ವೇ ತೇ ತಾಂ ಗತಿಂ ಯಾಂತಿ ಯಾಽಭಿಮನ್ಯೋರ್ಯಶಸ್ವಿನಃ ॥೪೩॥

ಎಲೌ ಸುಂದರಮುಖಿಯೇ, ಸತ್ಪುರುಷರ ಕುಲದಲ್ಲಿ ಜನಿಸಿದ ಎಲ್ಲ ಸಜ್ಜನರೂ ಸಹ ಕೀರ್ತಿವಂತನಾದ ಅಭಿಮನ್ಯುವು ಪಡೆದ ಗತಿಯನ್ನೇ ಹೊಂದುತ್ತಾರೆ.

ಕುರ್ಯಾಮ ತದ್ ವಯಂ ಕರ್ಮ ಕ್ರಿಯಾಸುಃ ಸುಹೃದಶ್ಚ ನಃ ।
ಕೃತವಾನ್ ಯಾದೃಗದ್ಯೈಕಃ ತವ ಪುತ್ರೋ ಮಹಾರಥಃ ॥ ೪೪ ॥

ಮಹಾರಥನಾದ ನಿನ್ನ ಪುತ್ರನು ಒಬ್ಬನೇ ಎಂತಹ ಕಾರ್ಯವನ್ನು ಮಾಡಿದನೋ ಅಂತಹ ಕಾರ್ಯವನ್ನು ನಾವು ಮಾಡೋಣ. ನಮ್ಮ ಬಂಧುಗಳೂ ಮತ್ತು ಸುಹೃದರೂ ಮಾಡಲಿ.

ಸಂಜಯಃ

ಏವಮಾಶ್ವಾಸ್ಯ ಭಗಿನೀಂ ದ್ರೌಪದೀಮಪಿ ಚೋತ್ತರಾಮ್ ।
ಪಾರ್ಥಸ್ಯೈವ ಮಹಾಬಾಹುಃ ಪಾರ್ಶ್ವಮಾಯಾದರಿಂದಮಃ ॥ ೪೫ ॥

ಸಂಜಯ– ಅರಿಂದಮನೂ, ಮಹಾಬಾಹುವೂ ಆದ ಕೃಷ್ಣನು ಹೀಗೆ ತಂಗಿಯನ್ನೂ, ದ್ರೌಪದಿಯನ್ನೂ ಮತ್ತು ಉತ್ತರೆಯನ್ನೂ ಸಮಾಧಾನಗೊಳಿಸಿ ಅರ್ಜುನನ ಪಾರ್ಶ್ವಕ್ಕೆ ಬಂದನು.

ತತೋಽಭ್ಯನುಜ್ಞಾಯ ಗೃಹಂ ಕೃಷ್ಣಂ ಚಾನ್ಯಾಂಶ್ಚ ಪಾರ್ಥಿವಾನ್ ।
ವಿವೇಶಾಂತಃಪುರಂ ರಾಜಾ ತೇಽಪಿ ಜಗ್ಮುಃ ಸ್ವಮಾಲಯಮ್ ॥ ೪೬ ॥

ಅನಂತರ ಧರ್ಮರಾಜನು ಕೃಷ್ಣನ ಅನುಜ್ಞೆಯನ್ನು ಪಡೆದು, ಉಳಿದ ರಾಜರ ಅನುಜ್ಞೆಯನ್ನೂ ಪಡೆದು ತನ್ನ ಶಿಬಿರದಲ್ಲಿ ಅಂತಃಪುರಕ್ಕೆ ಹೋದನು. ಉಳಿದ ರಾಜರು ತಮ್ಮ ಶಿಬಿರಗಳಿಗೆ ಹೋದರು.

ತತೋಽರ್ಜುನಸ್ಯ ಶಿಬಿರಂ ಪ್ರವಿಶ್ಯಾಪ್ರತಿಮಂ ಭುವಿ ।
ಸ್ಪೃಷ್ಟ್ವಾಽಂಭಃ ಪುಂಡರೀಕಾಕ್ಷಃ ಸ್ಥಂಡಿಲೇ ಶುಭಲಕ್ಷಣೇ ॥ ೪೭ ॥
ಸಂತಸ್ತಾರ ಶುಭಾಂ ಶಯ್ಯಾಂ ದರ್ಭೈರ್ವೈದೂರ್ಯಸನ್ನಿಭೈಃ ॥ ೪೮ ॥

ಅನಂತರ ಪುಂಡರೀಕಾಕ್ಷನು ಭೂಮಿಯಲ್ಲಿ ಅಸದೃಶವಾದ ಅರ್ಜುನನ ಶಿಬಿರವನ್ನು ಪ್ರವೇಶಿಸಿ, ಹಸ್ತಗಳನ್ನು ತೊಳೆದು, ಶುಭಲಕ್ಷಣವುಳ್ಳ ಭೂಮಿಯ ಮೇಲೆ ವೈಡೂರ್ಯದಿಂದ ಹೊಳೆಯುವ ದರ್ಭೆಗಳಿಂದ ಶುಭವಾದ ಶಯ್ಯೆಯನ್ನು ಹರಡಿದನು.

ತತೋ ಮಾಲ್ಯೈನ ವಿಧಿವಲ್ಲಾಜೈರ್ಗಂಧೈಃ ಸುಮಂಗಲೈಃ ।
ಅಲಂಚಕಾರ ತಾಂ ಶಯ್ಯಾಂ ಪರಿವಾರ್ಯಾಯುಧೋತ್ತಮೈಃ ॥ ೪೯ ॥

ಆನಂತರ ಮಾಲ್ಯಗಳಿಂದಲೂ, ಅತ್ಯಂತ ಮಂಗಳಕರವಾದ ಅರಳುಗಳು ಮತ್ತು ಸುಗಂಧಗಳಿಂದಲೂ ವಿಧಿಗೆ ಅನುಸಾರವಾಗಿ ಆ ಶಯ್ಯೆಯನ್ನು ಅಲಂಕರಿಸಿ ಅದರ ಸುತ್ತಲೂ ಶ್ರೇಷ್ಠವಾದ ಆಯುಧಗಳನ್ನು ಇರಿಸಿದನು.

ತತಃ ಸ್ಪೃಷ್ಟೋದಕಂ ಪಾರ್ಥಂ ವಿನೀತಪರಿಚಾರಕಮ್ ।
ನೈತ್ಯಕಂ ದರ್ಶಯಾಂಚಕ್ರೇ ನೈಶಂ ತ್ರೈಯಂಬಕಂ ಬಲಿಮ್ ॥ ೫೦ ॥

ಆನಂತರ ವಿನಯಶಾಲಿಗಳಾದ ಪರಿಚಾರಕರನ್ನು ಹೊಂದಿದ ಅರ್ಜುನನು ಹಸ್ತ ಪಾದಗಳನ್ನು ತೊಳೆದ ಮೇಲೆ ದಿನವೂ ರಾತ್ರಿಯ ಸಮಯದಲ್ಲಿ ಮಾಡಬೇಕಾದ ರುದ್ರದೇವರ ಪೂಜೆಯನ್ನು ಸೂಚಿಸಿದನು.

ತತಃ ಪ್ರೀತಮನಾಃ ಪಾರ್ಥೋ ಗಂಧೈರ್ಮಾಲ್ಯೈಶ್ಚ ಮಾಧವಮ್ ।
ಅಲಂಕೃತ್ಯೋಪಹಾರಂ ಚ ಶಯ್ಯಾಮಸ್ಮೈ ನ್ಯವೇದಯತ್ ।

ಆನಂತರ ಸಂತೋಷಗೊಂಡ ಅರ್ಜುನನು ಗಂಧ-ಮಾಲ್ಯಗಳಿಂದ ಮಾಧವನನ್ನು ಅಲಂಕರಿಸಿ, ಪೂಜೆಯನ್ನು ಸಮರ್ಪಿಸಿ ಆ ಶಯನವನ್ನು ಅವನಿಗೆ ನಿವೇದಿಸಿದನು.

ಸಾಧು ಸಾಧ್ವಿತಿ ಗೋವಿಂದಃ ಫಲ್ಗುನಂ ವಾಕ್ಯಮಬ್ರವೀತ್ ॥ ೫೧ ॥
ಸುಪ್ತಾಂ ಪಾರ್ಥ ಭದ್ರಂ ತೇ ಕಲ್ಯಾಣಾಯ ವ್ರಜಾಮ್ಯಹಮ್ ॥೫೨॥

ಗೋವಿಂದನು ಒಳ್ಳೆಯದು, ಒಳ್ಳೆಯದು ಎಂದು ಹೇಳುತ್ತಾ, ಅರ್ಜುನನನ್ನು ಕುರಿತು- 'ಅರ್ಜುನನೇ, ನಿನಗೆ ಮಂಗಳವಾಗಲಿ. ನೀನು ಮಲಗು. ನಿನ್ನ ಕಲ್ಯಾಣಕ್ಕಾಗಿ ನಾನು ಹೋಗಿಬರುತ್ತೇನೆ' ಎಂದು ಹೇಳಿದನು.

ಸ್ಥಾಪಯಿತ್ವಾ ತತೋ ದ್ವಾಃಸ್ಥಾನಾಪ್ತಾನ್ ನಾನಾಯುಧಾನ್ ನರಾನ್ ।
ದಾರುಕಾನುಗತಃ ಶ್ರೀಮಾನ್ ವಿವೇಶ ಶಿಬಿರಂ ಸ್ವಕಮ್ ।
ಶಿಶ್ಯೇ ಚ ಶಯನೇ ಶುಭ್ರೇ ಬಹುಕಾರ್ಯಂ ವಿಚಿಂತಯನ್ ॥ ೫೩ ॥

ಅನಂತರ ಆಪ್ತರಾದ ದ್ವಾರಪಾಲಕರನ್ನು ನಾನಾ ವಿಧವಾದ ಆಯುಧಗಳನ್ನು ಧರಿಸಿರುವಂತೆ ನಿಲ್ಲಿಸಿ, ದಾರುಕನಿಂದ ಹಿಂಬಾಲಿಸಲ್ಪಟ್ಟು, ಕಾಂತಿಯುಕ್ತನಾದ ಮಾಧವನು ತನ್ನ ಶಿಬಿರವನ್ನು ಪ್ರವೇಶಿಸಿದನು. ಮಾಡಬೇಕಾದ ಅನೇಕ ಕಾರ್ಯಗಳನ್ನು ಚಿಂತಿಸುತ್ತಾ ತನ್ನ ಶುಭ್ರವಾದ ಶಯನದಲ್ಲಿ ಮಲಗಿದನು.

ನ ಪಾಂಡವಾನಾಂ ಶಿಬಿರೇ ಕಶ್ಚಿತ್ ಸುಷ್ವಾಪ ತಾಂ ನಿಶಾಮ್ ।
ಪ್ರಜಾಗರಃ ಸರ್ವಜನಂ ಹ್ಯಾವಿವೇಶ ವಿಶಾಂಪತೇ ॥ ೫೪ ॥

ಪಾಂಡವರ ಶಿಬಿರದಲ್ಲಿ ಆ ರಾತ್ರಿ ಯಾರೂ ನಿದ್ರೆ ಮಾಡಲಿಲ್ಲ. ಎಲೈ ರಾಜನೇ, ಸರ್ವರನ್ನೂ ಜಾಗರಣೆಯು ಆವರಿಸಿತು.

ಪುತ್ರಶೋಕಾಭಿಭೂತೇನ ಪ್ರತಿಜ್ಞಾತಂ ಮಹಾತ್ಮನಾ ।
ಶ್ವಃ ಸಿಂಧುರಾಜಸ್ಯ ವಧಃ ಕಾರ್ಯೋ ಗಾಂಡೀವಧನ್ವನಾ ॥ ೫೫ ॥

ತತ್ ಕಥಂ ನು ಮಹಾಬಾಹುರ್ವಾಸವಿಃ ಪರವೀರಹಾ ।
ಪ್ರತಿಜ್ಞಾಂ ಸಫಲಾಂ ಕುರ್ಯಾದಿತಿ ತೇ ಸಮಚಿಂತಯನ್ ॥ ೫೬ ॥

ಪುತ್ರಶೋಕದಿಂದ ಕೂಡಿದ ಮಹಾತ್ಮನಾದ ಅರ್ಜುನನು ಪ್ರತಿಜ್ಞೆಯನ್ನು ಮಾಡಿದ್ದಾನೆ. ಗಾಂಡೀವ ಧನುರ್ಧಾರಿಯಾದ ಅವನು ನಾಳೆ ಸೈಂಧವನ ವಧೆಯನ್ನು ಮಾಡಬೇಕು. ಪರವೀರಘಾತಕನೂ, ಮಹಾಬಾಹುವೂ, ಇಂದ್ರನ ಪುತ್ರನೂ ಆದ ಅವನು ತನ್ನ ಪ್ರತಿಜ್ಞೆಯನ್ನು ಹೇಗೆ ಸಫಲಗೊಳಿಸುವನು ಎಂದು ಅವರು ಚಿಂತಿಸಿದರು.

ಜನಾಃ

ಕಷ್ಟಂ ಹೀದಂ ವ್ಯವಸಿತಂ ಪಾಂಡವೇನಾಮಿತೌಜಸಾ ।
ಪುತ್ರಶೋಕಾಭಿಭೂತೇನ ಪ್ರತಿಜ್ಞಾ ಮಹತೀ ಕೃತಾ ॥ ೫೭ ॥

ಜನರು– ಅಮಿತ ಪರಾಕ್ರಮಿಯಾದ ಪಾಂಡವನು ಕಷ್ಟಕರವಾದ ಈ ನಿರ್ಧಾರವನ್ನು ಮಾಡಿದ್ದಾನೆ. ಪುತ್ರಶೋಕದಿಂದ ಅಭಿಭೂತನಾದ ಅವನು ದೊಡ್ಡ ಪ್ರತಿಜ್ಞೆಯನ್ನು ಮಾಡಿದ್ದಾನೆ.

ಭ್ರಾತರಶ್ಚಾಪಿ ಭೂಯಿಷ್ಠಾ ಬಲಾನಿ ವಿಪುಲಾನಿ ಚ ।
ಧೃತರಾಷ್ಟ್ರಸ್ಯ ಪುತ್ರೇಣ ಸರ್ವತಃ ಸನ್ನಿವೇಶಿತಾಃ ॥ ೫೮ ॥

ದುರ್ಯೋಧನ ಅನೇಕ ಬಲಿಷ್ಠರಾದ ಸಹೋದರರಿದ್ದಾರೆ. ಅವನ ಸೈನ್ಯವೂ ವಿಪುಲವಾಗಿದೆ. ದುರ್ಯೋಧನನು ಅವರನ್ನು ಎಲ್ಲ ಕಡೆಯಲ್ಲಿಯೂ ನಿಲ್ಲಿಸಿರುತ್ತಾನೆ.

ಸ ಹತ್ವಾ ಸೈಂಧವಂ ಸಂಖೇ ಪುನರೇತು ಜಯೀ ಸುಖೀ ।
ಸ ಹತ್ವಾರಿಗಣಂ ಸಂಖೇ ಪಾರಯಿತ್ವಾ ಮಹಾವ್ರತಮ್ ॥ ೫೯ ॥

ಅರ್ಜುನನು ಯುದ್ಧದಲ್ಲಿ ಸೈಂಧವನನ್ನು ಕೊಂದು, ತನ್ನ ಮಹಾವ್ರತವನ್ನು ಪೂರೈಸಿ, ಶತ್ರುಸಮೂಹವನ್ನು ಕೊಂದು ಜಯವನ್ನು ಪಡೆದು ಸುಖವಾಗಿ ಹಿಂದಿರುಗಲಿ.

ಯದ್ಯಸ್ತಿ ಸುಕೃತಂ ಕಿಂಚಿದಸ್ಮಾಕಂ ಹಂತು ಸೈಂಧವಮ್ ।
ಜೆತ್ವಾ ಸರ್ವಾನ್ ರಿಪೂನ್ ಪಾರ್ಥಃ
ತ್ರಾತುಂ ನೋಽಸ್ಮಾನ್ ಮಹಾಭಯಾತ್ ॥ ೬೦ ॥

ನಾವು ಮಾಡಿದ ಏನಾದರೂ ಸತ್ಕರ್ಮವಿದ್ದರೆ ಈ ದೊಡ್ಡ ಭಯದಿಂದ ನಮ್ಮನ್ನು ರಕ್ಷಿಸಲು ಎಲ್ಲ ಶತ್ರುಗಳನ್ನೂ ಕೊಂದು ಅರ್ಜುನನು ಸೈಂಧವನನ್ನು ಕೊಲ್ಲಲಿ.

ಸಂಜಯಃ

ಏವಮಾಶಂಸಮಾನಾಸ್ತೇ ಕೇಚಿತ್ ತಸ್ಯುರುಪಶ್ರುತಿಮ್ ।
ಶ್ರುತ್ವಾ ಚೇಷ್ಟಂ ಸುಮನಸೋ ವ್ಯಕ್ತಮಾಶಂಸಿರೇ ಜಯಮ್ ॥ ೬೧ ॥

ಸಂಜಯ– ಹೀಗೆ ಆಶಿಸುತ್ತಿದ್ದ ಅವರಲ್ಲಿ ಕೆಲವರು ಶುಭ ಶಕುನವನ್ನು ಗಮನಿಸಿದರು. ಅಂತಹ ಶಕುನವನ್ನು ಕೇಳಿ ಪ್ರಸನ್ನಮನಸ್ಕರಾಗಿ ಅರ್ಜುನನಿಗೆ ಸ್ಪಷ್ಟವಾಗಿ ಜಯವನ್ನು ಹಾರೈಸಿದರು.

ಭವಿತಾ ನಃ ಕಥಂ ಕೃತ್ಯಮಿದಮಿತ್ಯಬ್ರುವನ್ ಜನಾಃ ॥ ೬೨ ॥

ಇಂತಹ ಕಾರ್ಯವು ಹೇಗೆ ಆಗುವುದು ಎಂದು ಜನರು ಮಾತನಾಡಿಕೊಂಡರು.

ಅಹತ್ವಾ ಸಿಂಧುರಾಜಂ ಹಿ ಧೂಮಕೇತುಂ ಪ್ರವೇಕ್ಷ್ಯತಿ ।
ನ ಶಕ್ಯಮನೃತಾಂ ಕರ್ತುಂ ಪ್ರತಿಜ್ಞಾಂ ವಿಜಯೇನ ಹಿ ।
ಮಹದ್ಧಿ ಸಾಹಸಂ ಪಾರ್ಥಃ ಕೃತವಾನ್ ಶೋಕಮೋಹಿತಃ ॥ ೬೩ ॥

ಸಿಂಧುರಾಜನನ್ನು ಕೊಲ್ಲದಿದ್ದರೆ ಅರ್ಜುನನು ಅಗ್ನಿಪ್ರವೇಶವನ್ನು ಮಾಡುವನು. ಅರ್ಜುನನು ತಾನು ಮಾಡಿದ ಪ್ರತಿಜ್ಞೆಯನ್ನು ಬದಲಾಯಿಸಲು ಸಾಧ್ಯವಿಲ್ಲ. ಶೋಕ ಮೋಹಿತನಾದ ಅರ್ಜುನನು ದೊಡ್ಡ ಸಾಹಸವನ್ನು ಮಾಡಿದ್ದಾನೆ.

ಧರ್ಮಪುತ್ರಃ ಕಥಂ ರಾಜಾ ಕರಿಷ್ಯತಿ ಸಹಾನುಗಃ ।
ಅರ್ಜುನೇ ಹಿ ಜಯಸ್ತೇಷಾಮಾಯತ್ತೋ ಜೀವಿತಾನಿ ಚ ॥ ೬೪ ॥

ರಾಜನಾದ ಯುಧಿಷ್ಠಿರನಾದರೂ ಅವನ ಪರಿವಾರದ ಜೊತೆಯಲ್ಲಿ ಏನು ಮಾಡುವನು? ಅವರ ಜಯವೂ ಮತ್ತು ಜೀವಿತವೂ ಅರ್ಜುನನನ್ನು ಅವಲಂಬಿಸಿದೆ.

ಯದಿ ನಃ ಸುಕೃತಂ ಕಿಂಚಿದ್ ಯದಿ ದತ್ತಮಥೋ ಹುತಮ್ ।
ಫಲೇನ ತಸ್ಯ ಸರ್ವಸ್ಯ ಸವ್ಯಸಾಚೀ ಜಯತ್ವರೀನ್ ॥ ೬೫ ॥

ನಾವು ಸ್ವಲ್ಪವಾದರೂ ಪುಣ್ಯಕಾರ್ಯವನ್ನು ಮಾಡಿದ್ದರೆ, ದಾನವನ್ನು ಕೊಟ್ಟಿದ್ದರೆ ಅಥವಾ ಹೋಮವನ್ನು ಮಾಡಿದ್ದರೆ ಅವೆಲ್ಲದರ ಫಲವಾಗಿ ಅರ್ಜುನನು ಶತ್ರುಗಳನ್ನು ಗೆಲ್ಲಲಿ.

ಏವಂ ಕಥಯತಾಂ ತೇಷಾಂ ಜಯಮಾಶಂಸತಾಮಪಿ ।
ಕೃಚ್ಛ್ರೇಣ ಸಾ ಮಹಾರಾಜ ರಜನೀ ಹ್ಯತ್ಯವರ್ತತ ॥ ೬೬ ॥

ಎಲೈ ಮಹಾರಾಜನೇ, ಹೀಗೆ ಮಾತನಾಡುತ್ತಾ ಅರ್ಜುನನಿಗೆ ಜಯವನ್ನು ಹಾರೈಸುವ ಅವರಿಗೆ ಆ ರಾತ್ರಿಯು ಕಷ್ಟದಿಂದ ಕಳೆಯಿತು.

ರಜನ್ಯಾಮರ್ಧಯಾಮಾಯಾಂ ಪ್ರತಿಬುದ್ಯೋ ಜನಾರ್ದನಃ ।
ಸ್ಮೃತ್ವಾ ಪ್ರತಿಜ್ಞಾಂ ಪಾರ್ಥಸ್ಯ ದಾರುಕಂ ಪ್ರತ್ಯಭಾಷತ ॥ ೬೭ ॥

ರಾತ್ರಿಯು ಅರ್ಧಯಾಮ ಕಳೆದಿರುವಾಗ ಜನಾರ್ದನನು ಎಚ್ಚರಗೊಂಡು ಅರ್ಜುನನ ಪ್ರತಿಜ್ಞೆಯನ್ನು ನೆನೆದು ದಾರುಕನನ್ನು ಕುರಿತು ಮಾತನಾಡಿದನು.

ಅರ್ಜುನೇನ ಪ್ರತಿಜ್ಞಾತಂ ಪಾರ್ಥೇನ ಹತಬಂಧುನಾ ।
ಜಯದ್ರಥಮಹಂ ಹಂತಾ ಶ್ವೋಭೂತ ಇತಿ ದಾರುಕ ॥ ೬೮ ॥

ಎಲೈ ದಾರುಕನೇ, ತನ್ನ ಪುತ್ರನನ್ನು ಕಳೆದುಕೊಂಡ ಅರ್ಜುನನು ನಾಳೆ ಜಯದ್ರಥನನ್ನು ಕೊಲ್ಲುವೆನು ಎಂದು ಪ್ರತಿಜ್ಞೆಯನ್ನು ಮಾಡಿದ್ದಾನೆ.

ತತೋ ದುರ್ಯೋಧನಃ ಶ್ರುತ್ವಾ ಮಂತ್ರಯಿಷ್ಯತಿ ಮಂತ್ರಿಭಃ ।
ಯಥಾ ಜಯದ್ರಥಂ ಪಾರ್ಥೋ ನ ಹನ್ಯಾದಿತ್ಯಸಂಶಯಮ್ ॥ ೬೯ ॥

ಆದರಿಂದ ಅದನ್ನು ಕೇಳಿದ ದುರ್ಯೋಧನನು ತನ್ನ ಮಂತ್ರಿಗಳ ಜೊತೆಯಲ್ಲಿ ಅರ್ಜುನನು ಜಯದ್ರಥನನ್ನು ಕೊಲ್ಲದಂತೆ ನಿಸ್ಸಂಶಯವಾಗಿ ಮಂತ್ರಾಲೋಚನೆಯನ್ನು ಮಾಡುತ್ತಾನೆ.

ಅಕ್ಷೋಹಿಣ್ಯಶ್ಚ ತಾಃ ಸರ್ವಾ ರಕ್ಷಿಷ್ಯಂತಿ ನ ಸಂಶಯಃ ।
ದ್ರೋಣಶ್ಚ ಸಹಪುತ್ರೇಣ ಯೇ ಚಾನ್ಯೇ ಪ್ರವರಾ ರಥಾಃ ॥ ೭೦ ॥

ಆ ಉಳಿದ ಎಲ್ಲ ಅಕ್ಷೋಹಿಣಿ ಸೈನ್ಯಗಳೂ, ಅಶ್ವತ್ಥಾಮರಿಂದ ಸಹಿತರಾದ ದ್ರೋಣರೂ ಮತ್ತು ಉಳಿದ ಶ್ರೇಷ್ಠರಾದ ರಥರೂ ಜಯದ್ರಥರನ್ನು ರಕ್ಷಿಸುವರು. ಇದರಲ್ಲಿ ಸಂಶಯವಿಲ್ಲ.

ಮಹಾವೀರ್ಯಃ ಸಹಸ್ರಾಕ್ಷೋ ದೈತ್ಯದಾನವಸಂಘಜಿತ್ ।
ನೋऽಪ್ಯೇನಂ ನೋತ್ಸಹೇದ್ ಹಂತುಂ ಸಂಖೇ ದ್ರೋಣೇನ ರಕ್ಷಿತಮ್ ॥

ದ್ರೋಣರಿಂದ ರಕ್ಷಿತನಾದ ಈ ಜಯದ್ರಥನನ್ನು ಮಹಾವೀರ್ಯಶಾಲಿಯೂ, ದೈತ್ಯ-ದಾನವಸಂಘಗಳನ್ನು ಗೆದ್ದವನೂ ಆದ ಸಹಸ್ರಾಕ್ಷನೂ (ಇಂದ್ರನು) ಕೂಡ ಯುದ್ಧದಲ್ಲಿ ಗೆಲ್ಲಲು ಸಾಧ್ಯವಾಗಲಾರದು.

ಅಹಂ ತು ಶ್ವಸ್ತಥಾ ಕರ್ತಾ ಯಥಾ ಕುಂತೀಸುತೋऽರ್ಜುನಃ ।
ಅಪ್ರಾಪ್ತೇऽಸ್ತಂ ಯಥಾऽऽದಿತ್ಯೇ ಹಂತಾ ಪಾಪಂ ಜಯದ್ರಥಮ್ ॥

ಕುಂತೀಪುತ್ರನಾದ ಅರ್ಜುನನು ನಾಳೆ ಸೂರ್ಯನು ಅಸ್ತಂಗತನಾಗುವುದರೊಳಗೆ ಪಾಪಿಯಾದ ಜಯದ್ರಥನನ್ನು ಕೊಲ್ಲುವಂತೆ ನಾನು ಮಾಡುವೆನು.

ನ ಹಿ ದಾರಾ ನ ಮಿತ್ರಾಣಿ ನ ಪುತ್ರಜ್ಞಾತಯೋऽಪಿ ವಾ ।
ನಾನ್ಯಃ ಕಶ್ಚಿತ್ ಪ್ರಿಯತರೋ ಮರ್ತ್ಯಃ ಪಾರ್ಥಾದ್ಧನಂಜಯಾತ್ ॥೭೩॥

ನನ್ನ ಪತ್ನಿಯರಾಗಲೀ, ಮಿತ್ರರಾಗಲೀ, ಪುತ್ರರಾಗಲೀ, ಜ್ಞಾತಿಗಳಾಗಲೀ, ಬೇರೆ ಯಾವ ಪ್ರಿಯತರವಾದ ಮನುಷ್ಯರಾಗಲೀ ನನಗೆ ಅರ್ಜುನನಿಗಿಂತ ಪ್ರಿಯರಾದವರು ಯಾರೂ ಇಲ್ಲ.

ವಿನಾऽರ್ಜುನಮಿಮಂ ಲೋಕಂ ಮುಹೂರ್ತಮಪಿ ದಾರುಕ ।
ನೋತ್ಸಹೇ ವೀಕ್ಷಿತುಂ ಸೂತ ಸತ್ಯಮೇವ ಬ್ರವೀಮಿ ತೇ ॥ ೭೪ ॥

ಎಲೈ ದಾರುಕನೇ, ಅರ್ಜುನನಿಲ್ಲದ ಈ ಲೋಕವನ್ನು ನಾನು ಒಂದು ಮುಹೂರ್ತದ ಕಾಲವೂ ನೋಡಲಾರೆ. ಈ ಮಾತನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ಅಹಂ ತು ಧೃಜಿನೀಃ ಸರ್ವಾಃ ಸಹಯಾಃ ಸರಥದ್ವಿಪಾಃ ।
ಅರ್ಜುನಾರ್ಥಂ ಹನಿಷ್ಯಾಮಿ ಸಕರ್ಣಾಃ ಸಸುಯೋಧನಾಃ ॥ ೭೫ ॥

ಅರ್ಜುನನ ಸಲುವಾಗಿ ನಾನು ಕರ್ಣ-ಸುಯೋಧನರಿಂದಲೂ, ಅಶ್ವ-ರಥ-ಗಜಗಳಿಂದಲೂ ಸಹಿತವಾದ ಎಲ್ಲಸೈನ್ಯವನ್ನೂ ಕೊಲ್ಲುವೆನು.

ಶ್ವೋ ನಿರೀಕ್ಷಂತು ಮೇ ವೀರ್ಯಂ ತ್ರಯೋ ಲೋಕಾ ಮಹಾಹವೇ ।
ಧನಂಜಯಾರ್ಥಂ ಸಮರೇ ಪರಾಕ್ರಾಂತಸ್ಯ ದಾರುಕ ॥ ೭೬ ॥

ಎಲೈ ದಾರುಕನೇ, ಅರ್ಜುನನ ಸಲುವಾಗಿ ಯುದ್ಧದಲ್ಲಿ ಪರಾಕ್ರಮವನ್ನು ತೋರಿಸುವ ನನ್ನ ಮಹಾಯುದ್ಧದ ಸಾಮರ್ಥ್ಯವನ್ನು ನಾಳೆಯ ದಿವಸ ಮೂರು ಲೋಕಗಳೂ ನೋಡಲಿ.

ಶ್ವೋ ನರೇಂದ್ರಸಹಸ್ರಾಣಿ ರಾಜಪುತ್ರಶತಾನಿ ಚ ।
ಸಾಶ್ವದ್ವಿಪರಥಾನ್ಯಾಜೌ ವಿದ್ರವಿಷ್ಯಂತಿ ದಾರುಕ ॥ ೭೭ ॥

ಎಲೈ ದಾರುಕನೇ, ನಾಳೆಯ ದಿವಸ ಸಹಸ್ರ ರಾಜರೂ, ನೂರಾರು ರಾಜಕುಮಾರರೂ ತಮ್ಮ ಅಶ್ವ-ಗಜ-ರಥಗಳ ಜೊತೆಯಲ್ಲಿ ಯುದ್ಧದಲ್ಲಿ ಓಡಿ ಹೋಗುವರು.

ಶ್ವಸ್ತಾಂ ಚಕ್ರಪ್ರಮಥಿತಾಂ ದ್ರಕ್ಷ್ಯಸಿ ನೃಪವಾಹಿನೀಮ್ ।
ಮಯಾ ಕ್ರುದ್ಧೇನ ಸಮರೇ ಪಾಂಡವಾರ್ಥೇ ನಿಪಾತಿತಾಮ್ ॥ ೭೮ ॥

ಪಾಂಡವರ ಸಲುವಾಗಿ ಕೋಪಗೊಂಡ ನಾನು ಯುದ್ಧದಲ್ಲಿ ನನ್ನ ಚಕ್ರದಿಂದ ಹೊಡೆದು ಉರುಳಿಸಿದ ದುರ್ಯೋಧನನ ಸೈನ್ಯವನ್ನು ನಾಳೆ ನೋಡುವಿ.

ಅದ್ಯ ಜ್ಞಾಸ್ಯಂತಿ ತ್ರಿದಶಾಃ ಸಾಸುರಾಃ ಸಚರಾಚರಾಃ ।
ವಾಸುದೇವಸ್ಯ ತಾಂ ಪ್ರೀತಿಂ ಪಾಂಡವೇಷ್ವನಪಾಯಿನೀಮ್ ॥ ೬೯ ॥

ಈ ದಿನ ದೇವತೆಗಳು, ಅಸುರರು, ಚರಾಚರ ಜಗತ್ತೂ ಸಹ ಕೃಷ್ಣನಿಗೆ ಅರ್ಜುನನಲ್ಲಿರುವ, ಎಂದೂ ವಿನಾಶವನ್ನು ಹೊಂದದ ಪ್ರೀತಿಯನ್ನು ತಿಳಿಯುವರು.

ಯಸ್ತಾನ್ ದ್ವೇಷ್ಟಿ ಸ ಮಾಂ ದ್ವೇಷ್ಟಿ ಯಸ್ತಾನನು ಸ ಮಾಮನು ।
ಇತಿ ಸಂಕಲ್ಪ್ಯತಾಂ ಬುದ್ಧ್ಯಾ ಶರೀರಾರ್ಧಂ ಮಮಾರ್ಜುನಃ ॥ ೮೦ ॥

ಯಾವನು ಪಾಂಡವರನ್ನು ದ್ವೇಷಿಸುತ್ತಾನೆಯೋ ಅವನು ನನ್ನನ್ನು ದ್ವೇಷಿಸುತ್ತಾನೆ. ಯಾವನು ಅವನಿಗೆ ಅನುಕೂಲನಾಗಿದ್ದಾನೆಯೋ, ಅವನು ನನಗೂ ಅನುಕೂಲನಾದವನು ಎಂದು ಬುದ್ಧಿಯಿಂದ ತಿಳಿಯುವವನಾಗು. ಅರ್ಜುನನು ನನ್ನ ಅರ್ಧ ಶರೀರನಾದವನು.

ಯಥಾ ತು ತ್ವಂ ಪ್ರಭಾತಾಯಾಮಸ್ಯಾಂ ನಿಶಿ ರಥೋತ್ತಮಮ್ ।
ಕಲ್ಪಯಿತ್ವಾ ಸಮೀಪಂ ಮೇ ಆಗಚ್ಛಸಿ ತಥಾ ಕುರು ॥ ೮೧ ॥

ಈ ರಾತ್ರಿ ಕಳೆದು ಬೆಳಗಾಗುವ ವೇಳೆಗೆ ನೀನು ನನ್ನ ಶ್ರೇಷ್ಠವಾದ ರಥವನ್ನು ಚೆನ್ನಾಗಿ ಸಜ್ಜುಗೊಳಿಸಿ, ನನ್ನ ಬಳಿಗೆ ಬರುವಂತೆ ವ್ಯವಸ್ಥೆ ಮಾಡುವವನಾಗು.

ಗದಾಂ ಕೌಮೋದಕೀಂ ದಿವ್ಯಾಂ ಶಕ್ತಿಂ ಚಕ್ರಂ ಧನುಃಶರಾನ್ ।
ಆರೋಪಯ ರಥೇ ಸೂತ ಸರ್ವೋಪಕರಣಾನಿ ಚ ॥ ೮೨ ॥

ಎಲೈ ಸೂತನೇ, ರಥದಲ್ಲಿ ಕೌಮೋದಕೀ ಗದೆಯನ್ನೂ, ಶಕ್ತ್ಯಾಯುಧವನ್ನೂ, ಸುದರ್ಶನ ಚಕ್ರವನ್ನೂ, ಶಾರ್ಙ್ಗಧನುಸ್ಸು ಮತ್ತು ಬಾಣಗಳನ್ನೂ ಮತ್ತು ಎಲ್ಲ ಉಪಕರಣಗಳನ್ನೂ ಇಡುವವನಾಗು.

ಸ್ಥಾನಂ ಚ ಕಲ್ಪ್ಯತಾಂ ತತ್ರ ರಥೋಪಸ್ಥೇ ಧ್ವಜಸ್ಯ ಮೇ ।
ವೈನತೇಯಸ್ಯ ವೀರಸ್ಯ ಸಮರೇಷ್ವಭಿಶೋಭಿನಃ ॥ ೮೩ ॥

ಆ ನನ್ನ ರಥದಲ್ಲಿಯುದ್ಧದಲ್ಲಿ ಶೋಭಿಸುವ ವೀರನಾದ ಗರುಡನ ಧ್ವಜಕ್ಕೆ ಒಂದು ಸ್ಥಾನವನ್ನು ಕಲ್ಪಿಸುವವನಾಗು.

ಛನ್ನಾನ್ ಜಾಂಬೂನದೈರ್ಮಾಲ್ಯೈರ್ಕಡ್ವಲನಸನ್ನಿಭೈಃ ।
ವಿಶ್ವಕರ್ಮಕೃತೈರ್ದಿವ್ಯೈರಶ್ವಾನಪಿ ಚ ಭೂಷಯ ॥ ೮೪ ॥

ನನ್ನ ಅಶ್ವಗಳನ್ನೂ ಸಹ ವಿಶ್ವಕರ್ಮ ನಿರ್ಮಿತವಾದ, ಸೂರ್ಯಪ್ರಕಾಶವನ್ನು ಹೊಂದಿದ, ದಿವ್ಯವಾದ, ಸುವರ್ಣಮಯವಾದ ಮಾಲೆಗಳಿಂದ ಅಲಂಕರಿಸು.

ಬಲಾಹಕಂ ಮೇಘಪುಷ್ಪಂ ಸೈನ್ಯಂ ಸುಗ್ರೀವಮೇವ ಚ ।
ಯುಕ್ತ್ವಾ ವಾಜಿವರಾಂಸ್ತ್ವತ್ರ ಕವಚೀ ತಿಷ್ಠ ದಾರುಕ ॥ ೮೫ ॥

ಎಲೈ ದಾರುಕನೇ, ನನ್ನ ಶ್ರೇಷ್ಠ ಅಶ್ವಗಳಾದ ಸೈನ್ಯ-ಸುಗ್ರೀವ-ಮೇಘಪುಷ್ಪ-ಬಲಾಹಕಗಳನ್ನು ರಥದಲ್ಲಿ ಹೂಡಿ, ಕವಚವನ್ನು ಧರಿಸಿ ಸಿದ್ಧನಾಗಿರು.

ಪಾಂಚಜನ್ಯಸ್ಯ ನಿರ್ಘೋಷಂ ಪರ್ಜನ್ಯನಿನದೋಪಮಮ್ ।
ಶ್ರುತ್ವಾ ಭೈರವಮತ್ಯರ್ಥಂ ಜವೇನೈವೋಪಯಾಹಿ ಮಾಮ್ ॥ ೮೬ ॥

ಪರ್ಜನ್ಯ ಘೋಷದಂತಿರುವ, ಭಯಂಕರವಾದ ಪಾಂಚಜನ್ಯದ ಘೋಷವನ್ನು ಕೇಳಿ ಶೀಘ್ರವಾಗಿ ನನ್ನ ಸಮೀಪಕ್ಕೆ ಬಾ.

ಶ್ಚ ಸದೇವಾಃ ಸಗಂಧರ್ವಾಃ ಸತ್ಯ ಕ್ಷಾಪ್ಸರಸೋಽಸುರಾಃ ।
ಜ್ಞಾಸ್ಯಂತಿ ಲೋಕಾಃ ಸರ್ವೇ ಮಾಂ ಸುಹೃದಂ ಸವ್ಯಸಾಚಿನಃ ॥ ೮೭ ॥

ನಾಳೆಯ ದಿವಸ ದೇವತೆಗಳಿಂದಲೂ, ಗಂಧರ್ವರಿಂದಲೂ, ರುದ್ರ-ಅಪ್ಸರೆಯರು ಮತ್ತು ಅಸುರರಿಂದಲೂ ಸಹಿತವಾದ ಜನರು ನಾನು ಅರ್ಜುನನಿಗೆ ಬಹಳ ಪ್ರಿಯನಾದವನು ಎಂದು ತಿಳಿಯುವರು.

ಏಕಾಹ್ನಾऽಹಮಮರ್ಷಾಚ್ಚ ಸರ್ವದುಃಖಾನಿ ಚಾಭಿಭೋ ।
ಭ್ರಾತುಃ ಪೈತೃಷ್ವಸೇಯಸ್ಯ ವ್ಯಪನೇಷ್ಯಾಮಿ ದಾರುಕ ॥ ೮೮ ॥

ಎಲೈ ಶತ್ರು ಸಂಹಾರಕನಾದ ದಾರುಕನೇ, ನಾನು ಒಂದೇ ದಿವಸದಲ್ಲಿ ಕೋಪದಿಂದ ಕೂಡಿದವನಾಗಿ, ನನ್ನ ಸೋದರತ್ತೆಯ ಮಗನಾದ ಅರ್ಜುನನ ಅಣ್ಣನಿಗೆ ಒದಗಿರುವ ಎಲ್ಲ ದುಃಖಗಳನ್ನೂ ಪರಿಹಾರ ಮಾಡುವೆನು.

ಸರ್ವೋಪಾಯೈರ್ಯತಿಷ್ಯಾಮಿ ಯಥಾ ಬೀಭತ್ಸುರಾಹವೇ ।
ಪಶ್ಯತಾಂ ಧಾರ್ತರಾಷ್ಟ್ರಾಣಾಂ ಹನಿಷ್ಯತಿ ಜಯದ್ರಥಮ್ ॥ ೮೯ ॥

ಧೃತರಾಷ್ಟ್ರನ ಪುತ್ರರು ನೋಡುತ್ತಿರುವಂತೆಯೇ ಅರ್ಜುನನು ಯುದ್ಧದಲ್ಲಿ ಜಯದ್ರಥನನ್ನು ಕೊಲ್ಲುವಂತೆ ಎಲ್ಲ ಉಪಾಯಗಳಿಂದಲೂ ಪ್ರಯತ್ನ ಪಡುವೆನು.

ಯಸ್ಯ ಯಸ್ಯ ಚ ಬೀಭತ್ಸುರ್ವಧೇ ಯತ್ನಂ ಕರಿಷ್ಯತಿ ।
ಆಶಂಸೇ ಸ ರಣೇ ತಂ ತಂ ತತ್ರ ತತ್ರ ಹನಿಷ್ಯತಿ ॥ ೯೦ ॥

ಅರ್ಜುನನು ಯಾರ ಯಾರ ವಧೆಯಲ್ಲಿ ಪ್ರಯತ್ನ ಮಾಡುವನೋ, ಯುದ್ಧದಲ್ಲಿ ಅವರವರನ್ನು ಕೊಲ್ಲುವನು ಎಂದು ನಾನು ಹಾರೈಸುತ್ತೇನೆ.

ದಾರುಕಃ

ಧ್ರುವ ಏವ ಜಯಸ್ತಸ್ಯ ನ ತಸ್ಯಾಸ್ತಿ ಪರಾಜಯಃ ।
ಯಸ್ಯ ತ್ವಂ ಪುರುಷವ್ಯಾಘ್ರ ಸಾರಥ್ಯಮುಪಜಗ್ಮಿವಾನ್ ॥ ೯೧ ॥

ದಾರುಕ– ಎಲೈ ಪುರುಷವ್ಯಾಘ್ರನೇ, ಯಾರಿಗೆ ನೀನು ಸಾರಥ್ಯವನ್ನು ವಹಿಸಿದ್ದೀಯೋ ಅಂತಹ ವ್ಯಕ್ತಿಗೆ ಜಯವೇ ನಿಶ್ಚಿತವಾದುದು. ಅವನಿಗೆ ಎಂದೂ ಪರಾಭವವಿಲ್ಲ.

ಕೃಷ್ಣಃ

ಏವಂ ಚೈತತ್ ಕರಿಷ್ಯಾಮಿ ಯಥಾ ಮಾಮನುಭಾಷಸೇ ।
ಸುಪ್ರಭಾತಮಿಮಾಂ ರಾತ್ರಿಂ ಜಯಾರ್ಥಂ ವಿಜಯಸ್ಯ ಚ ॥ ೯೨ ॥

ಕೃಷ್ಣ– ಈ ರಾತ್ರಿಯು ಕಳೆದು ಸುಪ್ರಭಾತವಾದ ಮೇಲೆ ಅರ್ಜುನನ ಜಯಕ್ಕಾಗಿ ನೀನು ನನಗೆ ಹೇಳುತ್ತಿರುವಂತೆಯೇ ನಾನು ಮಾಡುವೆನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಸಪ್ತತಿತಮೋಽಧ್ಯಾಯಃ ॥

॥ ಪ್ರತಿಜ್ಞಾಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ನಾಲ್ಕನೆಯ ಅಧ್ಯಾಯ

ಸ್ವಪ್ನದಲ್ಲಿ ಕೃಷ್ಣನು ಅರ್ಜುನನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಿ ಶಿವನಿಂದ ಪಾಶುಪತಾಸ್ತ್ರವನ್ನು ಕೊಡಿಸುವುದು.

ಸಂಜಯಃ

ಧಾರ್ತರಾಷ್ಟ್ರಸ್ಯ ತಂ ಮಂತ್ರಂ ಸ್ಮರನ್ನೇವ ಧನಂಜಯಃ ।
ಪ್ರತಿಜ್ಞಾಮಾತ್ಮನೋ ರಕ್ಷನ್ ಮುಮೋಹಾಚಿಂತ್ಯವಿಕ್ರಮಃ ॥ ೧ ॥

ಸಂಜಯ– ಅಚಿಂತ್ಯವಿಕ್ರಮನಾದ ಅರ್ಜುನನು ದುರ್ಯೋಧನನ ಮಂತ್ರಾಲೋಚನೆಯನ್ನು ಸ್ಮರಿಸುತ್ತಾ ತನ್ನ ಪ್ರತಿಜ್ಞೆಯನ್ನು ರಕ್ಷಿಸುವ ಸಲುವಾಗಿ ಮೋಹಕ್ಕೆ ಒಳಗಾದನು.

ತಂ ತು ಶೋಕೇನ ಸಂತಪ್ತಂ ಸ್ವಪ್ನೇ ಕಪಿವರಧ್ವಜಮ್ ।
ಆಸಸಾದ ಮಹಾತೇಜಾ ಜ್ವಲನ್ ವೈ ಗರುಡಧ್ವಜಃ ॥ ೨ ॥

ಶೋಕಕ್ಕೆ ಸಂತಪ್ತನಾದ, ಕಪಿವರಧ್ವಜನಾದ ಅರ್ಜುನನನ್ನು ಮಹಾತೇಜಸ್ಸಿನಿಂದ ಜ್ವಲಿಸುವ ಗರುಡಧ್ವಜನಾದ ಕೃಷ್ಣನು ಸ್ವಪ್ನದಲ್ಲಿ ಸಮೀಪಿಸಿದನು.

ಪ್ರತ್ಯುತ್ಥಾನಂ ತು ಕೃಷ್ಣಸ್ಯ ಸರ್ವಾವಸ್ಥಾಸು ಫಲ್ಗುನಃ ।
ನ ಲೋಪಯತಿ ಧರ್ಮಾತ್ಮಾ ಭಕ್ತ್ಯಾ ಪ್ರೇಮ್ಣಾ ಚ ನಿತ್ಯಶಃ ॥ ೩ ॥

ಧರ್ಮಾತ್ಮನಾದ ಅರ್ಜುನನು ತನ್ನ ಭಕ್ತಿಯಿಂದಲೂ ಮತ್ತು ಪ್ರೇಮದಿಂದಲೂ ಯಾವ ಅವಸ್ಥೆಯಲ್ಲಿಯೂ ಕೃಷ್ಣನನ್ನು ಕಂಡು ಎದ್ದು ನಿಲ್ಲುವುದನ್ನಾಗಲೀ ಅಥವಾ ನಮಸ್ಕಾರ ಮಾಡುವುದನ್ನಾಗಲೀ ಲೋಪಗೊಳಿಸುವುದಿಲ್ಲ.

ಪ್ರತ್ಯುತ್ಥಾಯ ಸ ಗೋವಿಂದಂ ಸ್ವಂ ತಸ್ಮೈ ಚಾಸನಂ ದದೌ ।
ನಾಸನೇ ಚ ತಥಾ ಬುದ್ಧಿಂ ಬೀಭತ್ಸುರ್ವ್ಯದಧಾತ್ ಸ್ವಯಮ್ ॥ ೪ ॥

ಅವನು ಎದ್ದುನಿಂತು ಗೋವಿಂದನಿಗೆ ತನ್ನ ಆಸನವನ್ನು ನೀಡಿದನು. ಅರ್ಜುನನು ತಾನು ಕುಳಿತುಕೊಳ್ಳುವ ಬುದ್ಧಿಯನ್ನು ಮಾಡಲಿಲ್ಲ.

ತತಃ ಕೃಷ್ಣೋ ಮಹಾತೇಜಾ ಜಾನನ್ ಲೋಕಸ್ಯ ನಿಶ್ಚಯಮ್ ।
ಕುಂತೀಪುತ್ರಮಿದಂ ವಾಕ್ಯಮಾಸೀನಃ ಸ್ಥಿತಮಬ್ರವೀತ್ ॥ ೫ ॥

ಆಗ ಮಹಾತೇಜಸ್ವಿಯಾದ ಕೃಷ್ಣನು ಆಸನದಲ್ಲಿ ಕುಳಿತು, ಎಲ್ಲರ ಮನಸ್ಸಿನ ಅಭಿಪ್ರಾಯವನ್ನು ತಿಳಿದಿದ್ದರೂ ನಿಂತಿದ್ದ ಕುಂತೀಪುತ್ರನನ್ನು ಕುರಿತು ಮಾತನಾಡಿದನು.

ಮಾ ವಿಷಾದೇ ಮನಃ ಪಾರ್ಥ ಕೃಷ್ಣಾಃ ಕಾಲೋ ಹಿ ದುರ್ಜಯಃ ।
ಕಾಲಃ ಸರ್ವಾಣಿ ಭೂತಾನಿ ನಿಯಚ್ಛತಿ ಭವಾಭವೇ ॥ ೬ ॥

ಎಲೈ ಪಾರ್ಥನೇ, ಮನಸ್ಸಿನಲ್ಲಿ ವಿಷಾದವನ್ನು ಹೊಂದಬೇಡ. ಕಾಲವನ್ನು ಯಾರೂ ಜಯಿಸಲಾರರು. ಕಾಲವು ಎಲ್ಲ ಪ್ರಾಣಿಗಳನ್ನೂ, ಸಂಪತ್ತು ಮತ್ತು ವಿಪತ್ತುಗಳನ್ನೂ ನಿಯಂತ್ರಿಸುತ್ತದೆ.

ಕಿಮರ್ಥಂ ಚ ವಿಷಾದಸ್ತೇ ತದ್ ಬ್ರೂಹಿ ದ್ವಿಪದಾಂ ವರ ।
ನ ಶೋಚ್ಯಂ ವಿದುಷಾಂ ಶ್ರೇಷ್ಠ ಶೋಕಃ ಕಾರ್ಯವಿನಾಶನಃ ॥ ೭ ॥

ಎಲೈ ನರಶ್ರೇಷ್ಠನೇ, ನಿನ್ನ ವಿಷಾದಕ್ಕೆ ಕಾರಣವೇನು ಎಂದು ನನಗೆ ಹೇಳು. ವಿದ್ವಾಂಸರಲ್ಲಿ ಶ್ರೇಷ್ಠನಾದವನೇ, ಶೋಕ ಮಾಡಬಾರದು. ಶೋಕವು ಕಾರ್ಯವನ್ನು ನಾಶ ಮಾಡುತ್ತದೆ.

ಶೋಚನ್ ನಂದಯತೇ ಶತ್ರೂನ್ ಕರ್ಶಯತ್ಯಪಿ ಬಾಂಧವಾನ್ ।
ಯಸ್ತು ಕಾರ್ಯೋ ಭವೇತ್ ಕಾರ್ಯಃ ಕರ್ಮಣಾ ತತ್ ಸಮಾಚರ ।
ಹೀನಚೇಷ್ಟಸ್ಯ ಯಃ ಶೋಕಃ ಸ ಹಿ ಶತ್ರುರ್ಧನಂಜಯ ।
ಕ್ಷೀಯತೇ ಚ ನರಸ್ತಸ್ಮಾನ್ನ ತ್ವಂ ಶೋಚಿತುಮರ್ಹಸಿ ॥ ೮ ॥

ಶೋಕ ಪಡುವವನು ಶತ್ರುಗಳಿಗೆ ಸಂತೋಷವನ್ನುಂಟು ಮಾಡುತ್ತಾನೆ. ಬಾಂಧವರನ್ನು ಕ್ಲೇಶಗೊಳಿಸುತ್ತಾನೆ. ಯಾವ ಕಾರ್ಯವನ್ನು ಮಾಡಬೇಕಾಗಿದೆಯೋ ಅದನ್ನು ಕೃತಿಯಿಂದ ಮಾಡುವವನಾಗು. ಎಲೈ ಧನಂಜಯನೇ, ಯಾವ ಕಾರ್ಯವನ್ನೂ ಮಾಡದೆ ಪಡುವ ಶೋಕವೇ ಶತ್ರುವಷ್ಟೆ? ಆದರಿಂದ ಮನುಷ್ಯನು ವಿನಾಶವನ್ನು ಹೊಂದುತ್ತಾನೆ. ಆದ್ದರಿಂದ ನೀನು ಶೋಕ ಪಡಬೇಡ.

ಸಂಜಯಃ

ತಥೋಕ್ತೋ ವಾಸುದೇವೇನ ಬೀಭತ್ಸುರಪರಾಜಿತಃ ।
ಬಭಾಷೇ ಹಿ ತದಾ ವಿದ್ವಾನ್ ಇದಂ ವಚನಮರ್ಥವತ್ ॥ ೯ ॥

ಸಂಜಯ– ಕೃಷ್ಣನಿಂದ ಹೀಗೆ ಹೇಳಲ್ಪಟ್ಟ ಅಪರಾಜಿತನೂ, ವಿದ್ವಾಂಸನೂ ಆದ ಅರ್ಜುನನು ಆಗ ಕೃಷ್ಣನನ್ನು ಕುರಿತು ಅರ್ಥವತ್ತಾದ ಈ ಮಾತುಗಳನ್ನು ಆಡಿದನು.

ಮಯಾ ಪ್ರತಿಜ್ಞಾ ಮಹತೀ ಜಯದ್ರಥವಧೇ ಕೃತಾ ।
ಶ್ವೋ ಹಂತಾಸ್ಮಿ ದುರಾತ್ಮಾನಂ ಪುತ್ರಘ್ನಮಿತಿ ಕೇಶವ ॥ ೧೦ ॥

ಕೇಶವನೇ, ನಾನು ಜಯದ್ರಥನ ವಧೆಯ ವಿಷಯದಲ್ಲಿ ದುರಾತ್ಮನೂ, ನನ್ನ ಪುತ್ರಹಂತಕನೂ ಆದ ಅವನನ್ನು ನಾಳೆ ಕೊಲ್ಲುವೆನು ಎಂದು ದೊಡ್ಡ ಪ್ರತಿಜ್ಞೆಯನ್ನು ಮಾಡಿದ್ದೇನೆ.

ಮತ್ಪ್ರತಿಜ್ಞಾವಿಘಾತಾರ್ಥಂ ಧಾರ್ತರಾಷ್ಟ್ರೈಃ ಕಿಲಾಚ್ಯುತ ।
ಪೃಷ್ಠತಃ ಸೈಂಧವಃ ಕಾರ್ಯಃ ಸರ್ವೈರ್ಗುಪ್ತೋ ಮಹಾರಥೈಃ ॥ ೧೧ ॥

ಎಲೈ ಅಚ್ಯುತನೇ, ನನ್ನ ಪ್ರತಿಜ್ಞೆಯನ್ನು ಭಂಗಗೊಳಿಸಲು ದುರ್ಯೋಧನಾದಿಗಳು ಎಲ್ಲ ಮಹಾರಥರಿಂದಲೂ ರಕ್ಷಿಸಲ್ಪಟ್ಟ ಸೈಂಧವನನ್ನು ಸೈನ್ಯದ ಹಿಂಭಾಗದಲ್ಲಿ ನಿಲ್ಲಿಸುತ್ತಾರೆ.

ದಶ ಚೈಕಾ ತಥಾ ಕೃಷ್ಣ ಅಕ್ಷೋಹಿಣ್ಯಃ ಸುದುರ್ಜಯಾಃ ।
ಹತಾವಶೇಷಾಸ್ತತ್ರೇಮಾ ದಶಮಾಶ್ಚೈವ ಸಂಖ್ಯಿಯಾ ॥ ೧೨ ॥

ತಾಭಿಃ ಪರಿವೃತಃ ಸಂಖೇ ಸರ್ವೈಶ್ಚೈವ ಮಹಾರಥೈಃ ।
ಕಥಂ ಶಕ್ಯೇತ ಸಂದ್ರಷ್ಟುಂ ದುರಾತ್ಮಾ ಕೃಷ್ಣ ಸೈಂಧವಃ ॥ ೧೩ ॥

ಪ್ರತಿಜ್ಞಾಪಾರಣಂ ಚಾಪಿ ನ ಭವಿಷ್ಯತಿ ಕೇಶವ ।
ಪ್ರತಿಜ್ಞಾಯಾಂ ಚ ಹೀನಾಯಾಂ ಕಥಂ ಜೀವೇತ ಮದ್ವಿಧಃ ॥ ೧೪ ॥

ಎಲೈ ಕೃಷ್ಣನೇ, ಅವರ ಒಟ್ಟು ಸೈನ್ಯ ಹನ್ನೊಂದು ಅಕ್ಷೋಹಿಣಿ ಸಂಖ್ಯಾಕವಾದುದು. ಅದರ ಹತ್ತನೆಯ ಒಂದು ಭಾಗದಷ್ಟು ಸೈನ್ಯವು ಈಗ ಉಳಿದಿದೆ. ಎಲೈ ಕೃಷ್ಣನೇ, ಆ

ಮಹಾರಥರೆಲ್ಲರಿಂದಲೂ ರಕ್ಷಿಸಲ್ಪಟ್ಟರೆ ದುರಾತ್ಮನಾದ ಸೈಂಧವನು ನೋಡಲಾದರೂ ಹೇಗೆ ಸಾಧ್ಯ ? ಎಲೈ ಕೇಶವನೇ, ಆಗ ನನ್ನ ಪ್ರತಿಜ್ಞೆಯನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಪ್ರತಿಜ್ಞೆಯು ಭಗ್ನವಾದರೆ ನನ್ನಂತಹವನು ಹೇಗೆ ಜೀವಿಸಲು ಸಾಧ್ಯ ?

ದುಃಖಾಪಾಯಸ್ಯ ಮೇ ವೀರ ವಿಕಾಂಕ್ಷಾ ಪರಿವರ್ತತೇ ।
ದ್ರುತಂ ಚ ಯಾತಿ ಸವಿತಾ ತತ ಏತದ್ ಬ್ರವೀಮ್ಯಹಮ್ ॥ ೧೫ ॥

ಎಲೈ ವೀರನೇ, ದುಃಖ ಪರಿಹಾರಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ನನ್ನ ಆಸೆಯಿದೆ. ಸೂರ್ಯನಾದರೂ ಬೇಗ ಬೇಗ ಹೋಗುತ್ತಿದ್ದಾನೆ. ಆದ್ದರಿಂದ ನಿನಗೆ ಈ ವಿಷಯವನ್ನು ಹೇಳುತ್ತಿದ್ದೇನೆ.

ಸಂಜಯಃ

ಶೋಕಸ್ಥಾನಂ ತು ತದ್ ಬುದ್ಧ್ವಾ ಪಾರ್ಥಸ್ಯ ದ್ವಿಜಕೇತನಃ ।
ಸಂಸ್ಪೃಶ್ಯಾಂಭಸ್ತತಃ ಕೃಷ್ಣಃ ಪ್ರಾಙ್ಮುಖಃ ಸಮವಸ್ಥಿತಃ ॥ ೧೬ ॥

ಸಂಜಯ– ಗರುಡಧ್ವಜನಾದ ಕೃಷ್ಣನು ಅರ್ಜುನನ ಶೋಕಕಾರಣವನ್ನು ತಿಳಿದು, ಹಸ್ತಪಾದಗಳನ್ನು ತೊಳೆದು ಪೂರ್ವಾಭಿಮುಖವಾಗಿ ಕುಳಿತುಕೊಂಡನು.

ಇದಂ ವಾಕ್ಯಂ ಮಹಾತೇಜಾ ಬಭಾಷೇ ಪುಷ್ಕರೇಕ್ಷಣಃ ।
ಹಿತಾರ್ಥಂ ಪಾಂಡುಪುತ್ರಸ್ಯ ಸೈಂಧವಸ್ಯ ವಧೇ ಧೃತಃ ॥ ೧೭ ॥

ಪುಷ್ಕರಾಕ್ಷನೂ, ಮಹಾತೇಜಸ್ವಿಯೂ ಆದ ಅವನು ಸೈಂಧವನ ವಧೆಯನ್ನು ನಿರ್ಧರಿಸಿ, ಪಾಂಡುಪುತ್ರನ ಹಿತವನ್ನು ಉದ್ದೇಶಿಸಿ ಈ ಮಾತನ್ನು ಆಡಿದನು.

ಪಾರ್ಥ ಪಾಶುಪತಂ ನಾಮ ಮಹಾಸ್ತ್ರಂ ತತ್ ಸನಾತನಮ್ ।
ಯೇನ ದೈತ್ಯಾ ಮೃಧೇ ಸರ್ವೇ ನಿಹತಾಃ ಶೂಲಪಾಣಿನಾ ।
ಯದಿ ತದ್ ವಿದಿತಂ ತೇಽದ್ಯ ಶ್ವೋ ಹಂತಾಸಿ ಜಯದ್ರಥಮ್ ॥೧೮॥

ಎಲೈ ಪಾರ್ಥನೇ, ಪಾಶುಪತವೆಂಬ ಸನಾತನವಾದ ಮಹಾಸ್ತ್ರವಿದೆ. ಆದರಿಂದ ಶೂಲಪಾಣಿಯಾದ ಶಿವನು ಯುದ್ಧದಲ್ಲಿ ಎಲ್ಲ ದೈತ್ಯರನ್ನೂ ಸಂಹರಿಸಿದನು. ನಿನಗೆ ಈ ದಿನ ಆದು ತಿಳಿದಿದ್ದರೆ ನಾಳೆ ನೀನು ಜಯದ್ರಥನನ್ನು ಕೊಲ್ಲುವಿ.

ಅಥ ಜ್ಞಾತುಂ ಪ್ರಪದ್ಯಸ್ವ ಮನಸಾ ವೃಷಭಧ್ವಜಮ್ ।
ತಂ ದೇವಂ ಮನಸಾ ಧ್ಯಾಯನ್ ಜೋಷಮಾಸ್ಸ್ವ ಧನಂಜಯ ॥೧೯॥

ತತಸ್ತಸ್ಯ ಪ್ರಸಾದಾತ್ ತ್ವಂ ಭಕ್ತ್ಯಾ ಪ್ರಾಪ್ಸ್ಯಸಿ ತನ್ಮಹತ್ ॥ ೨೦ ॥

ಅದನ್ನು ತಿಳಿದುಕೊಳ್ಳಲು (ಪಡೆಯಲು) ಮನಸ್ಸಿನಿಂದಲೇ ವೃಷಭಧ್ವಜನಾದ ಶಿವನಿಗೆ ಶರಣಾಗತನಾಗು. ಎಲೈ ಧನಂಜಯನೇ, ಆ ದೇವನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಮೌನವಾಗಿ ಕುಳಿತುಕೊ. ಆಗ ನಿನ್ನ ಭಕ್ತಿಗೆ ಮೆಚ್ಚಿ ಅವನ ಅನುಗ್ರಹದಿಂದ ಆ ದೊಡ್ಡ ಅಸ್ತ್ರವನ್ನು ಪಡೆಯುವಿ.

ಸಂಜಯಃ

ತತಃ ಕೃಷ್ಣವಚಃ ಶ್ರುತ್ವಾ ಸಂಸ್ಪೃಶ್ಯಾಂಭೋ ಧನಂಜಯಃ ।
ಭೂಮಾವಾಸೀತ್ ಸಮಾಪನ್ನೋ ಜಗಾಮ ಮನಸಾ ಶಿವಮ್ ॥ ೨೧ ॥

ಸಂಜಯ– ಆಗ ಕೃಷ್ಣನ ಮಾತನ್ನು ಕೇಳಿ ಅರ್ಜುನನು ಹಸ್ತ-ಪಾದಗಳನ್ನು ತೊಳೆದು ನೆಲದ ಮೇಲೆ ಕುಳಿತು ಮನಸ್ಸಿನಲ್ಲಿಯೇ ಶಿವನನ್ನು ಧ್ಯಾನ ಮಾಡಿದನು.

ತತಃ ಪ್ರಣಿಹಿತೇ ಬ್ರಾಹ್ಮೇ ಮುಹೂರ್ತೇ ಶುಭಲಕ್ಷಣೇ ।
ಆತ್ಮಾನಮರ್ಜುನೋಽಪಶ್ಯದ್ ಗಗನೇ ಸಹಕೇಶವಮ್ ।
ಜ್ಯೋತಿರ್ಭಿಶ್ಚ ಸಮಾಕೀರ್ಣಂ ಸಿದ್ಧಗಂಧರ್ವಸೇವಿತಮ್ ॥ ೨೨ ॥

ಅವನು ಹಾಗೆ ಧ್ಯಾನ ಮಾಡುತ್ತಿರಲು ಶುಭಲಕ್ಷಣವುಳ್ಳ ಬ್ರಾಹ್ಮೀ ಮುಹೂರ್ತದಲ್ಲಿ ಅರ್ಜುನನು ತಾನು ಕೇಶವನ ಜೊತೆಯಲ್ಲಿ ಆಕಾಶದಲ್ಲಿರುವುದನ್ನೂ, ಜ್ಯೋತಿಃಪುಂಜಗಳಿಂದ ಸುತ್ತುವರಿಯಲ್ಪಟ್ಟಿರುವುದನ್ನೂ, ಸಿದ್ಧ-ಗಂಧರ್ವರಿಂದ ಪೂಜಿಸಲ್ಪಡುತ್ತಿರುವುದನ್ನೂ ನೋಡಿದನು.

ವಾಯುವೇಗಗತಿಃ ಪಾರ್ಥಃ ಖಂ ಭೇಜೇ ಸಹಮಾಧವಃ ॥ ೨೩ ॥

ಕೇಶವೇನ ಗೃಹೀತಃ ಸ ದಕ್ಷಿಣೇ ವಿಭುನಾ ಭುಜೇ ।
ಪ್ರೇಕ್ಷಮಾಣೋ ಬಹೂನ್ ಭಾವಾನ್ ಜಗಾಮಾದ್ಭುತದರ್ಶನಾನ್ ।
ಉದೀಚ್ಯಾಂ ದಿಶಿ ಧರ್ಮಾತ್ಮಾ ಸೋಽಪಶ್ಯಚ್ಛ್ವೇತಪರ್ವತಮ್ ॥ ೨೪ ॥

ವಾಯುವೇಗ ಗತಿಯುಳ್ಳ ಪಾರ್ಥನು ಕೃಷ್ಣನ ಜೊತೆಯಲ್ಲಿ ಬೇಗ ಆಕಾಶವನ್ನು ಸೇರಿದನು. ವಿಭುವಾದ ಕೃಷ್ಣನು ಅವನನ್ನು ಅವನ ಬಲಭುಜದಲ್ಲಿ ಹಿಡಿದಿದ್ದನು. ಅದ್ಭುತವಾದ ಅನೇಕ ಪದಾರ್ಥಗಳನ್ನು ನೋಡುತ್ತಾ ಧರ್ಮಾತ್ಮನಾದ ಅರ್ಜುನನು ಉತ್ತರ ದಿಕ್ಕಿನಲ್ಲಿ ಶ್ವೇತಪರ್ವತವನ್ನು ನೋಡಿದನು.

ಕುಬೇರಸ್ಯ ವಿಹಾರಂ ಚ ನಳಿನೀಂ ಪದ್ಮಭೂಷಿತಾಮ್ ।
ಸರಿಚ್ಛ್ರೇಷ್ಠಾಂ ಚ ತಾಂ ಗಂಗಾಂ ವೀಕ್ಷಮಾಣೋ ಬಹೂದಕಾಮ್ ॥

ಕುಬೇರನ ವಿಹಾರ ಸ್ಥಾನವನ್ನೂ, ಪದ್ಮಗಳಿಂದ ಭೂಷಿತವಾದ ಸರೋವರಗಳನ್ನೂ ಶ್ರೇಷ್ಠನದಿಯಾದ ಬಹಳ ನೀರಿನಿಂದ ಕೂಡಿರುವ ಗಂಗೆಯನ್ನೂ ನೋಡುತ್ತಾ ಅವನು ಸಾಗಿದನು.

ಸದಾ ಪುಷ್ಪಫಲೈರ್ವೃಕ್ಷೈರುಪೇತಾಂ ಸ್ಫಟಿಕೋದಕಾಮ್ ।
ಸಿಂಹವ್ಯಾಘ್ರಸಮಾಕೀರ್ಣಾಂ ನಾನಾಮೃಗಗಣಾಕುಲಾಮ್ ॥ ೨೬ ॥

ಪುಣ್ಯಾಶ್ರಮವತೀಂ ರಮ್ಯಾಂ ಮನೋಜ್ಞಾಂ ದ್ವಿಜಶೋಭಿತಾಮ್ ।

ದಡದಲ್ಲಿರುವ ಪುಷ್ಪ-ಫಲಭರಿತವಾದ ಮರಗಳಿಂದ ಕೂಡಿದ, ಸ್ಫಟಿಕದಂತೆ ಸ್ವಚ್ಛವಾದ ಜಲವುಳ್ಳ, ಸಿಂಹ-ವ್ಯಾಘ್ರಗಳಿಂದಲೂ ಅನೇಕ ಮೃಗ ಸಮೂಹಗಳಿಂದಲೂ ಕೂಡಿರುವ, ತೀರದಲ್ಲಿ ಪವಿತ್ರವಾದ ಆಶ್ರಮಗಳನ್ನು ಹೊಂದಿದ್ದ, ಮನೋಹರವಾದ, ಬ್ರಾಹ್ಮಣರಿಂದ ಶೋಭಿತವಾದ (ಗಂಗಾನದಿಯನ್ನು ನೋಡಿದನು).

ಮಂದರಸ್ಯ ಪ್ರದೇಶಾಂಶ್ಚ ಕಿನ್ನರೋದ್ಗೀತನಾದಿತಾನ್ ॥ ೨೭ ॥

ಹೇಮರೂಪ್ಯಮಯೈಃ ಶೃಂಗೈರ್ನಾನೌಷಧಿವಿಭೂಷಿತಾನ್ ।
ತಥಾ ಮಂದಾರವೃಕ್ಷೈಶ್ಚ ಪುಷ್ಪಿತೈರುಪಶೋಭಿತಾನ್ ॥ ೨೮ ॥

ಹೇಮ-ರಜತಮಯವಾದ ಶೃಂಗಗಳಿಂದ ಕೂಡಿದ, ನಾನಾ ವಿಧವಾದ ಓಷಧಿಗಳಿಂದ ವಿಭೂಷಿತವಾದ, ಹೂವರಳಿದ ಮಂದಾರ ವೃಕ್ಷಗಳಿಂದ ಶೋಭಿತವಾದ, ಕಿನ್ನರ ಶ್ರೇಷ್ಠರ ಗಾನದಿಂದ ಕೂಡಿದಂತಹ ಮಂದರ ಪರ್ವತದ ಪ್ರದೇಶಗಳನ್ನು ನೋಡಿದನು.

ಸ್ನಿಗ್ಧಾಂಜನಚಯಾಕಾರಂ ಸಂಪ್ರಾಪ್ತಃ ಕಾಳಪರ್ವತಮ್ ।
ಪುಣ್ಯಂ ಹಿಮವತಃ ಪಾದಂ ಮಣಿಮಂತಂ ಚ ಪರ್ವತಮ್ ॥ ೨೯ ॥

ಸಾಂದ್ರವಾದ ಕಾಡಿಗೆಯ ಬಣ್ಣವನ್ನು ಹೊಂದಿದ ಕಾಳಪರ್ವತವನ್ನು ಸೇರಿ, ಹಿಮಾಲಯದ ಪಾದದ ಬಳಿ ಇರುವ ಪವಿತ್ರವಾದ ಮಣಿಮಂತ ಪರ್ವತವನ್ನೂ ನೋಡಿದನು.

ಬ್ರಹ್ಮತುಂಗನದೀಂ ಚಾನ್ಯಾಂ ನಾನಾಜನಪದಾನಪಿ ।
ಸುಶೃಂಗಂ ಶತಶೃಂಗಂ ಚ ಶಯ್ಯಾನಾಗಂ ತಥೈವ ಚ ॥ ೩೦ ॥

ಪುಣ್ಯಮಶ್ವಶಿರಃಸ್ಥಾನಂ ಸ್ಥಾನಮಾಥರ್ವಣಸ್ಯ ಚ ।
ಪೃಷದಂಶಂ ಚ ಶೈಲೇಂದ್ರಂ ಮಹಾಮಂದರಮೇವ ಚ ॥ ೩೧ ॥

ಅಪ್ಸರೋಭಿಃ ಸಮಾಕೀರ್ಣಂ ಕಿನ್ನರೈಶ್ಚೋಪಶೋಭಿತಮ್ ।
ತಾಂಶ್ಚ ಶೈಲಾನ್ ವ್ರಜನ್ ಪಾರ್ಥಃ ಪ್ರೇಕ್ಷತೇ ಸಹಕೇಶವಃ ॥ ೩೨ ॥

ಬ್ರಹ್ಮತುಂಗಾ ನದಿ, ಬೇರೆ ಬೇರೆ ಪ್ರದೇಶಗಳು, ಸುಶೃಂಗ, ಶತಶೃಂಗ ಮತ್ತು ಶಯ್ಯಾನಾಗ ಎಂಬ ಪರ್ವತಗಳು, ಅಥರ್ವಣರು ಅಶ್ವಶಿರಸ್ಸನ್ನು (ನಾರಾಯಣ ವರ್ಮವನ್ನು) ಉಪದೇಶ ಮಾಡಿದ ಸ್ಥಾನ, ಪೃಷದಂಶ ಪರ್ವತ, ಮಹಾಮಂದರ ಪರ್ವತ, ಅಪ್ಸರೆಯರಿಂದ ತುಂಬಿ ಕಿನ್ನರರಿಂದ ಶೋಭಿತವಾದ ಉಳಿದ ಪರ್ವತಗಳು ಎಲ್ಲವನ್ನೂ ಕೃಷ್ಣನ ಜೊತೆಯಲ್ಲಿ ಹೋಗುತ್ತಾ ಅರ್ಜುನನು ನೋಡಿದನು.

ಶುಭ್ರೈಃ ಪ್ರಸ್ರವಣೈರ್ದುಷ್ಪಾಂ ಹೇಮಧಾತುವಿಭೂಷಿತಾಮ್ ।
ಚಂದ್ರರಶ್ಮಿಪರೀತಾಂಗೀಂ ಪೃಥಿವೀಂ ಪುರಮಾಲಿನೀಮ್ ॥ ೩೩ ॥

ಪವಿತ್ರವಾದ ನದಿಗಳಿಂದ ಕೂಡಿದ, ಸುವರ್ಣ ಮತ್ತು ಧಾತುಗಳಿಂದ ವಿಭೂಷಿತವಾದ, ಅನೇಕ ಪಟ್ಟಣಗಳ ಮಾಲೆಯನ್ನು ಹೊಂದಿದ, ಚಂದ್ರನ ಬೆಳದಿಂಗಳು ತುಂಬಿರುವ ಭೂಮಿಯನ್ನು ನೋಡಿದನು.

ಸಮುದ್ರಾಂಶ್ಚಾದ್ಭುತಾಕಾರಾನ್ ಪಶ್ಯನ್ ಸುಬಹುಲಾದ್ಭುತಾನ್ ।
ವಿಯದ್ ದ್ಯಾಂ ಪೃಥಿವೀಂ ಚೈವ ಪಶ್ಯನ್ ವಿಷ್ಣುಪದೇ ವ್ರಜನ್ ॥೩೪॥

ವಿಸ್ಮಿತಃ ಸಹ ಕೃಷ್ಣೇನ ಕ್ಷಿಪ್ತೋ ಬಾಣ ಇವಾತ್ಯಗಾತ್ ॥ ೩೫ ॥

ಅರ್ಜುನನು ಆಕಾಶದಲ್ಲಿ ಹೋಗುತ್ತಾ ಅದ್ಭುತಾಕಾರವುಳ್ಳ ಸಮುದ್ರಗಳನ್ನೂ, ಇನ್ನೂ ಅನೇಕ ಅದ್ಭುತವಾದ ವಸ್ತುಗಳನ್ನೂ ಭೂಮಿ, ಅಂತರಿಕ್ಷ ಮತ್ತು ಆಕಾಶಗಳನ್ನೂ ನೋಡುತ್ತಾ ಸಾಗಿದನು. ಕೃಷ್ಣನ ಜೊತೆಯಲ್ಲಿ ಹೋಗುತ್ತಾ ಅವನು ಧನುಸ್ಸಿನಿಂದ ಪ್ರಯೋಗಿಸಿದ ಬಾಣದಂತೆ ಎಲ್ಲವನ್ನೂ ದಾಟಿ ಹೋದನು.

ಗ್ರಹನಕ್ಷತ್ರಸೋಮಾನಾಂ ಸೂರ್ಯಾಗ್ನ್ಯೋಶ್ಚ ಸಮತ್ವಿಷಮ್ ।
ಅಪಶ್ಯತ ತದಾ ಪಾರ್ಥೋ ಜ್ವಲಂತಮಿವ ಪರ್ವತಮ್ ॥ ೩೬ ॥

ಹಾಗೆ ಹೋಗುತ್ತಾ ಗ್ರಹ-ನಕ್ಷತ್ರ-ಚಂದ್ರ-ಸೂರ್ಯಾಗ್ನಿಗಳಿಗೆ ಸಮಾನವಾದ ಕಾಂತಿಯುಳ್ಳ ಅಂತಹ ಕಾಂತಿಯಿಂದ ಜ್ವಲಿಸುವಂತೆ ತೋರುವ ಪರ್ವತವನ್ನು ನೋಡಿದನು.

ಸಮಾಪನ್ನಸ್ತು ತಂ ದೇಶಂ ಶೈಲಾಗ್ರೇ ಸಮವಸ್ಥಿತಮ್ ।
ತಪೋನಿತ್ಯಂ ಮಹಾತ್ಮಾನಮಪಶ್ಯದ್ ವಾನರಧ್ವಜಃ ॥ ೩೭ ॥

ವಾನರಧ್ವಜನಾದ ಅರ್ಜುನನು ಆ ದೇಶಕ್ಕೆ ಬಂದು, ಪರ್ವತದಲ್ಲಿ ಕುಳಿತಿದ್ದ ತಪಶ್ಶೀಲನಾದ ಒಬ್ಬ ಮಹಾತ್ಮನನ್ನು ಶೈಲಾಗ್ರದಲ್ಲಿ ನೋಡಿದನು.

ಸಹಸ್ರಮಿವ ಸೂರ್ಯಾಣಾಂ ದೀಪ್ಯಮಾನಂ ಸ್ವತೇಜಸಾ ।
ಶೂಲಿನಂ ಜಟಿಲಂ ಶೀರ್ಣವಲ್ಕಲಾಜಿನವಾಸಸಮ್ ॥ ೩೮ ॥

ತನ್ನ ತೇಜಸ್ಸಿನಿಂದ ಸಹಸ್ರ ಸೂರ್ಯರಂತೆ ಬೆಳಗುವ ಜಟಾಧಾರಿಯೂ, ಜಟಿಲನೂ, ಹರಿದ ನಾರುಮಡಿಯ ಮತ್ತು ಕೃಷ್ಣಾಜಿನದ ವಸ್ತ್ರವುಳ್ಳವನೂ ಆದ ಆ ಪುರುಷನನ್ನು ನೋಡಿದನು.

ನಯನಾನಾಂ ಸಹಸ್ರೈಶ್ಚ ವಿಚಿತ್ರಾಂಗಂ ಮಹೌಜಸಮ್ ।
ಪಾರ್ವತ್ಯಾ ಸಹಿತಂ ದೇವಂ ಭೂತಸಂಘೈಶ್ಚ ಭಾಸ್ವರಮ್ ॥ ೩೯ ॥

ಸಹಸ್ರಾರು ಕಣ್ಣುಗಳಿಂದ ಕೂಡಿದಂತಹ, ವಿಚಿತ್ರವಾದ ಅಂಗಗಳುಳ್ಳ, ಭೂತಸಂಘಗಳಿಂದ ಸುತ್ತುವರಿಯಲ್ಪಟ್ಟ, ಪಾರ್ವತಿಯಿಂದ ಸಹಿತನಾದ ತೇಜೋ ಮೂರ್ತಿಯನ್ನು ನೋಡಿದನು.

ಗೀತವಾದಿತ್ರಸಂವಾದ್ಯೈಃ ತಾಳನರ್ತನಲಾಸಿತೈಃ ।
ವಲ್ಗಿತಾಸ್ಫೋಟತೋತೃಪ್ತೈಃ ಪುಣ್ಯೈರ್ಗಂಧೈಶ್ಚ ಸೇವಿತಮ್ ॥ ೪೦ ॥

ಗೀತ-ವಾದಿತ್ರಸಂವಾದದಿಂದಲೂ, ತಾಳಸಹಿತವಾದ ಲಾಸ್ಯಾದಿ ನರ್ತನಗಳಿಂದಲೂ, ಉತ್ಕೃಷ್ಟವಾದ ಜಯಶಬ್ದಗಳಿಂದಲೂ, ಒಳ್ಳೆಯ ಸುಗಂಧದಿಂದಲೂ ಸೇವಿಸಲ್ಪಡುತ್ತಿದ್ದ (ಅವನನ್ನು ನೋಡಿದನು).

ಸ್ತೂಯಮಾನಂ ಸ್ತವೈರ್ದಿವ್ಯೈ ಋಷಿಭಿರ್ಬ್ರಹ್ಮವಾದಿಭಿಃ ।
ಗೋಪ್ತಾರಂ ಸರ್ವಭೂತಾನಾಮಿಷ್ವಾಸವರಮಚ್ಯುತಮ್ ॥ ೪೧ ॥

ವೇದವಾದಿಗಳಾದ ಋಷಿಗಳಿಂದ, ದಿವ್ಯವಾದ ಸ್ತೋತ್ರಗಳಿಂದ ಸ್ತೋತ್ರ ಮಾಡಲ್ಪಡುತ್ತಿದ್ದಂತಹ, ಎಲ್ಲ ಪ್ರಾಣಿಗಳಿಗೂ ರಕ್ಷಣೆಯನ್ನು ನೀಡುವ ಶ್ರೇಷ್ಠವಾದ ಧನುರ್ಧಾರಿಯಾದ, ತನ್ನ ಗುಣಗಳಿಂದ ಚ್ಯುತನಾಗದ ಶಿವನನ್ನು ನೋಡಿದನು.

ವಾಸುದೇವಸ್ತು ತಂ ದೃಷ್ಟ್ವಾ ಜಗಾಮ ಶಿರಸಾ ಕ್ಷಿತಿಮ್ ।
ಪಾರ್ಥೇನ ಸಹ ಧರ್ಮಾತ್ಮಾ ಗೃಣನ್ ಬ್ರಹ್ಮ ಸನಾತನಮ್ ॥ ೪೨ ॥

ಧರ್ಮಾತ್ಮನಾದ ಕೃಷ್ಣನಾದರೂ ಅವನನ್ನು ನೋಡಿ, ಅರ್ಜುನನ ಜೊತೆಯಲ್ಲಿ ಸನಾತನವಾದ ವೇದವನ್ನು ಜಪಿಸುತ್ತಾ ಭೂಮಿಯ ಮೇಲೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು.

ಲೋಕಾದಿಂ ವಿಶ್ವಕರ್ಮಾಣಮಜಮೀಶಾನಮವ್ಯಯಮ್ ।
ತಮಸಃ ಪರಮಂ ಜ್ಯೋತಿಃ ಖಂ ವಾಯುರ್ಜ್ಯೋತಿಷಾಂ ಗತಿಮ್ ॥

ಲೋಕಕ್ಕೆ ಕಾರಣನಾದವನೂ, ಎಲ್ಲವನ್ನೂ ಮಾಡುವವನೂ, ಈಶಾನನೂ, ಅವ್ಯಯನೂ ಆದವನೂ, ತಮಸ್ಸಿಗೆ ಕಾರಣನಾದವನೂ, ಆಕಾಶಾದಿ ಭೂತಗಳಿಗೆ ಪತಿಯಾದವನೂ;

ಸ್ರಷ್ಟಾರಂ ವಾರಿಧಾರಾಣಾಂ ಭುವಶ್ಚ ಪ್ರಕೃತಿಂ ಪರಾಮ್ ।
ದೇವದಾನವಯಕ್ಷಾಣಾಂ ಮನುಷ್ಯಾಣಾಂ ಚ ಸಾದನಮ್ ॥ ೪೪ ॥

ನದಿಗಳ ಮತ್ತು ಭೂಮಿಯ ಸೃಷ್ಟಿಕರ್ತನಾದವನೂ, ಶ್ರೇಷ್ಠಪ್ರಕೃತಿಯಾದವನೂ, ದೇವ-ದಾನವ-ಯಕ್ಷರಿಗೂ, ಮನುಷ್ಯರಿಗೂ ಸಂಹಾರಕನಾದವನೂ;

ಯೋಗಿನಾಂ ಪರಮಂ ಬ್ರಹ್ಮ ವ್ಯಕ್ತಂ ಬ್ರಹ್ಮವಿದಾಂ ನಿಧಿಮ್ ।
ಪರಾವರಸ್ಯ ಸ್ರಷ್ಟಾರಂ ಪ್ರತಿಹರ್ತಾರಮೇವ ಚ ॥ ೪೫ ॥

ಯೋಗಿಗಳಿಗೆ ಪರಬಹ್ಮನಾದವನೂ, ಬ್ರಹ್ಮಜ್ಞಾನಿಗಳಿಗೆ ಶ್ರೇಷ್ಠವಾದ ನಿಧಿಯಾದವನೂ, ಉಚ್ಚ-ನೀಚಪ್ರಾಣಿಗಳ ಸೃಷ್ಟಿ-ಸಂಹಾರ ಕರ್ತನಾದವನೂ;

ಕಾಲಕೋಪಂ ಮಹಾತ್ಮಾನಂ ಶಕ್ರಸೂರ್ಯಗುಣೋದಯಮ್ ।
ವವಂದತುಸ್ತದಾ ಕೃಷ್ಣೌ ವಾಙ್ಮನೋಬುದ್ಧಿಕರ್ಮಭಿಃ ॥ ೪೬ ॥

ಪ್ರಳಯಕಾಲದಲ್ಲಿ ಕೋಪವನ್ನು ತೋರಿಸುವವನೂ, ಮಹಾತ್ಮನಾದವನೂ, ಇಂದ್ರ- ಸೂರ್ಯ ಮೊದಲಾದವರ ಗುಣಗಳಿಗೆ ಕಾರಣನಾದವನೂ ಆದ ಆ ಶಿವನನ್ನು ಆಗ ಕೃಷ್ಣಾರ್ಜುನರು ವಾಙ್ಮನೋ-ಬುದ್ಧಿ-ಶರೀರಗಳಿಂದ ನಮಸ್ಕರಿಸಿದರು.

ಯಂ ಪ್ರಪಶ್ಯಂತಿ ವಿದ್ವಾಂಸಃ ಸೂಕ್ಷ್ಮಾಧ್ಯಾತ್ಮನಿದರ್ಶನಾತ್ ।
ತಮಜಂ ಕಾರಣಾತ್ಮಾನಂ ಜಗತ್ಪತುಃ ಶರಣಂ ಭವಮ್ ॥ ೪೭ ॥

ಯಾವನನ್ನು ಸೂಕ್ಷ್ಮವಾದ ಆಧ್ಯಾತ್ಮ ಯೋಗವುಳ್ಳ ಮಹಾತ್ಮರು ನೋಡುತ್ತಾರೆಯೋ ಅಂತಹ ಅಜನಾದ, ಕಾರಣಸ್ವರೂಪನಾದ ಭವನಿಗೆ ಶರಣಾಗತರಾದರು.

ಅರ್ಜುನಶ್ಚಾಪಿ ತಂ ದೇವಂ ಭೂಯೋ ಭೂಯೋಽಭ್ಯವಂದತ ।
ಜ್ಞಾತ್ವೈಕಂ ಸರ್ವಲೋಕಾದಿಂ ಭೂತಭವ್ಯಭವತ್ಪ್ರಭುಮ್ ॥ ೪೮ ॥

ಅರ್ಜುನನೂ ಕೂಡ ಆವನನ್ನು ಸರ್ವಲೋಕಾದಿ ಎಂದೂ ಮುಖ್ಯನಾದ ಭೂತ-ವರ್ತಮಾನ-ಭವಿಷ್ಯ ವಸ್ತುಗಳ ಪ್ರಭುವೆಂದೂ ತಿಳಿದು ಆ ದೇವನನ್ನು ಪುನಃ ಪುನಃ ನಮಸ್ಕರಿಸಿದನು.

ಶರಣ್ಯಂ ಶರಣಂ ದೇವಮೀಶಾನಂ ಪರಮೇಶ್ವರಮ್ ।
ಜಗಾಮ ಜಗತಾಂ ನಾಥಮರ್ಜುನಃ ಸಜನಾರ್ದನಃ ॥ ೪೯ ॥

ಕೃಷ್ಣಸಹಿತನಾದ ಅರ್ಜುನನು ಶರಣು ಹೊಂದುವುದಕ್ಕೆ ಯೋಗ್ಯನೂ, ದೇವನೂ, ಈಶಾನನೂ, ಪರಮೇಶ್ವರನೂ, ಜಗನ್ನಾಥನೂ ಆದ ಅವನಿಗೆ ಶರಣಾಗತನಾದನು.

ತತಸ್ತಾವಾಗತೌ ದೃಷ್ಟ್ವಾ ನರನಾರಾಯಣಾವುಭೌ ।
ಸುಪ್ರಸನ್ನಮನಾಃ ಶರ್ವ ಉವಾಚ ಪ್ರಹಸನ್ನಿವ ॥ ೫೦ ॥

ಅನಂತರ ನರ-ನಾರಾಯಣರಿಬ್ಬರೂ ತನ್ನ ಬಳಿಗೆ ಬಂದುದನ್ನು ನೋಡಿ, ಬಹಳ ಸಂತೋಷಗೊಂಡ ಮನಸ್ಸುಳ್ಳವನಾಗಿ ಶರ್ವನು (ಶಿವನು) ನಗುತ್ತಾ ಮಾತನಾಡಿದನು.

ಸ್ವಾಗತಂ ವಾಂ ನರಶ್ರೇಷ್ಠೌ ವಿಕ್ಲವಂ ಚ ನ ತಿಷ್ಠತಾಮ್ ।
ಕಿಂಚ ವಾಮೀಪ್ಸಿತಂ ವೀರೌ ಮನಸಾ ಕ್ಷಿಪ್ರಮುಚ್ಯತಾಮ್ ॥ ೫೧ ॥

ಎಲೈ ನರಶ್ರೇಷ್ಠರೇ, ನಿಮ್ಮಿಬ್ಬರಿಗೂ ಸ್ವಾಗತ. ಮನಸ್ಸಿನಲ್ಲಿ ವೈಕ್ಲವ್ಯವನ್ನು ಹೊಂದಬೇಡಿ. ಎಲೈ ವೀರರೇ, ನೀವು ಮನಸ್ಸಿನಲ್ಲಿ ಏನು ಬಯಸಿದ್ದೀರಿ? ಬೇಗ ಹೇಳಿ.

ಕೇನ ಕಾರ್ಯೇಣ ಸಂಪ್ರಾಪ್ತೌ ಯುವಾಂ ತತ್ಸಾಧನೇ ರತೌ ।
ಪ್ರಿಯತಾಮಾತ್ಮನಃ ಶ್ರೇಯಃ ತತ್ ಸರ್ವಂ ಚ ದದಾನಿ ವಾಮ್ ॥೫೨॥

ಯಾವ ಕಾರ್ಯವನ್ನು ಉದ್ದೇಶಿಸಿ ಅದನ್ನು ಸಾಧಿಸುವುದರಲ್ಲಿ ನಿರತರಾಗಿ ನೀವಿಬ್ಬರೂ ಇಲ್ಲಿಗೆ ಬಂದಿದ್ದೀರಿ? ಯಾವುದು ನಿಮಗೆ ಶ್ರೇಯಸ್ಸೆಂದು ತಿಳಿದು ವರವನ್ನು ಕೇಳಿ. ಅವೆಲ್ಲವನ್ನೂ ನಾನು ಕೊಡುವೆನು.

ಸಂಜಯಃ

ತತಸ್ತದ್ ವಚನಂ ಶ್ರುತ್ವಾ ಪ್ರತ್ಯುತ್ಥಾಯ ಕೃತಾಂಜಲೀ ।
ವಾಸುದೇವಾರ್ಜುನೌ ಶರ್ವಂ ತುಷ್ಟುವಾತೇ ಮಹಾಮತೀ ॥ ೫೩ ॥

ಸಂಜಯ– ಅವನ ಆ ಮಾತುಗಳನ್ನು ಕೇಳಿ ಮಹಾಬುದ್ಧಿಯುಳ್ಳ ಕೃಷ್ಣಾರ್ಜುನರು ಎದ್ದು ನಿಂತು, ಕೈಗಳನ್ನು ಮುಗಿದು ಶಿವನನ್ನು ಸ್ತೋತ್ರ ಮಾಡಿದರು.

ನಮೋ ಭವಾಯ ಶರ್ವಾಯ ರುದ್ರಾಯ ವರದಾಯ ಚ ।
ಪಶೂನಾಂ ಪತಯೇ ನಿತ್ಯಮ್ ಉಗ್ರಾಯ ಚ ಕಪರ್ದಿನೇ ॥ ೫೪ ॥

ಭವನೂ, ಶರ್ವನೂ, ರುದ್ರನೂ, ವರದನೂ, ಪಶುಪತಿಯೂ, ಉಗ್ರನೂ, ಕಪರ್ದಿಯೂ ಆದ ನಿನಗೆ ಯಾವಾಗಲೂ ನಮಸ್ಕಾರ.

ಕುಮಾರಗುರವೇ ನಿತ್ಯಂ ನೀಲಗ್ರೀವಾಯ ವೇಧಸೇ ।
ವಿಲೋಹಿತಾಯ ಧೂಮ್ರಾಯ ವ್ಯಾಲಯಜ್ಞೋಪವೀತಿನೇ ॥ ೫೫ ॥

ಕುಮಾರಗುರುವಾದ, ಯಾವಾಗಲೂ ನೀಲಕಂಠನಾದ, ಭಕ್ತಾಭೀಷ್ಟಪ್ರದನಾದ, ಲೋಹಿತ ವರ್ಣದಿಂದ ಕೂಡಿದ, ಧೂಮ್ರವರ್ಣನಾದ, ಸರ್ಪಯಜ್ಞೋಪವೀತನಾದ ನಿನಗೆ ನಮಸ್ಕಾರ.

ಮಹಾದೇವಾಯ ಭೀಮಾಯ ತ್ರ್ಯಂಬಕಾಯ ಶಿವಾಯ ಚ ।
ಈಶಾನಾಯ ಮಖಘ್ನಾಯ ನಮೋಽಸ್ತ್ವಂಧಕಘಾತಿನೇ ॥ ೫೬ ॥

ಮಹಾದೇವನಾದ, ಭೀಮನಾದ, ತ್ರಿನೇತ್ರನಾದ, ಶಿವನಾದ, ಈಶಾನನಾದ, ದಕ್ಷಯಜ್ಞಭಂಜಕನಾದ, ಅಂಧಕಾಸುರ ಸಂಹಾರಕನಾದ ನಿನಗೆ ನಮಸ್ಕಾರ.

ನಿತ್ಯಂ ನೀಲಶಿಖಂಡಾಯ ಶೂಲಿನೇ ದೈತ್ಯಘಾತಿನೇ ।
ಹಂತ್ರೇ ಗೋಪ್ತ್ರೇ ತ್ರಿನೇತ್ರಾಯ ವ್ಯಾಧಾಯ ವಸುರೇತಸೇ ॥ ೫೭ ॥

ಯಾವಾಗಲೂ ಕೃಷ್ಣವರ್ಣದ ಕೇಶಗಳನ್ನು ಹೊಂದಿರುವ, ತ್ರಿಶೂಲಧಾರಿಯಾದ, ದೈತ್ಯ ಸಂಹಾರಕನಾದ, ಜಗತ್ಸಂಹಾರಕನಾದ, ಜಗದ್ರಕ್ಷಕನಾದ, ತ್ರಿನೇತ್ರನಾದ, ವ್ಯಾಧನಿಗೆ ಅನುಗ್ರಹವನ್ನು ಮಾಡಿದ, ಸುವರ್ಣರೇತಸ್ಕನಾದ ನಿನಗೆ ನಮಸ್ಕಾರ.

ಅಚಿಂತ್ಯಾಯಾಂಬಿಕಾಭರ್ತ್ರೇ ಸರ್ವದೇವಸ್ತುತಾಯ ಚ ।
ವೃಷಧ್ವಜಾಯ ಮುಂಡಾಯ ಜಟಿನೇ ಬ್ರಹ್ಮಚಾರಿಣೇ ॥ ೫೮ ॥

ಅಚಿಂತ್ಯನಾದ, ಅಂಬಿಕಾಪತಿಯಾದ, ಸರ್ವದೇವಸ್ತುತನಾದ, ವೃಷಧ್ವಜನಾದ, ಮುಂಡನಾದ, ಜಟಿಯನ್ನು ಧರಿಸಿದ, ಬ್ರಹ್ಮಚಾರಿಯಾದ ನಿನಗೆ ನಮಸ್ಕಾರ.

ತಪಸೇ ತಪ್ಯಮಾನಾಯ ಬ್ರಹ್ಮಣ್ಯಾಯಾಜಿತಾಯ ಚ ।
ವಿಶ್ವಾತ್ಮನೇ ವಿಶ್ವಸೃಜೇ ವಿಶ್ವಮಾವೃತ್ಯ ತಿಷ್ಠತೇ ॥ ೫೯ ॥

ಯಾವಾಗಲೂ ತಪಸ್ಸನ್ನು ಮಾಡುವ (ನೀರಿನಲ್ಲಿ ತಪಸ್ಸನ್ನು ಮಾಡುವ), ಬ್ರಾಹ್ಮಣ ವತ್ಸಲನಾದ, ಎಂದೂ ಪರಾಜಿತನಾಗದ, ವಿಶ್ವಾತ್ಮನಾದ, ವಿಶ್ವಸೃಷ್ಟಿಕರ್ತನಾದ ನಿನಗೆ ನಮಸ್ಕಾರ.

ನಮೋ ನಮಸ್ತೇ ವ್ಯಾಸಾಯ ಭೂತಾನಾಂ ಪ್ರಭವೇ ಸದಾ ।
ಅಭಿಗಮ್ಯಾಯ ಕಾಮ್ಯಾಯ ಸ್ತುತ್ಯಾಯಾರ್ಯಾಯ ಸರ್ವದಾ ॥ ೬೦ ॥

ಎಲ್ಲವನ್ನೂ ವಿಸ್ತರಿಸುವ ನಿನಗೆ ನಮಸ್ಕಾರ. ಎಲ್ಲ ಭೂತಗಳ ಪ್ರಭುವಾದ ನಿನಗೆ ನಮಸ್ಕಾರ. ಯಾವಾಗಲೂ ಗಮ್ಯನಾದವನೂ, ಕಾಮ್ಯನಾದವನೂ, ಸ್ತುತ್ಯನಾದವನೂ, ಆರ್ಯನಾದವನೂ ಆದ ನಿನಗೆ ನಮಸ್ಕಾರ.

ಬ್ರಹ್ಮವಕ್ತ್ರಾಯ ಕಾಂತಾಯ ಶಂಕರಾಯ ಶಿವಾಯ ಚ ।
ನಮೋಽಸ್ತು ವಾಚಸ್ಪತಯೇ ಪ್ರಜಾನಾಂ ಪತಯೇ ನಮಃ ॥ ೬೧ ॥

ವೇದಮುಖನಾದ, ಮನೋಹರನಾದ, ಮಂಗಳಕರನಾದ, ಮಂಗಳರೂಪನಾದ, ವಾಚಸ್ಪತಿಯಾದ, ಪ್ರಜಾಪತಿಯಾದ ನಿನಗೆ ನಮಸ್ಕಾರ.

ನಮೋ ವಿಶ್ವಸ್ಯ ಪತಯೇ ಮಹತಾಂ ಪತಯೇ ನಮಃ ।
ನಮಃ ಸಹಸ್ರಶಿರಸೇ ಸಹಸ್ರಭುಜಮನ್ಯವೇ ॥ ೬೨ ॥

ವಿಶ್ವಕ್ಕೆ ಪತಿಯಾದ, ಮಹಾತ್ಮನಾದ, ಸಹಸ್ರ ಶಿರಸ್ಸುಗಳುಳ್ಳ, ಸಹಸ್ರಭುಜಗಳನ್ನುಳ್ಳ, ಮನ್ಯುಸ್ವರೂಪನಾದ ನಿನಗೆ ನಮಸ್ಕಾರ.

ಸಹಸ್ರನೇತ್ರಪಾದಾಯ ನಮೋಽಸಂಖ್ಯೇಯಕರ್ಮಣೇ ।
ನಮೋ ಹಿರಣ್ಯಗರ್ಭಾಯ ಹಿರಣ್ಯಕವಚಾಯ ಚ ॥ ೬೩ ॥

ಸಹಸ್ರ ನೇತ್ರ-ಪಾದಗಳುಳ್ಳ, ಎಣಿಸಲಾರದಷ್ಟು ಕರ್ಮವನ್ನು ಮಾಡುವ, ಹಿರಣ್ಯ ಗರ್ಭನಾದ, ಹಿರಣ್ಯಕವಚನಾದ ನಿನಗೆ ನಮಸ್ಕಾರ.

ನಮೋಽಸ್ತು ದೇವದೇವಾಯ ಮಹಾಭೂತಧರಾಯ ಚ ।
ಭಕ್ತಾನುಕಂಪಿನೇ ನಿತ್ಯಂ ಸಿದ್ಧ್ಯತಾಂ ನೋ ವರಃ ಪ್ರಭೋ ॥ ೬೪ ॥

ದೇವದೇವನಾದ, ಮಹಾಭೂತಧಾರಕನಾದ, ಭಕ್ತಾನುಕಂಪಿಯಾದ ನಿನಗೆ ನಿತ್ಯವೂ ನಮಸ್ಕಾರ. ಎಲೈ ಪ್ರಭುವೇ, ನಮಗೆ ನೀನು ನೀಡುವ ವರವು ಸಿದ್ಧಿಸಲಿ.

ಸಂಜಯಃ

ಏವಂ ಸ್ತುತ್ವಾ ಮಹಾದೇವಂ ವಾಸುದೇವಃ ಸಹಾರ್ಜುನಃ ।
ಪ್ರಸಾದಯಾಮಾಸ ಭವಂ ತದಾ ಹ್ಯಸ್ತ್ರೋಪಲಬ್ಧಯೇ ।
ಅರ್ಜುನಾಯ ದದೌ ಬುದ್ಧಿಂ ತಸ್ಮಿನ್ಕಾಲೇ ಯದೀಪ್ಸಿತಮ್ ॥ ೬೫ ॥

ಸಂಜಯ– ಕೃಷ್ಣನು ಅರ್ಜುನನ ಜೊತೆಯಲ್ಲಿ ಮಹಾದೇವನನ್ನು ಹೀಗೆ ಸ್ತೋತ್ರವನ್ನು ಮಾಡಿ, ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕೊಡುವಂತೆ ಶಿವನನ್ನು ಒಲಿಸಿದನು. ಅರ್ಜುನನಿಗೂ ಆ ಅಸ್ತ್ರವನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯವಾದ ಬುದ್ಧಿಯನ್ನು ಆ ಕಾಲದಲ್ಲಿ ನೀಡಿದನು.

ತತಃ ಪಾರ್ಥಃ ಪ್ರಸನ್ನಾತ್ಮಾ ಪ್ರಾಂಜಲಿರ್ವೃಷಭಧ್ವಜಮ್ ।
ದದರ್ಶೋತ್ಫುಲ್ಲನಯನಃ ಸಮಸ್ತಂ ತೇಜಸಾಂ ನಿಧಿಮ್ ॥ ೬೬ ॥

ಆಗ ಪ್ರಸನ್ನ ಮನಸ್ಕನಾದ ಅರ್ಜುನನು ಕೈಗಳನ್ನು ಮುಗಿದು ತೇಜೋನಿಧಿಯಾದ ವೃಷಭಧ್ವಜನನ್ನು ಪೂರ್ಣವಾಗಿ ಅರಳಿದ ಕಣ್ಣಿನಿಂದ ನೋಡಿದನು.

ತಂ ಚೋಪಹಾರಂ ಸ್ವಕೃತಂ ನೈಶಂ ನೈತ್ಯಕಮಾತ್ಮನಃ ।
ದದರ್ಶ ತ್ರ್ಯಂಬಕಾಭ್ಯಾಶೇ ವಾಸುದೇವೇ ನಿವೇದಿತಮ್ ॥ ೬೭ ॥

ತಾನು ಪ್ರತಿನಿತ್ಯದಂತೆ ರಾತ್ರಿಯ ಕಾಲದಲ್ಲಿ ಮಾಡಿದ ಪೂಜೆಯಲ್ಲಿ ಕೃಷ್ಣನಿಗೆ ಮತ್ತು ಶಿವನಿಗೆ ನಿವೇದಿಸಿದ ಆ ಪೂಜಾದ್ರವ್ಯಗಳು ಶಿವನ ಸಮೀಪದಲ್ಲಿ ಇದ್ದುದನ್ನು ನೋಡಿದನು.

ತತೋಽಭಿಪೂಜ್ಯ ಮನಸಾ ಕೃಷ್ಣಂ ಶರ್ವಂ ಚ ಪಾಂಡವಃ ।
ಇಚ್ಛಾಮ್ಯಹಂ ದಿವ್ಯಮಸ್ತ್ರಮಿತ್ಯಭಾಷತ ಶಂಕರಮ್ ॥ ೬೮ ॥

ಆಗ ಅರ್ಜುನನು ಮನಸ್ಸಿನಲ್ಲಿಯೇ ಕೃಷ್ಣನನ್ನು ಮತ್ತು ಶಿವನನ್ನು ಪೂಜಿಸಿ, ಶಂಕರನನ್ನು ಕುರಿತು, ನಾನು ದಿವ್ಯವಾದ ಪಾಶುಪತಾಸ್ತ್ರವನ್ನು ಪಡೆಯಲು ಇಚ್ಛಿಸುತ್ತೇನೆ ಎಂದು ಹೇಳಿದನು.

ತತಃ ಪಾರ್ಥಸ್ಯ ವಿಜ್ಞಾಯ ವರಾರ್ಥಂ ವಚನಂ ವಿಭುಃ ।
ವಾಸುದೇವಾರ್ಜುನೌ ದೇವಃ ಸ್ಮಯಮಾನೋಽಭ್ಯಭಾಷತ ॥ ೬೯ ॥

ಸ್ವಾಗತಂ ವಾಂ ನರಶ್ರೇಷ್ಠೌ ವಿಜ್ಞಾತಂ ಮನಸೇಪ್ಸಿತಮ್
ಯೇನ ಕಾಮೇನ ಸಂಪ್ರಾಪ್ತೌ ಭವದ್ಭ್ಯಾಂ ತಂ ದದಾಮ್ಯಹಮ್ ॥೭೦॥

ಆಗ ಪಾರ್ಥನ ವರದ ಅಭಿಪ್ರಾಯವನ್ನು ತಿಳಿದ ವಿಭುವಾದ ಶಿವದೇವನು ನಗುತ್ತಾ ಕೃಷ್ಣಾರ್ಜುನರನ್ನು ಕುರಿತು ನರಶ್ರೇಷ್ಠರೇ ನಿಮಗೆ ಸ್ವಾಗತ. ನಿಮ್ಮ ಮನೋಭೀಷ್ಟವು ತಿಳಿಯಿತು. ಯಾವ ಇಚ್ಛೆಯಿಂದ ಇಲ್ಲಿಗೆ ಬಂದಿದ್ದೀರೋ ಅದನ್ನು ನಾನು ಕೊಡುವೆನು ಎಂದು ಹೇಳಿದನು.

ಸರೋಽಮೃತಮಯಂ ದಿವ್ಯಮಭ್ಯಾಶೇ ಶತ್ರುಸೂದನೌ ।
ತತ್ರ ಮೇ ತದ್ಧನುರ್ದಿವ್ಯಂ ಶರಾಶ್ಚ ನಿಹಿತಾಃ ಪುರಾ ॥ ೭೧ ॥

ಎಲೈ ಶತ್ರುಸಂಹಾರಕರೇ, ಇಲ್ಲಿ ಸಮೀಪದಲ್ಲಿಯೇ ಅಮೃತಮಯವಾದ ಜಲವಿರುವ ಸರೋವರವಿದೆ. ಅಲ್ಲಿನನ್ನ ದಿವ್ಯವಾದ ಧನುಸ್ಸನ್ನು ಮತ್ತು ಬಾಣಗಳನ್ನು ಮೊದಲೇ ಇಟ್ಟಿದ್ದೇನೆ.

ಯೇನ ದೇವಾರಯಃ ಸರ್ವೇ ಮಯಾ ಯುಧಿ ನಿಪಾತಿತಾಃ ।
ಯುವಾಮೇತದ್ ದ್ವಯಂ ಕೃಷ್ಣೌ ತದಿಹಾನಯತ ದ್ರುತಮ್ ॥ ೭೨ ॥

ಎಲೈ ಕೃಷ್ಣಾರ್ಜುನರೇ, ಯಾವ ಧನುಸ್ಸಿನಿಂದ ನಾನು ಎಲ್ಲ ದೇವಶತ್ರುಗಳನ್ನೂ ಯುದ್ಧದಲ್ಲಿ ಸಂಹಾರ ಮಾಡಿದೆನೋ ಅಂತಹ ಧನುಸ್ಸನ್ನು ನೀವಿಬ್ಬರೂ ಇಲ್ಲಿಗೆ ಶೀಘ್ರವಾಗಿ ತನ್ನಿ (ಎಂದು ಹೇಳಿದನು).

ಸಂಜಯಃ

ತಥೇತ್ಯುಕ್ತ್ವಾ ತು ತೌ ವೀರೌ ಶರ್ವಂ ಪಾರಿಷದೈಃ ಸಹ ।
ಪ್ರಸ್ಥಿತೌ ತತ್ ಸರೋ ದಿವ್ಯಂ ದಿವ್ಯಾಶ್ಚರ್ಯಶತಾಯುತಮ್ ॥ ೭೩ ॥

ಸಂಜಯ– ಈಶ್ವರನನ್ನೂ ಮತ್ತು ಈಶ್ವರನ ಪಾರ್ಷದರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ, ಅಲ್ಲಿಂದ ನೂರಾರು ಆಶ್ಚರ್ಯಗಳಿಂದ ಕೂಡಿದ ಆ ದಿವ್ಯವಾದ ಸರೋವರಕ್ಕೆ ಹೊರಟರು.

ನಿರ್ದಿಷ್ಟಂ ಯದ್ ವೃಷಾಂಕೇಣ ಪುಣ್ಯಂ ಸರ್ವಾರ್ಥಸಾಧಕಮ್ ।
ತಜ್ಜಗ್ಮತುರಸಂಭ್ರಾಂತೌ ನರನಾರಾಯಣಾವೃಷೀ ॥ ೭೪ ॥

ಋಷಿಗಳಾದ ನರ-ನಾರಾಯಣರು ಯಾವ ಗಾಬರಿಯೂ ಇಲ್ಲದೆ ವೃಷಧ್ವಜನು ನಿರ್ದೇಶ ಮಾಡಿದ, ಸರ್ವಾರ್ಥಸಾಧಕವಾದ ಪುಣ್ಯ ಸರೋವರವನ್ನು ತಲುಪಿದರು.

ತತಸ್ತೌ ತತ್ ಸರೋ ಗತ್ವಾ ಸೂರ್ಯಮಂಡಲಸನ್ನಿಭಮ್ ।
ನಾಗಮಂತರ್ಜಲೇ ಘೋರಂ ದದೃಶಾತೇऽಚ್ಯುತಾರ್ಜುನೌ ॥ ೭೫ ॥

ಆನಂತರ ಅವರು ಆ ಸರೋವರದ ಸಮೀಪಕ್ಕೆ ಹೋಗಿ, ಸೂರ್ಯಮಂಡಲ ಕಾಂತಿಯನ್ನು ಹೊಂದಿದ್ದ, ಒಂದು ಘೋರವಾದ ಸರ್ಪವನ್ನು ಜಲದಲ್ಲಿನೋಡಿದರು.

ದ್ವಿತೀಯಂ ಚಾಪರಂ ನಾಗಂ ಸಹಸ್ರಶಿರಸಂ ವರಮ್ ।
ವಮಂತಂ ವಿಪುಲಾಂ ಜ್ವಾಲಾಂ ದದೃಶಾತೇऽಗ್ನಿವರ್ಚಸಮ್ ॥ ೭೬ ॥

ಇನ್ನೊಂದು ಸರ್ಪವು ಸಹಸ್ರ ಶಿರಸ್ಸುಗಳಿಂದ ಕೂಡಿದ್ದು, ಅಗ್ನಿಯ ಕಾಂತಿಯನ್ನು ಹೊಂದಿದ್ದು, ಮುಖದಿಂದ ವಿಪುಲವಾದ ಜ್ವಾಲೆಗಳನ್ನು ಹೊರಸೂಸುತ್ತಿರುವುದನ್ನೂ ಅವರು ನೋಡಿದರು.

ತತಃ ಕೃಷ್ಣಶ್ಚ ಪಾರ್ಥಶ್ಚ ಸಂಸ್ಪೃಶ್ಯಾಂಭಃ ಕೃತಾಂಜಲೀ ।
ತೌ ನಾಗಾವುಪತಸ್ಥಾತೇ ನಮಸ್ಕೃತೌ ವೃಷಧ್ವಜಮ್ ॥ ೭೭ ॥

ಆಗ ಕೃಷ್ಣಾರ್ಜುನರು ನೀರನ್ನು ಸ್ಪರ್ಶಮಾಡಿ (ಶುದ್ಧರಾಗಿ), ಕೈಗಳನ್ನು ಮುಗಿದು, ಈಶ್ವರನಿಗೆ ನಮಸ್ಕಾರವನ್ನು ಮಾಡಿ ಆ ಸರ್ಪಗಳನ್ನು ಸ್ತೋತ್ರ ಮಾಡಿದರು.

ಗೃಣಂತೌ ವೇದವಿದುಷೌ ತದ್ ಬ್ರಹ್ಮ ಶತರುದ್ರಿಯಮ್ ।
ಅಪ್ರಮೇಯಪ್ರಮಾಣಂ ತೌ ಗತ್ವಾ ಸರ್ವಾತ್ಮನಾ ಭವಮ್ ॥ ೭೮ ॥

ವೇದವಿದ್ವಾಂಸರಾದ ಅವರು ಅಪ್ರಮೇಯಾನುಭಾವನಾದ ಈಶ್ವರನನ್ನು ಸರ್ವಾತ್ಮನಾ ಮನಸ್ಸಿನಲ್ಲಿಸ್ಮರಿಸಿ, ಶತರುದ್ರಿಯ ವೇದಭಾಗವನ್ನು ಪಠಿಸುತ್ತಾ (ಶಿವನನ್ನು ಸ್ಮರಿಸಿದರು).

ತತಸ್ತೌ ರುದ್ರಮಾಹಾತ್ಮ್ಯಾದ್ ಹಿತ್ವಾ ರೂಪಂ ಮಹೋರಗೌ ।
ಧನುರ್ಬಾಣಶ್ಚ ಶತ್ರುಘ್ನೌ ತದ್ ದ್ವಂದ್ವಂ ಸಮಪದ್ಯತ ॥ ೬೯ ॥

ಆ ಎರಡು ಸರ್ಪಗಳು ರುದ್ರದೇವರ ಮಹಿಮೆಯಿಂದ ಸರ್ಪರೂಪವನ್ನು ತ್ಯಜಿಸಿ ಶತ್ರುಸಂಹಾರಕವಾದ ಧನುರ್ಬಾಣಗಳಾದವು.

ತತೋ ಜಗೃಹತುಃ ಪ್ರೀತೌ ಧನುರ್ಬಾಣಂ ಚ ಸುಪ್ರಭಮ್ ।
ಜಗೃತುಶ್ಚ ಮಹಾತ್ಮಾನೌ ದದೃಶುಶ್ಚ ಮಹಾತ್ಮನೇ ॥ ೭೦ ॥

ಆಗ ಪ್ರಸನ್ನರಾದ, ಮಹಾತ್ಮರಾದ ಅವರಿಬ್ಬರೂ ಒಳ್ಳೆಯ ಕಾಂತಿಯಿಂದ ಕೂಡಿದ ಆ ಧನುರ್ಬಾಣಗಳನ್ನು ತೆಗೆದುಕೊಂಡು ಹೋಗಿ, ಮಹಾತ್ಮನಾದ ಶಿವನಿಗೆ ತೋರಿಸಿದರು.

ತತಃ ಪಾರ್ಶ್ವೇ ವೃಷಾಂಕಸ್ಯ ಬ್ರಹ್ಮಚಾರೀ ವ್ಯವರ್ತತ ।
ಪಿಂಗಾಕ್ಷಸ್ತಪಸಾ ಶ್ರೇಷ್ಠೋ ಬಲವಾನ್ನೀಲಲೋಹಿತಃ ॥ ೭೧ ॥

ಆಗ ವೃಷಧ್ವಜನ ಪಾರ್ಶ್ವದಲ್ಲಿ ಪಿಂಗಾಕ್ಷನೂ, ಶ್ರೇಷ್ಠ ತಪಸ್ವಿಯೂ, ಬಲಿಷ್ಠನೂ ಮತ್ತು ನೀಲಲೋಹಿತನೂ ಆದ ಒಬ್ಬ ಬ್ರಹ್ಮಚಾರಿಯು ಕಾಣಿಸಿಕೊಂಡನು (ಇದ್ದನು).

ಸ ಸಂಗೃಹ್ಯ ಧನುಘೋರಂ ತಸ್ಥೌ ಸ್ಥಾನಂ ಸಮಾಹಿತಃ ।
ವ್ಯಪಾಕರ್ಷಚ್ಚ ವಿಧಿವತ್ ಸಶರಂ ಧನುರುತ್ತಮಮ್ ॥ ೭೨ ॥

ಆ ಘೋರವಾದ ಧನುಸ್ಸನ್ನು ತೆಗೆದುಕೊಂಡು, ತನ್ನ ಸ್ಥಾನದಲ್ಲಿಯೇ ನಿಂತು ವಿಧಿಗೆ ಅನುಗುಣವಾಗಿ, ಬಾಣದಿಂದ ಕೂಡಿದ ಶ್ರೇಷ್ಠವಾದ ಧನುಸ್ಸನ್ನು ಎಳೆದನು.

ತಸ್ಯ ಮೌರ್ವೀಂ ಚ ಮುಷ್ಟಿಂ ಚ ಸ್ಥಾನಂ ಚಾಲಕ್ಷ್ಯ ಪಾಂಡವಃ ।
ಶ್ರುತ್ವಾ ಮಂತ್ರಂ ಭವಪ್ರೋಕ್ತಂ ಜಗ್ರಾಹಾಚಿಂತ್ಯವಿಕ್ರಮಃ ॥ ೭೩ ॥

ಅದರ ಹೆದೆಯನ್ನೂ, ಮುಷ್ಟಿಯನ್ನೂ, ಸ್ಥಾನವನ್ನೂ ಗಮನಿಸಿ, ಅರ್ಜುನನು ಈಶ್ವರನು ಹೇಳಿದ ಮಂತ್ರವನ್ನು ಕೇಳಿ, ಅಚಿಂತ್ಯ ಪರಾಕ್ರಮಿಯಾದ ಅವನು ಅದನ್ನು ತೆಗೆದುಕೊಂಡನು.

ಸ ಸರಸ್ಯೇವ ತಂ ಬಾಣಂ ಮುಮೋಚಾತಿಬಲಃ ಪ್ರಭುಃ ।
ಚಿಕ್ಷೇಪ ಚ ಪುನರ್ವೀರಃ ತಸ್ಮಿನ್ ಸರಸಿ ತದ್ ಧನುಃ ॥ ೮೪ ॥

ಅತಿಬಲನೂ, ಪ್ರಭುವೂ, ವೀರನೂ ಆದ ಅವನು ಆ ಬಾಣವನ್ನು ಆ ಸರೋವರದಲ್ಲಿಯೇ ಪ್ರಯೋಗಿಸಿದನು ಮತ್ತು ಆ ಧನುಸ್ಸನ್ನು ಸರೋವರದಲ್ಲಿಯೇ ಎಸೆದನು.

ಶಿವನಿಗೆ ಸೇರಿದ ಧನುರ್ಬಾಣಗಳನ್ನು ಹಸ್ತದಿಂದ ಸ್ಪರ್ಶ ಮಾಡುವ ಮಾತ್ರದಿಂದ ಅರ್ಜುನನ ಎಡಗೈಯಲ್ಲಿ ಧನುಸ್ಸಿನ ಸನ್ನಿಧಾನವು, ಬಲಗೈಯಲ್ಲಿ ಬಾಣದ ಸನ್ನಿಧಾನವು ಉಂಟಾಯಿತು. ಆದ್ದರಿಂದ ಉದ್ದೇಶ ಸಿದ್ಧವಾದುದರಿಂದ ಅವೆರಡನ್ನೂ ಸರೋವರದಲ್ಲಿಯೇ ಇಟ್ಟನು ಎಂದು ಅಭಿಪ್ರಾಯ – **ಲಕ್ಷಾಲಂಕಾರ.**

ತತಃ ಪ್ರೀತಂ ಭವಂ ಜ್ಞಾತ್ವಾ ಪ್ರೀತಿಮಾನರ್ಜುನಸ್ತದಾ ।
ವರಮಾರಣ್ಯಕೇ ದತ್ತಂ ಶಂಕರಸ್ಯ ಚ ದರ್ಶನಮ್ ।
ಮನಸಾ ಚಿಂತಯಾಮಾಸ ತನ್ಮೇ ಸಂಪದ್ಯತಾಂ ಭವ ॥ ೮೫ ॥

ಸಂತೋಷಗೊಂಡ ಈಶ್ವರನನ್ನು ನೋಡಿ ಅರ್ಜುನನೂ ಸಂತುಷ್ಟನಾಗಿ, ಆರಣ್ಯವಾಸದ ಸಮಯದಲ್ಲಿ ಕೊಟ್ಟ ಶಂಕರನ ದರ್ಶನವನ್ನೂ, ಅವನ ವರವನ್ನೂ ಮನಸ್ಸಿನಲ್ಲಿಯೇ ಚಿಂತಿಸಿ, ಎಲೈ ಶಿವನೇ, ಅದು ನನಗೆ ಸಿದ್ಧವಾಗಲಿ ಎಂದು ಕೇಳಿದನು.

ವನವಾಸದ ಸಮಯದಲ್ಲಿ ಇಂದ್ರಕೀಲ ಪರ್ವತದಲ್ಲಿ ಸುಖಿಕರನಾದ ಶಂಕರನ ದರ್ಶನ ಮತ್ತು ವರಗಳು ಮತ್ತು ಇಂದಿನ ಅವನ ದರ್ಶನ ಮತ್ತು ವರಗಳು ಎರಡು ಬಾರಿ ಪ್ರಾಪ್ತವಾದುದರಿಂದ ಇದು ನನಗೆ ಬಹಳ ಬಲಿಷ್ಠವಾಗಲಿ ಎಂದು ಮನಸ್ಸಿನಲ್ಲಿ ಯೋಚಿಸಿದನು ಎಂದು ಅಭಿಪ್ರಾಯ – **ಲಕ್ಷಾಲಂಕಾರ.**

ತಸ್ಯ ತನ್ಮತಮಾಜ್ಞಾಯ ಪ್ರೀತಃ ಪ್ರಾದಾದ್ ವರಂ ಭವಃ ॥ ೮೬ ॥

ಸಂಹೃಷ್ಟರೋಮಾ ದುರ್ಧರ್ಷಃ ಕೃತಂ ಕಾರ್ಯಮಮನ್ಯತ ।
ತತಃ ಪಾಶುಪತಂ ದಿವ್ಯಮವಾಪ್ಯ ಪುನರೀಶ್ವರಾತ್ ॥ ೮೭ ॥

ತತೋಽರ್ಜುನಹೃಷೀಕೇಶೌ ಪುನಃ ಪುನರರಿಂದಮೌ ।
ವವಂದತುಶ್ಚ ಸಂಹೃಷ್ಟೌ ಶಿರೋಭ್ಯಾಂ ತೌ ಮಹೇಶ್ವರಮ್ ॥ ೮೮ ॥

ಅವನ ಮನಸ್ಸಿನ ಅಭಿಪ್ರಾಯವನ್ನು ತಿಳಿದು ಶಿವನು ಪ್ರಸನ್ನನಾಗಿ ವರವನ್ನು ನೀಡಿದನು. ದುರ್ಧರ್ಷನಾದ ಅರ್ಜುನನು ರೋಮಾಂಚಿತನಾಗಿ ತನ್ನ ಕಾರ್ಯವು ಸಿದ್ಧಿಸಿತೆಂದು ಭಾವಿಸಿದನು. ಅನಂತರ ದಿವ್ಯವಾದ ಪಾಶುಪತಾಸ್ತ್ರವನ್ನು ಪಡೆದು, ಶತ್ರುಘಾತಕರಾದ ಕೃಷ್ಣಾರ್ಜುನರಿಬ್ಬರೂ ಸಂತೋಷದಿಂದ ಮಹೇಶ್ವರನಿಗೆ ಶಿರಸ್ಸಹಿತವಾದ ಅಷ್ಟಾಂಗ ನಮಸ್ಕಾರವನ್ನು ಮಾಡಿದರು.

ಅನುಜ್ಞಾತೌ ಕ್ಷಣೇ ತಸ್ಮಿನ್ ಭವೇನಾರ್ಜುನಕೇಶವೌ ।
ಪ್ರಾಪ್ತೌ ಸ್ವಶಿಬಿರಂ ವೀರೌ ಮುದಾ ಪರಮಯಾ ಯುತೌ ॥ ೮೯ ॥

ಶಿವನಿಂದ ಅನುಮತಿಯನ್ನು ಪಡೆದವರಾಗಿ ಆ ಕ್ಷಣದಲ್ಲಿಯೇ ವೀರರಾದ ಕೃಷ್ಣಾರ್ಜುನರು ಬಹಳ ಸಂತೋಷದಿಂದ ಕೂಡಿದವರಾಗಿ ತಮ್ಮ ಶಿಬಿರಕ್ಕೆ ಹಿಂದಿರುಗಿದರು.

ತಥಾ ಭವೇನಾನುಮತೌ ಮಹಾಸುರನಿಪಾತಿನೌ ।
ಇಂದ್ರಾವಿಷ್ಣೂ ಯಥಾ ಪ್ರೀತೌ ಜಂಭಸ್ಯ ವಧಕಾಂಕ್ಷಿಣೌ ॥ ೯೦ ॥

ಜಂಭನ ವಧೆಯನ್ನು ಬಯಸಿದ ಇಂದ್ರ ಮತ್ತು ವಿಷ್ಣುವು ಹೇಗೆ ಪ್ರಸನ್ನರಾಗಿದ್ದರೋ ಹಾಗೆ ಮಹಾಸುರರ ಘಾತಕರಾದ ಅವರಿಬ್ಬರೂ ಶಿವನಿಂದ ಅನುಜ್ಞಾತರಾಗಿ ಸಂತುಷ್ಟರಾದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುಃಸಪ್ತತಿತಮೋಽಧ್ಯಾಯಃ ॥
॥ ಪ್ರತಿಜ್ಞಾಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೈದನೆಯ ಅಧ್ಯಾಯ

ಪ್ರಾತರಾಹ್ನಿಕವನ್ನು ಪೂರೈಸಿದ ಯುಧಿಷ್ಠಿರನ ಬಳಿಗೆ ಕೃಷ್ಣನ ಆಗಮನ ಮತ್ತು ಜಯದ್ರಥನ ವಧೆಯ ವಿಷಯದಲ್ಲಿ ಅವನಿಗೆ ಸಮಾಶ್ವಾಸನ.

ಸಂಜಯಃ

ತಯೋಃ ಸಂವದತೋರೇವ ಕೃಷ್ಣದಾರುಕಯೋಸ್ತದಾ ।
ಸಾತ್ಯಕಾದ್ ರಜನೀ ರಾಜನ್ನಥ ರಾಜಾ ಸ್ಮ ಬೋಧ್ಯತೇ ॥ ೧ ॥

ಸಂಜಯ– ಎಲೈ ರಾಜನೇ, ಕೃಷ್ಣ-ದಾರುಕರು ಹೀಗೆ ಮಾತನಾಡುವುದರಲ್ಲಿಯೇ ರಾತ್ರಿಯು ಕಳೆಯಿತು. ಆನಂತರ ಯುಧಿಷ್ಠಿರನನ್ನು ಎಬ್ಬಿಸಿದರು.

ಪಠಂತಿ ಪಾಣಿಧ್ವನಿಕಾ ಮಾಗಧಾಃ ಸ್ತವಗಾಯಕಾಃ ।
ವೈತಾಲಿಕಾಶ್ಚ ಸೂತಾಶ್ಚ ಸ್ತುವಂತಿ ಪುರುಷರ್ಷಭಮ್ ॥ ೨ ॥

ಹಸ್ತದಿಂದ ಶಬ್ದವನ್ನು ಮಾಡಿ ಎಬ್ಬಿಸುವವರೂ, ಸೂತ-ಮಾಗಧರೂ (ಆ ವಂಶದ ಹಿಂದಿನ ರಾಜರುಗಳ ಗುಣಗಳನ್ನು ಹೇಳುವವರು ಸೂತರು, ವರ್ತಮಾನ ರಾಜನ ಗುಣಗಳನ್ನು ಹೇಳುವವರು ಮಾಗಧರು) ಮತ್ತು ವೈತಾಲಿಕರು (ನಿದ್ರೆಯಿಂದ ಎಬ್ಬಿಸುವವರು) ಪುರುಷಶ್ರೇಷ್ಠನಾದ ಧರ್ಮರಾಜನನ್ನು ಸ್ತೋತ್ರ ಮಾಡಿದರು.

ನರ್ತಕಾಶ್ಚಾಪಿ ನೃತ್ಯಂತಿ ಗಾಂತಿ ಗೀತಾನಿ ಗಾಯಕಾಃ ।
ಕುರುವಂಶಸ್ತವಾರ್ಥಾನಿ ಮಧುರಂ ರಕ್ತಕಂಠಿನಃ ॥ ೩ ॥

ನರ್ತಕರು ನೃತ್ಯವನ್ನು ಮಾಡಿದರು. ಗಾಯಕರು ಅನುರಾಗಯುಕ್ತವಾದ ಕಂಠದಿಂದ ಮಧುರವಾಗಿ ಕುರುವಂಶವನ್ನು ಸ್ತೋತ್ರ ಮಾಡಿದರು, ಗೀತೆಯನ್ನು ಹಾಡಿದರು.

ಮೃದಂಗಝರ್ಝರೀಭೇರ್ಯಃ ಪಣವಾನಕಗೋಮುಖಾಃ ।
ಆಡಂಬರಾಣಿ ಶಂಖಾಶ್ಚ ದುಂದುಭ್ಯಶ್ಚ ಮಹಾಸ್ವನಾಃ ॥ ೪ ॥

ಏವಮೇತಾನಿ ಸರ್ವಾಣಿ ತಥಾಽನ್ಯಾನ್ಯಪಿ ಭಾರತ ।
ವಾದಯಂತಿ ಸ್ಮ ಗಂಭೀರಂ ಕುಶಲಾಃ ಸಾಧುಶಿಕ್ಷಿತಾಃ ॥ ೫ ॥

ಎಲೈ ಭಾರತನೇ, ಮೃದುಂಗ, ಝರ್ಝರಿ, ಭೇರಿ, ಪಣವ, ಆನಕ, ಗೋಮುಖ, ಆಡಂಬರ, ಶಂಖ, ಮಹಾನಾದವುಳ್ಳ ದುಂದುಭಿಗಳು- ಈ ಎಲ್ಲ ವಾದ್ಯಗಳು ಮತ್ತು ಬೇರೆ ವಾದ್ಯಗಳೂ ಸಹ ಕುಶಲರಾದ ವಾದಕರಿಂದ ಗಂಭೀರವಾಗಿ ವಾದಿಸಲ್ಪಟ್ಟವು.

ಸ ಮೇಘಸಮನಿರ್ಘೋಷೋ ಮಹಚ್ಛಬ್ದೋಽಸ್ಪೃಶದ್ ದಿವಮ್ ।
ಪಾರ್ಥಿವಪ್ರವರಂ ಸುಪ್ತಂ ಯುಧಿಷ್ಠಿರಮಬೋಧಯತ್ ॥ ೬ ॥

ಮೇಘಘೋಷಕ್ಕೆ ಸಮವಾದ ಆ ದೊಡ್ಡಶಬ್ದವು ಅಂತರಿಕ್ಷವನ್ನು ಮುಟ್ಟಿ ಶ್ರೇಷ್ಠರಾಜನಾದ ಯುಧಿಷ್ಠಿರನನ್ನು ನಿದ್ದೆಯಿಂದ ಎಚ್ಚರಿಸಿತು.

ಪ್ರತಿಬುದ್ಧಃ ಸುಖಂ ಸುಪ್ತೋ ಮಹಾರ್ಹೇ ಶಯನೋತ್ತಮೇ ।
ಉತ್ಥಾಯಾವಶ್ಯಕಾರ್ಯಾಣಿ ಕೃತ್ವಾ ಸ್ನಾನಗೃಹಂ ಯಯೌ ॥ ೭ ॥

ಶ್ರೇಷ್ಠವಾದ, ಮಹಾಬೆಲೆಬಾಳುವ ಶಯನದಲ್ಲಿ ಸುಖವಾಗಿ ಮಲಗಿ ಎದ್ದ ಯುಧಿಷ್ಠಿರನು ಅವಶ್ಯ ಕರ್ಮವನ್ನು ಮಾಡಿ, ಸ್ನಾನಗೃಹಕ್ಕೆ ಹೋದನು.

ಶುಕ್ಲಾಂಬರಧರಾಃ ಸ್ನಾತಾಃ ತರುಣಾಸ್ಶೋತ್ತರಂ ಶತಮ್ ।
ಸ್ನಾಪಕಾಃ ಕಾಂಚನೈಃ ಕುಂಭೈಃ ಪೂರ್ಣೈಃ ಸಮುಪತಸ್ಥಿರೇ ॥ ೮ ॥

ಸ್ನಾನವನ್ನು ಮಾಡಿ, ಶುಭ್ರವಸ್ತ್ರವನ್ನು ಧರಿಸಿದ, ಸ್ನಾನವನ್ನು ಮಾಡಿಸುವ ನೂರೆಂಟು ತರುಣರು ನೀರಿನಿಂದ ಪೂರ್ಣವಾದ ಸುವರ್ಣ ಕುಂಭಗಳನ್ನು ಹಿಡಿದು ಅವನ ಸಮೀಪಕ್ಕೆ ಬಂದರು.

ಭದ್ರಾಸನೇ ಸೂಪವಿಷ್ಟಃ ಪರಿಧಾಯಾಂಬರಂ ಲಘು ।
ಉತ್ಸಾರಿತಃ ಕಷಾಯೇಣ ಬಲವದ್ಭಿಃ ಸುಶಿಕ್ಷಿತೈಃ ।
ಸಸ್ನೌ ಚಂದನಸಂಯುಕ್ತೈಃ ಸ್ನಾನೀಯೈರಭಮಂತ್ರಿತೈಃ ॥ ೯ ॥

ತೆಳುವಾದ ವಸ್ತ್ರವನ್ನು ಹೊಂದಿದ್ದು, ಮಂಗಳಮಯವಾದ ಆಸನದಲ್ಲಿ ಚೆನ್ನಾಗಿ ಕುಳಿತ ಯುಧಿಷ್ಠಿರನಿಗೆ ಬಲಿಷ್ಠರಾದವರೂ ಮತ್ತು ಸುಶಿಕ್ಷಿತರಾದವರೂ ಆದ ಸೇವಕರು ಪರಿಮಳಯುಕ್ತವಾದ ಸ್ನಾನಚೂರ್ಣದಿಂದ ಉಜ್ಜಿ, ಅವನ ದೇಹವನ್ನು ಶುದ್ಧಗೊಳಿಸಿದರು. ಅನಂತರ ಅವನು ಅಭಿಮಂತ್ರಿತವಾದ ಚಂದನಯುಕ್ತವಾದ ಜಲದಿಂದ ಸ್ನಾನ ಮಾಡಿದನು.

ಆಪ್ಲುತಃ ಸಾಧಿವಾಸೇನ ಜಲೇನ ಸಸುಗಂಧಿನಾ ।
ರಾಜಹಂಸನಿಭಂ ಗೃಹ್ಯ ಉಷ್ಣೀಷಂ ಶಿಥಿಲಾರ್ಪಿತಮ್ ॥ ೧೦ ॥

ಜಲಕ್ಷಯನಿಮಿತ್ತಂ ವೈ ವೇಷ್ಟಯಾಮಾಸ ಮೂರ್ಧನಿ ॥ ೧೧ ॥

ಪರಿಮಳ ದ್ರವ್ಯದಿಂದ ಕೂಡಿ, ಸುಗಂಧಯುಕ್ತವಾದ ಜಲದಿಂದ ಸ್ನಾನವನ್ನು ಮಾಡಿ ತಲೆಯ ನೀರನ್ನು ಒಣಗಿಸಲು ರಾಜಹಂಸದಂತೆ ಶುಭ್ರವಾದ, ತೆಳುವಾದ ಸೇವಕರು ಕೊಟ್ಟ ಒಂದು ಉಷ್ಣೀಷವನ್ನು ತಲೆಗೆ ಸುತ್ತಿಕೊಂಡನು.

ಹರಿಣಾ ಚಂದನೇನಾಂಗಮುಪಲಿಪ್ಯ ಮಹಾಭುಜಃ ।
ಸ್ರಗ್ವೀ ಚಾಕ್ಲಿಷ್ಟವಸನಃ ಪ್ರಾಂಜಲಿಃ ಪ್ರಾಙ್ಮುಖಿಃ ಸ್ಥಿತಃ ॥ ೧೨ ॥

ಮಹಾಭುಜನಾದ ಅವನು ಹರಿಚಂದನದಿಂದ ತನ್ನ ದೇಹವನ್ನು ಲೇಪಿಸಿಕೊಂಡು, ಮಾಲೆಯನ್ನು ಧರಿಸಿ, ಸುಲಭವಾದ ವಸ್ತ್ರವನ್ನು ಧರಿಸಿ, ಪೂರ್ವಾಭಿಮುಖವಾಗಿ ಕೈಗಳನ್ನು ಮುಗಿದು ಕುಳಿತನು.

ಕೃತ್ವೇಂದ್ರಿಯಾಣಾಮೈಕಾಗ್ರ್ಯಂ ಮನಸಶ್ಚ ಮಹಾಮನಾಃ ।
ಜಜಾಪ ಜಪ್ಯಂ ಕೌಂತೇಯಃ ಸತಾಂ ಮಾರ್ಗಮನುಷ್ಮಿತಃ ।
ತತೋऽಗ್ನಿಶರಣಂ ದೀಪ್ತಂ ಪ್ರವಿವೇಶ ಸಮಾಹಿತಃ ॥ ೧೩ ॥

ಧೈರ್ಯಶಾಲಿಯಾದ ಕೌಂತೇಯನಾದ ಯುಧಿಷ್ಠಿರನು ಇಂದ್ರಿಯಗಳನ್ನು ಮತ್ತು ಮನಸ್ಸನ್ನು ಏಕಾಗ್ರಗೊಳಿಸಿ, ಸಜ್ಜನರ ಮಾರ್ಗವನ್ನು ಅನುಸರಿಸಿ, ಜಪಿಸಬೇಕಾದ ಜಪವನ್ನು ಮಾಡಿದನು. ಅನಂತರ ಸಮಾಧಾನಚಿತ್ತದಿಂದ ಕೂಡಿದವನಾಗಿ ಶೋಭಿಸುವ ಅಗ್ನಿಗೃಹವನ್ನು ಪ್ರವೇಶಿಸಿದನು.

ಸಮಿದ್ಭಿಃ ಸಪವಿತ್ರಾಭರಗ್ನಿಮಾಹುತಿಭಿಸ್ತಥಾ ।
ಮಂತ್ರಪೂತಾಭರರ್ಚಿತ್ವಾ ನಿಶ್ಚಕ್ರಾಮ ಗೃಹಾತ್ತತಃ ॥ ೧೪ ॥

ಪವಿತ್ರವನ್ನು ಧರಿಸಿ, ಸಮಿತ್ತುಗಳಿಂದಲೂ, ಅಭಿಮಂತ್ರಿತವಾದ ಆಹುತಿಗಳಿಂದಲೂ ಅಗ್ನಿಯನ್ನು ಆರ್ಚಿಸಿ ಅಗ್ನಿಗೃಹದಿಂದ ಹೊರಗೆ ಬಂದನು.

ದ್ವಿತೀಯಾಂ ಚ ನರವ್ಯಾಘ್ರ ಕಕ್ಷ್ಯಾಂ ನಿಷ್ಕಮ್ಯ ಪಾಂಡವಃ ।
ತತ್ರ ವೇದವಿದೋ ವಿದ್ವಾನಪಶ್ಯದ್ ಬ್ರಾಹ್ಮಣರ್ಷಭಾನ್ ॥ ೧೫ ॥

ಎಲೈ ನರವ್ಯಾಘ್ರನೇ, ಪಾಂಡವನಾದ ಅವನು ಎರಡನೆಯ ಕಕ್ಷೆಯಿಂದ ಹೊರಗೆ ಬಂದು ಅಲ್ಲಿ ವೇದವಿದ್ವಾಂಸರಾದ ಶ್ರೇಷ್ಠ ಬ್ರಾಹ್ಮಣರನ್ನು ನೋಡಿದನು.

ದಾಂತಾನ್ ವೇದವ್ರತಸ್ನಾತಾನ್ ಸ್ನಾತಾನವಭೃಥೇಷು ಚ ।
ಅಷ್ಟೌ ಚೈಷಾಂ ಸಹಸ್ರಂ ಚ ಸಹಸ್ರಾನುಚರಾನ್ ನೃಪ ॥ ೧೬ ॥

ಅಕ್ಷತೈಃ ಸುಮನೋಭಿಶ್ಚ ಸ್ವಸ್ತಿ ವಾಚ್ಯಾಥ ಮೋದಕೈಃ ।
ತಾನ್ ದ್ವಿಜಾನ್ ದಧಿಸರ್ಪಿರ್ಭ್ಯಾಂ ಫಲೈಶ್ಚೇಷ್ಟೈಃ ಸುಮಂಗಲೈಃ ॥೧೭ ॥

ಇಂದ್ರಿಯನಿಗ್ರಹವುಳ್ಳವರೂ, ವೇದವ್ರತವನ್ನು ಪೂರೈಸಿದವರೂ, ಗುರುಕುಲ ವಾಸವನ್ನು ಮುಗಿಸಿ ಸಾಧಕರಾದವರೂ, ಯಜ್ಞದಲ್ಲಿ ಅವಭೃಥ ಸ್ನಾನವನ್ನು ಮಾಡಿದವರೂ ಆದ ಸಹಸ್ರಾನುಚರರಿಂದ ಕೂಡಿದ ಎಂಟು ಸಹಸ್ರ ಬ್ರಾಹ್ಮಣ ಶ್ರೇಷ್ಠರನ್ನು ಅಕ್ಷತೆಗಳಿಂದ ಮತ್ತು ಪುಷ್ಪಗಳಿಂದ ಅರ್ಚಿಸಿ, ಅವರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಅವರನ್ನು ಮೋದಕಗಳಿಂದಲೂ, ದಧಿ-ಆಜ್ಯಗಳಿಂದಲೂ, ಇಷ್ಟವಾದ ಮಂಗಲಗಳಿಂದಲೂ ಅರ್ಚಿಸಿದನು.

ಪ್ರಾದಾತ್ ಕಾಂಚನಮೇಕೈಕಂ ನಿಷ್ಕಂ ವಿಪ್ರಾಯ ಪಾಂಡವಃ ।
ಅಲಂಕೃತಂ ಚಾಶ್ವಶತಂ ವಾಸಾಂಸೀಷ್ಟಾಶ್ಚ ದಕ್ಷಿಣಾಃ ॥ ೧೮ ॥

ಪಾಂಡವನು ಪ್ರತಿಯೊಬ್ಬ ಬ್ರಾಹ್ಮಣನಿಗೂ ಒಂದೊಂದು ಸುವರ್ಣನಿಷ್ಕವನ್ನೂ ಅಲಂಕೃತವಾದ ನೂರು ಅಶ್ವಗಳನ್ನೂ, ವಸ್ತ್ರಗಳನ್ನೂ ಮತ್ತು ಅಭೀಷ್ಟವಾದ ದಕ್ಷಿಣೆಗಳನ್ನೂ ನೀಡಿದನು.

ತಥಾ ಗಾಃ ಕಪಿಲಾ ದೋಗ್ಧ್ರೀಃ ಸರ್ಷಭಾಃ ಪಾಂಡುನಂದನಃ ।
ಹೇಮಶೃಂಗಾ ರೂಪ್ಯಖುರಾ ದತ್ವಾ ಚಕ್ರೇ ಪ್ರದಕ್ಷಿಣಮ್ ॥ ೧೯ ॥

ಹಾಗೆಯೇ ಹಾಲನ್ನು ಕರೆಯುವ, ವತ್ಸ ಸಹಿತವಾದ, ಹೇಮಶೃಂಗಗಳನ್ನು ಮತ್ತು ರೂಪ್ಯಖುರಗಳನ್ನು ಹೊಂದಿದ ಕಪಿಲಾ ಗೋವುಗಳನ್ನು ಪ್ರದಕ್ಷಿಣೆ ಮಾಡಿ ಅವುಗಳನ್ನೂ ದಾನವಾಗಿ ನೀಡಿದನು.

ಸ್ಪ್ಯಕಾನ್ ವರ್ಧಮಾನಾಂಶ್ಚ ನಂದ್ಯಾವರ್ತಾಂಶ್ಚ ಕಾಂಚನಾನ್ ।
ಸುಮನೋಲಾಜಕುಂಭಾಂಶ್ಚ ಜ್ವಲಿತಂ ಚ ಹುತಾಶನಮ್ ॥ ೨೦ ॥

ಪೂರ್ಣಾನ್ಯಕ್ಷತಪಾತ್ರಾಣಿ ರುಚಕಾನ್ ರೋಚನಾಂಸ್ತಥಾ ।
ಸ್ವಲಂಕೃತಾಃ ಶುಭಾಃ ಕನ್ಯಾ ದಧಿಸರ್ಪಿರ್ಮಧೂದಕಮ್ ॥ ೨೧ ॥

ಮೃಗಪಕ್ಷಿಪಶೂನ್ ಪುಣ್ಯಾನ್ ತತ್ರ ಮಂಗಲಪೂಜಿತಾನ್ ।
ದೃಷ್ಟ್ವಾ ಸ್ಪೃಷ್ಟ್ವಾ ಚ ಕೌಂತೇಯಃ ಕಕ್ಷ್ಯಾಂ ಬಾಹ್ಯಾಂ ವಿನಿರ್ಯಯೌ ॥

ಸ್ಪ್ಯಕೆಗಳು, ವರ್ಧಮಾನಗಳು, ಕಾಂಚನಮಯವಾದ ನಂದ್ಯಾವರ್ತಗಳು, ಪುಷ್ಪಗಳು, ಆರಳು, ಪೂರ್ಣಕುಂಭಗಳು, ಜ್ವಲಿತವಾದ ಅಗ್ನಿ, ಪೂರ್ಣವಾದ ನಕ್ಷತ್ರ ಪಾತ್ರೆಗಳು, ಮಾತುಲಿಂಗ ಮತ್ತು ಬೇರೆಯ ಮಂಗಳಫಲಗಳು, ಅಲಂಕೃತರಾದ ಶ್ರೇಷ್ಠ ಕನ್ಯೆಯರು, ಹಾಲು-ತುಪ್ಪ ಜೇನುತುಪ್ಪ ಉದಕಗಳು, ಮಂಗಳದ್ರವ್ಯದಿಂದ ಪೂಜಿತವಾದ ಪವಿತ್ರವಾದ ಮೃಗ-ಪಕ್ಷಿಗಳು, ಇವುಗಳಲ್ಲಿ ಕೆಲವನ್ನು ನೋಡಿ, ಕೆಲವನ್ನು ಸ್ಪರ್ಶಿಸಿ ಕುಂತೀಪುತ್ರನಾದ ಅವನು ಹೊರಗಿನ ಕಕ್ಷೆಗೆ ಬಂದನು.

ತತಸ್ತಸ್ಯ ಮಹಾಭಾಗಾಃ ತಿಷ್ಠತಃ ಪರಿಚಾರಕಾಃ ।
ಸೌವರ್ಣಂ ಸರ್ವತೋಭದ್ರಂ ಮುಕ್ತಾವೈಡೂರ್ಯಮಂಡಿತಮ್ ॥೨೩॥

ಪರಾರ್ಘ್ಯಾಸ್ತರಣಾಸ್ತೀರ್ಣಂ ಸೋತ್ತರಚ್ಛದಮಮೃದ್ರಿಮತ್ ।
ವಿಶ್ವಕರ್ಮಕೃತಂ ದಿವ್ಯಮುಪಜಹ್ರುರ್ವರಾಸನಮ್ ॥ ೨೪ ॥

ಹಾಗೆ ಬಂದು ಅಲ್ಲಿನಿಂತ ಅವನಿಗೆ ಪರಿಚಾರಕರಾದ ಮಹಾಸುಭಾವರು, ಮುತ್ತು ವೈಡೂರ್ಯದಿಂದ ಅಲಂಕೃತವಾದ, ಬೆಲೆಬಾಳುವ ಕಂಬಳಿಯನ್ನು ಹೊದ್ದಿಸಿದ ಸಂಪದ್ಯುಕ್ತವಾದ, ಮಂಗಳಕರವಾದ, ವಿಶ್ವಕರ್ಮಸಿಂದ ಮಾಡಲ್ಪಟ್ಟ ಎಲ್ಲವೂ ಶ್ರೇಷ್ಠವೂ ಆದ ಆಸನವನ್ನು ತಂದರು.

ತತ್ರ ತಸ್ಯೋಪವಿಷ್ಟಸ್ಯ ಭೂಷಣಾನಿ ಮಹಾತ್ಮನಃ ।
ಉಪಜಹ್ರುರ್ಮಹಾರ್ಹಾಣಿ ಪ್ರೇಷ್ಯಾಃ ಶುಭ್ರಾಶ್ಚ ಸರ್ವಶಃ ॥ ೨೫ ॥

ಆಲ್ಲಿ ಆಸನದಲ್ಲಿ ಕುಳಿತ ಆ ಮಹಾನುಭಾವನಿಗೆ ಸೇವಕರು ಎಲ್ಲ ಕಡೆಯಿಂದಲೂ ಶುಭ್ರವಾದ ಮತ್ತು ಬೆಲೆಬಾಳುವ ಆಭರಣಗಳನ್ನು ತಂದರು.

ಯುಕ್ತಾಭರಣವೇಷಸ್ಯ ಕೌಂತೇಯಸ್ಯ ಮಹಾತ್ಮನಃ ।
ರೂಪಮಾಸೀನ್ಮಹಾರಾಜ ದ್ವಿಷತಾಂ ಶೋಕವರ್ಧನಮ್ ॥ ೨೬ ॥

ಎಲೈ ಮಹಾರಾಜನೇ, ಯೋಗ್ಯವಾದ ವಸ್ತ್ರಾಭರಣವನ್ನು ಧರಿಸಿದ ಮಹಾತ್ಮನಾದ ಯುಧಿಷ್ಠಿರನ ರೂಪವು ಶತ್ರುಗಳಿಗೆ ಶೋಕವರ್ಧನವಾಗಿದ್ದಿತು.

ಪಾಂಡರೈಶ್ಚಂದ್ರರಶ್ಮ್ಯಭೈರ್ಹೇಮದಂಡೈಶ್ಚ ಚಾಮರೈಃ ।
ದೋಧೂಯಮಾನಃ ಶುಶುಭೇ ವಿದ್ಯುದ್ಭಿರಿವ ತೋಯದಃ ॥ ೨೭ ॥

ಚಂದ್ರರಶ್ಮಿಯನ್ನು ಹೋಲುವ, ಹೇಮದಂಡ ಸಹಿತವಾದ ಶ್ವೇತ ಚಾಮರಗಳಿಂದ ಬೀಸಲ್ಪಡುವ ಅವನು ಮಿಂಚಿನಿಂದ ಕೂಡಿದ ಮೋಡದಂತೆ ಶೋಭಿಸಿದನು.

ಸಂಸ್ತೂಯಮಾನಃ ಸೂತೈಶ್ಚ ವಂದ್ಯಮಾನಶ್ಚ ವಂದಿಭಿಃ ।
ಉದ್ಗೀಯಮಾನೋ ಗಂಧರ್ವೈರಾಸ್ತೇ ಸ್ಮ ಕುರುನಂದನಃ ॥ ೨೮ ॥

ಸೂತರಿಂದ ಸ್ತೋತ್ರ ಮಾಡಲ್ಪಟ್ಟು, ವಂದಿಗಳಿಂದ ನಮಸ್ಕರಿಸಲ್ಪಟ್ಟು, ಗಂಧರ್ವರಿಂದ ಗಾನ ಮಾಡಲ್ಪಟ್ಟು ಕುರುನಂದನನಾದ ಯುಧಿಷ್ಠಿರನು ಆಸನದಲ್ಲಿ ಕುಳಿತಿದ್ದನು.

ತತೋ ಮುಹೂರ್ತಮಾಸೀಚ್ಚ ವಂದಿನಾಂ ನಿನದೋ ಮಹಾನ್ ।
ರಥಾನಾಂ ನೇಮಿಘೋಷಾಶ್ಚ ಖುರಘೋಷಶ್ಚ ವಾಜಿನಾಮ್ ॥ ೨೯ ॥

ಹ್ರಾದಶ್ಚ ಗಜಘಂಟಾನಾಂ ಶಂಖಾನಾಂ ಚ ರವೋ ಮಹಾನ್ ।
ನರಾಣಾಂ ಪದಶಬ್ದಶ್ಚ ಕಂಪತೀವ ಸ್ಮ ಮೇದಿನೀಮ್ ॥ ೩೦ ॥

ಅನಂತರ ಒಂದು ಮುಹೂರ್ತದವರೆಗೆ ವಂದಿಗಳ ದೊಡ್ಡ ನಿನಾದವೂ, ರಥಗಳ ಚಕ್ರದ ಘೋಷವೂ, ಅಶ್ವಗಳ ಖುರಘೋಷವೂ, ಗಜಘಂಟೆಗಳ ನಾದವೂ, ದೊಡ್ಡ ಶಂಖನಾದವೂ, ಪದಾತಿಗಳ ಪದಶಬ್ದವೂ ಭೂಮಿಯನ್ನು ನಡುಗಿಸುವಂತೆ ಉಂಟಾಯಿತು.

ತತಃ ಕ್ಷತ್ತಾ ಸಮಾಸಾದ್ಯ ಜಾನುಭ್ಯಾಂ ಭೂತಳೇ ಸ್ಥಿತಃ ।
ಶಿರಸಾ ವಂದನೀಯಂ ತಮಭಿವಾದ್ಯ ಜಗತ್ಪತಿಮ್ ॥ ೩೧ ॥

ಕುಂಡಲೀ ಬದ್ಧನಿಸ್ತ್ರಿಂಶಃ ಸನ್ನದ್ಧಃ ಪ್ರಾಂಜಲಿರ್ಯ್ಯವಾ ।
ನ್ಯವೇದಯದ್ ಹೃಷೀಕೇಶಮುಪಾಯಾತಂ ಮಹಾತ್ಮನೇ ॥ ೩೨ ॥

ಅಭಿಪ್ರಣಮ್ಯ ಶಿರಸಾ ದ್ವಾಸ್ಥೋ ಧರ್ಮಾತ್ಮಜಾಯ ತು ।

ಆನಂತರ ಸಾರಥಿಯು ಅವನನ್ನು ಸಮೀಪಿಸಿ, ಭೂಮಿಯ ಮೇಲೆ ಮಂಡಿಗಳನ್ನು ಊರಿ, ಜಗತ್ತ್ರಿಯೂ ವಂದನೀಯನೂ ಆದ ಅವನನ್ನು ಶಿರಸಾ ವಂದಿಸಿ, ಕುಂಡಲಗಳನ್ನು ಧರಿಸಿ, ಸೊಂಟಕ್ಕೆ ಖಡ್ಗವನ್ನು ಕಟ್ಟಿ ಸನ್ನದ್ಧನಾದ ಯುವಕನಾದ ಅವನು ಕೈಗಳನ್ನು ಮುಗಿದು, ಕೃಷ್ಣನು ಬಂದಿದ್ದಾನೆಂದು ಆ ಮಹಾತ್ಮನಿಗೆ ತಿಳಿಸಿದನು. ದ್ವಾರ ಪಾಲಕನೂ ಸಹ ಬಂದು ಯುಧಿಷ್ಠಿರನಿಗೆ ನಮಸ್ಕರಿಸಿ ಕೃಷ್ಣನ ಆಗಮನವನ್ನು ತಿಳಿಸಿದನು.

ತಮಬ್ರವೀತ್ ತತೋ ರಾಜಾ ಸ್ವಾಗತೇನೈವ ಮಾಧವಃ ॥ ೩೩ ॥

ಪ್ರವೇಶ್ಯತಾಂ ಸಮೀಪಂ ಮೇ ಕಿಮರ್ಥಂ ಪ್ರವಿಲಂಬಸೇ ।
ಅರ್ಘ್ಯಂ ಚೈವಾಸನಂ ತಸ್ಮೈ ದೀಯತಾಂ ಪರಮಾರ್ಚಿತಮ್ ॥ ೩೪ ॥

ರಾಜನು ಅವನನ್ನು ಕುರಿತು, ಏಕೆ ತಡ ಮಾಡುತ್ತಿದ್ದೀಯೆ? ಸ್ವಾಗತಪೂರ್ವಕವಾಗಿ ಮಾಧವನನ್ನು ನನ್ನ ಬಳಿಗೆ ಕರೆದುಕೊಂಡು ಬಾ. ಅವನಿಗೆ ಬಹಳ ಶ್ರೇಷ್ಠವಾದ ಅರ್ಘ್ಯ ಮತ್ತು ಆಸನವನ್ನು ಕೊಡುವವರಾಗಿ ಎಂದು ಹೇಳಿದನು.

ಸಂಜಯಃ

ತತಃ ಪ್ರವೇಶ್ಯ ವಾರ್ಷ್ಣೇಯಮುಪವೇಶ್ಯ ವರಾಸನೇ ।
ಸತೃತ್ಯ ಸತೃತಸ್ತೇನ ಪರ್ಯಪೃಚ್ಛದ್ ಯುಧಿಷ್ಠಿರಃ ॥ ೩೫ ॥

ತತೋ ಯುಧಿಷ್ಠಿರೋ ರಾಜಾ ಪ್ರತಿನಂದ್ಯ ಜನಾರ್ದನಮ್ ।
ಉವಾಚ ಪರಮಃ ಪ್ರೀತಃ ಕೌಂತೇಯೋ ದೇವಕೀಸುತಮ್ ॥ ೩೬ ॥

ಸಂಜಯ– ಆನಂತರ ಕೃಷ್ಣನು ಒಳಗೆ ಬರುವಂತೆ ಮಾಡಿ, ಅವನನ್ನು ಶ್ರೇಷ್ಠವಾದ ಆಸನದಲ್ಲಿ ಕುಳ್ಳಿರಿಸಿ, ಅವನನ್ನು ಸತ್ಕರಿಸಿ, ತಾನೂ ಅವನಿಂದ ಸತ್ಕೃತನಾಗಿ ಯುಧಿಷ್ಠಿರನು ಕುಶಲ ಪ್ರಶ್ನೆಯನ್ನು ಮಾಡಿದನು. ಯುಧಿಷ್ಠಿರನು ಜನಾರ್ದನನನ್ನು ಅಭಿನಂದಿಸಿ, ಬಹಳ ಸಂತೋಷದಿಂದ ಕೂಡಿದವನಾಗಿ, ದೇವಕೀಪುತ್ರನನ್ನು ಕುರಿತು ಮಾತನಾಡಿದನು.

ಸುಖೇನ ರಜನೀ ವ್ಯುಷ್ಟಾ ಕಚ್ಚಿತ್ ತೇ ಮಧುಸೂದನ ।
ಕಚ್ಚಿತ್ ಜ್ಞಾನಾನಿ ಸರ್ವಾಣಿ ಪ್ರಸನ್ನಾನಿ ಮಹಾಮತೇ ॥ ೩೭ ॥

ಎಲೈ ಮಧುಸೂದನನೇ, ರಾತ್ರಿಯು ನಿನಗೆ ಸುಖವಾಗಿ ಕಳೆಯಿತಷ್ಟೆ? ಎಲೈ ಮಹಾಮತಿಯೇ, ನಿನ್ನ ಎಲ್ಲ ಇಂದ್ರಿಯಗಳೂ ಪ್ರಸನ್ನವಾಗಿವೆಯಷ್ಟೆ? (ಎಂದು ಕೇಳಿದನು).

ವಾಸುದೇವೋಽಪಿ ತದ್ ಯುಕ್ತಂ ಪರ್ಯಪೃಚ್ಛದ್ ಯುಧಿಷ್ಠಿರಮ್ ।
ದರ್ಶನಾದೇವ ತೇ ಸೌಮ್ಯ ನ ಕಿಂಚಿದಶುಭಂ ಮಮ ॥ ೩೮ ॥

ಕೃಷ್ಣನೂ ಸಹ ಆ ಸಮಯಕ್ಕೆ ಯೋಗ್ಯವಾಗಿ ಎಲೈ ಸೌಮ್ಯನೇ, ನಿನ್ನ ದರ್ಶನದಿಂದಲೇ ನನಗೆ ಎಲ್ಲ ಅಶುಭವೂ ನಷ್ಟವಾಗಿದೆ ಎಂದು ಹೇಳಿ, ಆ ಸಮಯಕ್ಕೆ ಯೋಗ್ಯವಾದ ಕುಶಲ ಪ್ರಶ್ನೆಯನ್ನು ಮಾಡಿದನು.

ತತೋ ವೈ ಪ್ರಕೃತೀಃ ಸರ್ವಾ ನ್ಯವೇದಯದುಪಸ್ಥಿತಾಃ ।
ಅನುಜ್ಞಾತಶ್ಚ ರಾಜ್ಞಾ ಸ ಪ್ರಾವೇಶಯತ ತಂ ಜನಮ್ ॥ ೩೯ ॥

ಆನಂತರ ಎಲ್ಲ ಪ್ರಜೆಗಳೂ ಬಂದಿದ್ದಾರೆಂದು ರಾಜನಿಗೆ ನಿವೇದಿಸಲಾಯಿತು. ರಾಜನ ಅನುಮತಿಯನ್ನು ಪಡೆದು ಅವರೆಲ್ಲರನ್ನೂ ಒಳಗೆ ಕರೆತಂದರು.

ವಿರಾಟಂ ಭೀಮಸೇನಂ ಚ ಧೃಷ್ಟದ್ಯುಮ್ನಂ ಚ ಸಾತ್ಯಕಿಮ್ ।
ಶಿಖಂಡಿನಂ ಚೇಕಿತಾನಂ ಧೃಷ್ಟಕೇತುಂ ಯಮಾವಪಿ ॥ ೪೦ ॥

ಕೇಕಯಾನ್ ಸೃಂಜಯಾನ್ ಮಾತ್ಸ್ಯಾನ್ ಪಾಂಚಾಲಾಂಶ್ಚಾಪಿ ರಾಜಕಾನ್ ।
ಯುಯುತ್ಸುಂ ಚೈವ ಕೌರವ್ಯಂ ದ್ರೌಪದೇಯಾನ್ ಘಟೋತ್ಕಚಮ್ ॥ ೪೧ ॥

ಏತಾಂಶ್ಚ ಸುಹೃದಶ್ಚಾನ್ಯಾನ್ ದರ್ಶಯಾಮಾಸ ಪಾಂಡವಮ್ ॥ ೪೨ ॥

ವಿರಾಟ, ಭೀಮಸೇನ, ಧೃಷ್ಟದ್ಯುಮ್ನ, ಸಾತ್ಯಕಿ, ಶಿಖಂಡಿ, ಚೇಕಿತಾನ, ಧೃಷ್ಟಕೇತು, ನಕುಲ-ಸಹದೇವರು, ಕೇಕಯರು, ಸೃಂಜಯರು, ಮಾತ್ಸ್ಯರು, ಪಾಂಚಾಲರು (ಮೊದಲಾದ ರಾಜರನ್ನೂ), ಕುರುವಂಶದ ಯುಯುತ್ಸು, ದ್ರೌಪದಿಯ ಪುತ್ರರು, ಘಟೋತ್ಕಚ ಇವರನ್ನೂ ಮತ್ತು ಇನ್ನೂ ಅನೇಕ ಸುಹೃದರನ್ನೂ ಯುಧಿಷ್ಠಿರನಿಗೆ ತೋರಿಸಿ ನಿವೇದಿಸಿದರು.

ಅನುಜ್ಞಾತಾಶ್ಚ ಪಾರ್ಥೇನ ಸ್ವಾಪೀನಾ ಆಸನೇಷು ತೇ ।
ಸರ್ವೇಷ್ವಥ ಪರಾರ್ಘ್ಯೇಷು ಯಥಾರ್ಹಂ ವಂದ್ಯ ಪಾಂಡವಮ್ ॥೪೩॥

ಯುಧಿಷ್ಠಿರನಿಂದ ಅನುಜ್ಞೆಯನ್ನು ಪಡೆದು ಅವರು ಯುಧಿಷ್ಠಿರನನ್ನು ವಂದಿಸಿ, ತಮ ತಮಗೆ ಯೋಗ್ಯವಾದ ಶ್ರೇಷ್ಠವಾದ ಆಸನಗಳಲ್ಲಿ ಕುಳಿತುಕೊಂಡರು.

ಏಕಸ್ಮಿನ್ನಾಸನೇ ವೀರಾವುಪವಿಷ್ಟೌ ಮಹಾಬಲೌ ।
ಕೃಷ್ಣಶ್ಚ ಯುಯುಧಾನಶ್ಚ ವೇದ್ಯಾಮಿವ ಹುತಾಶನೌ ॥ ೪೪ ॥

ವೀರರಾದ, ಮಹಾಬಲರಾದ ಕೃಷ್ಣಮತ್ತು ಸಾತ್ಯಕಿಯರು ಒಂದೇ ವೇದಿಯಲ್ಲಿ ಇರುವ ಎರಡು ಅಗ್ನಿಗಳಂತೆ ಒಂದೇ ಆಸನದಲ್ಲಿ ಕುಳಿತುಕೊಂಡರು.

ತತೋ ಯುಧಿಷ್ಠಿರಸ್ತೇಷಾಂ ಶೃಣ್ವತಾಂ ಮಧುಸೂದನಮ್ ।
ಅಬ್ರವೀತ್ ಪುಂಡರೀಕಾಕ್ಷಂ ಸತ್ಯಂ ಪಥ್ಯಂ ಪ್ರಿಯಂ ವಚಃ ॥ ೪೫ ॥

ಅನಂತರ ಯುಧಿಷ್ಠಿರನು ಅವರೆಲ್ಲರೂ ಕೇಳುವಂತೆಯೇ ಪುಂಡರೀಕಾಕ್ಷನನ್ನು ಕುರಿತು ಸತ್ಯವೂ, ಪಥ್ಯವೂ ಮತ್ತು ಹಿತವೂ ಆದ ಮಾತನ್ನು ಆಡಿದನು.

ಭವಂತಂ ವಯಮಾಶ್ರಿತ್ಯ ಸಹಸ್ರಾಕ್ಷಮಿವಾಮರಾಃ ।
ಪ್ರಾರ್ಥಯಾಮೋ ಜಯಂ ಚೈವ ಶಾಶ್ವತಾನಿ ಸುಖಾನಿ ಚ ॥ ೪೬ ॥

ದೇವತೆಗಳು ಇಂದ್ರನನ್ನು ಆಶ್ರಯಿಸಿದಂತೆ ನಾವು ನಿನ್ನನ್ನು ಆಶ್ರಯಿಸಿ ಯುದ್ಧದಲ್ಲಿ ಜಯವನ್ನು ಮತ್ತು ಶಾಶ್ವತವಾದ ಸುಖವನ್ನು ಆಶಿಸುತ್ತೇವೆ.

ತ್ವಂ ಹಿ ರಾಜ್ಯವಿನಾಶಂ ಚ ದ್ವಿಷದ್ಭಿಶ್ಚ ನಿರಾಕ್ರಿಯಾಮ್ ।
ಕ್ಲೇಶಾಂಶ್ಚ ವಿವಿಧಾನ್ ಕೃಷ್ಣ ಸರ್ವಂ ತದುಪವೇತ್ಥ ನಃ ॥ ೪೭ ॥

ಎಲೈ ಕೃಷ್ಣನೇ, ನೀನು ನಾವು ರಾಜ್ಯವನ್ನು ಕಳೆದುಕೊಂಡ ರೀತಿಯನ್ನೂ, ಶತ್ರುಗಳಿಂದ ನಮಗೆ ಉಂಟಾದ ತಿರಸ್ಕಾರವನ್ನೂ ಮತ್ತು ನಾವು ಅನುಭವಿಸಿದ ವಿವಿಧ ಕ್ಲೇಶವೆಲ್ಲವನ್ನೂ ತಿಳಿದಿದ್ದೀಯೆ.

ತ್ವಯಿ ಸರ್ವೇಶ ಸರ್ವೇಷಾಮಸ್ಮಾಕಂ ಭಕ್ತವತ್ಸಲ ।
ಸುಖಮಾಯತ್ತಮತ್ಯಂತಂ ಶತ್ರೂಣಾಂ ಚ ಪರಾಜಯಃ ॥ ೪೮ ॥

ಎಲೈ ಸರ್ವೇಶನೇ, ಭಕ್ತವತ್ಸಲನೇ, ನಮ್ಮ ಅತ್ಯಂತ ಸುಖ ಮತ್ತು ಶತ್ರುಗಳ ಪರಾಜಯ ಎಲ್ಲವೂ ನಿನ್ನನ್ನು ಅವಲಂಬಿಸಿದೆ.

ಸ ತಥಾ ಕುರು ವಾರ್ಷ್ಣೇಯ ಯಥಾ ತ್ವಯಿ ಮತಂ ಮಮ ।
ಅರ್ಜುನಸ್ಯ ಯಥಾ ಸತ್ಯಾ ಪ್ರತಿಜ್ಞಾ ಚ ಚಿಕೀರ್ಷಿತಾ ॥ ೪೯ ॥

ಎಲೈ ವಾರ್ಷ್ಣೇಯನೇ, ನನ್ನ ಮನಸ್ಸಿನಲ್ಲಿ ಹೇಗಿದೆಯೋ ಅದರಂತೆ ಎಲ್ಲವನ್ನೂ ಮಾಡು. ಅರ್ಜುನನ ಪ್ರತಿಜ್ಞೆಯು ಸತ್ಯವಾಗುವಂತೆ ಮಾಡು.

ಸ ಭವಾಂಸ್ತಾರಯತ್ವಸ್ಮಾದ್ ದುಃಖಾಮರ್ಷಮಹಾರ್ಣವಾತ್ ।
ಪಾರಂ ತಿತೀರ್ಷತಾಮದ್ಯ ಪ್ಲವೋಽಸ್ಮಾಕಂ ಭವಾಚ್ಯುತ ॥ ೫೦ ॥

ನಮ್ಮನ್ನು ಈ ದುಃಖ-ರೋಷ ಮಹಾಸಾಗರದಿಂದ ಪಾರು ಮಾಡು. ಎಲೈ ಅಚ್ಯುತನೇ, ಈ ಸಾಗರವನ್ನು ದಾಟಲು ಇಚ್ಛಿಸುವ ನಮಗೆ ನೀನು ದೋಣಿಯಾಗು.

ನಹಿ ತತ್ ಕುರುತೇ ಯೋಧಃ ಕಾರ್ತವೀರ್ಯಸಮೋಽಪಿ ಯಃ ।
ಯುಧಿ ಯತ್ ಕುರುಷೇ ಕೃಷ್ಣ ಸಾರಥ್ಯಂ ತ್ವಂ ಸಮಾಸ್ಥಿತಃ ॥ ೫೧ ॥

ಎಲೈ ಕೃಷ್ಣನೇ, ನೀನು ಸಾರಥ್ಯವನ್ನು ವಹಿಸಿ ಎಂತಹ ಕಾರ್ಯವನ್ನು ಮಾಡುತ್ತೀಯೋ ಅಂತಹ ಕಾರ್ಯವನ್ನು ಕಾರ್ತವೀರ್ಯನಿಗೆ ಸಮನಾದ ಯೋಧನೂ ಮಾಡಲಾರ.

ಯಥಾ ವೈ ಕುರುತೇ ಕೃಷ್ಣ ಸಾರಥಿರ್ಯತ್ತಮಾಸ್ಥಿತಃ ।
ಯಚ್ಚೈವ ಸರ್ವಾಸ್ವಾಪತ್ಸು ಪಾಸಿ ವೃಷ್ಣೀನ್ ಜನಾರ್ದನ ॥ ೫೨ ॥

ತಥೈವಾಸ್ಮಾನ್ ಮಹಾಬಾಹೋ ವೃಜಿನಾತ್ ತ್ರಾತುಮರ್ಹತಿ ।
ತ್ವಮಗಾಧೇ ಪ್ಲವೇ ಮಗ್ನಾನ್ ಪಾಂಡವಾನ್ ಕುರುಸಾಗರೇ ।
ತಾರಯಾದ್ಯಾಗ್ರತೋ ಭೂತ್ವಾ ಶಂಖಿಚಕ್ರಗದಾಧರ ॥ ೫೩ ॥

ಎಲೈ ಕೃಷ್ಣನೇ, ಹೇಗೆ ಪ್ರಯತ್ನಪೂರ್ವಕವಾಗಿ ಸಾರಥ್ಯವನ್ನು ನೀನು ಮಾಡುವಿಯೋ, ಎಲೈ ಜನಾರ್ದನನೇ, ಹಾಗೆಯೇ ವೃಷ್ಣಿಗಳನ್ನು ಎಲ್ಲ ಆಪತ್ತುಗಳಿಂದ ರಕ್ಷಿಸುತ್ತೀಯೆ. ಎಲೈ ಮಹಾಬಾಹುವೇ, ಹಾಗೆಯೇ ನಮ್ಮನ್ನೂ ಸಹ ಈ ಕಷ್ಟದಿಂದ

ರಕ್ಷಿಸಬೇಕು. ಎಲೈ ಶಂಖಚಕ್ರಗದಾಧರನೇ, ಅಗಾಧವಾದ ಮತ್ತು ನೌಕಾರಹಿತವಾದ ಕುರುಸಾಗರದಲ್ಲಿ ಮುಳುಗಿದ ಪಾಂಡವರಾದ ನಮ್ಮನ್ನು ನೀನು ಮುಂದೆ ನಿಂತು ದಾಟಿಸುವವನಾಗು.

ನಮಸ್ತೇ ದೇವದೇವೇಶ ಸನಾತನ ವಿಶಾತನ ।
ವಿಷ್ಣೋ ಜಿಷ್ಣೋ ಹೃಷೀಕೇಶ ವೈಕುಂತ ಪುರುಷೋತ್ತಮ ॥ ೫೪ ॥

ನಾರದಸ್ತ್ವಾಂ ಸಮಾಚಷ್ಟೇ ಪುರಾಣಮೃಷಿಸತ್ತಮಮ್ ।
ವರದಂ ಶಾರ್ಙ್ಗಿಣಂ ದೇವಂ ತತ್ ಸತ್ಯಂ ಕುರು ಮಾಧವ ॥ ೫೫ ॥

ಎಲೈ ದೇವದೇವೇಶನೇ, ಸನಾತನನೇ, ಶತ್ರುಸಂಹಾರಕನೇ, ವಿಷ್ಣುವೇ, ಜಯಶೀಲನೇ, ಹೃಷೀಕೇಶನೇ, ವೈಕುಂಠನೇ, ಪುರುಷೋತ್ತಮನೇ, ನಿನಗೆ ನಮಸ್ಕಾರ. ನಾರದರು ನೀನು ಸನಾತನನಾದ ಶ್ರೇಷ್ಠ ಋಷಿ ಎಂದೂ, ವರದನೆಂದೂ, ಶಾರ್ಙ್ಗ ಧನುರ್ಧಾರಿಯಾದ ದೇವನೆಂದೂ ಹೇಳಿದ್ದಾರೆ. ಎಲೈ ಮಾಧವನೇ, ಅವರ ಮಾತನ್ನು ಸತ್ಯವನ್ನಾಗಿ ಮಾಡು.

ಸಂಜಯಃ

ಇತ್ಯುಕ್ತಃ ಪುಂಡರೀಕಾಕ್ಷೋ ಧರ್ಮರಾಜೇನ ಸಂಸದಿ ।
ತತೋ ಮೇಘಸ್ವನೋ ವಾಗ್ಮೀ ಪ್ರತ್ಯುವಾಚ ಯುಧಿಷ್ಠಿರಮ್ ॥ ೫೬ ॥

ಸಂಜಯ– ಹೀಗೆ ಧರ್ಮರಾಜನಿಂದ ಸಭೆಯಲ್ಲಿ ಹೇಳಲ್ಪಟ್ಟ ವಾಗ್ಮಿಯಾದ ಪುಂಡರೀಕಾಕ್ಷನು ಯುಧಿಷ್ಠಿರನನ್ನು ಕುರಿತು ಮೇಘಗಂಭೀರವಾದ ತನ್ನ ಸ್ವರದಿಂದ ಉತ್ತರವನ್ನು ಕೊಟ್ಟನು.

ಸಮಗ್ರೇಷ್ವಪಿ ಲೋಕೇಷು ನ ಹ್ಯನ್ಯೋಽಸ್ತಿ ತಥಾವಿಧಃ ।
ಶರಾಸನಧರಃ ಕಶ್ಚಿತ್ ಸತ್ಯಂ ಯಾದೃಗ್ ಧನಂಜಯಃ ॥ ೫೭ ॥

ಎಲ್ಲ ಲೋಕಗಳಲ್ಲಿಯೂ ಧನಂಜಯನಿಗೆ ಸದೃಶನಾದ ಧನುರ್ಧಾರಿಯಾದವನು ಇನ್ನೊಬ್ಬನು ಇಲ್ಲ. ಇದು ಸತ್ಯವಾದುದು.

ವೀರ್ಯವಾನಸ್ತ್ರಸಂಪನ್ನಃ ಪರಾಕ್ರಾಂತೋ ಮಹಾಬಲಃ ।
ಯುದ್ಧಶೌಂಡಃ ಸದಾಽಮರ್ಷೀ ತೇಜಸ್ವೀ ವಿಗತಕ್ಲಮಃ ॥ ೫೮ ॥

ಅರ್ಜುನನು ವೀರ್ಯವಂತನು, ಅಸ್ತ್ರಸಂಪನ್ನನಾದವನು, ಪರಾಕ್ರಮಶಾಲಿಯಾದವನು, ಮಹಾಬಲವುಳ್ಳವನು, ಯುದ್ಧಕುಶಲನಾದವನು, ಶತ್ರುಗಳ ಮೇಲೆ ಸದಾ ರೋಷವುಳ್ಳವನು, ತೇಜಸ್ವಿಯಾದವನು ಮತ್ತು ಶ್ರಮರಹಿತನಾದವನು.

ಸ ಯುವಾ ವೃಷಭಸ್ಕಂಧೋ ದೀರ್ಘಬಾಹುರ್ಮಹಾಧನುಃ ।
ಸಿಂಹದ್ವಿರದವಿಕ್ರಾಂತೋ ದ್ವಿಷತಃ ಪ್ರಮಥಿಷ್ಯತಿ ॥ ೫೯ ॥

ಯುವಕನೂ, ವೃಷಭಸ್ಕಂಧನೂ, ದೀರ್ಘಬಾಹುವೂ, ಮಹಾಧನುರ್ಧಾರಿಯೂ, ಸಿಂಹಗಜವಿಕ್ರಮವನ್ನು ಹೊಂದಿದವನೂ ಆದ ಅವನು ಶತ್ರುಗಳನ್ನು ವಿನಾಶಗೊಳಿಸುವನು.

ಅಹಂ ಚ ತತ್ ಕರಿಷ್ಯಾಮಿ ಯಥಾ ಕುಂತೀಸುತೋಽರ್ಜುನಃ ।
ಧಾರ್ತರಾಷ್ಟ್ರಸ್ಯ ಸೈನ್ಯಾನಿ ಧಕ್ಷ್ಯತ್ಯಗ್ನಿರಿವಾಶ್ರಯಮ್ ॥ ೬೦ ॥

ಅದ್ಯ ತಂ ಪಾಪಕರ್ಮಾಣಂ ಕ್ಷುದ್ರಂ ಸೌಭದ್ರಘಾತಿನಮ್ ।
ಅಪುನರ್ದರ್ಶನಂ ಮಾರ್ಗಮಿಷುಭಿಃ ಕ್ಷೇಪ್ಸ್ಯತೇಽರ್ಜುನಃ ॥ ೬೧ ॥

ಕುಂತೀಸುತನಾದ ಅರ್ಜುನನು ಅಗ್ನಿಯು ತನ್ನ ಆಶ್ರಯವನ್ನು ದಹಿಸಿದಂತೆ ದುರ್ಯೋಧನನ ಸೈನ್ಯವನ್ನು ದಹಿಸುವಂತೆ ನಾನು ಮಾಡುವೆನು. ಈ ದಿನ ಸುಭದ್ರೆಯ ಮಗನಾದ ಅಭಿಮನ್ಯುವನ್ನು ಕೊಂದು ಪಾಪಕರ್ಮವನ್ನು ಮಾಡಿದ, ಕ್ಷುದ್ರನಾದ ಸೈಂಧವನನ್ನು ತನ್ನ ಬಾಣಗಳಿಂದ ಅರ್ಜುನನು ಪುನರ್ದರ್ಶನವಿಲ್ಲದಂತಹ ಮಾರ್ಗದಲ್ಲಿ ಕಳುಹಿಸುವನು.

ಅತ್ಯಂತಂ ಪಾಪಕರ್ಮಾಣಂ ರೌದ್ರಂ ಸೈಂಧವಕಂ ನೃಪ ।
ಶರೈರ್ಗಾಂಡೀವನಿರ್ಮುಕ್ತೈರ್ನಿಶಿತೈರ್ಧಕ್ಷ್ಯತೇಽರ್ಜುನಃ ॥ ೬೨ ॥

ಎಲೈ ರಾಜನೇ, ಅತ್ಯಂತ ಪಾಪಕರ್ಮವನ್ನು ಮಾಡಿದವನೂ, ಭೀಕರನೂ ಆದ ಕೆಟ್ಟ ಸೈಂಧವನನ್ನು ಅರ್ಜುನನು ಗಾಂಡೀವದಿಂದ ನಿರ್ಮುಕ್ತವಾದ ಹರಿತವಾದ ಬಾಣಗಳಿಂದ ದಹಿಸುವನು.

ಅದ್ಯ ಕಾಕಾಶ್ಚ ಗೃಧ್ರಾಶ್ಚ ಶ್ಯೇನಾ ಗೋಮಾಯವೋ ಬಲಾಃ ।
ಭಕ್ಷಯಿಷ್ಯಂತಿ ಮಾಂಸಾನಿ ಯೇ ಚಾನ್ಯೇ ಪುರುಷಾದಕಾಃ ॥ ೬೩ ॥

ಈ ದಿನ ಕಾಗೆಗಳು, ಹದ್ದುಗಳು, ಗಿಡಗಗಳು, ನರಿಗಳು, ಬಲಗಳು ಮತ್ತು ಉಳಿದ ಅನೇಕ ರಾಕ್ಷಸಾದಿಗಳು ಅವನ ಮಾಂಸವನ್ನು ಭಕ್ಷಿಸುವವು.

ಯದ್ಯಸ್ಯ ಲೋಕಾ ಗೋಪ್ತಾರಃ ಸಸುರಾಸುರಮಾನವಾಃ ।
ರಾಜಧಾನೀಂ ಯಮಸ್ಯಾದ್ಯ ಹತೋ ಯಾಸ್ಯತಿ ದುರ್ಮತಿಃ ॥ ೬೪ ॥

ಈ ದಿನ ಅವನಿಗೆ ಸುರಾಸುರ ಮಾನವರಿಂದ ಸಹಿತವಾದ ಮೂರು ಲೋಕಗಳು ರಕ್ಷಣೆಗಾಗಿ ಬಂದರೂ ದುರ್ಮತಿಯಾದ ಅವನು ಯಮನ ರಾಜಧಾನಿಗೆ ಹೋಗುವನು.

ನಿಹತ್ಯ ಸೈಂಧವಂ ಜಿಷ್ಣುರದ್ಯ ತ್ವಾಮನುಯಾಸ್ಯತಿ ।
ವಿಶೋಕೋ ವಿಜ್ವರೋ ರಾಜನ್ ಭವ ಭೂತಿಪುರಸ್ಕೃತಃ ॥ ೬೫ ॥

ಎಲೈ ರಾಜನೇ, ಅರ್ಜುನನು ಈ ದಿನ ಸೈಂಧವನನ್ನು ಕೊಂದು ನಿನ್ನ ಬಳಿಗೆ ಬರುವನು. ಶೋಕವನ್ನು ಮತ್ತು ಆತಂಕವನ್ನು ತೊರೆದು ಸಂಪದ್ಯುಕ್ತನಾಗಿರು (ಎಂದು ಹೇಳಿದನು).

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಸಪ್ತತಿತಮೋಽಧ್ಯಾಯಃ ॥

॥ ಪ್ರತಿಜ್ಞಾಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತಾರನೆಯ ಅಧ್ಯಾಯ

ಸೈಂಧವನ ಬಳಿ ಹೋಗುವ ಅರ್ಜುನನಿಂದ ಸಾತ್ಯಕಿಯನ್ನು ಕುರಿತು ಯುಧಿಷ್ಠಿರನ ರಕ್ಷಣೆಯ ಆದೇಶ.

ಸಂಜಯಃ

ತಥಾ ಸಂಭಾಷತಾಂ ತೇಷಾಂ ಪ್ರಾದುರಾಸೀದ್ ಧನಂಜಯಃ ।
ದಿದೃಕ್ಷುರ್ಭರತಶ್ರೇಷ್ಠಂ ರಾಜಾನಂ ಸಸುಹೃದ್ಗಣಮ್ ॥ ೧ ॥

ಸಂಜಯ– ಅವನು ಹಾಗೆ ಮಾತನಾಡುತ್ತಿರುವಾಗ ಭರತಶ್ರೇಷ್ಠನಾದ ರಾಜನನ್ನು ಮತ್ತು ಅವನ ಸುಹೃದ್ಗಣವನ್ನು ನೋಡಲು ಬಯಸಿ ಅರ್ಜುನನು ಬಂದನು.

ತಂ ಪ್ರವಿಷ್ಟಂ ಶುಭಾಂ ಕೃಷ್ಣಾಮಭಿವಂದ್ಯಾಗ್ರತಃ ಸ್ಥಿತಮ್ ।
ಸಮುತ್ಥಾಯಾಸನಾತ್ ಪ್ರೇಮ್ಣಾ ಸಸ್ವಜೇ ಪಾಂಡವೋऽರ್ಜುನಮ್ ॥೨॥

ಶುಭವಾದ ಬಾಹ್ಯಕಕ್ಷೆಯನ್ನು ಪ್ರವೇಶಿಸಿ, ನಮಸ್ಕರಿಸಿ ಎದುರಿಗೆ ನಿಂತ ಅರ್ಜುನನನ್ನು ಯುಧಿಷ್ಠಿರನು ತನ್ನ ಆಸನದಿಂದ ಎದ್ದು ಪ್ರೀತಿಯಿಂದ ಆಲಿಂಗಿಸಿದನು.

ಮೂರ್ಧ್ನಿ ಚೈನಮುಪಾಘ್ರಾಯ ಪರಿಮೃಜ್ಯ ಚ ಪಾಣಿನಾ ।
ಆಶಿಷಃ ಪರಮಾಃ ಪ್ರೋಚ್ಯ ಸ್ನಯಮಾನೋऽಭ್ಯಭಾಷತ ॥ ೩ ॥

ಅವನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ, ತನ್ನ ಹಸ್ತದಿಂದ ಅವನನ್ನು ನೇವರಿಸಿ, ಶ್ರೇಷ್ಠವಾದ ಆಶೀರ್ವಾದದ ಮಾತುಗಳನ್ನು ಆಡಿ ನಗುತ್ತಾ ಅವನನ್ನು ಕುರಿತು ಮಾತನಾಡಿದನು.

ವ್ಯಕ್ತಮರ್ಜುನ ಸಂಗ್ರಾಮೇ ಧ್ರುವಸ್ತವ ಜಯೋ ಮಹಾನ್ ।
ತಾದೃಗ್ರೂಪಾ ಹಿ ತ್ವಚ್ಛ್ರಿಯಾ ಪ್ರಸನ್ನಶ್ಚ ಜನಾರ್ದನಃ ॥ ೪ ॥

ಎಲೈ ಅರ್ಜುನನೇ, ಯುದ್ಧದಲ್ಲಿ ನಿನಗೆ ಉಂಟಾಗಲಿರುವ ದೊಡ್ಡ ಜಯವು ಸ್ಪಷ್ಟವಾಗಿ ತೋರುತ್ತಿದೆ. ಏಕೆಂದರೆ ನಿನ್ನ ಕಾಂತಿಯು ಆ ರೀತಿಯಿದೆ ಮತ್ತು ಕೃಷ್ಣನು ಪ್ರಸನ್ನನಾಗಿದ್ದಾನೆ.

ಸಂಜಯಃ

ತಮಬ್ರವೀತ್ ತತೋ ಜಿಷ್ಣುರ್ಮಹದಾಶ್ಚರ್ಯಮುತ್ತಮಮ್ ।
ದೃಷ್ಟವಾನಸ್ಮಿ ಭದ್ರಂ ತೇ ಕೇಶವಸ್ಯ ಪ್ರಸಾದಜಮ್ ॥ ೫ ॥

ಸಂಜಯ– ಆಗ ಅರ್ಜುನನು ಅವನನ್ನು ಕುರಿತು, ನಿನಗೆ ಮಂಗಳವಾಗಲಿ. ಕೃಷ್ಣನ ಅನುಗ್ರಹದಿಂದ ನಾನು ಬಹಳ ಮಹತ್ವದ ಮತ್ತು ಶ್ರೇಷ್ಠವಾದ ಆಶ್ಚರ್ಯವನ್ನು ನೋಡಿದೆನು ಎಂದು ಹೇಳಿದನು.

ತತಸ್ತತ್ ಕಥಯಾಮಾಸ ಯಥಾದೃಷ್ಟಂ ಧನಂಜಯಃ ।
ಆಶ್ವಾಸನಾರ್ಥಂ ಸುಹೃದಾಂ ತ್ರ್ಯಂಬಕೇಣ ಸಮಾಗಮಮ್ ॥ ೬ ॥

ಅನಂತರ ಅರ್ಜುನನು ತನ್ನ ಸುಹೃದರ ಆಶ್ವಾಸನೆಗಾಗಿ ತನಗೆ ಸ್ವಪ್ನದಲ್ಲಿ ಉಂಟಾದ ರುದ್ರದೇವರ ಸಮಾಗಮವನ್ನು ನಿರೂಪಿಸಿದನು.

ತತಃ ಶಿರೋಭಿರವನಿಂ ಸ್ಪೃಷ್ಟ್ವಾ ಸರ್ವೇ ಸುವಿಸ್ಮಿತಾಃ ।
ನಮಸ್ಕೃತ್ಯ ವೃಷಾಂಕಾಯ ಸಾಧು ಸಾಧ್ವಿತ್ಯಥಾಬ್ರುವನ್ ॥ ೭ ॥

ಆಗ ಎಲ್ಲರೂ ಬಹಳ ಆಶ್ಚರ್ಯಗೊಂಡು ತಮ್ಮ ಶಿರಸ್ಸನ್ನು ಭೂಮಿಗೆ ಮುಟ್ಟಿಸಿ, ರುದ್ರದೇವರಿಗೆ ನಮಸ್ಕಾರವನ್ನು ಮಾಡಿ ಒಳ್ಳೆಯದು, ಒಳ್ಳೆಯದು ಎಂದು ಹೇಳಿದರು.

ಅನುಜ್ಞಾತಾಸ್ತತಃ ಸರ್ವೇ ಸುಹೃದೋ ಧರ್ಮಸೂನುನಾ ।
ತ್ವರಮಾಣಾಃ ಸುಸನ್ನದ್ಧಾಃ ತುಷ್ಟಾ ಯುದ್ಧಾಯ ನಿರ್ಯಯುಃ ॥ ೮ ॥

ಅನಂತರ ಯುಧಿಷ್ಠಿರನಿಂದ ಅನುಮತಿಯನ್ನು ಪಡೆದ ಎಲ್ಲ ಸುಹೃದರೂ ಸಂತುಷ್ಟರಾಗಿ ತ್ವರೆಯಿಂದ ಯುದ್ಧ ಸನ್ನದ್ಧರಾಗಿ ಯುದ್ಧಕ್ಕೆ ಹೊರಟರು.

ಅಭಿವಾದ್ಯ ತು ರಾಜಾನಂ ಯುಯುಧಾನಾಚ್ಯುತಾರ್ಜುನಾಃ ।
ಹೃಷ್ಟಾ ವಿನಿರ್ಯಯುಸ್ತೇ ವೈ ಯುಧಿಷ್ಠಿರನಿವೇಶನಾತ್ ॥ ೯ ॥

ಯುಯುಧಾನ, ಕೃಷ್ಣ ಮತ್ತು ಅರ್ಜುನರು ಯುಧಿಷ್ಠಿರನನ್ನು ನಮಸ್ಕರಿಸಿ, ಯುಧಿಷ್ಠಿರನ ಬಿಡಾರದಿಂದ ಸಂತೋಷದಿಂದ ಹೊರಗೆ ಬಂದರು.

ರಥೇನೈಕೇನ ದುರ್ಧರ್ಷೌ ಯುಯುಧಾನಜನಾರ್ದನೌ ।
ಜಗ್ಮತುಃ ಸಹಿತೌ ವೀರಾವರ್ಜುನಸ್ಯ ನಿವೇಶನಮ್ ॥ ೧೦ ॥

ಸೋಲಿಸಲು ಅಸಾಧ್ಯರಾದ, ವೀರರಾದ ಕೃಷ್ಣ ಮತ್ತು ಸಾತ್ಯಕಿಯರು ಒಂದೇ ರಥದಲ್ಲಿ ಕುಳಿತು ಅರ್ಜುನನ ಶಿಬಿರಕ್ಕೆ ಬಂದರು.

ತತ್ರ ಗತ್ವಾ ಹೃಷೀಕೇಶಃ ಕಲ್ಪಯಾಮಾಸ ಶಾಸ್ತ್ರವಿತ್ ।
ರಥಂ ಮಹಾರಥಸ್ಯಾಜೌ ವಾನರರ್ಷಭಲಕ್ಷಣಮ್ ॥ ೧೧ ॥

ಕೃಷ್ಣನು ಅಲ್ಲಿಗೆ ಹೋಗಿ, ಶಾಸ್ತ್ರವಿಧಿಗೆ ಅನುಸಾರವಾಗಿ ಕಪಿಶ್ರೇಷ್ಠ ಧ್ವಜವುಳ್ಳ ಮಹಾರಥವನ್ನು ಸಿದ್ಧಪಡಿಸಿದನು.

ಸ ಮೇಘಸಮನಿರ್ಘೋಷಃ ತಪ್ತಕಾಂಚನಭೂಷಣಃ ।
ಬಭೌ ರಥವರಃ ಕೃಷ್ಣಪ್ತಃ ಶಶೀ ದಿವಸಕೃದ್ ಯಥಾ ॥ ೧೨ ॥

ಮೇಘಘೋಷಕ್ಕೆ ಸಮವಾದ ಘೋಷವನ್ನು ಹೊಂದಿದ, ಪುಟವಿಟ್ಟ ಚಿನ್ನದ ಅಲಂಕಾರದಿಂದ ಸಿದ್ಧಗೊಳಿಸಲ್ಪಟ್ಟ ಶ್ರೇಷ್ಠವಾದ ರಥವು ಸುಹೃದರಿಗೆ ಚಂದ್ರನಂತೆ ಶಾಂತವಾಗಿಯೂ, ಶತ್ರುಗಳಿಗೆ ಸೂರ್ಯನಂತೆ ಉಗ್ರವಾಗಿಯೂ ಶೋಭಿಸಿತು.

ತತಃ ಪುರುಷಶಾರ್ದೂಲಃ ಸಜ್ಜಂ ಸರ್ವಂ ನ್ಯವೇದಯತ್ ।
ರಥಂ ಪುರುಷಸಿಂಹಸ್ಯ ಸಧ್ವಜಂ ಸಪತಾಕಿನಮ್ ॥ ೧೩ ॥

ಆನಂತರ ಪುರುಷಶಾರ್ದೂಲನಾದ ಕೃಷ್ಣನು ಪುರುಷಸಿಂಹನಾದ ಅರ್ಜುನನಿಗೆ ಧ್ವಜಪತಾಕೆಗಳಿಂದ ಕೂಡಿದ ರಥವು ಪೂರ್ಣವಾಗಿ ಸಿದ್ಧವಾಗಿದೆ ಎಂದು ಹೇಳಿದನು.

ಸ ತು ಲೋಕೇ ವರಃ ಪುಂಸಾಂ ಕಿರೀಟೀ ಹೇಮವರ್ಮಧೃಕ್ ।
ಬಾಣೀ ಬಾಣಾಸನೀ ವಾಹಂ ಪ್ರದಕ್ಷಿಣಮವರ್ತತ ॥ ೧೪ ॥

ಲೋಕದಲ್ಲಿ ಪುರುಷಶ್ರೇಷ್ಠನಾದ ಅರ್ಜುನನು ಸುವರ್ಣಕವಚವನ್ನು ಧರಿಸಿ, ಕೈಯಲ್ಲಿ ಧನುಸ್ಸು ಮತ್ತು ಬಾಣಗಳನ್ನು ಹಿಡಿದು ರಥಕ್ಕೆ ಪ್ರದಕ್ಷಿಣೆಯನ್ನು ಮಾಡಿದನು.

ಅಥ ವಿದ್ಯಾವಯೋವೃದ್ಧೈಃ ಕ್ರಿಯಾವದ್ಭಿರ್ಜಿತೇಂದ್ರಿಯೈಃ ।
ಸ್ತೂಯಮಾನೋ ಜಯಾಶೀರ್ಭಿರಾರುರೋಹಾರ್ಜುನೋ ರಥಮ್ ॥

ಆನಂತರ ವಿದ್ಯಾವಂತರೂ, ಸತ್ಕರ್ಮನಿರತರೂ, ಜಿತೇಂದ್ರಿಯರೂ ಆದ ವೃದ್ಧರಿಂದ ಜಯಾಶೀರ್ವಚನಗಳಿಂದ ಸ್ತೋತ್ರ ಮಾಡಲ್ಪಟ್ಟವನಾಗಿ ಅವನು ರಥವನ್ನು ಏರಿದನು.

ಜೈತ್ರೈಃ ಸಾಂಗ್ರಾಮಿಕೈರ್ಮಂತ್ರೈಃ ಪೂರ್ವಮೇವ ರಥೋತ್ತಮಮ್ ।
ಅಭಿಮಂತ್ರಿತಮರ್ಚಿಷ್ಮಾನುದಯಂ ಭಾಸ್ಕರೋ ಯಥಾ ॥ ೧೬ ॥

ಆ ಶ್ರೇಷ್ಠವಾದ ರಥವು ಮೊದಲೇ ಜಯಪ್ರಾಪಕವಾದ ವೇದಮಂತ್ರಗಳಿಂದ ಅಭಿಮಂತ್ರಿತವಾಗಿದ್ದು, ಅರ್ಜುನನು ಏರಿದಾಗ ಕಾಂತಿಯುಕ್ತನಾದ ಸೂರ್ಯನು ಉದಯಪರ್ವತವನ್ನು ಏರಿದಂತೆ ತೋರಿತು.

ಸ ರಥೇ ರಥಿನಾಂ ಶ್ರೇಷ್ಠಃ ಕಾಂಚನೇ ಕಾಂಚನಾವೃತಃ ।
ವಿಬಭೌ ಬಹುಲಾರ್ಚಿಷ್ಮಾನ್ ಮೇರಾವಿವ ದಿವಾಕರಃ ॥ ೧೭ ॥

ಸುವರ್ಣಾಲಂಕೃತನಾದ, ರಥಿಶ್ರೇಷ್ಠನಾದ ಅರ್ಜುನನು ಬಹಳ ಕಾಂತಿಯಿಂದ ಕೂಡಿದವನಾಗಿ ಮೇರುಪರ್ವತದಲ್ಲಿನ ಸೂರ್ಯನಂತೆ ಆ ಸುವರ್ಣರಥದಲ್ಲಿ ಬಹಳವಾಗಿ ಶೋಭಿಸಿದನು.

ಅನ್ವಾರೂಢೌ ತತಃ ಪಾರ್ಥಂ ತತ್ರ ಗೋವಿಂದಸಾತ್ಯಕೀ ।
ಶರ್ಯಾತಿಯಜ್ಞಂ ಗಚ್ಛಂತಂ ಯಥಾ ಚ್ಯವನಮಶ್ವಿನೌ ॥ ೧೮ ॥

ಅನಂತರ ಶರ್ಯಾತಿಯ ಯಜ್ಞಕ್ಕೆ ಚ್ಯವನರ ಜೊತೆಯಲ್ಲಿ ಹೊರಡುವ ಅಶ್ವಿನಿಗಳಂತೆ ಕೃಷ್ಣಮತ್ತು ಸಾತ್ಯಕಿಯರು ಪಾರ್ಥನ ಅನಂತರ ಆ ರಥವನ್ನು ಏರಿದರು.

ಅಥ ಜಗ್ರಾಹ ಗೋವಿಂದೋ ರಥರಶ್ಮೀನ್ ರಥರ್ಷಭಃ ।
ಮಾತಲಿರ್ವಾಸವಸ್ಯೇವ ವೃತ್ರಂ ಹಂತುಂ ಪ್ರಯಾಸ್ಯತಃ ॥ ೧೯ ॥

ಅನಂತರ ವೃತ್ರಸಂಹಾರಕ್ಕೆ ಹೋಗುವ ಇಂದ್ರನ ರಥದ ಅಶ್ವಗಳ ಕಡಿವಾಣವನ್ನು ಮಾತಲಿಯು ಹಿಡಿದಂತೆ ರಥಶ್ರೇಷ್ಠನಾದ ಗೋವಿಂದನು ಅರ್ಜುನನ ರಥದ ಅಶ್ವಗಳ ಕಡಿವಾಣವನ್ನು ಹಿಡಿದನು.

ಸ ತಾಭ್ಯಾಂ ಶುಶುಭೇ ಪಾರ್ಥೋ ರಥಪ್ರವರಮಾಸ್ಥಿತಃ ।
ಸಹಿತೋ ಬುಧಶುಕ್ರಾಭ್ಯಾಂ ತಮೋ ನಿಘ್ನನ್ ಯಥಾ ಶಶೀ ॥ ೨೦ ॥

ಕೃಷ್ಣ-ಸಾತ್ಯಕಿಯರ ಜೊತೆಯಲ್ಲಿ ಶ್ರೇಷ್ಠ ರಥವನ್ನು ಏರಿದ ಅರ್ಜುನನು ಬುಧ-ಶುಕ್ರರಿಂದ ಸಹಿತನಾದ, ಅಂಧಕಾರಸಂಹಾರಕನಾದ ಚಂದ್ರನಂತೆ ಕಂಗೊಳಿಸಿದನು.

ಸೈಂಧವಸ್ಯ ವಧಪ್ರೇಪ್ಸುಃ ಪ್ರಯಾತಃ ಶತ್ರುಪೂಗಹಾ ।
ಸಹಾಂಬುಪತಿಮಿತ್ರಾಭ್ಯಾಂ ಯಥೇಂದ್ರಸ್ತಾರಕಾಮಯೇ ॥ ೨೧ ॥

ತಾರಕಾಮಯವಾದ ಯುದ್ಧದಲ್ಲಿ ಇಂದ್ರನು ಮಿತ್ರ-ವರುಣರ ಜೊತೆಯಲ್ಲಿ ಹೊರಟಂತೆ, ಶತ್ರುಸಂಹಾರವನ್ನು ನಾಶಮಾಡುವ ಅರ್ಜುನನು ಸೈಂಧವನ ವಧೆಯನ್ನು ಬಯಸಿ ಹೊರಟನು.

ತತೋ ವಾದಿತ್ರಘೋಷೈಶ್ಚ ಮಂಗಲೈಶ್ಚ ಶುಭೈಃ ಸ್ತವೈಃ ।
ಪ್ರಯಾಂತಮರ್ಜುನಂ ಸೂತಾ ಮಾಗಧಾಶ್ಚಾಪಿ ತುಷ್ಟುವುಃ ॥ ೨೨ ॥

ಆಗ ಯುದ್ಧಕ್ಕೆ ಹೊರಡುವ ಅರ್ಜುನನನ್ನು ಸೂತ-ಮಾಗಧರು ಮಂಗಳ ವಾದ್ಯಘೋಷಗಳಿಂದಲೂ, ಶುಭಸ್ತೋತ್ರಗಳಿಂದಲೂ ಕೂಡಿ ಸ್ತೋತ್ರ ಮಾಡಿದರು.

ಸಜಯಾಶೀಃ ಸುಪುಣ್ಯಾಹಃ ಸೂತಮಾಗಧನಿಸ್ವನೈಃ ।
ಯುಕ್ತೋ ವಾದಿತ್ರಘೋಷೇಣ ತೇಷಾಂ ಪ್ರೀತಿಕರೋಽಭವತ್ ॥ ೨೩ ॥

ಜಯಾಶೀರ್ವಾದಗಳಿಂದಲೂ, ಬ್ರಾಹ್ಮಣರ ಪುಣ್ಯಾಹವಾಚನಗಳಿಂದಲೂ, ಸೂತ-ಮಾಗಧರ ಸ್ತೋತ್ರ ಘೋಷದಿಂದಲೂ ಮತ್ತು ವಾದ್ಯಗಳ ಘೋಷದಿಂದಲೂ ಕೂಡಿದ ಅರ್ಜುನನು ಅವರಿಗೆ ಸಂತೋಷವನ್ನುಂಟು ಮಾಡಿದನು.

ತಮನುಪ್ರವಣೋ ವಾಯುಃ ಪುಣ್ಯಗಂಧಃ ಶಿವಃ ಶುಚಿಃ ।
ವವೌ ಸಂಹರ್ಷಯನ್ ಪಾರ್ಥಂ ದ್ವಿಷತಶ್ಚಾಪಿ ಶೋಷಯನ್ ॥ ೨೪ ॥

ಒಳ್ಳೆಯ ಸುಗಂಧಯುಕ್ತವಾದ, ಮಂಗಳವೂ, ಶುಚಿಯೂ ಆದ ವಾಯುವು ಅರ್ಜುನನನ್ನು ಸಂತೋಷಪಡಿಸುತ್ತಾ, ಶತ್ರುಗಳಿಗೆ ಶೋಕವನ್ನುಂಟು ಮಾಡುತ್ತಾ, ಅವನ ಹಿಂದುಗಡೆಯಿಂದ ಬೀಸಿತು.

ಪ್ರಾದುರಾಸನ್ನಿಮಿತ್ತಾನಿ ಬಹೂನಿ ವಿಜಯಾಯ ಚ ।
ಪಾಂಡವಾನಾಂ ತ್ವದೀಯಾನಾಂ ವಿಪರೀತಾನಿ ಮಾರಿಷ ॥ ೨೫ ॥

ಎಲೈ ಪೂಜ್ಯನೇ, ಪಾಂಡವರಿಗೆ ಅವರ ವಿಜಯಸೂಚಕವಾದ ಅನೇಕ ಶಕುನಗಳು ಉಂಟಾದವು. ನಿನ್ನವರಿಗೆ ವಿಪರೀತವಾದ ಅಪಶಕುನಗಳು ಉಂಟಾದವು.

ದೃಷ್ಟ್ವಾರ್ಜುನೋ ನಿಮಿತ್ತಾನಿ ವಿಜಯಸ್ಯ ಪ್ರದಕ್ಷಿಣಮ್ ।
ಸೈನ್ಯೇಷು ಸಾತ್ಯಕಂ ಸತ್ಯಮಿದಂ ವಚನಮಬ್ರವೀತ್ ॥ ೨೬ ॥

ಅರ್ಜುನನು ವಿಜಯಕ್ಕೆ ಅನುಕೂಲವಾದ ಶುಭ ಶಕುನಗಳನ್ನು ನೋಡಿ ಸೈನ್ಯದಲ್ಲಿದ್ದ ಸಾತ್ಯಕಿಯನ್ನು ಕುರಿತು ಈ ಸತ್ಯವಾದ ಮಾತನ್ನು ಆಡಿದನು.

ಯಥೈವ ಚ ಪರಂ ಕೃತ್ಯಂ ಸೈಂಧವಸ್ಯ ವಧೇ ಧೃತಮ್ ।
ತಥೈವ ಹಿ ಪರಂ ಕೃತ್ಯಂ ಧರ್ಮರಾಜಸ್ಯ ರಕ್ಷಣಮ್ ॥ ೨೭ ॥

ಸೈಂಧವನ ವಧೆಯು ಹೇಗೆ ಮಾಡಬೇಕಾದ ದೊಡ್ಡ ಕಾರ್ಯವಾಗಿದೆಯೋ ಹಾಗೆಯೇ ಯುಧಿಷ್ಠಿರನ ರಕ್ಷಣೆಯೂ ಸಹ ಮಾಡಬೇಕಾದ ದೊಡ್ಡಕಾರ್ಯವಾಗಿದೆ.

ನ ತ್ವಮದ್ಯ ಮಹಾಬಾಹೋ ರಾಜಾನಂ ಪರಿಪಾಲಯ ।
ಯಥೈವ ಹಿ ಮಯಾ ಗುಪ್ತಃ ತ್ವಯಾ ಗುಪ್ತಸ್ತಥಾ ಭವೇತ್ ॥ ೨೮ ॥

ಎಲೈ ಮಹಾಬಾಹುವೇ, ಈ ದಿನ ನೀನು ರಾಜನನ್ನು ರಕ್ಷಿಸುವವನಾಗು. ನೀನು ರಕ್ಷಣೆ ಮಾಡಿದರೆ ನಾನು ರಕ್ಷಣೆ ಮಾಡಿದಂತೆಯೇ ಆಗುವುದು.

ತ್ವಯಿ ಚಾಹಂ ಪರಾಶ್ವಸ್ತಃ ಪ್ರದ್ಯುಮ್ನೇ ವಾ ಮಹಾರಥೇ ।
ಶಕ್ನುಯಾಂ ಸೈಂಧವಂ ಹಂತುಮನಪೇಕ್ಷೋ ನರರ್ಷಭ ॥ ೨೯ ॥

ಮಹಾರಥನಾದ ಪ್ರದ್ಯುಮ್ನನಲ್ಲಿನನಗೆ ಹೇಗೆ ನಂಬಿಕೆಯಿದೆಯೋ ಹಾಗೆ ನಿನ್ನಲ್ಲೂ ನಂಬಿಕೆಯಿದೆ. ಎಲೈ ನರಶ್ರೇಷ್ಠನೇ, ನೀನು ರಾಜನನ್ನು ರಕ್ಷಿಸಿದರೆ ನಾನು ನಿಶ್ಚಿಂತೆಯಿಂದ ಸೈಂಧವನನ್ನು ಕೊಂದೇನು.

ಮಯ್ಯಪೇಕ್ಷಾ ನ ಕರ್ತವ್ಯಾ ಗೋಪ್ತಾऽಯಂ ಮಮ ಕೇಶವಃ ।
ರಾಜ್ಞಃ ಏವ ಪರಾ ಗುಪ್ತಿಃ ಕಾರ್ಯಾ ಸಾತ್ಯಕ ಸರ್ವದಾ ॥ ೩೦ ॥

ನನ್ನ ರಕ್ಷಣೆಯ ವಿಷಯದಲ್ಲಿ ಚಿಂತಿಸುವುದು ಬೇಡ. ಕೃಷ್ಣನು ನನಗೆ ರಕ್ಷಕನಾಗಿದ್ದಾನೆ. ಎಲೈ ಸಾತ್ಯಕಿಯೇ, ಯಾವಾಗಲೂ ಯುಧಿಷ್ಠಿರನನ್ನೇ ಚೆನ್ನಾಗಿ ರಕ್ಷಣೆ ಮಾಡಬೇಕು.

ನ ಹಿ ಯತ್ರ ಮಹಾಬಾಹುರ್ವಾಸುದೇವೋ ವ್ಯವಸ್ಥಿತಃ ।
ಕಿಂಚಿದ್ ವ್ಯಾಪದ್ಯತೇ ತತ್ರ ಯತ್ರಾಹಮಪಿ ಚ ಧ್ರುವಮ್ ॥ ೩೧ ॥

ಎಲ್ಲಿ ಮಹಾಬಾಹುವಾದ ವಾಸುದೇವನು ಇದ್ದಾನೆಯೋ ಮತ್ತು ನಾನೂ ಇರುತ್ತೇನೆಯೋ ಅಲ್ಲಿ ಖಂಡಿತವಾಗಿ ಯಾವ ವಿಪತ್ತೂ ಉಂಟಾಗುವ ಸಂದರ್ಭವಿಲ್ಲ.

ಏವಮುಕ್ತಸ್ತು ಪಾರ್ಥೇನ ಸಾತ್ಯಕಃ ಪರವೀರಹಾ ।
ತಥೇತ್ಯುಕ್ತ್ವಾಽಗಮತ್ ತತ್ರ ಯತ್ರ ರಾಜಾ ಯುಧಿಷ್ಠಿರಃ ॥ ೩೨ ॥

ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಪರವೀರಘಾತಕನಾದ ಸಾತ್ಯಕಿಯು ಹಾಗೆಯೇ ಆಗಲಿ ಎಂದು ಹೇಳಿ ಯುಧಿಷ್ಠಿರನಿದ್ದ ಸ್ಥಳಕ್ಕೆ ಹೊರಟನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಟ್ಸಪ್ತತಿತಮೋಽಧ್ಯಾಯಃ ॥

॥ ಪ್ರತಿಜ್ಞಾಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

॥ ಪ್ರತಿಜ್ಞಾಪರ್ವ ಸಂಪೂರ್ಣಮ್ ॥

★ ★ ★ ★ ★

೫೫. ಜಯದ್ರಥವಧಪರ್ವ

ಮಹಾಭಾರತತಾತ್ಪರ್ಯನಿರ್ಣಯ ೨೬ನೇ ಅಧ್ಯಾಯ

ಸ ದಿವ್ಯಮಗ್ರ್ಯಂ ಶಕಟಾಬ್ಜಚಕ್ರಂ
ಕೃತ್ವಾ ಸ್ವಯಂ ವ್ಯೂಹಮುಖೇ ವ್ಯವಸ್ಥಿತಃ
ಪೃಷ್ಠೇ ಕರ್ಣದ್ರೌಣಿಕೃಪೈಃ ಸಶಲ್ಯೈ
ರ್ಜಯದ್ರಥಂ ಗುಪ್ತಮಧಾತ್ ಪರೈಶ್ಚ ॥

ದಿವ್ಯವಾದ ಉತ್ತಮವಾದ ಶಕಟಾಬ್ಜ ಚಕ್ರವ್ಯೂಹವನ್ನು ಮಾಡಿ ದ್ರೋಣ ಸ್ವತಃ ವ್ಯೂಹದ ದ್ವಾರದಲ್ಲಿ ನಿಂತ. ಬೆನ್ನ ಹಿಂದೆ ಕರ್ಣ ಅಶ್ವತ್ಥಾಮ ಕೃಪ ಶಲ್ಯರ ಮತ್ತು ಇತರ ರಕ್ಷಣೆಯಲ್ಲಿ ಜಯದ್ರಥನನ್ನು ನಿಲ್ಲಿಸಿದ.

ಅಥಾರ್ಜುನೋ ದಿವ್ಯರಥೋಪರಿಸ್ಥಿತಃ
ಸುರಕ್ಷಿತಃ ಕೇಶವೇನಾವ್ಯಯೇನ ।
ವಿಜಿತ್ಯ ದುರ್ಮರ್ಷಣಗ್ರತೋಽಭ್ಯಯಾದ್
ದ್ರೋಣಂ ಸುಧನ್ವಾ ಗುರುಮುಗ್ರಪೌರುಷಃ ॥

ಬಳಿಕ ಭಯಂಕರ ಪೌರುಷಶಾಲಿ ಉತ್ತಮ ಧನುರ್ಧಾರಿ ಅರ್ಜುನ ದಿವ್ಯರಥದ ಮೇಲೆ ನಿಂತು ಅವ್ಯಯನಾದ ಶ್ರೀಕೃಷ್ಣನಿಂದ ರಕ್ಷಿತನಾಗಿ ಮೊದಲಿಗೆ ದುರ್ಮರ್ಷಣನನ್ನು ಪರಾಭವಗೊಳಿಸಿ ಗುರುದ್ರೋಣನನ್ನು ಸಮೀಪಿಸಿದ.

ಪ್ರದಕ್ಷಿಣೀಕೃತ್ಯ ತಮಾಶ್ವಗಾತ್ ತತಃ
ಕಾಲಾತ್ಯಯಂ ತ್ವೇವ ವಿಶಂಕಮಾನಃ ।
ರಥಂ ಮನೋವೇಗಮಥಾನಯದ್ಧರಿ-
ರ್ಯಥಾ ಶರಾಃ ಪೇತುರಮುಷ್ಯ ಪೃಷ್ಠತಃ ॥

ಕಾಲಾತಿಕ್ರಮವನ್ನು ಶಂಕಿಸುತ್ತ ಅರ್ಜುನ ಬೇಗನೆ ದ್ರೋಣನಿಗೆ ಪ್ರದಕ್ಷಿಣೆ ಮಾಡಿ ಅಲ್ಲಿಂದ ಹೊರಟು ಹೋದ. ಶ್ರೀಕೃಷ್ಣ ಅವನ ಮನೋವೇಗದ ರಥವನ್ನು ಅವನ ಬಾಣಗಳು ಅವನ ಬೆನ್ನ ಹಿಂದೆ ಹಾರಿಬರುವಂತೆ ವೇಗವಾಗಿ ನಡೆಸಿದ.

ವಿಜಿತ್ಯ ಹಾರ್ದಿಕ್ಯಮಥಾಪ್ರಯತ್ನತಃ
ಸ ಇಂದ್ರಸೂನುಃ ಪ್ರವಿವೇಶ ತದ್ ಬಲಮ್ ।
ವಿಲೋಡಯಾಮಾಸ ಚ ಸಾಯಕೋತ್ತಮೈ-
ರ್ಯಥಾ ಗಜೇಂದ್ರೋ ನಲಿನೀಂ ಬಲೋದ್ಧತಃ ॥

ಅರ್ಜುನ ಅಪ್ರಯತ್ನವಾಗಿ ಕೃತವರ್ಮನನ್ನು ಗೆದ್ದು ಕೌರವ ಸೈನ್ಯವನ್ನು ಪ್ರವೇಶಿಸಿದ. ಬಲದಿಂದ ಉದ್ಧತವಾದ ಮದ್ದಾನೆ ಕೊಳವನ್ನು ಹೇಗೋ ಹಾಗೆ ಉತ್ತಮ ಬಾಣಗಳಿಂದ ಶತ್ರುಸೈನ್ಯವನ್ನು ಕದಡಿದ.

ಸ ಉಚ್ಚಕಾಶೇऽತಿರಥೋ ರಥೋತ್ತಮೇ
ಸವಾಸುದೇವೋ ಹರಿಣಾ ಯಥೇಂದ್ರಃ ।
ಚರ್ತುಚೇಗ್ರೋ ದ್ವಿಷತಾಂ ಶಿರಾಂಸಿ
ಶರೈಃ ಶರೀರಾಂತಕರೈಃ ಸಮಂತತಃ ॥

ಅತಿರಥನಾದ ಅರ್ಜುನ ಉತ್ತಮ ರಥದಲ್ಲಿ ಶ್ರೀಕೃಷ್ಣನೊಂದಿಗೆ ಉಪೇಂದ್ರನ ಜೊತೆಗಿರುವ ಇಂದ್ರನಂತೆ ಶೋಭಿಸಿದ. ಶತ್ರುಭಯಂಕರನಾದ ಆತ ಶರೀರ ನಾಶಕರವಾದ ಬಾಣಗಳಿಂದ ಎಲ್ಲೆಡೆ ಶತ್ರುಗಳ ರುಂಡಗಳನ್ನು ಕತ್ತರಿಸಿದ.

ದೃಢಾಯುಮಚ್ಯುತಾಯಂ ಚ ಹತ್ವಾ ವಿಂದಾನುವಿಂದಕೌ ।
ಶರಾಭ್ಯಾಂ ಪ್ರೇಷಯಾಮಾಸ ಯಮಾಯ ವಿಜಯೋ ಯುಧಿ ॥

ಅರ್ಜುನ ಯುದ್ಧದಲ್ಲಿ ದೃಢಾಯು ಅಚ್ಯುತಾಯುಗಳನ್ನೂ ಏಂದ ಅನುವಿಂದರನ್ನೂ ಎರಡೆರಡು ಬಾಣಗಳಿಂದ ಹೊಡೆದು ಯಮನ ಬಳಿ ಕಳುಹಿಸಿಕೊಟ್ಟ.

ಸುದಕ್ಷಿಣಂ ಚ ಕಾಂಬೋಜಂ ನಿಹತ್ಯಾಂಬಷ್ಠಮೇವ ಚ ।
ಶ್ರುತಾಯುಧಂ ನದೀಜಾತಂ ವರುಣಾದಾಸಸಾದ ಹ ॥

ಅರ್ಜುನನು ಕಾಂಬೋಜದ ರಾಜಕುಮಾರನಾದ ಸುದಕ್ಷಿಣನನ್ನೂ ಅಂಬಷ್ಠರಾಜನನ್ನೂ ಕೊಂದು ವರುಣನಿಂದ ಪರ್ಣಾಶಾ ನದಿಯಲ್ಲಿ ಜನಿಸಿದ ಶ್ರುತಾಯುಧನನ್ನೂ ಎದುರಿಸಿದನು.

ಯಸ್ಮಾದಾದ್ ವರುಣೋ ದಿವ್ಯಮಮೋಘಾಂ ಮಹತೀಂ ಗದಾಮ್ ।
ಸ ತು ತೇನ ಶರೈಸ್ತೀಕ್ಷ್ಣೈರರ್ಪಿತೋ ವಿರಥಂ ಕ್ಷಣಾತ್ ॥

ಚಕಾರ ಪಾರ್ಥಸ್ಯ ರಥಮಾರುಹ್ಯಾರಿಧರಾಯ ತಾಮ್ ।
ಗದಾಂ ಚಿಕ್ಷೇಪ ಸಾ ತಸ್ಯ ವಾರುಣೇಃ ಶಿರ ಏವ ತು ।
ಬಿಭೇದ ಶತಧಾ ಶೀರ್ಣಮಪ್ತಿಷ್ಠಃ ಸೋಽಪತದ್ ಭುವಿ ॥

ಶ್ರುತಾಯುಧನಿಗೆ ವರುಣನು ದಿವ್ಯವೂ ಅಮೋಘವೂ ಆದ ಮಹಾಗದೆಯನ್ನು ಕೊಟ್ಟಿದ್ದನು. ಆ ಶ್ರುತಾಯುಧನು ಅರ್ಜುನನನ್ನು ತೀಕ್ಷ್ಣವಾದ ಬಾಣಗಳಿಂದ ಪೀಡಿಸಿದಾಗ ಅರ್ಜುನನು ಅವನನ್ನು ಕ್ಷಣದಲ್ಲಿ ವಿರಥನನ್ನಾಗಿ ಮಾಡಿದನು. ಕೂಡಲೆ ಅವನು ಅರ್ಜುನನ ರಥವೇರಿ ಕೃಷ್ಣನ ಮೇಲೆ ಗದೆಯನ್ನು ಹಾಕಿದನು. ಆದರೆ ಆ ಗದೆ ಅವನ ತಲೆಯನ್ನೇ ಭೇದಿಸಿತು. ನೂರು ಹೋಳುಗಳಾಗಿ ತಲೆ ಒಡೆದು ಸತ್ತು ನೆಲದ ಮೇಲೆ ಬಿದ್ದನು.

ಅಯುದ್ಧ್ಯಂತಂ ಸ್ವಗದಯಾ ಯದಿ ತಾಡಯಸಿ ಸ್ವಯಮ್ ।
ತಯಾ ವಿಶೀರ್ಣಮಪ್ತಿಷ್ಠೋ ಮರಿಷ್ಯಸಿ ನ ಸಂಶಯಃ ॥

ಯುದ್ಧಮಾಡದಿರುವವನನ್ನು ನಿನ್ನ ಗದೆಯಿಂದ ಹೊಡೆದಿಯಾದರೆ ಆ ಗದೆಯಿಂದ ನಿನ್ನ ತಲೆಯೇ ಒಡೆದು ಸಾಯುವಿ, ಅದರಲ್ಲಿ ಸಂಶಯವಿಲ್ಲ.

ಅಮೋಘಾ ಚಾನ್ಯಥಾ ಸೇಯಂ ಗದಾ ತವ ಭವಿಷ್ಯತಿ ॥

ಇಲ್ಲದಿದ್ದರೆ ಈ ನಿನ್ನ ಗದೆ ಅಮೋಘವಾಗಿರುವುದು.

ಇತ್ಯಬ್ರವೀತ್ ತಂ ವರುಣಃ ಪುರಾ ತೇನ ಸ ಕೇಶವೇ ।
ಅಯುದ್ಧ್ಯತಿ ಗದಾಕ್ಷೇಪಾತ್ ತಯಾ ಶೀರ್ಣಶಿರಾ ಅಭೂತ್ ॥

ಹೀಗೆ ವರುಣ ಹಿಂದೆ ಅವನಿಗೆ ಹೇಳಿದ್ದನು. ಅದರಿಂದ ಯುದ್ಧ ಮಾಡದಿದ್ದ ಕೃಷ್ಣನ ಮೇಲೆ ಗದೆಯನ್ನು ಎಸೆದುದರಿಂದ ಗದೆಯಿಂದಲೇ ಅವನ ತಲೆ ಹೋಳಾಯಿತು.

ಹತೇಷು ವೀರೇಷು ನಿಜೇಷು ಸಂಘಶೋ
ವಿದ್ರಾವಿತೇಷ್ವಾಲುಲಿತೇ ಚ ಸೈನ್ಯೇ ।
ದುರ್ಯೋಧನೋ ದ್ರೋಣಮುಪೇತ್ಯ ದೀನ-
ಮುವಾಚ ಹಾ ಪಾರ್ಥ ಉಪೇಕ್ಷಿತಸ್ತ್ವಯಾ ॥

ತನ್ನ ಕಡೆಯ ವೀರರು ಹತರಾದಾಗ, ಗುಂಪುಗುಂಪಾಗಿ ಓಡಿಸಲ್ಪಟ್ಟಾಗ, ಸೈನ್ಯ ಚೂರು ಚೂರಾದಾಗ, ದುರ್ಯೋಧನ ದ್ರೋಣನ ಬಳಿಗೆ ಬಂದು ದೈನ್ಯದಿಂದ ಹೇಳಿದನು, 'ಅಯ್ಯೋ, ನೀವು ಅರ್ಜುನನನ್ನು ತಡೆಯದೆ ಉಪೇಕ್ಷೆ ಮಾಡಿದಿರಿ' ಎಂದು.

ಇತೀರಿತೋಽಭೇದ್ಯಮಮುಷ್ಯ ವರ್ಮ
ಬದ್ವಾಮಹಾಮಂತ್ರಬಲಾತ್ ಸ ವಿಪ್ರಃ ।
ಜಗಾದ ಯೇನೈವ ಬಲೇನ ಪಾರ್ಥೈ-
ರ್ವಿರುದ್ಧ್ಯಸೇ ತೇನ ಹಿ ಯಾಹಿ ಫಲ್ಗುನಮ್ ॥

ದುರ್ಯೋಧನನು ಹೀಗೆ ಹೇಳಿದಾಗ ದ್ರೋಣರು ಅವನಿಗೆ ಮಹಾಮಂತ್ರದ ಬಲದಿಂದ ಅಭೇದ್ಯವಾದ ಕವಚವನ್ನು ತೊಡಿಸಿ ಹೇಳಿದರು 'ಎಲ್ಲ ಪಾಂಡವರೊಡನೆ ಎಷ್ಟು ಬಲದಿಂದ ಹೋರಾದುವಿಯೋ ಅಷ್ಟು ಬಲದಿಂದ ಒಬ್ಬ ಅರ್ಜುನನೊಡನೆ ಹೋರಾಡು' ಎಂದು.

ಇತೀರಿತೋ ಧಾರ್ತರಾಷ್ಟ್ರಃ ಸ ಚಾಪ-
ಮಾದಾಯ ಸೌವರ್ಣರಥೋಪರಿಸ್ಥಃ ।
ಜಗಾಮ ಪಾರ್ಥಂ ತಮವಾರಯಚ್ಚ
ಶರೈರನೇಕೈರನಲಪ್ರಕಾಶೈಃ ॥

ದ್ರೋಣರು ಹೀಗೆ ಹೇಳಿದಾಗ ದುರ್ಯೋಧನನು ಬಿಲ್ಲನ್ನೆತ್ತಿಕೊಂಡು ಬಂಗಾರದ ರಥದ ಮೇಲೆ ಹತ್ತಿ ನಿಂತು, ಅರ್ಜುನನ ಬಳಿಗೆ ಹೋದನು. ಬೆಂಕಿಯಂತೆ ಹೊಳೆವ ಅನೇಕ ಬಾಣಗಳಿಂದ ಅವನನ್ನು ತಡೆದನು.

ವಿವ್ಯಾಧ ಪಾರ್ಥೋಽಪಿ ತಮುಗ್ರವೇಗೈಃ
ಶರೈರ್ನ ತೇ ತಸ್ಯ ಚ ಮರ್ಮಭೇದನಮ್ ।
ಚಕ್ರುಸ್ತತೋ ವಾಸವದಿವ್ಯಮಸ್ತ್ರಂ
ತದ್ವರ್ಮಭೇದಾಯ ಸಮಾದದೇ ರುಷಾ ॥

ಅರ್ಜುನನೂ ಭಯಂಕರ ವೇಗವುಳ್ಳ ಬಾಣಗಳಿಂದ ದುರ್ಯೋಧನನನ್ನು ಹೊಡೆದನು. ಆದರೆ ಆ ಬಾಣಗಳು ಅವನ ಕವಚ ಭೇದನ ಮಾಡಲಿಲ್ಲ. ಬಳಿಕ ಅರ್ಜುನನ ಕೋಪದಿಂದ ಅವನ ಕವಚ ಭೇದಕ್ಕಾಗಿ ದಿವ್ಯಾಸ್ತ್ರವನ್ನು ಎತ್ತಿಕೊಂಡನು.

ಸಂಧೀಯಮಾನಂ ತು ಗುರೋಃ ಸುತಸ್ತ-
ಚ್ಚಿಚ್ಛೇದ ಪಾರ್ಥೋಽಥ ಸುಯೋಧನಾಶ್ವಾನ್ ।
ಹತ್ವಾ ತಲೇಽವಿದ್ಧ್ಯದಜೈನಮುಗ್ರೈ-
ರ್ದ್ರೌಣಿಃ ಶರೈಃ ಪಾರ್ಥಮವಾರಯದ್ ಯುಧಿ ॥

ಅರ್ಜುನನು ಬಾಣದಲ್ಲಿ ಆ ದಿವ್ಯಾಸ್ತ್ರವನ್ನು ಹೂಡುವಷ್ಟರಲ್ಲಿ ಅದನ್ನು ಅಶ್ವತ್ಥಾಮರು ಕತ್ತರಿಸಿದರು. ಅರ್ಜುನನು ದುರ್ಯೋಧನನ ಕುದುರೆಗಳನ್ನು ಕೊಂದು ಅವನನ್ನು ನೆಲದ ಮೇಲೆ ನಿಲ್ಲಿಸಿ ಅಂಗೈಗೆ ಬಾಣಗಳಿಂದ ಹೊಡೆದನು. ಅಶ್ವತ್ಥಾಮರು ಭಯಂಕರ ಬಾಣಗಳಿಂದ ಯುದ್ಧದಲ್ಲಿ ಅರ್ಜುನನನ್ನು ತಡೆದರು.

ಸ ದ್ರೌಣಿಕರ್ಣಪ್ರಮುಖೈರ್ಧನಂಜಯೋ
ಯುಯೋಧ ತೈ ಚೈನಮವಾರಯನ್ ಶರೈಃ ।
ಬಭೂವ ಯುದ್ಧಂ ತದತುಲ್ಯಮದ್ಭುತಂ
ಜಯದ್ರಥಾರ್ಥೇಽದ್ಭುತವೀರ್ಯಕರ್ಮಣಾಮ್ ॥

ಅರ್ಜುನನು ಅಶ್ವತ್ಥಾಮ, ಕರ್ಣ ಮುಂತಾದವರೊಡನೆ ಯುದ್ಧ ಮಾಡಿದನು. ಅವರು ಅರ್ಜುನನನ್ನು ಬಾಣಗಳಿಂದ ತಡೆದರು. ಅದ್ಭುತ ವೀರ್ಯ ಕರ್ಮಗಳುಳ್ಳ

ಅಶ್ವತ್ಥಾಮ ಮುಂತಾದವರು ಅರ್ಜುನನೊಡನೆ ಜಯದ್ರಥನ ಸಲುವಾಗಿ ಮಾಡಿದ ಆ ಯುದ್ಧ ಅಸದೃಶವಾಗಿತ್ತು, ಅದ್ಭುತವಾಗಿತ್ತು.

ಪಾರ್ಥೇ ಪ್ರವಿಷ್ಟೇ ಕುರುಸೈನ್ಯಮಧ್ಯಂ
ದ್ರೋಣೋಽವಿಶತ್ ಪಾಂಡವಸೈನ್ಯಮಾಶು ।
ಸ ತದ್ರಥಾನೀಕಮುದಾರವೇಗೈಃ
ಶರೈರ್ವಿಧೂಯ ನ್ಯಹನಚ್ಚ ವೀರಾನ್ ॥

ಅರ್ಜುನ ಕೌರವ ಸೈನ್ಯವನ್ನು ಪ್ರವೇಶಿಸಿದಾಗ ದ್ರೋಣರು ಪಾಂಡವ ಸೈನ್ಯವನ್ನು ಪ್ರವೇಶಿಸಿದರು. ಮಹಾವೇಗವುಳ್ಳ ಬಾಣಗಳಿಂದ ಪಾಂಡವರ ರಥಸೈನ್ಯವನ್ನು ಓಡಿಸಿ ವೀರರನ್ನು ಸಂಹರಿಸಿದರು.

ಸ ವೀರವರ್ಯಃ ಸ್ಥವಿರೋಽಪಿ ಯೂನಾಂ
ಯವೇವ ಮಧ್ಯೇ ಪ್ರಚಚಾರ ಧಿನ್ವಿನಾಮ್ ।
ಪ್ರಪಾತಯನ್ ವೀರಶಿರಾಂಸಿ ಬಾಣೈ-
ರ್ಯುಧಿಷ್ಠಿರಂ ಚಾಽಸದದುಗ್ರವೀರ್ಯಃ ॥

ವೀರರಲ್ಲಿ ಅಗ್ರಗಣ್ಯರಾದ ದ್ರೋಣರು ವೃದ್ಧರಾದರೂ ಯುವಕರಿಗೆ ಯುವಕನಂತೆ ಆ ಧನುರ್ಧಾರಿಗಳ ಮಧ್ಯದಲ್ಲಿ ಸಂಚರಿಸಿದರು. ಭಯಂಕರ ಪರಾಕ್ರಮಿಯಾದ ಅವರು ವೀರರ ರುಂಡಗಳನ್ನು ಬಾಣಗಳಿಂದ ಉರುಳಿಸುತ್ತ ಯುಧಿಷ್ಠಿರನನ್ನು ಎದುರಿಸಿದರು.

ನ್ಯಪಗ್ರಹೇಚ್ಛುಂ ತಮವೇತ್ಯ ಸತ್ಯಜಿ-
ನ್ನ್ಯವಾರಯದ್ ದ್ರೌಪದಿರಾಶು ವೀರ್ಯವಾನ್ ।
ನಿವಾರಿತಸ್ತೇನ ಶಿರಃ ಶರೇಣ
ಚಕರ್ತ ಪಾಂಚಾಲಸುತಸ್ಯ ವಿಪ್ರಃ ॥

ದ್ರೋಣರು ಯುಧಿಷ್ಠಿರನನ್ನು ಸೆರೆ ಹಿಡಿಯಲು ಬಯಸಿದುದನ್ನು ತಿಳಿದ ಪರಾಕ್ರಮಿಯಾದ ದ್ರುಪದಪುತ್ರ ಸತ್ಯಜಿತ್ ಬೇಗನೆ ಅವರನ್ನು ತಡೆದನು. ಅವನು ತಡೆದಾಗ ದ್ರೋಣರು ಬಾಣದಿಂದ ಅವನ ತಲೆಯನ್ನು ಕತ್ತರಿಸಿದರು.

ನಿಹತ್ಯ ತಂ ವೀರತಮೋ ರಣೋತ್ಕಟಂ
ಯುಧಿಷ್ಠಿರಂ ಬಾಣಗಣೈಃ ಸಮಾರ್ದಯತ್ ॥

ಮಹಾವೀರರಾದ ದ್ರೋಣರು ಯುದ್ಧನಿಪುಣನಾದ ಸತ್ಯಜಿತನನ್ನು ಸಂಹರಿಸಿ ಬಾಣ ಸಮೂಹಗಳಿಂದ ಯುಧಿಷ್ಠಿರನನ್ನು ಪೀಡಿಸಿದರು.

ಸ ಶಕ್ತಿತಸ್ತೇನ ವಿಧಾಯ ಸಂಗರಂ
ನಿರಾಯುಧೋ ವ್ಯಶ್ವರಥಃ ಕೃತಃ ಕ್ಷಣಾತ್ ।
ಸ ಊರ್ಧ್ವಬಾಹುರ್ಭುವಿ ಸಂಸ್ಥಿತೋಽಪಿ
ಗ್ರಹೀತುಮಜೌ ಗುರುಣಾಽಭಪನ್ನಃ ।
ಮಾದ್ರೀಸುತಸ್ಯಾವರಜಸ್ಯ ಯಾನ
ಮಾರುಹ್ಯ ವೇಗಾದಜಗ್ಮಿವಾಂಸ್ತತಃ ॥

ಯುಧಿಷ್ಠಿರನು ದ್ರೋಣರೊಡನೆ ತನ್ನ ಶಕ್ತಿ ಇದ್ದಷ್ಟು ಯುದ್ಧವನ್ನು ಮಾಡಿ ಕ್ಷಣದಲ್ಲಿ ಆಯುಧ, ಕುದುರೆ, ರಥಗಳನ್ನು ಕಳೆದುಕೊಂಡು ನೆಲದ ಮೇಲೆ ಕೈಗಳೆತ್ತಿ ನಿಂತನು. ಆದರೂ ಅವನನ್ನು ಯುದ್ಧದಲ್ಲಿ ಸೆರೆ ಹಿಡಿಯಲು ದ್ರೋಣರು ಮುಂದೆ ಬಂದರು. ಒಡನೆ ಯುಧಿಷ್ಠಿರನು ಸಹದೇವನ ರಥವನ್ನೇರಿ ವೇಗವಾಗಿ ಅಲ್ಲಿಂದ ದೂರ ಹೊರಟು ಹೋದನು.

ದ್ರೋಣ ತತಃ ಶೈಶುಪಾಲಿಃ ಸುಪುತ್ರೋ
ಜಾರಾಸಂಧಿಃ ಕಾಶಿರಾಜಃ ಸಶೈಬ್ಯಃ ।
ಸಮಾಸದನ್ ಕೇಕಯಾಶ್ಚೈವ ಪಂಚ
ಸಮಾರ್ದಯನ್ ಬಾಣಗಣೈಶ್ಚ ಸರ್ವಶಃ ॥

ಬಳಿಕ ಶಿಶುಪಾಲ ಪುತ್ರನಾದ ಧೃಷ್ಟಕೇತು ಅವನ ಮಕ್ಕಳು, ಜರಾಸಂಧಪುತ್ರರು, ಕಾಶಿರಾಜ, ಶೈಬ್ಯ, ಬೃಹತ್‌ಕ್ಷತ್ರ ಮುಂತಾದ ಕೇಕಯರು ಎಲ್ಲರೂ ದ್ರೋಣರನ್ನು ಮುತ್ತಿದರು. ಬಾಣಸಮೂಹಗಳಿಂದ ಎಲ್ಲೆಡೆಗಳಿಂದ ಪೀಡಿಸಿದರು.

ಸ ತಾನ್ ಕ್ರಮೇಣೈವ ನಿಕೃತ್ತಕಂದಧಾನ್
ಶರೋತ್ತಮೈರತ್ರ ವಿಧಾಯ ವಿಪ್ರಃ ।

ನಿನಾಯ ಲೋಕಂ ಪರಮರ್ಕಮಂಡಲಂ
ವ್ರಜಂತಿ ನಿರ್ಭಿದ್ಯ ಯಮೂರ್ಧ್ವರೇತಸಃ ॥

ದ್ರೋಣರು ಉತ್ತಮ ಬಾಣಗಳಿಂದ ಕ್ರಮವಾಗಿ ಅವರೆಲ್ಲರ ಶಿರಶ್ಛೇದ ಮಾಡಿ ಅವರನ್ನು ನೈಷ್ಠಿಕ ಬ್ರಹ್ಮಚರ್ಯನಿಷ್ಠರೂ ಸೂರ್ಯಮಂಡಲವನ್ನು ಭೇದಿಸಿ ಯಾವ ಉತ್ತಮ ಲೋಕವನ್ನು ಹೊಂದುವರೋ ಆ ಲೋಕಕ್ಕೆ ಕಳುಹಿಸಿದರು.

ವಿಧೂಯಮಾನೇ ಗುರುಣೋರುಸೈನ್ಯೇ
ಪೃಥಾಸುತಾನಾಂ ಪೃತನಾಃ ಪರೇಷಾಮ್ ।
ಪ್ರಾಯೋ ರಣೇ ಮಾರುತಸೂನುನೈವ
ಹತಪ್ರವೀರಾ ಮೃದಿತಾಃ ಪರಾದ್ರವನ್ ॥

ಪಾಂಡವರ ಮಹಾಸೈನ್ಯ ದ್ರೋಣರಿಂದ ನಾಶವಾಗುತ್ತಿದ್ದಾಗ ಕೌರವ ಸೇನೆಯ ಮಹಾವೀರರು ಪ್ರಾಯಃ ಎಲ್ಲರೂ ರಣರಂಗದಲ್ಲಿ ಭೀಮನಿಂದ ಹತರಾದರು. ಕೌರವರ ಸೇನೆಗಳು ಪರಾಭವಗೊಂಡು ಓಡಿಹೋದವು.

ಅಲಂಬುಸೋ ನಾಮ ತದೈವ ರಾಕ್ಷಸಃ
ಸಮಾಸದನ್ಮಾರುತಿಮುಗ್ರಪೌರುಷಮ್ ।
ಸ ಪೀಡಿತಸೇನ ಶರೈಃ ಸುತೇಜನೈಃ
ಕ್ಷಣಾದದೃಶ್ಯತ್ವಮವಾಪ ಮಾಯಯಾ ॥

ಆಗಲೇ ಅಲಂಬುಸನೆಂಬ ರಾಕ್ಷಸ ಮಹಾಪೌರುಷಶಾಲಿಯಾದ ಭೀಮನನ್ನು ಎದುರಿಸಿದನು. ಒಳ್ಳೆಯ ತೇಜಸ್ಸುಳ್ಳ ಭೀಮನ ಬಾಣಗಳಿಂದ ಪೀಡಿತನಾಗಿ ಕ್ಷಣದಲ್ಲಿ ಮಾಯೆಯಿಂದ ಅದೃಶ್ಯನಾದನು.

ಸೋಽದೃಶ್ಯರೂಪೋಽನುಚರಾನಪೀಡಯದ್
ಭೀಮಸ್ಯ ತದ್ ಏೀಕ್ಷ್ಯಚಕೋಪ ಮಾರುತಿಃ ।
ಅಸ್ಪೃಷ್ಟತಾಮಾತ್ಮನಿ ಕೇಶವಾಸ್ತ್ರಯಾ
ಸಂದರ್ಶಯನ್ನಾಗತಧರ್ಮಸಂಕಟಃ ॥

ತ್ವಾಷ್ಟ್ರಾಸ್ತ್ರಮಾದತ್ತ ಸ ಕಾಮ್ಯಕರ್ಮ
ಹೀನೋಽಪಿ ಭೀಮಸ್ಯತ ಉತ್ಥಿತಾಃ ಶರಾಃ ।
ತೇ ಬಾಣವರ್ಷಾಸ್ತದದೃಶ್ಯವೇಧಿನೋ
ರಕ್ಷೋ ವಿದಾರ್ಯಾಽವಿಶುರ್ಧರಾತಳಮ್ ॥

ಅಲಂಬುಸ ಅದೃಶ್ಯರೂಪನಾಗಿ ಭೀಮನ ಅನುಚರರನ್ನು ಪೀಡಿಸಿದನು. ಅದನ್ನು ಕಂಡು ಭೀಮನು ಕುಪಿತನಾದನು. ಅವನಿಗೆ ಧರ್ಮಸಂಕಟ ಒದಗಿ ಬಂದಿತು. ತಾನು ಕಾಮ್ಯಕರ್ಮ ಮಾಡದವನಾಗಿದ್ದರೂ ಭಗವಂತನ ಇಚ್ಛೆಯಿಂದ ತನ್ನ ಅಸ್ತ್ರಜ್ಞಾನವನ್ನು ತೋರುವುದಕ್ಕಾಗಿ ತ್ವಾಷ್ಟ್ರ ಅಸ್ತ್ರವನ್ನು ಎತ್ತಿಕೊಂಡನು. ಆ ಅಸ್ತ್ರದಿಂದ ಬಾಣಗಳು ಎದ್ದು ಬಂದವು. ಆ ಉತ್ತಮ ಬಾಣಗಳು ಅದೃಶ್ಯವಾಗಿಯೇ ಹಿಂಸಿಸುತ್ತ ಅಲಂಬುಸ ರಾಕ್ಷಸನನ್ನು ಸೀಳಿ ಭೂತಳವನ್ನು ಹೊಕ್ಕಿತು.

ತದ್ದನ್ಯಮಾನಂ ಪ್ರವಿಹಾಯ ಭೀಮ-
ಮಪಾದ್ರದದ್ ದೂರತರಂ ಸುಭೂತಮ್ ।
ತತಸ್ತು ಭೀಮೋ ದ್ವಿಷತಾಂ ವರೂಥಿನೀಂ
ವಿದ್ರಾವಯಾಮಾಸ ಶರೈಃ ಸುಮುಕ್ಷೈಃ ॥

ಭೀಮನು ಅಲಂಬುಸ ರಾಕ್ಷಸನನ್ನು ತ್ವಾಷ್ಟ್ರಾಸ್ತ್ರದ ಬಾಣಗಳಿಂದ ಹೊಡೆಯುತ್ತಿದ್ದಂತೆ ಆ ರಾಕ್ಷಸ ಬಲು ಭೀತನಾಗಿ ಭೀಮನನ್ನು ಬಿಟ್ಟು ಬಹಳ ದೂರಕ್ಕೆ ಪಲಾಯನ ಮಾಡಿದನು. ಬಳಿಕ ಭೀಮನು ಚೆನ್ನಾಗಿ ಬಾಣಪ್ರಯೋಗ ಮಾಡಿ ಶತ್ರುಗಳ ಸೈನ್ಯವನ್ನು ಓಡಿಸಿದನು.

ತದೈವ ಕೃಷ್ಣಾತನಯಾಃ ಸಮೇತಾ
ಜಘ್ನುಃ ಶಲಂ ಸಂಯತಿ ಸೌಮದತ್ತಿಮ್ ।
ಅಲಂಬುಸಂ ಪ್ರಾಪ ತದಾ ಘಟೋತ್ಕಚಃ
ಪರಸ್ಪರಂ ತೌ ರಥಿನಾವಯುದ್ಧ್ಯತಾಮ್ ॥

ಆಗಲೇ ದ್ರೌಪದೀಪುತ್ರರು ಯುದ್ಧದಲ್ಲಿ ಸೋಮದತ್ತನ ಮಗನಾದ ಶಲನನ್ನು ಸುತ್ತುವರಿದು ಸಂಹರಿಸಿದರು. ಆಗಲೇ ಘಟೋತ್ಕಚ ಅಲಂಬುಸನನ್ನು ಎದುರಿಸಿದನು. ರಥವನ್ನೇರಿ ಅವರಿಬ್ಬರೂ ಪರಸ್ಪರ ಯುದ್ಧವನ್ನು ಮಾಡಿದರು.

ಘಟೋತ್ಕಚಸ್ತಂ ವಿರಥಂ ವಿಧಾಯ
ಖಸ್ಥಂ ಸ ಏವಾಭಿಯುಯೋಧ ಸಂಸ್ಥಿತಃ ।
ತತಸ್ತು ತಂ ಭೀಮಸುತೋ ನಿಗೃಹ್ಯ
ನಿಪಾತ್ಯ ಭೂಮೌ ಪ್ರದದೌ ಪ್ರಹಾರಮ್ ॥

ಪದಾ ಶಿರಸ್ಯೇವ ಸ ಪಿಷ್ಟಮಸ್ತಕೋ
ಮಮಾರ ಮಧ್ಯೇ ಪೃಥಿವೀಪತೀನಾಮ್ ।
ತಸ್ಮಿನ್ ಹತೇ ಭೈಮಸೇನಿಃ ಕುರೂಣಾಂ
ವ್ಯದ್ರಾವಯದ್ ರಥವ್ರಾತಂ ಸಮಂತಾತ್ ॥

ಘಟೋತ್ಕಚನು ಅಲಂಬುಸನನ್ನು ವಿರಥನನ್ನಾಗಿ ಮಾಡಿ ಅವನು ಆಕಾಶದಲ್ಲಿ ನಿಂತಾಗ ತಾನೂ ಆಕಾಶದಲ್ಲಿ ನಿಂತೇ ಯುದ್ಧವನ್ನು ಮಾಡಿದನು. ಬಳಿಕ ಅವನನ್ನು ಪರಾಭವಗೊಳಿಸಿ ನೆಲದಲ್ಲಿ ಕೆಡವಿ ತಲೆಗೆ ಪಾದ ಪ್ರಹಾರ ನೀಡಿದ. ಅವನ ತಲೆ ಪುಡಿಯಾಯಿತು ಆತ ಸತ್ತನು. ರಾಜರುಗಳ ನಡುವೆ ಹೀಗೆ ಅಲಂಬುಸ ಹತನಾದ ಬಳಿಕ ಘಟೋತ್ಕಚ ಕೌರವರ ರಥದ ಸೈನ್ಯವನ್ನು ಎಲ್ಲೆಡೆಗೂ ಓಡಿಸಿದನು.

ತದಾಽಽಸದತ್ ಕೃತವರ್ಮಾ ರಥೇನ
ಸೇನಾಂ ಪಾಂಡೂನಾಂ ಶರವರ್ಷಂ ಪ್ರಮುಂಚನ್ ।
ದದೌ ವರಂ ತಸ್ಯ ಹಿ ಪೂರ್ವಮಚ್ಯುತಃ
ಪ್ರೀತಃ ಸ್ತುತ್ಯಾ ಸರ್ವಜಯಂ ಮುಹೂರ್ತೇ ॥

ಆಗ ಕೃತವರ್ಮ ಬಾಣಗಳ ಮಳೆಗೆರೆಯುತ್ತ ರಥದಿಂದ ಪಾಂಡವರ ಸೈನ್ಯವನ್ನು ಎದುರಿಸಿದನು. ಹಿಂದೆ ಶ್ರೀಕೃಷ್ಣನು ಅವನ ಸ್ತೋತ್ರಕ್ಕೆ ಮೆಚ್ಚಿ ಅವನಿಗೆ ಒಂದು ಮುಹೂರ್ತದ ಕಾಲ ಎಲ್ಲರನ್ನೂ ಪರಾಭವಗೊಳಿಸುವಂತೆ ವರ ನೀಡಿದ್ದನು.

ಸ ತೇನ ಪಾಂಚಾಲಗಣಾನ್ ವಿಜಿಗ್ಯೇ
ಯಮೌ ಚ ಭೀಮಸ್ಯ ಪುರೋಽಥ ತಂ ಚ ।
ವಿವ್ಯಾಧ ಬಾಣೇನ ಸ ವಾಸುದೇವ
ವರಂ ವಿಜಾನನ್ ನ ತದಾ ಸಮಭ್ಯಯಾತ್ ॥

ಆದರಿಂದ ಕೃತವರ್ಮನು ಭೀಮನ ಎದುರಿನಲ್ಲಿಯೇ ಪಾಂಚಲ ಸೇನೆಗಳನ್ನು ಪರಾಭವಗೊಳಿಸಿದನು. ನಕುಲ-ಸಹದೇವರನ್ನೂ ಗೆದ್ದನು. ಬಳಿಕ ಭೀಮನನ್ನೂ ಬಾಣಗಳಿಂದ ಹೊಡೆದನು. ಶ್ರೀಕೃಷ್ಣನ ವರವನ್ನು ತಿಳಿದಿದ್ದ ಭೀಮನು ಆಗ ಕೃತವರ್ಮನನ್ನು ಎದುರಿಸಲಿಲ್ಲ.

★ ★ ★ ★ ★

ಎಪ್ಪತ್ತೇಳನೆಯ ಅಧ್ಯಾಯ

ಧೃತರಾಷ್ಟ್ರನ ವಿಲಾಪ ಮತ್ತು ಮುಂದಿನ ಯುದ್ಧಕಥನದ ಪ್ರಾರ್ಥನೆ.

ಧೃತರಾಷ್ಟ್ರಃ

ಶ್ರೋಭೂತೇ ಕಿಮಕುರ್ವಂತ ದುಃಖಿಶೋಕಸಮನ್ವಿತಾಃ ।
ಅಭಿಮನ್ಯೌ ಹತೇ ತತ್ರ ಕೈರ್ವಾऽಯುದ್ಧ್ಯಂತ ಪಾಂಡವಾಃ ॥ ೧ ॥

ಧೃತರಾಷ್ಟ್ರ- ಅಭಿಮನ್ಯುವು ಹತನಾದ ಮೇಲೆ ಆಲ್ಲಿದುಃಖಿ-ಶೋಕ ಸಮನ್ವಿತರಾದ ಪಾಂಡವರು ಏನು ಮಾಡಿದರು? ಮರುದಿನ ಯಾರ ಜೊತೆಯಲ್ಲಿ ಯುದ್ಧವನ್ನು ಮಾಡಿದರು?

ಜಾನಂತಸ್ತಸ್ಯ ಕರ್ಮಾಣಿ ಕುರವಃ ಸವ್ಯಸಾಚಿನಃ ।
ಕಥಂನು ಕಿಲ್ಬಿಷಂ ಕೃತ್ವಾ ನಿರ್ಭಯಾ ಬ್ರೂಹಿ ಮಾಮಕಾಃ ॥ ೨ ॥

ಅರ್ಜುನನ ಅಸದೃಶ ಕರ್ಮವನ್ನು ತಿಳಿದ ಕೌರವರಾದ ನನ್ನವರು ಅವನಿಗೆ ಅಪಚಾರವನ್ನು ಮಾಡಿ ಹೇಗೆ ನಿರ್ಭಯವಾಗಿದ್ದರು ಎಂದು ಹೇಳು.

ಪುತ್ರಶೋಕಾಭಿಸಂತಪ್ತಂ ಕ್ರುದ್ಧಂ ಮೃತ್ಯುಮಿವಾಂತಕಮ್ ।
ಆಯಾಂತಂ ಪುರುಷವ್ಯಾಘ್ರಂ ಕಥಂ ದದೃಶುರಾಹವೇ ॥ ೩ ॥

ಪುತ್ರಶೋಕದಿಂದ ತಾಪಗೊಂಡು ಸಂಹಾರಕನಾದ ಮೃತ್ಯುವಿನಂತೆ ಕ್ರುದ್ಧನಾದ ಪುರುಷವ್ಯಾಘ್ರನು ಯುದ್ಧಕ್ಕೆ ಬರುತ್ತಿರುವುದನ್ನು ಹೇಗೆ ನೋಡಿದರು?

ಕಪಿರಾಜಧ್ವಜಂ ಕ್ರುದ್ಧಂ ಧೂನ್ವಾನಂ ಗಾಂಡಿವಂ ಧನುಃ ।
ದೃಷ್ಟ್ವಾ ಪುತ್ರಪರೀದೂನಂ ಕಿಮಕುರ್ವತ ಮಾಮಕಾಃ ॥ ೪ ॥

ಪುತ್ರಶೋಕ ಪರಿವೃತನಾದ, ಕಪಿಧ್ವಜನಾದ ಅರ್ಜುನನು ಗಾಂಡೀವ ಧನುಸ್ಸನ್ನು ತೂಗಾಡಿಕೊಂಡು ಯುದ್ಧಕ್ಕೆ ಬರುವುದನ್ನು ನೋಡಿ ನನ್ನವರು ಏನು ಮಾಡಿದರು?

ಕಿನ್ನು ಸಂಜಯ ಸಂಗ್ರಾಮೇ ವೃತ್ತಂ ದುರ್ಯೋಧನಂ ಪ್ರತಿ ।
ಪರಿದೇವ್ಯೋ ಮಹಾನದ್ಯ ಶ್ರೂಯತೇ ಹಿ ಗೃಹೇ ಗೃಹೇ ॥ ೫ ॥

ಎಲೈ ಸಂಜಯನೇ, ಯುದ್ಧದಲ್ಲಿ ದುರ್ಯೋಧನನಿಗೆ ಇನ್ನು ಯಾವ ಅಪ್ರಿಯವು ಉಂಟಾಯಿತು? ಈ ದಿನ ಮನೆ ಮನೆಗಳಲ್ಲಿ ದೊಡ್ಡ ಗೋಳಾಟವು ಕೇಳಿ ಬರುತ್ತಿದೆ.

ಭೂಯಾನ್ ಶಬ್ದಾನತೀತ್ಯಾನ್ಯಾನ್ ಶಬ್ದಃ ಸ್ಯೈಂಧವವೇಶ್ಮನಿ ।
ಪೌರಾಣಿಕಾನಾಂ ತೂರ್ಯಾಣಾಂ ಶಂಖದುಂದುಭಿಘೋಷವಾನ್ ॥೬॥

ಸ್ಯೈಂಧವನ ಮನೆಯಲ್ಲಿ ಉಳಿದ ಎಲ್ಲ ಶಬ್ದಗಳನ್ನೂ ಮೀರಿ ಪೌರಾಣಿಕರ ಶಬ್ದಗಳು, ಶಂಖ-ದುಂದುಭಿ-ತೂರ್ಯಗಳ ಘೋಷಗಳು ಕೇಳಿ ಬರುತ್ತಿವೆ.

ಸೂತಮಾಗಧವಂದೀನಾಂ ನರ್ತಕಾನಾಂ ಚ ನಿಸ್ವನಃ ।
ನೋಽದ್ಯ ನ ಶ್ರೂಯತೇ ಶಬ್ದಃ ಸೂತಪುತ್ರ ಯಥಾ ಪುರಮ್ ॥ ೭ ॥

ಎಲೈ ಸೂತಪುತ್ರನೇ, ಹಿಂದಿನಂತೆ ಸೂತ-ಮಾಗಧ-ವಂದಿಗಳ ಶಬ್ದವಾಗಲೀ, ನರ್ತಕರ ಶಬ್ದವಾಗಲೀ ಈ ದಿನ ಕೇಳಿ ಬರುತ್ತಿಲ್ಲ.

ಶಬ್ದೋ ನಾನಾವಿಧೋಽಭೀಕ್ಷ್ಣಮಭವದ್ ಯತ್ರ ಮೇ ಶ್ರುತಃ ।
ದೀನಾನಾಮದ್ಯ ತಂ ಶಬ್ದಂ ನ ಶೃಣೋಮಿ ಸಮೀರಿತಮ್ ॥ ೮ ॥

ಹಿಂದೆ ನಾನಾ ವಿಧವಾದ ಶಬ್ದಗಳನ್ನು ಸತತವಾಗಿ ಎಲ್ಲಿ ಕೇಳಿದೆನೋ ಅಲ್ಲಿಯ ಜನರು ಈ ದಿನ ದೀನರಾಗಿದ್ದಾರೆ. ಅಂತಹ ಶಬ್ದವನ್ನು ನಾನು ಈಗ ಕೇಳುತ್ತಿಲ್ಲ.

ನಿವೇಶನೇ ಸತ್ಯಧೃತೇಃ ಸೋಮದತ್ತಸ್ಯ ಸಂಜಯ ।
ಆಸೀನೋಽಹಂ ಪುರಾ ತಾತ ಶಬ್ದಮಶ್ರೌಷಮುತ್ತಮಮ್ ॥ ೯ ॥

ಎಲೈ ಪ್ರೀತಿಪಾತ್ರನೇ, ಸಂಜಯನೇ, ನಾನು ಹಿಂದೆ ಸೋಮದತ್ತ ಮತ್ತು ಸತ್ಯಧೃತಿಯ ಮನೆಯಲ್ಲಿ ಇದ್ದು ಶ್ರೇಷ್ಠವಾದ ಶಬ್ದಗಳನ್ನು ಕೇಳಿದ್ದೆನು.

ತದದ್ಯ ಹೀನಪುಣ್ಯೋಽಹಂ ದೀನಸ್ವರವಿನಾದಿತಮ್ ।
ನಿವೇಶನಂ ಹತೋತ್ಸಾಹಂ ವಿಕೃತಂ ತಾತ ಲಕ್ಷಯೇ ॥ ೧೦ ॥

ಈ ದಿನ ಭಾಗ್ಯಹೀನನಾದ ನಾನು ದೀನಸ್ವರದಿಂದ ಕೂಡಿರುವ, ಉತ್ಸಾಹ ರಹಿತವಾದ, ವಿಕಾರವನ್ನು ಹೊಂದಿರುವ ಶಬ್ದಗಳನ್ನು ಕೇಳುತ್ತಿದ್ದೇನೆ.

ವಿವಿಂಶತೇರ್ದುರ್ಮುಖಸ್ಯ ಚಿತ್ರಸೇನವಿಕರ್ಣಯೋಃ ।
ಅನ್ಯೇಷಾಂ ಚ ಸುತಾನಾಂ ಮೇ ತಥಾ ನ ಶ್ರೂಯತೇ ಧ್ವನಿಃ ॥ ೧೧ ॥

ವಿವಿಂಶತಿ, ದುರ್ಮುಖ, ಚಿತ್ರಸೇನ, ವಿಕರ್ಣ ಮತ್ತು ಉಳಿದ ನನ್ನ ಪುತ್ರರು ಇವರ ಮನೆಯಲ್ಲಿಯೂ ಮೊದಲಿನಂತೆ ಧ್ವನಿಯು ಕೇಳಿ ಬರುತ್ತಿಲ್ಲ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಯಂ ಶಿಷ್ಯಾಃ ಪರ್ಯುಪಾಸತೇ ।
ದ್ರೋಣಪುತ್ರಂ ಮಹೇಷ್ವಾಸಂ ಪುತ್ರಾಣಾಂ ಮೇ ಪರಾಯಣಮ್ ॥

ವಿಮಂದ್ರಾಲಾಪಸಂಲಾಪೈಃ ದ್ರುತವಾದಿತ್ರವಾದಿತೈಃ ।
ಗೀತೈಶ್ಚ ವಿವಿಧೈರಿಷ್ಟೈ ರಮತೇ ಯೋ ದಿವಾನಿಶಮ್ ॥ ೧೩ ॥

ಉಪಾಸ್ಯಮಾನೋ ಬಹುಭಿಃ ಕುರುಪಾಂಡವಸಾತ್ವತೈಃ ।
ಶಬ್ದಸ್ತಸ್ಯ ಗೃಹೇ ಶಬ್ದೋ ನಾದ್ಯ ದ್ರೌಣೇರ್ಯಥಾ ಪುರಾ ॥ ೧೪ ॥

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶಿಷ್ಯರು ನನ್ನ ಪುತ್ರನಿಗೆ ಪರಮಾಶ್ರಯರಾದ ಮಹಾಧನುರ್ಧಾರಿಗಳಾದ ಯಾವ ದ್ರೋಣಪುತ್ರರನ್ನು ಉಪಾಸನೆ ಮಾಡುತ್ತಿದ್ದರೋ, ಯಾವ ಅಶ್ವತ್ಥಾಮರು ವಿವಿಧವಾದ, ಇಷ್ಟವಾದ ಮಂತ್ರ ಸ್ವರದಿಂದ ಕೂಡಿದ ಸಂಭಾಷಣೆಗಳಿಂದಲೂ, ವಾದ್ಯ-ಸಂಗೀತಗಳಿಂದಲೂ, ಇಷ್ಟವಾದ ಗಾನಗಳಿಂದಲೂ ಹಗಲು-ರಾತ್ರಿಯೂ ಸಂತೋಷ ಪಡುತ್ತಿದ್ದರೋ ಅಂತಹ ಅನೇಕ ಕುರು- ಪಾಂಡವ-ಸಾತ್ವತರಿಂದ ಉಪಾಸ್ಯಮಾನರಾದ ಅಶ್ವತ್ಥಾಮರ ಮನೆಯಲ್ಲಿ ಈ ದಿನ ಹಿಂದಿನಂತೆ ಮಧುರವಾದ ಶಬ್ದವು ಕೇಳಿ ಬರುತ್ತಿಲ್ಲ.

ದ್ರೋಣಪುತ್ರಂ ಮಹೇಷ್ವಾಸಂ ಗಾಯಕಾ ನರ್ತಕಾಶ್ಚ ಯೇ ।
ಅತ್ಯರ್ಥಮುಪತಿಷ್ಠಂತಿ ತೇಷಾಂ ನ ಶ್ರೂಯತೇ ಧ್ವನಿಃ ॥ ೧೫ ॥

ದ್ರೋಣಪುತ್ರರೂ, ಮಹಾಧನುರ್ಧಾರಿಗಳೂ ಆದ ಅವರ ಮನೆಯಲ್ಲಿ ಗಾಯಕರು ಮತ್ತು ನರ್ತಕರು ಅವರನ್ನು ವಿಶೇಷವಾಗಿ ಸ್ತೋತ್ರ ಮಾಡುತ್ತಿದ್ದರು. ಅವರ ಧ್ವನಿಯು ಕೇಳಿಬರುತ್ತಿಲ್ಲ.

ವಿಂದಾನುವಿಂದಯೋಶ್ಚಾಸ್ಮಿನ್ ಶಿಬಿರೇ ಯೋ ಮಹಾಧ್ವನಿಃ ।
ಶ್ರೂಯತೇ ಸೋಽದ್ಯ ನ ತಥಾ ಕೇಕಯಾನಾಂ ಚ ವೇಶ್ಮನಿ ॥ ೧೬ ॥

ವಿಂದಾನುವಿಂದರ ಶಿಬಿರದಲ್ಲಿ ಯಾವ ಧ್ವನಿಯು ಕೇಳಿ ಬರುತ್ತಿದ್ದಿತೋ, ಹಾಗೆಯೇ ಕೇಕಯರ ಶಿಬಿರದಲ್ಲಿ ಯಾವ ದೊಡ್ಡ ಧ್ವನಿಯು ಕೇಳಿ ಬರುತ್ತಿದ್ದಿತೋ, ಆ ಧ್ವನಿಯು ಈ ದಿನ ಕೇಳಿಬರುತ್ತಿಲ್ಲ.

ನಿತ್ಯಂ ಪ್ರಮುದಿತಾನಾಂ ಚ ತಾಳಗೀತಸ್ವನೋ ಮಹಾನ್ ।
ನೃತ್ಯತಾಂ ಶ್ರೂಯತೇ ತಾತ ಗಣ್ಯಾನಾಂ ಸೋಽದ್ಯ ನ ಸ್ವನಃ ॥ ೧೭ ॥

ನಿತ್ಯವೂ ಸಂತೋಷಗೊಂಡು ಚಪ್ಪಾಳೆ ಮತ್ತು ಗೀತ ಶಬ್ದದಿಂದ ನರ್ತನ ಮಾಡುವ ಗಣಿಕೆಯರ ಶಬ್ದವು ಈ ದಿನ ಕೇಳುತ್ತಿಲ್ಲ.

ಸಪ್ತತಂತೂನ್ ವಿತನ್ವಾನಾ ಯಮುಪಾಸಂತಿ ಯಾಜಕಾಃ ।
ಸೌಮದತ್ತಿಂ ಶ್ರುತನಿಧಿಂ ತೇಷಾಂ ನ ಶ್ರೂಯತೇ ಧ್ವನಿಃ ॥ ೧೮ ॥

ಯಜ್ಞಗಳನ್ನು ಮಾಡುವ ಯಾಜಕರು ಯಾವ ಜ್ಞಾನನಿಧಿಯಾದ ಭೂರಿಶ್ರವನನ್ನು ಉಪಾಸನೆ ಮಾಡುತ್ತಿದ್ದರೋ ಅಂತಹವರ ಧ್ವನಿಯು ಕೇಳಿ ಬರುತ್ತಿಲ್ಲ.

ಜ್ಯಾಘೋಷೋ ಬ್ರಹ್ಮಘೋಷಶ್ಚ ತೋಮರಾಸಿರಥಧ್ವನಿಃ ।
ದ್ರೋಣಸ್ಯಾಸೀದವಿರತೋ ಗೃಹೇ ತಂ ನ ಶೃಣೋಮ್ಯಹಮ್ ॥ ೧೯ ॥

ದ್ರೋಣರ ಮನೆಯಲ್ಲಿ (ಶಿಬಿರದಲ್ಲಿ) ಸತತವಾಗಿ ಹೆದೆಯ ಘೋಷ, ವೇದ ಘೋಷ ಮತ್ತು ತೋಮರ-ಖಡ್ಗಗಳ ಧ್ವನಿಯು ಕೇಳಿ ಬರುತ್ತಿದ್ದಿತು. ಈ ದಿನ ನಾನು ಅದನ್ನು ಕೇಳುತ್ತಿಲ್ಲ.

ನಾನಾದೇಶಸಮುತ್ಥಾನಾಂ ಗೀತಾನಾಂ ಯೋಽಭವತ್ ಸ್ವನಃ ।
ವಾದಿತ್ರಘೋಷಿತಾನಾಂ ಚ ಸೋಽದ್ಯ ನ ಶ್ರೂಯತೇ ಧ್ವನಿಃ ॥ ೨೦ ॥

ನಾನಾ ದೇಶದ ಗೀತೆಗಳ ಶಬ್ದವು, ಹಾಗೆ ವಾದ್ಯದ ಘೋಷವು ಯಾವ ಆವರ ಮನೆಯಲ್ಲಿ ಕೇಳಿ ಬರುತ್ತಿದ್ದಿತೋ ಅದು ಈ ದಿನ ಕೇಳುವುದಿಲ್ಲ.

ಯದಾಪ್ರಭೃತ್ಯುಪಪ್ಲವ್ಯಾತ್ ಶಾಂತಿಮಿಚ್ಛನ್ ಜನಾರ್ದನಃ ।
ಆಗತಃ ಸರ್ವಭೂತಾನಾಮನುಕಂಪಾರ್ಥಮಚ್ಯುತಃ ॥ ೨೧ ॥

ತತೋಽಹಮಬ್ರುವಂ ತಾತ ಮಂದಂ ದುರ್ಯೋಧನಂ ತದಾ ।
ವಾಸುದೇವೇನ ತೀರ್ಥೇನ ತಾತ ಸಂಶಮ್ಯ ಪಾಂಡವೈಃ ॥ ೨೨ ॥

ಕಾಲಪ್ರಾಪ್ತಮಹಂ ಮನ್ಯೇ ಮಾ ತ್ವಂ ದುರ್ಯೋಧನಾತಿಗಾಃ ।
ಸಂಶಾಮ್ಯ ಭ್ರಾತೃಭಿಸ್ತೈಸ್ತು ಕ್ಷತ್ರಿಯಾನಭಿಪಾಲಯ ॥ ೨೩ ॥

ಶಮಂ ಚೇದ್ ಯಾಚಮಾನಂ ತ್ವಂ ಪ್ರತ್ಯಾಖ್ಯಾಸ್ಯಸಿ ಕೇಶವಮ್ ।
ಹಿತಾರ್ಥಮಪಿ ಜಲ್ಪಂತಮವಾಪ್ಸ್ಯಸಿ ಪರಾಜಯಮ್ ॥ ೨೪ ॥

ಕೃಷ್ಣನು ಸರ್ವಪ್ರಾಣಿಗಳ ಮೇಲಿನ ದಯೆಯಿಂದ ಶಾಂತಿಯನ್ನು ಬಯಸಿ ಉಪಪ್ಲಾವ್ಯ ನಗರದಿಂದ ಬಂದಾಗಲೇ ಎಲೈ ಪ್ರೀತಿಪಾತ್ರನೇ, ನಾನು ಮಂದನಾದ ದುರ್ಯೋಧನನನ್ನು ಕುರಿತು, ಪೂಜ್ಯನಾದ ವಾಸುದೇವನ ಜೊತೆಯಲ್ಲಿಯೂ, ಪಾಂಡವರ ಜೊತೆಯಲ್ಲಿಯೂ ಸಂಧಿಯನ್ನು ಮಾಡಿಕೊ. ಇದು ಈ ಕಾಲದಲ್ಲಿ ಮಾಡಲು ಯೋಗ್ಯವಾದುದು ಎಂದು ನಾನು ತಿಳಿಯುತ್ತೇನೆ. ದುರ್ಯೋಧನನೇ, ನನ್ನ ಮಾತನ್ನು ಮೀರಬೇಡ. ಸಹೋದರರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಂಡು ಕ್ಷತ್ರಿಯರನ್ನು ರಕ್ಷಿಸುವವನಾಗು. ನಿನ್ನ ಹಿತದ ಸಲುವಾಗಿ ಸಂಧಿಯನ್ನು ಬೇಡುತ್ತಾ ಮಾತನಾಡುತ್ತಿರುವ ಕೃಷ್ಣನನ್ನು ನಿರಾಕರಿಸಿದರೆ ನೀನು ಪರಾಜಯವನ್ನು ಹೊಂದುವಿ ಎಂದು ಹೇಳಿದೆನು.

ಪ್ರತ್ಯಾಚಷ್ಟ ಸ ದಾಶಾರ್ಹಮ್ ಋಷಭಂ ಸರ್ವಸಾತ್ವತಾಮ್ ।
ಅನುನೀಯಾಭಿಜಲ್ಪಂತಮನಯಾನ್ನಾನ್ವಪದ್ಯತ ॥ ೨೫ ॥

ಅವನು ಸಮಾಧಾನದಿಂದ ಮಾತನಾಡುತ್ತಿದ್ದ ಸಾತ್ವತಋಷಭನಾದ, ದಾಶಾರ್ಹನಾದ ಕೃಷ್ಣನನ್ನು ತನ್ನ ದುರ್ನೀತಿಯಿಂದಾಗಿ ನಿರಾಕರಿಸಿದನು. ಅವನ ಮಾತನ್ನು ಕೇಳಲಿಲ್ಲ.

ಕರ್ಣದುಃಶಾಸನಮತೇ ಸೌಬಲಸ್ಯ ಚ ದುರ್ಮತೇಃ ।
ಪ್ರತ್ಯಾಖ್ಯಾತೋ ಮಹಾಬಾಹುಃ ಕುಲಾಂತಕರಣೇನ ಮೇ ॥ ೨೬ ॥

ಕರ್ಣ-ದುಶ್ಶಾಸನರ ಅಭಿಪ್ರಾಯವನ್ನು ಮತ್ತು ದುರ್ಬುದ್ಧಿಯುಳ್ಳ ಶಕುನಿಯ ಅಭಿಪ್ರಾಯವನ್ನು ಆಶ್ರಯಿಸಿ, ನನ್ನ ಕುಲನಾಶಕನಾದ ಅವನು ಮಹಾಬಾಹುವಾದ ಕೃಷ್ಣನ್ನು ನಿರಾಕರಿಸಿದನು.

ನಿತ್ಯಂ ದುಃಶಾಸನಸ್ಯೈವ ಕರ್ಣಸ್ಯ ಚ ಮತೇ ದ್ವಯೋಃ ।
ಅನ್ವವರ್ತತ ಹಿತ್ವಾ ಮಾಂ ಕೃಷ್ಣಃ ಕಾಲೇನ ದುರ್ಮತಿಃ ॥ ೨೭ ॥

ದುರ್ಮತಿಯಾದ ನನ್ನ ಪುತ್ರನು ಕಾಲಪಾಶದಿಂದ ಎಳೆಯಲ್ಪಟ್ಟು ನನ್ನನ್ನು ಬಿಟ್ಟು ಯಾವಾಗಲೂ ಕರ್ಣ ಮತ್ತು ದುಶ್ಶಾಸನರ ಅಭಿಪ್ರಾಯವನ್ನೇ ಅನುಸರಿಸಿದನು.

ನ ಹ್ಯಹಂ ಯುದ್ಧಮಿಚ್ಛಾಮಿ ವಿದುರೋ ದ್ರೋಣ ಏವ ವಾ ।
ಬಾಹ್ಲೀಕಃ ಸೋಮದತ್ತೋ ವಾ ಭೀಷ್ಮೋ ದ್ರೌಣಾಯನಿಸ್ತಥಾ ॥ ೨೮ ॥

ಶಲ್ಯೋ ಭೂರಿಶ್ರವಾಶ್ಚೈವ ಪುರುಮಿತ್ರೋ ವಿವಿಂಶತಿಃ ।
ಜಯಃ ಕೃಪೋ ವಾ ಧರ್ಮಾತ್ಮಾ ನ ಚಾನ್ಯೇ ಮಮ ಬಾಂಧವಾಃ ॥೨೯॥

ನಾನಾಗಲೀ, ವಿದುರನಾಗಲೀ, ದ್ರೋಣರಾಗಲೀ, ಬಾಹ್ಲೀಕನಾಗಲೀ, ಸೋಮದತ್ತನಾಗಲೀ, ಭೀಷ್ಮರಾಗಲೀ, ದ್ರೋಣಪುತ್ರರಾದ ಅಶ್ವತ್ಥಾಮರಾಗಲೀ, ಶಲ್ಯನಾಗಲೀ, ಭೂರಿಶ್ರವನಾಗಲೀ, ಪುರುಮಿತ್ರನಾಗಲೀ, ವಿವಿಂಶತಿಯಾಗಲೀ, ಜಯನಾಗಲೀ, ಧರ್ಮಿಷ್ಠರಾದ ಕೃಪರಾಗಲೀ ಅಥವಾ ಉಳಿದ ನನ್ನ ಬಾಂಧವರಾಗಲೀ ಯುದ್ಧವನ್ನು ಬಯಸುವುದಿಲ್ಲ.

ಏತೇಷಾಂ ಮತಮಾಸ್ಥಾಯ ಯದಿ ವತ್ಸ್ಯತಿ ಪುತ್ರಕಃ ।
ಸಜ್ಞಾತಿಮಿತ್ರಃ ಸುಸುಖಂ ಚಿರಂ ಜೀವೇದನಾಮಯಮ್ ।
ಏತೇಭ್ಯಶ್ಚ ಮದೂರ್ದ್ಧಂ ಚ ಆಭೋಕ್ಷ್ಯದ್ ವಸುಧಾಮಿಮಾಮ್ ॥೩೦॥

ಇವರೆಲ್ಲರ ಅಭಿಪ್ರಾಯದಂತೆ ನನ್ನ ಪುತ್ರನು ನಡೆದುಕೊಂಡಿದ್ದರೆ ಬಂಧು-ಮಿತ್ರರ ಸಹಿತನಾಗಿ ಯಾವ ಉಪದ್ರವವೂ ಇಲ್ಲದೆ, ಇವರೆಲ್ಲರ ಅನಂತರವೂ ಮತ್ತು ನನ್ನ ಅನಂತರವೂ ಸುಖವಾಗಿ ಈ ಭೂಮಿಯನ್ನು ಭೋಗಿಸಿಕೊಂಡು ಇರುತ್ತಿದ್ದನು.

ಶುದ್ಧಾ ಮಧುರಸಂಭಾಷಾ ಜ್ಞಾತಿಮಧ್ಯೇ ಪ್ರಿಯಂವದಾಃ ।
ಕುಲೀನಾಶ್ಚಾಭಿಜಾತಾಶ್ಚ ಸುಖಂ ಜೀವಂತಿ ಪಾಂಡವಾಃ ॥೩೧॥

ಶುದ್ಧರು, ಮಧುರಸಂಭಾಷಣೆಯುಳ್ಳವರು, ಜ್ಞಾತಿಗಳಲ್ಲಿ ಪ್ರಿಯವಾಗಿ ಮಾತನಾಡುವವರು, ಕುಲೋಚಿತವಾದ ನಡತೆಯುಳ್ಳವರು, ಒಳ್ಳೆಯ ಕುಲದಲ್ಲಿ ಜನಿಸಿದವರೂ ಆದ ಪಾಂಡವರು ಸುಖವಾಗಿ ಜೀವಿಸುತ್ತಾರೆ.

ಧರ್ಮಾಪೇಕ್ಷೀ ನರಸ್ತಾತ ಸರ್ವತ್ರ ಲಭತೇ ಸುಖಮ್ ।
ಪ್ರೇತ್ಯಭಾವೇ ಚ ಕಲ್ಯಾಣಂ ಪ್ರಸಾದಾತ್ ಪ್ರತಿಪದ್ಯತೇ ॥ ೩೨ ॥

ಎಲೈ ಪ್ರೀತಿಪಾತ್ರನೇ, ಧರ್ಮವನ್ನು ಅಪೇಕ್ಷಿಸುವ ಮನುಷ್ಯನು ಎಲ್ಲ ಕಡೆಯಲ್ಲಿಯೂ ಸುಖವನ್ನೇ ಪಡೆಯುತ್ತಾನೆ. ಮೃತನಾದ ಮೇಲೆ ಭಗವದನುಗ್ರಹದಿಂದ ಬಹಳ ಕಲ್ಯಾಣವನ್ನು ಹೊಂದುತ್ತಾನೆ.

ಅಲಮರ್ಧಂ ಪೃಥಿವ್ಯಾಸ್ತೇ ಸಹಾಮಾತ್ಯಸ್ಯ ಮಾ ದ್ರುಹಃ ।
ತೇಷಾಮಪಿ ಸಮುದ್ರಾಂತಾ ಪಿತೃಪೈತಾಮಹೀ ಮಹೀ ॥ ೩೩ ॥

ನಿನಗೂ ಮತ್ತು ನಿನ್ನ ಮಂತ್ರಿಗಳಿಗೂ ಪೃಥಿವಿಯ ಅರ್ಧಭಾಗವು ಸಾಕು. ಪಾಂಡವರಿಗೆ ದ್ರೋಹವನ್ನು ಮಾಡಬೇಡ. ಸಮುದ್ರಾಂತವಾದ ಈ ಭೂಮಿಯು ಅವರಿಗೂ ಪಿತೃ-ಪಿತಾಮಹರಿಂದ ಬಂದ ಆಸ್ತಿಯಾಗಿದೆ.

ನ ಚ ತ್ವಾಽಭಿಭವಿಷ್ಯಂತಿ ಹಿತ್ವಾ ಧರ್ಮಂ ಪೃಥಾತ್ಮಜಾಃ ।
ನಿಯುಜ್ಯಮಾನಾಃ ಸ್ಥಾಸ್ಯಂತಿ ಪಾಂಡವಾ ಧರ್ಮವರ್ತ್ಮನಿ ॥೩೪॥

ಕುಂತಿಯ ಪುತ್ರರು ಧರ್ಮವನ್ನು ಬಿಟ್ಟು ಎಂದೂ ನಿನ್ನನ್ನು ತಿರಸ್ಕರಿಸುವುದಿಲ್ಲ. ದೊಡ್ಡವರ ಆದೇಶಕ್ಕೆ ಅನುಗುಣವಾಗಿ ಪಾಂಡವರು ಧರ್ಮಮಾರ್ಗದಲ್ಲಿಯೇ ಇರುವರು.

ಸಂತಿ ನೋ ಜ್ಞಾತಯಸ್ತಾತ ಯೇಷಾಂ ಶ್ರೋಷ್ಯಂತಿ ಪಾಂಡವಾಃ ।
ಶಲ್ಯಸ್ಯ ಸೋಮದತ್ತಸ್ಯ ಭೀಷ್ಮಸ್ಯ ಚ ಮಹಾತ್ಮನಃ ॥ ೩೫ ॥

ದ್ರೋಣಸ್ಯಾಥ ವಿಕರ್ಣಸ್ಯ ಬಾಹ್ಲೀಕಸ್ಯ ಕೃಪಸ್ಯ ಚ ।
ಅನ್ಯೇಷಾಂ ಚೈವ ವೃದ್ಧಾನಾಂ ಭರತಾನಾಂ ಮಹಾತ್ಮನಾಮ್ ।
ತ್ವದರ್ಥಂ ಬ್ರುವತಾಂ ತಾತ ನ ಜಹುರ್ವಚನಾನಿ ತೇ ॥ ೩೬ ॥

ಎಲೈ ಪ್ರೀತಿಪಾತ್ರನೇ, ಪಾಂಡವರು ಯಾರ ಮಾತನ್ನು ಕೇಳುವರೋ ಅಂತಹ ಬಂಧುಗಳು ನಮಗೆ ಇದ್ದಾರೆ. ಶಲ್ಯ, ಸೋಮದತ್ತ, ಮಹಾತ್ಮರಾದ ಭೀಷ್ಮರು, ದ್ರೋಣರು, ವಿಕರ್ಣ, ಬಾಹ್ಲೀಕ, ಕೃಪರು, ಬೇರೆ ಮಹಾತ್ಮರಾದ ಭರತವಂಶದ ವೃದ್ಧರು, ಎಲೈ ಪ್ರೀತಿಪಾತ್ರನೇ, ನಿನ್ನ ಹಿತವನ್ನು ನುಡಿಯುವ ಇವರೆಲ್ಲರ ಮಾತನ್ನು ಪಾಂಡವರು ಮೀರುವುದಿಲ್ಲ.

ಕಂ ವಾ ತ್ವಂ ಮನ್ಯಸೇ ತೇಷಾಂ ಯಸ್ತಾ ್ವಂ ಬ್ರೂಯಾದತೋಽನ್ಯಥಾ ।
ಕೃಷ್ಣೋ ಧರ್ಮಂ ನ ಸಂಜಹ್ಯಾತ್ ಸರ್ವ ಏತೇ ತದನ್ವಯಾಃ ॥ ೩೭ ॥

ಅವರಲ್ಲಿ ಯಾರು ನಿನಗೆ ವಿರುದ್ಧವಾಗಿ ಮಾತನಾಡುವರೆಂದು ನೀನು ತಿಳಿದಿದ್ದೀಯೆ? ಕೃಷ್ಣನೂ ಧರ್ಮವನ್ನು ಬಿಡಲಾರ. ಇವರೆಲ್ಲರೂ ಅವನ ಮಾರ್ಗವನ್ನೇ ಅನುಸರಿಸುವವರು.

ಮಯಾಽಪಿ ಚೋಕ್ತಾಸ್ತೇ ವೀರಾ ವಚನಂ ಧರ್ಮಸಮ್ಮಿತಮ್ ।
ನಾನ್ಯಥಾ ವೈ ಕರಿಷ್ಯಂತಿ ಧರ್ಮಾತ್ಮಾನೋ ಹಿ ಪಾಂಡವಾಃ ॥೩೮॥

ಆ ವೀರರಿಗೆ ನಾನೂ ಸಹ ಧರ್ಮಸಮ್ಮತವಾದ ಮಾತುಗಳನ್ನು ಹೇಳಿದ್ದೇನೆ. ಧರ್ಮಾತ್ಮರಾದ ಪಾಂಡವರು ಬೇರೆ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ.

ಇತ್ಯಹಂ ವಿಲಪನ್ ಸೂತ ಬಹುಶಃ ಪುತ್ರಮುಕ್ತವಾನ್ ।
ನಹಿ ಮೇ ಶ್ರುತವಾನ್ ಮೂಢೋ ಮನ್ಯೇ ಕಾಲಸ್ಯ ಪರ್ಯಯಮ್ ॥

ಎಲೈ ಸೂತನೇ, ನಾನು ಬಹಳವಾಗಿ ಗೋಳಾಡುತ್ತಾ ಹೀಗೆ ನನ್ನ ಪುತ್ರನಿಗೆ ಹೇಳಿದೆ. ಆದರೆ ಮೂಢನಾದ ಅವನು ನನ್ನ ಮಾತನ್ನು ಕೇಳಲಿಲ್ಲ. ಇದನ್ನು ಕಾಲಚಕ್ರದ ಗತಿ ಎಂದು ನಾನು ತಿಳಿದಿದ್ದೇನೆ.

ವೃಕೋದರಾರ್ಜುನೌ ಯತ್ರ ವೃಷ್ಣಿವೀರಶ್ಚ ಸಾತ್ಯಕಿಃ ।
ಉತ್ತಮೌಜಾಶ್ಚ ಪಾಂಚಾಲೋ ಯುಧಾಮನ್ಯುಶ್ಚ ದುರ್ಜಯಃ ॥ ೪೦ ॥

ಧೃಷ್ಟದ್ಯುಮ್ನಶ್ಚ ದುರ್ಧರ್ಷಃ ಶಿಖಂಡೀ ಚಾಪರಾಜಿತಃ ।
ಅಶ್ಮಕಾಃ ಕೇಕಯಾಶ್ಚೈವ ಕ್ಷತ್ರಧರ್ಮಾऽಥ ಸೌಮಕಿಃ ॥ ೪೧ ॥

ಚೈದ್ಯಶ್ಚ ಚೇಕಿತಾನಶ್ಚ ಪುತ್ರಃ ಕಾಶ್ಯಸ್ಯ ಚಾಭಿಭೂಃ ।
ದ್ರೌಪದೇಯಾ ವಿರಾಟಶ್ಚ ದ್ರುಪದಶ್ಚ ಮಹಾರಥಃ ॥ ೪೨ ॥

ಯಮೌ ಚ ಪುರುಷವ್ಯಾಘ್ರೌ ಮಂತ್ರೀ ಚ ಮಧುಸೂದನಃ ।
ಕ ಏತಾನ್ ಜಾತು ಯುದ್ಧ್ಯೇತ ಅಸ್ಮಿಲ್ಲೋಕೇ ಜಿಜೀವಿಷುಃ ॥ ೪೩ ॥

ಎಲ್ಲಿ ಭೀಮಾರ್ಜುನರು, ವೃಷ್ಣಿವೀರನಾದ ಸಾತ್ಯಕಿಯು, ಪಾಂಚಾಲ ಯೋಧನಾದ ಉತ್ತಮೌಜನು, ದುರ್ಜಯನಾದ ಯುಧಾಮನ್ಯುವು, ದುರ್ದರ್ಷನಾದ ಧೃಷ್ಟದ್ಯುಮ್ನನು, ಅಪರಾಜಿತನಾದ ಶಿಖಂಡಿಯು, ಅಶ್ಮಕರು, ಕೇಕಯರು, ಕ್ಷತ್ರಧರ್ಮನು, ಸೌಮಕನು, ಚೈದ್ಯನು, ಚೇಕಿತಾನನು, ಕಾಶಿರಾಜ ಪುತ್ರನಾದ ಸುದಕ್ಷಿಣನು, ದ್ರೌಪದಿಯ ಐವರು ಮಕ್ಕಳು, ವಿರಾಟನು, ಮಹಾರಥನಾದ ದ್ರುಪದನು, ಪುರುಷವ್ಯಾಘ್ರರಾದ ನಕುಲ- ಸಹದೇವರು, ಮಂತ್ರಿಯಾದ ಕೃಷ್ಣನು ಇದ್ದಾರೆಯೋ ಅಂತಹವರ ವಿರುದ್ಧವಾಗಿ ಬದುಕಲು ಬಯಸುವ ಯಾವನು ಈ ಲೋಕದಲ್ಲಿ ಯುದ್ಧವನ್ನು ಮಾಡಿಯಾನು?

ದಿವ್ಯಮಸ್ತ್ರಂ ವಿಕುರ್ವಾಣಾಃ ಸಂಹರೇಯುರರಿಂದಮಾಃ ।
ಅನ್ಯಂ ದುರ್ಯೋಧನಾತ್ ಕರ್ಣಾಚ್ಛಕುನೇಶ್ಚಾಪಿ ಸೌಬಲಾತ್ ॥ ೪೪ ॥

ದುಃಶಾಸನಚತುರ್ಥಾನಾಂ ನಾನ್ಯಂ ಪಶ್ಯಾಮಿ ಪಂಚಮಮ್ ॥ ೪೫ ॥

ಅರಿಂದಮರಾದ ಪಾಂಡವರು ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ದುರ್ಯೋಧನ, ಕರ್ಣ, ಸೌಬಲನಾದ ಶಕುನಿ ಮತ್ತು ನಾಲ್ಕನೆಯವನಾದ ದುಶ್ಶಾಸನನನ್ನು ಬಿಟ್ಟು ಉಳಿದವರೆಲ್ಲರನ್ನೂ ಸಂಹರಿಸಿಯಾರು? ಉಳಿಯುವ ಐದನೆಯ ವ್ಯಕ್ತಿಯನ್ನು ನಾನು ಕಾಣುವುದಿಲ್ಲ.

ಯೇಷಾಂ ವಚನಕೃತ್ ಸ ಸ್ಯಾದ್ ವಿಷ್ಣುಕ್ಷೇನೋ ರಥೇ ಸ್ಥಿತಃ ।
ಸನ್ನದ್ಧಶ್ಚಾರ್ಜುನೋ ಯೋದ್ಧಾ ತೇಷಾಂ ನಾಸ್ತಿ ಪರಾಜಯಃ ॥ ೪೬ ॥

ವಿಷ್ಣಕ್ಷೇನನಾದ ಕೃಷ್ಣನು ಯಾರ ರಥದಲ್ಲಿ ಕುಳಿತು ಪಾಂಡವರ ಮಾತನ್ನು ಕೇಳುತ್ತಾನೆಯೋ, ಯಾರಿಗೆ ಸನ್ನದ್ಧನಾದ ಅರ್ಜುನನು ಯೋಧನಾಗಿದ್ದಾನೆಯೋ ಅವರಿಗೆ ಪರಾಜಯವಿಲ್ಲ.

ತೇಷಾಂ ಮಮ ವಿಲಾಪಾನಾಂ ನೇಹ ದುರ್ಯೋಧನಃ ಸ್ಮರೇತ್ ।
ಹತೌ ಹಿ ಪುರುಷವ್ಯಾಘ್ರೌ ಭೀಷ್ಮದ್ರೋಣೌ ಸಮಾಹಿತೌ ॥ ೪೭ ॥

ನನ್ನ ಆ ವಿಲಾಪದ ಮಾತುಗಳನ್ನು ಈಗ ದುರ್ಯೋಧನನು ಸ್ಮರಿಸಲಾರ. ಸಮಾಧಾನಚಿತ್ತರಾದ, ಪುರುಷವ್ಯಾಘ್ರರಾದ ಭೀಷ್ಮ-ದ್ರೋಣರೂ ಹತರಾದರು.

ತೇಷಾಂ ವಿದುರವಾಕ್ಯಾನಾಮುಕ್ತಾನಾಂ ದೀರ್ಘದರ್ಶನಾತ್ ।
ದೃಷ್ಟ್ವೇಮಾಂ ಫಲನಿರ್ವೃತ್ತಿಂ ಮನ್ಯೇ ಶೋಚಂತಿ ಪುತ್ರಕಾಃ ॥ ೪೮ ॥

ತನ್ನ ದೀರ್ಘದರ್ಶನದಿಂದ ವಿದುರನು ಹೇಳಿದ ಮಾತುಗಳ ಈ ಫಲಪಾಕವನ್ನು ನೋಡಿ ನನ್ನ ಪುತ್ರರು ಶೋಕಪಡುತ್ತಾರೆ ಎಂದು ಕಾಣಿಸುತ್ತದೆ.

ಸೇನಾಂ ದೃಷ್ಟ್ವಾಽಭಿಭೂತಾಂ ಮೇ ಶೈನೇಯೇನಾರ್ಜುನೇನ ಚ ।
ಶೂನ್ಯಾನ್ ದೃಷ್ಟ್ವಾ ರಥೋಪಸ್ಥಾನ್ ಮನ್ಯೇ ಶೋಚಂತಿ ಪುತ್ರಕಾಃ ॥

ನನ್ನ ಸೈನ್ಯವು ಸಾತ್ಯಕಿ ಮತ್ತು ಅರ್ಜುನರಿಂದ ಪರಾಭವಗೊಂಡು ರಥದ ಪೀಠಗಳು ರಥಿಕರಿಲ್ಲದೆ ಶೂನ್ಯವಾಗಿರುವುದನ್ನು ನೋಡಿ ನನ್ನ ಪುತ್ರರು ಶೋಕ ಪಡುವರೆಂದು ಭಾವಿಸುತ್ತೇನೆ.

ಹಿಮಾತ್ಯಯೇ ಯಥಾ ಕಕ್ಷಂ ಶುಷ್ಕಂ ವಾತೇರಿತೋ ಮಹಾನ್ ।
ಅಗ್ನಿರ್ದಹೇತ್ ತಥಾ ಸೇನಾಂ ಮಾಮಿಕಾಂ ಸ ಧನಂಜಯಃ ॥ ೫೦ ॥

ಹಿಮಗಾಲವು ಕಳೆದ ಮೇಲೆ ಒಣಗಿದ ಹುಲ್ಲುಗಾವಲನ್ನು ವಾಯುವಿನಿಂದ ಪ್ರೇರಿತವಾದ ಮಹಾಗ್ನಿಯು ಸುಡುವಂತೆ ನನ್ನ ಸೈನ್ಯವನ್ನು ಅರ್ಜುನನು ಸುಡುವನು.

ಆಚಕ್ಷ್ವ ಮೇ ಪುನಃ ಸರ್ವಂ ಕುಶಲೋ ಹ್ಯಸಿ ಸಂಜಯ ।
ಯದೋಪಯಾತಾಃ ಸಾಯಾಹ್ನೇ ಕೃತ್ವಾ ಪಾರ್ಥಸ್ಯ ಕಿಲ್ಬಿಷಮ್ ।
ಅಭಿಮನ್ಯೌ ಹತೇ ತಾತ ಕಥಮಾಸೀನ್ಮನೋ ಹಿ ವಃ ॥ ೫೧ ॥

ಎಲೈ ಸಂಜಯನೇ, ನನಗೆ ಪುನಃ ಎಲ್ಲವನ್ನೂ ಹೇಳು. ನೀನು ಯುದ್ಧವನ್ನು ವರ್ಣಿಸುವುದರಲ್ಲಿ ಕುಶಲನಾಗಿದ್ದೀಯೆ. ಎಲೈ ಪ್ರೀತಿಪಾತ್ರನೇ, ಅಭಿಮನ್ಯುವನ್ನು ಕೊಂದು ಅರ್ಜುನನಿಗೆ ಅಪಚಾರವನ್ನು ಮಾಡಿ, ಸಾಯಂಕಾಲದಲ್ಲಿ ಶಿಬಿರಕ್ಕೆ ಬಂದಾಗ ನಿಮ್ಮ ಮನಸ್ಸುಗಳು ಹೇಗಿದ್ದವು?

ವಿಜಾನಂಸ್ತಸ್ಯ ಕರ್ಮಾಣಿ ಯುಧಿ ಗಾಂಡೀವಧನ್ವನಃ ।
ಅಪಕೃತ್ಯ ಮಹತ್ ತಾತ ಸೋಢುಂ ಶಕ್ಷ್ಯಂತಿ ಮಾಮಕಾಃ ॥ ೫೨ ॥

ಎಲೈ ಪ್ರೀತಿಪಾತ್ರನೇ, ಗಾಂಡೀವ ಧನುರ್ಧಾರಿಯಾದ ಅವನು ಯುದ್ಧದಲ್ಲಿ ಮಾಡಿದ ಕಾರ್ಯವನ್ನು ನೋಡಿ, ಅವನಿಗೆ ದೊಡ್ಡ ಅಪಕಾರವನ್ನು ಮಾಡಿ ನನ್ನವರು ಅವನನ್ನು ಸಹಿಸಬಲ್ಲರೆ?

ಕಿನ್ನು ದುರ್ಯೋಧನಃ ಕೃತ್ಯಂ ಕಿಂ ಕರ್ಣಃ ಕೃತ್ಯಮಬ್ರವೀತ್ ।
ದುಃಶಾಸನಃ ಸೌಬಲಶ್ಚ ತೇಷಾಮೇವಂಗತೇ ಸತಿ ॥ ೫೩ ॥

ಪರಿಸ್ಥಿತಿಯು ಹೀಗಿರುವಾಗ ದುರ್ಯೋಧನನು ಏನು ಮಾಡಬೇಕೆಂದು ಹೇಳಿದನು? ಕರ್ಣನಾಗಲೀ, ದುಶ್ಶಾಸನನಾಗಲೀ, ಶಕುನಿಯಾಗಲೀ ಮುಂದೆ ಏನು ಮಾಡಬೇಕೆಂದು ಹೇಳಿದರು?

ಸರ್ವೇಷಾಂ ಸಮವೇತಾನಾಂ ಪುತ್ರಾಣಾಂ ಮಮ ಸಂಜಯ ।
ಯದ್ ವೃತ್ತಂ ತಾತ ಸಂಗ್ರಾಮೇ ಮಂದಸ್ಯಾಪನಯೈರ್ಭೃಶಮ್ ॥೫೪॥

ಲೋಭಾನುಗಸ್ಯ ದುರ್ಬುದ್ಧೇಃ ಕ್ರೋಧೇನ ವಿಕೃತಾತ್ಮನಃ ।
ರಾಜ್ಯಕಾಮಸ್ಯ ಮೂಢಸ್ಯ ರಾಗೋಪಹತಚೇತಸಃ ॥ ೫೫ ॥

ದುರ್ನೀತಂ ವಾ ಸುನೀತಂ ವಾ ತನ್ಮಮಾಚಕ್ಷ್ವ ಸಂಜಯ ॥ ೫೬ ॥

ಎಲೈ ಸಂಜಯನೇ, ಮಂದನಾದ, ಲೋಭಿಯಾದ, ದುರ್ಬುದ್ಧಿಯಾದ, ಕೋಪದಿಂದ ವಿಕಾರ ಹೊಂದಿದ ಮನಸ್ಸುಳ್ಳ, ರಾಜ್ಯಕಾಮನಾದ, ಮೂಢನಾದ, ಆಸೆಯಿಂದ ಪೂರ್ಣವಾದ ಮನಸ್ಸುಳ್ಳ ಅವನ ದುರ್ನಯದಿಂದ ಯುದ್ಧದಲ್ಲಿ ಉಳಿದು ಸೇರಿದ ನನ್ನ ಪುತ್ರರಿಗೆ ಏನು ಸಂಭವಿಸಿತು? ಅದು ದುರ್ನೀತಿಯಾಗಲಿ ಅಥವಾ ಸುನೀತಿಯಾಗಲಿ ಅದನ್ನು ನನಗೆ ಹೇಳುವವನಾಗು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಸಪ್ತಸಪ್ತತಿತಮೋऽಧ್ಯಾಯಃ ॥

॥ ಜಯದ್ರಥವಧಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆಂಟನೆಯ ಅಧ್ಯಾಯ

ಸಂಜಯನಿಂದ ಧೃತರಾಷ್ಟ್ರನಿಂದಾಪೂರ್ವಕವಾಗಿ ಯುದ್ಧಕಥನ.
ದ್ರೋಣರಿಂದ ಪದ್ಮಗರ್ಭವುಳ್ಳ ಶಕಟವ್ಯೂಹ ರಚನೆ.

ಸಂಜಯಃ

ಹಂತ ತೇ ಸಂಪ್ರವಕ್ಷ್ಯಾಮಿ ಸರ್ವಂ ಪ್ರತ್ಯಕ್ಷದರ್ಶಿವಾನ್ ।
ಶುಶ್ರೂಷಸ್ವ ಸ್ಥಿರೋ ಭೂತ್ವಾ ತವ ಹ್ಯಪನಯೋ ಮಹಾನ್ ॥ ೧ ॥

ಸಂಜಯ– ಸಂತೋಷ. ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದ ನಾನು ನಿನಗೆ ಹೇಳುವೆನು. ದೃಢವಾಗಿದ್ದು ಕೇಳುವವನಾಗು. ನಿನ್ನ ಅಪಚಾರವೇ ದೊಡ್ಡದಾಗಿದೆಯಪ್ಪೆ?

ಗತೋದಕೇ ಸೇತುಬಂಧೋ ಯಾದೃಕ್ ತಾದೃಗಯಂ ತವ ।
ವಿಲಾಪೋ ನಿಷ್ಫಲೋ ರಾಜನ್ ಮಾ ಶುಚೋ ಭರತರ್ಷಭ ॥ ೨ ॥

ಅನತಿಕ್ರಮಣೀಯೋऽಯಂ ಕೃತಾಂತಸ್ಯಾದ್ಭುತೋ ವಿಧಿಃ ।
ಮಾ ಶುಚೋ ಭರತಶ್ರೇಷ್ಠ ತವೈವಾಪನಯೋ ಮಹಾನ್ ॥ ೩ ॥

ನೀರು ಹರಿದು ಹೋದಮೇಲೆ ಕಟ್ಟೆಯನ್ನು ಹಾಕಿದಂತೆ ಎಲೈ ರಾಜನೇ, ಈ ನಿನ್ನ ವಿಲಾಪವು ವಿಚಿತ್ರವಾಗಿದೆ. ಭರತಶ್ರೇಷ್ಠನೇ, ದುಃಖಪಡಬೇಡ. ಕೃತಾಂತನ ಆದ್ಭುತವಾದ ವಿಧಿಯನ್ನು ಯಾರೂ ದಾಟಲಾರರು. ಭರತಶ್ರೇಷ್ಠನೇ, ಶೋಕಪಡಬೇಡ. ನಿನ್ನ ಅಪಚಾರವೇ ದೊಡ್ಡದಾಗಿದೆ.

ಯದಿ ತ್ವಂ ಹಿ ಪುರಾ ದ್ಯೂತಾತ್ ಕುಂತೀಪುತ್ರಂ ಯುಧಿಷ್ಠಿರಮ್ ।
ನ್ಯವಾರಯಿಷ್ಯಃ ಪುತ್ರಾಂಶ್ಚ ನಾಭವಿಷ್ಯದ್ಭನ್ನಕ್ಷಯಃ ॥ ೪ ॥

ಹಿಂದೆ ಕುಂತೀಪುತ್ರನಾದ ಯುಧಿಷ್ಠಿರನನ್ನು ಮತ್ತು ನಿನ್ನ ಪುತ್ರರನ್ನು ದ್ಯೂತದಿಂದ ವಿಮುಖರನ್ನಾಗಿ ಮಾಡಿದ್ದರೆ ಈ ಜನಕ್ಷಯವು ಆಗುತ್ತಿರಲಿಲ್ಲ.

ಯುದ್ಧಕಾಲೇ ಪುನಃ ಪ್ರಾಪ್ತೇ ತಥೈವ ಭರತರ್ಷಭ ।
ನಿವರ್ತಯೇಥಾಃ ಪುತ್ರಾಂಶ್ಚ ನ ತ್ವಾಂ ವ್ಯಸನಮಾವ್ರಜೇತ್ ॥ ೫ ॥

ಎಲೈ ಭರತಶ್ರೇಷ್ಠನೇ, ಹಾಗೆ ಯುದ್ಧಕಾಲವು ಪ್ರಾಪ್ತವಾದಾಗ ನಿನ್ನ ಪುತ್ರರನ್ನು ಯುದ್ಧದಿಂದ ವಿಮುಖರನ್ನಾಗಿ ಮಾಡಿದ್ದರೆ ನಿನಗೆ ಈ ವ್ಯಸನವು ಬರುತ್ತಿರಲಿಲ್ಲ.

ದುರ್ಯೋಧನಂ ಚಾವಿಧೇಯಂ ಬಧ್ನೀಯಾಸ್ತ್ವಂ ಪುರಾ ಯದಿ ।
ಅವೇಕ್ಷ್ಯ ಕೌರವಾನ್ ರಾಜನ್ ಪ್ರಾಪ್ಸ್ಯಸೇ ಸುಮಹದ್ ಯಶಃ ।
ಕುರೂನಚೋದಯಿಷ್ಯಸ್ತ್ವಂ ನ ತ್ವಾಂ ವ್ಯಸನಮಾವ್ರಜೇತ್ ॥ ೬ ॥

ಎಲೈ ರಾಜನೇ, ನೀನು ಹಿಂದೆಯೇ ಎಲ್ಲ ಕೌರವರ ಹಿತವನ್ನು ಗಮನಿಸಿ ಅವಿಧೇಯನಾದ ದುರ್ಯೋಧನನನ್ನು ಬಂಧಿಸಿದ್ದರೆ ನಿನಗೆ ಮಹಾಕೀರ್ತಿಯು ಬರುತ್ತಿದ್ದಿತು. ಹಾಗೆ ನೀನು ಕುರುಗಳಿಗೆ ಪ್ರಚೋದನೆಯನ್ನು ನೀಡಿದ್ದರೆ ನಿನಗೆ ವ್ಯಸನವು ಬರುತ್ತಿರಲಿಲ್ಲ.

ತತ್ ತೇ ಬುದ್ಧಿವ್ಯತೀಚಾರಮ್ ಉಪಲಪ್ಸ್ಯಂತಿ ತಂ ಜನಾಃ ।
ಪಾಂಚಾಲಾ ವೃಷ್ಣಯಶ್ಚೈವ ಯೇ ಚಾನ್ಯೇಽಪಿ ಜನಾಧಿಪಾಃ ॥ ೭ ॥

ಆ ನಿನ್ನ ಬುದ್ಧಿಯ ವ್ಯಭಿಚಾರದ ಫಲವನ್ನು ಈ ದಿನ ಪಾಂಚಾಲರೂ, ವೃಷ್ಣಿಗಳೂ, ಉಳಿದ ರಾಜರೂ ಮತ್ತು ಜನರೂ ಅನುಭವಿಸುವರು.

ಸ ಕೃತ್ವಾ ಪಿತೃಕರ್ಮ ತ್ವಂ ಪುತ್ರಂ ಸಂಸ್ಥಾಪ್ಯ ಸತ್ಪಥೇ ।
ವರ್ತೇಥಾ ಯದಿ ಧರ್ಮೇಣ ನ ತ್ವಾಂ ವ್ಯಸನಮಾವ್ರಜೇತ್ ॥ ೮ ॥

ತಂದೆಯು ಮಾಡಬೇಕಾದ ಕಾರ್ಯದಂತೆ ನಿನ್ನ ಪುತ್ರನನ್ನು ಸನ್ಮಾರ್ಗದಲ್ಲಿನಿಲ್ಲಿಸಿ, ನೀನು ಧರ್ಮದಿಂದ ನಡೆದುಕೊಂಡಿದ್ದರೆ ನಿನಗೆ ವ್ಯಸನವು ಬರುತ್ತಿರಲಿಲ್ಲ.

ತ್ವಂ ತು ಪ್ರಾಜ್ಞತಮೋ ಲೋಕೇ ಹಿತ್ವಾ ಧರ್ಮಂ ಸನಾತನಮ್ ।
ದುರ್ಯೋಧನಸ್ಯ ಕರ್ಣಸ್ಯ ಶಕುನೇಶ್ಚಾನ್ವಗಾ ಮತಮ್ ॥ ೯ ॥

ಲೋಕದಲ್ಲಿ ಅತ್ಯಂತ ಪ್ರಾಜ್ಞನಾದ ನೀನು ಸನಾತನ ಧರ್ಮವನ್ನು ಬಿಟ್ಟು ದುರ್ಯೋಧನನ ಮತ್ತು ಶಕುನಿಯ ಅಭಿಪ್ರಾಯವನ್ನು ಅನುಸರಿಸಿದೆ.

ತತ್ ತೇ ವಿಲಪಿತಂ ರಾಜನ್ ಮಯಾ ಸರ್ವಂ ನಿಶಾಮಿತಮ್ ।
ಅರ್ಥೇ ನಿವಿಶಮಾನಸ್ಯ ವಿಷಮಿಶ್ರಂ ಯಥಾ ಮಧು ॥ ೧೦ ॥

ಎಲೈ ರಾಜನೇ, ನಿನ್ನ ಎಲ್ಲ ವಿಲಾಪನ್ನೂ ನಾನು ಕೇಳಿದೆನು. ಸಂಪತ್ತಿನ ಆಸೆಯುಳ್ಳ ನಿನ್ನ ವಿಲಾಪವು ವಿಷಮಿಶ್ರಿತವಾದ ಮಧುವಿನಂತಿದೆ.

ನ ತಥಾ ಮನ್ಯತೇ ಕೃಷ್ಣೋ ನ ಚ ರಾಜಾ ಯುಧಿಷ್ಠಿರಃ ।
ನ ಭೀಷ್ಮೋ ನೈವ ಚ ದ್ರೋಣೋ ಯಥಾ ತ್ವಂ ಮನ್ಯಸೇ ನೃಪ ॥೧೧॥

ಎಲೈ ರಾಜನೇ, ನೀನು ಹೇಗೆ ತಿಳಿಯುತ್ತೀಯೋ ಹಾಗೆ ಕೃಷ್ಣನಾಗಲೀ, ರಾಜನಾದ ಯುಧಿಷ್ಠಿರನಾಗಲೀ, ಭೀಷ್ಮರಾಗಲೀ, ದ್ರೋಣರಾಗಲೀ ಭಾವಿಸುವುದಿಲ್ಲ.

ವೃದ್ಧಾನಂತ ಯದಾ ತು ತ್ವಾಂ ಲುಬ್ಧಂ ಧರ್ಮಪ್ರವಾದಿನಮ್ ।
ತದಾ ಪ್ರಭೃತಿ ಕೃಷ್ಣಸ್ತ್ವಾಂ ನ ತಥಾ ಬಹು ಮನ್ಯತೇ ॥ ೧೨ ॥

ನಿನ್ನನ್ನು ಸಂಪತ್ತಿನ ಆಸೆಯನ್ನು ಹೊಂದಿ, ಧರ್ಮದ ಮಾತನ್ನು ಆಡುವವನು ಎಂದು ತಿಳಿದಾಗಲಿಂದಲೂ ಕೃಷ್ಣನು ನಿನಗೆ ಮೊದಲಿನಂತೆ ಗೌರವವನ್ನು ಕೊಡುತ್ತಿಲ್ಲ.

ಪರುಷಾಣ್ಯುಚ್ಯಮಾನಾಂಸ್ತ್ವಂ ಪುರಾ ಪಾರ್ಥಾನುಪೇಕ್ಷಸೇ ।
ತಸ್ಯಾನುಬಂಧಃ ಪ್ರಾಪ್ತಸ್ತ್ವಾಂ ಪುತ್ರಾಣಾಂ ರಾಜ್ಯಕಾಮುಕಮ್ ।
ಪಿತೃಪೈತಾಮಹಂ ರಾಜ್ಯಮಪವೃತ್ತಂ ತವಾನಘ ॥ ೧೩ ॥

ಹಿಂದೆ ನಿನ್ನ ಪುತ್ರರು ಪಾಂಡವರನ್ನು ಉದ್ದೇಶಿಸಿ ಕ್ರೂರವಾದ ಮಾತುಗಳನ್ನು ಆಡಿದಾಗ ನೀನು ಉಪೇಕ್ಷಿಸಿದೆ. ಪುತ್ರರಿಗೆ ರಾಜ್ಯವನ್ನು ಬಯಸಿದ ನಿನಗೆ ಅದರ ಫಲವು ಈಗ ಪ್ರಾಪ್ತವಾಗಿದೆ. ಎಲೈ ಅನಘನೇ, ಪಾಂಡವರಿಗೆ ಸೇರಬೇಕಾಗಿದ್ದ ಅವರ ಪಿತೃ-ಪಿತಾಮಹರ ರಾಜ್ಯವನ್ನು ನೀನು ಕಸಿದುಕೊಂಡೆ.

ಅಥ ಪಾರ್ಥೈರ್ಜಿತಾಂ ಕೃತ್ಸ್ನಾಂ ಪೃಥಿವೀಂ ಪ್ರತಿಪದ್ಯಥಾಃ ।
ಪಾಂಡುನಾऽಧಿಷ್ಠಿತಂ ರಾಜ್ಯಂ ಕೌರವಾಣಾಂ ಯಶಸ್ತಥಾ ॥ ೧೪ ॥

ಆನಂತರ ಪಾಂಡವರು ಸಂಪಾದಿಸಿದ ಸಮಸ್ತವಾದ ಪೃಥಿವಿಯನ್ನೂ, ಪಾಂಡುವಿನ ಅಧಿಷ್ಠಿತವಾದ ರಾಜ್ಯವನ್ನೂ ಮತ್ತು ಕೌರವರ ಕೀರ್ತಿಯನ್ನೂ ನೀನು ಪಡೆದೆ.

ಏತಚ್ಚಾಪ್ಯಧಿಕಂ ಭೂಯಃ ಪಾಂಡವೈರ್ಧರ್ಮಚಾರಿಭಃ ॥ ೧೫ ॥

ತೇಷಾಂ ತತ್ ತಾದೃಶಂ ಕರ್ಮ ತ್ವಮಾಸಾದ್ಯ ಸುನಿಷ್ಫಲಮ್ ।
ಪೈತ್ರ್ಯಾ ದ್ಧಿ ಭ್ರಂಶಿತಾ ರಾಜ್ಯಾತ್ ತ್ವಯೈವಾಮಿಷಗೃದ್ಧಿನಾ ॥ ೧೬ ॥

ಪಾಂಡುವು ಸಂಪಾದನೆ ಮಾಡಿದುದಕ್ಕಿಂತಲೂ ಹೆಚ್ಚಿನ ರಾಜ್ಯವನ್ನು ಸಂಪಾದನೆ ಮಾಡಿದರು. ಅಂತಹ ಪಾಂಡವರ ಕರ್ಮದ ಫಲವನ್ನು ನೀನು ಪಡೆದು ಸಂಪತ್ತಿನ ಲೋಭವುಳ್ಳ ನೀನು ವ್ಯರ್ಥವಾಗಿ ಪಾಂಡವರನ್ನು ಅವರ ಪಿತೃರಾಜ್ಯದಿಂದ ಭ್ರಷ್ಟರನ್ನಾಗಿ ಮಾಡಿದೆ.

ಯತ್ ಪುನರ್ಯುದ್ಧಕಾಲೇ ತು ಪುತ್ರಂ ಗರ್ಹಯಸೇ ನೃಪ ।
ಬಹುಧಾ ವ್ಯಾಹರನ್ ದೋಷಾನ್ ನ ತದದ್ಯೋಪಪದ್ಯತೇ ॥ ೧೭ ॥

ಎಲೈ ರಾಜನೇ, ಮತ್ತು ಈಗ ಯುದ್ಧಕಾಲದಲ್ಲಿ ಬಹಳ ಮಾತನಾಡುತ್ತಾ, ಪುತ್ರನ ದೋಷಗಳನ್ನು ಹೇಳಿ ಅವನನ್ನು ಏನು ನಿಂದಿಸುತ್ತಿದ್ದೀಯೋ ಅದು ಸರಿಯಾದುದಲ್ಲ.

ನಹಿ ರಕ್ಷಂತಿ ರಾಜಾನೋ ಸರ್ವಾರ್ಥಾನ್ ನೈವ ಜೀವಿತಮ್ ।
ಚಮೂಂ ವಿಗಾಹ್ಯ ಪಾರ್ಥಾನಾಂ ಕ್ಷತ್ರಿಯಾ ಜಯಕಾಂಕ್ಷಿಣಃ ॥ ೧೮ ॥

ರಾಜರು ಎಲ್ಲ ಸಂಪತ್ತನ್ನಾಗಲೀ, ಅಥವಾ ಜೀವಿತವನ್ನಾಗಲೀ ರಕ್ಷಿಸುವುದಿಲ್ಲ. ಕ್ಷತ್ರಿಯರು ಪಾಂಡವರ ಸೈನ್ಯವನ್ನು ಪ್ರವೇಶಿಸಿ ಜಯವನ್ನು ಬಯಸುತ್ತಾರೆ.

ಯಾಂ ತು ಕೃಷ್ಣಾರ್ಜುನೌ ಸೇನಾಂ ಸಸಾತ್ಯಕಿವೃಕೋದರೌ ।
ಕೋಽತ್ರ ತಾಂ ಪ್ರತಿಯುದ್ಧ್ಯೇತ ಚಮೂಮನ್ಯತ್ರ ಕೌರವಾತ್ ॥ ೧೯ ॥

ಕೃಷ್ಣಾರ್ಜುನರಿಂದಲೂ, ಸಾತ್ಯಕಿ-ವೃಕೋದರರಿಂದಲೂ ಸಹಿತವಾದ ಆ ಸೈನ್ಯವನ್ನು ದುರ್ಯೋಧನನೊಬ್ಬನನ್ನು ಬಿಟ್ಟು ಬೇರೆ ಯಾವನು ಯುದ್ಧದಲ್ಲಿ ಎದುರಿಸುವನು?

ಯೇಷಾಂ ಯೋದ್ಧಾ ಗುಡಾಕೇಶೋ ಯೇಷಾಂ ಮಂತ್ರೀ ಜನಾರ್ದನಃ ।
ಯೇಷಾಂ ಚ ಸಾತ್ಯಕಿರ್ಗೋಪ್ತಾ ಯೇಷಾಂ ಗೋಪ್ತಾ ವೃಕೋದರಃ ॥

ಕೋ ಹಿ ತಾನ್ ವಿಷಹೇದ್ ಯೋದ್ಧುಂ ಮರ್ತ್ಯಧರ್ಮಾಧನುರ್ಧರಃ ।
ಅನ್ಯತ್ರ ಕೌರವೇಯೇಭ್ಯೋ ಯೇ ವಾ ತೇಷಾಂ ಪದಾನುಗಾಃ ॥ ೨೧ ॥

ಯಾರಿಗೆ ಅರ್ಜುನನು ಯೋಧನೋ, ಕೃಷ್ಣನು ಮಂತ್ರಿಯೋ, ಸಾತ್ಯಕಿ ಮತ್ತು ಭೀಮಸೇನರು ರಕ್ಷಕರೋ ಅಂತಹವರನ್ನು ನಿನ್ನ ಪುತ್ರರು ಮತ್ತು ಅವರ ಅನುಯಾಯಿಗಳನ್ನು ಬಿಟ್ಟು ಮರಣಶೀಲನಾದ ಯಾವ ಧನುರ್ಧಾರಿಯು ಯುದ್ಧದಲ್ಲಿ ತಡೆಯುತ್ತಾನೆ?

ಯಾವತ್ ತು ಶಕ್ಯತೇ ಕರ್ತುಮನುರಕ್ತೈರ್ಜನಾಧಿಪೈಃ ।
ಕ್ಷತ್ರಧರ್ಮರತೈಃ ಶೂರೈಃ ತಾವತ್ ಕುರ್ವಂತಿ ಕೌರವೈಃ ॥ ೨೨ ॥

ಅನುರಾಗವುಳ್ಳ ರಾಜರು ಎಷ್ಟು ಮಾಡಲು ಸಾಧ್ಯವೋ ಅಷ್ಟನ್ನು ಕ್ಷತ್ರಧರ್ಮ ರತರಾದ ಶೂರರು ನಿನ್ನ ಸೈನ್ಯದಲ್ಲಿ ಸೇರಿ ಮಾಡುತ್ತಾರೆ.

ಯಥಾ ತು ಪುರುಷವ್ಯಾಘ್ರೈರ್ಯುದ್ಧಂ ಪರಮಸಂಕಟಮ್ ।
ಕುರೂಣಾಂ ಪಾಂಡವೈಃ ಸಾರ್ಧಂ ತತ್ ಸರ್ವಂ ಶೃಣು ತತ್ತ್ವತಃ ॥೨೩॥

ಪುರುಷವ್ಯಾಘ್ರರಾದ ಪಾಂಡವರ ಜೊತೆಯಲ್ಲಿ ಕುರುಗಳಿಗೆ ಎಂತಹ ಸಂಕಟಪ್ರದವಾದ ಯುದ್ಧವು ನಡೆಯಿತೋ ಅದೆಲ್ಲವನ್ನೂ ಸರಿಯಾಗಿ ಹೇಳು.

ತಸ್ಯಾಂ ನಿಶಾಯಾಂ ವ್ಯುಷ್ಟಾಯಾಂ ದ್ರೋಣಃ ಶಸ್ತ್ರಭೃತಾಂ ವರಃ ।
ಸ್ವಾನ್ಯನೀಕಾನಿ ಸರ್ವಾಣಿ ಪ್ರಾಕ್ರಾಮದ್ ವ್ಯೂಹಿತುಂ ತತಃ ॥ ೨೪ ॥

ಆ ರಾತ್ರಿಯು ಕಳೆದ ಮೇಲೆ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ತಮ್ಮ ಸೈನ್ಯವನ್ನು ವ್ಯೂಹಗೊಳಿಸಲು ಎಲ್ಲ ಸೈನ್ಯದಲ್ಲೂ ತಿರುಗಾಡಿದರು.

ಶೂರಾಣಾಂ ಗರ್ಜತಾಂ ರಾಜನ್ ಪ್ರಕ್ರುದ್ಧಾನಾಮಮರ್ಷಿಣಾಮ್ ।
ಶ್ರೂಯಂತೇ ಸ್ಮ ಗಿರಶ್ಚಿತ್ರಾಃ ಪರಸ್ಪರವಧೈಷಿಣಾಮ್ ॥ ೨೫ ॥

ಎಲೈ ರಾಜನೇ, ಬಹಳ ಕೋಪ ಮತ್ತು ರೋಷಗಳಿಂದ ಕೂಡಿ ಪರಸ್ಪರ ವಧೆಯನ್ನು ಬಯಸಿ, ಗರ್ಜಿಸುವ ಶೂರರ ವಿಚಿತ್ರವಾದ ಮಾತುಗಳು ಕೇಳಿ ಬರುತ್ತಿದ್ದವು.

ವಿಷ್ಫಾರ್ಯ ಧನುರುದ್ಯಮ್ಯ ಕೇಯೂರಮವಮೃಜ್ಯ ಚ ।
ವಿನಿಃಶ್ವಸಂತಃ ಪ್ರಾಕ್ರೋಶನ್ ಕ್ವೇದಾನೀಂ ಸ ಧನಂಜಯಃ ॥ ೨೬ ॥

ಧನುಸ್ಸನ್ನು ಎತ್ತಿ, ಹೆದೆಯನ್ನು ಮೀಟಿ, ಭುಜಕೀರ್ತಿಯನ್ನು ಉಜ್ಜಿ, ನಿಟ್ಟುಸಿರನ್ನು ಬಿಡುತ್ತಾ, ಆ ಧನಂಜಯನು ಎಲ್ಲಿದ್ದಾನೆ ಎಂದು ಕಿರುಚುತ್ತಿದ್ದರು.

ವಿಕೋಶಾನ್ ಸುತ್ಸರೂನನ್ಯೇ ಕೃತಧಾರಾನ್ ಸಮಾಹಿತಾನ್ ।
ಪೀತಾನಾಕಾಶಸಂಕಾಶಾನ್ ಅಸೀನುಚ್ಚಿಕ್ಷಿಪುರ್ಜನಾಃ ॥ ೨೭ ॥

ಒರೆಯಿಂದ ತೆಗೆದ, ಒಳ್ಳೆಯ ಹಿಡಿಗಳನ್ನು ಹೊಂದಿದ, ಹರಿತವಾದ ಅಲುಗುಗಳನ್ನುಳ್ಳ, ನೀರನ್ನು ಕುಡಿಸಿ ಗಟ್ಟಿಮಾಡಿರುವುದರಿಂದ ಆಕಾಶದ ಕಾಂತಿಯನ್ನು ಹೊಂದಿದ ಖಡ್ಗಗಳನ್ನು ಯೋಧರು ಮೇಲಕ್ಕೆ ಎಸೆಯುತ್ತಿದ್ದರು.

ಚರಂತಸ್ತ್ವಸಿಮಾರ್ಗಾಂಶ್ಚ ರಥಮಾರ್ಗಾಂಶ್ಚ ಶಿಕ್ಷಿತಾಃ ।
ದೃಶ್ಯಂತೇ ಕುಂಜರೈಶ್ಚಾನ್ಯೈಃ ವಾಜಿಭಿಶ್ಚ ಯುಯುತ್ಸವಃ ।
ಸಂಗ್ರಾಮಮನಸಃ ಶೂರಾಃ ದೃಶ್ಯಂತೇ ಸ್ಮ ಸಹಸ್ರಶಃ ॥ ೨೮ ॥

ಖಡ್ಗಯುದ್ಧದ ಮಾರ್ಗಗಳನ್ನು, ರಥಮಾರ್ಗಗಳನ್ನು ಅಭ್ಯಾಸ ಮಾಡುತ್ತಿರುವವರು, ಗಜಗಳಿಂದಲೂ ಮತ್ತು ಅಶ್ವಗಳಿಂದಲೂ ಕೂಡಿ ಯುದ್ಧವನ್ನು ಮಾಡುವ ಬಯಕೆ ಉಳ್ಳವರು, ಅಲ್ಲಿ ಕಂಡುಬಂದರು. ಯುದ್ಧವನ್ನು ಮಾಡಲು ಬಯಸಿದ ಶೂರರು ಸಹಸ್ರಾರು ಸಂಖ್ಯೆಯಲ್ಲಿ ಕಂಡುಬಂದರು.

ಸಘಂಟಾಶ್ಚಂದನಾದಿಗ್ಧಾಃ ಸ್ವರ್ಣವಜ್ರವಿಭೂಷಿತಾಃ ।
ಸಮುತ್ಕ್ಷಿಪ್ಯ ಗದಾಶ್ಚಾನ್ಯೇ ಪರ್ಯಪೃಚ್ಛಂತ ಪಾಂಡವಮ್ ॥ ೨೯ ॥

ಇನ್ನು ಕೆಲವರು ಘಂಟೆಗಳನ್ನು ಕಟ್ಟಿದ, ಚಂದನದಿಂದ ಲೇಪಿತವಾದ ಸ್ವರ್ಣ ವಜ್ರಗಳಿಂದ ಅಲಂಕರಿಸಲ್ಪಟ್ಟ ಗದೆಗಳನ್ನು ಮೇಲಕ್ಕೆತ್ತಿ ಅರ್ಜುನನು ಎಲ್ಲಿದ್ದಾನೆಂದು ಕೇಳುತ್ತಿದ್ದರು.

ಅನ್ಯೇ ಬಲಮದೋನ್ಮತ್ತಾಃ ಪರಿಘೈರ್ಬಾಹುಶಾಲಿನಃ ।
ಚಕ್ರುಃ ಸಂಬಾಧಮಾಕಾಶಮ್ ಉಚ್ಛ್ರಿತೇಂದ್ರಧ್ವಜೋಪಮೈಃ ॥ ೩೦ ॥

ಇನ್ನು ಬಲದಿಂದಲೂ, ಮದದಿಂದಲೂ ಉನ್ಮತ್ತರಾದ, ಒನಕೆಯಂತಹ ಬಾಹುಗಳುಳ್ಳ ಕೆಲವು ವೀರರು ಗದೆಗಳನ್ನು ಮೇಲೆತ್ತಿ ಎತ್ತಿದ ಇಂದ್ರಧ್ವಜದಂತಿದ್ದ ತಮ್ಮ ಗದೆಗಳಿಂದ ಆಕಾಶವನ್ನು ನಿಬಿಡವನ್ನಾಗಿ ಮಾಡಿದರು.

ನಾನಾಪ್ರಹರಣೈಶ್ಚಾನ್ಯೇ ವಿಚಿತ್ರಸ್ರಗಲಂಕೃತಾಃ ।
ಸಂಗ್ರಾಮಮನಸಃ ಶೂರಾಃ ತತ್ರ ತತ್ರ ವ್ಯವಸ್ಥಿತಾಃ ॥ ೩೧ ॥

ಇನ್ನು ಕೆಲವು ಶೂರರು ಯುದ್ಧದಲ್ಲೇ ಮನಸ್ಸುಳ್ಳವರಾಗಿ, ವಿಚಿತ್ರವಾದ ಮಾಲೆಗಳಿಂದ ಅಲಂಕೃತರಾಗಿ, ಅನೇಕ ಆಯುಧಗಳನ್ನು ಹಿಡಿದು ಅಲ್ಲಲ್ಲಿ ನಿಂತಿರುವುದು ಕಂಡುಬಂದಿತು.

ಕ್ವಾರ್ಜುನಃ ಕ್ವ ಚ ಗೋವಿಂದಃ ಕ್ವ ಚ ಮಾನೀ ವೃಕೋದರಃ ।
ಕ್ವ ಚ ತೇ ಸುಹೃದಸ್ತೇಷಾಮ್ ಆಹ್ವಯಾನಾಸ್ತದಾ ರಣೇ ॥ ೩೨ ॥

ಅರ್ಜುನನು ಎಲ್ಲಿ? ಗೋವಿಂದನು ಎಲ್ಲಿ? ಅಹಂಕಾರಿಯಾದ ಭೀಮನೆಲ್ಲಿ? ಅವರ ಸುಹೃದರು ಎಲ್ಲಿ? ಎಂದು ಅವರು ಯುದ್ಧಕ್ಕೆ ಆಹ್ವಾನಿಸುತ್ತಿದ್ದರು.

ತತಃ ಶಂಖಿಮುಪಾಧ್ಮಾಯ ತ್ವರಯನ್ ವಾಜಿನಃ ಸ್ವಯಮ್ ।
ಇತಸ್ತತಸ್ತಾನ್ ರಚಯನ್ ದ್ರೋಣಶ್ಚರತಿ ವೇಗಿತಃ ॥ ೩೩ ॥

ಆಗ ತಮ್ಮ ಶಂಖವನ್ನು ಊದಿ, ಅಶ್ವಗಳನ್ನು ತಾವಾಗಿಯೇ ತ್ವರೆಗೊಳಿಸುತ್ತಾ, ಅವುಗಳ ರಚನೆಯನ್ನು ಮಾಡುತ್ತಾ, ಇಲ್ಲಿಂದಲ್ಲಿಗೆ ದ್ರೋಣರು ವೇಗವಾಗಿ ಸಂಚರಿಸಿದರು.

ತೇಷ್ವನೀಕೇಷು ಸರ್ವೇಷು ಸ್ಥಿತೇಷ್ವಾಹವಶೋಭಿಷು ।
ಭಾರದ್ವಾಜೋ ಮಹಾರಾಜ ಜಯದ್ರಥಮಥಾಬ್ರವೀತ್ ॥ ೩೪ ॥

ಯುದ್ಧದಲ್ಲಿ ಶೋಭಿಸುವ ಆ ಎಲ್ಲ ಸೈನ್ಯಗಳು ಹಾಗಿರಲು ಎಲೈ ಮಹಾರಾಜನೇ, ದ್ರೋಣರು ಜಯದ್ರಥನನ್ನು ಕುರಿತು ಮಾತನಾಡಿದರು.

ತ್ವಂ ಚೈವ ಸೌಮದತ್ತಿಶ್ಚ ಕರ್ಣಶ್ಚೈವ ಮಹಾರಥಃ ।
ಅಶ್ವತ್ಥಾಮಾ ಚ ಶಲ್ಯಶ್ಚ ವೃಷಸೇನಃ ಕೃಪಸ್ತಥಾ ॥ ೩೫ ॥

ಶತಂ ಚಾಶ್ವಸಹಸ್ರಾಣಾಂ ರಥಾನಾಮಯುತಾನಿ ಷಟ್ ।
ದ್ವಿರದಾನಾಂ ಪ್ರಭಿನ್ನಾನಾಂ ಸಹಸ್ರಾಣಿ ಚತುರ್ದಶ ॥ ೩೬ ॥

ಪದಾತೀನಾಂ ಸಹಸ್ರಾಣಾಂ ಸಹಸ್ರಾಣ್ಯಪಿ ಪಂಚ ಚ ।
ತ್ರಿಷು ಗವ್ಯೂತಿಮಾತ್ರೇಷು ಮಮ ಸೈನ್ಯಸ್ಯ ಪೃಷ್ಠತಃ ॥ ೩೭ ॥

ತತ್ರಸ್ಥಂ ತ್ವಾಂ ನ ಸಂರೋದ್ಧುಮಲಂ ಲೋಕಾಃ ಸದೇವತಾಃ ।
ಕಿಂ ಪುನಃ ಪಾಂಡವಾಃ ಸರ್ವೇ ಸಮಾಶ್ವಸಿಹಿ ಸೈಂಧವ ॥ ೩೮ ॥

ನೀನು, ಸೋಮದತ್ತ, ಮಹಾರಥನಾದ ಕರ್ಣ, ಅಶ್ವತ್ಥಾಮರು, ಶಲ್ಯ, ವೃಷಸೇನ ಮತ್ತು ಕೃಪರು ಒಂದು ಲಕ್ಷ ಅಶ್ವಗಳಿಂದ, ಅರವತ್ತು ಸಾವಿರ ರಥಗಳಿಂದ, ಹದಿನಾಲ್ಕು ಸಾವಿರ ಮದಗಜಗಳಿಂದ, ಐದು ಲಕ್ಷ ಪದಾತಿಗಳಿಂದ ಕೂಡಿ ನನ್ನ ಸೈನ್ಯದ ಹಿಂಭಾಗದಲ್ಲಿ ಮೂರು ಗಾವುದ ದೂರದಲ್ಲಿ ನಿಲ್ಲುವವನಾಗು. ಆಲ್ಲಿನಿಂತ ನಿನ್ನನ್ನು ದೇವತೆಗಳಿಂದ ಸಹಿತವಾದ ಲೋಕಗಳೂ ಸಹ ತಡೆಯಲು ಸಾಧ್ಯವಿಲ್ಲ. ಇನ್ನು ಪಾಂಡವರೆಲ್ಲರೂ ಏನು ಮಾಡಬಹುದು? ಆದ್ದರಿಂದ ಸೈಂಧವನೇ, ಸಮಾಧಾನದಿಂದಿರು.

ಸಂಜಯಃ

ಏವಮುಕ್ತಃ ಸಮಾಶ್ವಸ್ತಃ ಸಿಂಧುರಾಜೋ ಜಯದ್ರಥಃ ।
ಸಂಪ್ರಾಯಾತ್ ಸಹ ಗಾಂಧಾರೈರ್ವ್ಯತಸ್ಥೌ ಚ ಮಹಾರಥೈಃ ।
ವರ್ಮಿಭಿಃ ಸಾದಿಭಿರ್ಯತ್ತೈಃ ಪ್ರಾಸಪಾಣಿಭಿರಾಸ್ಥಿತೈಃ ॥ ೩೯ ॥

ಸಂಜಯ– ಹೀಗೆ ಹೇಳಲ್ಪಟ್ಟ ಸಿಂಧುರಾಜನಾದ ಜಯದ್ರಥನು ಸಮಾಧಾನವನ್ನು ಹೊಂದಿ, ಗಾಂಧಾರ ಸೈನ್ಯದಿಂದಲೂ ಮತ್ತು ಕವಚವನ್ನು ಧರಿಸಿ, ಕೈಯಲ್ಲಿ ಪ್ರಾಸಗಳನ್ನು ಹಿಡಿದು ಅಶ್ವಗಳನ್ನು ಏರಿದ ಅಶ್ವಾರೋಹಿಗಳಿಂದಲೂ ಮತ್ತು ಮಹಾರಥರಿಂದಲೂ ಸಹಿತನಾಗಿ ಅಲ್ಲಿಗೆ ಹೋದನು.

ಚಾಮರಾಪೀಡನಾಃ ಸರ್ವೇ ಜಾಂಬೂನದವಿಭೂಷಿತಾಃ ।
ಜಯದ್ರಥಸ್ಯ ರಾಜೇಂದ್ರ ಯೋಧಾಃ ಸಾಧುಪ್ರಹಾರಿಣಃ ॥ ೪೦ ॥

ತೇ ಚೈವ ಸಪ್ತಸಾಹಸ್ರಾಃ ದ್ವಿಸಾಹಸ್ರಾಶ್ಚ ಸೈಂಧವಾಃ ॥ ೪೧ ॥

ಎಲೈ ರಾಜೇಂದ್ರನೇ, ಜಯದ್ರಥನ ಯೋಧರೆಲ್ಲರೂ ಚಾಮರಗಳನ್ನು (ಕುಚ್ಚುಗಳನ್ನು) ಧರಿಸಿದವರಾಗಿ, ಸುವರ್ಣಾಲಂಕೃತರಾಗಿ, ಚೆನ್ನಾಗಿ ಯುದ್ಧ ಮಾಡುವವರಾಗಿದ್ದರು. ಅಂತಹ ಅವರು ಏಳು ಸಾವಿರ ಯೋಧರು ಮತ್ತು ಸಿಂಧು ದೇಶದ ಯೋಧರು ಎರಡು ಸಾವಿರ ಇದ್ದರು.

ಮತ್ತಾನಾಮಧಿರೂಢಾನಾಂ ಹಸ್ತ್ಯಾರೋಹವಿಶಾರದೈಃ ।
ನಾಗಾನಾಂ ಭೀಮರೂಪಾಣಾಂ ವರ್ಮಿಣಾಂ ರೌದ್ರಕರ್ಮಿಣಾಮ್ ॥

ಅಧ್ಯರ್ಧೇನ ಸಹಸ್ರೇಣ ಪುತ್ರೋ ದುರ್ಮರ್ಷಣಸ್ತವ ।
ಅಗ್ರತಃ ಸರ್ವಸೈನ್ಯಾನಾಂ ಯೋತ್ಸ್ಯಮಾನೋ ವ್ಯವಸ್ಥಿತಃ ॥ ೪೩ ॥

ಭಯಂಕರ ಆಕಾರವುಳ್ಳ ಗಜಗಳನ್ನು ಏರಿ, ಕವಚವನ್ನು ಧರಿಸಿ, ಭಯಂಕರ ಕರ್ಮವನ್ನು ಮಾಡುವ ಯುದ್ಧವಿಶಾರದರಾದ ಒಂದೂವರೆ ಸಾವಿರ ಯೋಧರ ಜೊತೆಯಲ್ಲಿ ನಿನ್ನ ಪುತ್ರನಾದ ದುರ್ಮರ್ಷಣನು ಎಲ್ಲ ಸೈನ್ಯದ ಮುಂಭಾಗದಲ್ಲಿ ಯುದ್ಧವನ್ನು ಮಾಡುವವನಾಗಿ ನಿಂತನು.

ತತೋ ದುಃಶಾಸನಶ್ಚೈವ ವಿಕರ್ಣಶ್ಚ ತವಾತ್ಮಜೌ ।
ಸಿಂಧುರಾಜಾರ್ಥಸಿದ್ಧ್ಯರ್ಥಮಗ್ರಾನೀಕೇ ವ್ಯವಸ್ಥಿತೌ ॥ ೪೪ ॥

ಆನಂತರ ನಿನ್ನ ಪುತ್ರರಾದ ದುಶ್ಶಾಸನ ಮತ್ತು ವಿಕರ್ಣರು ಸೈಂಧವನ ಹಿತವನ್ನು ರಕ್ಷಿಸುವುದಕ್ಕಾಗಿ ಸೈನ್ಯದ ಮುಂಭಾಗದಲ್ಲಿ ನಿಂತರು.

ದೀಕ್ಷೋ ದ್ದಾದಶಗವ್ಯೂತಿಃ ಪಶ್ಚಾರ್ಧೇ ಪಂಚವಿಸ್ಮತಃ ।
ವ್ಯೂಹಃ ಸ ಚಕ್ರಶಕಟೋ ಭಾರದ್ವಾಜೇನ ನಿರ್ಮಿತಃ ॥ ೪೫ ॥

ಮುಂದೆ ಹನ್ನೆರಡು ಯೋಜನ ಉದ್ದವೂ, ಹಿಂದೆ ಐದು ಯೋಜನ ಅಗಲವೂ ಆದ ಚಕ್ರವ್ಯೂಹ ಗರ್ಭಿತವಾದ ಶಕಟ ವ್ಯೂಹವು ದ್ರೋಣರಿಂದ ನಿರ್ಮಿಸಲ್ಪಟ್ಟಿತು.

ನಾನಾನೃಪತಿಭಿರ್ವೀರೈಃ ತತ್ರ ತತ್ರ ವ್ಯವಸ್ಥಿತೈಃ ।
ರಥಾಶ್ವಗಜಪತ್ಯಾಖ್ಯೈಃ ದ್ರೋಣೇನ ವಿಹಿತಃ ಸ್ವಯಮ್ ॥ ೪೬ ॥

ಅಲ್ಲಲ್ಲಿ ವ್ಯವಸ್ಥಿತರಾದ, ವೀರರಾದ ಅನೇಕ ರಾಜರು, ರಥಾಶ್ವ-ಗಜ-ಪದಾತಿಗಳ ಸಮೂಹಗಳು ಇವುಗಳಿಂದ ದ್ರೋಣರೇ ಸ್ವತಃ ವ್ಯೂಹವನ್ನು ನಿರ್ಮಿಸಿದರು.

ಪಶ್ಚಾರ್ಧೇ ತಸ್ಯ ಪದ್ಮಸ್ತು ಗರ್ಭವ್ಯೂಹಃ ಸುದುರ್ಭಿದಃ ।
ಸೂಚೀಪದ್ಮಸ್ಯ ಮಧ್ಯಸ್ಥೋ ದೃಢವ್ಯೂಹೋ ಜಯದ್ರಥಃ ॥ ೪೭ ॥

ಆ ಶಕಟವ್ಯೂಹದ ಹಿಂದಿನ ಅರ್ಧಭಾಗದಲ್ಲಿ ಭೇದಿಸಲು ಅಸಾಧ್ಯವಾದ ಪದ್ಮಾಕಾರದ ಗರ್ಭವ್ಯೂಹವಿದ್ದಿತು (ಚಕ್ರವ್ಯೂಹವನ್ನೇ ಪದ್ಮವ್ಯೂಹವೆಂದು ಕರೆಯುತ್ತಾರೆ). ಆ ಪದ್ಮದ ಕರ್ಣಿಕೆಯ ಸುತ್ತಿನ ಕೇಸರಗಳ ಸ್ಥಾನದಲ್ಲಿ ಇರುವ ಸೂಜಿಗಳ ಮಧ್ಯದಲ್ಲಿ ದೃಢವಾದ ವ್ಯೂಹವನ್ನು ಹೊಂದಿದ ಜಯದ್ರಥನಿದ್ದನು.

ಏವಮೇತಂ ಮಹಾವ್ಯೂಹಂ ವ್ಯೂಹ್ಯ ದ್ರೋಣೋ ವ್ಯವಸ್ಥಿತಃ ।
ಸೂಚೀಮುಖೇ ಮಹೇಷ್ವಾಸಃ ಕೃತವರ್ಮಾ ವ್ಯವಸ್ಥಿತಃ ॥ ೪೮ ॥

ಹೀಗೆ ದ್ರೋಣರು ಆ ಮಹಾವ್ಯೂಹವನ್ನು ರಚಿಸಿ, ಸೂಚಿಯ ಮುಖದಲ್ಲಿ ಮಹಾಧನುರ್ಧಾರಿಯಾದ ಕೃತವರ್ಮನನ್ನು ನಿಲ್ಲಿಸಿದರು.

ಅನಂತರಂ ಚ ಕಾಂಬೋಜೋ ಜಲಸಂಧಶ್ಚ ವೀರ್ಯವಾನ್ ।
ದುರ್ಯೋಧನಃ ಸಹಾಮಾತ್ಯಸ್ತದನಂತರಮೇವ ಚ ॥ ೪೯ ॥

ಅವನ ಹಿಂದೆ ಕಾಂಬೋಜ ರಾಜ, ಪರಾಕ್ರಮಶಾಲಿಯಾದ ಜಲಸಂಧರು ಇದ್ದರು. ಅವರ ಹಿಂದೆ ಅವನ ಅಮಾತ್ಯರಿಂದ ಸಹಿತನಾದ ದುರ್ಯೋಧನನಿದ್ದನು.

ತತಃ ಶತಸಹಸ್ರಾಣಿ ಯೋಧಾನಾಮನಿವರ್ತಿನಾಮ್ ।
ವ್ಯವಸ್ಥಿತಾನಿ ಸರ್ವಾಣಿ ಶಕಟೇ ಸೂಚಿರಕ್ಷಣಾಮ್ ॥ ೫೦ ॥

ಆನಂತರ ಪದ್ಮವ್ಯೂಹದ ಮುಂಭಾಗದಲ್ಲಿ ಶಕಟವ್ಯೂಹದಲ್ಲಿ ಪದ್ಮವ್ಯೂಹದ ಸೂಚಿಗಳನ್ನು ರಕ್ಷಿಸುವ, ಯುದ್ಧದಿಂದ ಹಿಮ್ಮೆಟ್ಟದಿರುವ ಒಂದು ಲಕ್ಷ ಯೋಧರು ನಿಂತರು.

ತೇಷಾಂ ಪೃಷ್ಠಗತೋ ರಾಜನ್ ಬಲೇನ ಮಹತಾ ವೃತಃ ।
ಜಯದ್ರಥಸ್ತತೋ ರಾಜಾ ಸೂಚೀಪಾರ್ಶ್ವೇ ವ್ಯವಸ್ಥಿತಃ ॥ ೫೧ ॥

ಎಲೈ ರಾಜನೇ, ಅವರ ಹಿಂದೆ ತನ್ನ ದೊಡ್ಡ ಸೈನ್ಯದಿಂದ ಕೂಡಿದವನಾಗಿ ಜಯದ್ರಥನು ಆ ಸೂಚಿಗಳ ಪಾರ್ಶ್ವದಲ್ಲಿ ನಿಂತನು.

ಶಕಟಸ್ಯ ತು ರಾಜೇಂದ್ರ ಭಾರದ್ವಾಜೋ ಮುಖೇ ಸ್ಥಿತಃ ।
ನಾತ್ರ ತಸ್ಯಾಭವದ್ ಭೇದೋ ಜುಗೋಪೈನಂ ತತಃ ಸ್ವಯಮ್ ॥ ೫೨ ॥

ಎಲೈ ರಾಜೇಂದ್ರನೇ, ದ್ರೋಣರು ಶಕಟದ ಮುಂಭಾಗದಲ್ಲಿ ನಿಂತರು. ಅಲ್ಲಿ ಅವರನ್ನು ಯಾರೂ ಭೇದಿಸುವವರಿರಲಿಲ್ಲ. ಅವರು ತಾವೇ ಆ ಶಕಟವನ್ನು ರಕ್ಷಿಸಿದರು.

ಶ್ವೇತವರ್ಮಾಂಬರೋಷ್ಣೀಷೋ ವ್ಯೂಢೋರಸ್ಕೋ ಮಹಾಭುಜಃ ।
ಧನುರ್ವಿಷ್ಫಾರ್ಜಯನ್ ದ್ರೋಣಃ ತಸ್ಥೌ ಕ್ರುದ್ಧ ಇವಾಂತಕಃ ।
ತಸ್ಯ ಸೈನ್ಯಸ್ಯ ಸರ್ವಸ್ಯ ನೇತಾ ಗೋಪ್ತಾ ಚ ವೀರ್ಯವಾನ್ ॥ ೫೩ ॥

ಶ್ವೇತವರ್ಣದ ಕವಚ, ವಸ್ತ್ರಮತ್ತು ಉಷ್ಣೀಷಗಳನ್ನು ಧರಿಸಿದ, ಮಹಾಭುಜರೂ, ವಿಶಾಲವಾದ ವಕ್ಷಸ್ಥಳವುಳ್ಳವರೂ ಆದ ದ್ರೋಣರು ತಮ್ಮ ಧನುಸ್ಸನ್ನು ಮೀಟುತ್ತಾ, ಹಂತಕನಂತೆ ಕ್ರುದ್ಧರಾಗಿ ಆ ಸರ್ವಸೈನ್ಯದ ನಾಯಕರೂ ಮತ್ತು ರಕ್ಷಕರೂ ಆಗಿ ನಿಂತರು.

ಪತಾಕಿನಂ ಶೋಣಹಯಂ ವೇದೀಕೃಷ್ಣಾಜಿನಧ್ವಜಮ್ ।
ದ್ರೋಣಸ್ಯ ರಥಮಾಲೋಕ್ಯ ಪ್ರಹೃಷ್ಟಾಃ ಕುರವೋऽಭವನ್ ॥ ೫೪ ॥

ಪತಾಕೆಗಳಿಂದಲೂ, ಕೆಂಪು ವರ್ಣದ ಅಶ್ವಗಳಿಂದಲೂ, ಮತ್ತು ಯಜ್ಞವೇದಿ ಮತ್ತು ಕೃಷ್ಣಾಜಿನದ ಧ್ವಜದಿಂದ ಕೂಡಿದ ದ್ರೋಣರ ರಥವನ್ನು ನೋಡಿ ಕುರುಗಳು ಸಂತೋಷಗೊಂಡರು.

ಸಶೈಲಸಾಗರವನಾಂ ನಾನಾಜನಪದಾಕುಲಾಮ್ ।
ಗ್ರಸೇದ್ ವ್ಯೂಹಃ ಕ್ಷಿತಿಂ ಸರ್ವಾಮಿತಿ ಭೂತಾನಿ ಮೇನಿರೇ ॥ ೫೫ ॥

ಆ ವ್ಯೂಹವನ್ನು ನೋಡಿದ ಜನರು ಮತ್ತು ಭೂತಗಳು ಈ ವ್ಯೂಹವು ಪರ್ವತ ಸಾಗರ-ವನಗಳಿಂದಲೂ, ನಾನಾ ಜನಪದಗಳಿಂದಲೂ ತುಂಬಿದ ಈ ಭೂಮಿಯನ್ನೇ ನುಂಗಬಹುದು ಎಂದು ತಿಳಿದರು.

ಬಹುರಥಮನುಜಾಶ್ವಪತ್ತಿನಾಗಂ
ಪ್ರತಿಭಯನಿಸ್ವನಮದ್ಭುತಾಭ್ರರೂಪಮ್ ।
ಅಹಿತಹೃದಯಭೇದಿನಂ ಮಹಾಂತಂ
ಶಕಟಮವೇಕ್ಷ್ಯ ಕೃತಂ ನನಂದ ರಾಜಾ ॥ ೫೬ ॥

ಅನೇಕ ರಥಗಳಿಂದ, ಯೋಧರಿಂದ, ಆಶ್ವಗಳಿಂದ, ಪದಾತಿಗಳಿಂದ ಮತ್ತು ಗಜಗಳಿಂದ ಕೂಡಿದ, ಭಯಂಕರವಾದ ಘೋಷವನ್ನು ಮಾಡುತ್ತಿದ್ದ ಅದ್ಭುತವಾದ ಮೋಡಗಳಂತೆ ತೋರುತ್ತಿದ್ದ, ಶತ್ರುಗಳ ಹೃದಯ ಭೇದಕವಾದ ಮಹಾಶಕಟವ್ಯೂಹವನ್ನು ನೋಡಿ ರಾಜನಾದ ದುರ್ಯೋಧನನು ಸಂತೋಷಪಟ್ಟನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೊಂಬತ್ತನೆಯ ಅಧ್ಯಾಯ

ಅರ್ಜುನನ ರಣರಂಗಪ್ರವೇಶ ಮತ್ತು ಅವನ ಯುದ್ಧದ ವರ್ಣನೆ.

ಸಂಜಯಃ

ವ್ಯೂಢೇಷು ತವ ಸೈನ್ಯೇಷು ಸಮುತೃಷ್ಟೇಷು ಮಾರಿಷ ।
ನಾದ್ಯಮಾನಾಸು ಭೇರೀಷು ಮೃದಂಗೇಷ್ವಾನಕೇಷು ಚ ॥ ೧ ॥

ಅನೀಕಾನಾಂ ಚ ಸಂಹ್ರಾದೇ ವಾದಿತ್ರಾಣಾಂ ಚ ನಿಸ್ವನೇ ।
ಪ್ರಧ್ಮಾಪಿತೇಷು ಶಂಖೇಷು ಸನ್ನಾದೇ ರೋಮಹರ್ಷಣೇ ॥ ೨ ॥

ಪ್ರಗೃಹೀತೇಷು ಶಸ್ತ್ರೇಷು ಭಾರತೇಷು ಯುಯುತ್ಸುಷು ।
ರೌದ್ರೇ ಮುಹೂರ್ತೇ ಸಂಪ್ರಾಪ್ತೇ ಸವ್ಯಸಾಚೀ ವ್ಯದೃಶ್ಯತ ॥ ೩ ॥

ಸಂಜಯ– ಎಲೈ ಪೂಜ್ಯನೇ, ನಿನ್ನ ಸೈನ್ಯಗಳು ವ್ಯೂಹಗೊಂಡು ಕಿರುಚುತ್ತಿರಲು ಭೇರಿಗಳು, ಮೃದಂಗಗಳು ಮತ್ತು ಆನಕಗಳು ಬಾರಿಸಲ್ಪಡುತ್ತಿರಲು, ಸೈನ್ಯಗಳ ಘೋಷವು ಮತ್ತು ವಾದ್ಯಗಳ ಧ್ವನಿಯು ತುಂಬಿರಲು, ಶಂಖಗಳು ಊದಲ್ಪಡುತ್ತಿರಲು, ರೋಮಾಂಚಕರವಾದ ಯುದ್ಧವನ್ನು ಬಯಸಿ ಶಸ್ತ್ರಗಳನ್ನು ಹಿಡಿದಿರಲು ಆ ರೌದ್ರಮುಹೂರ್ತದಲ್ಲಿ ಅರ್ಜುನನು ಕಾಣಿಸಿಕೊಂಡನು.

ಬಲಾನಾಂ ವಾಯಸಾನಾಂ ಚ ಪುರಸ್ತಾತ್ ಸವ್ಯಸಾಚಿನಃ ।
ಪಿಶಿತಾಸೃಗ್ಭುಜಾಂ ಸಂಘಾಃ ಪ್ರಲೀಯಂತೇ ಸಹಸ್ರಶಃ ॥ ೪ ॥

ಅರ್ಜುನನ ಮುಂಭಾಗದಲ್ಲಿ ಮಾಂಸ-ರಕ್ತಭೋಜಿಗಳಾದ ಬಲ-ವಾಯಸ ಮೊದಲಾದ ಪಕ್ಷಿಗಳು ಸಹಸ್ರ ಸಂಖ್ಯೆಯಲ್ಲಿ (ನಮ್ಮ ಸೈನ್ಯದಲ್ಲಿ ಬಿದ್ದು) ಅದೃಶ್ಯವಾದವು.

ಮೃಗಾಶ್ಚ ಘೋರಸನ್ನಾದಾಃ ಶಿವಾಶ್ಚಾಶಿವದರ್ಶನಾಃ ।
ದಕ್ಷಿಣೇನ ಪ್ರಯಾತಾನಾಮಸ್ಮಾಕಂ ನೇದುರದ್ಭುತಂ ॥ ೫ ॥

ದಕ್ಷಿಣಭಾಗದಿಂದ ಹೋಗುವ ನಮಗೆ ಘೋರನಾದವನ್ನು ಮಾಡುವ ಮೃಗಗಳೂ, ಅಮಂಗಳಕರವಾದ ನರಿಗಳೂ ಮಾರ್ಗದಲ್ಲಿ ಆರ್ತನಾದವನ್ನು ಮಾಡಿದವು.

ಲೋಕಕ್ಷಯೇ ಮಹಾರಾಜ ಯಾದೃಶಾಸ್ತಾದೃಶಾ ಹಿ ತೇ ।
ಅಶಿವಾ ಧಾರ್ತರಾಷ್ಟ್ರಾಣಾಂ ಶಿವಾಃ ಪಾರ್ಥಸ್ಯ ಸಂಯುಗೇ ॥ ೬ ॥

ಎಲೈ ಮಹಾರಾಜನೇ, ಲೋಕಕ್ಷಯದ ಕಾಲದಲ್ಲಿ ಹೇಗೋ ಹಾಗೆ ದುರ್ಯೋಧನಾದಿಗಳಿಗೆ ಅಮಂಗಳವಾದ ಶಕುನಗಳು, ಅರ್ಜುನನಿಗೆ ಶುಭ ಶಕುನಗಳು ಉಂಟಾದವು.

ಸನಿರ್ಘಾತಾ ಜ್ವಲಂತಶ್ಚ ಪೇತುರುಲ್ಕಾಃ ಸಹಸ್ರಶಃ ।
ಚಚಾಲ ಚ ಮಹೀ ಸರ್ವಾ ಭಯೇ ಘೋರೇ ಸಮುತ್ಥಿತೇ ॥ ೭ ॥

ಉರಿಯುವ ಉಲ್ಕೆಗಳು ಸಿಡಿಲಿನ ಜೊತೆಯಲ್ಲಿ ಸಹಸ್ರಸಂಖ್ಯೆಯಲ್ಲಿ ಬಿದ್ದವು. ಘೋರವಾದ ಭಯವು ಉಪಸ್ಥಿತವಾಗಿರಲು ಭೂಮಿಯೆಲ್ಲವೂ ನಡುಗಿತು.

ವಿಷ್ವಗ್ವಾತಾಃ ಸನೀಹಾರಾ ನೀಚೈಃ ಶರ್ಕರವರ್ಷಿಣಃ ।
ವವುರಾಯಾತಿ ಕೌಂತೇಯೇ ಸಂಗ್ರಾಮೇ ಸಮುಪಸ್ಥಿತೇ ॥ ೮ ॥

ಅರ್ಜುನನು ಸಂಗ್ರಾಮವನ್ನು ಪ್ರವೇಶಿಸಿದಾಗ ಸುಂಟರಗಾಳಿಗಳು ಮಂಜಿನಿಂದ ಕೂಡಿ ಮರಳುಗಳನ್ನು ಎತ್ತಿಕೊಂಡು ನೆಲವನ್ನು ಹಿಡಿದು ಬೀಸಿದವು.

ನಾಕುಲಸ್ತು ಶತಾನೀಕೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಪಾಂಡವಾನಾಮನೀಕಾನಿ ಪ್ರಾಜ್ಞೌ ತೌ ವ್ಯೂಹತುಸ್ತದಾ ॥ ೯ ॥

ಪ್ರಾಜ್ಞರಾದ ನಕುಲ ಪುತ್ರನಾದ ಶತಾನೀಕನು ಮತ್ತು ಪಾರ್ಷತನಾದ ಧೃಷ್ಟದ್ಯುಮ್ನನು ಪಾಂಡವರ ಸೈನ್ಯವನ್ನು ವ್ಯೂಹಗೊಳಿಸಿದರು.

ತತೋ ರಥಸಹಸ್ರೇಣ ದ್ವಿರದಾನಾಂ ಶತೇನ ಚ ।
ತ್ರಿಭಿರಶ್ವಸಹಸ್ರೈಶ್ಚ ಪದಾತೀನಾಂ ಶತೈಃ ಶತೈಃ ॥ ೧೦ ॥

ಅರ್ಧ್ಯರ್ಧಮಾತ್ರೇ ಧನುಷಾಂ ಸಹಸ್ರೇ ತನಯಸ್ತವ ।
ಅಗ್ರತಃ ಸರ್ವಸೈನ್ಯಾನಾಂ ಸ್ಥಿತ್ವಾ ದುರ್ಮರ್ಷಣೋಽಬ್ರವೀತ್ ॥ ೧೧ ॥

ಆಗ ಒಂದು ಸಹಸ್ರ ರಥಗಳು, ನೂರು ಆನೆಗಳು, ಮೂರು ಸಾವಿರ ಅಶ್ವಗಳು, ಹತ್ತು ಸಾವಿರ ಪದಾತಿಗಳು ಇವುಗಳನ್ನು ನಿನ್ನ ಪುತ್ರನಾದ ದುರ್ಮರ್ಷಣನು ಒಂದೂವರೆ ಸಾವಿರ ಧನುಸ್ಸಿನ ದೂರದಲ್ಲಿ ಅಲ್ಲಲ್ಲಿ ನಿಲ್ಲಿಸಿ, ಎಲ್ಲ ಸೈನ್ಯಗಳ ಮುಂದೆ ತಾನು ನಿಂತು ಮಾತನಾಡಿದನು.

ಅದ್ಯ ಗಾಂಡೀವಧನ್ವಾನಂ ತಪಂತಂ ಯುದ್ಧದುರ್ಮದಮ್ ।
ಅಹಮಾವಾರಯಿಷ್ಯಾಮಿ ವೇಲೇವ ಮಕರಾಲಯಮ್ ॥ ೧೨ ॥

ಈ ದಿನ ಯುದ್ಧದುರ್ಮದನೂ, ನಮ್ಮ ಸೈನ್ಯವನ್ನು ದಹಿಸುವವನೂ ಆದ, ಗಾಂಡೀವ ಧನುರ್ಧಾರಿಯಾದ ಅರ್ಜುನನನ್ನು ತೀರವು ಸಮುದ್ರವನ್ನು ತಡೆದಂತೆ ನಾನು ತಡೆಯುವೆನು.

ಅದ್ಯ ಪಶ್ಯಂತು ಸಂಗ್ರಾಮೇ ಧನಂಜಯಮಮರ್ಷಣಮ್ ।
ವಿಪಕ್ತಂ ಮಯಿ ದುರ್ಧರ್ಷಂ ಭಿನ್ನಂ ಕುಂಭಮಿವಾಶ್ಮನಿ ॥ ೧೩ ॥

ತಿಷ್ಠಧ್ವಂ ರಥಿನೋ ಯೂಯಂ ಸಂಗ್ರಾಮಮಭಿಕಾಂಕ್ಷಿಣಃ ।
ಯುದ್ಧ್ಯಾಮಿ ಸಂಹತಾನೇತಾನ್ ಯಶೋ ಮಾನಂ ಚ ವರ್ಧಯನ್ ॥

ರೋಷಾವಿಷ್ಟನಾದ ಧನಂಜಯನು ಈ ದಿನ ಯುದ್ಧದಲ್ಲಿ ನನ್ನನ್ನು ಸೇರಿ ಮಡಕೆಯನ್ನು ಕಲ್ಲಿನ ಮೇಲೆ ಒಡೆದಂತೆ ಪುಡಿಯಾಗುವುದನ್ನು ರಥಿಕರೂ, ಯುದ್ಧಾಕಾಂಕ್ಷಿಗಳಾದ ನೀವೆಲ್ಲರೂ ನಿಂತು ನೋಡಿ. ನನ್ನ ಕೀರ್ತಿಯನ್ನು ಮತ್ತು ಗೌರವವನ್ನು ಹೆಚ್ಚಿಸಿಕೊಳ್ಳುತ್ತಾ ನಾನು ಅವರೆಲ್ಲರ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ಸಂಜಯಃ

ತತೋಽರ್ಜುನೋ ಮಹಾರಾಜ ಮಹಾತ್ಮಾ ಮಹತಾಂ ಪತಿಃ ।
ಮಹೇಷ್ವಾಸೈಃ ವೃತೋ ರಾಜನ್ ಮಹೇಷ್ವಾಸೋ ವ್ಯವಸ್ಥಿತಃ ॥ ೧೫ ॥

ಕಕ್ಷಾಗ್ನಿರಿವ ದುಃಸ್ಪರ್ಶಃ ಸವಜ್ರ ಇವ ವಾಸವಃ ।
ದಂಡಪಾಣಿರಿವಾಸಹ್ಯೋ ಮೃತ್ಯುಃ ಕಾಲಪ್ರಚೋದಿತಃ ॥ ೧೬ ॥

ಸಂಜಯ– ಎಲೈ ಮಹಾರಾಜನೇ, ಅನಂತರ ಮಹಾತ್ಮರಿಗೊಡೆಯನಾದ, ಸ್ವತಃ ಮಹಾತ್ಮನಾದ, ಮಹಾಧನುರ್ಧಾರಿಗಳಿಂದ ಪರಿವೃತನಾದ, ಸ್ವತಃ ಮಹಾಧನುರ್ಧಾರಿಯಾದ, ಕಕ್ಷಾಗ್ನಿಯಂತೆ ಸ್ಪರ್ಶಿಸಲು ಅಸಾಧ್ಯನಾದ, ವಜ್ರಾಯುಧವನ್ನು ಹಿಡಿದ ಇಂದ್ರನಂತಿದ್ದ, ಕಾಲಪ್ರಚೋದಿತನಾದ ಮೃತ್ಯುವಿನಂತೆ ಸಹಿಸಲು ಅಸಾಧ್ಯನಾದ ಅರ್ಜುನನು ನಿಂತನು.

ಶೂಲಪಾಣಿರಿವಾಕ್ಷೋಭ್ಯೋ ವರುಣಃ ಪಾಶವಾನಿವ ।
ಯುಗಾಂತಾಗ್ನಿರಿವಾರ್ಚಿಷ್ಮಾನ್ ದಿಧಕ್ಷುಃ ಸ್ಥಾಣುಜಂಗಮಮ್ ॥ ೧೭ ॥

ಕ್ರೋಧಾಮರ್ಷಬಲೋಪೇತೋ ನಿವಾತಕವಚಾಂತಕಃ ।
ಜಯೋ ಜೇತಾ ಸ್ಥಿತಃ ಸತ್ಯೇ ಪಾರಯಿಷ್ಯನ್ ಮಹಾವ್ರತಮ್ ॥೧೮॥

ಆಲುಗಾಡಿಸಲು ಸಾಧ್ಯವಿಲ್ಲದ ಶೂಲಪಾಣಿಯಂತೆ, ಪಾಶವನ್ನು ಹಿಡಿದ ವರುಣನಂತೆ, ಸ್ಥಾವರ-ಜಂಗಮವನ್ನು ಸುಡುವ ಜ್ವಾಲೆಗಳಿಂದ ಕೂಡಿದ ಯುಗಾಂತ ಕಾಲದ ಅಗ್ನಿಯಂತೆ, ಕ್ರೋಧದಿಂದಲೂ, ರೋಷದಿಂದಲೂ ಮತ್ತು ಬಲದಿಂದಲೂ ಕೂಡಿದವನಾಗಿ ನಿವಾತ-ಕವಚಾಂತಕನೂ, ಗೆಲ್ಲುವ ಸ್ವಭಾವವುಳ್ಳವನೂ, ಸತ್ಯನಿಷ್ಠನೂ ಆದ ಅರ್ಜುನನು ತನ್ನ ದೊಡ್ಡ ಪ್ರತಿಜ್ಞೆಯನ್ನು ಪೂರೈಸುವವನಾಗಿ ನಿಂತನು.

ಆಮುಕ್ತಕವಚಃ ಖಡ್ಗೀ ಜಾಂಬೂನದಕಿರೀಟವಾನ್ ।
ಶುಭ್ರವರ್ಮಾಂಬರಧರಸ್ತ್ವಂಗದೀ ಚಾರುಕುಂಡಲಃ ॥ ೧೯ ॥

ರಥಪ್ರವರಮಾಸ್ಥಾಯ ನರೋ ನಾರಾಯಣಾನುಗಃ ।
ವಿಧುನ್ವನ್ ಗಾಂಡಿವಂ ಸಂಖೇ ಬಭೌ ಸೂರ್ಯ ಇವೋದಿತಃ ॥ ೨೦ ॥

ಕವಚವನ್ನು ಧರಿಸಿ, ಖಡ್ಗವನ್ನು ಧರಿಸಿ, ಸುವರ್ಣಮಯವಾದ ಕಿರೀಟವನ್ನು ಧರಿಸಿ, ಶುಭ್ರವಾದ ಕವಚ ಮತ್ತು ವಸ್ತ್ರಗಳನ್ನು ಧರಿಸಿ, ಭುಜಕೀರ್ತಿ ಮತ್ತು ಕರ್ಣ ಕುಂಡಲವನ್ನೂ ಧರಿಸಿ, ಶ್ರೇಷ್ಠವಾದ ರಥವನ್ನು ಏರಿ, ನಾರಾಯಣನ ಸಹಾಯವುಳ್ಳವನಾಗಿ ನರನಾದ ಅವನು, ಯುದ್ಧದಲ್ಲಿ ಗಾಂಡೀವ ಧನುಸ್ಸನ್ನು ತೂಗಾಡಿಸುತ್ತಾ ಉದಯಿಸಿದ ಸೂರ್ಯನಂತೆ ಶೋಭಿಸಿದನು.

ಅಗ್ರಾನೀಕಸ್ಯ ಸೋಽಧ್ಯರ್ಧ ಇಷುಪಾತೇ ಧನಂಜಯಃ ।
ವ್ಯವಸ್ಥಾಪ್ಯ ರಥಂ ಸಜ್ಜಂ ಶಂಖಂ ಪ್ರಾಧ್ಮಾಪಯತ್ ಪ್ರಭುಃ ॥ ೨೧ ॥

ಪ್ರಭುವಾದ ಧನಂಜಯನು ಕೌರವರ ಸೈನ್ಯದ ಮುಂಭಾಗದಲ್ಲಿ ಒಂದೂವರೆ ಬಾಣಪಾತದ ದೂರದಲ್ಲಿ ತನ್ನ ಸುಸಜ್ಜಿತವಾದ ರಥವನ್ನು ನಿಲ್ಲಿಸಿ ಶಂಖವನ್ನು ಊದಿದನು.

ಅಥ ಕೃಷ್ಣೋಽಪ್ಯಸಂಭ್ರಾಂತಃ ಪಾರ್ಥೇನ ಸಹ ವೀರ್ಯವಾನ್ ।
ಪ್ರಾಧ್ಮಾಪಯತ್ ಪಾಂಚಜನ್ಯಂ ಶಂಖಿಪ್ರವರಮೋಜಸಾ ॥ ೨೨ ॥

ಆಗ ಕೃಷ್ಣನೂ ಸಹ ಯಾವ ಗಾಬರಿಯೂ ಇಲ್ಲದೆ ಅರ್ಜುನನ ಜೊತೆಯಲ್ಲಿ ತನ್ನ ಶ್ರೇಷ್ಠ ಶಂಖಿವಾದ ಪಾಂಚಜನ್ಯವನ್ನು ವೀರ್ಯಶಾಲಿಯಾದ ಅವನು ತನ್ನ ಸಾಮರ್ಥ್ಯದಿಂದ ಊದಿದನು.

ತಯೋಃ ಶಂಖಪ್ರಣಾದೇನ ತವ ಸೈನ್ಯಂ ವಿಶಾಂಪತೇ ।
ಸಂಹೃಷ್ಟರೋಮಮುದ್ವಿಗ್ನಂ ಮಹದ್ ಭಯಮಭೂತ್ ತದಾ ॥೨೩॥

ಎಲೈ ರಾಜನೇ, ಅವರಿಬ್ಬರ ಶಂಖನಾದದಿಂದ ನಿನ್ನ ಸೈನ್ಯವು ರೋಮಾಂಚಗೊಂಡು ಉದ್ವಿಗ್ನವಾಯಿತು. ಅದಕ್ಕೆ ದೊಡ್ಡ ಭಯವುಂಟಾಯಿತು.

ಯಥಾ ತ್ರಸ್ಯಂತಿ ಭೂತಾನಿ ಸರ್ವಾಣ್ಯಶನಿನಿಸ್ವನಾತ್ ।
ತಥಾ ಶಂಖಪ್ರಣಾದೇನ ವಿತ್ರೇಸುಸ್ತವ ಸೈನಿಕಾಃ ॥ ೨೪ ॥

ಸಿಡಿಲಿನ ಶಬ್ದಕ್ಕೆ ಎಲ್ಲ ಪ್ರಾಣಿಗಳೂ ಹೆದರಿರುವ ನಿನ್ನ ಸೈನಿಕರು ಆ ಶಂಖನಾದಕ್ಕೆ ಹೆದರಿದರು.

ಪ್ರಸುಸ್ರುವುಃ ಶಕೃನ್ಮೂತ್ರಂ ವಾಹನಾನಿ ಚ ಸರ್ವಶಃ ।
ತಥಾ ಪ್ರಬಲಮುದ್ವಿಗ್ನಂ ಮಹದ್ ಬಲಮಭೂತ್ ತವ ॥ ೨೫ ॥

ನಿನ್ನ ಸೈನ್ಯದ ವಾಹನವೆಲ್ಲವೂ ಮಲಮೂತ್ರಗಳನ್ನು ಸುರಿಸಿದವು. ನಿನ್ನ ದೊಡ್ಡ ಸೈನ್ಯವು ಅಷ್ಟುಪ್ರಬಲವಾಗಿ ಉದ್ವೇಗಗೊಂಡಿತು.

ಸೀದಂತಿ ಸ್ಮ ನರಾ ರಾಜನ್ ಶಂಖಶಬ್ದೇನ ಮಾರಿಷ ।
ವಿಸಂಜ್ಞಾಶ್ಚಾಭವನ್ ಕೇಚಿತ್ ಕೇಚಿದ್ ರಾಜನ್ ವಿತತ್ರಸುಃ ॥ ೨೬ ॥

ಎಲೈ ಪೂಜ್ಯನೇ, ರಾಜನೇ, ಶಂಖಶಬ್ದವನ್ನು ಕೇಳಿ ಕೆಲವು ಯೋಧರು ಕುಸಿದರು. ಕೆಲವರು ಮೂರ್ಛೆ ಹೊಂದಿದರು. ಕೆಲವರು ಹೆದರಿದರು.

ತತಃ ಕಪಿರ್ಮಹಾನಾದಂ ಸಹ ಭೂತೈರ್ಧ್ವಜಾಲಯೈಃ ।
ಅಕರೋದ್ ವ್ಯಾದಿತಾಸ್ಯಶ್ಚ ಭೀಷಯಂಸ್ತವ ಸೈನಿಕಾನ್ ॥ ೨೭ ॥

ಆನಂತರ ಧ್ವಜದಲ್ಲಿದ್ದ ಮಹಾಕಪಿಯು ಧ್ವಜನಿವಾಸಿಗಳಾದ ಭೂತಗಳ ಜೊತೆಯಲ್ಲಿ ಬಾಯಿ ತೆರೆದು ನಿನ್ನ ಸೈನಿಕರನ್ನು ಭಯಗೊಳಿಸುತ್ತಾ ಮಹಾನಾದವನ್ನು ಮಾಡಿತು.

ತತಃ ಶಂಖಾಶ್ಚ ಭೇರ್ಯಶ್ಚ ಮೃದಂಗಾಶ್ಚಾನಕೈಃ ಸಹ ।
ಪುನರೇವಾಭ್ಯಹನ್ಯಂತ ತವ ಸೈನ್ಯಪ್ರಹರ್ಷಣಾಃ ॥ ೨೮ ॥

ಆನಂತರ ನಿನ್ನ ಸೈನ್ಯದಲ್ಲಿ ನಿನ್ನ ಸೈನ್ಯಕ್ಕೆ ಸಂತೋಷವನ್ನು ಕೊಡುವ ಶಂಖಗಳು ಊದಲ್ಪಟ್ಟವು. ಭೇರಿ-ಮೃದಂಗ ಮತ್ತು ಆನಕಗಳು ಪುನಃ ಬಾರಿಸಲ್ಪಟ್ಟವು.

ನಾನಾವಾದಿತ್ರಸಂಹ್ರಾದೈಃ ಕ್ಷ್ವೇಡಿತಾಸ್ಫೋಟಿತಾಕುಲೈಃ ।
ಸಿಂಹನಾದೈಃ ಸಮುತ್ಕೃಷ್ಟೈಃ ಸಮಾಹೂಯ ಪರಸ್ಪರಮ್ ॥ ೨೯ ॥

ತಸ್ಮಿನ್ ಸುತುಮುಲೇ ಶಬ್ದೇ ಭೀರೂಣಾಂ ಭಯವರ್ಧನೇ ।
ಅತೀವ ಹರ್ಷಾದ್ ದಾಶಾರ್ಹಮಬ್ರವೀತ್ ಪಾಕಶಾಸನಿಃ ॥ ೩೦ ॥

ನಾನಾವಿಧವಾದ ವಾದ್ಯಘೋಷದಿಂದಲೂ, ಸಿಂಹನಾದಗಳಿಂದಲೂ, ಉತ್ಕೃಷ್ಟವಾದ ಕಿರುಚಾಟದಿಂದಲೂ, ಪರಸ್ಪರವಾಗಿ ಆಹ್ವಾನಿಸಿ ಕಿರುಚುವ ಶಬ್ದದಿಂದಲೂ, ಹಸ್ತತಳ ಶಬ್ದದಿಂದಲೂ ಕೂಡಿದ, ಭೀರುಗಳಿಗೆ ಭಯವನ್ನು ಹೆಚ್ಚಿಸುವ ತೀವ್ರ ಶಬ್ದ ಸಮೂಹದಲ್ಲಿ ಸಂತೋಷಗೊಂಡ ಅರ್ಜುನನು ಕೃಷ್ಣನನ್ನು ಕುರಿತು ಹೇಳಿದನು.

ಚೋದಯಾಶ್ವಾನ್ ಹೃಷೀಕೇಶ ಯತ್ರ ದುರ್ಮರ್ಷಣಃ ಸ್ಥಿತಃ ।
ಏತದ್ ಭಿತ್ತ್ವಾ ಗಜಾನೀಕಂ ಪ್ರವೇಕ್ಷ್ಯಾಮ್ಯರಿವಾಹಿನೀಮ್ ॥ ೩೧ ॥

ಎಲೈ ಹೃಷೀಕೇಶನೇ, ದುರ್ಮರ್ಷಣನು ಇದ್ದಲ್ಲಿಗೆ ನನ್ನ ಅಶ್ವಗಳನ್ನು ನಡೆಸು. ಅವನಿರುವ ಗಜಸೇನೆಯನ್ನು ಭೇದಿಸಿ ನಾನು ಶತ್ರುಸೇನೆಯನ್ನು ಪ್ರವೇಶಿಸುವೆನು.

ಸಂಜಯಃ

ಏವಮುಕ್ತೋ ಮಹಾಬಾಹುಃ ಕೇಶವಃ ಸವ್ಯಸಾಚಿನಾ ।
ಅಚೋದಯದ್ ಹಯಾಂಸ್ತತ್ರ ಯತ್ರ ದುರ್ಮರ್ಷಣಃ ಸ್ಥಿತಃ ॥ ೩೨ ॥

ಸಂಜಯ– ಸವ್ಯಸಾಚಿಯಿಂದ ಹೀಗೆ ಹೇಳಲ್ಪಟ್ಟ ಮಹಾಬಾಹುವಾದ ಕೇಶವನು ದುರ್ಮರ್ಷಣನು ಇದ್ದಲ್ಲಿಗೆ ಅಶ್ವಗಳನ್ನು ಪ್ರಚೋದಿಸಿದನು.

ಸ ಸಂಪ್ರಹಾರಸ್ತುಮುಲಃ ಸಂಪ್ರವೃತ್ತಃ ಸುದಾರುಣಃ ।
ಏಕಸ್ಯ ಚ ಬಹೂನಾಂ ಚ ರಥನಾಗನರಕ್ಷಯಃ ॥ ೩೩ ॥

ಆಗ ಒಬ್ಬನಿಗೂ ಮತ್ತು ಅನೇಕರಿಗೂ ರಥ-ಗಜ-ಯೋಧ ಕ್ಷಯಕಾರಕವಾದ, ಅತ್ಯಂತ ದಾರುಣವಾದ ಮತ್ತು ತೀವ್ರವಾದ ಸಂಘರ್ಷವು ಉಂಟಾಯಿತು.

ತತಃ ಸಾಯಕವರ್ಷೇಣ ಪರ್ಜನ್ಯ ಇವ ವೃಷ್ಟಿಭಿಃ ।
ಪರಾನವಾಕಿರತ್ ಪಾರ್ಥಃ ಪರ್ವತಾನಿವ ನೀರದಃ ॥ ೩೪ ॥

ಆಗ ಅರ್ಜುನನು ಪರ್ಜನ್ಯನು ಮಳೆಯನ್ನು ಸುರಿಸುವಂತೆ, ಮೋಡಗಳು ಪರ್ವತವನ್ನು ತಮ್ಮ ನೀರಿನಿಂದ ಮುಚ್ಚುವಂತೆ ಶತ್ರುಸೈನ್ಯದ ಮೇಲೆ ಬಾಣಗಳ ಮಳೆಯನ್ನು ಕರೆದನು.

ತೇ ಚಾಪಿ ರಥಿನಃ ಸರ್ವೇ ತ್ವರಿತಾಃ ಕೃತಹಸ್ತವತ್ ।
ಅವಾಕಿರನ್ ಬಾಣಜಾಲೈಃ ತತಃ ಕೃಷ್ಣಧನಂಜಯೌ ॥ ೩೫ ॥

ಆಗ ಕೌರವರ ರಥಿಕರೂ ಸಹ ಕ್ಷಿಪ್ರಹಸ್ತವುಳ್ಳವರಾಗಿ, ತ್ವರೆಯಿಂದ ಕೂಡಿ ಕೃಷ್ಣಾರ್ಜುನರ ಮೇಲೆ ಬಾಣಗಳ ಸಮೂಹಗಳ ಮಳೆಯನ್ನು ಕರೆದರು.

ತತಃ ಕ್ರುದ್ಧೋ ಮಹಾಬಾಹುರ್ವಾರ್ಯಮಾಣಃ ಪರೈರ್ಯುಧಿ ।
ಶಿರಾಂಸಿ ರಥಿನಾಂ ಪಾರ್ಥಃ ಕಾಯೇಭ್ಯೋಽಪಾತಯತ್ ಕ್ಷಿತೌ ॥ ೩೬ ॥

ಅನಂತರ ಶತ್ರುಗಳಿಂದ ರಣರಂಗದಲ್ಲಿ ತಡೆಯಲ್ಪಟ್ಟ ಮಹಾಬಾಹುವಾದ ಪಾರ್ಥನು ಕೋಪಗೊಂಡು ರಥಿಕರ ಶಿರಸ್ಸುಗಳನ್ನು ಅವರ ದೇಹಗಳಿಂದ ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದನು.

ಉದ್ಯಾತನಯನೈರ್ವಕ್ತ್ರೈರಮರ್ಷಾದ್ ಭ್ರುಕುಟೀಕೃತೈಃ ।
ತಥೈವ ಕ್ರೋಧದಷ್ಟೋಷ್ಠೈರವಾಕೀರ್ಯತ ಮೇದಿನೀ ॥ ೩೭ ॥

ಚಲಿಸುವ ಕಣ್ಣುಗಳಿಂದ ಕೂಡಿರುವ, ಹುಬ್ಬುಗಳನ್ನು ಗಂಟಿಕ್ಕಿ ರೋಷದಿಂದ ಕೂಡಿದ, ಕ್ರೋಧದಿಂದ ತುಟಿಗಳನ್ನು ಕಚ್ಚಿದ, ವೀರರ ಶಿರಸ್ಸುಗಳಿಂದ ಭೂಮಿಯು ತುಂಬಿ ಹೋಯಿತು.

ಪುಂಡರೀಕವನಾನೀವ ನಿರಸ್ತಾನಿ ಸಮಂತತಃ ।
ವಿನಿಕೀರ್ಣಾನಿ ಯೋಧಾನಾಂ ವದನಾನಿ ಚಕಾಶಿರೇ ॥ ೩೮ ॥

ಎಲ್ಲಕಡೆಗಳಲ್ಲಿಯೂ ಕೆಡವಲ್ಪಟ್ಟ ಭೂಮಿಯ ಮೇಲೆ ಬಿದ್ದ ಯೋಧರ ಮುಖಗಳು ಪದ್ಮವನಗಳಂತೆ ಶೋಭಿಸಿದವು.

ತಪನೀಯತನುತ್ರಾಣಾಃ ಸಂಸಿಕ್ತಾ ರುಧಿರೇಣ ಚ ।
ಸಂಸಕ್ತಾ ಇವ ದೃಶ್ಯಂತೇ ಮೇಘಸಂಘಾಃ ಸವಿದ್ಯುತಃ ॥ ೩೯ ॥

ಸುವರ್ಣಮಯವಾದ ಕವಚವನ್ನು ಧರಿಸಿದ, ರಕ್ತದಿಂದ ಸಿಕ್ತವಾದ ಶಿರಸ್ಸುಗಳು ಒಂದಕ್ಕೊಂದು ಸೇರಿಕೊಂಡು ಮಿಂಚಿನಿಂದ ಕೂಡಿದ ಮೋಡಗಳ ಸಮೂಹದಂತೆ ತೋರಿಬಂದವು.

ಶಿರಸಾಂ ಪತತಾಂ ರಾಜನ್ ಶಬ್ದೋಽಭೂತ್ ಪೃಥಿವೀತಳೇ ।
ಕಾಲೇನ ಪರಿಪಕ್ವಾನಾಂ ತಾಳಾನಾಂ ಪತತಾಮಿವ ॥ ೪೦ ॥

ಎಲೈ ರಾಜನೇ, ಭೂಮಿಯ ಮೇಲೆ ಬೀಳುವ ಶಿರಸ್ಸುಗಳ ಶಬ್ದವು ಕಾಲದಿಂದ ಪಕ್ವವಾಗಿ ನೆಲದ ಮೇಲೆ ಬೀಳುವ ತಾಳ ವೃಕ್ಷದ ಫಲಗಳ ಶಬ್ದವನ್ನು ಹೋಲುತ್ತಿದ್ದಿತು.

ಕಬಂಧ ಉತ್ಥಿತಃ ಕಶ್ಚಿದ್ ವಿಘ್ನಾರ್ಥಂ ಸಶರಂ ಧನುಃ ।
ಕಶ್ಚಿತ್ ಸುನಿಶಿತಂ ಖಡ್ಗಂ ಭುಜೇನೋದ್ಯಮ್ಯ ತಿಷ್ಠತಿ ।
ಗೃಹೀತ್ವಾನ್ಯಸ್ಯ ಕೇಶೇಷು ಶಿರೋ ನೃತ್ಯತಿ ಚಾಪರಃ ॥ ೪೧ ॥

ಒಂದು ಕಡೆ ರುಂಡವು ಮಾತ್ರ ಕೈಯಲ್ಲಿ ಧನುಸ್ಸು, ಬಾಣಗಳನ್ನು ಹಿಡಿದು ಎಳೆದು ಮೇಲಕ್ಕೆದ್ದಿತು. ಇನ್ನೊಂದು ರುಂಡವು ಭುಜದಿಂದ ಹರಿತವಾದ ಖಡ್ಗವನ್ನು ಎತ್ತಿ ನಿಂತಿತು. ಇನ್ನೊಂದು ಕಡೆ ಶಿರಸ್ಸನ್ನು ಕೇಶಗಳಲ್ಲಿ ಹಿಡಿದು ಇನ್ನೊಂದು ರುಂಡವು ಕುಣಿಯುತ್ತಿದ್ದಿತು.

ಪತಿತಾನಿ ನ ಜಾನಂತಿ ಶಿರಾಂಸಿ ಪುರುಷರ್ಷಭಾಃ ।
ಅಮೃಷ್ಯಮಾಣಾಃ ಕೌಂತೇಯಂ ಸಂಗ್ರಾಮೇ ಜಯಗರ್ದ್ಧಿನಃ ॥ ೪೨ ॥

ಅರ್ಜುನನನ್ನು ಸಂಗ್ರಾಮದಲ್ಲಿ ನೋಡಿ ಸಹಿಸದೆ ಜಯವನ್ನು ಬಯಸುತ್ತಿದ್ದ ಪುರುಷಶ್ರೇಷ್ಠರಿಗೆ ತಮ್ಮ ಶಿರಸ್ಸುಗಳು ಕೆಳಗೆ ಬಿದ್ದುದೂ ತಿಳಿಯುತ್ತಿರಲಿಲ್ಲ.

ಹಯಾನಾಮುತ್ತಮಾಂಗೈಶ್ಚ ಹಸ್ತಿಹಸ್ತೈಶ್ಚ ಮೇದಿನೀ ।
ಬಾಹುಭಿಶ್ಚ ಶಿರೋಭಿಶ್ಚ ವೀರಾಣಾಂ ಸಮಕೀರ್ಯತ ॥ ೪೩ ॥

ಅಶ್ವಗಳ ಶಿರಸ್ಸುಗಳಿಂದಲೂ, ಗಜಗಳ ಸೊಂಡಿಲುಗಳಿಂದಲೂ, ವೀರರ ಬಾಹು ಮತ್ತು ಶಿರಸ್ಸಿನಿಂದಲೂ ಭೂಮಿಯು ಎಲ್ಲ ಕಡೆಯಲ್ಲಿಯೂ ಹರಡಲ್ಪಟ್ಟಿತು.

ಅಯಂ ಪಾರ್ಥಃ ಕುತಃ ಪಾರ್ಥಃ ಪಾರ್ಥೋ೨ಯಮಿತಿ ಸರ್ವಶಃ ।
ತಿಷ್ಠ ಪಾರ್ಥೈಹಿ ಮಾಂ ಪಾರ್ಥ ಕ್ವ ಯಾಸೀತಿ ಚ ಜಲ್ಪತಾಮ್ ॥ ೪೪ ॥

ತವ ಸೈನ್ಯಸ್ಥಯೋಧಾನಾಂ ಪಾರ್ಥಭೂತಮಿವಾಭವತ್ ॥ ೪೫ ॥

ಇವನು ಅರ್ಜುನ, ಅರ್ಜುನನು ಎಲ್ಲಿ? ಇವನು ಅರ್ಜುನ, ಅರ್ಜುನನೇ ನಿಲ್ಲು, ಅರ್ಜುನ ನನ್ನ ಬಳಿಗೆ ಬಾ, ಎಲ್ಲಿಗೆ ಹೋಗುವಿ? ಎಂದು ಎಲ್ಲ ಕಡೆಯಲ್ಲಿಯೂ ಮಾತನಾಡುವ ನಿನ್ನ ಸೈನ್ಯದ ಯೋಧರಿಗೆ ಎಲ್ಲವೂ ಅರ್ಜುನಮಯವಾಗಿ ತೋರಿತು.

ಆನ್ಯೋನ್ಯಮಪಿ ಚಾಜಘ್ನುರಾತ್ಮಾನಮಪಿ ಚಾಪರೇ ।
ಪಾರ್ಥಭೂತಮಮನ್ಯಂತ ಜನಾಃ ಕಾಲೇನ ಮೋಹಿತಾಃ ॥ ೪೬ ॥

ಕಾಲದಿಂದ ಮೋಹಿತರಾದ ನಿನ್ನ ಯೋಧರು ಜಗತ್ತೆಲ್ಲ ಪಾರ್ಥಮಯವೆಂದು ತಿಳಿದು ತಮ್ಮವರನ್ನೇ ಕೊಂದರು. ಕೆಲವರು ತಮ್ಮನ್ನೇ ಕೊಂದುಕೊಂಡರು.

ನಿಷ್ಟನಂತೋ ವಿರುಧಿರಾ ವಿಸಂಜ್ಞಾ ಗಾಢವೇದನಾಃ ।
ಶಯಾನಾ ಬಹವೋ ವೀರಾಃ ಕೀರ್ತಯಂತಶ್ಚ ಬಾಂಧವಾನ್ ॥ ೪೭ ॥

ಸಭಿಂಡಿಪಾಲಾಃ ಸಪ್ರಾಸಾಃ ಸಮುದ್ಗರಪರಶ್ವಧಾಃ ।
ಸನಿರ್ಘಾತಾಃ ಸನಿಸ್ತ್ರಿಂಶಾಃ ಸಶರಾಸನತೋಮರಾಃ ॥ ೪೮ ॥

ಸಹಾಸಿಚರ್ಮಾವರಣಾಃ ಸಗದಾಃ ಸಾಂಗದಾ ರಣೇ ।

ಗರ್ಜಿಸುತ್ತಾ, ರಕ್ತವನ್ನು ಸುರಿಸುತ್ತಾ, ಸಂಜ್ಞಾಹೀನರಾಗಿ ಗಾಢವೇದನೆಯನ್ನು ಅನುಭವಿಸುತ್ತಾ, ತಮ್ಮ ಬಂಧುಗಳ ಹೆಸರನ್ನು ಹೇಳುತ್ತಾ ಭೂಮಿಯ ಮೇಲೆ ಬಿದ್ದ ಅನೇಕ ವೀರರು ಕೈಯಲ್ಲಿ ಭಿಂಡಿಪಾಲಗಳನ್ನು, ಪ್ರಾಸಗಳನ್ನು, ಮುದ್ಗರ ಪರಶುಗಳನ್ನು, ನಿರ್ಘಾತಗಳನ್ನು, ಖಡ್ಗಗಳನ್ನು, ಧನುಸ್ಸು ಮತ್ತು ತೋಮರಗಳನ್ನು, ಖಡ್ಗ-ಚರ್ಮಗಳನ್ನು, ಗದೆಗಳನ್ನು ಹಿಡಿದು ರಣರಂಗದಲ್ಲಿ ಬಿದ್ದಿರುವುದು ಕಂಡು ಬಂದಿತು.

ಮಹಾಭುಜಗಸಂಕಾಶಾ ಬಾಹವಃ ಪರಿಘೋಪಮಾಃ ॥ ೪೯ ॥

ಉದ್ವೇಷ್ಟಂತಿ ವಿಚೇಷ್ಟಂತಿ ಸಂವೇಷ್ಟಂತಿ ಚ ಸರ್ವಶಃ ।
ವೇಗಂ ಕುರ್ವಂತಿ ಸಂರಬ್ಧಾ ನಿಕೃತ್ತಾಃ ಪರಮೇಷುಭಿಃ ॥ ೫೦ ॥

ಮಹಾಸರ್ಪಗಳ ಕಾಂತಿಯನ್ನು ಹೊಂದಿದ, ಶ್ರೇಷ್ಠ ಬಾಣಗಳಿಂದ ಕತ್ತರಿಸಲ್ಪಟ್ಟ ಒನಕೆಯಂತಿದ್ದ ಬಾಹುಗಳು ಎಲ್ಲ ಕಡೆಯಲ್ಲಿಯೂ ಭೂಮಿಯ ಮೇಲೆ ಬಿದ್ದು ಹೊರಳಾಡುತ್ತವೆ, ಸುತ್ತಿಕೊಳ್ಳುತ್ತವೆ, ವೇಗವನ್ನು ಹೊಂದುತ್ತವೆ.

ಯೋ ಯಃ ಸ್ಮ ಸಮರೇ ಪಾರ್ಥಂ ಪ್ರತಿಸಂರಭತೇ ನರಃ ।
ತಸ್ಯ ತಸ್ಯಾಂತಕೋ ಬಾಣಃ ಶರೀರಮುಪಸರ್ಪತಿ ॥ ೫೧ ॥

ಯುದ್ಧದಲ್ಲಿ ಯಾವ ಯಾವನು ಅರ್ಜುನನ ಮೇಲೆ ಕೋಪವನ್ನು ತೆಗೆದುಕೊಳ್ಳುತ್ತಾನೆಯೋ ಅಂತಹವನ ಶರೀರವನ್ನು ಪ್ರಾಣಾಂತಕವಾದ ಬಾಣವು ಪ್ರವೇಶಿಸುತ್ತಿದ್ದಿತು.

ನೃತ್ಯತೋ ರಥಮಾರ್ಗೇಷು ಧನುರ್ವ್ಯಾಯಚ್ಛತಸ್ತದಾ ।
ನ ಕಶ್ಚಿತ್ ತತ್ರ ಪಾರ್ಥಸ್ಯ ದದರ್ಶಾಂತರಮಣ್ವಪಿ ॥ ೫೨ ॥

ರಥಮಾರ್ಗದಲ್ಲಿ ನರ್ತನವನ್ನು ಮಾಡುತ್ತಾ, ಧನುಸ್ಸನ್ನು ಎಳೆದು ಪ್ರಯೋಗಿಸುವ ಅರ್ಜುನನ ಕ್ರಿಯೆಯಲ್ಲಿ ಯಾರಿಗೂ ಅಣುವಿನಷ್ಟು ಅಂತರವೂ ಕಾಣಲಿಲ್ಲ.

ಯತ್ ತಸ್ಯ ಯತಮಾನಸ್ಯ ಕ್ಷಿಪ್ರಮಾಕ್ಷಿಪತಃ ಶರಾನ್ ।
ಲಾಘವಾತ್ ಪಾಂಡುಪುತ್ರಸ್ಯ ವ್ಯಸ್ಮಯಂತಾಪರೇ ಜನಾಃ ॥ ೫೩ ॥

ಯುದ್ಧದಲ್ಲಿ ಪ್ರಯತ್ನಶೀಲನಾದ, ಪಾಂಡುಪುತ್ರನಾದ ಅರ್ಜುನನು ಬಾಣವನ್ನು ತೆಗೆದುಕೊಳ್ಳುವ, ಬಿಲ್ಲಿನಲ್ಲಿ ಹೂಡುವ ಮತ್ತು ಪ್ರಯೋಗಿಸುವ ಕ್ಷಿಪ್ರತೆಯನ್ನು ನೋಡಿ ಉಳಿದ ಜನರು ವಿಸ್ಮಯಗೊಂಡರು.

ಹಸ್ತಿನಂ ಹಸ್ತಿಯಂತಾರಮ್ ಅಶ್ವಮಶ್ವಪ್ರಯಾಯಿನಮ್ ।
ರಥಿನಂ ಸಾರಥಿಂ ಪತ್ತಿಂ ಪಾರ್ಥಃ ಪ್ರಮಥತೇ ಶರೈಃ ॥ ೫೪ ॥

ಗಜ ಮತ್ತು ಗಜಯೋಧರನ್ನು, ಅಶ್ವ ಮತ್ತು ಅಶ್ವಯೋಧರನ್ನು, ರಥಿಯನ್ನು ಮತ್ತು ಸಾರಥಿಯನ್ನು ಹಾಗೂ ಪದಾತಿಗಳನ್ನು ಅರ್ಜುನನು ಬಾಣಗಳಿಂದ ವಿನಾಶಗೊಳಿಸಿದನು.

ಆವರ್ತಮಾನಮಾವೃತ್ತಂ ಯುದ್ಧ್ಯಮಾನಂ ಚ ಪಾಂಡವಃ ।
ಪ್ರಮುಖೇ ವರ್ತಮಾನಂ ಚ ನ ಕಂಚಿನ್ನ ಹಿನಸ್ತಿ ಸಃ ॥ ೫೫ ॥

ತಿರುಗುತ್ತಿದ್ದ, ತಿರುಗಿದ ಮತ್ತು ಎದುರಿಗೆ ಇದ್ದು ಯುದ್ಧವನ್ನು ಮಾಡುವ ಯಾವನನ್ನೂ ಅರ್ಜುನನು ಬಿಡಲಿಲ್ಲ.

ಯಥೋದಯಾನಃ ಸಮಯೇ ಸೂರ್ಯೋ ಹಂತಿ ಮಹತ್ ತಮಃ ।
ತಥಾऽರ್ಜುನೋ ಗಜಾನೀಕಂ ವ್ಯಧಮತ್ ಕಂಕಪತ್ರಿಭಿಃ ॥ ೫೬ ॥

ಉದಯಕಾಲದಲ್ಲಿ ಸೂರ್ಯನು ದೊಡ್ಡ ಅಂಧಕಾರವನ್ನು ನಾಶ ಮಾಡುವಂತೆ, ಕಂಕಪತ್ರಗಳುಳ್ಳ ಬಾಣಗಳಿಂದ ಅರ್ಜುನನು ಗಜಸೇನೆಯನ್ನು ನಾಶಮಾಡಿದನು.

ಹಸ್ತಿಭಿಃ ಪತಿತೈರ್ಭಿನ್ನೈಃ ತವ ಸೈನ್ಯಮದೃಶ್ಯತ ।
ಆದಿಕಾಲೇ ಯಥಾ ಭೂಮಿರ್ವಿನಿಕ್ಷಿಪ್ತಮಹೀಧರಾ ॥ ೫೭ ॥

ದೇಹವು ಕತ್ತರಿಸಲ್ಪಟ್ಟು ಕೆಳಗೆ ಬಿದ್ದ ಗಜಗಳಿಂದ ಕೂಡಿದ ನಿನ್ನ ಸೈನ್ಯವು ಆದಿಕಾಲದಲ್ಲಿ ಪರ್ವತದಿಂದ ಹರಡಿದ ಭೂಮಿಯಂತೆ ಕಂಡುಬಂದಿತು.

ಯಥಾ ಮಧ್ಯಂದಿನೇ ಸೂರ್ಯೋ ದುಷ್ಪ್ರೇಕ್ಷ್ಯಃ ಪ್ರಾಣಿಭಿಃ ಸದಾ ।
ತಥಾ ಧನಂಜಯಃ ಕ್ರುದ್ಧೋ ದುಷ್ಪ್ರೇಕ್ಷ್ಯೋ ಯುಧಿ ಶತ್ರುಭಿಃ ॥ ೫೮ ॥

ಹೇಗೆ ಮಧ್ಯಾಹ್ನದ ಸಮಯದಲ್ಲಿ ಪ್ರಾಣಿಗಳು ಸೂರ್ಯನನ್ನು ನೋಡಲು ಸಾಧ್ಯವಿಲ್ಲವೋ ಅದರಂತೆ ಕೋಪಗೊಂಡ ಧನಂಜಯನು ರಣರಂಗದಲ್ಲಿ ಶತ್ರುಗಳಿಂದ ನೋಡಲು ಸಾಧ್ಯವಿಲ್ಲದವನಾದನು.

ತತ್ ತಥಾ ತವ ಪುತ್ರಸ್ಯ ಸೈನ್ಯಂ ಯುಧಿ ಪರಂತಪ ।
ಪ್ರಭಗ್ನಂ ದ್ರುತಮಾವಿಗ್ನಮತೀವ ಶರಪೀಡಿತಮ್ ॥ ೫೯ ॥

ಎಲೈ ಪರಂತಪನೇ, ಹಾಗೆ ನಿನ್ನ ಪುತ್ರನ ಸೈನ್ಯವು ರಣರಂಗದಲ್ಲಿ ಅರ್ಜುನನ ಬಾಣಗಳಿಂದ ಬಹಳ ಪೀಡಿತವಾಗಿ ದುಃಖಿಗೊಂಡು, ಭಗ್ನವಾಗಿ ಓಡಿ ಹೋಯಿತು.

ಮಾರುತೇನೇವ ಮಹತಾ ಮೇಘಾನೀಕಮುದೀರಿತಮ್ ।
ಪ್ರಕಾಲ್ಯಮಾನಂ ತತ್ ಸೈನ್ಯಂ ನಾಶಕತ್ ಪ್ರತಿವೀಕ್ಷಿತುಮ್ ॥೬೦॥

ದೊಡ್ಡ ಬಿರುಗಾಳಿಯಿಂದ ಚದುರಿಸಲ್ಪಟ್ಟ ಮೋಡದ ಸಮೂಹದಂತೆ ಓಡಿ ಹೋಗುತ್ತಿದ್ದ ಆ ಸೈನ್ಯವು ಅರ್ಜುನನನ್ನು ನೋಡಲೂ ಸಹ ಶಕ್ತವಾಗಲಿಲ್ಲ.

ಪ್ರತೋದೈಶ್ಚಾಪಕೋಟೀಭಿಃ ಫೀಟ್ಕಾರೈಃ ಸಾಧುವಾದಿತೈಃ ।
ಕಶಾಪಾರ್ಷ್ಣ್ಯಭಿಘಾತೈಶ್ಚ ವಾಗ್ಭಿರುಗ್ರಾಭಿರೇವ ಚ ॥ ೬೧ ॥

ಚೋದಯಂತೋ ಹಯಾಂಸ್ತೂರ್ಣಂ ಪಲಾಯಂತೇ ಸ್ಮ ತಾವಕಾಃ ।
ಸಾದಿನೋ ರಥಿನಶ್ಚೈವ ಪತ್ತಯಶ್ಚಾರ್ಜುನಾರ್ದಿತಾಃ ॥ ೬೨ ॥

ನಿನ್ನ ಸೈನ್ಯದ ಅಶ್ವಾರೋಹಿಗಳು, ರಥಿಕರು ಮತ್ತು ಪದಾತಿಗಳು ಅರ್ಜುನನ ಬಾಣಗಳಿಂದ ಪೀಡಿತರಾಗಿ ಚಾವಟಿಗಳಿಂದಲೂ, ಧನುಸ್ಸಿನ ತುದಿಗಳಿಂದಲೂ ಚೆನ್ನಾಗಿ ನುಡಿದ ಫೀಟ್ಕಾರ ಶಬ್ದದಿಂದಲೂ (ಕುದುರೆಗಳನ್ನು ವೇಗವಾಗಿ ಓಡಿಸುವ ಶಬ್ದ), ಚಾವಟ ಮತ್ತು ಹಿಮ್ಮಡಿಗಳ ಏಟಿನಿಂದಲೂ, ಉಗ್ರವಾದ ಮಾತುಗಳಿಂದಲೂ ತಮ್ಮ ಅಶ್ವಗಳನ್ನು ಪ್ರಚೋದಿಸುತ್ತಾ ಓಡಿದರು.

ಪಾರ್ಷ್ಣ್ಯಂಗುಷ್ಠಾಂಕುಶೈರ್ನಾಗಂ ಚೋದಯಂತಸ್ತಥಾऽಪರೇ ।
ಶರೈಃ ಸಮ್ಮೋಹಿತಾಶ್ಚಾನ್ಯೇ ತಮೇವಾಭಿಮುಖಾ ಯಯುಃ ।
ತವ ಯೋಧಾ ಹತೋತ್ಸಾಹಾ ವಿಭ್ರಾಂತಮನಸಸ್ತದಾ ॥ ೬೩ ॥

ಇನ್ನು ಕೆಲವರು ತಮ್ಮ ಹಿಮ್ಮಡಿಯಿಂದಲೂ, ಅಂಗುಷ್ಠದಿಂದಲೂ, ಅಂಕುಶದಿಂದಲೂ ಗಜವನ್ನು ಪ್ರೇರಿಸುತ್ತಾ, ಅರ್ಜುನನ ಬಾಣಗಳಿಂದ ಸಮ್ಮೋಹಿತರಾಗಿ ಅರ್ಜುನನ ಕಡೆಗೇ ನಡೆದರು. ನಿನ್ನ ಯೋಧರು ಆಗ ತಮ್ಮ ಉತ್ಸಾಹವನ್ನು ಕಳೆದುಕೊಂಡು ಭ್ರಾಂತಿಯಿಂದ ಕೂಡಿದ ಮನಸ್ಸುಳ್ಳವರಾದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನಾಶೀತಿತಮೋऽಧ್ಯಾಯಃ ॥

॥ ಜಯದ್ರಥವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಪ್ಪತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತನೆಯ ಅಧ್ಯಾಯ

ಅರ್ಜುನನಿಂದ ದುಶ್ಶಾಸನನ ಪರಾಜಯ. ದ್ರೋಣರ ಜೊತೆಯಲ್ಲಿ ಸ್ವಲ್ಪ ಯುದ್ಧವನ್ನು ಮಾಡಿ ಅನಂತರ ಅರ್ಜುನನ ವ್ಯೂಹ ಪ್ರವೇಶ.

ಧೃತರಾಷ್ಟ್ರ:

ತಸ್ಮಿನ್ ಪ್ರಭಗ್ನೇ ಸೈನ್ಯಾಗ್ರೇ ಹನ್ಯಮಾನೇ ಕಿರೀಟಿನಾ ।
ಕೋ ನು ತತ್ರಾರ್ಜುನಂ ಯುದ್ಧೇ ವೀರಃ ಪ್ರತ್ಯುದಿಯಾದ್ ರಥೀ ॥೧॥

ಧೃತರಾಷ್ಟ್ರ– ಅರ್ಜುನನಿಂದ ನಮ್ಮ ಸೈನ್ಯದ ಮುಂಭಾಗವು ಭಗ್ನವಾದಾಗ ಯಾವ ವೀರನಾದ ರಥಿಕನು ಅರ್ಜುನನಿಗೆ ಎದುರಾಗಿ ಹೋದನು?

ಆಹೋಸ್ವಿಚ್ಚಕಟವ್ಯೂಹಂ ಪ್ರವಿಷ್ಯಾ ಮೋಘನಿಶ್ಚಯಾಃ ।
ದ್ರೋಣಮಾಶ್ರಿತ್ಯ ತಿಷ್ಠಂತಿ ಪ್ರಾಕಾರಮಕುತೋಭಯಾಃ ॥ ೨ ॥

ಅಥವಾ ಶಕಟವ್ಯೂಹವನ್ನು ಪ್ರವೇಶಿಸಿ, ವ್ಯರ್ಥವಾದ ನಿಶ್ಚಯವುಳ್ಳ ಕೌರವರು ದ್ರೋಣರೆಂಬ ಕೋಟೆಯನ್ನು ಆವಲಂಬಿಸಿ ನಿರ್ಭಯರಾಗಿ ನಿಂತರೆ?

ಸಂಜಯಃ

ತಥಾಽರ್ಜುನೇನ ಸಂಭಗ್ನೋ ತಸ್ಮಿಂಸ್ತವ ಮಹಾಬಲೇ ।
ಹತವೀರೇ ಹತೋತ್ಸಾಹೇ ಪಲಾಯನಕೃತಕ್ಷಣೇ ॥ ೩ ॥

ಪಾಕಶಾಸನಿನಾಽಭೀಕ್ಷ್ಣಂ ವಧ್ಯಮಾನೇ ಶರೋತ್ತಮೈಃ ।
ನ ಕಶ್ಚಿತ್ ತತ್ರ ಸಂಗ್ರಾಮೇ ಶಶಾಕಾರ್ಜುನಮೀಕ್ಷಿತುಮ್ ॥ ೪ ॥

ಸಂಜಯ– ನಿನ್ನ ಮಹಾಸೈನ್ಯವು ಅರ್ಜುನನಿಂದ ಆ ರೀತಿಯಲ್ಲಿ ಭಗ್ನವಾಗಿ ವೀರರನ್ನು ಕಳೆದುಕೊಂಡು ವೀರರು ಉತ್ಸಾಹವನ್ನು ಕಳೆದುಕೊಂಡು ಪಲಾಯನವನ್ನು ಮಾಡಲು ಹವಣಿಸುತ್ತಿರಲು ಅರ್ಜುನನು ಶ್ರೇಷ್ಠವಾದ ಬಾಣಗಳಿಂದ ಸತತವಾಗಿ ನಿನ್ನ ಸೈನ್ಯವನ್ನು ಪೀಡಿಸುತ್ತಿರಲು ರಣರಂಗದಲ್ಲಿ ಯಾರೂ ಅರ್ಜುನನನ್ನು ನೋಡಲೂ ಸಾಧ್ಯವಾಗಲಿಲ್ಲ.

ತತಸ್ತವ ಸುತೋ ರಾಜನ್ ದೃಷ್ಟ್ವಾ ಸೈನ್ಯಂ ತಥಾಗತಮ್ ।
ದುಃಶಾಸನೋ ಭೃಶಂ ಕ್ರುದ್ಧೋ ಯುದ್ಧಾಯಾರ್ಜುನಮಭ್ಯಯಾತ್ ॥೫॥

ಎಲೈ ರಾಜನೇ, ಆಗ ನಿನ್ನ ಪುತ್ರನಾದ ದುಶ್ಶಾಸನನು ಸೈನ್ಯವು ಅಂತಹ ಅವಸ್ಥೆಯನ್ನು ಹೊಂದಿದುದನ್ನು ನೋಡಿ ಬಹಳ ಕೋಪಗೊಂಡು ಅರ್ಜುನನ ಮೇಲೆ ಯುದ್ಧಕ್ಕೆ ಹೊರಟನು.

ಸ ಕಾಂಚನವಿಚಿತ್ರೇಣ ಕವಚೇನ ಸಮಾವೃತಃ ।
ಜಾಂಬೂನದಶಿರಸ್ತ್ರಾಣಃ ಶೂರಶ್ಚೀವ್ರಪರಾಕ್ರಮಃ ॥ ೬ ॥

ನಾಗಾನೀಕೇನ ಮಹತಾ ಗ್ರಸನ್ನಿವ ಮಹೀಮಿಮಾಮ್ ।
ದುಃಶಾಸನೋ ಮಹಾರಾಜ ಸವ್ಯಸಾಚಿನಮಾವೃಣೋತ್ ॥ ೭ ॥

ಎಲೈ ಮಹಾರಾಜನೇ, ವಿಚಿತ್ರವಾದ ಸುವರ್ಣಮಯವಾದ ಕವಚವನ್ನು ಧರಿಸಿ, ಸುವರ್ಣಮಯವಾದ ಶಿರಸ್ತ್ರಾಣವನ್ನೂ ಧರಿಸಿ, ಶೂರನೂ ಮಹಾಪರಾಕ್ರಮಶಾಲಿಯೂ ಆದ ದುಶ್ಶಾಸನನು ಈ ಭೂಮಿಯನ್ನೇ ನುಂಗುವವನಂತೆ ತನ್ನ ಗಜಸೇನೆಯಿಂದ ಅರ್ಜುನನನ್ನು ಮುತ್ತಿದನು.

ಯುವರಾಜೋ ಬಲಶ್ಲಾಘೀ ಪಿಂಗಲಃ ಪ್ರಿಯದರ್ಶನಃ ।
ಸ ಮುಹೂರ್ತಂ ಪ್ರತಿಭಯೋ ದಾರುಣಃ ಸಮಪದ್ಯತ ॥ ೮ ॥

ಯುವರಾಜನೂ, ತನ್ನ ಬಲವನ್ನು ಪ್ರಶಂಸಿಸುವವನೂ, ಪಿಂಗಲವರ್ಣದವನೂ, ಪ್ರಿಯದರ್ಶನನೂ ಆದ ಅವನು ಒಂದು ಮುಹೂರ್ತದ ಕಾಲ ಯುದ್ಧದಲ್ಲಿ ಭಯಂಕರನೂ ಮತ್ತು ದಾರುಣನೂ ಆಗಿದ್ದನು.

ಹ್ರಾದೇನ ಗಜಘಂಟಾನಾಂ ಜ್ಯಾಕ್ಷೇಪನಿನದೇನ ಚ ।
ಶಂಖಿತೂರ್ಯಪ್ರಣಾದೇನ ನಿನದೇನ ಚ ದಂತಿನಾಮ್ ।
ದ್ಯಾವಾಪೃಥಿವ್ಯೋರ್ವಿವರಂ ಸಾಂತರ್ದೇಶಂ ಸಮಾವೃಣೋತ್ ॥ ೯ ॥

ಗಜಗಳ ಘಂಟೆಗಳ ನಾದದಿಂದ, ಹೆದೆಯ ಆಕರ್ಷಣದ ನಾದದಿಂದ, ಶಂಖ-ತೂರ್ಯ ನಾದಗಳಿಂದ, ಗಜಗಳ ಬೃಂಹಣದಿಂದ ಅವನು ಭೂಮಿ ಮತ್ತು ಆಕಾಶದ ಮಧ್ಯಪ್ರದೇಶವನ್ನು ತುಂಬಿದನು.

ತಾನ್ ದೃಷ್ಟ್ವಾ ನಿಪತತೋ ನಾಗಾನ್ ಶಿಕ್ಷಿತೈಃ ಸಾಧು ಚೋದಿತಾನ್ ।
ಗೃಹೀತಹಸ್ತಾನ್ ಸಂರಬ್ಧಾನ್ ಸಪಕ್ಷಾನಿವ ಪರ್ವತಾನ್ ॥ ೧೦ ॥

ಸಿಂಹನಾದೇನ ಮಹತಾ ನರಸಿಂಹೋ ಧನಂಜಯಃ ।
ತಸ್ಯಾಚಲಧನಪ್ರಖ್ಯಂ ಪತಾಕಾಶತಸಂಕುಲಮ್ ॥ ೧೧ ॥

ಗಜಾನೀಕಮಮಿತ್ರಾಣಾಮಭಿತೋ ವ್ಯಧಮಚ್ಛರೈಃ ॥ ೧೨ ॥

ಸುಶಿಕ್ಷಿತರಾದ ಗಜಾರೋಹಿಗಳಿಂದ ಪ್ರೇರಿಸಲ್ಪಟ್ಟು, ತಮ್ಮ ಸೊಂಡಿಲುಗಳನ್ನು ಎತ್ತಿ, ರೆಕ್ಕೆಯುಳ್ಳ ಪರ್ವತಗಳಂತೆ ಸಿಟ್ಟಿನಿಂದ ಮೇಲೆ ಎರಗುತ್ತಿರುವ ಗಜಸೇನೆಯನ್ನು ನೋಡಿ, ನರಸಿಂಹನಾದ ಅರ್ಜುನನು ದೊಡ್ಡ ಸಿಂಹನಾದವನ್ನು ಮಾಡಿ ಪರ್ವತವನ್ನು ಮತ್ತು ಮೋಡವನ್ನು ಹೋಲುವ, ನೂರಾರು ಪತಾಕೆಗಳಿಂದ ಸಿಬಿಡವಾದ ಶತ್ರುಗಳ ಆ ದುಶ್ಶಾಸನನ ಗಜಸೇನೆಯನ್ನು ಎಲ್ಲ ಕಡೆಗಳಿಂದಲೂ ತನ್ನ ಬಾಣಗಳಿಂದ ನಾಶಗೊಳಿಸಿದನು.

ಮಹೋರ್ಮಿಣಮಿವೋದ್ಭೂತಂ ಕ್ಷುಬ್ಧನೇನ ಮಹಾರ್ಣವಮ್ ।
ಕಿರೀಟೀ ತದ್ ಗಜಾನೀಕಂ ಪ್ರಾವಿಶನ್ಕರೋ ಯಥಾ ॥ ೧೩ ॥

ದೊಡ್ಡ ಬಿರುಗಾಳಿಯಿಂದ ಎದ್ದ, ದೊಡ್ಡ ಅಲೆಗಳಿಂದ ಕೂಡಿದ ಮಹಾಸಾಗರವನ್ನು ಮೊಸಳೆಯು ಪ್ರವೇಶಿಸುವಂತೆ ಅರ್ಜುನನು ಆ ಗಜಸೇನೆಯನ್ನು ಪ್ರವೇಶಿಸಿದನು.

ಖಮಾಶ್ರಿತ ಇವಾದಿತ್ಯಃ ಪ್ರತಪನ್ ಯುಗಸಂಕ್ಷಯೇ ।
ದದೃಶೇ ದಿಕ್ಷು ಸರ್ವಾಸು ಪಾರ್ಥಃ ಪರಪುರಂಜಯಃ ॥ ೧೪ ॥

ಯುಗಸಂಕ್ಷಯದಲ್ಲಿ ಆಕಾಶದಲ್ಲಿ ಇದ್ದು ಪ್ರಜ್ವಲಿಸುವ ಸೂರ್ಯನಂತೆ ಶತ್ರುಗಳ ಪುರಂಜಯನಾದ ಅರ್ಜುನನು ಎಲ್ಲ ದಿಕ್ಕುಗಳಲ್ಲಿಯೂ ಕಂಡುಬಂದನು.

ಖುರಶಬ್ದೇನ ಚಾಶ್ವಾನಾಂ ನೇಮಿಶಬ್ದೇನ ತೇನ ಚ ।
ತೇನ ಚೋತ್ಕೃಷ್ಟಶಬ್ದೇನ ಜ್ಯಾನಿನಾದೇನ ತೇನ ಚ ॥ ೧೫ ॥

ನಾನಾವಾದಿತ್ರಶಬ್ದೇನ ಪಾಂಚಜನ್ಯಸ್ವನೇನ ಚ ।
ದೇವದತ್ತಸ್ಯ ಘೋಷೇಣ ಗಾಂಡೀವನಿನದೇನ ಚ ।
ಮಂದವೇಗತರಾ ನಾಗಾ ಬಭೂವುಃ ಸ್ತ್ರಸ್ತಚೇತಸಃ ॥ ೧೬ ॥

ಅಶ್ವಗಳ ಖುರಶಬ್ದದಿಂದ, ರಥಗಳ ಚಕ್ರಗಳ ಶಬ್ದದಿಂದ, ಸಿಂಹನಾದ ಶಬ್ದಗಳಿಂದ, ಕಿರುಚುವ ಶಬ್ದಗಳಿಂದ, ಹೆದೆಗಳ ಶಬ್ದಗಳಿಂದ, ಅನೇಕ ವಾದ್ಯಗಳ ಶಬ್ದದಿಂದ,

ಪಾಂಚಜನ್ಯದ ಶಬ್ದದಿಂದ, ದೇವದತ್ತ ಶಂಖದ ಘೋಷದಿಂದ ಮತ್ತು ಗಾಂಡೀವ ಧನುಸ್ಸಿನ ಶಬ್ದದಿಂದ ಆನೆಗಳು ಹೆದರಿ ಮಂದಗತಿಯುಳ್ಳವುಗಳಾದವು.

ಶರವ್ರಾತಮಯೀಂ ಸತ್ತ್ವೇ ವಿತತೇ ಸವ್ಯಸಾಚಿನಾ ।
ತೇ ಗಜಾಃ ಸಮಸೀದಂತ ಮಗ್ನಾಃ ಪಂಕಾರ್ಣವೇಷ್ವಿವ ॥ ೧೭ ॥

ಆರ್ಜುನನಿಂದ ವಿಸ್ತರಿಸಲ್ಪಟ್ಟ ಬಾಣ ಸಮೂಹಮಯವಾದ ಯಾಗದಲ್ಲಿ ಆ ಗಜಗಳು ಕೆಸರಿನ ಸಾಗರದಲ್ಲಿ ಮುಳುಗಿದಂತೆ ವಿಷಾದವನ್ನು ಹೊಂದಿದವು.

ಯುಗಪಚ್ಚ ಸಮಾವಿಷ್ಟೈಃ ಶರೈರ್ಗಾಂಡೀವಧನ್ವನಃ ।
ಆನೇಕಶತಸಾಹಸ್ರೈರ್ದುರ್ಮಾ ಮಧುಕರೈರಿವ ॥ ೧೮ ॥

ಪುಂಖಾವಶಿಷ್ಟೈರ್ಬಹುಭಿಃ ಶೋಣಿತೋತ್ಪೀಡವಾಹಿನಃ ।
ಆರಾವಂ ಪರಮಂ ಕೃತ್ವಾ ಸಪತಾಕಾಯುಧಧ್ವಜಾಃ ॥ ೧೯ ॥

ಸೋತ್ತರಾಯುಧಿನಃ ಪೇತುಃ ಛಿನ್ನಪಕ್ಷಾ ಇವಾದ್ರಯಃ ॥ ೨೦ ॥

ಆನೇಕ ಶತಸಹಸ್ರ ದುಂಬಿಗಳು ಮರವನ್ನು ಮುಚ್ಚಿದಂತೆ ಏಕಕಾಲದಲ್ಲಿ ಬರುತ್ತಿದ್ದ ಆರ್ಜುನನ ಪುಂಖವನ್ನು ಬಿಟ್ಟು ಉಳಿದ ಭಾಗವು ಶರೀರವನ್ನು ಪ್ರವೇಶ ಮಾಡಿದ ಅನೇಕ ಬಾಣಗಳಿಂದ ರತ್ನದ ಆಲಂಕಾರವನ್ನು ಧರಿಸಿದ ಪತಾಕೆಗಳು, ಆಯುಧಗಳು ಮತ್ತು ಧ್ವಜದಿಂದ ಕೂಡಿದ, ಆಯುಧವನ್ನು ಹಿಡಿದ, ಗಜಾರೋಹಿಗಳಿಂದ ಕೂಡಿದ ಗಜಗಳು ದೊಡ್ಡ ದುಃಖದ ನಾದವನ್ನು ಮಾಡಿ ರೆಕ್ಕೆಗಳು ಕತ್ತರಿಸಿದ ಪರ್ವತಗಳಂತೆ ಬಿದ್ದವು.

ಅಪರೇ ದಂತಮೂಲೇಷ್ವಕುಂಭೇಷು ಚ ಕರೇಷು ಚ ।
ಶರೈಃ ಸಮರ್ಪಿತಾ ನಾಗಾಃ ಕ್ರೌಂಚವದ್ ವ್ಯನದನ್ ಮುಹುಃ ॥ ೨೧ ॥

ಇನ್ನು ಕೆಲವು ಗಜಗಳು ದಂತಮೂಲದಲ್ಲಿಯೂ, ತುಟಿಯಲ್ಲಿಯೂ, ಕುಂಭಸ್ಥಲದಲ್ಲಿಯೂ, ಸೊಂಡಿಲುಗಳಲ್ಲಿಯೂ ಬಾಣಗಳಿಂದ ಹೊಡೆಯಲ್ಪಟ್ಟ ಕ್ರೌಂಚ ಪಕ್ಷಿಗಳಂತೆ ವೇದನೆಯಿಂದ ಮತ್ತೆ ಮತ್ತೆ ನಾದವನ್ನು ಮಾಡಿದವು.

ಗಜಸ್ಕಂಧಗತಾನಾಂ ಚ ಪುರುಷಾಣಾಂ ಕಿರೀಟಿನಾ ।
ಛಿದ್ಯಂತೇ ಚೋತ್ತಮಾಂಗಾನಿ ಭಲ್ಲೈಃ ಸನ್ನತಪರ್ವಭಿಃ ॥ ೨೨ ॥

ಅರ್ಜುನನು ಗಜಸ್ಕಂಧದಲ್ಲಿದ್ದ ಪುರುಷರ ಶಿರಸ್ಸುಗಳನ್ನು ಬಾಗಿದ ತುದಿಯುಳ್ಳ ಭಲ್ಲಗಳಿಂದ ಕತ್ತರಿಸಿದನು.

ಸಕುಂಡಲಾನಾಂ ಪತತಾಂ ಶಿರಸಾಂ ಪೃಥಿವೀತಳೇ ।
ಪದ್ಮಾನಾಮಿವ ಸಂಘಾತೈಃ ಪಾರ್ಥಶಕ್ತೇ ನಿವೇದನಮ್ ॥ ೨೩ ॥

ಭೂಮಿಯ ಮೇಲೆ ಬೀಳುತ್ತಿದ್ದ, ಕುಂಡಲಗಳನ್ನು ಧರಿಸಿದ ಶಿರಸ್ಸುಗಳಿಂದ ಅರ್ಜುನನು ಭೂಮಿಯನ್ನು ಪದ್ಮಗಳ ಸಮೂಹದಿಂದಲೋ ಎಂಬಂತೆ ಹರಡಿದನು.

ಯಂತ್ರಬದ್ಧಾ ವಿಕವಚಾ ವ್ಯಂಸಾಶ್ಚ ರುಧಿರೋಕ್ಷಿತಾಃ ।
ಭ್ರಮಮಾಣೇಷು ನಾಗೇಷು ಮನುಷ್ಯಾ ವಿಲಲಂಬಿರೇ ॥ ೨೪ ॥

ಯಂತ್ರಕ್ಕೆ ಸಿಲುಕಿದ, ಕವಚವನ್ನು ಕಳೆದುಕೊಂಡ, ಭುಜಗಳನ್ನು ಕಳೆದುಕೊಂಡ, ರಕ್ತಸಿಕ್ತರಾದ ಮನುಷ್ಯರು ಕೂಗುತ್ತಿದ್ದ ಗಜಗಳಲ್ಲಿ ನೇತಾಡುತ್ತಿದ್ದರು.

ಕೇಚಿದೇಕೇನ ಬಾಣೇನ ಸುಮುಕ್ತೇನ ಪತತ್ರಿಣಾ ।
ದ್ವೌ ತ್ರಯಶ್ಚ ವಿನಿರ್ಭಿನ್ನಾ ನಿಪೇತುಃ ಪೃಥಿವೀತಳೇ ॥ ೨೫ ॥

ಕೆಲವು ಗಜಗಳು ಚೆನ್ನಾಗಿ ಪ್ರಯೋಗಿಸಿದ ಪತ್ರವುಳ್ಳ ಒಂದೇ ಬಾಣದಿಂದ ಭೂತಳದಲ್ಲಿ ಬಿದ್ದವು. ಕೆಲವು ಬಾರಿ ಒಂದೇ ಬಾಣದಿಂದ ಎರಡು-ಮೂರು ಗಜಗಳು ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದವು.

ಅಪರೇ ಮದಸಂರಬ್ಧಾ ಮಾತಂಗಾಃ ಪರ್ವತೋಪಮಾಃ ।
ಪೇತುಃ ಪೃಥಿವ್ಯಾಂ ನಿಹತಾ ವಜ್ರರುಗ್ಣಾ ಇವಾಚಲಾಃ ॥ ೨೬ ॥

ಮದದಿಂದಲೂ ಮತ್ತು ಸಿಟ್ಟಿನಿಂದಲೂ ಕೂಡಿದಂತಹ ಪರ್ವತಸದೃಶವಾದ ಇನ್ನು ಕೆಲವು ಗಜಗಳು ವಜ್ರಾಯುಧದ ಹೊಡೆತಕ್ಕೆ ಸಿಲುಕಿದ ಪರ್ವತಗಳಂತೆ ಅರ್ಜುನನಿಂದ ಹೊಡೆಯಲ್ಪಟ್ಟು ಭೂಮಿಯ ಮೇಲೆ ಬಿದ್ದವು.

ಆತಿವಿದ್ಧಾಶ್ಚ ನಾರಾಚೈರ್ವಮಂತೋ ರುಧಿರಂ ಮುಖೈಃ ।
ಸಾರೋಹಾ ನ್ಯಪತನ್ನುರ್ವ್ಯಾಂ ದ್ರುಮವಂತ ಇವಾಚಲಾಃ ॥ ೨೭ ॥

ಅರ್ಜುನನ ನಾರಾಚಗಳಿಂದ ಗಾಢವಾಗಿ ಹೊಡೆಯಲ್ಪಟ್ಟು, ಮುಖಗಳಿಂದ ರಕ್ತವನ್ನು ಕಾರುತ್ತಾ, ಗಜಾರೋಹಿಗಳ ಸಹಿತವಾಗಿ ವೃಕ್ಷಸಹಿತವಾದ ಪರ್ವತಗಳಂತೆ ಭೂಮಿಯ ಮೇಲೆ ಬಿದ್ದವು.

ತತೋಽರ್ಜುನೋ ಭೃಶಂ ಕ್ರುದ್ಧಃ ಪ್ರದಹನ್ನಿವ ತೇಜಸಾ ।
ವವರ್ಷ ಶರವರ್ಷಾಣಿ ಯೋಧಾನಾಮನಿವರ್ತಿನಾಮ್ ॥ ೨೮ ॥

ಆನಂತರ ಅರ್ಜುನನು ಬಹಳ ಕೋಪಗೊಂಡು ತನ್ನ ತೇಜಸ್ಸಿನಿಂದ ಶತ್ರುಸೈನ್ಯವನ್ನು ಸುಡುವವನಂತೆ ಅನಿವರ್ತಿಗಳಾದ ಯೋಧರ ಮೇಲೆ ಬಾಣಗಳ ಮಳೆಯನ್ನು ಕರೆದನು.

ಮೌರ್ವೀಂ ಧನುರ್ಧ್ವಜಂ ಚೈವ ಯುಗಮಕ್ಷಮವಸ್ಕರಮ್ ।
ರಥಿನಾಂ ಕುಟ್ಟಯಾಮಾಸ ಭಲ್ಲೈಃ ಸನ್ನತಪರ್ವಭಿಃ ॥ ೨೯ ॥

ರಥಿಕರ ಹೆದೆಗಳು, ಧನುಸ್ಸುಗಳು, ಧ್ವಜಗಳು, ನೊಗಗಳು, ಅಕ್ಷಗಳು ಮತ್ತು ಅವಸ್ಕರ (ಸಲಕರಣೆ)ಗಳನ್ನು ಬಾಗಿದ ತುದಿಯುಳ್ಳ ಭಲ್ಲಗಳಿಂದ ಪುಡಿಮಾಡಿದನು.

ನ ಸಂದಧಾನಶ್ಚಾಪಸ್ಯ ನ ವಿಮುಂಚನ್ ನ ಚೋದ್ಧರನ್ ।
ಮಂಡಲೇನೈವ ಧನುಷಾ ನೃತ್ಯನ್ ಪಾರ್ಥಃ ಸ್ಮ ದೃಶ್ಯತೇ ॥ ೩೦ ॥

ಅವನು ಬತ್ತಳಿಕೆಯಿಂದ ಬಾಣವನ್ನು ಎತ್ತುವುದಾಗಲೀ, ಧನುಸ್ಸಿನಲ್ಲಿ ಹೂಡುವುದಾಗಲೀ, ಅದನ್ನು ಪ್ರಯೋಗಿಸುವುದಾಗಲೀ ಕಾಣುತ್ತಿರಲಿಲ್ಲ. ಯಾವಾಗಲೂ ಮಂಡಲಾಕಾರವಾದ ಅವನ ಧನುಸ್ಸು ಮತ್ತು ನರ್ತನ ಮಾಡುತ್ತಿದ್ದ ಅರ್ಜುನನು ಕಾಣುತ್ತಿದ್ದವು.

ಆತಿವಿದ್ಧಾಶ್ಚ ನಾರಾಚೈರ್ವಮಂತೋ ರುಧಿರಂ ಮುಖೈಃ ।
ಮುಹೂರ್ತಾನ್ನ್ಯಪತನ್ನೇ ವಾರಣಾ ವಸುಧಾತಳೇ ॥ ೩೧ ॥

ಇನ್ನು ಕೆಲವು ಗಜಗಳು ನಾರಾಚಗಳಿಂದ ಗಾಢವಾಗಿ ಹೊಡೆಯಲ್ಪಟ್ಟು, ಮುಖಗಳಿಂದ ರಕ್ತವನ್ನು ಕಾರುತ್ತಾ, ಒಂದು ಮುಹೂರ್ತದ ನಂತರ ಭೂತಳದಲ್ಲಿ ಬಿದ್ದವು.

ಉತ್ಥಿತಾನ್ಯಗಣೇಯಾನಿ ಕಬಂಧಾನಿ ಸಮಂತತಃ ।
ಅದೃಶ್ಯಂತ ಮಹಾರಾಜ ತಸ್ಮಿನ್ ಪರಮಸಂಕುಲೇ ॥ ೩೨ ॥

ಎಲೈ ಮಹಾರಾಜನೇ, ಆ ಪರಮಸಂಕುಲ ಯುದ್ಧದಲ್ಲಿ ಯೋಧರ ಅಸಂಖ್ಯಾತವಾದ ಕಬಂಧಗಳು (ರುಂಡಗಳು) ಎಲ್ಲ ಕಡೆಗಳಲ್ಲಿಯೂ ಉಂಟಾಗಿರುವುದು ಕಂಡು ಬರುತ್ತಿದ್ದಿತು.

ಸಚಾಪಾಃ ಸಾಂಗುಲತ್ರಾಣಾಃ ಸಖಡ್ಗಾಃ ಸಾಂಗದಾ ರಣೇ ।
ಅದೃಶ್ಯಂತ ಭುಜಾಶ್ಚಿನ್ನಾ ಹೇಮಾಭರಣಭೂಷಿತಾಃ ॥ ೩೩ ॥

ಬಾಣವನ್ನು ಹಿಡಿದ, ಹಸ್ತರಕ್ಷಣೆಯನ್ನು ಹೊಂದಿದ, ಖಡ್ಗವನ್ನು ಹಿಡಿದ, ಅಂಗದ ಸಹಿತವಾದ, ಹೇಮಾಭರಣದಿಂದ ಭೂಷಿತವಾದ ಯೋಧರ ಕತ್ತರಿಸಲ್ಪಟ್ಟ ಭುಜಗಳು ರಣರಂಗದಲ್ಲಿ ಕಂಡುಬಂದವು.

ಅವಸ್ಕರೈರಧಿಷ್ಠಾನೈರೀಷಾದಂಡಕಬಂಧುರೈಃ ।
ಚಕ್ರೈರ್ವಿಮಥಿತೈರಕ್ಷೈರ್ಭಗ್ನೈಶ್ಚ ಬಹುಧಾ ಯುಗೈಃ ॥ ೩೪ ॥

ಚರ್ಮಚಾಪಧರೈಶ್ಚೈವ ವ್ಯವಕೀರ್ಣೈಸ್ತತಸ್ತತಃ ।
ಸ್ರಗ್ಭಿರಾಭರಣೈರ್ವಸ್ತ್ರೈಃ ಪತಿತೈಶ್ಚ ಮಹಾಧ್ವಜೈಃ ॥ ೩೫ ॥

ನಿಹತೈರ್ವಾರಣೈರಶ್ವೈಃ ಕ್ಷತ್ರಿಯೈಶ್ಚ ನಿಪಾತಿತೈಃ ।
ಅದೃಶ್ಯತ ಮಹೀ ತತ್ರ ದಾರುಣಾಪ್ರಿಯದರ್ಶನಾ ॥ ೩೬ ॥

ರಥದ ಅವಸ್ಕರ ಭಾಗಗಳು, ಅಧಿಷ್ಠಾನಗಳು (ನಿಲ್ಲುವ ಸ್ಥಳಗಳು), ಮೂಕಿಗಳು, ಬಂದರುಗಳು, ಚಕ್ರಗಳು, ಆಕ್ಷಗಳು ಮತ್ತು ನೊಗಗಳು ಬಹಳವಾಗಿ ಭಗ್ನವಾಗಿ, ಚರ್ಮವನ್ನು ಮತ್ತು ಧನುಸ್ಸನ್ನು ಹಿಡಿದ, ಒಳ್ಳೆಯ ಮಾಲೆಗಳನ್ನು, ಆಭರಣವನ್ನು ಮತ್ತು ವಸ್ತ್ರವನ್ನು ಧರಿಸಿದ, ನೆಲದ ಮೇಲೆ ಬಿದ್ದ ಯೋಧರಿಂದಲೂ ಮತ್ತು ರಥದ ಮಹಾಧ್ವಜಗಳಿಂದಲೂ, ನಿಹತವಾದ ಗಜಾಶ್ವಗಳಿಂದಲೂ, ಕೆಳಗುರುಳಿದ ಕ್ಷತ್ರಿಯರಿಂದಲೂ ತುಂಬಿದ ಭೂಮಿಯು ದಾರುಣವೂ, ನೋಡಲು ಅಪ್ರಿಯವಾಗಿಯೂ ಕಂಡುಬಂದಿತು.

ದುಃಶಾಸನಬಲಂ ಸರ್ವಂ ವಧ್ಯಮಾನಂ ಕಿರೀಟಿನಾ ।
ಸಂಪ್ರಾದ್ರವನ್ಮಹಾರಾಜ ವ್ಯಥಿತಂ ಹತನಾಯಕಮ್ ॥ ೩೭ ॥

ಎಲೈ ಮಹಾರಾಜನೇ, ಅರ್ಜುನನಿಂದ ವಧಿಸಲ್ಪಡುತ್ತಿದ್ದ ದುಶ್ಶಾಸನ ಸೈನ್ಯವೆಲ್ಲವೂ ನಾಯಕರನ್ನು ಕಳೆದುಕೊಂಡು ವ್ಯಥೆಯಿಂದ ಓಡಿಹೋಯಿತು.

ಏವಂ ಬಲೇ ದ್ರುತೇ ಯಾತೇ ರಾಜಪುತ್ರಂ ಮಹಾರಥಮ್ ।
ವಿವ್ಯಾಧ ದಶಭಿರ್ಬಾಣೈಃ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೩೮ ॥

ಹೀಗೆ ನಿನ್ನ ಬಲವೆಲ್ಲವೂ ಓಡಿಹೋಗುತ್ತಿರಲು ಅರ್ಜುನನು ರಾಜಪುತ್ರನೂ, ಮಹಾರಥನೂ ಆದ ದುಶ್ಶಾಸನನ ಮೇಲೆ ಹತ್ತುಬಾಣಗಳನ್ನು ಪ್ರಯೋಗಿಸಿ ನಿಲ್ಲು, ನಿಲ್ಲು ಎಂದು ಹೇಳಿದನು.

ಅರ್ಜುನಃ

ಜೀವಿತೇನ ಕಥಂ ಗಂತಾ ದುರುಕ್ತಂ ಯತ್ ತವಾದ್ಯ ಮೇ ।
ತದ್ ವಾಕ್ಯಸದೃಶಂ ಕರ್ಮ ಕುರು ತ್ವಂ ಯದಿ ಮನ್ಯಸೇ ॥ ೩೯ ॥

ಅರ್ಜುನ– ನೀನು ಜೀವ ಸಹಿತವಾಗಿ ಹೇಗೆ ಹೋಗುವಿ? ನೀನು ಈ ದಿನ ಎಂತಹ ದುರ್ವಚನಗಳನ್ನು ಮಾತನಾಡಿದ್ದೀಯೋ ಅದಕ್ಕೆ ಸದೃಶವಾದ ಕಾರ್ಯವನ್ನು ನಿನಗೆ ಯೋಗ್ಯತೆ ಇದ್ದರೆ ಮಾಡು.

ಸಂಜಯಃ

ಏವಮುಕ್ತ್ವಾ ತತೋ ರಾಜನ್ ಪಾರ್ಥಃ ಪಾರ್ಥಿವಮರ್ದನಃ ।
ಭೃಶಂ ಕ್ರುದ್ಧೋ ಮಹಾರಾಜ ಅವಿಧ್ಯತ್ ತನಯಂ ತವ ॥ ೪೦ ॥

ಸಂಜಯ– ಎಲೈ ಮಹಾರಾಜನೇ, ಪಾರ್ಥಿವಮರ್ದನನಾದ ಪಾರ್ಥನು ಹೀಗೆ ಹೇಳಿ, ಬಹಳ ಕೋಪಗೊಂಡು ನಿನ್ನ ಪುತ್ರನನ್ನು ಬಾಣಗಳಿಂದ ಹೊಡೆದನು.

ತತೋ ದುಃಶಾಸನಸ್ತ್ರಸ್ತಃ ಸಹಾನೀಕಃ ಶರಾರ್ದಿತಃ ।
ದ್ರೋಣಂ ತ್ರಾತಾರಮಾಕಾಂಕ್ಷನ್ ಶಕಟವ್ಯೂಹಮಭ್ಯಗಾತ್ ॥ ೪೧ ॥

ಆಗ ಅರ್ಜುನನ ಬಾಣಗಳಿಂದ ಪೀಡಿತನಾದ ದುಶ್ಶಾಸನನು ಹೆದರಿ ದ್ರೋಣರಿಂದ ರಕ್ಷಣೆಯನ್ನು ಬಯಸುತ್ತಾ, ತನ್ನ ಸೈನ್ಯದ ಜೊತೆಯಲ್ಲಿ ಶಕಟವ್ಯೂಹಕ್ಕೆ ಹೊರಟು ಹೋದನು.

ದುಃಶಾಸನಬಲಂ ಹತ್ವಾ ಸವ್ಯಸಾಚೀ ಪರಂತಪಃ ।
ಸಿಂಧುರಾಜಂ ಪರೀಪ್ಸನ್ ವೈ ದ್ರೋಣಾನೀಕಮುಪಾದ್ರವತ್ ॥ ೪೨ ॥

ಪರಂತಪನಾದ ಸವ್ಯಸಾಚಿಯು ದುಶ್ಶಾಸನ ಸೈನ್ಯವನ್ನು ಕೊಂದು ಸೈಂಧವನನ್ನು ಹುಡುಕುತ್ತಾ ದ್ರೋಣರ ಸೇನೆಯ ಕಡೆಗೆ ಓಡಿದನು.

ಸ ತು ದ್ರೋಣಂ ಸಮಾಸಾದ್ಯ ವ್ಯೂಹಸ್ಯ ಪ್ರಮುಖೇ ಸ್ಥಿತಮ್ ।
ಕೃತಾಂಜಲಿರಿದಂ ವಾಕ್ಯಂ ಕೃಷ್ಣಾನುಮತೇಽಬ್ರವೀತ್ ॥ ೪೩ ॥

ಅವನಾದರೂ ವ್ಯೂಹದ ಮುಂಭಾಗದಲ್ಲಿದ್ದ ದ್ರೋಣರನ್ನು ಸಮೀಪಿಸಿ, ಕೃಷ್ಣನ ಅಭಿಪ್ರಾಯದಂತೆ ಅವರಿಗೆ ಕೈಗಳನ್ನು ಮುಗಿದು ಈ ಮಾತನ್ನಾಡಿದನು.

ಶಿವೇನ ಧ್ಯಾಹಿ ಮಾಂ ಬ್ರಹ್ಮನ್ ಸ್ವಸ್ತಿ ಚೈವ ವದಸ್ವ ಮೇ ।
ತವ ಪ್ರಸಾದಾದಿಚ್ಛಾಮಿ ಪ್ರವೇಷ್ಟುಂ ದುರ್ಭಿದಾಂ ಚಮೂಮ್॥ ೪೪ ॥

ಬ್ರಾಹ್ಮಣರೇ, ನನಗೆ ಮಂಗಳವನ್ನು ಧ್ಯಾನ ಮಾಡಿ. ಶುಭವಾಗಲಿ ಎಂದು ಹೇಳಿ. ನಿಮ್ಮ ಅನುಗ್ರಹದಿಂದ ದುರ್ಭೇದ್ಯವಾದ ಈ ಸೈನ್ಯವನ್ನು ನಾನು ಪ್ರವೇಶಿಸಲು ಬಯಸುತ್ತೇನೆ.

ಭವಾನ್ ಪಿತೃಸಮೋ ಮಹ್ಯಂ ಧರ್ಮರಾಜಸಮೋಽಪಿ ಚ ।
ಧೌಮ್ಯಕೃಷ್ಣಸಮಶ್ಚೈವ ಸತ್ಯಮೇತದ್ ಬ್ರವೀಮಿ ತೇ ॥ ೪೫ ॥

ನೀವು ನನಗೆ ನನ್ನ ತಂದೆಗೆ ಸಮಾನರಾದವರು ಮತ್ತು ಧರ್ಮರಾಜನಿಗೆ ಸಮರಾದವರು. ಧೌಮ್ಯರಿಗೂ ಮತ್ತು ಕೃಷ್ಣರಿಗೂ ಸಮರಾದವರು. ಈ ಮಾತನ್ನು ನಿಮಗೆ ಸತ್ಯವಾಗಿ ಹೇಳುತ್ತಿದ್ದೇನೆ.

ಅಶ್ವತ್ಥಾಮಾ ಯಥಾ ತಾತ ರಕ್ಷಣೀಯಸ್ತವಾऽನಘ ।
ತಥಾಹಮಪಿ ತೇ ರಕ್ಷ್ಯಃ ಸದೈವ ದ್ವಿಜಸತ್ತಮ ॥ ೪೬ ॥

ಎಲೈ ತಂದೆಯೇ, ಆನಘರೇ, ಅಶ್ವತ್ಥಾಮರು ಹೇಗೆ ನಿಮ್ಮಿಂದ ರಕ್ಷಿಸಲ್ಪಡಬೇಕಾದವರೋ ಎಲೈ ದ್ವಿಜಶ್ರೇಷ್ಠರೇ, ಹಾಗೆಯೇ ನಾನೂ ಸಹ ನಿಮ್ಮಿಂದ ರಕ್ಷಿಸಲ್ಪಡಬೇಕಾದವನು.

ಭವತ್ಪ್ರಸಾದಾದಿಚ್ಛೇಯಂ ಸಿಂಧುರಾಜಾನಮಾಹವೇ ।
ನಿಹಂತುಂ ದ್ವಿಪದಾಂ ಶ್ರೇಷ್ಠ ಪ್ರತಿಜ್ಞಾಂ ರಕ್ಷ ಮೇ ಪ್ರಭೋ ॥ ೪೭ ॥

ನಿಮ್ಮ ಅನುಗ್ರಹದಿಂದ ನಾನು ಸೈಂಧವನನ್ನು ಯುದ್ಧದಲ್ಲಿ ಕೊಲ್ಲಲು ಬಯಸುತ್ತೇನೆ. ಎಲೈ ನರಶ್ರೇಷ್ಠರೇ, ಪ್ರಭುಗಳೇ, ನನ್ನ ಪ್ರತಿಜ್ಞೆಯನ್ನು ರಕ್ಷಿಸಿ.

ಸಂಜಯಃ

ಏವಮುಕ್ತಸ್ತದಾऽऽಚಾರ್ಯಃ ಪ್ರತ್ಯುವಾಚಾರ್ಜುನಂ ಸ್ಮಯನ್ ।
ಮಾಮಜಿತ್ವಾ ನ ಬೀಭತ್ಸೋ ಶಕ್ಯಂ ಪ್ರಾಪ್ತುಂ ಜಯದ್ರಥಮ್ ॥ ೪೮ ॥

ಸಂಜಯ– ಹೀಗೆ ಹೇಳಲ್ಪಟ್ಟ ದ್ರೋಣಾಚಾರ್ಯರು ಅರ್ಜುನನನ್ನು ಕುರಿತು ನಗುತ್ತಾ- ಎಲೈ ಬೀಭತ್ಸುವೇ, ನನ್ನನ್ನು ಗೆಲ್ಲದೆ ನೀನು ಜಯದ್ರಥನನ್ನು ಸಮೀಪಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಸಂಜಯಃ

ಏತಾವದುಕ್ತ್ವಾ ತಂ ದ್ರೋಣಃ ಶರವ್ರಾತೈರವಾಕಿರತ್ ।
ಸರಥಾಶ್ವಧ್ವಜಂ ಬಾಣೈಃ ಪ್ರಹಸನ್ ಸಹಸಾರಥಿಮ್ ॥ ೪೯ ॥

ಸಂಜಯ– ಈ ಮಾತನ್ನು ಹೇಳಿ ದ್ರೋಣರು ನಗುತ್ತಾ ರಥಾಶ್ವ-ಧ್ವಜಗಳಿಂದಲೂ ಸಾರಥಿಯಿಂದಲೂ ಸಹಿತನಾದ ಅರ್ಜುನನ ಮೇಲೆ ಬಾಣಗಳ ಸಮೂಹವನ್ನು ಸುರಿಸಿದರು.

ತತೋऽರ್ಜುನಃ ಶರವ್ರಾತಾನ್ ದ್ರೋಣಸ್ಯಾವಾರ್ಯ ಸಾಯಕೈಃ ।
ದ್ರೋಣಮಭ್ಯರ್ದಯದ್ ಬಾಣೈಘೋರರೂಪೈರ್ಮಹತ್ತರೈಃ ॥ ೫೦ ॥

ಆಗ ಅರ್ಜುನನು ತನ್ನ ಬಾಣಗಳಿಂದ ದ್ರೋಣರ ಬಾಣಸಮೂಹಗಳನ್ನು ನಿವಾರಿಸಿ ಘೋರರೂಪವಾದ ದೊಡ್ಡ ಬಾಣಗಳಿಂದ ದ್ರೋಣರನ್ನು ಅರ್ದಿಸಿದನು.

ವಿವ್ಯಾಧ ಚ ರಣೇ ದ್ರೋಣಮನುಮಾನ್ಯ ವಿಶಾಂಪತೇ ।
ಕ್ಷತ್ರಧರ್ಮಂ ಸಮಾಸ್ಥಾಯ ನವಭಿಃ ಸಾಯಕೈಃ ಪುನಃ ॥ ೫೧ ॥

ಎಲೈ ರಾಜನೇ, ರಣರಂಗದಲ್ಲಿ ದ್ರೋಣರಿಗೆ ಗೌರವವನ್ನು ಕೊಟ್ಟು ಕ್ಷತ್ರಿಯ ಧರ್ಮವನ್ನು ಆಶ್ರಯಿಸಿದವನಾಗಿ, ಪುನಃ ಅವರ ಮೇಲೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ತಸ್ಯೇಷೂನಿಷುಭಿಶ್ಛಿತ್ತ್ವಾ ದ್ರೋಣೋ ವಿವ್ಯಾಧ ತಾವುಭೌ ।
ವಿಷಾಗ್ನಿಜ್ವಲನಪ್ರಖ್ಯೈರಿಷುಭಿಃ ಕೃಷ್ಣಪಾಂಡವೌ ।
ಇಯೇಷ ಪಾಂಡವಸ್ಯಾಸ್ಯ ಛೇತ್ತುಂ ಬಾಣೈಃ ಶರಾಸನಮ್ ॥ ೫೨ ॥

ದ್ರೋಣರು ಅರ್ಜುನನ ಬಾಣಗಳನ್ನು ತಮ್ಮ ಬಾಣಗಳಿಂದ ಕತ್ತರಿಸಿ, ಕೃಷ್ಣಾರ್ಜುನರಿಬ್ಬರನ್ನೂ ವಿಷಾಗ್ನಿ-ಜ್ವಾಲೆಗಳಿಗೆ ಸಮವಾದ ಬಾಣಗಳಿಂದ ಅರ್ದಿಸಿದರು. ಪಾಂಡವನಾದ ಅರ್ಜುನನು ಅವರ ಧನುಸ್ಸನ್ನು ತನ್ನ ಬಾಣಗಳಿಂದ ಕತ್ತರಿಸಲು ಇಚ್ಛಿಸಿದನು.

ತಸ್ಯ ಚಿಂತಯತಸ್ತ್ವೇವ ಫಲ್ಗುನಸ್ಯ ಮಹಾತ್ಮನಃ
ದ್ರೋಣಃ ಶರೈರಸಂಭ್ರಾಂತೋ ಜ್ಯಾಂ ಚಚ್ಛೇದಾಶು ವೀರ್ಯವಾನ್ ॥

ಮಹಾತ್ಮನಾದ ಅರ್ಜುನನು ಹಾಗೆ ಯೋಚಿಸುತ್ತಿರುವಾಗಲೇ ಪರಾಕ್ರಮಶಾಲಿಗಳಾದ ದ್ರೋಣರು ಯಾವ ಗಾಬರಿಯೂ ಇಲ್ಲದೆ ತಮ್ಮ ಬಾಣಗಳಿಂದ ಅರ್ಜುನನ ಧನುಸ್ಸಿನ ಹೆದೆಯನ್ನು ಶೀಘ್ರವಾಗಿ ಕತ್ತರಿಸಿದರು.

ವಿವ್ಯಾಧ ಚ ಹಯಾನಸ್ಯ ಧ್ವಜಂ ಸಾರಥಿಮೇವ ಚ ।
ಅರ್ಜುನಂ ಚ ಶರೈರ್ದ್ರೋಣಃ ಸ್ಮಯಮಾನೋಽಭ್ಯವಾಕಿರತ್ ॥ ೫೪ ॥

ದ್ರೋಣರು ನಗುತ್ತಲೇ ಅವನ ಅಶ್ವಗಳನ್ನು, ಧ್ವಜವನ್ನು, ಸಾರಥಿಯನ್ನು ಮತ್ತು ಅವನನ್ನು ತಮ್ಮ ಬಾಣಗಳಿಂದ ಹಿಂಸೆಗೊಳಿಸಿದರು.

ಏತಸ್ಮಿನ್ನಂತರೇ ಪಾರ್ಥಃ ಸಜ್ಯಂ ಕೃತ್ವಾ ಮಹದ್ಧನುಃ ।
ವಿಶೇಷಯಿಷ್ಯನ್ನಾಚಾರ್ಯಂ ಸರ್ವಾಸ್ತ್ರವಿದುಷಾಂ ವರಮ್ ॥ ೫೫ ॥

ಗೃಹೀತ್ವಾ ಷಟ್ಶತಾನ್ ಬಾಣಾನ್ ಮುಮೋಚೈಕಮಿವ ದ್ರುತಮ್ ॥೫೬॥

ಈ ಮಧ್ಯದಲ್ಲಿಯೇ ಅರ್ಜುನನು ತನ್ನ ದೊಡ್ಡ ಧನುಸ್ಸಿಗೆ ಪುನಃ ಹೆದೆಯೇರಿಸಿ, ಸರ್ವಾಸ್ತ್ರವೇತ್ತರಲ್ಲಿ ಶ್ರೇಷ್ಠರಾದ ತನ್ನ ಗುರುಗಳನ್ನೂ ಮೀರಿಸುವವನಾಗಿ ಆರುನೂರು ಬಾಣಗಳನ್ನು ತೆಗೆದುಕೊಂಡು ಒಂದೇ ಬಾಣದಂತೆ ಶೀಘ್ರವಾಗಿ ಅದನ್ನು ದ್ರೋಣರ ಮೇಲೆ ಪ್ರಯೋಗಿಸಿದನು (ಗಾಂಡೀವ ಧನುಸ್ಸಿನ ಹೆದೆಯನ್ನು ಕತ್ತರಿಸಿದರೆ ಆದು ಪುನಃ ತಾನೇ ಬೆಳೆಯುತ್ತದೆ. ಮತ್ತೊಮ್ಮೆ ಕಟ್ಟುವುದಷ್ಟೇ ಕೆಲಸ - ವಾದಿರಾಜರು).

ಪುನಃ ಸಪ್ತಶತಾನನ್ಯಾನ್ ಸಹಸ್ರಂ ಚಾನಿವರ್ತಿನಾಮ್ ।
ಚಿಕ್ಷೇಪಾಯುತಶಶ್ಚಾನ್ಯಾನ್ ತೇऽಘ್ನನ್ ದ್ರೋಣಸ್ಯ ತಾಂ ಚಮೂಮ್ ॥

ಪುನಃ ಹಿಂದಿರುಗದಿರುವ ಏಳು ನೂರು ಬಾಣಗಳನ್ನು, ಅನಂತರ ಸಹಸ್ರ ಬಾಣಗಳನ್ನು, ಅನಂತರ ಬೇರೆ ಹತ್ತು ಸಹಸ್ರ ಬಾಣಗಳನ್ನು ಪ್ರಯೋಗಿಸಿದನು. ಅವು ದ್ರೋಣರ ಸೈನ್ಯವನ್ನು ಸಂಹಾರ ಮಾಡಿದವು.

ತೈಃ ಸಮ್ಯಗ್ಯೆರ್ಬಲಿನಾ ಕೃತಿನಾ ಚಿತ್ರಯೋಧಿನಾ ।
ಮನುಷ್ಯವಾಜಿಮಾತಂಗಾ ವಿದ್ಧಾಃ ಪೇತುರ್ಗತಾಸವಃ ॥ ೫೮ ॥

ಬಲಿಷ್ಠನೂ, ಪಳಗಿದ ಹಸ್ತವುಳ್ಳವನೂ, ವಿಚಿತ್ರವಾಗಿ ಯುದ್ಧವನ್ನು ಮಾಡುವವನೂ ಆದ ಅವನಿಂದ ಚೆನ್ನಾಗಿ ಪ್ರಯೋಗಿಸಲ್ಪಟ್ಟ ಬಾಣಗಳಿಂದ ಮನುಷ್ಯ-ಗಜ-ಅಶ್ವಗಳು ಹೊಡೆಯಲ್ಪಟ್ಟು ಪ್ರಾಣಗಳನ್ನು ಕಳೆದುಕೊಂಡು ಬಿದ್ದವು.

ವಿಸೂತಾಶ್ವಧ್ವಜಾಃ ಪೇತುಃ ಸಂಛಿನ್ನಾಯುಧಜೀವಿತಾಃ ।
ರಥಿನೋ ರಥಮುಖ್ಯೇಭ್ಯಃ ಸಹಸಾ ಬಾಣಪೀಡಿತಾಃ ॥ ೫೯ ॥

ಸೂತ-ಅಶ್ವಗಳು-ಧ್ವಜಗಳನ್ನು ಕಳೆದುಕೊಂಡು ತಮ್ಮ ಆಯುಧಗಳು ಮತ್ತು ಜೀವಿತವು ಕತ್ತರಿಸಲ್ಪಟ್ಟು, ಅರ್ಜುನನ ಬಾಣಪೀಡಿತರಾದ ರಥಶ್ರೇಷ್ಠರು ತಮ್ಮ ಶ್ರೇಷ್ಠವಾದ ರಥಗಳಿಂದ ತಕ್ಷಣದಲ್ಲಿಯೇ ಬಿದ್ದರು.

ಚೂರ್ಣಿತಾಃ ಕ್ಷಿಪ್ತದಗ್ಧಾಂಗಾ ವಜ್ರಾನಿಲಹುತಾಶನೈಃ ।
ತುಲ್ಯರೂಪಾ ದ್ವಿಪಾಃ ಪೇತುರ್ಗಿರ್ಯಗ್ರಾಂಬುದವರ್ಷ್ಮಣಃ ॥ ೬೦ ॥

ವಜ್ರಾಯುಧ, ವಾಯು ಮತ್ತು ಅಗ್ನಿಗಳಿಗೆ ಸದೃಶವಾದ ಬಾಣಗಳಿಂದ ಚೂರ್ಣಿತವಾದ, ಪರ್ವತ ಮತ್ತು ಮೋಡದ ಕಾಂತಿಯುಳ್ಳ ಗಜಗಳು ರಕ್ತವನ್ನು ಸುರಿಸುವ ಅವಯವವುಳ್ಳವುಗಳಾಗಿ ಕತ್ತರಿಸಲ್ಪಟ್ಟು ಬಿದ್ದವು.

ಪೇತುರಶ್ವಸಹಸ್ರಾಣಿ ಪ್ರಹತಾನ್ಯರ್ಜುನೇಷುಭಿಃ ।
ಹಂಸಾ ಹಿಮವತಃ ಪೃಷ್ಠೇ ವಾರಿವಿಪ್ರಹತಾ ಇವ ॥ ೬೧ ॥

ಅರ್ಜುನನ ಬಾಣಗಳಿಂದ ಚೆನ್ನಾಗಿ ಹೊಡೆಯಲ್ಪಟ್ಟ ಸಹಸ್ರಾರು ಅಶ್ವಗಳು ಹಿಮಾಲಯದ ತಪ್ಪಲಿನಲ್ಲಿ ನೀರಿನ ಹೊಡೆತಕ್ಕೆ ಸಿಕ್ಕಿದ ಹಂಸಗಳಂತೆ ಬಿದ್ದವು.

ರಥಾಶ್ಚದ್ವಿಪಪತ್ತ್ಯೌ ಸಲಿಲೌಘಾ ಇವಾದ್ಭುತಾಃ ।
ಯುಗಾಂತಾದಿತ್ಯರಶ್ಮ್ಯಾಭೈಃ ಪಾಂಡವಾಸ್ತ್ರೈರ್ಹತಾಃ ॥ ೬೨ ॥

ಜನಪ್ರವಾಹದಂತೆ ಅದ್ಭುತವಾಗಿದ್ದ ರಥ-ಅಶ್ವ-ಗಜ ಮತ್ತು ಪದಾತಿಗಳ ಸಮೂಹಗಳು ಯುಗಾಂತಕಾಲದ ಸೂರ್ಯನ ರಶ್ಮಿಯನ್ನು ಹೋಲುವ ಪಾಂಡವಾಸ್ತ್ರಗಳಿಂದ ಮತ್ತು ಬಾಣಗಳಿಂದ ಹೊಡೆಯಲ್ಪಟ್ಟು ಮರಣವನ್ನು ಹೊಂದಿದವು.

ತತ್ ಪಾಂಡವಾದಿತ್ಯಶರಾಂಶುಜಾಲಂ
ಕುರುಪ್ರವೀರಾನ್ ಯುಧಿ ನಿಷ್ಪತಂತಮ್ ।
ಸ ದ್ರೋಣಮೇಘಃ ಶರವರ್ಷವೇಗೈಃ
ಪ್ರಾಚ್ಛಾದಯನ್ನೇಘ ಇವಾರ್ಕರಶ್ಮೀನ್ ॥ ೬೩ ॥

ಪಾಂಡವನೆಂಬ ಆದಿತ್ಯನ, ಬಾಣಗಳೆಂಬ ಕಿರಣಗಳ ಸಮೂಹವು ರಣರಂಗದಲ್ಲಿ ಕುರುಪ್ರವೀರರನ್ನು ಸುಡುತ್ತಿದ್ದಿತು. ಅದನ್ನು ದ್ರೋಣರೆಂಬ ಮೇಘವು, ತನ್ನ ಬಾಣಗಳ ಮಳೆಗಳ ವೇಗದಿಂದ ಮೋಡವು ಸೂರ್ಯಕಿರಣಗಳನ್ನು ಮುಚ್ಚಿದಂತೆ ಮುಚ್ಚಿಹಾಕಿತು.

ಅಥಾತ್ಯರ್ಥಂ ವಿಸೃಷ್ಟೇನ ದ್ವಿಷತಾಮಸುಭೋಜಿನಾ ।
ಆಜಘ್ನೇ ವಕ್ಷಸಿ ದ್ರೋಣೋ ನಾರಾಚೇನ ಧನಂಜಯಮ್ ॥ ೬೪ ॥

ನಂತರ ಬಹಳ ತೀಕ್ಷ್ಣವಾಗಿ ಪ್ರಯೋಗಿಸಿದ ಶತ್ರುಗಳ ಪ್ರಾಣವನ್ನು ಭುಂಜಿಸುವ ಒಂದು ನಾರಾಚದಿಂದ ದ್ರೋಣರು ಅರ್ಜುನನಿಗೆ ಅವನ ವಕ್ಷಸ್ಥಲದಲ್ಲಿ ಗಾಢವಾಗಿ ಹೊಡೆದರು.

ಸ ವಿಹ್ವಲಿತಸರ್ವಾಂಗಃ ಕ್ಷಿತಿಕಂಪೇ ಯಥಾऽಚಲಃ ।
ಧೈರ್ಯಮಾಸ್ಥಾಯ ಬೀಭತ್ಸುರ್ದ್ರೋಣಂ ವಿವ್ಯಾಧ ಪತ್ರಿಭಿಃ ॥ ೬೫ ॥

ಭೂಕಂಪವಾದಾಗ ಪರ್ವತವು ನಡುಗುವಂತೆ ಅರ್ಜುನನ ಎಲ್ಲ ಅಂಗಗಳು ವಿಹ್ವಲಿತವಾದರೂ ಅವನು ಧೈರ್ಯವನ್ನು ಆಶ್ರಯಿಸಿ ದ್ರೋಣರ ಜೊತೆಯಲ್ಲಿ ಪತ್ರ ಸಹಿತವಾದ ಬಾಣಗಳಿಂದ ಯುದ್ಧವನ್ನು ಮಾಡಿದನು.

ದ್ರೋಣಸ್ತು ಪಂಚಭಿರ್ಬಾಣೈರ್ವಾಸುದೇವಮತಾಡಯತ್ ।
ಅರ್ಜುನಂ ಚ ತ್ರಿಸಪ್ತತ್ಯಾ ಧ್ವಜಂ ಚಾಸ್ಯ ತ್ರಿಭಿಃ ಶರೈಃ ॥ ೬೬ ॥

ದ್ರೋಣರಾದರೂ ಐದು ಬಾಣಗಳಿಂದ ಕೃಷ್ಣನನ್ನು ಹೊಡೆದರು. ಎಪ್ಪತ್ಮೂರು ಬಾಣಗಳಿಂದ ಅರ್ಜುನನನ್ನೂ, ಮೂರು ಬಾಣಗಳಿಂದ ಅವನ ಧ್ವಜವನ್ನೂ ಹೊಡೆದರು.

ವಿಶೇಷಯಿಷ್ಯನ್ ಶಿಷ್ಯಂ ಚ ದ್ರೋಣೋ ರಾಜನ್ ಪರಾಕ್ರಮೀ ।
ಅದೃಶ್ಯಮರ್ಜುನಂ ಚಕ್ರೇ ನಿಮೇಷಾಚ್ಛರವೃಷ್ಟಿಭಿಃ ॥ ೬೭ ॥

ಎಲೈ ರಾಜನೇ, ಪರಾಕ್ರಮಶಾಲಿಗಳಾದ ದ್ರೋಣರು ಶಿಷ್ಯನಿಗಿಂತಲೂ ಅತಿಶಯವನ್ನು ತೋರಿಸುವವರಾಗಿ ಒಂದು ನಿಮಿಷದಲ್ಲಿ ತಮ್ಮ ಬಾಣಗಳ ಮಳೆಯಿಂದ ಅರ್ಜುನನನ್ನು ಅದೃಶ್ಯನನ್ನಾಗಿ ಮಾಡಿದರು.

ಪ್ರಸಕ್ತಾನ್ ಗಚ್ಛತೋऽಪಶ್ಯನ್ ಭಾರದ್ವಾಜಸ್ಯ ಸಾಯಕಾನ್ ।
ಮಂಡಲೀಕೃತಮೇವಾಸ್ಯ ಧನುಶ್ಚಾದೃಶ್ಯತಾದ್ಭುತಮ್ ॥ ೬೮ ॥

ಯೋಧರು ದ್ರೋಣರ ಬಾಣಗಳು ಒಂದಕ್ಕೊಂದು ಸೇರಿಕೊಂಡು ಹೋಗುವುದನ್ನು ನೋಡುತ್ತಿದ್ದರು. ಅವರ ಧನುಸ್ಸು ಯಾವಾಗಲೂ ಅದ್ಭುತವಾಗಿ ಮಂಡಲಾಕಾರವಾಗಿಯೇ ಕಾಣುತ್ತಿದ್ದಿತು.

ತೇಽಭ್ಯಯುಃ ಸಮರೇ ರಾಜನ್ ವಾಸುದೇವಧನಂಜಯೌ ।
ದ್ರೋಣಸೃಷ್ಟಾಃ ಸುಬಹವಃ ಕಂಕಪತ್ರಪರಿಚ್ಛದಾಃ ॥ ೬೯ ॥

ಎಲೈ ರಾಜನೇ, ದ್ರೋಣರು ಪ್ರಯೋಗಿಸಿದ, ಕಂಕಪತ್ರಗಳನ್ನು ಹೊಂದಿದ ಅನೇಕ ಬಾಣಗಳು ಕೃಷ್ಣಾರ್ಜುನರ ಸಮೀಪಕ್ಕೆ ಬಂದವು.

ತತ್ರಾದ್ಭುತಮಪಶ್ಯಾಮ ಶಿಲಾನಾಮಿವ ಸರ್ಪಣಮ್ ।
ಯದ್ ದ್ರೋಣಂ ತರಸಾ ಪಾರ್ಥೋ ವೃದ್ಧಂ ಬಾಲೋಽಪಿ ನಾತರತ್॥

ಅಲ್ಲಿ ಬಂಡೆಗಳು ಚಲಿಸಿದಂತೆ ಅದ್ಭುತವನ್ನು ನಾವು ನೋಡಿದೆವು. ಏಕೆಂದರೆ ಬಾಲಕನಾದ ಅರ್ಜುನನು ತನ್ನ ವೇಗದಿಂದಲೂ ವೃದ್ಧರಾದ ದ್ರೋಣರನ್ನು ದಾಟಲು ಸಾಧ್ಯವಾಗಲಿಲ್ಲ.

ತಂ ದೃಷ್ಟ್ವಾ ತಾದೃಶಂ ಯುದ್ಧಂ ದ್ರೋಣಪಾಂಡವಯೋಸ್ತದಾ ।
ವಾಸುದೇವೋ ಮಹಾಬುದ್ಧಿಃ ಕಾರ್ಯಚಿಂತಾಮಚಿಂತಯತ್ ॥

ಚಿಂತಯಾಮಾಸ ವಾರ್ಷ್ಣೇಯೋ ದೃಷ್ಟ್ವಾ ದ್ರೋಣಸ್ಯ ವಿಕ್ರಮಮ್ ।
ನಾತಿವರ್ತಿಷ್ಯತೇ ಹ್ಯೇನಂ ವೇಲಾಮಿವ ಮಹಾರ್ಣವಃ ॥ ೭೧ ॥

ದ್ರೋಣಾರ್ಜುನರ ಅಂತಹ ಯುದ್ಧವನ್ನು ನೋಡಿ ಆಗ ಮಹಾಮೇಧಾವಿಯಾದ ವಾಸುದೇವನು ಮಾಡಬೇಕಾದ ಕಾರ್ಯವನ್ನು ಚಿಂತಿಸಿದನು. ದ್ರೋಣರ ಪರಾಕ್ರಮವನ್ನು ನೋಡಿ ಕೃಷ್ಣನು ಸಮುದ್ರವು ದಡವನ್ನು ಮೀರದಂತೆ ಅರ್ಜುನನು ದ್ರೋಣರನ್ನು ದಾಟ ಹೋಗಲಾರನೆಂದು ಚಿಂತಿಸಿದನು.

ತತಃ ಪಾರ್ಥಂ ಸಮುದ್ವಿಗ್ನಂ ಲಕ್ಷ್ಯ ಚಿಂತಯತೇಽಚ್ಯುತಃ ।
ದ್ರೋಣಸ್ಯ ಚಾಪಿ ವಿಕ್ರಾಂತಂ ದೃಷ್ಟ್ವಾ ಮಧುನಿಸೂದನಃ ।
ಇತ್ಯಬ್ರವೀದ್ ವಾಸುದೇವೋ ಧನಂಜಯಮುದಾರಧೀಃ ॥ ೭೨ ॥

ಅನಂತರ ಅರ್ಜುನನು ಉದ್ವೇಗಗೊಂಡಿರುವುದನ್ನು ಗಮನಿಸಿ, ದ್ರೋಣರ ಪರಾಕ್ರಮವನ್ನೂ ನೋಡಿ ಮಧುಸೂದನನಾದ ಅಚ್ಯುತನು ಚಿಂತಿಸಿ, ಉದಾರ ಬುದ್ಧಿಯುಳ್ಳವನು ಧನಂಜಯನನ್ನು ಕುರಿತು ಹೀಗೆ ಮಾತನಾಡಿದನು.

ಪಾರ್ಥ ಪಾರ್ಥ ಮಹಾಬಾಹೋ ನ ನಃ ಕಾಲಾತ್ಯಯೋ ಭವೇತ್ ।
ದ್ರೋಣಮುತ್ಸೃಜ್ಯ ಗಚ್ಛಾಮೋ ಕೃತ್ಯಮೇತನ್ಮಹತ್ತರಮ್ ॥ ೭೩ ॥

ಪಾರ್ಥನೇ, ಪಾರ್ಥನೇ, ಮಹಾಬಾಹುವೇ, ನಮಗೆ ಕಾಲವ್ಯಯವಾಗುವುದು ಬೇಡ. ಮಾಡಬೇಕಾದ ದೊಡ್ಡ ಕಾರ್ಯವಿದೆ. ದ್ರೋಣರನ್ನು ಬಿಟ್ಟು ಮುಂದೆ ಹೋಗೋಣ.

ಸಂಜಯಃ

ತಂ ಪಾರ್ಥಶ್ಚಾಬ್ರವೀತ್ ಕೃಷ್ಣಂ ಯಥೇಷ್ಟಮಿತಿ ಕೇಶವಮ್ ॥ ೭೪ ॥

ಸಂಜಯ– ಆಗ ಅರ್ಜುನನು ಕೇಶವನನ್ನು ಕುರಿತು, ನಿನ್ನಿಷ್ಟದಂತೆಯೇ ಮಾಡೋಣ ಎಂದು ಹೇಳಿದನು.

ತತಃ ಪ್ರದಕ್ಷಿಣಂ ಕೃತ್ವಾ ದ್ರೋಣಂ ಪ್ರಾಯಾನ್ಮಹಾಭುಜಃ ।
ಪರಿವೃತ್ತಶ್ಚ ಬೀಭತ್ಸುರ್ಗಚ್ಛನ್ನೇವ ಶಿತಾನ್ ಶರಾನ್ ॥ ೭೫ ॥

ಆಗ ಮಹಾಭುಜನಾದ ಅರ್ಜುನನು ದ್ರೋಣರಿಗೆ ಪ್ರದಕ್ಷಿಣೆಯನ್ನು ಮಾಡಿ ತಿರುಗಿ ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ಹೊರಟನು.

ತತೋಽಬ್ರವೀತ್ ಸ್ಮಯನ್ ದ್ರೋಣಃ ಕ್ವೇದಂ ಪಾಂಡವ ಗಮ್ಯತೇ ।
ನನು ನಾಮ ರಣೇ ಶತ್ರೂನಜಿತ್ವಾ ನ ನಿವರ್ತಸೇ ॥ ೭೬ ॥

ಆಗ ದ್ರೋಣರು ನಗುತ್ತಾ ಅವನನ್ನು ಕುರಿತು ಅರ್ಜುನನೇ ಎಲ್ಲಿಹೋಗುವಿ? ಯುದ್ಧದಲ್ಲಿ ಶತ್ರುವನ್ನು ಗೆಲ್ಲದೆ ನೀನು ಹಿಂದಿರುಗುವುದಿಲ್ಲವಷ್ಟೆ? ಎಂದು ಕೇಳಿದರು.

ಅರ್ಜುನಃ

ಗುರುರ್ಭವಾನ್ನ ಮೇ ಶತ್ರುಃ ಶಿಷ್ಯಃ ಪುತ್ರಸಮೋಽಸ್ಮಿ ತೇ ।
ನ ಚಾಸ್ತಿ ಸ ಪುಮಾಲ್ಲೋಕೇ ಯಸ್ತ್ವಾಂ ಕ್ರುದ್ಧಮಭದ್ರವೇತ್ ॥ ೭೭ ॥

ಅರ್ಜುನ– ನೀವು ನನ್ನ ಗುರುಗಳು, ಶತ್ರುವಲ್ಲ. ನಾನು ನಿಮ್ಮ ಶಿಷ್ಯ , ಪುತ್ರನಿಗೆ ಸಮಾನನಾದವನು. ಕ್ರುದ್ಧರಾದ ನಿಮ್ಮ ಎದುರಿಗೆ ಯುದ್ಧ ಮಾಡುವ ವ್ಯಕ್ತಿಯು ಮೂರು ಲೋಕಗಳಲ್ಲಿಯೂ ಇಲ್ಲ.

ಸಂಜಯಃ

ಏವಂ ಬ್ರುವಾಣೋ ಬೀಭತ್ಸುರ್ಜಯದ್ರಥವಧೋತ್ಸುಕಃ ।
ಅಭ್ಯದ್ರವತ ಸಂಕ್ರುದ್ಧಃ ತವ ಪುತ್ರಸ್ಯ ವಾಹಿನೀಮ್ ॥ ೬೮ ॥

ಸಂಜಯ– ಅರ್ಜುನನು ಹೀಗೆ ಮಾತನಾಡುತ್ತಾ, ಜಯದ್ರಥನ ವಧೆಯನ್ನು ಮಾಡಲು ಉತ್ಸುಕನಾಗಿ ಕೋಪದಿಂದ ನಿನ್ನ ಪುತ್ರನ ಸೈನ್ಯವನ್ನು ಕುರಿತು ಓಡಿದನು.

ತಂ ಚಕ್ರರಕ್ಷೌ ಪಾಂಚಾಲ್ಯೌ ಯುಧಾಮನ್ಯೂತ್ತಮೌಜಸೌ ।
ಆಸ್ಥಾತಾಂ ಮಹಾತ್ಮಾನೌ ವಿಶಂತಂ ತಾವಕೀಂ ಚಮೂಮ್ ॥ ೬೯ ॥

ನಿನ್ನ ಸೈನ್ಯವನ್ನು ಪ್ರವೇಶಿಸುವ ಅರ್ಜುನನನ್ನು ಅವನ ಚಕ್ರರಕ್ಷಕರಾದ ಪಾಂಚಾಲ ದೇಶದ ಮಹಾತ್ಮರಾದ ಯುಧಾಮನ್ಯು ಮತ್ತು ಉತ್ತಮೌಜರು ಹಿಂಬಾಲಿಸಿದರು.

ತತೋ ಜಯೋ ಮಹಾರಾಜ ಕೃತವರ್ಮಾ ಚ ಸಾತ್ವತಃ ।
ಕಾಂಭೋಜಶ್ಚ ಶ್ರುತಾಯುಶ್ಚ ಧನಂಜಯಮವಾರಯನ್ ॥ ೭೦ ॥

ಎಲೈ ಮಹಾರಾಜನೇ, ಆಗ ಜಯನೂ, ಸಾತ್ವತನಾದ ಕೃತವರ್ಮನೂ, ಕಾಂಭೋಜ ರಾಜನೂ ಮತ್ತು ಶ್ರುತಾಯುವೂ ಧನಂಜಯನನ್ನು ತಡೆದರು.

ತೇಷಾಂ ದಶಸಹಸ್ರಾಣಿ ರಥಾನಾಮನುಯಾಯಿನಾಮ್ ।
ಅಭೀಷಾಹಾಃ ಶೂರಸೇನಾಃ ಶಿಬಯೋಽಥ ವಸಾತಯಃ ॥ ೭೧ ॥

ಮಚ್ಛಿಲ್ಲಿಕಾ ಲಿಲಿಂಧ್ರಾಶ್ಚ ಕೇಕಯಾ ಮದ್ರಕಾಸ್ತಥಾ ।
ನಾರಾಯಣಾಶ್ಚ ಗೋಪಾಲಾಃ ಕಾಂಭೋಜಾನಾಂ ಚ ಯೇ ಗಣಾಃ ।
ಪರ್ಯೈರ್ಯಚ ಜಿತಾ ರಾಜನ್ ಪುರಾ ತೇ ವೀರಸತ್ತಮಾಃ ॥ ೭೨ ॥

ಕರ್ಣೇನ ವಿಜಿತಾಃ ಪೂರ್ವಂ ಸಂಗ್ರಾಮೇ ಶೂರಸಮ್ಮತಾಃ ।
ಭಾರದ್ವಾಜಂ ಪುರಸ್ಕೃತ್ಯ ಹೃಷ್ಟಾಸ್ತಾನೋಽರ್ಜುನಂ ಪ್ರತಿ ॥ ೭೩ ॥

ಪುತ್ರಶೋಕಾಭಿಸಂತಪ್ತಂ ಕ್ರುದ್ಧಂ ಮೃತ್ಯುಮಿವಾಂತಕಮ್ ।
ತ್ಯಜಂತಂ ತುಮುಲೇ ಪ್ರಾಣಾನ್ ಸನ್ನದ್ಧಂ ಚಿತ್ರಯೋಧಿನಮ್ ॥ ೭೪ ॥

ಗಾಹಮಾನಮನೀಕಾನಿ ಮಾತಂಗಮಿವ ಯೂಥಪಮ್ ।
ಮಹೇಷ್ವಾಸಂ ಪರಾಕ್ರಾಂತಂ ನರವ್ಯಾಘ್ರಮವಾರಯನ್ ॥ ೭೫ ॥

ಅವರನ್ನು ಹಿಂಬಾಲಿಸಿದ ಹತ್ತು ಸಹಸ್ರ ರಥಗಳು, ಅಭೀಷಾಹರು, ಶೂರಸೇನರು, ಶಿಬಿಗಳು, ವಸಾತಿಗಳು, ಮಚ್ಛಲ್ಲಿಕರು, ಲಿಲಿಂಧ್ರರು, ಕೇಕಯರು, ಮದ್ರಕರು, ಗೋಪಾಲರಾದ ನಾರಾಯಣರು, ಕಾಂಬೋಜರ ರಥಸಮೂಹಗಳು- ರಾಜನೇ, ಈ ವೀರಶ್ರೇಷ್ಠರು ಯುದ್ಧದಲ್ಲಿ ಯಾರಿಗೂ ಸೋಲದವರು, ಹಿಂದೆ ಕರ್ಣನಿಂದ ಮಾತ್ರ ಶೂರಸಮ್ಮತರಾದ ಅವರು ಯುದ್ಧದಲ್ಲಿ ಪರಾಜಿತರಾಗಿದ್ದರು- ಇವರೆಲ್ಲರೂ ದ್ರೋಣರನ್ನು ಮುಂದೆ ಮಾಡಿಕೊಂಡು, ಸಂತೋಷದಿಂದ ಕೂಡಿದವರಾಗಿ ಪುತ್ರಶೋಕದಿಂದ ಕೂಡಿದ, ಕ್ರುದ್ಧನಾದ, ಸರ್ವಸಂಹಾರಕನಾದ ಮೃತ್ಯುವಿನಂತಿರುವ, ತೀವ್ರವಾದ ಯುದ್ಧದಲ್ಲಿ ಪ್ರಾಣವನ್ನು ತ್ಯಜಿಸಲು ಸಿದ್ಧರಾದ, ಯುದ್ಧಸನ್ನದ್ಧನಾದ, ವಿಚಿತ್ರವಾಗಿ ಯುದ್ಧವನ್ನು ಮಾಡುವ, ಗಜಗಳಿಗೆ ಪತಿಯಾದ ಸಲಗನಂತಿರುವ, ಶತ್ರುಸೈನ್ಯವನ್ನು ಪ್ರವೇಶಿಸುತ್ತಿರುವ ಪರಾಕ್ರಮಶಾಲಿಯಾದ, ಮಹಾಧನುರ್ಧಾರಿಯಾದ, ನರವ್ಯಾಘ್ರನಾದ ಅರ್ಜುನನನ್ನು ತಡೆದರು.

ತತಃ ಪ್ರವವೃತೇ ಯುದ್ಧಂ ತುಮುಲಂ ರೋಮಹರ್ಷಣಮ್ ।
ಅನ್ಯೋನ್ಯಂ ವೈ ಪ್ರಾರ್ಥಯತಾಂ ಯೋಧಾನಾಂ ಜಯಗರ್ದ್ಧಿನಾಮ್ ॥

ಆನಂತರ ಪರಸ್ಪರವಾಗಿ ಒಬ್ಬರನ್ನೊಬ್ಬರು ಗೆಲ್ಲಲು ಜಯಾಕಾಂಕ್ಷಿಗಳಾದ ಅವರಿಗೆ ತೀವ್ರವೂ ಮತ್ತು ರೋಮಾಂಚನಕಾರಿಯೂ ಆದ ಯುದ್ಧವು ನಡೆಯಿತು.

ಜಯದ್ರಥವಧಪ್ರೇಪ್ಸುಮಾಯಾಂತಂ ಪುರುಷರ್ಷಭಮ್ ।
ನ್ಯವಾರಯಂತ ಸಹಿತಾಃ ಕ್ರಿಯಾ ವ್ಯಾಧಿಮಿವೋತ್ಥಿತಮ್ ॥ ೮೭ ॥

ಜಯದ್ರಥನ ವಧೆಯನ್ನು ಮಾಡಲು ಬಯಸಿ, ಸಮೀಪಕ್ಕೆ ಬಂದ ಪುರುಷ ಶ್ರೇಷ್ಠನಾದ ಅರ್ಜುನನನ್ನು ಅವರೆಲ್ಲರೂ ಒಟ್ಟುಗೂಡಿ ಔಷಧಕ್ರಿಯೆಗಳು ದೇಹದಲ್ಲಿ ಉದ್ಭವಿಸಿದ ವ್ಯಾಧಿಯನ್ನು ತಡೆಯುವಂತೆ ಅವನನ್ನು ತಡೆದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಭೀತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂದನೆಯ ಅಧ್ಯಾಯ

ಅರ್ಜುನನಿಂದ ಶ್ರುತಾಯುಧ ಮತ್ತು ಸುದಕ್ಷಿಣರ ವಧೆ.

ಸಂಜಯಃ

ಸನ್ನಿರುದ್ಧಸ್ತು ತೈಃ ಪಾರ್ಥೋ ಮಹಾಬಲಪರಾಕ್ರಮೈಃ ।
ದ್ರುತಂ ಸಮನುಯಾತಶ್ಚ ದ್ರೋಣೇನ ರಥಿನಾಂ ವರಃ ॥ ೧ ॥

ಸಂಜಯ– ಮಹಾಬಲ-ಪರಾಕ್ರಮವುಳ್ಳ ಅವರಿಂದ ಅರ್ಜುನನು ತಡೆಯಲ್ಪಟ್ಟನು. ರಥಿಶ್ರೇಷ್ಠನಾದ ಅವನು ದ್ರೋಣರಿಂದಲೂ ಶೀಘ್ರವಾಗಿ ಹಿಂಬಾಲಿಸಲ್ಪಟ್ಟನು.

ಕಿರನ್ನಿಷುಗಣಾಂಶ್ಚಿಕ್ಷಾನ್ ಸ್ವರಶ್ಮೀನಿವ ಭಾಸ್ಕರಃ ।
ತಾಪಯಂಸ್ತವ ಸೈನ್ಯಾನಿ ದೇಹಾನ್ ವ್ಯಾಧಿಗಣೋ ಯಥಾ ॥ ೨ ॥

ಸೂರ್ಯನು ತನ್ನ ಕಿರಣಗಳನ್ನು ಹರಡಿದಂತೆ ತೀಕ್ಷ್ಣವಾದ ಬಾಣಗಳನ್ನು ಎಲ್ಲ ಕಡೆಯಲ್ಲಿಯೂ ಪ್ರಯೋಗಿಸುತ್ತಾ ವ್ಯಾಧಿಗಳ ಸಮೂಹವು ದೇಹವನ್ನು ಪೀಡಿಸುವಂತೆ ನಿನ್ನ ಸೈನ್ಯವನ್ನು ಪೀಡಿಸುತ್ತಾ ಮುಂದೆ ಸಾಗಿದನು.

ಅಶ್ವೋ ವಿದ್ಧೋ ರಥೋ ವಿದ್ಧಃ ಸಾರೋಹಃ ಪಾತಿತೋ ಗಜಃ ।
ಛತ್ರಾಣಿ ಚಾಪವಿದ್ಧಾನಿ ರಥಾಶ್ಚಕ್ರೈರ್ವಿನಾಕೃತಾಃ ॥ ೩ ॥

ಅಶ್ವವು ಉರುಳಿತು, ರಥವು ಭಗ್ನವಾಯಿತು, ಯೋಧರಿಂದ ಸಹಿತವಾದ ಗಜಗಳು ಉರುಳಿದವು, ಛತ್ರಗಳು ಮುರಿಯಲ್ಪಟ್ಟವು, ರಥಗಳು ಚಕ್ರಗಳಿಂದ ಹೀನವಾದವು.

ವಿದ್ರುತಾನಿ ಚ ಸೈನ್ಯಾನಿ ಶರಾರ್ತಾನಿ ಸಮಂತತಃ ।
ಇತ್ಯಾಸೀತ್ ತುಮುಲಂ ಯುದ್ಧಂ ನ ಪ್ರಾಜ್ಞಾಯತ ಕಿಂಚನ ॥ ೪ ॥

ಬಾಣಗಳಿಂದ ಪೀಡಿಸಲ್ಪಟ್ಟ ಸೈನ್ಯಗಳು ಎಲ್ಲ ಕಡೆಗಳಲ್ಲಿಯೂ ಓಡಿಹೋದವು. ಹೀಗೆ ತೀವ್ರವಾದ ಯುದ್ಧವು ಸಂಭವಿಸಿತು. ಯಾವುದೂ ತಿಳಿಯಲಿಲ್ಲ.

ತೇಷಾಮಾಯಚ್ಛತಾಂ ಸಂಖೇ ಪರಸ್ಪರಮಜಿಹ್ಮಗೈಃ ।
ಅರ್ಜುನೋ ಧ್ವಜಿನೀಂ ರಾಜನ್ನಭೀಕ್ಷ್ಣಂ ಸಮಕಂಪಯತ್ ॥ ೫ ॥

ಎಲೈ ರಾಜನೇ, ನೇರವಾಗಿ ಸಾಗುವ ಬಾಣಗಳಿಂದ, ಪರಸ್ಪರವಾಗಿ ಹೊಡೆದಾಡುವ ಆ ಯುದ್ಧದಲ್ಲಿ ಅರ್ಜುನನು ಸತತವಾಗಿ ನಿನ್ನ ಸೈನ್ಯವನ್ನು ಅಲುಗಾಡಿಸಿದನು.

ಸತ್ಯಾಂ ಚಿಕೀರ್ಷಮಾಣಸ್ತು ಪ್ರತಿಜ್ಞಾಂ ಸತ್ಯಸಂಗರಃ ।
ಅಭ್ಯದ್ರವದ್ ರಥಶ್ರೇಷ್ಠಂ ಶೋಣಾಶ್ವಂ ಶ್ವೇತವಾಹನಃ ॥ ೬ ॥

ಸತ್ಯಸಂಗರನಾದ ಶ್ವೇತವಾಹನನು ತನ್ನ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡಲು ಬಯಸಿ, ಶೋಣಾಶ್ವರಾದ, ರಥಶ್ರೇಷ್ಠರಾದ ದ್ರೋಣರ ಕಡೆಗೆ ಸಾಗಿದನು.

ತಂ ದ್ರೋಣಃ ಪಂಚವಿಂಶತ್ಯಾ ಮರ್ಮಜ್ಞೋ ಮರ್ಮಭೇದಿಭಿಃ ।
ಆಂತೇವಾಸಿನಮಾಚಾರ್ಯಃ ಪಾಂಡವಂ ಸಮಪೀಡಯತ್ ॥ ೭ ॥

ಮರ್ಮವನ್ನು ತಿಳಿದವರೂ, ಆಚಾರ್ಯರೂ ಆದ ದ್ರೋಣರು ಶಿಷ್ಯನಾದ ಅರ್ಜುನನನ್ನು ಮರ್ಮಭೇದಕವಾದ ಇಪ್ಪತ್ತೈದು ಬಾಣಗಳಿಂದ ಚೆನ್ನಾಗಿ ಪೀಡಿಸಿದರು.

ತಂ ತು ತೂರ್ಣತರಂ ಪಾರ್ಥೋ ದ್ರೋಣಂ ಶಸ್ತ್ರಭೃತಾಂ ವರಮ್ ।
ಅಭ್ಯಧಾವದಿಷೂನಸ್ಯನ್ನಿಷುವೇಗವಿಘಾತಕಾನ್ ॥ ೮ ॥

ಅರ್ಜುನನಾದರೋ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರ ಮೇಲೆ ಅತ್ಯಂತ ಶೀಘ್ರವಾಗಿ ಅವರ ಬಾಣಗಳ ವೇಗವನ್ನು ನಾಶ ಮಾಡುವ ಬಾಣಗಳನ್ನು ಪ್ರಯೋಗಿಸುತ್ತಾ ಅವರ ಕಡೆಗೆ ಸಾಗಿದನು.

ತಸ್ಯಾಶು ಕ್ಷಿಪತೋ ಭಲ್ಲಾನ್ ಭಲ್ಲೈಃ ಸನ್ನತಪರ್ವಭಿಃ ।
ಪ್ರತ್ಯವಿಧ್ಯತ್ ಸ್ಮಯನ್ ದ್ರೋಣೋ ಬ್ರಾಹ್ಮಮಸ್ತ್ರಮುದೀರಯನ್ ॥೯॥

ಅರ್ಜುನನು ಶೀಘ್ರವಾಗಿ ಪ್ರಯೋಗಿಸಿದ ಭಲ್ಲಗಳನ್ನು ದ್ರೋಣರು ನಗುತ್ತಾ ಬ್ರಹ್ಮಾಸ್ತ್ರವನ್ನು ಪ್ರಾದುರ್ಭವಿಸಿ ಬಾಗಿದ ತುದಿಯುಳ್ಳ ಭಲ್ಲಗಳಿಂದ ಪ್ರತಿಯಾಗಿ ಹೊಡೆದರು.

ತದದ್ಭುತಮಪಶ್ಯಾಮ ದ್ರೋಣಸ್ಯಾಚಾರ್ಯಕಂ ಯುಧಿ ।
ಯತಮಾನೋ ಯುವಾ ನೈನಂ ಪ್ರತ್ಯವಿಧ್ಯದ್ ಯದರ್ಜುನಃ ॥೧೦॥

ಯುದ್ಧದಲ್ಲಿ ದ್ರೋಣಾಚಾರ್ಯರ ಅದ್ಭುತವಾದ ಆಚಾರ್ಯತನವನ್ನು ನಾವು ನೋಡಿದೆವು. ಏಕೆಂದರೆ ಯುವಕನಾದ ಅರ್ಜುನನು ಪ್ರಯತ್ನಪಟ್ಟರೂ ಅವರಿಗೆ ಹೊಡೆಯಲು ಸಾಧ್ಯವಾಗಲಿಲ್ಲ.

ಕ್ಷರನ್ನಿವ ಮಹಾಮೇಘೋ ವಾರಿಧಾರಾಃ ಸಹಸ್ರಶಃ ।
ದ್ರೋಣಮೇಘಃ ಪಾರ್ಥಶೈಲಂ ವವರ್ಷ ಶರವೃಷ್ಟಿಭಿಃ ॥ ೧೧ ॥

ಮಹಾಮೇಘವು ಸಾವಿರಾರು ನೀರಿನ ಧಾರೆಯನ್ನು ಸುರಿಸುವಂತೆ ದ್ರೋಣರೆಂಬ ಮೇಘವು ಅರ್ಜುನನೆಂಬ ಪರ್ವತವನ್ನು ಬಾಣದ ಮಳೆಗಳಿಂದ ಮಳೆಗರೆಯಿತು.

ಅರ್ಜುನಃ ಶರವರ್ಷಂ ತತ್ ಶರವರ್ಷೇಣ ವೀರ್ಯವಾನ್ ।
ಅವಾರಯದಸಂಭ್ರಾಂತೋ ನ ತ್ವಾಚಾರ್ಯಮಪೀಡಯತ್ ॥ ೧೨ ॥

ವರಾಕ್ರಮಶಾಲಿಯಾದ ಅರ್ಜುನನು ಯಾವ ಗಾಬರಿಯೂ ಇಲ್ಲದೆ ತನ್ನ ಶರವರ್ಷದಿಂದ ಆಚಾರ್ಯರ ಶರವರ್ಷವನ್ನು ನಿವಾರಿಸಿದನು. ಆದರೆ ಗುರುಗಳನ್ನು ಪೀಡಿಸಲಿಲ್ಲ.

ದ್ರೋಣಸ್ತು ಪಂಚವಿಂಶತ್ಯಾ ಶ್ವೇತವಾಹನಮರ್ದಯತ್ ।
ವಾಸುದೇವಂ ಚ ಸಪ್ತತ್ಯಾ ಬಾಹ್ವೋರುರಸಿ ಚಾಶುಗೈಃ ॥ ೧೩ ॥

ದ್ರೋಣರಾದರೂ ಅರ್ಜುನನ ಮೇಲೆ ಇಪ್ಪತ್ತೈದು ಬಾಣಗಳನ್ನು ಪ್ರಯೋಗಿಸಿದರು. ಕೃಷ್ಣನ ಬಾಹುಗಳಲ್ಲಿಯೂ ಮತ್ತು ವಕ್ಷಸ್ಥಲದಲ್ಲಿಯೂ ತೀಕ್ಷ್ಣಗಾಮಿಗಳಾದ ಎಪ್ಪತ್ತು ಬಾಣಗಳನ್ನು ಪ್ರಯೋಗಿಸಿದರು.

ಪಾರ್ಥಸ್ತು ಪ್ರಹಸನ್ ಧೀಮಾನ್ ಆಚಾರ್ಯಂ ಸ ಶರೌಘಿಣಮ್ ।
ವಿಸೃಜಂತಂ ಚಿತಾನ್ ಬಾಣಾನ್ ನ್ಯವಾರಯತ ತಂ ಯುಧಿ ॥ ೧೪ ॥

ಮೇಧಾವಿಯಾದ ಅರ್ಜುನನು ನಗುತ್ತಾ ಶ್ವೇತವರ್ಣದ ಬಾಣದ ಸಮೂಹವನ್ನು ಸುರಿಸುತ್ತಿದ್ದ ಶರಸಮೂಹ ಸಹಿತರಾದ ಆಚಾರ್ಯರನ್ನು ರಣರಂಗದಲ್ಲಿ ತಡೆದನು.

ಅಥ ತೌ ವರ್ತ್ಮಮಾನೌ ತು ದ್ರೋಣೇನ ರಥಿನಾಮಪಿ ।
ಅವರ್ಜಯೇತಾಂ ದುರ್ಧರ್ಷೌ ಯುಗಾಂತಾಗ್ನಿಮಿವೋತ್ಥಿತಮ್ ॥೧೫॥

ರಥಿಶ್ರೇಷ್ಠರೂ, ದುರ್ಧರ್ಷರೂ ಆದ ಕೃಷ್ಣಾರ್ಜುನರು ಯುಗಾಂತ ಕಾಲದಲ್ಲಿ ಉತ್ಥಿತವಾದ ಅಗ್ನಿಯಂತಿರುವ ದ್ರೋಣರಿಂದ ಆ ರೀತಿಯಾಗಿ ಹೊಡೆಯಲ್ಪಟ್ಟು ದ್ರೋಣರನ್ನು ತಪ್ಪಿಸಿ ಮುಂದೆ ಸಾಗಿದರು.

ವರ್ಜಯನ್ನಿಶಿತಾನ್ ಬಾಣಾನ್ ದ್ರೋಣಾಪವಿನಿಷೃತಾನ್ ।
ಕಿರೀಟಮಾಲೀ ತ್ವರಿತೋ ಭೋಜಾನೀಕಮಥಾವಿಶತ್ ॥ ೧೬ ॥

ಕಿರೀಟಮಾಲಿಯಾದ ಅರ್ಜುನನು ದ್ರೋಣರ ಚಾಪದಿಂದ ಹೊರಹೊಮ್ಮಿದ ಹರಿತವಾದ ಬಾಣಗಳನ್ನು ನಿವಾರಿಸುತ್ತಾ, ಶೀಘ್ರವಾಗಿ ಭೋಜರ ಸೈನ್ಯವನ್ನು ಪ್ರವೇಶಿಸಿದನು.

ಸೋಽಂತರಾ ಕೃತವರ್ಮಾಣಂ ಕಾಂಭೋಜಂ ಚ ಸುದಕ್ಷಿಣಮ್ ।
ಅಭ್ಯಯಾದ್ ವರ್ಜಯನ್ ದ್ರೋಣಂ ಮೈನಾಕಮಿವ ಪರ್ವತಮ್ ॥

ಅರ್ಜುನನು ಮೈನಾಕಪರ್ವತದಂತಿದ್ದ ದ್ರೋಣರನ್ನು ತ್ಯಜಿಸಿ, ಕೃತವರ್ಮನನ್ನು ಮತ್ತು ಕಾಂಭೋಜ ರಾಜಕುಮಾರನಾದ ಸುದಕ್ಷಿಣನನ್ನು ಸಮೀಪಿಸಿದನು.

ತತೋ ಭೋಜೋ ನರವ್ಯಾಘ್ರಂ ದುರ್ಧರ್ಷಂ ಕುರುಸತ್ತಮಮ್ ।
ಅವಿಧ್ಯತ್ ತೂರ್ಣಮವ್ಯಗ್ರೋ ದಶಭಿಃ ಕಂಕಪತ್ರಿಭಿಃ ॥ ೧೮ ॥

ಆಗ ಭೋಜನಾದ ಕೃತವರ್ಮನು ಕುರುಶ್ರೇಷ್ಠನೂ, ದುರ್ಧರ್ಷನೂ, ನರವ್ಯಾಘ್ರನೂ ಆದ ಅರ್ಜುನನ ಮೇಲೆ ಶೀಘ್ರವಾಗಿ ಗಾಬರಿಗೊಳ್ಳದೆ ಕಂಕಪತ್ರವುಳ್ಳ ಹತ್ತು ಬಾಣಗಳನ್ನು ಪ್ರಯೋಗಿಸಿದನು.

ತಮರ್ಜುನಃ ಶಿತೈಸ್ತಾಭಿ ರಾಜನ್ ವಿವ್ಯಾಧ ಪತ್ರಿಣಾ ।
ಪುನರ್ಬಾಣೈಸ್ತ್ರಿಭಿಶ್ಚಾನ್ಯೈ ರ್ಮೋಹಯನ್ನಿವ ಸಾತ್ವತಮ್ ॥ ೧೯ ॥

ಎಲೈ ರಾಜನೇ, ಅರ್ಜುನನು ಹರಿತವಾದ ಪತ್ರಸಹಿತವಾದ ಬಾಣಗಳಿಂದ ಅವುಗಳನ್ನು ಹೊಡೆದು, ಪುನಃ ಮೂರು ಬಾಣಗಳನ್ನು ಪ್ರಯೋಗಿಸಿ ಸಾತ್ವತನಾದ ಕೃತವರ್ಮನಿಗೆ ಮೋಹವನ್ನುಂಟು ಮಾಡಿದನು.

ಭೋಜಸ್ತು ಪ್ರಹಸನ್ ಹಾರ್ದಂ ವಾಸುದೇವಂ ಚ ಮಾಧವಮ್ ।
ವಿಕೃಷ್ಯ ಪಂಚವಿಂಶತ್ಯಾ ಸಾಯಕಾನಾಂ ಸಮಾರ್ಪಯತ್ ॥ ೨೦ ॥

ಭೋಜನಾದರೋ ನಗುತ್ತಾ ಅರ್ಜುನ ಮತ್ತು ಕೃಷ್ಣರ ಮೇಲೆ ಪ್ರತ್ಯೇಕವಾಗಿ ಇಪ್ಪತ್ತೈದು ಬಾಣಗಳನ್ನು ಪ್ರಯೋಗಿಸಿದನು.

ತಸ್ಯಾರ್ಜುನೋ ಧನುಶ್ಛಿತ್ತ್ವಾ ವಿವ್ಯಾಧೈನಂ ತ್ರಿಸಪ್ತಭಿಃ ।
ಶರೈರಗ್ನಿಶಿಖಾಕಾರೈಃ ಕ್ರುದ್ಧಾಶೀವಿಷಸನ್ನಿಭೈಃ ॥ ೨೧ ॥

ಅರ್ಜುನನು ಅವನ ಧನುಸ್ಸನ್ನು ಕತ್ತರಿಸಿ ಕೋಪಗೊಂಡ ಸರ್ಪಗಳ ವಿಷದಂತೆ ಇದ್ದ, ಅಗ್ನಿಶಿಖೆಯನ್ನು ಹೋಲುವ, ಇಪ್ಪತ್ತೊಂದು ಬಾಣಗಳಿಂದ ಅವನನ್ನು ಪೀಡಿಸಿದನು.

ಅಥಾನ್ಯದ್ ಧನುರಾದಾಯ ಕೃತವರ್ಮಾ ಮಹಾರಥಃ ।
ಪಂಚಭಿಃ ಸಾಯಕೈಸ್ತೂರ್ಣಂ ವಿವ್ಯಾಧೋರಸಿ ಭಾರತ ।
ಪುನಶ್ಚ ನಿಶಿತೈರ್ಬಾಣೈಃ ಪಾರ್ಥಂ ವಿವ್ಯಾಧ ಪಂಚಭಿಃ ॥ ೨೨ ॥

ತಂ ಪಾರ್ಥೋ ನವಭಿರ್ಬಾಣೈರಾಜಘಾನ ಸ್ತನಾಂತರೇ ॥ ೨೩ ॥

ಅನಂತರ ಮಹಾರಥನಾದ ಕೃತವರ್ಮನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಐದು ಬಾಣಗಳಿಂದ ಶೀಘ್ರವಾಗಿ ಅರ್ಜುನನನ್ನು ಹೊಡೆದನು. ಎಲೈ ಭಾರತನೇ, ಪುನಃ ಐದು ಹರಿತವಾದ ಬಾಣಗಳನ್ನು ತೆಗೆದುಕೊಂಡು ಅವುಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು. ಅರ್ಜುನನು ಕೃತವರ್ಮನನ್ನು ಒಂಬತ್ತು ಬಾಣಗಳಿಂದ ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ವಿಷಕ್ತಂ ದೃಶ್ಯ ಕೌಂತೇಯಂ ಕೃತವರ್ಮರಥಂ ಪ್ರತಿ ।
ಚಿಂತಯಾಮಾಸ ವಾರ್ಷ್ಣೇಯೋ ನ ನಃ ಕಾಲಾತ್ಯಯೋ ಭವೇತ್ ॥೨೪॥

ಅರ್ಜುನನು ಕೃತವರ್ಮನ ರಥದ ಬಳಿ ಸಿಲುಕಿಕೊಂಡಿರುವುದನ್ನು ನೋಡಿ ಕೃಷ್ಣನು ನಮಗೆ ಕಾಲವು ಮೀರಿ ಹೋಗಬಾರದು ಎಂದು ಚಿಂತಿಸಿದನು.

ತತಃ ಕೃಷ್ಣೋಽಬ್ರವೀತ್ ಪಾರ್ಥಂ ಕೃತವರ್ಮಣಿ ಮಾ ದಯಾಮ್ ।
ಕುರು ಸಂಬಂಧಕಂ ಕೃತ್ವಾ ಪ್ರಮಥ್ಯೈನಂ ವ್ರಜಾಹಿತಾನ್ ॥ ೨೫ ॥

ಆಗ ಕೃಷ್ಣನು ಆರ್ಜುನನನ್ನು ಕುರಿತು, ಸಂಬಂಧಿ ಎಂಬ ಕಾರಣದಿಂದ ಕೃತವರ್ಮನ ಮೇಲೆ ದಯೆಯನ್ನು ತೋರಿಸಬೇಡ. ಅವನನ್ನು ಮರ್ದಿಸಿ ಶತ್ರುಗಳ ಕಡೆಗೆ ಸಾಗುವವನಾಗು ಎಂದು ಹೇಳಿದನು.

ತತಃ ಸ ಕೃತವರ್ಮಾಣಂ ಮೋಹಯಿತ್ವಾऽರ್ಜುನಃ ಶರೈಃ ।
ಅಭ್ಯಯಾಜ್ಜವನೈರಶ್ವೈಃ ಕಾಂಬೋಜಾನಾಮನೀಕಿನೀಮ್ ॥ ೨೬ ॥

ಆಗ ಆರ್ಜುನನು ತನ್ನ ಬಾಣಗಳಿಂದ ಕೃತವರ್ಮನಿಗೆ ಭ್ರಾಂತಿಯನ್ನುಂಟು ಮಾಡಿ ಶೀಘ್ರವಾದ ಅಶ್ವಗಳಿಂದ ಕಾಂಬೋಜರ ಸೈನ್ಯದ ಕಡೆಗೆ ಹೊರಟನು.

ಅಮರ್ಷಿತಸ್ತು ಹಾರ್ದಿಕ್ಯಃ ಪ್ರವಿಷ್ಟೇ ಶ್ವೇತವಾಹನೇ ।
ವಿಧೂನ್ವನ್ ಸಶರಂ ಚಾಪಂ ಪಾಂಚಾಲಾಭ್ಯಾಂ ಸಮಾಗತಃ ॥ ೨೭ ॥

ಆರ್ಜುನನು ಕಾಂಬೋಜಸೈನ್ಯವನ್ನು ಪ್ರವೇಶಿಸುತ್ತಿರಲು, ಕೋಪಗೊಂಡ ಕೃತವರ್ಮನು ಬಾಣ ಸಹಿತವಾದ ತನ್ನ ಬಿಲ್ಲನ್ನು ತೂಗಾಡಿಸುತ್ತಾ, ಪಾಂಚಾಲ ದೇಶದ ಯುಧಾಮನ್ಯು ಮತ್ತು ಉತ್ತಮೌಜರ ಜೊತೆಯಲ್ಲಿ ಸಂಸಕ್ತನಾದನು.

ಚಕ್ರರಕ್ಷೌ ತು ಪಾಂಚಾಲ್ಯಾವರ್ಜುನಸ್ಯ ಪದಾನುಗೌ ।
ಪರ್ಯವಾರಯದಾಯಾಂತೌ ಕೃತವರ್ಮಾ ರಥೇಷುಭಿಃ ॥ ೨೮ ॥

ಕೃತವರ್ಮನು ರಥಬಾಣಗಳೆಂಬ ಬಾಣವಿಶೇಷದಿಂದ ಆರ್ಜುನನ ಚಕ್ರ ರಕ್ಷಕರಾಗಿ ಆರ್ಜುನನನ್ನು ಹಿಂಬಾಲಿಸಿ ಬರುತ್ತಿದ್ದ ಪಾಂಚಾಲ ದೇಶದ ಅವರಿಬ್ಬರನ್ನೂ ತಡೆದನು.

ತಾವವಿದ್ಧ್ಯತ್ ತತೋ ಭೋಜಃ ಸರ್ವಪಾರಶವೈಃ ಶರೈಃ ।
ತ್ರಿಭಿರೇವ ಯುಧಾಮನ್ಯುಂ ಚತುರ್ಭಿಶ್ಚೋತ್ತಮೌಜಸಮ್ ॥ ೨೯ ॥

ಭೋಜನಾದ ಕೃತವರ್ಮನು ತೀಕ್ಷ್ಣವಾದ, ಅಯೋಮಯವಾದ ಬಾಣಗಳನ್ನು ತೆಗೆದುಕೊಂಡು ಮೂರು ಬಾಣಗಳಿಂದ ಯುಧಾಮನ್ಯುವನ್ನೂ, ನಾಲ್ಕು ಬಾಣಗಳಿಂದ ಉತ್ತಮೌಜನನ್ನೂ ಹೊಡೆದನು.

ತಾವಪ್ಯೇನಂ ವಿವ್ಯಧತುರ್ದಶಭಿರ್ದಶಭಿಃ ಶರೈಃ ।
ಸಂಚಿಚ್ಛೇದತುರಪ್ಯಸ್ಯ ಧ್ವಜಂ ಕಾರ್ಮುಕಮೇವ ಚ ।
ತ್ರಿಭಿರೇವ ಯುಧಾಮನ್ಯುರುತ್ತಮೌಜಾಸ್ತ್ರಿಭಿಸ್ತಥಾ ॥ ೩೦ ॥

ಅವರಿಬ್ಬರೂ ಸಹ ಹತ್ತು-ಹತ್ತು ಬಾಣಗಳನ್ನು ಪ್ರಯೋಗಿಸಿ, ಕೃತವರ್ಮನ ಧ್ವಜ ಮತ್ತು ಧನುಸ್ಸುಗಳನ್ನು ಕತ್ತರಿಸಿದರು. ಯುಧಾಮನ್ಯುವು ಮೂರು ಬಾಣಗಳಿಂದಲೂ, ಹಾಗೆಯೇ ಉತ್ತಮೌಜನು ಮೂರು ಬಾಣಗಳಿಂದಲೂ (ಆ ಕಾರ್ಯವನ್ನು ಎಸಗಿದರು).

ಅಥಾನ್ಯದ್ ಧನುರಾದಾಯ ಹಾರ್ದಿಕ್ಯಃ ಕ್ರೋಧಮೂರ್ಚ್ಛಿತಃ ।
ಕೃತ್ವಾ ವಿಧನುಷೌ ವೀರೌ ಶರವರ್ಷೈರವಾಕಿರತ್ ॥ ೩೧ ॥

ಆಗ ಕ್ರೋಧಮೂರ್ಛಿತನಾದ ಹಾರ್ದಿಕ್ಯನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅವರಿಬ್ಬರ ಧನುಸ್ಸುಗಳನ್ನು ಕತ್ತರಿಸಿ ಅವರ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತಾವನ್ಯೇ ಧನುಷೀ ಸಜ್ಯೇ ಕೃತ್ವಾ ಭೋಜಂ ವಿದೇರತುಃ ।
ತೇನಾಂತರೇಣ ಬೀಭತ್ಸುರ್ವಿವೇಶಾಮಿತ್ರವಾಹಿನೀಮ್ ॥ ೩೨ ॥

ಅವರಿಬ್ಬರೂ ಬೇರೆ ಧನುಸ್ಸನ್ನು ತೆಗೆದುಕೊಂಡು ಹೆದೆ ಏರಿಸಿ ಭೋಜನನ್ನು ಗಾಯಗೊಳಿಸಿದರು. ಈ ಮಧ್ಯದಲ್ಲಿ ಅರ್ಜುನನು ಶತ್ರು ಸೈನ್ಯವನ್ನು ಪ್ರವೇಶಿಸಿದನು.

ನ ಲೇಭಾತೇ ತು ತೌ ದ್ವಾರಂ ವಾರಿತೌ ಕೃತವರ್ಮಣಾ ।
ಧಾರ್ತರಾಷ್ಟ್ರೇಷ್ವನೀಕೇಷು ಯತಮಾನೌ ನರರ್ಷಭೌ ॥ ೩೩ ॥

ಕೃತವರ್ಮನಿಂದ ತಡೆಯಲ್ಪಟ್ಟ ಆ ಇಬ್ಬರು ನರಶ್ರೇಷ್ಠರು ಪ್ರಯತ್ನಪಟ್ಟರೂ ದುರ್ಯೋಧನನ ಸೈನ್ಯವನ್ನು ಪ್ರವೇಶಿಸಲು ದ್ವಾರವನ್ನು ಪಡೆಯಲಿಲ್ಲ.

ಅನೀಕಾನಿ ತು ಸಮ್ಮೃದ್ನನ್ ತ್ವರಿತಃ ಶ್ವೇತವಾಹನಃ ।
ನಾವಧೀತ್ ಕೃತವರ್ಮಾಣಂ ಪ್ರಾಪ್ತಮಪ್ಯರಿಸೂದನಃ ॥ ೩೪ ॥

ಅರ್ಜುನನಾದರೋ ಉಳಿದ ಸೈನ್ಯವನ್ನು ಶೀಘ್ರವಾಗಿ ಮರ್ದಿಸುತ್ತಾ ಶತ್ರುಸೂದನನಾದ ಅವನು ಕೃತವರ್ಮನು ಸಮೀಪದಲ್ಲಿ ಸಿಕ್ಕಿದರೂ ಅವನನ್ನು ಕೊಲ್ಲಲಿಲ್ಲ.

ತಂ ತು ದೃಷ್ಟ್ವಾ ತಥಾऽऽಯಾಂತಂ ಶೂರೋ ರಾಜಾ ಶ್ರುತಾಯುಧಃ ।
ಅಭ್ಯದ್ರವತ್ ಸುಸಂಕ್ರುದ್ಧೋ ವಿಧುನ್ವಾನೋ ಮಹದ್ಧನುಃ ॥ ೩೫ ॥

ಹಾಗೆ ಬರುತ್ತಿರುವ ಅರ್ಜುನನನ್ನು ನೋಡಿ ರಾಜನೂ ಶೂರನೂ ಆದ ಶ್ರುತಾಯುಧನು ಬಹಳ ಕೋಪಗೊಂಡು ತನ್ನ ದೊಡ್ಡ ಧನುಸ್ಸನ್ನು ತೂಗಾಡಿಸುತ್ತಾ ಅರ್ಜುನನ ಕಡೆಗೆ ಓಡಿ ಬಂದನು.

ಸ ಪಾರ್ಥಂ ತ್ರಿಭಿರಾನರ್ಚ್ಛತ್ ಸಪ್ತತ್ಯಾ ಚ ಜನಾರ್ದನಮ್ ।
ಕ್ಷುರಪ್ರೇಣ ಸುತೀಕ್ಷ್ಣೇನ ಪಾರ್ಥಕೇತುಮತಾಡಯತ್ ॥ ೩೬ ॥

ಅವನು ಅರ್ಜುನನ ಮೇಲೆ ತೀಕ್ಷ್ಣವಾದ ಮೂರು ಕ್ಷುರಪ್ರಗಳನ್ನು, ಕೃಷ್ಣನ ಮೇಲೆ ಎಪ್ಪತ್ತು ಕ್ಷುರಪ್ರಗಳನ್ನು ಪ್ರಯೋಗಿಸಿ ಅರ್ಜುನನ ಧ್ವಜದ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ತಮರ್ಜುನೋ ನವತ್ಯಾ ತು ಶರಾಣಾಂ ನತಪರ್ವಣಾಮ್ ।
ಆಜಘಾನ ಭೃಶಂ ಕ್ರುದ್ಧಃ ತೋತ್ತ್ರೈರಿವ ಮಹಾದ್ವಿಪಮ್ ॥ ೩೭ ॥

ಅರ್ಜುನನು ಅಂಕುಶದಿಂದ ಮಹಾಗಜವನ್ನು ಹೊಡೆದಂತೆ ಬಹಳ ಕ್ರುದ್ಧನಾಗಿ ಬಾಗಿದ ತುದಿಯುಳ್ಳ ತೊಂಬತ್ತು ಬಾಣಗಳಿಂದ ಅವನನ್ನು ಹೊಡೆದನು.

ಸ ತನ್ನ ಮಮೃಷೇ ರಾಜಾ ಪಾಂಡವೇಯಸ್ಯ ವಿಕ್ರಮಮ್ ।
ಆಶ್ಚೈನಂ ಸಪ್ತಸಪ್ತತ್ಯಾ ನಾರಾಚಾನಾಂ ಸಮಾರ್ಪಯತ್ ॥ ೩೮ ॥

ರಾಜನಾದ ಶ್ರುತಾಯುಧನು ಅರ್ಜುನನ ಪರಾಕ್ರಮವನ್ನು ನೋಡಿ ಸಹಿಸಲಿಲ್ಲ. ಆಗ ಅವನು ಅರ್ಜುನನ ಮೇಲೆ ಎಪ್ಪತ್ತೇಳು ನಾರಾಚಗಳನ್ನು ಪ್ರಯೋಗಿಸಿದನು.

ತಸ್ಯಾರ್ಜುನೋ ಧನುಶ್ಚಿತ್ತ್ವಾ ಶರಾವಾಪಂ ನಿಕೃತ್ಯ ಚ ।
ಆಜಘಾನೋರಸಿ ಕ್ರುದ್ಧಃ ಸಪ್ತಭಿರ್ನತಪರ್ವಭಿಃ ॥ ೩೯ ॥

ಅರ್ಜುನನು ಅವನ ಧನುಸ್ಸನ್ನು ಕತ್ತರಿಸಿ, ಬತ್ತಳಿಕೆಯನ್ನು ಕೆಡವಿ, ಬಾಗಿದ ತುದಿಯುಳ್ಳ ಏಳು ಬಾಣಗಳಿಂದ ಅವನ ವಕ್ಷಸ್ಥಲಕ್ಕೆ ಹೊಡೆದನು.

ಅಥಾನ್ಯದ್ ಧನುರಾದಾಯ ಸ ರಾಜಾ ಕ್ರೋಧಮೂರ್ಚ್ಛಿತಃ ।
ವಾಸವಿಂ ನವಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ॥ ೪೦ ॥

ಕ್ರೋಧಮೂರ್ಛಿತನಾದ ಶ್ರುತಾಯುಧರಾಜನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಇಂದ್ರಪುತ್ರನಾದ ಅರ್ಜುನನ ಬಾಹುಗಳಲ್ಲಿ ಮತ್ತು ವಕ್ಷಸ್ಥಲದಲ್ಲಿ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ತತೋಽರ್ಜುನಃ ಸ್ಮಯನ್ನೇವ ಶ್ರುತಾಯುಧಮರಿಂದಮಮ್ ।
ಶರೈರನೇಕಸಾಹಸ್ರೈಃ ಪೀಡಯಾಮಾಸ ಭಾರತ ॥ ೪೧ ॥

ಎಲೈ ಭಾರತನೇ, ಆಗ ಅರ್ಜುನನು ನಗುತ್ತಲೇ ಅನೇಕ ಸಹಸ್ರ ಬಾಣಗಳಿಂದ ಅರಿಂದಮನಾದ ಶ್ರುತಾಯುಧನನ್ನು ಪೀಡಿಸಿದನು.

ಅಶ್ವಾಂಶ್ಚಾಸ್ಯಾವಧೀತ್ ತೂರ್ಣಂ ಸಾರಥಿಂ ಚ ಮಹಾಬಲಃ ।
ವಿವ್ಯಾಧ ಚೈನಂ ಸಪ್ತತ್ಯಾ ನಾರಾಚಾನಾಂ ಮಹಾಬಲಃ ॥ ೪೨ ॥

ಮಹಾಬಲನಾದ ಅರ್ಜುನನು ಶ್ರುತಾಯುಧನ ಅಶ್ವಗಳನ್ನು ಮತ್ತು ಸಾರಥಿಯನ್ನು ಕೊಂದನು ಮತ್ತು ಅವನ ಮೇಲೆ ಎಪ್ಪತ್ತು ನಾರಾಚಗಳನ್ನು ಪ್ರಯೋಗಿಸಿದನು.

ಹತಾಶ್ವಂ ರಥಮುತ್ಸೃಜ್ಯ ಸ ತು ರಾಜಾ ಶ್ರುತಾಯುಧಃ ।
ಅಭ್ಯದ್ರವದ್ ರಣೇ ಪಾರ್ಥಂ ಗದಾಮುದ್ಯಮ್ಯ ವೀರ್ಯವಾನ್ ॥೪೩॥

ಅಶ್ವಗಳು ಮೃತವಾದ ಮೇಲೆ ರಾಜನೂ, ಪರಾಕ್ರಮಶಾಲಿಯೂ ಆದ ಶ್ರುತಾಯುಧನು ಆ ರಥವನ್ನು ತ್ಯಜಿಸಿ ಗದೆಯನ್ನು ಎತ್ತಿ ರಣರಂಗದಲ್ಲಿ ಅರ್ಜುನನ ಕಡೆಗೆ ಓಡಿದನು.

ವರುಣಸ್ಯಾತ್ಮಜೋ ವೀರಃ ಸ ತು ರಾಜಾ ಶ್ರುತಾಯುಧಃ ।
ಪರ್ಣಾಶಾ ಜನನೀ ಯಸ್ಯ ಶೀತತೋಯಾ ಮಹಾನದೀ ।
ತಸ್ಯ ಮಾತಾಽಬ್ರವೀದ್ ರಾಜನ್ ವರುಣಂ ಪುತ್ರಕಾರಣಾತ್ ॥ ೪೪ ॥

ಅವಧ್ಯೋಽಯಂ ಭವೇಲ್ಲೋಕೇ ಶತ್ರೂಣಾಂ ತನಯೋ ಮಮ ॥೪೫॥

ವೀರನಾದ ಶ್ರುತಾಯುಧ ರಾಜನಾದರೋ ವರುಣನ ಪುತ್ರ. ಶೀತೋದಕವನ್ನು ಹೊಂದಿದ ಮಹಾನದಿಯಾದ ಪರ್ಣಾಶೆಯು ತಾಯಿ. ಎಲೈ ರಾಜನೇ, ಪುತ್ರನ ವಿಷಯದಲ್ಲಿ ವರುಣನನ್ನು ಕುರಿತು- ಈ ನನ್ನ ಪುತ್ರನು ಲೋಕದಲ್ಲಿ ಅವಧ್ಯನಾಗಬೇಕು ಎಂದು ಕೇಳಿದಳು.

ಸಂಜಯಃ

ವರುಣಸ್ತ್ವಬ್ರವೀತ್ ಪ್ರೀತೋ ದದಾಮ್ಯೈ ವರಂ ಹಿತಮ್ ।
ದಿವ್ಯಮಸ್ತ್ರಂ ಸುತಸ್ತೇಽಯಂ ಯೇನಾವಧ್ಯೋ ಭವಿಷ್ಯತಿ ॥ ೪೬ ॥

ಸಂಜಯ– ವರುಣನು ಸಂತೋಷಗೊಂಡು ಅವನಿಗೆ ಹಿತವಾದ ವರವನ್ನು ಕೊಡುತ್ತೇನೆ. ದಿವ್ಯಾಸ್ತ್ರವನ್ನು ಕೊಡುತ್ತೇನೆ. ಆದರಿಂದ ನಿನ್ನ ಪುತ್ರನು ಅವಧ್ಯನಾಗುವನು ಎಂದು ಹೇಳಿದನು.

ನಾಸ್ತಿ ಚಾಪ್ಯಮರತ್ವಂ ವೈ ಮನುಷ್ಯಸ್ಯ ಕಥಂಚನ ।
ಸರ್ವೇಣಾವಶ್ಯಮರ್ತವ್ಯಂ ಜಾತೇನ ಸರಿತಾಂವರೇ ॥ ೪೭ ॥

ಮನುಷ್ಯನು ಮರಣಹೀನನಾಗಲು ಸಾಧ್ಯವೇ ಇಲ್ಲ. ಎಲೌ ಶ್ರೇಷ್ಠ ನದಿಯೇ, ಜನಿಸಿದವರೆಲ್ಲರೂ ಅವಶ್ಯವಾಗಿ ಮರಣವನ್ನು ಹೊಂದಲೇಬೇಕು.

ದುರ್ಧರ್ಷಸ್ತ್ವೇಷ ಶತ್ರೂಣಾಂ ರಣೇಷು ಭವಿತಾ ಸದಾ ।
ಅಸ್ತ್ರಸ್ಯಾಸ್ಯ ಪ್ರಭಾವೇನ ವೈತು ತೇ ಮಾನಸೋ ಜ್ವರಃ ॥ ೪೮ ॥

ಈ ಅಸ್ತ್ರದ ಪ್ರಭಾವದಿಂದ ಅವನು ಯುದ್ಧದಲ್ಲಿ ಶತ್ರುಗಳಿಂದ ಸೋಲಿಸಲ್ಪಡಲು ಅಸಾಧ್ಯನಾಗುವನು. ನಿನ್ನ ಮನಸ್ಸಿನ ಚಿಂತೆಯನ್ನು ಬಿಡು.

ಇತ್ಯುಕ್ತ್ವಾ ವರುಣಃ ಪ್ರಾದಾದ್ ಗದಾಂ ಮಂತ್ರಪುರಸ್ಕೃತಾಮ್ ।
ಯಾಮಾಸಾದ್ಯ ದುರಾಧರ್ಷಃ ಸರ್ವಲೋಕೇ ಶ್ರುತಾಯುಧಃ ॥ ೪೯ ॥

ಹೀಗೆ ಹೇಳಿ ವರುಣನು ಅಭಿಮಂತ್ರಿತವಾದ ಗದೆಯನ್ನು ಕೊಟ್ಟನು. ಅದನ್ನು ಹೊಂದಿ ಶ್ರುತಾಯುಧನು ಸರ್ವಲೋಕದಲ್ಲಿಯೂ ದುರಾಧರ್ಷನಾದನು.

ಉವಾಚ ಚೈನಂ ಭಗವಾನ್ ಪುನರೇವ ಜಲೇಶ್ವರಃ ।
ಅಯುದ್ಧ್ಯತಿ ನ ಮೋಕ್ತವ್ಯಾ ತ್ವಯ್ಯೇವ ನಿಪತೇದಿತಿ ।
ಹನ್ಯಾದೇಷಾ ಪ್ರತೀಪಂ ಹಿ ಪ್ರಯೋಕ್ತಾರಮಪಿ ಪ್ರಭೋ ॥ ೫೦ ॥

ಪೂಜ್ಯನಾದ ಜಲೇಶ್ವರನು ಪುನಃ ಅವನನ್ನು ಕುರಿತು ಈ ಗದೆಯನ್ನು ಯುದ್ಧ ಮಾಡದಿರುವವನಲ್ಲಿ ಪ್ರಯೋಗಿಸಬಾರದು. ಎಲೈ ಪ್ರಭುವೇ, ಹಾಗೆ ಮಾಡಿದರೆ ಆ

ಗದೆಯು ನಿನ್ನ ಮೇಲೆಯೇ ಬಂದು, ಪ್ರಯೋಗಿಸುವ ನಿನ್ನನ್ನೇ ಕೊಲ್ಲುವುದು ಎಂದು ಹೇಳಿದನು.

ನ ಚಾಕರೋತ್ ಸ ತದ್ ವಾಕ್ಯಂ ಕಾಲೇ ಪ್ರಾಪ್ತೇ ಶ್ರುತಾಯುಧಃ ।
ಸ ತಯಾ ವೀರಘಾತಿನ್ಯಾ ಜನಾರ್ದನಮತಾಡಯತ್ ॥ ೫೦ ॥

ಕಾಲವು ಪ್ರಾಪ್ತವಾದಾಗ ಶ್ರುತಾಯುಧನು ವರುಣನ ಆ ಮಾತನ್ನು ನಡೆಸಲಿಲ್ಲ. ಅವನು ವೀರಘಾತಿನಿಯಾದ ಆ ಗದೆಯನ್ನು ಕೃಷ್ಣನ ಮೇಲೆ ಪ್ರಯೋಗಿಸಿದನು.

ಪ್ರತಿಜಗ್ರಾಹ ತಾಂ ಕೃಷ್ಣಃ ಪೀನೇನಾಂಸೇನ ವೀರ್ಯವಾನ್ ।
ನಾಕಂಪಯತ ಶೌರಿಂ ಸಾ ವಿಂಧ್ಯಂ ಗಿರಿಮಿವಾನಿಲಃ ॥ ೫೨ ॥

ಪರಾಕ್ರಮಶಾಲಿಯಾದ ಕೃಷ್ಣನು ಆ ಗದೆಯನ್ನು ತನ್ನ ಉನ್ನತವಾದ ಭುಜದ ಮೇಲೆ ಸ್ವೀಕರಿಸಿದನು. ಗಾಳಿಯು ವಿಂಧ್ಯಪರ್ವತವನ್ನು ಅಲುಗಾಡಿಸಲು ಸಾಧ್ಯವಾಗದಂತೆ ಆ ಗದೆಯು ಕೃಷ್ಣನನ್ನು ಅಲುಗಾಡಿಸಲಿಲ್ಲ.

ತತೋಽರ್ಜುನಃ ಕ್ಷುರಪ್ರಾಭ್ಯಾಂ ಭುಜೌ ಪರಿಘಸನ್ನಿಭೌ ।
ವಿವ್ಯಾಧ ಪಾಂಡವಃ ಶೀಘ್ರಂ ಜಲೇಶ್ವರಸುತಸ್ಯ ವೈ ॥ ೫೩ ॥

ಆಗ ಅರ್ಜುನನು ಎರಡು ಕ್ಷುರಪ್ರಗಳಿಂದ ವರುಣಪುತ್ರನ ಒನಕೆಯಂತಹ ಭುಜಗಳನ್ನು ಶೀಘ್ರವಾಗಿ ಕತ್ತರಿಸಿದನು.

ಸಾ ಜ್ವಲಂತೀ ಮಹೋಲ್ಕೇವ ಸಮಾಸಾದ್ಯ ಜನಾರ್ದನಮ್ ।
ಪ್ರತ್ಯಾಗತಾ ಮಹಾವೇಗಾ ಕೃತ್ಯೇವ ದುರಧಿಷ್ಠಿತಾ ।
ಜಘಾನ ಚ ಸ್ಥಿತಂ ಸಂಖೇ ಶ್ರುತಾಯುಧಮಮರ್ಷಣಮ್ ॥ ೫೪ ॥

ಆ ಗದೆಯಾದರೂ ದೊಡ್ಡ ಉಲ್ಕೆಯಂತೆ ಜ್ವಲಿಸುತ್ತಾ, ಕೃಷ್ಣನನ್ನು ಸಮೀಪಿಸಿ, ಮಹಾವೇಗದಿಂದ ತಪ್ಪಾಗಿ ಪ್ರಯೋಗಿಸಿದ ಕೃತ್ಯದಂತೆ (ಪಿಶಾಚಿಯಂತೆ) ಹಿಂದೆ ತಿರುಗಿ ರಣರಂಗದಲ್ಲಿದ್ದ ರೋಷಾವಿಷ್ಟನಾದ ಶ್ರುತಾಯುಧನನ್ನೇ ಹೊಡೆಯಿತು.

ಸ ಪಪಾತ ಹತೋ ಭೂಮೌ ವಿಶಿರಾ ವಿಭುಜೋ ಬಲೀ ।
ಸಂಭಗ್ನ ಇವ ವಾತೇನ ಬಹುಶಾಖೋ ವನಸ್ಪತಿಃ ॥ ೫೫ ॥

ಬಲಿಷ್ಠನಾದ ಶ್ರುತಾಯುಧನು ತನ್ನ ಭುಜಗಳನ್ನು, ಶಿರಸ್ಸನ್ನು ಕಳೆದುಕೊಂಡು ಬಿರುಗಾಳಿಗೆ ಸಿಕ್ಕಿ ಭೂಮಿಯ ಮೇಲೆ ಬಿದ್ದ ಅನೇಕ ಕೊಂಬೆಗಳುಳ್ಳ ವೃಕ್ಷದಂತೆ ಭೂಮಿಯ ಮೇಲೆ ಬಿದ್ದನು.

ಸಾ ವಿಸ್ಫುರಂತೀ ಜ್ವಲಿತಾ ವಜ್ರವೇಗಸಮಾ ಗದಾ ।
ಹತ್ವಾ ಶ್ರುತಾಯುಧಂ ಭೀಮಾ ಜಗತೀಮನ್ವಪದ್ಯತ ।
ಗದಾಂ ನಿವರ್ತಿತಾಂ ದೃಷ್ಟ್ವಾ ನಿಹತಂ ಚ ಶ್ರುತಾಯುಧಮ್ ॥ ೫೬ ॥

ಹಾಹಾಕಾರೋ ಮಹಾನಾಸೀತ್ ಸೈನ್ಯಾನಾಂ ತವ ಭಾರತ ।
ಸ್ವೇನಾಸ್ತ್ರೇಣ ಹತಂ ದೃಷ್ಟ್ವಾ ಶ್ರುತಾಯುಧಮರಿಂದಮಮ್ ॥ ೫೭ ॥

ವಜ್ರವೇಗಕ್ಕೆ ಸಮವಾದ ವೇಗವುಳ್ಳ, ಜ್ವಾಲೆಗಳಿಂದ ಕೂಡಿದ, ಪ್ರಕಾಶಮಾನವಾದ, ಭಯಂಕರವಾದ ಆ ಗದೆಯು ಶ್ರುತಾಯುಧನನ್ನು ಕೊಂದು ಭೂಮಿಯ ಮೇಲೆ ಬಿದ್ದಿತು. ಎಲೈ ಭಾರತನೇ, ಗದೆಯು ಹಿಂದಕ್ಕೆ ಬಂದುದನ್ನೂ, ಅರಿಂದಮನಾದ ಶ್ರುತಾಯುಧನು ತನ್ನ ಅಸ್ತ್ರದಿಂದಲೇ ಹತನಾದುದನ್ನೂ ನೋಡಿ ನಿನ್ನ ಸೈನ್ಯದಲ್ಲಿ ದೊಡ್ಡ ಹಾಹಾಕಾರವುಂಟಾಯಿತು.

ಆಯುದ್ಧ್ಯಮಾನಾಯ ಹಿ ಸಾ ಕೇಶವಾಯ ನರಾಧಿಪ ।
ಕ್ಷಿಪ್ತಾ ಶ್ರುತಾಯುಧೇನಾಥ ತಸ್ಮಾತ್ ತಮವಧೀದ್ ಗದಾ ॥ ೫೮ ॥

ಎಲೈ ರಾಜನೇ, ಯುದ್ಧವನ್ನು ಮಾಡದಿರುವ ಕೃಷ್ಣನ ಮೇಲೆ ಶ್ರುತಾಯುಧನು ಆ ಗದೆಯನ್ನು ಎಸೆದನು. ಆ ಕಾರಣದಿಂದ ಗದೆಯು ಅವನನ್ನೇ ಕೊಂದಿತು.

ಯಥೋಕ್ತಂ ವರುಣೇನಾಜೌ ತಥಾ ಸ ನಿಧನಂ ಗತಃ ।
ವ್ಯಸುಶ್ಚಾಪ್ಯಪತದ್ ಭೂಮೌ ಪ್ರೇಕ್ಷತಾಂ ಸರ್ವಧನ್ವಿನಾಮ್ ॥ ೫೯ ॥

ವರುಣನು ಹಿಂದೆ ಹೇಳಿದಂತೆಯೇ ಅವನು ನಿಧನವನ್ನು ಹೊಂದಿದನು. ಎಲ್ಲ ಧನುರ್ಧಾರಿಗಳೂ ನೋಡುತ್ತಿರುವಂತೆಯೇ ಅವನು ಮೃತನಾಗಿ ಭೂಮಿಯಲ್ಲಿ ಬಿದ್ದನು.

ಪತಮಾನಸ್ತು ಸ ಬಭೌ ಪರ್ಣಾಶಾಯಾಃ ಪ್ರಿಯಃ ಸುತಃ ।
ಸಂಭಗ್ನ ಇವ ವಾತೇನ ಬಹುಶಾಖೋ ವನಸ್ಪತಿಃ ॥ ೬೦ ॥

ಪರ್ಣಾಶೆಯ ಪ್ರಿಯಪುತ್ರನಾದ ಅವನು ಬೀಳುತ್ತಾ ಬಿರುಗಾಳಿಗೆ ಸಿಕ್ಕಿ ಭಗ್ನಗೊಂಡ ಅನೇಕ ಕೊಂಬೆಗಳುಳ್ಳ ವೃಕ್ಷದಂತೆ ಶೋಭಿಸಿದನು.

ತತಃ ಸರ್ವಾಣಿ ಸೈನ್ಯಾನಿ ಸೈನ್ಯಮುಖ್ಯಾಶ್ಚ ಸರ್ವಶಃ ।
ಪ್ರಾದ್ರವಂತ ಹತಂ ದೃಷ್ಟ್ವಾ ಶ್ರುತಾಯುಧಮರಿಂದಮಮ್ ॥ ೬೧ ॥

ಆಗ ಅರಿಂದಮನಾದ ಶ್ರುತಾಯುಧನು ಹತನಾದುದನ್ನು ನೋಡಿ ಎಲ್ಲ ಸೈನ್ಯಗಳೂ ಮತ್ತು ಸೈನ್ಯ ನಾಯಕರೂ ಎಲ್ಲ ಕಡೆಗಳಲ್ಲಿಯೂ ಓಡಿಹೋದರು.

ತತಃ ಕಾಂಬೋಜರಾಜಸ್ಯ ಪುತ್ರೋ ಶೂರಃ ಸುದಕ್ಷಿಣಃ ।
ಅಭ್ಯಯಾಜ್ಜವನೈರಶ್ವೈಃ ಫಲ್ಗುನಂ ಶತ್ರುಸೂದನಮ್ ॥ ೬೨ ॥

ಆನಂತರ ಕಾಂಬೋಜ ರಾಜಕುಮಾರನಾದ, ಶೂರನಾದ ಸುದಕ್ಷಿಣನು ವೇಗಶಾಲಿಯಾದ ಅಶ್ವಗಳಿಂದ ಶತ್ರುಸೂದನನಾದ ಅರ್ಜುನನ ಮೇಲೆ ಎರಗಿದನು.

ತಸ್ಯ ಪಾರ್ಥಃ ಶರಾನ್ ಸಪ್ತ ಪ್ರೇಷಯಾಮಾಸ ಭಾರತ ।
ತೇ ತಂ ವೀರಂ ವಿನಿರ್ಭಿದ್ಯ ಪ್ರಾವಿಶನ್ ಧರಣೀತಳಮ್ ॥ ೬೩ ॥

ಎಲೈ ಭಾರತನೇ, ಅರ್ಜುನನು ಅವನ ಮೇಲೆ ಏಳು ಬಾಣಗಳನ್ನು ಪ್ರಯೋಗಿಸಿದನು. ಅವು ಆ ವೀರನ ಶರೀರವನ್ನು ಭೇದಿಸಿ ಭೂಮಿಯನ್ನು ಪ್ರವೇಶಿಸಿದವು.

ಸೋಽತಿವಿದ್ಧಃ ಶರೈಸ್ತೀಕ್ಷ್ಣೈರ್ಗಾಂಡೀವಪ್ರೇಷಿತೈರ್ಮೃಧೇ ।
ಅರ್ಜುನಂ ಪ್ರತಿವಿವ್ಯಾಧ ದಶಭಿಃ ಕಂಕಪತ್ರಿಭಿಃ ॥ ೬೪ ॥

ವಾಸುದೇವಂ ತ್ರಿಭಿರ್ವಿದ್ಧ್ವಾ ಪುನಃ ಪಾರ್ಥಂ ಚ ಪಂಚಭಿಃ ॥ ೬೫ ॥

ಗಾಂಡೀವ ಧನುಸ್ಸಿನಿಂದ ಹೊಮ್ಮಿದ ಅರ್ಜುನನ ಬಾಣಗಳಿಂದ ರಣರಂಗದಲ್ಲಿ ತೀವ್ರವಾಗಿ ಗಾಯಗೊಂಡ ಅವನು ಕಂಕಪತ್ರವನ್ನು ಹೊಂದಿದ್ದ ಹತ್ತು ಬಾಣಗಳಿಂದ ಅರ್ಜುನನನ್ನು ಪ್ರತಿಯಾಗಿ ಹೊಡೆದನು. ಅವನು ಕೃಷ್ಣನನ್ನು ಮೂರು ಬಾಣಗಳಿಂದ ಹೊಡೆದು, ಅರ್ಜುನನನ್ನು ಪುನಃ ಐದು ಬಾಣಗಳಿಂದ ಹೊಡೆದನು.

ತಸ್ಯ ಪಾರ್ಥೋ ಧನುಶ್ಛಿತ್ತ್ವಾ ಕೇತುಂ ಚಿಚ್ಛೇದ ಮಾರಿಷ ।
ಭಲ್ಲಾಭ್ಯಾಂ ಪೃಥುತೀಕ್ಷ್ಣಾಭ್ಯಾಂ ತಂ ಚ ವಿವ್ಯಾಧ ಪಾಂಡವಃ ।
ಸ ತು ಪಾರ್ಥಂ ತ್ರಿಭಿರ್ವಿದ್ಧ್ವಾ ಸಿಂಹನಾದಮಥಾನದತ್ ॥ ೬೬ ॥

ಎಲೈ ಪೂಜ್ಯನೇ, ಅರ್ಜುನನು ಅಗಲವೂ, ತೀಕ್ಷ್ಣವೂ ಆದ ಎರಡು ಭಲ್ಲಗಳಿಂದ ಅವನ ಧನುಸ್ಸನ್ನು ಮತ್ತು ಧ್ವಜವನ್ನು ಕತ್ತರಿಸಿ, ಅವನ ಮೇಲೆಯೂ ಆಯುಧಗಳನ್ನು ಪ್ರಯೋಗಿಸಿದನು. ಅವನನಾದರೂ ಅರ್ಜುನನನ್ನು ಮೂರು ಬಾಣಗಳಿಂದ ಹೊಡೆದು ಸಿಂಹನಾದವನ್ನು ಮಾಡಿದನು.

ಸರ್ವಪಾರಶವೀಂ ಚೈವ ಶಕ್ತಿಂ ಶೂರಃ ಸುದಕ್ಷಿಣಃ ।
ಸಘಂಟಾಂ ಪ್ರಾಹಿಣೋದ್ ಘೋರಾಂ ಕ್ರುದ್ಧೋ ಗಾಂಡೀವಧನ್ವನೇ ॥

ಶೂರನಾದ ಸುದಕ್ಷಿಣನು ಕ್ರುದ್ಧನಾಗಿ, ಪೂರ್ಣವಾಗಿ ಅಯೋಮಯವಾದ, ಘಂಟೆಗಳಿಂದ ಕೂಡಿದ, ಘೋರವಾದ ಶಕ್ತ್ಯಾಯುಧವನ್ನು ಅರ್ಜುನನ ಮೇಲೆ ಪ್ರಯೋಗಿಸಿದನು.

ಸಾ ಜ್ವಲಂತೀ ಮಹೋಲ್ಕೇವ ಸಮಾಸಾದ್ಯ ಮಹಾರಥಮ್ ।
ಸವಿಷ್ಫುಲಿಂಗಾ ನಿರ್ಭಿದ್ಯ ನಿಪಪಾತ ಮಹೀತಲೇ ॥ ೬೮ ॥

ಜ್ವಾಲೆಗಳಿಂದಲೂ, ಅಗ್ನಿಕಿಡಿಗಳಿಂದಲೂ ಕೂಡಿದ ಆ ಶಕ್ತ್ಯಾಯುಧವು ಮಹಾರಥನಾದ ಅರ್ಜುನನನ್ನು ಸಮೀಪಿಸಿ, ಅವನನ್ನು ಭೇದಿಸಿ ಭೂಮಿಯ ಮೇಲೆ ಬಿದ್ದಿತು.

ತಂ ಚತುರ್ದಶಭಿಃ ಪಾರ್ಥೋ ನಾರಾಚೈಃ ಕಂಕಪತ್ರಿಭಿಃ ।
ಸಾಶ್ವಧ್ವಜಧನುಃಸೂತಂ ವಿವ್ಯಾಧಾಚಿಂತ್ಯವಿಕ್ರಮಃ ॥ ೬೯ ॥

ರಥಂ ಚಾನ್ಯೈಃ ಸುಬಹುಭಿಃ ಚಕ್ರೇ ವಿಶಕಲಂ ಶರೈಃ ॥ ೭೦ ॥

ಅಚಿಂತ್ಯ ಪರಾಕ್ರಮಿಯಾದ ಅರ್ಜುನನು ಅವನ ಮೇಲೆ ಕಂಕಪತ್ರವನ್ನು ಹೊಂದಿದ ಹದಿನಾಲ್ಕು ನಾರಾಚಗಳನ್ನು ಪ್ರಯೋಗಿಸಿ, ಅವನ ಅಶ್ವಗಳನ್ನೂ, ಧ್ವಜವನ್ನೂ, ಧನುಸ್ಸನ್ನೂ ಮತ್ತು ಸಾರಥಿಯನ್ನೂ ವಿನಾಶಗೊಳಿಸಿ, ಇನ್ನೂ ಅನೇಕ ಬಾಣಗಳಿಂದ ಅವನ ರಥವನ್ನು ಪುಡಿ-ಪುಡಿ ಮಾಡಿದನು.

ಸುದಕ್ಷಿಣಂ ಚ ಕಾಂಬೋಜಂ ಮೋಘಸಂಕಲ್ಪವಿಕ್ರಮಮ್ ।
ಬಿಭೇದ ಹೃದಿ ಬಾಣೇನ ಪೃಥುಧಾರೇಣ ಪಾಂಡವಃ ॥ ೭೧ ॥

ವ್ಯರ್ಥವಾದ ಸಂಕಲ್ಪವನ್ನು ಮತ್ತು ವಿಕ್ರಮವನ್ನು ಹೊಂದಿದ್ದ ಕಾಂಬೋಜ ದೇಶದ ಸುದಕ್ಷಿಣನ ಮೇಲೆ ಅರ್ಜುನನು ಅಗಲವಾದ ಧಾರೆಯುಳ್ಳ ಒಂದು ಬಾಣವನ್ನು ಪ್ರಯೋಗಿಸಿ ಅವನ ಹೃದಯವನ್ನು ಭೇದಿಸಿದನು.

ಸ ಭಿನ್ನವರ್ಮಾ ಸ್ರಸ್ತಾಂಗಃ ಪ್ರಭ್ರಷ್ಟಮುಕುಟಾಂಗದಃ ।
ಪಪಾತಾಭಿಮುಖಃ ಶೂರೋ ಮುಕ್ತಯಂತ್ರ ಇವ ಧ್ವಜಃ ॥ ೭೨ ॥

ಶೂರನಾದ ಸುದಕ್ಷಿಣನು ಕವಚವು ಕತ್ತರಿಸಲ್ಪಟ್ಟು, ದೇಹದ ಅವಯವಗಳೆಲ್ಲವೂ ಶಿಥಿಲಗೊಂಡು, ಕಿರೀಟ ಮತ್ತು ಅಂಗದಗಳು ಹರಿದು ಹೋಗಿ ಯಂತ್ರದಿಂದ ಮುಕ್ತವಾದ ಧ್ವಜದಂತೆ ಅರ್ಜುನನಿಗೆ ಅಭಿಮುಖವಾಗಿ ಬಿದ್ದನು.

ಗಿರೇಃ ಶಿಖರಜಃ ಶ್ರೀಮಾನ್ ಸುಶಾಖಃ ಸುಪ್ರತಿಷ್ಠಿತಃ ।
ಸಂಭಗ್ನ ಇವ ವಾತೇನ ಕರ್ಣಿಕಾರೋ ಹಿಮಾತ್ಯಯೇ ॥ ೭೩ ॥

ಹಿಮಗಾಲವು ಕಳೆದ ಮೇಲೆ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಪರ್ವತ ಶಿಖರದಿಂದ ಉರುಳಿದ, ಚೆನ್ನಾಗಿ ಬೇರೂರಿದ ಅನೇಕ ಕೊಂಬೆಗಳುಳ್ಳ ಕಾಂತಿಯುಕ್ತವಾದ ಕರ್ಣಿಕಾರ ವೃಕ್ಷದಂತೆ ಅವನು ಭಗ್ನನಾದನು.

ವಿಕೀರ್ಣಃ ಪತಿತೋ ರಾಜಾ ಪ್ರಸಾರ್ಯ ವಿಪುಲೌ ಭುಜೌ ।
ಧಾರಯನ್ನಗ್ನಿಸಂಕಾಶಾಂ ಶಿರಸಾ ಕಾಂಚನೀಂ ಸ್ರಜಮ್ ॥ ೭೪ ॥

ಅವನು ತನ್ನ ಭುಜಗಳನ್ನು ಹರಡಿ, ಅಗ್ನಿಯಂತೆ ಹೊಳೆಯುವ ಸುವರ್ಣಮಯವಾದ ಮಾಲೆಯನ್ನು ಶಿರಸ್ಸಿನಲ್ಲಿ ಧರಿಸಿ, ಭೂಮಿಯ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದನು.

ಶೇತೇ ವಿನಿಹತೋ ಭೂಮೌ ಕಾಂಬೋಜಸ್ತರುಣೋ ವಿಭುಃ ।
ಸುದರ್ಶನೀಯಸ್ತಾಮ್ರಾಕ್ಷೋ ಭಿನ್ನೋ ಹಿಮಗಿರಿರ್ಯಥಾ ।
ಮಹಾರ್ಹಾಭರಣೋಪೇತಃ ಸಾನುಮಾನಿವ ಪರ್ವತಃ ॥ ೭೫ ॥

ಅರ್ಜುನನ ಬಾಣದಿಂದ ಹೊಡೆಯಲ್ಪಟ್ಟು ಕಾಂಬೋಜ ದೇಶದ ತರುಣನೂ, ಸುಂದರನೂ, ತಾಮ್ರಾಕ್ಷನೂ ಆದ ರಾಜನು ಬೆಲೆಬಾಳುವ ಆಭರಣದಿಂದ ಕೂಡಿದವನಾಗಿ, ಶಿಖರದಿಂದ ಕೂಡಿದ ಪರ್ವತದಂತೆ ಭೇದಿಸಲ್ಪಟ್ಟ ಹಿಮಾಲಯದಂತೆ ಭೂಮಿಯ ಮೇಲೆ ಮಲಗಿದನು.

ಪುತ್ರಃ ಕಾಂಬೋಜರಾಜಸ್ಯ ಪಾರ್ಥೇನ ವಿನಿಪಾತಿತಃ ।
ಶೋಚಯನ್ ಸರ್ವಭೂತಾನಿ ಕೇಶವಂ ಚ ಸಹಾರ್ಜುನಮ್ ।
ಅಶೋಭತ ಮಹಾಬಾಹುಃ ವ್ಯಸುರ್ಭೂಮೌ ನಿಪಾತಿತಃ ॥ ೭೬ ॥

ಕಾಂಬೋಜರಾಜನ ಪುತ್ರನು ಅರ್ಜುನನಿಂದ ಭೂಮಿಯ ಮೇಲೆ ಕೆಡವಲ್ಪಟ್ಟು ಎಲ್ಲ ಯೋಧರಿಗೂ, ಕೇಶವಾದಿಗಳಿಗೂ ಶೋಕವನ್ನುಂಟು ಮಾಡುತ್ತಾ ಮಹಾಬಾಹುವಾದ ಅವನು ಮೃತನಾಗಿ ಭೂಮಿಯ ಮೇಲೆ ಶೋಭಿಸಿದನು.

ತತಃ ಸೈನ್ಯಾನಿ ಸರ್ವಾಣಿ ವ್ಯದ್ರವಂತ ಸುತಸ್ಯ ತೇ ।
ಹತಂ ಶ್ರುತಾಯುಧಂ ದೃಷ್ಟ್ವಾ ಕಾಂಬೋಜಂ ಚ ಸುದಕ್ಷಿಣಮ್ ॥೭೭॥

ಆಗ ಹತನಾದ ಶ್ರುತಾಯುಧನನ್ನು ಮತ್ತು ಕಾಂಬೋಜರಾಜನಾದ ಸುದಕ್ಷಿಣನನ್ನು ನೋಡಿ ನಿನ್ನ ಪುತ್ರನ ಸೈನ್ಯವೆಲ್ಲವೂ ಓಡಿ ಹೋಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಾಶೀತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆರಡನೆಯ ಅಧ್ಯಾಯ

ಅರ್ಜುನನಿಂದ ಶ್ರುತಾಯು ಮೊದಲಾದವರ ವಧೆ.

ಸಂಜಯಃ

ಸುದಕ್ಷಿಣೇ ಹತೇ ರಾಜನ್ ವೀರೇ ಚೈವ ಶ್ರುತಾಯುಧೇ ।
ಜವೇನಾಭ್ಯದ್ರವನ್ ಪಾರ್ಥಂ ಕುಪಿತಾಃ ಸೈನಿಕಾಸ್ತವ ॥ ೧ ॥

ಸಂಜಯ– ಎಲೈ ರಾಜನೇ, ಸುದಕ್ಷಿಣನು ಮತ್ತು ವೀರನಾದ ಶ್ರುತಾಯುಧನು ಹತನಾಗುತ್ತಿರಲು ನಿನ್ನ ಸೈನಿಕರು ಕೋಪದಿಂದ ಅರ್ಜುನನ ಮೇಲೆ ಎರಗಿದರು.

ಅಭೀಷಾಹಾಃ ಶೂರಸೇನಾಃ ಶಿಬಯೋಽಥ ವಸಾತಯಃ ।
ಅಭ್ಯವರ್ಷಂಸ್ತತೋ ರಾಜನ್ ಶರವರ್ಷೈರ್ಧನಂಜಯಮ್ ॥ ೨ ॥

ಎಲೈ ರಾಜನೇ, ಅಭೀಷಾಹರು, ಶೂರಸೇನರು, ಶಿಬಿಗಳು, ವಸಾತಿಗಳು ಬಾಣದ ಮಳೆಗಳನ್ನು ಧನಂಜಯನ ಮೇಲೆ ಸುರಿಸಿದರು.

ತೇಷಾಂ ಷಷ್ಟಿಶತಾನ್ ವರ್ಯಾನಹನತ್ ಪಾಂಡವಃ ಶರೈಃ ।
ತೇ ಸ್ಮ ಭೀತಾಃ ಪಲಾಯಂತೇ ಸಿಂಹೇನೇವಾರ್ದಿತಾ ಗಜಾಃ ॥ ೩ ॥

ಅವರಲ್ಲಿ ಶ್ರೇಷ್ಠರಾದ ಅರವತ್ತು ಸಾವಿರ ಯೋಧರನ್ನು ಅರ್ಜುನನು ತನ್ನ ಬಾಣಗಳಿಂದ ಕೊಂದನು. ಅವರು ಸಿಂಹದಿಂದ ಪೀಡಿಸಲ್ಪಟ್ಟ ಗಜಗಳಂತೆ ಭಯದಿಂದ ಪಲಾಯನ ಮಾಡಿದರು.

ತೇ ನಿವೃತ್ಯ ಪುನಃ ಪಾರ್ಥಂ ಸರ್ವತಃ ಪರ್ಯವಾರಯನ್ ।
ರಣೇ ಸಪತ್ನಾನ್ ನಿಘ್ನಂತಂ ವಜ್ರಹಸ್ತಮಿವಾಸುರಾಃ ॥ ೪ ॥

ಅವರು ಎಲ್ಲಕಡೆಯಿಂದಲೂ ಪುನಃ ಹಿಂದಿರುಗಿ ಬಂದು ಅಸುರರು ವಜ್ರಹಸ್ತನಾದ ಇಂದ್ರನನ್ನು ಮುತ್ತಿದಂತೆ ಶತ್ರುಗಳನ್ನು ಸಂಹರಿಸುತ್ತಿದ್ದ ಅರ್ಜುನನನ್ನು ಸುತ್ತುವರಿದರು.

ತೇಷಾಮಾಪತತಾಂ ತೂರ್ಣಂ ಗಾಂಡೀವಪ್ರೇಷಿತೈಃ ಶರೈಃ ।
ಉಚ್ಚಕರ್ತ ಶಿರಾಂಸ್ಯುಗ್ರೋ ನಾಳೇಭ್ಯ ಇವ ಪಂಕಜಾನ್ ।
ಶರೋಭಿಃ ಪತಿತೈಸ್ತತ್ರ ಭೂಮಿರಾಸೀನ್ನಿರಂತರಾ ॥ ೫ ॥

ಅರ್ಜುನನು ತನ್ನ ಮೇಲೆ ಎರಗುತ್ತಿರುವ ಅವರ ಶಿರಸ್ಸುಗಳನ್ನು ಗಾಂಡೀವದಿಂದ ಹೊರಹೊಮ್ಮಿದ ಬಾಣಗಳಿಂದ ನಾಳಗಳಿಂದ ಕಮಲಗಳನ್ನು ಕತ್ತರಿಸಿದಂತೆ ಕತ್ತರಿಸಿದನು. ಹಾಗೆ ಬದ್ದ ಶಿರಸ್ಸುಗಳಿಂದ ಭೂಮಿಯು ನಿಬಿಡವಾಯಿತು.

ಶಿರೋಭಿಃ ಪ್ರಪತದ್ಭಿಸ್ತೈರಂತರಿಕ್ಷಂ ಸಮಾವೃತಮ್ ।
ಅಭ್ರಚ್ಛಾಯೇವ ತತ್ರಾಸೀದ್ ಧ್ವಾಂಕ್ಷಗೃಧ್ರಬಲೈಃ ಪುನಃ ॥ ೬ ॥

ಶಿರಸ್ಸುಗಳು ಹಾಗೆ ಬೀಳುತ್ತಿರಲು ಅವುಗಳಿಂದ ಅಂತರಿಕ್ಷ ಪ್ರದೇಶವು ತುಂಬಿಹೋಯಿತು ಮತ್ತು ಅಂತರಿಕ್ಷದಲ್ಲಿ ಸಮಾವೇಶಗೊಂಡ ಹದ್ದು, ಕಾಗೆ, ಬಲ ಮುಂತಾದ ಪಕ್ಷಿಗಳಿಂದ ಭೂಮಿಯ ಮೇಲೆ ಮೋಡದಿಂದ ಉಂಟಾಗುವ ಛಾಯೆಯಂತೆ ಛಾಯೆ ಉಂಟಾಯಿತು.

ತೇಷು ತೂತ್ಪದ್ಯಮಾನೇಷು ಕ್ರೋಧಾಮರ್ಷಸಮನ್ವಿತೌ ।
ಶ್ರುತಾಯುಶ್ಚಾಯುತಾಯುಶ್ಚ ಧನಂಜಯಮಯುದ್ಧ್ಯತಾಮ್ ॥ ೭ ॥

ಕ್ರೋಧಾಮರ್ಷ ಸಮನ್ವಿತರಾದ ಅವರು ಸಂಹರಿಸಲ್ಪಡುತ್ತಿರಲು ಶ್ರುತಾಯು ಮತ್ತು ಅಯುತಾಯುಗಳು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಶ್ಲಾಘಿನೌ ಸ್ಪರ್ಧಿನೌ ವೀರೌ ಕುಲಜೌ ಬಾಹುಶಾಲಿನೌ ।
ತಾವೇನಂ ಶರವರ್ಷಾಭ್ಯಾಂ ಸವ್ಯದಕ್ಷಿಣಮಸ್ಯತಾಮ್ ॥ ೮ ॥

ಕೀರ್ತಿವಂತರೂ, ಸ್ಪರ್ಧಿಗಳೂ, ಬಾಹುಶಾಲಿಗಳೂ, ಒಳ್ಳೆಯ ಕುಲದಲ್ಲಿ ಜನಿಸಿದವರೂ, ವೀರರೂ ಆದ ಅವರು ಬಾಣದ ಮಳೆಗಳನ್ನು ಅರ್ಜುನನ ಎಡಭಾಗದಲ್ಲಿ ಮತ್ತು ಬಲಭಾಗದಲ್ಲಿ ಸುರಿಸಿದರು.

ತ್ವರಾಯುಕ್ತೌ ಮಹಾರಾಜ ಪ್ರಾರ್ಥಯಂತೌ ಮಹದ್ ಯಶಃ ।
ಅರ್ಜುನಸ್ಯ ವಧಪ್ರೇಪ್ಸೂ ಪುತ್ರಾರ್ಥೇ ತವ ಧನ್ವಿನೌ ॥ ೯ ॥

ತಾವರ್ಜುನಂ ಸಹಸ್ರೇಣ ಶರಾಣಾಂ ನತಪರ್ವಣಾಮ್ ।
ಪೂರಯಾಮಾಸತುಃ ಕ್ರುದ್ಧೌ ತಟಾಕಂ ಜಲದೋ ಯಥಾ ॥ ೧೦ ॥

ಎಲೈ ಮಹಾರಾಜನೇ, ಅವರು ತ್ವರೆಯಿಂದ ಕೂಡಿದವರಾಗಿ ಮಹಾಕೀರ್ತಿಯನ್ನು ಆಶಿಸುತ್ತಾ, ಅರ್ಜುನನ ವಧೆಯನ್ನು ಬಯಸಿ ನಿನ್ನ ಪುತ್ರನ ಸಲುವಾಗಿ ಧನುಸ್ಸನ್ನು

ಹಿಡಿದು, ಮೋಡವು ನೀರಿನಿಂದ ಕೆರೆಯನ್ನು ತುಂಬಿದಂತೆ ಸಹಸ್ರಾರು ಬಾಣಗಳಿಂದ ಅರ್ಜುನನನ್ನು ತುಂಬಿದರು.

ಶ್ರುತಾಯುಸ್ತು ತತಃ ಕ್ರುದ್ಧಃ ತೋಮರೇಣ ಧನಂಜಯಮ್ ।
ಆಜಘಾನ ಸುತೀಕ್ಷ್ಣೇನ ಪೀತೇನ ನಿಶಿತೇನ ಚ ॥ ೧೧ ॥

ಆಗ ಶ್ರುತಾಯುವು ಕ್ರುದ್ಧನಾಗಿ ತೀಕ್ಷ್ಣವಾದ, ನೀರನ್ನು ಕುಡಿಸಿ ಹದಮಾಡಿದ, ಹರಿತವಾದ, ತೋಮರದಿಂದ ಅರ್ಜುನನನ್ನು ಹೊಡೆದನು.

ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುಕರ್ಶನಃ ।
ಜಗಾಮ ಪರಮಂ ಮೋಹಂ ಮೋಹಯನ್ ಕೇಶವಂ ರಣೇ ॥ ೧೨ ॥

ಶತ್ರುಕರ್ಶನನಾದ ಅರ್ಜುನನು ಬಲಿಷ್ಠನಾದ ಶತ್ರುವಿನಿಂದ ಗಾಢವಾಗಿ ಹೊಡೆಯಲ್ಪಟ್ಟು, ರಣರಂಗದಲ್ಲಿ ಕೃಷ್ಣನಿಗೆ ಮೋಹವನ್ನುಂಟು ಮಾಡುವವನಾಗಿ ಮೂರ್ಛೆ ಹೋದನು.

ಏತಸ್ಮಿನ್ನೇವ ಕಾಲೇ ತು ಅಯುತಾಯುರ್ಮಹಾರಥಃ ।
ಶೂಲೇನ ಭೃಶತೀಕ್ಷ್ಣೇನ ತಾಡಯಾಮಾಸ ಪಾಂಡವಮ್ ॥ ೧೩ ॥

ಅದೇ ಸಮಯದಲ್ಲಿ ಮಹಾರಥನಾದ ಅಯುತಾಯುವು ಮಹಾತೀಕ್ಷ್ಣವಾದ ಶೂಲದಿಂದ ಅರ್ಜುನನನ್ನು ಹೊಡೆದನು.

ಕ್ಷತೇ ಕ್ಷಾರಂ ಹಿ ಸ ದದೌ ಪಾಂಡವಸ್ಯ ಮಹಾತ್ಮನಃ ।
ಪಾರ್ಥೋಽಪಿ ಭೃಶಸಂವಿದ್ಧೋ ಧ್ವಜಯಷ್ಟಿಮಶಿಶ್ರಿಯತ್ ॥ ೧೪ ॥

ಮಹಾತ್ಮನಾದ ಪಾಂಡವನಿಗೆ ಗಾಯದ ಮೇಲೆ ಉಪ್ಪನ್ನು ಹಾಕಿದಂತೆ ಮಾಡಿದನು. ಬಹಳ ಗಾಯಗೊಂಡ ಅರ್ಜುನನೂ ಸಹ ಧ್ವಜಯಷ್ಟಿಯನ್ನು ಆಶ್ರಯಿಸಿದನು.

ತತಃ ಸರ್ವಸ್ಯ ಸೈನ್ಯಸ್ಯ ತಾವಕಸ್ಯ ವಿಶಾಂಪತೇ ।
ಸಿಂಹನಾದೋ ಮಹಾನಾಸೀದ್ಧತಂ ಮತ್ವಾ ಧನಂಜಯಮ್ ॥ ೧೫ ॥

ಎಲೈ ರಾಜನೇ, ಆಗ ಧನಂಜಯನು ಹತನಾದನೆಂದು ತಿಳಿದು ನಿನ್ನ ಎಲ್ಲಸೈನ್ಯಕ್ಕೂ ದೊಡ್ಡ ಸಿಂಹನಾದ ಉಂಟಾಯಿತು.

ಕೃಷ್ಣಶ್ಚ ಭೃಶಸಂತಪ್ತೋ ದೃಷ್ಟ್ವಾ ಪಾರ್ಥಂ ವಿಚೇತಸಮ್ ।
ಆಶ್ವಾಸಯತ ಹೃದ್ಯಾಭಿರ್ವಾಗ್ಭಿಸ್ತತ್ರ ಧನಂಜಯಮ್ ॥ ೧೬ ॥

ಕೃಷ್ಣನೂ ಸಹ ಅರ್ಜುನನು ಸಂಜ್ಞಾಹೀನನಾಗಿರುವುದನ್ನು ನೋಡಿ, ಬಹಳ ಸಂತಾಪಗೊಂಡು ಮಧುರವಾದ ಮಾತುಗಳಿಂದ ಅವನನ್ನು ಸಮಾಧಾನ ಪಡಿಸಿದನು.

ತತಸ್ತೌ ರಥಿನಾಂ ಶ್ರೇಷ್ಠೌ ಲಬ್ಧಲಕ್ಷೌ ಧನಂಜಯಮ್ ।
ವಾಸುದೇವಂ ಚ ವಾರ್ಷ್ಣೇಯಂ ಶರವರ್ಷೈಃ ಸಮಂತತಃ ॥ ೧೭ ॥

ಸಚಕ್ರಕೂಬರರಥಂ ಸಾಶ್ವಧ್ವಜಪತಾಕಿನಮ್ ।
ಅದೃಶ್ಯಂ ಚಕ್ರತುರ್ಯುದ್ಧೇ ತದದ್ಭುತಮಿವಾಭವತ್ ॥ ೧೮ ॥

ಆಗ ತಮ್ಮ ಗುರಿಯನ್ನು ಸಾಧಿಸಿದ ರಥಿಶ್ರೇಷ್ಠರಾದ ಶ್ರುತಾಯು ಮತ್ತು ಅಯುತಾಯುಗಳು ಕೃಷ್ಣಾರ್ಜುನರ ಮೇಲೆ ಎಲ್ಲ ಕಡೆಗಳಿಂದಲೂ ಬಾಣ ಪ್ರಯೋಗ ಮಾಡಿ ಅವರ ಚಕ್ರ, ಕೂಬರದಿಂದ ಕೂಡಿದ, ಅಶ್ವ-ಧ್ವಜ-ಪತಾಕೆಗಳಿಂದ ಕೂಡಿದ ರಥವನ್ನೂ ಸಹ ಯುದ್ಧದಲ್ಲಿ ಅದೃಶ್ಯವನ್ನಾಗಿ ಮಾಡಿದರು. ಅದು ಅದ್ಭುತವಾಗಿದ್ದಿತು.

ಪ್ರತ್ಯಾಶ್ವಸ್ತಸ್ತು ಬೀಭತ್ಸುಃ ಶನಕೈರಿವ ಭಾರತ ।
ಪ್ರೇತರಾಜಪುರಂ ಪ್ರಾಪ್ಯ ಪುನಃ ಪ್ರತ್ಯಾಗತೋ ಯಥಾ ॥ ೧೯ ॥

ಎಲೈ ಭಾರತನೇ, ಯಮಪಟ್ಟಣಕ್ಕೆ ಹೋಗಿ ಹಿಂದಿರುಗಿದವನಂತೆ ಅರ್ಜುನನು ನಿಧಾನವಾಗಿ ಸಮಾಧಾನಗೊಂಡನು.

ಸಂಭಿನ್ನಂ ಶರಜಾಲೇನ ರಥಂ ದೃಷ್ಟ್ವಾ ಸಕೇಶವಮ್ ।
ಶತ್ರೂ ಚ ಪ್ರಮುಖೇ ದೃಷ್ಟ್ವಾ ದೀಪ್ಯಮಾನಾವಿವಾನಲೌ ॥ ೨೦ ॥

ಪ್ರಾದುಶ್ಚಕ್ರೇ ತತಃ ಪಾರ್ಥ ಐಂದ್ರಮಸ್ತ್ರಂ ಮಹಾರಥಃ ।
ತಸ್ಮಾದಾಸನ್ ಸಹಸ್ರಾಣಿ ಶರಾಣಾಂ ನತಪರ್ವಣಾಮ್ ।
ತೇ ಜಘ್ನುಸ್ತೌ ಮಹೇಷ್ವಾಸೌ ತಾಭ್ಯಾಂ ಮುಕ್ತಾಶ್ಚ ಸಾಯಕಾನ್ ॥೨೧॥

ಕೇಶವನಿಂದ ಕೂಡಿದ ತನ್ನ ರಥವು ಶತ್ರುಗಳ ಬಾಣ ಸಮೂಹದಿಂದ ಮುಚ್ಚಲ್ಪಟ್ಟಿರುವುದನ್ನೂ, ತನ್ನ ಎದುರಿನಲ್ಲಿಯೇ ಉರಿಯುವ ಅಗ್ನಿಯಂತಿರುವ ಇಬ್ಬರು

ಶತ್ರುಗಳನ್ನು ನೋಡಿ ಮಹಾರಥನಾದ ಅರ್ಜುನನು ಐಂದ್ರಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ಬಾಗಿದ ತುದಿಯುಳ್ಳ ಸಹಸ್ರಾರು ಬಾಣಗಳು ಹೊರಹೊಮ್ಮಿದವು. ಅವು ಆ ಇಬ್ಬರು ಧನುರ್ಧಾರಿಗಳನ್ನೂ ಮತ್ತು ಅವರು ಪ್ರಯೋಗಿಸಿದ ಬಾಣಗಳನ್ನೂ ವಿನಾಶಗೊಳಿಸಿದವು.

ಹತ್ವಾ ತು ತೌ ಮಹೇಷ್ವಾಸೌ ತಾಭ್ಯಾಂ ಸೃಷ್ಟಾಂಶ್ಚ ಸಾಯಕಾನ್ ।
ವಿಚೇರುರಾಕಾಶಗತಾಃ ಪಾರ್ಥಚಾಪವಿದಾರಿತಾಃ ॥ ೨೨ ॥

ಅರ್ಜುನನ ಚಾಪದಿಂದ ಹೊರಹೊಮ್ಮಿದ ಬಾಣಗಳು ಧನುರ್ಧಾರಿಗಳಾದ ಅವರಿಬ್ಬರನ್ನೂ ಮತ್ತು ಅವರು ಪ್ರಯೋಗಿಸಿದ ಬಾಣಗಳನ್ನೂ ವಿನಾಶಗೊಳಿಸಿ ಆಕಾಶದಲ್ಲಿ ಸಂಚರಿಸಿದವು.

ಪ್ರತಿಹತ್ಯ ಶರಾಂಸ್ತೂರ್ಣಂ ಶರವೇಗೇನ ಪಾಂಡವಃ ।
ಪ್ರತಸ್ಥೇ ತತ್ರ ತತ್ರೈವ ಯೋಧಯನ್ ವೈ ಮಹಾರಥಾನ್ ॥ ೨೩ ॥

ಹೀಗೆ ಅರ್ಜುನನು ತನ್ನ ಶರಗಳ ವೇಗದಿಂದ ಅವರ ಶರಗಳನ್ನು ಪೂರ್ಣವಾಗಿ ನಾಶಗೊಳಿಸಿ ಮಹಾರಥರ ಜೊತೆಯಲ್ಲಿ ಅಲ್ಲಲ್ಲಿ ಯುದ್ಧವನ್ನು ಮಾಡುತ್ತಾ ಮುಂದೆ ಹೊರಟನು.

ತೌ ಚ ಫಲ್ಗುನಬಾಣೌಘೈರ್ವಿಬಾಹುಶಿರಸೌ ಕೃತೌ ।
ವಸುಧಾಮನ್ವಪದ್ಯೇತಾಂ ವಾತನುನ್ನಾವಿವ ದ್ರುಮೌ ॥ ೨೪ ॥

ಅರ್ಜುನನ ಬಾಣ ಸಮೂಹಗಳಿಂದ ಬಾಹುಗಳು ಮತ್ತು ಶಿರಸ್ಸುಗಳು ಕತ್ತರಿಸಲ್ಪಟ್ಟು ಅವರಿಬ್ಬರೂ ಬಿರುಗಾಳಿಗೆ ಸಿಲುಕಿದ ವೃಕ್ಷಗಳಂತೆ ಭೂಮಿಯ ಮೇಲೆ ಬಿದ್ದರು.

ಶ್ರುತಾಯುಷಶ್ಚ ನಿಧನಂ ವಧಶ್ಚೈವಾಯುತಾಯುಷಃ ।
ಲೋಕವಿಸ್ಮಾಪನಮಭೂತ್ ಸಮುದ್ರಸ್ಯೇವ ಶೋಷಣಮ್ ॥ ೨೫ ॥

ಶ್ರುತಾಯು ಮತ್ತು ಅಯುತಾಯುಗಳ ಮರಣವು ಸಮುದ್ರದ ಶೋಷಣೆಯಂತೆ ಲೋಕವಿಸ್ಮಯಕರವಾಯಿತು.

ತಯೋಃ ಪದಾನುಗಾನ್ ಹತ್ವಾ ಪುನಃ ಪಂಚಶತಾನ್ ರಥಾನ್ ।
ಅತ್ಯಗಾದ್ ಭಾರತೀಂ ಸೇನಾಂ ನಿಘ್ನನ್ ಪಾರ್ಥೋ ರಥಾನ್ ವರಾನ್ ॥

ಅರ್ಜುನನು ಅವರ ಅನುಯಾಯಿಗಳಾದ ಐದುನೂರು ರಥಿಕರನ್ನು ಸಂಹರಿಸಿ, ಉಳಿದ ಶ್ರೇಷ್ಠರಾದ ರಥಿಕರನ್ನು ಕೊಲ್ಲುತ್ತಾ ಆ ಭಾರತ ಸೇನೆಯನ್ನು ದಾಟಿದನು.

ಶ್ರುತಾಯುಷಶ್ಚ ನಿಧನಂ ಪ್ರೇಕ್ಷ್ಯ ಚೈವಾಯುತಾಯುಷಃ ।
ನಿಯುತಾಯುರ್ಹಿ ಸಂಕ್ರುದ್ಧೋ ದೀರ್ಘಾಯುಶ್ಚೈವ ಭಾರತ ॥ ೨೭ ॥

ಪುತ್ರೌ ತಯೋ ರಥಶ್ರೇಷ್ಠೌ ಕೌಂತೇಯಂ ಪ್ರತಿಜಗ್ಮತುಃ ।
ಕಿರಂತೌ ವಿವಿಧಾನ್ ಬಾಣಾನ್ ಪಿತುರ್ವ್ಯಸನಕರ್ಶಿತೌ ॥ ೨೮ ॥

ಎಲೈ ಭಾರತನೇ, ಶ್ರುತಾಯುವಿನ ಮತ್ತು ಅಯುತಾಯುವಿನ ವಧೆಯನ್ನು ನೋಡಿ ಅವರ ಮಕ್ಕಳಾದ ನಿಯುತಾಯು ಮತ್ತು ದೀರ್ಘಾಯುಗಳು ಕೋಪಗೊಂಡು, ತಂದೆಯ ಅಗಲಿಕೆಯಿಂದ ಶೋಕಕರ್ಶಿತರಾಗಿ ವಿವಿಧವಾದ ಬಾಣಗಳನ್ನು ಪ್ರಯೋಗಿಸುತ್ತಾ ಅರ್ಜುನನ ಕಡೆಗೆ ಬಂದರು.

ತಾವರ್ಜುನೋ ಮುಹೂರ್ತೇನ ಶರೈಃ ಸನ್ನತಪರ್ವಭಿಃ ।
ಅಪ್ರೇಷಯತ್ ಸುಸಂಕ್ರುದ್ಧೋ ಯಮಸ್ಯ ಸದನಂ ಪ್ರತಿ ॥ ೨೯ ॥

ಅರ್ಜುನನು ಬಹಳ ಕೋಪಗೊಂಡು ಅವರ ಜೊತೆಯಲ್ಲಿ ಒಂದು ಮುಹೂರ್ತದ ಕಾಲ ಯುದ್ಧವನ್ನು ಮಾಡಿ, ಬಾಗಿದ ತುದಿಯುಳ್ಳ ಬಾಣಗಳಿಂದ ಅವರನ್ನು ಯಮಲೋಕಕ್ಕೆ ಕಳುಹಿಸಿದನು.

ಲೋಡಯಂತಮನೀಕಾನಿ ದ್ವಿಪಂ ಪದ್ಮಸರೋ ಯಥಾ ।
ನಾಶಕ್ನುವನ್ ವಾರಯಿತುಂ ಪಾರ್ಥಂ ಕ್ಷತ್ರಿಯಪುಂಗವಾಃ ॥ ೩೦ ॥

ಆನೆಯು ಪದ್ಮಸರೋವರವನ್ನು ಕಲಕಿದಂತೆ ಶತ್ರುಸೈನ್ಯವನ್ನು ಕಲಕಾಡುತ್ತಿದ್ದ ಅರ್ಜುನನನ್ನು ನೋಡಲೂ ಸಹ ಕ್ಷತ್ರಿಯ ಶ್ರೇಷ್ಠರಿಗೆ ಸಾಧ್ಯವಾಗಲಿಲ್ಲ.

ಅಂಗಾಸ್ತು ಗಜಸಂಘೈಶ್ಚ ಪಾಂಡವಂ ಪ್ರತ್ಯವಾರಯನ್ ।
ಕ್ರುದ್ಧಾಃ ಸಹಸ್ರಶೋ ಮ್ಲೇಚ್ಛಾಃ ಶಿಕ್ಷಿತಾಃ ಹಸ್ತಿಸಾದಿನಃ ॥ ೩೧ ॥

ದುರ್ಯೋಧನಸಮಾದಿಷ್ಟಾಃ ಕುಂಜರೈಃ ಪರ್ವತೋಪಮೈಃ ।
ಪ್ರಾಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಕಳಿಂಗಪ್ರಮುಖಾ ನೃಪಾಃ ॥ ೩೨ ॥

ಅಂಗದೇಶದ ಗಜಾರೋಹಿಗಳಾದ ಸುಶಿಕ್ಷಿತರಾದ ಮ್ಲೇಚ್ಛ ಯೋಧರು ಸಹಸ್ರ ಸಂಖ್ಯೆಯಲ್ಲಿ ಅರ್ಜುನನನ್ನು ಸುತ್ತುವರಿದರು. ಹಾಗೆಯೇ ದುರ್ಯೋಧನನಿಂದ ಆಜ್ಞಪ್ತರಾದ ಪರ್ವತದಂತಹ ಗಜಗಳಿಂದ ಸಹಿತರಾದ ಪೂರ್ವದಿಕ್ಕಿನ ಮತ್ತು ದಕ್ಷಿಣ ದಿಕ್ಕಿನ ಕಳಿಂಗ ಮೊದಲಾದ ರಾಜರು ಅವನನ್ನು ಸುತ್ತುವರಿದರು.

ತೇಷಾಮಾಪತತಾಂ ಶೀಘ್ರಂ ಗಾಂಡೀವಪ್ರೇಷಿತೈಃ ಶರೈಃ ।
ನಿಚಕರ್ತ ಶಿರಾಂಸ್ಯುಗ್ರೈಃ ಬಾಹೂನಪಿ ಸುಭೂಷಣಾನ್ ॥ ೩೩ ॥

ತನ್ನ ಮೇಲೆ ಎರಗಿಬರುತ್ತಿರುವ ಅವರ ಶಿರಸ್ಸುಗಳನ್ನು ಮತ್ತು ಭೂಷಣೋಪೇತವಾದ ಬಾಹುಗಳನ್ನು ಅರ್ಜುನನು ಗಾಂಡೀವದಿಂದ ಹೊರಹೊಮ್ಮಿದ ಬಾಣಗಳಿಂದ ಶೀಘ್ರವಾಗಿ ಕತ್ತರಿಸಿದನು.

ತೈಃ ಶಿರೋಭಿರ್ಮಹೀ ಕೀರ್ಣಾ ಬಾಹುಭಿಶ್ಚ ಸಹಾಂಗದೈಃ ।
ಬಭೌ ಕನಕಪಾಷಾಣೈರುರಗೈರಿವ ಚಾವೃತಾ ॥ ೩೪ ॥

ಅವರ ಶಿರಸ್ಸುಗಳಿಂದಲೂ ಮತ್ತು ಅಂಗದಸಹಿತವಾದ ಬಾಹುಗಳಿಂದಲೂ ತುಂಬಿ ಹೋದ ಭೂಮಿಯು ಸುವರ್ಣಗಳಿಂದ, ಮಣಿಗಳಿಂದ ಮತ್ತು ಸರ್ಪಗಳಿಂದ ಆವೃತವಾಗಿರುವಂತೆ ಶೋಭಿಸಿತು.

ಬಾಹವೋ ವಿಶಿಖೈಶ್ಚಿನ್ನಾಃ ಶಿರಾಂಸ್ಯುನ್ಮಥಿತಾನಿ ಚ ।
ಚ್ಯವಮಾನಾನ್ಯದೃಶ್ಯಂತ ದ್ರುಮೇಭ್ಯ ಇವ ಪಕ್ಷಿಣಃ ॥ ೩೫ ॥

ಬಾಣಗಳಿಂದ ಕತ್ತರಿಸಲ್ಪಟ್ಟು ಬೀಳುವ ಬಾಹುಗಳು ಮತ್ತು ಶಿರಸ್ಸುಗಳು ವೃಕ್ಷದಿಂದ ಬೀಳುವ ಪಕ್ಷಿಗಳಂತೆ ತೋರಿದವು.

ಶರೈಃ ಸಹಸ್ರಶೋ ವಿದ್ಧಾ ದ್ವಿಪಾಃ ಪ್ರಸ್ರುತಶೋಣಿತಾಃ ।
ವ್ಯದೃಶ್ಯಂತಾದ್ರಯಃ ಕಾಲೇ ಗೈರಿಕಪ್ರಸ್ರುತಾ ಇವ ॥ ೩೬ ॥

ಸಹಸ್ರ ಸಂಖ್ಯೆಯಲ್ಲಿದ್ದ ಗಜಗಳು ಬಾಣಗಳಿಂದ ಹೊಡೆಯಲ್ಪಟ್ಟು ರಕ್ತವನ್ನು ಸುರಿಸುತ್ತಾ ಗೈರಿಕ ಧಾತುವನ್ನು ಸ್ರವಿಸುವ ಪರ್ವತದಂತೆ ತೋರಿದವು.

ನಿಹತಾಃ ಶೇರತೇ ಸ್ಮಾನ್ಯೇ ಬೀಭತ್ಸೋರ್ನಿಶಿತೈಃ ಶರೈಃ ।
ಗಜಪೃಷ್ಠಗತಾ ಮ್ಲೇಚ್ಛಾ ನಾನಾವಿಕೃತದರ್ಶನಾಃ ॥ ೩೭ ॥

ಗಜಸ್ಕಂಧವನ್ನು ಏರಿದ, ನಾನಾರೂಪವನ್ನು ಹೊಂದಿದ ಮ್ಲೇಚ್ಛರು ಅರ್ಜುನನ ಹರಿತವಾದ ಬಾಣಗಳಿಂದ ಹೊಡೆಯಲ್ಪಟ್ಟು ಭೂಮಿಯ ಮೇಲೆ ಮಲಗಿದರು.

ನಾನಾವೇಷಧರಾ ರಾಜನ್ ನಾನಾಶಸ್ತ್ರೌಘಸಂವೃತಾಃ ।
ರುಧಿರೇಣಾನುಲಪ್ತಾಂಗಾ ಭಾಂತಿ ಚಿತ್ರೈಃ ಶರೈರ್ಹತಾಃ ॥ ೩೮ ॥

ಎಲೈ ರಾಜನೇ, ನಾನಾ ವೇಷಗಳನ್ನು ಧರಿಸಿದ, ನಾನಾ ಶಸ್ತ್ರಸಮೂಹಗಳನ್ನು ಹಿಡಿದ, ರಕ್ತದಿಂದ ತೊಯ್ದ ಶರೀರವುಳ್ಳ, ವಿಚಿತ್ರವಾದ ಬಾಣಗಳಿಂದ ಹತರಾದ ಅವರು ರಣಭೂಮಿಯಲ್ಲಿ ಶೋಭಿಸಿದರು.

ಶೋಣಿತಂ ನಿರ್ವಮಂತಿ ಸ್ಮ ದ್ವಿಪಾಃ ಪಾರ್ಥಶರಾಹತಾಃ ।
ಸಹಸ್ರಶಶ್ಚಿನ್ನಗಾತ್ರಾಃ ಸಾರೋಹಾಃ ಸಪದಾನುಗಾಃ ॥ ೩೯ ॥

ಗಜಾರೋಹಿಗಳಿಂದಲೂ ಮತ್ತು ಅವರ ಅನುಯಾಯಿಗಳಿಂದಲೂ ಸಹಿತವಾದ ಗಜಗಳು ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟು ಸಹಸ್ರ ಸಂಖ್ಯೆಯಲ್ಲಿ ತಮ್ಮ ಶರೀರಗಳು ಕತ್ತರಿಸಲ್ಪಟ್ಟು ರಕ್ತವನ್ನು ಕಾರುತ್ತಿದ್ದವು.

ಚುಕ್ರುಶುಶ್ಚ ನಿಪೇತುಶ್ಚ ಬಭ್ರಮುಶ್ಚಾಪರೇ ದಿಶಃ ।
ಭೃಶಂ ತ್ರಸ್ತಾಶ್ಚ ಬಹುಧಾ ಸ್ವಾನೇವ ಮಮೃದುರ್ಗಜಾಃ ॥ ೪೦ ॥

ಕೆಲವು ಗಜಗಳು ಕಿರುಚಿದವು. ಕೆಲವು ಬಿದ್ದವು. ಇನ್ನು ಕೆಲವು ದಿಕ್ಕು-ದಿಕ್ಕುಗಳಿಗೆ ಓಡಿದವು. ಕೆಲವು ಗಜಗಳು ಬಹಳ ಹೆದರಿ ತಮ್ಮವರನ್ನೇ ತುಳಿದವು.

ಸಾಂತರಾಯುಧಿಕಾ ಮತ್ತಾ ಯೇ ಚಾನ್ಯೇ ತೀಕ್ಷ್ಣಸಮ್ಮತಾಃ ।
ವಸಂತ್ಯಸುರಮಾಯಾಂ ಯೇ ಸುಘೋರಾ ಘೋರಚಕ್ಷುಷಃ ॥ ೪೧ ॥

ಯವನಾಃ ಪಾರದಾಶ್ಚೈವ ಶಕಾಶ್ಚೈವ ಸಹಸ್ರಶಃ ।
ಗೋಯೋನಿಪ್ರಭವಾ ಮ್ಲೇಚ್ಛಾಃ ಕಾಲಕಲ್ಪಾಃ ಪ್ರಹಾರಿಣಃ ॥ ೪೨ ॥

ಊರ್ಧ್ವಾಭಿಸಾರಾ ದರದಾಃ ಗರದಾಶ್ಚ ಸಬಾಹ್ಲಿಕಾಃ ।
ತೇ ನ ಶಕ್ಯಾಃ ಸಮಾಖ್ಯಾತುಂ ವೃತಾಃ ಶತಸಹಸ್ರಶಃ ।
ತೇಷಾಂ ವೃಷ್ಟಿಸ್ತಥಾऽಪ್ಯಾಸೀತ್ ಶಲಭಾನಾಮಿವಾಯತಿಃ ॥ ೪೩ ॥

ಶ್ರೇಷ್ಠವಾದ ಆಯುಧಗಳನ್ನು ಹಿಡಿದ, ಮತ್ತರಾದ, ಕ್ರೂರರಿಂದ ಸಮ್ಮತರಾದ, ಅಸುರಮಾಯೆಗಳನ್ನು ಆಶ್ರಯಿಸಿದ, ಅತ್ಯಂತ ಘೋರರೂ, ಘೋರವಾದ ದೃಷ್ಟಿಯುಳ್ಳವರೂ ಆದ ಯವನರೂ, ಪಾರದರೂ, ಶಕರೂ, ಕಾಮಧೇನುವಿನ ಯೋನಿಯಿಂದ ಜನಿಸಿದ ಕಪ್ಪು ಬಣ್ಣದ ಪ್ರಹಾರಶೀಲರಾದ ಸಹಸ್ರಾರು ಸಂಖ್ಯೆಯ ಮ್ಲೇಚ್ಛರೂ, ಊರ್ದ್ಧಭಿಸಾರರೂ, ದರದರೂ, ಗರದರೂ, ಬಾಹ್ಲೀಕರೂ- ಅವರುಗಳ ಸಂಖ್ಯೆಯನ್ನು ಎಣಿಸಲು ಸಾಧ್ಯವಿಲ್ಲ- ಅವರು ಲಕ್ಷಾವಧಿ ಸಂಖ್ಯೆಯಲ್ಲಿ ಪತಂಗಗಳ ಸಮೂಹದಂತೆ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಕರೆದರು.

ಅಭ್ರಚ್ಛಾಯಾಮಿವ ಶರೈಃ ಸೈನ್ಯೇ ಕೃತ್ವಾ ಧನಂಜಯಃ ।
ಮುಂಡಾರ್ಧಮುಂಡಾನ್ ಜಟಿಲಾನಶುಚೀನ್ ನೀಲವಾಸಸಃ ॥ ೪೪ ॥

ಮ್ಲೇಚ್ಛಾನಶಾತಯತ್ ಸರ್ವಾನ್ ಸಮೇತಾನಸ್ತ್ರತೇಜಸಾ ।

ಅರ್ಜುನನು ತನ್ನ ಬಾಣಗಳನ್ನು ಪ್ರಯೋಗಿಸಿ, ಅವುಗಳಿಂದ ಮೋಡದಂತಹ ಛಾಯೆಯನ್ನು ಉಂಟು ಮಾಡಿ ತನ್ನ ಅಸ್ತ್ರಸಾಮರ್ಥ್ಯದಿಂದ, ಮುಂಡರನ್ನೂ, ಅರ್ಧಮುಂಡರನ್ನೂ, ಜಟಿಲರನ್ನೂ, ಕಪ್ಪುವಸ್ತ್ರವನ್ನು ಧರಿಸಿದವರನ್ನೂ ಮತ್ತು ಎಲ್ಲ ಮ್ಲೇಚ್ಛರನ್ನೂ ವಿನಾಶಗೊಳಿಸಿದನು.

ಅಭ್ಯವರ್ಷಂತ ತೇ ಸರ್ವೇ ಪಾಂಡವಂ ನಿಶಿತೈಃ ಶರೈಃ ।
ಅವಾಕಿರಂಶ್ಚ ತೇ ಮ್ಲೇಚ್ಛಾ ನಾನಾಯುದ್ಧವಿಶಾರದಾಃ ।
ತೇಷಾಮಪಿ ಸಸರ್ಜಾಶು ಶರವೃಷ್ಟಿಂ ಧನಂಜಯಃ ॥ ೪೫ ॥

ಅವರು ಅರ್ಜುನನ ಮೇಲೆ ಹರಿತವಾದ ಬಾಣಗಳ ಮಳೆಯನ್ನು ಸುರಿಸಿದರು. ನಾನಾ ಯುದ್ಧ ವಿಶಾರದರಾದ ಆ ಮ್ಲೇಚ್ಛರು ಅರ್ಜುನನ ಮೇಲೆ ಆಯುಧಗಳ ಮಳೆಯನ್ನು ಸುರಿಸಿದರು. ಅರ್ಜುನನು ಅವರ ಮೇಲೆಯೂ ಶೀಘ್ರವಾಗಿ ತನ್ನ ಬಾಣಗಳ ಮಳೆಯನ್ನು ಉಂಟುಮಾಡಿದನು.

ಶರೈಸ್ತು ಶತಶೋ ವಿದ್ಧಾಃ ತೇ ಸಂಘಾಃ ಸಂಘಚಾರಿಣಃ ।
ಪ್ರಾದ್ರವಂತ ರಣೇ ಭೀತಾ ಗಿರಿಗಹ್ವರವಾಸಿನಃ ॥ ೪೬ ॥

ಪರ್ವತದ ಗುಹೆಗಳಲ್ಲಿ ವಾಸಿಸುವ, ಸಮೂಹದಲ್ಲಿ ಸಂಚರಿಸುವ ಅವರು ನೂರರ ಸಂಖ್ಯೆಯಲ್ಲಿ ಬಾಣಗಳಿಂದ ಹೊಡೆಯಲ್ಪಟ್ಟು ರಣರಂಗದಲ್ಲಿ ಹೆದರಿ ಓಡಿಹೋದರು.

ಗಜಾಶ್ವಸಾದಿನೋ ಮ್ಲೇಚ್ಛಾಃ ಪತ್ತಯಶ್ಚ ಶರೈರ್ಹತಾಃ ।
ವಲಕಂಕವೃಕಾ ಭೂಮಾವಪಿಬನ್ ರುಧಿರಂ ಮುದಾ ॥ ೪೭ ॥

ಅಶ್ವಾರೋಹಿಗಳೂ, ಗಜಗಳೂ, ಅಶ್ವಾರೋಹಿಗಳಾದ ಮ್ಲೇಚ್ಛರೂ ಮತ್ತು ಪದಾತಿಗಳೂ ಅರ್ಜುನನ ಬಾಣಗಳಿಂದ ಹತರಾದರು. ವಲ, ಕಂಕ ಮೊದಲಾದ ಪಕ್ಷಿಗಳೂ, ತೋಳಗಳೂ ಭೂಮಿಯಲ್ಲಿ ಸಂತೋಷದಿಂದ ರಕ್ತವನ್ನು ಪಾನ ಮಾಡಿದವು.

ಪತ್ತ್ಯಶ್ವಗಜ ಸಂಕೀರ್ಣಂ ಪ್ರಚ್ಛನ್ನಾಂ ರಥಸಂಕುಲಾಮ್ ।
ಶರವರ್ಷಪ್ಲವಾಂ ಘೋರಾಂ ಕೇಶಶೈವಲಶಾದ್ವಲಾಮ್ ॥ ೪೮ ॥

ಪ್ರಾವರ್ತಯನ್ನದೀಮುಗ್ರಾಂ ಶೋಣಿತೌಘತರಂಗಿಣೀಮ್ ।
ಶಿರಸ್ತ್ರಾಣಕ್ಷುದ್ರಮತ್ಸ್ಯಾಂ ಯುಗಾಂತೇ ಕಾಲಸಮ್ಮಿತಾಮ್ ॥ ೪೯ ॥

ಪದಾತಿಗಳಿಂದ, ಅಶ್ವಗಳಿಂದ, ಗಜಗಳಿಂದ ಮತ್ತು ರಥಗಳಿಂದ ತುಂಬಿದ, ಶರವರ್ಷಗಳೆಂಬ ದೋಣಿಗಳನ್ನು ಹೊಂದಿದ, ಕೇಶಗಳೆಂಬ ಹಾವಸೆ (ಪಾಚಿ)ಗಳನ್ನು ಮತ್ತು ಮೃದು ಪ್ರದೇಶಗಳನ್ನು ಹೊಂದಿದ ರಕ್ತ ಸಮೂಹದ ತರಂಗಗಳನ್ನು ಹೊಂದಿದ, ಶಿರಸ್ತ್ರಾಣಗಳೆಂಬ ಕ್ಷುದ್ರ ಮತ್ಸ್ಯಗಳನ್ನು ಹೊಂದಿದ, ಯುಗಾಂತ ಕಾಲದ ಮೃತ್ಯುವಿಗೆ ಸಮವಾದ, ಉಗ್ರವೂ ಮತ್ತು ಘೋರವೂ ಆದ ನದಿಯನ್ನು ಅರ್ಜುನನು ಹರಿಸಿದನು.

ಆಕರೋದ್ ಗಜಸಂಬಾಧಾಂ ನದೀಮುತ್ತರಶೋಣಿತಾಮ್ ।
ದೇಹೇಭ್ಯೋ ರಾಜಪುತ್ರಾಣಾಂ ನಾಗಾಶ್ವರಥಸಾದಿನಾಮ್ ॥ ೫೦ ॥

ರಾಜಪುತ್ರರ, ಗಜಾಶ್ವ-ಪದಾತಿಗಳ ದೇಹದಿಂದ ಹೊಮ್ಮಿದ, ಶ್ರೇಷ್ಠವಾದ ರಕ್ತವನ್ನು ಹೊಂದಿದ, ಗಜಶರೀರಗಳಿಂದ ಅಲ್ಲಲ್ಲಿ ತುಂಬಿದ, ನದಿಯನ್ನು ಅರ್ಜುನನು ಪ್ರವರ್ತಿಸಿದನು.

ಯಥಾ ಸ್ಥಲಂ ವಾ ನಿಮ್ನಂ ವಾ ನ ಸ್ಯಾದ್ ವರ್ಷತಿ ವಾಸವೇ ।
ತಥಾಸೀದಾಪ್ಲುತಾ ಧಾತ್ರೀ ರುಧಿರೇಣ ಸಮುಕ್ಷಿತಾ ॥ ೫೧ ॥

ಇಂದ್ರನು ಮಳೆಯನ್ನು ಸುರಿಸುವಾಗ ಹೇಗೆ ಭೂಮಿಯ ಉಬ್ಬುತಗ್ಗುಗಳು ತಿಳಿಯುವುದಿಲ್ಲವೋ ಅದರಂತೆ ರಕ್ತದಿಂದ ತುಂಬಿಹೋದ ರಣಭೂಮಿಯಲ್ಲಿ ಉಬ್ಬುತಗ್ಗುಗಳು ತಿಳಿಯುತ್ತಿರಲಿಲ್ಲ.

ಷಟ್ಸಹಸ್ರಾನ್ ವರಾನ್ ವೀರಾನ್ ಪುನರ್ದಶಶತಾನ್ ವರಾನ್ ।
ಪ್ರಾಹಿಣೋನ್ಮೃತ್ಯುಲೋಕಾಯ ಕ್ಷತ್ರಿಯಾನ್ ಕ್ಷತ್ರಿಯರ್ಷಭಃ ॥ ೫೨ ॥

ಕ್ಷತ್ರಿಯಶ್ರೇಷ್ಠನಾದ ಅರ್ಜುನನು ಆರು ಸಹಸ್ರ ಸಂಖ್ಯೆಯ ಶ್ರೇಷ್ಠರಾದ ಕ್ಷತ್ರಿಯ ವೀರರನ್ನು, ಪುನಃ ಒಂದು ಸಾವಿರ ಕ್ಷತ್ರಿಯ ವೀರರನ್ನು ಮೃತ್ಯುಲೋಕಕ್ಕೆ ಕಳುಹಿಸಿದನು.

ಶರೈಃ ಸಹಸ್ರಶೋ ವಿದ್ಧಾ ವಿಧಿವತ್ ಕಲ್ಪಿತಾ ದ್ವಿಪಾಃ ।
ಶೇರತೇ ಭೂಮಿಮಾಸಾದ್ಯ ಶೈಲಾ ವಜ್ರಹತಾ ಇವ ॥ ೫೩ ॥

ಶಾಸ್ತ್ರೋಕ್ತ ವಿಧಾನದಿಂದ ಸಿದ್ಧಗೊಳಿಸಲ್ಪಟ್ಟ ಗಜಗಳು ಸಹಸ್ರ ಸಂಖ್ಯೆಯಲ್ಲಿ ಬಾಣಗಳಿಂದ ಹೊಡೆಯಲ್ಪಟ್ಟು ಭೂಮಿಯ ಮೇಲೆ ಬಿದ್ದು, ವಜ್ರಾಯುಧದಿಂದ ಭಗ್ನಗೊಂಡ ಪರ್ವತಗಳಂತೆ ಮಲಗಿದವು.

ಸ ವಾಜಿರಥಮಾತಂಗಾನ್ ನಿಘ್ನನ್ ವ್ಯಚರದರ್ಜುನಃ ।
ಪ್ರಭಿನ್ನ ಇವ ಮಾತಂಗೋ ಮೃದ್ನನ್ ನಳವನಂ ಯಥಾ ॥ ೫೪ ॥

ಅರ್ಜುನನು ಅಶ್ವ-ರಥ-ಗಜಗಳನ್ನು ಸಂಹರಿಸುತ್ತಾ, ಮದಿಸಿದ ಗಜವು ಪದ್ಮ ವನವನ್ನು ವಿನಾಶಗೊಳಿಸುವಂತೆ ತಿರುಗಾಡಿದನು.

ಭೂರಿದ್ರುಮಲತಾಗುಲ್ಮಂ ಶುಷ್ಕೇಂಧನತೃಣೋಪಲಮ್ ।
ನಿರ್ದಹೇದನಲೋ೭ರಣ್ಯಂ ಯಥಾ ವಾಯುಸಮೀರಿತಃ ॥ ೫೫ ॥

ಸೇನಾರಣ್ಯಂ ತವ ತಥಾ ಕೃಷ್ಣಾನಿಲಸಮೀರಿತಃ ।
ಶರಾರ್ಚಿರದಹತ್ ಕ್ರುದ್ಧಃ ಪಾಂಡವೋ೭ಗ್ನಿರ್ಧನಂಜಯಃ ॥ ೫೬ ॥

ವಾಯುವಿನಿಂದ ಬಲವನ್ನು ಪಡೆದ ಅಗ್ನಿಯು ಬಹಳ ಲತೆಗಳು ಮತ್ತು ದ್ರುಮಗಳು ಇರುವ, ಒಣಗಿದ ಕಟ್ಟಿಗೆಗಳಿರುವ, ತೃಣರಾಶಿ ಇರುವ ಅರಣ್ಯವನ್ನು ಸುಡುವಂತೆ ಕೃಷ್ಣನೆಂಬ ವಾಯುವಿನಿಂದ ಶಕ್ತಿಯನ್ನು ಪಡೆದ ಧನಂಜಯನೆಂಬ ಪಾಂಡವಾಗ್ನಿಯು ಕ್ರುದ್ಧನಾಗಿ ಬಾಣಗಳೆಂಬ ಜ್ವಾಲೆಗಳಿಂದ ನಿನ್ನ ಸೈನ್ಯವೆಂಬ ಅರಣ್ಯವನ್ನು ದಹಿಸಿದನು.

ಶೂನ್ಯಾನ್ ಕುರ್ವನ್ ರಥೋಪಸ್ಥಾನ್ ನಿಘ್ನನ್ ಪತ್ತ್ಯಶ್ವಹಸ್ತಿನಃ
ಪ್ರನೃತ್ಯನ್ನಿವ ಬೀಭತ್ಸುಃ ಚಾಪಹಸ್ತೋ ಧನಂಜಯಃ ।
ವಜ್ರಕಲ್ಪೈಃ ಶರೈರ್ಭೂಮಿಂ ಕುವನ್ಶುತ್ತರಶೋಣಿತಾಮ್ ॥ ೫೭ ॥

ತತಃ ಪ್ರಾವರ್ತತ ನದೀ ಶೋಣಿತಸ್ಯ ತರಂಗಿಣೀ ।
ನರಾಶದ್ವಿಪಕಾಯೇಭ್ಯಃ ಪರ್ವತೇಭ್ಯ ಇವಾಪಗಾ ॥ ೫೮ ॥

ಕೈಯಲ್ಲಿ ಬಲ್ಲನ್ನು ಹಿಡಿದ ಧನಂಜಯನು ನೃತ್ಯವನ್ನು ಮಾಡುವವನಂತೆ ರಥದಲ್ಲಿ ರಥಿಕರು ಇರುವ ಪ್ರದೇಶವನ್ನು ಶೂನ್ಯವನ್ನಾಗಿ ಮಾಡುತ್ತಾ, ಪದಾತಿಗಳನ್ನು ಮತ್ತು ಅಶ್ವಗಳನ್ನೂ ಮತ್ತು ಗಜಗಳನ್ನು ಸಂಹರಿಸುತ್ತಾ, ವಜ್ರಕ್ಕೆ ಸಮಾನವಾದ ತನ್ನ ಬಾಣಗಳಿಂದ ಭೂಮಿಯನ್ನು ಶ್ರೇಷ್ಠ ರಕ್ತಯುಕ್ತವನ್ನಾಗಿ ಮಾಡಿದನು. ಆಗ ಪರ್ವತಗಳಿಂದ ನದಿಗಳು ಹರಿದಂತೆ ರಕ್ತದ ತರಂಗವುಳ್ಳ ಪದಾತಿ, ಗಜ, ಅಶ್ವಗಳ ರಕ್ತವನ್ನು ಹೊಂದಿದ ನದಿಯು ಪ್ರವೃತ್ತವಾಯಿತು.

ಅಸ್ಥಿಶರ್ಕರಸಂಬಾಧಾ ಧ್ವಜವೃಕ್ಷಾ ರಥಹ್ರದಾ ।
ಸಂಛಿನ್ನಶೀರ್ಷಪಾಷಾಣಾ ಹಸ್ತಿಹಸ್ತಮಹಾಗ್ರಹಾ ॥ ೫೯ ॥

ಮಾಂಸಮಜ್ಜಾಸ್ಥಿಪಂಕಾಢ್ಯಾ ಹತಾಶ್ವಮಕರಾಕುಲಾ ।
ಯೋಧಗೋಮಾಯುಸಂಕೀರ್ಣಾ ಕಬಂಧಶತಸಂಕ್ರಮಾ ॥ ೬೦ ॥

ಉಷ್ಣೀಷಫೇನಸಂಘನ್ನಾ ಶರಘೋರಝಷಾಕುಲಾ ॥ ೬೧ ॥

ಅಸ್ಥಿಗಳೆಂಬ ಶರ್ಕರದಿಂದ ನಿಬಿಡವಾದ, ಧ್ವಜವೆಂಬ ವೃಕ್ಷಗಳಿಂದ ಕೂಡಿದ, ರಥವೆಂಬ ಮಡುವಿನಿಂದ ಕೂಡಿದ, ಕತ್ತರಿಸಲ್ಪಟ್ಟ ಶಿರಸ್ಸುಗಳೆಂಬ ಪಾಷಾಣದಿಂದ ಕೂಡಿದ, ಗಜಗಳ ಸೊಂಡಿಲುಗಳೆಂಬ ಮಹಾಮೊಸಳೆಗಳಿಂದ ಕೂಡಿದ, ಮಾಂಸ ಮಜ್ಜ ಮತ್ತು ಮೂಳೆಗಳೆಂಬ ಕೆಸರುಗಳಿಂದ ಕೂಡಿದ, ಮೃತವಾದ ಅಶ್ವಗಳೆಂಬ ಮೊಸಳೆಗಳಿಂದ ಕೂಡಿದ, ಯೋಧರೆಂಬ ನರಿಗಳಿಂದ ಕೂಡಿದ, ನೂರಾರು ರುಂಡಗಳನ್ನು ಹೊಂದಿರುವ, ಉಷ್ಣೀಷವೆಂಬ ನೊರೆಯಿಂದ ಕೂಡಿದ, ಬಾಣಗಳೆಂಬ ಘೋರವಾದ ಮೀನುಗಳಿಂದ ಕೂಡಿದ (ರಕ್ತ ನದಿಯು ಪ್ರವೃತ್ತವಾಯಿತು).

ರುದ್ರಸ್ಯಾಕ್ರೀಡಸದೃಶೀಂ ಭೂಮಿಂ ಕುರ್ವನ್ ವಿಭೀಷಣಾಮ್ ।
ಪ್ರಾವಿಶದ್ ಭಾರತೀಂ ಸೇನಾಂ ಸಂಕ್ರುದ್ಧೋ ವೈ ಧನಂಜಯಃ ।
ತಂ ಶ್ರುತಾಯುಸ್ತಥಾಽಂಬಷ್ಠೋ ವ್ರಜಮಾನಂ ನ್ಯವಾರಯತ್ ॥ ೬೨ ॥

ಧನಂಜಯನು ಬಹಳ ಕೋಪಗೊಂಡು ರಣಭೂಮಿಯನ್ನು ರುದ್ರನ ವಿಹಾರ ಸ್ಥಾನವಾದ, ಭಯಂಕರವಾದ ಸ್ಮಶಾನ ಸ್ಥಾನಕ್ಕೆ ಸದೃಶವನ್ನಾಗಿ ಮಾಡಿ, ನಿನ್ನ ಭಾರತ ಸೇನೆಯನ್ನು ಪ್ರವೇಶಿಸಿದನು. ಶ್ರುತಾಯು ಮತ್ತು ಅಂಬಷ್ಠರು ಪ್ರವೇಶಿಸುತ್ತಿರುವ ಅವನನ್ನು ತಡೆದರು.

ತಸ್ಯಾರ್ಜುನಃ ಶರೈಸ್ತೀಕ್ಷ್ಣೈಃ ಕಂಕಪತ್ರಪರಿಚ್ಛದೈಃ ।
ನ್ಯಪಾತಯದ್ ಹಯಾನ್ ಶೀಘ್ರಂ ಯತಮಾನಸ್ಯ ಮಾರಿಷ ॥ ೬೩ ॥

ಧನುಶ್ಚಾಸ್ಯಾಪರೈಶ್ಛಿತ್ತ್ವಾ ಶರೈಃ ಪಾರ್ಥೋ ವಿಚಕ್ರಮೇ ॥ ೬೪ ॥

ಎಲೈ ಪೂಜ್ಯನೇ, ಅರ್ಜುನನು ಕಂಕಪತ್ರಗಳನ್ನು ಹೊಂದಿದ ತನ್ನ ತೀಕ್ಷ್ಣವಾದ ಶರಗಳಿಂದ, ತನ್ನನ್ನು ತಡೆಯಲು ಪ್ರಯತ್ನಿಸುತ್ತಿದ್ದ ಶ್ರುತಾಯುವಿನ ಆಶ್ವಗಳನ್ನು ಶೀಘ್ರವಾಗಿ ಕೊಂದನು. ಬೇರೆ ಬಾಣಗಳಿಂದ ಅವನು ಶ್ರುತಾಯುವಿನ ಧನುಸ್ಸನ್ನು ಕತ್ತರಿಸಿ ಮುಂದೆ ಹೋಗಲು ಪ್ರಯತ್ನಿಸಿದನು.

ಅಂಬಷ್ಠಸ್ತು ಗದಾಂ ಗೃಹ್ಯ ಕ್ರೋಧಪರ್ಯಾಕುಲೇಕ್ಷಣಃ ।
ಗದಾಪಾಣಿರ್ದ್ರುತಂ ಯಾತ್ವಾ ಪ್ರಗೃಹ್ಯ ಮಹತೀಂ ಗದಾಮ್ ।
ಆಸಸಾದ ರಣೇ ಪಾರ್ಥಂ ಕೇಶವಂ ಚ ಮಹಾರಥಮ್ ॥ ೬೫ ॥

ಅಂಬಷ್ಠನಾದರೋ ಕ್ರೋಧದಿಂದ ತಿರುಗುವ ಕಣ್ಣುಳ್ಳವನಾಗಿ, ಕೈಯಲ್ಲಿ ಗದೆಯನ್ನು ಹಿಡಿದು ಶೀಘ್ರವಾಗಿ ಮಹಾರಥರಾದ ಅರ್ಜುನ ಮತ್ತು ಕೇಶವನನ್ನು ರಣರಂಗದಲ್ಲಿ ಸಮೀಪಿಸಿದನು.

ತತಃ ಸ ಪ್ರಹಸನ್ ವೀರೋ ಗದಾಮುದ್ಯಮ್ಯ ಭಾರತ ।
ರಥಮಾಲಂಬ್ಯ ಗದಯಾ ಕೇಶವಂ ಸಮತಾಡಯತ್ ॥ ೬೬ ॥

ಎಲೈ ಭಾರತನೇ, ಆಗ ವೀರನಾದ ಅವನು ನಗುತ್ತಾ ಗದೆಯನ್ನು ಎತ್ತಿ, ರಥವನ್ನು ಹಿಡಿದು ಗದೆಯಿಂದ ಕೃಷ್ಣನನ್ನು ಹೊಡೆದನು.

ಗದಯಾ ತಾಡಿತಂ ದೃಷ್ಟ್ವಾ ಕೇಶವಂ ಪರವೀರಹಾ ।
ಅರ್ಜುನೋ ಭೃಶಸಂಕ್ರುದ್ಧಃ ತ್ವಂಬಷ್ಠಂ ಪ್ರತಿ ಭಾರತ ॥ ೬೭ ॥

ಎಲೈ ಭಾರತನೇ, ಕೃಷ್ಣನು ಗದೆಯಿಂದ ತಾಡಿತನಾದುದನ್ನು ನೋಡಿ, ಪರವೀರಘಾತಕನಾದ ಅರ್ಜುನನು ಅಂಬಷ್ಠನ ಮೇಲೆ ಬಹಳ ಕೋಪವನ್ನು ತಾಳಿದನು.

ಶರೈರನೇಕಸಾಹಸ್ರೈಃ ಸಗದಂ ಗದಿನಾಂ ವರಮ್ ।
ಛಾದಯಾಮಾಸ ಸಮರೇ ಮೇಘಃ ಸೂರ್ಯಮಿವೋದಿತಮ್ ॥೬೮॥

ಅವನು ಗದಾಧಾರಿಗಳಲ್ಲಿ ಶ್ರೇಷ್ಠನಾದ, ಗದೆಯನ್ನು ಹಿಡಿದ ಅಂಬಷ್ಠನನ್ನು ಮೋಡವು ಉದಯಿಸಿದ ಸೂರ್ಯನನ್ನು ಮುಚ್ಚುವಂತೆ ಅನೇಕ ಸಹಸ್ರ ಬಾಣಗಳಿಂದ ರಣರಂಗದಲ್ಲಿ ಮುಚ್ಚಿದನು.

ತಥಾऽಪರೈಃ ಶರೈಶ್ಚಾಪಿ ಗದಾಂ ತಸ್ಯ ಮಹಾತ್ಮನಃ ।
ಅಚೂರ್ಣಯತ್ ತದಾ ಪಾರ್ಥಃ ತದದ್ಭುತಮಿವಾಭವತ್ ॥ ೬೯ ॥

ಹಾಗೆಯೇ ಬೇರೆ ಬಾಣಗಳಿಂದ ಅರ್ಜುನನು ಮಹಾಪ್ರಯತ್ನಶೀಲನಾದ ಅವನ ಗದೆಯನ್ನು ಪುಡಿ ಮಾಡಿದನು. ಅದು ಅದ್ಭುತವಾಗಿದ್ದಿತು.

ಅಥ ತಾಂ ಪತಿತಾಂ ದೃಷ್ಟ್ವಾ ಗೃಹ್ಯಾನ್ಯಾಂ ಮಹತೀಂ ಗದಾಮ್ ।
ಅರ್ಜುನಂ ವಾಸುದೇವಂ ಚ ಪುನಃ ಪುನರತಾಡಯತ್ ॥ ೭೦ ॥

ಅಂಬಷ್ಠನು ತನ್ನ ಗದೆಯು ಬಿದ್ದುದನ್ನು ನೋಡಿ, ಇನ್ನೊಂದು ದೊಡ್ಡ ಗದೆಯನ್ನು ಎತ್ತಿಕೊಂಡು ಅರ್ಜುನನನ್ನು ಮತ್ತು ಕೃಷ್ಣನನ್ನು ಪುನಃ ಪುನಃ ಅದರಿಂದ ಹೊಡೆದನು.

ತಸ್ಯಾರ್ಜುನೋ ಕ್ಷುರಪ್ರಾಭ್ಯಾಂ ಸಗದಾವುದ್ಯತೌ ಭುಜೌ ।
ಚಚ್ಛೇದೇಂದ್ರಧ್ವಜಾಕಾರೌ ಶರಶ್ಚಾನ್ಯೇನ ಪತ್ರಿಣಾ ॥ ೭೧ ॥

ಅರ್ಜುನನು ಎರಡು ಕ್ಷುರಪ್ರಗಳಿಂದ ಇಂದ್ರಧ್ವಜದಂತಿದ್ದ ಗದೆಯನ್ನು ಎತ್ತಿಹಿಡಿದ ಅವನ ಎರಡು ಭುಜಗಳನ್ನೂ ಪತ್ರ ಸಹಿತವಾದ ಇನ್ನೊಂದು ಕ್ಷುರಪ್ರದಿಂದ ಅವನ ಶಿರಸ್ಸನ್ನೂ ಕತ್ತರಿಸಿದನು.

ಸ ಪಪಾತ ಹತೋ ರಾಜನ್ ವಸುಧಾಮನುನಾದಯನ್ ।
ಇಂದ್ರಧ್ವಜ ಇವೋತ್ಸೃಷ್ಟೋ ಯಂತ್ರನಿರ್ಮುಕ್ತಬಂಧನಃ ।
ಅಂಬಷ್ಠೇ ತು ತದಾ ಭಗ್ನೇ ತವ ಸೈನ್ಯಮಭಜ್ಯತ ॥ ೭೨ ॥

ಎಲೈ ರಾಜನೇ, ಯಂತ್ರದಿಂದ ನಿರ್ಮುಕ್ತವಾದ ಬಂಧನವುಳ್ಳ ಇಂದ್ರಧ್ವಜದಂತೆ ಅವನು ದೊಡ್ಡ ಸದ್ದನ್ನು ಮಾಡುತ್ತಾ ಭೂಮಿಯ ಮೇಲೆ ಬಿದ್ದನು. ಅಂಬಷ್ಠನು ಹತನಾಗುತ್ತಿರಲು ನಿನ್ನ ಸೈನ್ಯವು ಭಗ್ನವಾಯಿತು.

ರಥಾನೀಕಾವಗಾಢಂ ಚ ವಾರಣಾಶ್ವನರೈರ್ವ್ಯತಮ್ ।
ಆದದಾನಂ ಶರೈಃ ಪ್ರಾಣಾನ್ ಗಜಾಶ್ವನರಸಾದಿನಾಮ್ ॥ ೭೩ ॥

ನಾನ್ವಪಶ್ಯಾಮ ಬೀಭತ್ಸುಂ ಘ್ನಂತೈಃ ಸೂರ್ಯಮಿವಾವೃತಮ್ ॥ ೭೪ ॥

ಗಜಾಶ್ವ-ಪದಾತಿಗಳಿಂದ ಪರಿವೃತವಾದ ರಥಾನೀಕವನ್ನು ಪ್ರವೇಶಿಸಿ, ತನ್ನ ಬಾಣಗಳಿಂದ ಗಜಾಶ್ವ-ಪದಾತಿ-ಸಾದಿಗಳ ಪ್ರಾಣಗಳನ್ನು ಹೀರುತ್ತಿದ್ದ ಅರ್ಜುನನನ್ನು ಮೋಡಗಳಿಂದ ಮುಚ್ಚಿದ ಸೂರ್ಯನಂತೆ ನಾವು ನೋಡಲು ಸಾಧ್ಯವಾಗಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವ್ಯಶೀತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೂರನೆಯ ಅಧ್ಯಾಯ

ದುರ್ಯೋಧನನಿಂದ ದ್ರೋಣರ ನಿಂದನೆ.
ದ್ರೋಣರಿಂದ ದುರ್ಯೋಧನನಿಗೆ ಕವಚಧಾರಣೆ.

ಸಂಜಯಃ

ತತಃ ಪ್ರವಿಷ್ಟೇ ಕೌಂತೇಯೇ ಸಿಂಧುರಾಜಜಿಘಾಂಸಯಾ ।
ದ್ರೋಣಾನೀಕಂ ವಿನಿರ್ಭಿದ್ಯ ಭೋಜಾನೀಕಂ ಸುದುಸ್ತರಮ್ ॥ ೧ ॥

ಕಾಂಬೋಜಸ್ಯ ಚ ದಾಯಾದೇ ಹತೇ ರಾಜನ್ ಸುದಕ್ಷಿಣೇ ।
ಶ್ರುತಾಯುಷಿ ಚ ವಿಕ್ರಾಂತೇ ನಿಹತೇ ಸವ್ಯಸಾಚಿನಾ ॥ ೨ ॥

ವಿಪ್ರದ್ರುತೇಷ್ವನೀಕೇಷು ವಿಧ್ವಸ್ತೇಷು ಸಮಂತತಃ ।
ಪ್ರಭಗ್ನಂ ಸ್ವಬಲಂ ದೃಷ್ಟ್ವಾ ಪುತ್ರಸ್ತೇ ದ್ರೋಣಮಭ್ಯಯಾತ್ ।
ತ್ವರನ್ನೇಕರಥೇನೈವ ಸಮೇತ್ಯ ದ್ರೋಣಮಬ್ರವೀತ್ ॥ ೩ ॥

ಸಂಜಯ– ಕುಂತೀಪುತ್ರನಾದ ಅರ್ಜುನನು ದಾಟಲು ಅಸಾಧ್ಯವಾದ ದ್ರೋಣರ ಸೈನ್ಯವನ್ನು ಮತ್ತು ಭೋಜರ ಸೈನ್ಯವನ್ನು ಭೇದಿಸಿ, ಸೈಂಧವನನ್ನು ಕೊಲ್ಲುವ ಉದ್ದೇಶದಿಂದ ಪ್ರವೇಶಿಸಿ ಮುಂದೆ ಬರುತ್ತಿರಲು ಕಾಂಬೋಜ ರಾಜಕುಮಾರನಾದ ಸುದಕ್ಷಿಣನೂ, ಪರಾಕ್ರಮಶಾಲಿಯಾದ ಶ್ರುತಾಯುವೂ ಅರ್ಜುನನಿಂದ ಹತನಾಗುತ್ತಿರಲು ಸೈನ್ಯಗಳೆಲ್ಲವೂ ಭಗ್ನವಾಗಿ ದಿಕ್ಕು-ದಿಕ್ಕಿಗೆ ಓಡುತ್ತಿರಲು, ನಿನ್ನ ಪುತ್ರನಾದ ದುರ್ಯೋಧನನು ಭಗ್ನವಾದ ನಿನ್ನ ಸೈನ್ಯವನ್ನು ನೋಡಿ, ಒಂದೇ ರಥದಿಂದ ದ್ರೋಣರ ಬಳಿಗೆ ಶೀಘ್ರವಾಗಿ ಹೋಗಿ ಅವರನ್ನು ಕುರಿತು ಮಾತನಾಡಿದನು.

ದುರ್ಯೋಧನಃ

ಗತಃ ಸ ಪುರುಷವ್ಯಾಘ್ರಃ ಪ್ರಮಥ್ಯೇಮಾಂ ಮಹಾಚಮೂಮ್ ॥ ೪ ॥

ತತ್ರ ಕಾರ್ಯಂ ಸಮೀಕ್ಷಸ್ವ ಬ್ರಹ್ಮನ್ ನಿಶ್ರೇಯಸಂ ಹಿತಮ್ ।
ಅರ್ಜುನಸ್ಯ ವಿಘಾತಾಯ ದಾರುಣೇಽಸ್ಮಿನ್ ಜನಕ್ಷಯೇ ॥ ೫ ॥

ದುರ್ಯೋಧನ– ಪುರುಷವ್ಯಾಘ್ರನಾದ ಅರ್ಜುನನು ಈ ನಮ್ಮ ದೊಡ್ಡ ಸೈನ್ಯವನ್ನು ಮರ್ದಿಸಿ ಮುಂದೆ ಹೋಗಿದ್ದಾನೆ. ಎಲೈ ಬ್ರಾಹ್ಮಣರೇ, ಈ ದಾರುಣವಾದ ಜನಕ್ಷಯದಲ್ಲಿ ಅರ್ಜುನನನ್ನು ವಿನಾಶಗೊಳಿಸಿ ನನ್ನ ಹಿತವನ್ನು ಮತ್ತು ಶ್ರೇಯಸ್ಸನ್ನು ಸಾಧಿಸಲು ಮಾಡಬೇಕಾದ ಕಾರ್ಯವನ್ನು ನೀವು ಆಲೋಚಿಸಿ.

ಯಥಾ ಸ ಪುರುಷವ್ಯಾಘ್ರ ನ ಹನ್ಯೇತ ಜಯದ್ರಥಃ ।
ತಥಾ ವಿಧತ್ಸ್ವ ಭದ್ರಂ ತೇ ತ್ವಂ ಹಿ ನಃ ಪರಮಾ ಗತಿಃ ॥ ೬ ॥

ಎಲೈ ಪುರುಷವ್ಯಾಘ್ರರೇ, ನಿಮಗೆ ಮಂಗಳವಾಗಲಿ. ಜಯದ್ರಥನು ಕೊಲ್ಲಲ್ಪಡದಂತೆ ವಿಧಾನವನ್ನು ಮಾಡಿ. ನೀವೇ ನಮಗೆ ಪರಮಗತಿಯಾದವರು.

ಅಸೌ ಧನಂಜಯಾಗ್ನಿರ್ಹಿ ಕೋಪಮಾರುತಚೋದಿತಃ ।
ಸೇನಾಕಕ್ಷಂ ದಹತಿ ನಃ ಕಕ್ಷಮಗ್ನಿರಿವೋದ್ಧಿತಃ ॥ ೭ ॥

ಕೋಪಮಾರುತದಿಂದ ಪ್ರೇರಿತವಾದ ಈ ಅರ್ಜುನಾಗ್ನಿಯು ಅಗ್ನಿಯು ಹುಲ್ಲುಗಾವಲನ್ನು ದಹಿಸುವಂತೆ ನಮ್ಮ ಸೈನ್ಯವೆಂಬ ಹುಲ್ಲುಗಾವಲನ್ನು ದಹಿಸುತ್ತಿದೆ.

ಅತಿಕ್ರಾಂತೇ ತು ಕೌಂತೇಯೇ ತವ ಸೈನ್ಯಂ ಪರಂತಪ ।
ಜಯದ್ರಥಸ್ಯ ಗೋಪ್ತಾರಃ ಸಂಶಯಂ ಪರಮಂ ಗತಾಃ ॥ ೮ ॥

ಎಲೈ ಪರಂತಪರೇ, ಕೌಂತೇಯನಾದ ಅರ್ಜುನನು ನಿಮ್ಮ ಸೈನ್ಯವನ್ನು ದಾಟ ಹೋದ ಮೇಲೆ ಜಯದ್ರಥನ ರಕ್ಷಕರು ಸಂಶಯಗ್ರಸ್ತರಾಗಿದ್ದಾರೆ.

ಸ್ಥಿರಾ ಬುದ್ಧಿರ್ನರೇಂದ್ರಾಣಾಮಾಸೀದ್ ಬ್ರಹ್ಮವಿದಾಂ ವರ ।
ನಾತಿಕ್ರಮಿಷ್ಯತಿ ದ್ರೋಣಂ ಜಾತು ಜೀವನ್ ಧನಂಜಯಃ ॥ ೯ ॥

ಎಲೈ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರೇ, ಎಲ್ಲ ರಾಜರುಗಳಿಗೂ ಅರ್ಜುನನು ಬದುಕಿರುವವರೆಗೆ ದ್ರೋಣರನ್ನು ದಾಟ ಹೋಗಲಾರ ಎಂಬ ಬುದ್ಧಿಯು ಸ್ಥಿರವಾಗಿದ್ದಿತು.

ಯೋಽಸೌ ಪಾರ್ಥೋ ಹ್ಯತಿಕ್ರಾಂತೋ ಮಿಷತಸ್ತೇ ಮಹಾದ್ಯುತೇ ।
ಸರ್ವಂ ಹೃದ್ಯಾತುರಂ ಮನ್ಯೇ ನೇದಮಸ್ತಿ ಬಲಂ ಮಮ ॥ ೧೦ ॥

ಎಲೈ ಮಹಾದ್ಯುತಿಯುಳ್ಳವರೇ, ನಿಮ್ಮ ಕಣ್ಣೆದುರಿಗೇ ಅರ್ಜುನನು ನಿಮ್ಮನ್ನು ದಾಟಿ ಹೋಗಿರುವಾಗ ನಮ್ಮ ಸೈನ್ಯವೆಲ್ಲವೂ ರೋಗಗ್ರಸ್ತವಾದಂತಿದೆ. ಈ ನನ್ನ ಸೈನ್ಯವು ಇಲ್ಲವೆಂದು ನಾನು ಭಾವಿಸುತ್ತೇನೆ.

ಜಾನಾಮಿ ತ್ವಾಂ ಮಹಾಭಾಗ ಪಾಂಡವಾನಾಂ ಹಿತೇ ರತಮ್ ।
ತತೋ ಮುಹ್ಯಾಮಿ ಚ ಬ್ರಹ್ಮನ್ ಕಾರ್ಯವತ್ತಾಂ ವಿಚಿಂತಯನ್ ॥೧೧॥

ಎಲೈ ಮಹಾನುಭಾವರೇ, ನೀವು ಪಾಂಡವರ ಹಿತದಲ್ಲಿ ನಿರತರಾದವರು ಎಂದು ನಾನು ತಿಳಿದಿದ್ದೇನೆ. ಆ ಕಾರಣದಿಂದ ಎಲೈ ಬ್ರಾಹ್ಮಣರೇ, ಮಾಡಬೇಕಾದ ಕಾರ್ಯವನ್ನು ಕುರಿತು ಚಿಂತಿಸುತ್ತಾ ನಾನು ಮೂಢನಾಗಿದ್ದೇನೆ.

ಯಥಾಶಕ್ತಿ ಚ ತೇ ಬ್ರಹ್ಮನ್ ವರ್ತಯನ್ ವೃತ್ತಿಮುತ್ತಮಾಮ್ ।
ಪ್ರೀಣಾಮಿ ಚ ಯಥಾಶಕ್ತಿ ತಚ್ಚ ತ್ವಂ ನಾವಬುದ್ಧ್ಯಸೇ ॥ ೧೨ ॥

ಎಲೈ ಬ್ರಾಹ್ಮಣರೇ, ನನ್ನ ಶಕ್ತಿ ಇದ್ದಷ್ಟು ನಿಮಗೆ ಶ್ರೇಷ್ಠವಾದ ಸೇವಾವೃತ್ತಿಯನ್ನು ಮಾಡಿದ್ದೇನೆ. ಶಕ್ತಿ ಇದ್ದಷ್ಟು ನಿಮ್ಮನ್ನು ಸಂತೋಷಪಡಿಸಿದ್ದೇನೆ. ಆದರೆ ನೀವು ಅದನ್ನು ಗಮನಿಸುತ್ತಿಲ್ಲ.

ಅಸ್ಮಾನ್ನ ತ್ವಂ ಸದಾ ಭಕ್ತಾನ್ ನೇಚ್ಛಥೇ ಶತ್ರುಕರ್ಶನ ।
ಪಾಂಡವಾನ್ ಸತತಂ ಪ್ರೀಣಾಸ್ಯಸ್ಮಾಕಮಹಿತೇ ರತಾನ್ ॥ ೧೩ ॥

ಎಲೈ ಶತ್ರುಕರ್ಶನರೇ, ನಿಮ್ಮಲ್ಲಿ ಯಾವಾಗಲೂ ಭಕ್ತಿಯನ್ನು ಹೊಂದಿರುವ ನಮ್ಮನ್ನು ನೀವು ಬಯಸುವುದಿಲ್ಲ. ನಮ್ಮ ಅಹಿತದಲ್ಲಿ ಆಸಕ್ತರಾದ ಪಾಂಡವರನ್ನು ಯಾವಾಗಲೂ ಸಂತೋಷಪಡಿಸುತ್ತೀರಿ.

ನ ಹ್ಯಹಂ ತ್ವಾಂ ವಿಜಾನಾಮಿ ವಚಸಾ ಲಲಿತಂ ಸದಾ ।
ಹೃದಯೇನ ಭೃಶಂ ತೀಕ್ಷ್ಣಂ ಮಧುದಿಗ್ಧಮಿವ ಕ್ಷುರಮ್ ॥ ೧೪ ॥

ಮಧುರವಾದ ಮಾತುಗಳನ್ನು ಆಡಿ ಹೃದಯದಲ್ಲಿ ಬಹಳ ಕ್ರೂರವಾದ ನಿಮ್ಮನ್ನು ಜೇನುತುಪ್ಪವನ್ನು ಸವರಿದ ಕತ್ತಿ ಎಂದು ನಾನು ತಿಳಿಯಲಿಲ್ಲ.

ಅಸ್ಮಾನೇವೋಪಜೀವಂಸ್ತ್ವಮಸ್ಮಾಕಂ ವಿಪ್ರಿಯೇ ರತಃ ।
ನಹ್ಯಹಂ ತ್ವಾಂ ವಿಜಾನಾಮಿ ಸರ್ಪಂ ಮಂಡೂಕರಾವಿಣಮ್ ॥ ೧೫ ॥

ನಮ್ಮನ್ನೇ ಉಪಜೀವಿಸಿಕೊಂಡಿರುವ ನೀವು ನಮ್ಮ ವಿಪ್ರಿಯದಲ್ಲಿ ನಿರತರಾಗಿದ್ದೀರಿ. ನೀವು ಕಪ್ಪೆಯಂತೆ ಶಬ್ದವನ್ನು ಮಾಡುವ ಸರ್ಪವೆಂದು ನಾನು ತಿಳಿಯಲಿಲ್ಲ.

ನಾದಾಸ್ಯಚ್ಛೇದ್ ವರಂ ಮಹ್ಯಂ ಭವಾನ್ ಪಾಂಡವನಿಗ್ರಹೇ ।
ನಾವಾರಯಿಷ್ಯಂ ಗಚ್ಛಂತಮಹಂ ಸಿಂಧುಪತಿಂ ಗೃಹಾನ್ ॥ ೧೬ ॥

ನೀವು ಧರ್ಮರಾಜನನ್ನು ಸೆರೆಹಿಡಿಯುವೆನು ಎಂದು ನನಗೆ ವರವನ್ನು ಕೊಡದಿದ್ದರೆ ನಾನು ಮನೆಗೆ ಹೊರಟಿದ್ದ ಸೈಂಧವನನ್ನು ತಡೆಯುತ್ತಿರಲಿಲ್ಲ.

ಮಯಾ ತ್ವಾಶಂಸಮಾನೇನ ತ್ವತ್ತಸ್ತ್ರಾಣಮಬುದ್ಧಿನಾ ।
ಆಶ್ವಾಸಿತಃ ಸಿಂಧುಪತಿರ್ಮೋಹಾದ್ದತ್ತಶ್ಚ ಮೃತ್ಯವೇ ॥ ೧೭ ॥

ಬುದ್ಧಿಯಿಲ್ಲದ ನಾನು ನಿಮ್ಮಿಂದ ರಕ್ಷಣೆಯನ್ನು ಆಶಿಸಿ ಮೂಢನಾಗಿ ಸೈಂಧವನಿಗೆ ಆಶ್ವಾಸನೆಯನ್ನು ನೀಡಿ ಅವನನ್ನು ಮೃತ್ಯುವಿಗೆ ಒಪ್ಪಿಸಿದೆನು.

ಯಮದಂಷ್ಟ್ರಾಂತರಂ ಪ್ರಾಪ್ತೋ ಹ್ಯಪಿ ಮುಚ್ಯೇತ ಮಾನವಃ ।
ನಾರ್ಜುನಸ್ಯ ವಶಂ ಪ್ರಾಪ್ತೋ ಮುಚ್ಯೇತ ಹಿ ಜಯದ್ರಥಃ ॥ ೧೮ ॥

ಯಮನ ದಂತಗಳ ಸಂಧಿಯಲ್ಲಿ ಸಿಕ್ಕಿದ ಮನುಷ್ಯನಾದರೂ ಹಿಂದೆ ಬರಬಹುದು. ಆದರೆ ಅರ್ಜುನನಿಗೆ ವಶನಾದ ಜಯದ್ರಥನು ನಿರ್ಮುಕ್ತನಾಗಲಾರ.

ಸ ತಥಾ ಕುರು ಶೋಣಾಶ್ವ ಯಥಾ ಮುಚ್ಯೇತ ಸೈಂಧವಃ ।
ಮಮ ಚಾರ್ತಪ್ರಲಾಪಾನಾಂ ಮಾ ಕ್ರುಧಃ ಪಾಹಿ ಸೈಂಧವಮ್ ॥೧೯॥

ಎಲೈ ಶೋಣಾಶ್ವರೇ, ಸೈಂಧವನು ಅರ್ಜುನನಿಂದ ಮುಕ್ತನಾಗುವಂತೆ ಮಾಡಿ. ನನ್ನ ಆರ್ತಪ್ರಲಾಪಗಳಿಂದ ಕೋಪಗೊಳ್ಳಬೇಡಿ. ಸೈಂಧವನನ್ನು ರಕ್ಷಿಸಿ.

ದ್ರೋಣಃ

ನಾಭ್ಯಸೂಯಾಮಿ ತೇ ವಾಕ್ಯಮಶ್ವತ್ಥಾಮ್ನೋऽಸಿ ಮೇ ಸಮಃ ।
ತಥ್ಯಂ ತು ತೇ ಪ್ರವಕ್ಷ್ಯಾಮಿ ತಜ್ಜುಷ್ಟಸ್ವ ವಿಶಾಂಪತೇ ॥ ೨೦ ॥

ದ್ರೋಣ– ಎಲೈ ರಾಜನೇ, ನಿನ್ನ ಮಾತುಗಳನ್ನು ಕೇಳಿ ನಾನು ಅಸೂಯೆ ಪಡುವುದಿಲ್ಲ. ನೀನು ನನಗೆ ಅಶ್ವತ್ಥಾಮನಿಗೆ ಸಮನಾದವನು. ಸತ್ಯವಾದ ಮಾತನ್ನು ಹೇಳುವೆನು. ಅದನ್ನು ಸ್ವೀಕರಿಸುವವನಾಗು.

ಸಾರಥಿಪ್ರವರಃ ಕೃಷ್ಣಃ ಶೀಘ್ರಾಶ್ಚಾಸ್ಯ ಹಯೋತ್ತಮಾಃ ।
ಅಲ್ಪಂ ಚ ವಿವರಂ ಕೃತ್ವಾ ತೂರ್ಣಂ ಯಾತಿ ಧನಂಜಯಃ ॥ ೨೧ ॥

ಸಾರಥಿ ಶ್ರೇಷ್ಠನಾದ ಕೃಷ್ಣನಿಂದ ಮತ್ತು ಅರ್ಜುನನ ಶ್ರೇಷ್ಠವಾದ ಕುದುರೆಗಳು ಬಹಳ ಶೀಘ್ರಗಾಮಿಗಳು. ಸ್ವಲ್ಪ ಅವಕಾಶ ಸಿಕ್ಕಿದರೂ ಅದನ್ನು ಉಪಯೋಗಿಸಿಕೊಂಡು ಅರ್ಜುನನು ಶೀಘ್ರವಾಗಿ ಮುಂದೆ ಸಾಗುತ್ತಾನೆ.

ಕಿನ್ನ ಪಶ್ಯಸಿ ಬಾಣೌಘಾನ್ ಕ್ರೋಶಮಾತ್ರೇ ಕಿರೀಟಿನಃ ।
ಪಶ್ಚಾದ್ ರಥಸ್ಯ ಪತಿತಾನ್ ಕ್ಷಿಪ್ರಾನ್ ಶೀಘ್ರಂ ಹಿ ಗಚ್ಛತಃ ॥೨೨॥

ಅರ್ಜುನನು ಪ್ರಯೋಗಿಸಿದ ಬಾಣಗಳು ಅವನ ರಥದ ಹಿಂದೆ ಒಂದು ಕ್ರೋಶದ ದೂರದಲ್ಲಿ ಬೀಳುವುದನ್ನು ನೀನು ನೋಡುತ್ತಿಲ್ಲವೇ? ಅರ್ಜುನನ ರಥವು ಅವನ ಶೀಘ್ರವಾದ ಬಾಣಗಳಿಗಿಂತಲೂ ಶೀಘ್ರವಾಗಿ ಮುಂದೆ ಸಾಗುತ್ತದೆ.

ನ ಚಾಹಂ ಶೀಘ್ರಯಾನೇऽದ್ಯ ಸಮರ್ಥೋ ವಯಸಾನ್ವಿತಃ ।
ಸೇನಾಮುಖೇ ಚ ಪಾರ್ಥಾನಾಮೇತದ್ ಬಲಮುಪಸ್ಥಿತಮ್ ॥ ೨೩ ॥

ವೃದ್ಧನಾದ ನಾನು ಈ ದಿನ ಅಂತಹ ಶೀಘ್ರಯಾನವನ್ನು ಮಾಡಲು ಶಕ್ತನಲ್ಲ. ಸೇನೆಯ ಮುಂಭಾಗದಲ್ಲಿ ಪಾಂಡವರಿಗೆ ಇಂತಹ ಬಲವಿದೆ.

ಯುಧಿಷ್ಠಿರಶ್ಚ ಮೇ ಗ್ರಾಹ್ಯೋ ಮಿಷತಾಂ ಸರ್ವಧನ್ವಿನಾಮ್ ।
ಏವಂ ಮಯಾ ಪ್ರತಿಜ್ಞಾತಂ ಕ್ಷತ್ರಮಧ್ಯೇ ಮಹಾಭುಜ ॥ ೨೪ ॥

ಎಲೈ ಮಹಾಭುಜನೇ, ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆ ನಾನು ಯುಧಿಷ್ಠಿರನನ್ನು ಸೆರೆ ಹಿಡಿಯಬೇಕು. ಹೀಗೆ ನಾನು ಕ್ಷತ್ರಿಯರ ಮಧ್ಯದಲ್ಲಿ ಪ್ರತಿಜ್ಞೆಯನ್ನು ಮಾಡಿದ್ದೇನೆ.

ಧನಂಜಯೇನ ಚೋತ್ಕೃಷ್ಟಃ ಪ್ರಮುಖೇ ವರ್ತತೇ ಮಮ ।
ತಸ್ಮಾದ್ ವ್ಯೂಹಮುಖಂ ಹಿತ್ವಾ ನಾಹಂ ಯಾಸ್ಯಾಮಿ ಫಲ್ಗುನಮ್ ॥

ಯುಧಿಷ್ಠಿರನು ಅರ್ಜುನನಿಂದ ರಹಿತನಾಗಿ ನನ್ನ ಎದುರಿನಲ್ಲಿ ಇದ್ದಾನೆ. ಆದ್ದರಿಂದ ನಾನು ವ್ಯೂಹದ ಮುಂಭಾಗವನ್ನು ಬಿಟ್ಟು ಅರ್ಜುನನನ್ನು ಹಿಂಬಾಲಿಸುವುದಿಲ್ಲ.

ತುಲ್ಯಾಭಿಜನಕರ್ಮಾಣಂ ಶತ್ರುಮೇಕಂ ಸಹಾಯವಾನ್ ।
ಗತ್ವಾ ಯೋಧಯ ಮಾ ಭೈಸ್ತ್ವಂ ತ್ವಂ ಹ್ಯಸ್ಯ ಜಗತಃ ಪತಿಃ ॥೨೬॥

ನಿನಗೆ ಸಮಾನವಾದ ಕುಲ ಮತ್ತು ಕರ್ಮಗಳನ್ನುಳ್ಳ ಶತ್ರುವಾದ ಒಬ್ಬ ಅರ್ಜುನನನ್ನು ಸಹಾಯಕರಿಂದ ಒಡಗೂಡಿ ಹೋಗಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡು. ಹೆದರಬೇಡ. ನೀನೇ ಜಗತ್ತಿಗೆ ಪತಿಯಷ್ಟೆ?

ರಾಜಾ ಶೂರಃ ಕೃತೀ ದಕ್ಷೋ ವೈರಮುತ್ಪಾದ್ಯ ಪಾಂಡವೈಃ ।
ವೀರಃ ಸ್ವಯಂ ಪ್ರಯಾಹ್ಯಾಶು ಯತ್ರ ಯಾತೋ ಧನಂಜಯಃ ॥ ೨೭ ॥

ರಾಜನೂ, ಶೂರನೂ, ಅಭ್ಯಾಸಶೀಲನೂ, ದಕ್ಷನೂ, ವೀರನೂ ಆದ ನೀನು ಪಾಂಡವರ ಜೊತೆಯಲ್ಲಿ ವೈರವನ್ನು ಮಾಡಿದವನಾಗಿ ಸ್ವತಃ ಶೀಘ್ರವಾಗಿ ಅರ್ಜುನನು ಎಲ್ಲಿಗೆ ಹೋದನೋ ಅಲ್ಲಿಗೆ ಹೋಗುವವನಾಗು.

ದುರ್ಯೋಧನಃ

ಕಥಂ ತ್ವಾಮಪ್ಯತಿಕ್ರಾಂತಃ ಸರ್ವಶಸ್ತ್ರಭೃತಾಂ ವರಮ್ ।
ಧನಂಜಯೋ ಮಯಾ ಶಕ್ಯ ಆಚಾರ್ಯ ಪ್ರತಿಬಾಧಿತುಮ್ ॥ ೨೮ ॥

ದುರ್ಯೋಧನ– ಆಚಾರ್ಯರೇ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ನಿಮ್ಮನ್ನೂ ದಾಟಿ ಹೋದ ಅರ್ಜುನನನ್ನು ನಾನು ಬಾಧಿಸಲು ಹೇಗೆ ಸಾಧ್ಯವಾಗುತ್ತದೆ?

ಅಪಿ ಶಕ್ಯೋ ರಣೇ ಜೇತುಂ ವಜ್ರಹಸ್ತಃ ಪುರಂದರಃ ।
ನಾರ್ಜುನಃ ಸಮರೇ ಶಕ್ಯೋ ಜೇತುಂ ಪರಪುರಂಜಯಃ ॥ ೨೯ ॥

ವಜ್ರಪಾಣಿಯಾದ ಪುರಂದರನನ್ನೂ ಒಂದು ಪಕ್ಷ ಯುದ್ಧದಲ್ಲಿ ಜಯಿಸಬಹುದು. ಆದರೆ ಪರಪುರಂಜಯನಾದ ಅರ್ಜುನನನ್ನು ಯುದ್ಧದಲ್ಲಿ ಜಯಿಸುವುದು ಸಾಧ್ಯವಿಲ್ಲ.

ಯೇನ ಭೋಜಶ್ಚ ಹಾರ್ದಿಕ್ಯೋ ಭವಾಂಶ್ಚ ತ್ರಿದಶೋಪಮಃ ।
ಶಸ್ತ್ರಪ್ರತಾಪೇನ ಜಿತೌ ಶ್ರುತಾಯುಶ್ಚ ನಿಬರ್ಹಿತಃ ॥ ೩೦ ॥

ಸುದಕ್ಷಿಣಶ್ಚ ನಿಹತಃ ಸ ಚ ರಾಜಾ ಶ್ರುತಾಯುಧಃ ।
ಶ್ರುತಾಯುಶ್ಚಾಯುತಾಯುಶ್ಚ ಮ್ಲೇಚ್ಛಾಶ್ಚ ಬಹವೋ ಹತಾಃ ॥ ೩೧ ॥

ತಂ ಕಥಂ ಪಾಂಡವಂ ಸಂಖೇ ದಹಂತಮಹಿತಾನ್ ಬಹೂನ್ ।
ಪ್ರತಿಯೋತ್ಸ್ಯಾಮಿ ದುರ್ಧರ್ಷಂ ತನ್ಮಾಚಕ್ಷ್ವ ಸತ್ತಮ ॥ ೩೨ ॥

ಯಾವ ಅರ್ಜುನನಿಂದ ಭೋಜನಾದ ಕೃತವರ್ಮನೂ, ದೇವತೆಗಳಿಗೆ ಸದೃಶರಾದ ನೀವೂ, ಪರಾಜಿತರಾದರೋ ಶ್ರುತಾಯುವು ನಾಶ ಮಾಡಲ್ಪಟ್ಟನೋ, ಸುದಕ್ಷಿಣನೂ, ರಾಜನಾದ ಶ್ರುತಾಯುಧನೂ ವಿನಾಶಗೊಳಿಸಲ್ಪಟ್ಟರೋ, ಶ್ರುತಾಯುವೂ,

ಅಯುತಾಯುವೂ, ಅನೇಕ ಮ್ಲೇಚ್ಛರೂ ಹತರಾದರೋ, ಅಂತಹ ಯುದ್ಧದಲ್ಲಿ ಅನೇಕ ಶತ್ರುಗಳನ್ನು ದಹಿಸುವ, ದುರ್ಧರ್ಷನಾದ ಪಾಂಡವನಾದ ಅರ್ಜುನನನ್ನು ಎದುರಿಸಿ ನಾನು ಹೇಗೆ ಯುದ್ಧವನ್ನು ಮಾಡುವೆನು? ಸಜ್ಜನರಲ್ಲಿ ಶ್ರೇಷ್ಠರಾದವರೇ, ಅದನ್ನು ನನಗೆ ಹೇಳಿ.

ಕ್ಷಮಂ ಚೇನ್ನನ್ಯಸೇ ಯುದ್ಧಂ ಮಮ ತೇನಾದ್ಯ ಶಾಧಿ ಮಾಮ್ ।
ಪರವಾನಸ್ಮಿ ಭವತಃ ಪ್ರೇಷ್ಯಕೃದ್ ರಕ್ಷ ಮೇ ಯಶಃ ॥ ೩೩ ॥

ನಾನು ಈ ದಿನ ಅವನ ಜೊತೆಯಲ್ಲಿ ಯುದ್ಧವನ್ನು ಮಾಡುವುದು ಯೋಗ್ಯವೆನಿಸಿದರೆ ನನಗೆ ಅದರ ವಿಧಾನವನ್ನು ಹೇಳಿ. ನಾನು ನೀವು ಹೇಳಿದಂತೆ ಕೇಳುವ ನಿಮ್ಮ ದಾಸನಾಗಿದ್ದೇನೆ. ನನ್ನ ಕೀರ್ತಿಯನ್ನು ರಕ್ಷಿಸಿ.

ದ್ರೋಣಃ

ಸತ್ಯಂ ವದಸಿ ಕೌರವ್ಯ ದುರಾಧರ್ಷೋ ಧನಂಜಯಃ ।
ಅಹಂ ತು ತತ್ ಕರಿಷ್ಯಾಮಿ ಯಥೈನಂ ಪ್ರಸಹಿಷ್ಯಸಿ ॥ ೩೪ ॥

ದ್ರೋಣ– ಎಲೈ ಕೌರವ್ಯನೇ, ನೀನು ಸತ್ಯವನ್ನು ಮಾತನಾಡುತ್ತಿದ್ದೀಯೆ. ಅರ್ಜುನನು ಸೋಲಿಸಲು ಅಶಕ್ಯನಾದವನು. ನೀನು ಅವನ ವೇಗವನ್ನು ಸಹಿಸುವಂತೆ ನಾನು ಉಪಾಯವನ್ನು ಮಾಡುವೆನು.

ಅದ್ಭುತಂ ಚಾದ್ಯ ಪಶ್ಯಂತು ಲೋಕೇ ಸರ್ವಧನುರ್ಧರಾಃ ।
ವಿಷಕ್ತಂ ತ್ವಯಿ ಕೌಂತೇಯಂ ವಾಸುದೇವಸ್ಯ ಪಶ್ಯತಃ ॥ ೩೫ ॥

ಕೃಷ್ಣನು ನೋಡುತ್ತಿರುವಂತೆ ಅರ್ಜುನನ ಜೊತೆಯಲ್ಲಿ ಸೆಣೆಸಾಡುವ ನಿನ್ನನ್ನು ಲೋಕದಲ್ಲಿ ಎಲ್ಲ ಧನುರ್ಧರರೂ ಈ ದಿನ ಈ ಅದ್ಭುತವನ್ನು ನೋಡಲಿ.

ಏಷ ತೇ ಕವಚಂ ರಾಜನ್ ತಥಾ ಬಧ್ನಾಮಿ ಕಾಂಚನಮ್ ।
ಯಥಾ ನ ಬಾಣಾ ನಾಸ್ತ್ರಾಣಿ ಪ್ರಭವಿಷ್ಯಂತಿ ತೇ ರಣೇ ॥ ೩೬ ॥

ಎಲೈ ರಾಜನೇ, ಬಾಣಗಳಾಗಲೀ, ಅಸ್ತ್ರಗಳಾಗಲೀ ನಿನ್ನ ಮೇಲೆ ಯುದ್ಧದಲ್ಲಿ ಪ್ರಭಾವವನ್ನು ಬೀರದಂತೆ ನಿನಗೆ ಈ ಸುವರ್ಣಮಯವಾದ ಕವಚವನ್ನು ತೊಡಿಸುತ್ತಿದ್ದೇನೆ.

ಯದಿ ತ್ವಾ ಸಾಸುರಗಣಾಃ ಸತ್ರ ಯಕ್ಷೋರಗಪಕ್ಷಿಣಃ ।
ಯೋಧಯಂತಿ ತ್ರಯೋ ಲೋಕಾಃ ಸನರಾ ನಾಸ್ತಿ ತೇ ಭಯಮ್ ॥೩೭॥

ನಿನ್ನ ಎದುರಿಗೆ ರುದ್ರದೇವರಿಂದ ಸಹಿತರಾದ, ಅಸುರಗಣದಿಂದ ಸಹಿತರಾದ, ಯಕ್ಷೋರಗಪಕ್ಷಿಗಳಿಂದ, ಮನುಷ್ಯರಿಂದಲೂ ಕೂಡಿದ ಮೂರುಲೋಕಗಳು ಯುದ್ಧವನ್ನು ಮಾಡಿದರೂ ನಿನಗೆ ಭಯವಿಲ್ಲ.

ನ ಕೃಷ್ಣೋ ನ ಚ ಕೌಂತೇಯೋ ನ ಚಾನ್ಯಃ ಶಸ್ತ್ರಭೃದ್ ರಣೇ ।
ಶರಾನರ್ಪಯಿತುಂ ಕಶ್ಚಿತ್ ಕವಚೇ ತವ ಕೌರವ ॥ ೩೮ ॥

ಎಲೈ ಕೌರವನೇ, ಕೃಷ್ಣನಾಗಲೀ, ಅರ್ಜುನನಾಗಲೀ ಅಥವಾ ಬೇರೆ ಯಾವುದೇ ಶಸ್ತ್ರಧರನಾಗಲೀ ಯುದ್ಧದಲ್ಲಿ ನಿನ್ನ ಕವಚಕ್ಕೆ ಬಾಣಗಳನ್ನು ಪ್ರಯೋಗಿಸಲು ಸಾಧ್ಯವಿಲ್ಲ.

ನ ತ್ವಂ ಕವಚಮಾಸ್ಥಾಯ ಕ್ರುದ್ಧಮದ್ಯ ರಣೇಽರ್ಜುನಮ್ ।
ತ್ವರಮಾಣಃ ಸ್ವಯಂ ಯಾಹಿ ನ ತ್ವಾಽಸೌ ವಿಷಹಿಷ್ಯತಿ ॥ ೩೯ ॥

ಅಂತಹ ನೀನು ಕವಚವನ್ನು ಧರಿಸಿ ಈ ದಿನ ಕ್ರುದ್ಧನಾದ ಅರ್ಜುನನ ಕಡೆ ಶೀಘ್ರವಾಗಿ ಸ್ವತಃ ಹೋಗುವವನಾಗು. ಈ ದಿನ ಅವನು ನಿನ್ನನ್ನು ತಡೆಯಲಾರ.

ಸಂಜಯಃ

ವಿಮುಕ್ತ್ವಾ ತ್ವರನ್ ದ್ರೋಣಃ ಸ್ಪೃಷ್ಟ್ವಾಂಭೋ ವರ್ಮ ಭಾಸ್ವರಮ್।
ಆಬಬಂಧಾದ್ಭುತತಮಂ ಜಪನ್ ಮಂತ್ರಂ ಯಥಾವಿಧಿ ॥ ೪೦ ॥

ಸಂಜಯ– ದ್ರೋಣರು ಹೀಗೆ ಹೇಳಿ ಶೀಘ್ರವಾಗಿ ನೀರನ್ನು ಸ್ಪರ್ಶಿಸಿ ಪವಿತ್ರರಾಗಿ ಪ್ರಕಾಶಮಾನವಾದ, ಅದ್ಭುತತಮವಾದ ಕವಚವನ್ನು ವಿಧಿಪೂರ್ವಕವಾಗಿ, ಮಂತ್ರಜಪ ಪೂರ್ವಕವಾಗಿ ಅವನಿಗೆ ತೊಡಿಸಿದರು.

ರಣಾಯ ಮಹತೇ ರಾಜನ್ ವಿಜಯಾಯ ಸುತಸ್ಯ ತೇ ।
ವಿಸಿಷ್ಮಾಪಯಿಷುರ್ಲೋಕಾನ್ ವಿದ್ಯಯಾ ಬ್ರಹ್ಮವಿತ್ತಮಃ ॥

ಎಲೈ ರಾಜನೇ, ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಅವರು ತಮ್ಮ ವಿದ್ಯೆಯ ಬಲದಿಂದ ಲೋಕವೆಲ್ಲವನ್ನೂ ವಿಸ್ಮಯಗೊಳಿಸುವರಾಗಿ ನಿನ್ನ ಪುತ್ರನ ವಿಜಯದ ಸಲುವಾಗಿ ದೊಡ್ಡ ಯುದ್ಧದಲ್ಲಿ ಅವನನ್ನು ಸಮರ್ಥನನ್ನಾಗಿ ಮಾಡಲು ಆ ಕವಚವನ್ನು ಬಂಧಿಸಿದರು.

ದ್ರೋಣಃ

ಕರೋತು ಸ್ವಸ್ತಿ ತೇ ಬ್ರಹ್ಮಾ ಸ್ವಸ್ತಿ ಚಾಪಿ ದ್ವಿಜಾತಯಃ ।
ಸರೀಸೃಪಾಶ್ಚ ಯೇ ಶ್ರೇಷ್ಠಾಃ ತೇಭ್ಯಸ್ತೇ ಸ್ವಸ್ತಿ ಭಾರತ ॥ ೪೨ ॥

ದ್ರೋಣ– ಬ್ರಹ್ಮದೇವರು ನಿನಗೆ ಕ್ಷೇಮವನ್ನು ಮಾಡಲಿ. ಬ್ರಾಹ್ಮಣವರ್ಗವು ನಿನಗೆ ಕ್ಷೇಮವನ್ನು ಮಾಡಲಿ. ಎಲೈ ಭಾರತನೇ, ಶ್ರೇಷ್ಠರಾದ ಸರ್ಪಗಳಿಂದ ನಿನಗೆ ಕ್ಷೇಮವಾಗಲಿ.

ಯಯಾತಿರ್ನಹುಷಶ್ಚೈವ ಧುಂಧುಮಾರೋ ಭಗೀರಥಃ ।
ತುಭ್ಯಂ ರಾಜರ್ಷಯಃ ಸರ್ವೇ ಸ್ವಸ್ತಿ ಕುರ್ವಂತು ಸರ್ವತಃ ॥ ೪೩ ॥

ಯಯಾತಿಯೂ, ನಹುಷನೂ, ಧುಂಧುಮಾರನೂ, ಭಗೀರಥನೂ, ಎಲ್ಲ ರಾಜರ್ಷಿಗಳೂ ನಿನಗೆ ಎಲ್ಲ ಕಡೆಯಿಂದಲೂ ಕ್ಷೇಮವನ್ನು ಮಾಡಲಿ.

ಸ್ವಸ್ತಿ ತೇಽಸ್ತ್ವೇಕಪಾದೇಭ್ಯೋ ಬಹುಪಾದೇಭ್ಯ ಏವ ಚ ।
ಸ್ವಸ್ತ್ಯಸ್ತ್ವಪಾದಕೇಭ್ಯಶ್ಚ ನಿತ್ಯಂ ತವ ಮಹಾರಣೇ ॥ ೪೪ ॥

ನಿನಗೆ ಯುದ್ಧದಲ್ಲಿ ಯಾವಾಗಲೂ ಏಕಪಾದ ಪ್ರಾಣಿಗಳಿಂದ, ಬಹುಪಾದ ಪ್ರಾಣಿಗಳಿಂದ, ಪಾದರಹಿತ ಪ್ರಾಣಿಗಳಿಂದ ಕ್ಷೇಮವಾಗಲಿ.

ಸ್ವಾಹಾ ಸ್ವಧಾ ಶಚೀ ಚೈವ ಸ್ವಸ್ತಿ ಕುರ್ವಂತು ತೇ ಸದಾ ।
ಲಕ್ಷ್ಮೀರರುಂಧತೀ ಚೈವ ಕುರ್ಯಾತಾಂ ಸ್ವಸ್ತಿ ತೇಽನಘ ॥ ೪೫ ॥

ಸ್ವಾಹಾ, ಸ್ವಧಾ, ಶಚೀದೇವಿಯರು ನಿನಗೆ ಯಾವಾಗಲೂ ಕ್ಷೇಮವನ್ನು ಮಾಡಲಿ. ಎಲೈ ಅನಘನೇ, ನಿನಗೆ ಲಕ್ಷ್ಮೀ ಮತ್ತು ಅರುಂಧತಿಯರು ಕ್ಷೇಮವನ್ನು ಮಾಡಲಿ.

ಅಸಿತೋ ದೇವಲಶ್ಚೈವ ವಿಶ್ವಾಮಿತ್ರಸ್ತಥಾಽಂಗಿರಾಃ ।
ವಸಿಷ್ಠಃ ಕಶ್ಯಪಶ್ಚೈವ ಸ್ವಸ್ತಿ ಕುರ್ವಂತು ತೇ ನೃಪ ॥ ೪೬ ॥

ಎಲೈ ರಾಜನೇ, ಅಸಿತರು, ದೇವಲರು, ವಿಶ್ವಾಮಿತ್ರರು, ಅಂಗಿರಸರು, ವಸಿಷ್ಠರು ಮತ್ತು ಕಶ್ಯಪರು ನಿನಗೆ ಕ್ಷೇಮವನ್ನು ಮಾಡಲಿ.

ಧಾತಾ ವಿಧಾತಾ ಲೋಕೇಶ ದಿಶಶ್ಚ ಸದಿಗೀಶ್ವರಾಃ ।
ಸ್ವಸ್ತಿ ತೇಽದ್ಯ ಪ್ರಯಚ್ಛಂತು ಕಾರ್ತಿಕೇಯಶ್ಚ ಷಣ್ಮುಖಃ ॥ ೪೭ ॥

ಯೇನ ದೇವಾಃ ಸಕೃದ್ ಭಗ್ನಾಃ ಸಂಗ್ರಾಮೇ ತಾರಕಾಮಯೇ ।
ಧೃತಾಃ ಸ ಚಾಹತಃ ಶೂರೋ ಹ್ಯವಧ್ಯೋ ದೇವತಾಗಣೈಃ ॥ ೪೮ ॥

ಧಾತೃ, ವಿಧಾತೃ, ದಿಕ್ಕುಗಳು, ದಿಕ್ಪಾಲಕರು ಎಲೈ ಲೋಕೇಶನೆ, ನಿನಗೆ ಕ್ಷೇಮವನ್ನು ಮಾಡಲಿ. ಯಾವ ಕಾರ್ತಿಕೇಯನಾದ ಷಣ್ಮುಖನು ತಾರಕಾಮಯವಾದ ಯುದ್ಧದಲ್ಲಿ ಒಂದು ಸಲ ಭಗ್ನರಾದ ದೇವತೆಗಳನ್ನು ಒಂದುಗೂಡಿಸಿ ತಾನು ಅವಧ್ಯನಾಗಿ ಶೂರನಾಗಿ ದೇವತಾಗಣಗಳನ್ನು ಧರಿಸಿದನೋ ಅಂತಹ ಷಣ್ಮುಖನು ನಿನಗೆ ಕ್ಷೇಮವನ್ನುಂಟು ಮಾಡಲಿ.

ವಿವಸ್ವಾನ್ ಕುರುತಾಂ ಸ್ವಸ್ತಿ ತಥಾ ವೈವಸ್ವತೋ ಯಮಃ ।
ಪಾರ್ಷದಾ ವಶಗಾ ಯಸ್ಯ ಸ್ವಸ್ತಿ ತುಭ್ಯಂ ಪ್ರಯಚ್ಛತು ॥ ೪೯ ॥

ವಿವಸ್ವಾನ್ ಸೂರ್ಯನು ನಿನಗೆ ಕ್ಷೇಮವನ್ನು ಮಾಡಲಿ. ವೈವಸ್ವತನಾದ ಯಮನು ನಿನಗೆ ಕ್ಷೇಮವನ್ನು ಮಾಡಲಿ. ಆವನ ಅಧೀನರಾದ ಪಾರ್ಷದರು ನಿನಗೆ ಕ್ಷೇಮವನ್ನುಂಟು ಮಾಡಲಿ.

ದಿಗ್ಗಜಾಶ್ಚಾಪಿ ಚತ್ವಾರಃ ಕ್ಷಿತಿಃ ಖಂ ಗಗನಂ ಗ್ರಹಾಃ ।
ದಿಶಶ್ಚ ವಿದಿಶಶ್ಚೈವ ಸಿದ್ಧಾ ಲೋಕಹಿತೇ ರತಾಃ ।
ಸ್ವಸ್ತಿ ಕುರ್ವಂತು ತೇ ಸತ್ಯಂ ಮಂತ್ರೇಣಾನೇನ ಸಂಸ್ತುತಾಃ ॥ ೫೦ ॥

ನಾಲ್ಕು ದಿಗ್ಗಜಗಳು, ಭೂಮಿ, ಆಂತರಿಕ್ಷ, ಆಕಾಶ, ಗ್ರಹಗಳು, ದಿಕ್ಕುಗಳು, ವಿದಿಕ್ಕುಗಳು, ಲೋಕಹಿತದಲ್ಲಿರತರಾದ ಸಿದ್ಧರು ಈ ಮಂತ್ರದಿಂದ ಸ್ತೋತ್ರ ಮಾಡಲ್ಪಟ್ಟು ನಿನಗೆ ಸತ್ಯವಾದ ಕ್ಷೇಮವನ್ನುಂಟು ಮಾಡಲಿ.

ಅಧಸ್ತಾದ್ ಧರಣೀಂ ಯೋಽಸೌ ಸದಾ ಧಾರಯತೇ ನೃಪ ।
ಸ ಶೇಷಃ ಪನ್ನಗಶ್ರೇಷ್ಠಃ ಸ್ವಸ್ತಿ ತುಭ್ಯಂ ಪ್ರಯಚ್ಛತು ॥ ೫೧ ॥

ಎಲೈ ರಾಜನೇ, ಈ ಭೂಮಿಯ ಕೆಳಗೆ ಯಾವಾಗಲೂ ಭೂಮಿಯನ್ನು ಧರಿಸಿರುವ ಸರ್ಪಶ್ರೇಷ್ಠನಾದ ಶೇಷನು ನಿನಗೆ ಕ್ಷೇಮವನ್ನು ನೀಡಲಿ.

ಗಾಂಧಾರೇ ಯುಧಿ ವಿಕ್ರಮ್ಯ ನಿರ್ಜಿತಾಃ ಸುರಸತ್ತಮಾಃ ।
ಪುರಾ ವೃತ್ರೇಣ ದೈತ್ಯೇನ ಭಿನ್ನದೇಹಾಃ ಸಹಸ್ರಶಃ ॥ ೫೨ ॥

ಎಲೈ ಗಾಂಧಾರಿ ಪುತ್ರನೇ, ಹಿಂದೆ ದೈತ್ಯನಾದ ವೃತ್ರನು ದೇವಶ್ರೇಷ್ಠರನ್ನು ತನ್ನ ಪರಾಕ್ರಮದಿಂದ ಸೋಲಿಸಿ ಅವರನ್ನು ಸಹಸ್ರ ಸಂಖ್ಯೆಯಲ್ಲಿ ಭಿನ್ನದೇಹರನ್ನಾಗಿ ಮಾಡಿದನು.

ವಿಹ್ವಲಾ ಹೃತವೀರ್ಯಾಶ್ಚ ಸಹೇಂದ್ರಾ ವಿಬುಧಾ ದ್ರುತಮ್ ।
ಬ್ರಹ್ಮಾಣಂ ಶರಣಂ ಜಗ್ಮುಃ ವೃತ್ರಾದ್ ಭೀತಾ ಮಹಾಸುರಾತ್ ॥ ೫೩ ॥

ವಿಹ್ವಲರೂ, ತಮ್ಮ ಸಾಮರ್ಥ್ಯವನ್ನು ಕಳೆದುಕೊಂಡವರೂ ಆದ ಇಂದ್ರ ಸಹಿತರಾದ ದೇವತೆಗಳು ಮಹಾಸುರನಾದ ವೃತ್ರನಿಗೆ ಹೆದರಿ ಬ್ರಹ್ಮದೇವರಿಗೆ ಶರಣಾಗತರಾದರು.

ದೇವಾಃ

ಪ್ರಮರ್ದಿತಾನಾಂ ವೃತ್ರೇಣ ದೇವಾನಾಂ ದೇವಸತ್ತಮ ।
ಗತಿರ್ಭವ ಸುರಶ್ರೇಷ್ಠ ಪಾಹಿ ನೋ ಮಹತೋ ಭಯಾತ್ ॥ ೫೪ ॥

ದೇವತೆಗಳು– ಎಲೈ ದೇವತೆಗಳಿಗೂ ಶ್ರೇಷ್ಠನಾದ ದೇವತೆಯೇ, ವೃತ್ರನಿಂದ ಮರ್ದಿಸಲ್ಪಟ್ಟ ನಮಗೆ ಗತಿಯಾಗು. ಎಲೈ ಸುರಶ್ರೇಷ್ಠನೇ, ನಮ್ಮನ್ನು ದೊಡ್ಡ ಭಯದಿಂದ ರಕ್ಷಿಸು.

ದ್ರೋಣಃ

ಅಥ ಪಾರ್ಶ್ವೇ ಸ್ಥಿತಂ ವಿಷ್ಣುಂ ಶಕ್ರಾದೀಂಶ್ಚ ಸುರೋತ್ತಮಾನ್ ।
ಬ್ರಹ್ಮಾ ಪಥ್ಯಮಿದಂ ವಾಕ್ಯಂ ಜಗಾದ ಜಗತಾಂ ಪತಿಃ ॥ ೫೫ ॥

ದ್ರೋಣ– ಆಗ ಬ್ರಹ್ಮದೇವರು ಪಕ್ಕದಲ್ಲಿಯೇ ಇದ್ದ ವಿಷ್ಣುವನ್ನೂ ಮತ್ತು ಶಕ್ರಾದಿ ಸುರಶ್ರೇಷ್ಠರನ್ನೂ ನೋಡಿ ಜಗತ್ಪತಿಗಳಾದ ಅವರು ಹಿತವಾದ ಈ ಮಾತುಗಳನ್ನು ಆಡಿದರು.

ಬ್ರಹ್ಮಾ

ರಕ್ಷ್ಯಾ ಹಿ ಸತತಂ ದೇವಾಃ ಸಹೇಂದ್ರಾಃ ಸದ್ವಿಜಾತಯಃ ।
ತ್ವಷ್ಟುಃ ಸುದುರ್ಧರಂ ತೇಜಃ ಯೇನ ವೃತ್ರೋ ವಿನಿರ್ಮಿತಃ ॥ ೫೬ ॥

ಬ್ರಹ್ಮಾ– ಎಲೈ ದೇವತೆಗಳೇ, ಇಂದ್ರನಿಂದ ಮತ್ತು ಬ್ರಾಹ್ಮಣರಿಂದ ಸಹಿತರಾದ ನೀವು ಯಾವಾಗಲೂ ರಕ್ಷಿಸಲ್ಪಡಬೇಕಾದವರು. ತ್ವಷ್ಟೃವಿನ ಧರಿಸಲು ಅಸಾಧ್ಯವಾದ ತೇಜಸ್ಸಿನಿಂದ ವೃತ್ರನು ನಿರ್ಮಾಣ ಮಾಡಲ್ಪಟ್ಟಿದ್ದಾನೆ.

ತ್ವಷ್ಟಾ ಪುರಾ ತಪಸ್ತಪ್ತ್ವಾ ವರ್ಷಾಯುತಶತಂ ತದಾ ।
ವೃತ್ರೋ ವಿನಿರ್ಮಿತೋ ದೇವಾಃ ಪ್ರಾಪ್ಯಾನುಜ್ಞಾಂ ಮಹೇಶ್ವರಾತ್ ॥

ಎಲೈ ದೇವತೆಗಳೇ, ತ್ವಷ್ಟೃವು ಹಿಂದೆ ರುದ್ರದೇವನನ್ನು ಕುರಿತು ಹತ್ತು ಲಕ್ಷ ವರ್ಷಗಳ ಕಾಲ ತಪಸ್ಸನ್ನು ಮಾಡಿ ಅವನ ಅನುಗ್ರಹವನ್ನು ಪಡೆದು ವೃತ್ರನನ್ನು ಸೃಷ್ಟಿಸಿದ್ದಾನೆ.

ಶಂಕರಸ್ಯ ಪ್ರಸಾದಾದ್ ವೈ ಹನ್ಯಾದ್ ದೇವರಿಪೂರ್ಬಲೀ ।
ನಾಗತ್ವಾ ಶಂಕರಸ್ಥಾನಂ ಭಗವಾನ್ ದೃಶ್ಯತೇ ಹರಃ ॥ ೫೮ ॥

ದೇವಶತ್ರುವೂ, ಬಲಿಷ್ಠನೂ ಆದ ವೃತ್ರನು ಶಂಕರನ ಅನುಗ್ರಹದಿಂದ ನಿಮ್ಮನ್ನು ಕೊಂದಾನು! ಶಂಕರನ ನಿವಾಸ ಸ್ಥಾನಕ್ಕೆ ಹೋಗದೆ ಪೂಜ್ಯನಾದ ಹರನು ನಿಮ್ಮಿಂದ ನೋಡಲ್ಪಡಲು ಸಾಧ್ಯವಿಲ್ಲ.

ವೃತ್ರಂ ಹನಿಷ್ಯಥ ಸುರಾಃ ಕ್ಷಿಪ್ರಂ ಗಚ್ಛೇಮ ಮಂದಿರಮ್ ।
ಯತ್ರಾಸ್ತೇ ತಪಸಾಂ ಯೋನಿಃ ದಕ್ಷಯಜ್ಞವಿನಾಶನಃ ॥ ೫೯ ॥

ಪಿನಾಕೀ ಸರ್ವಭೂತೇಶೋ ಭಗನೇತ್ರನಿಪಾತನಃ ॥ ೬೦ ॥

ಎಲೈ ದೇವತೆಗಳೇ, ನೀವು ವೃತ್ರನನ್ನು ಕೊಲ್ಲುವಿರಿ. ನಾವು ದಕ್ಷಯಜ್ಞ ವಿನಾಶವನ್ನು ಮಾಡಿದ ತಪಸ್ಸಿಗೆ ಯೋನಿಯಾದ, ಪಿನಾಕವನ್ನು ಧರಿಸಿದ, ಸರ್ವಭೂತಪತಿಯಾದ, ಭಗನೇತ್ರನಿಪಾತನನಾದ ಶಂಕರನು ಇರುವ ಮಂದರ ಪರ್ವತಕ್ಕೆ ಶೀಘ್ರವಾಗಿ ಹೋಗೋಣ.

ದ್ರೋಣಃ

ತಂ ದೇವಾಃ ಸಹಿತಾ ಗತ್ವಾ ಬ್ರಹ್ಮಣಾ ಸಹ ಮಂದರಮ್ ।
ಅಪಶ್ಯಂಸ್ತಪಸೋ ರಾಶಿಂ ಸೂರ್ಯಕೋಟಿಸಮಪ್ರಭಮ್ ॥ ೬೧ ॥

ದ್ರೋಣ– ದೇವತೆಗಳು ಬ್ರಹ್ಮದೇವರಿಂದ ಕೂಡಿಕೊಂಡು ಮಂದರ ಪರ್ವತಕ್ಕೆ ಹೋಗಿ ತಪೋರಾಶಿಯೂ, ಸೂರ್ಯಕೋಟಿ ತೇಜಸ್ಸುಳ್ಳವನೂ ಆದ ಶಂಕರನನ್ನು ನೋಡಿದರು.

ಸೋಽಬ್ರವೀತ್ ಸ್ವಾಗತಂ ದೇವಾ ಬ್ರೂತ ಕಿಂ ಕರವಾಣ್ಯಹಮ್ ।
ಅಮೋಘಂ ದರ್ಶನಂ ಮಹ್ಯಂ ಕಾಮಪ್ರಾಪ್ತಿರತೋಽಸ್ತು ವಃ ।
ಏವಮುಕ್ತಾಸ್ತು ತೇ ಸರ್ವೇ ಪ್ರತ್ಯೂಚುಸ್ತಂ ದಿವೌಕಸಃ ॥ ೬೨ ॥

ಶಂಕರನು ಅವರನ್ನು ಕುರಿತು, ದೇವತೆಗಳೇ ನಿಮಗೆ ಸ್ವಾಗತ. ನಾನು ಏನು ಮಾಡಬೇಕೆಂದು ಹೇಳಿ. ನನ್ನ ದರ್ಶನವು ಎಂದೂ ವ್ಯರ್ಥವಾಗುವುದಿಲ್ಲ. ಆದರಿಂದ ನಿಮಗೆ ಅಭೀಷ್ಟ ಪ್ರಾಪ್ತಿಯಾಗಲಿ ಎಂದು ಹೇಳಿದನು. ಹೀಗೆ ಹೇಳಲ್ಪಟ್ಟ ದೇವತೆಗಳೆಲ್ಲರೂ ಶಂಕರನನ್ನು ಕುರಿತು ಮಾತನಾಡಿದರು.

ದೇವಾಃ

ಹೃತೌಜಸಾಂ ನೋ ವೃತ್ರೇಣ ಗತಿರ್ಭವ ದಿವೌಕಸಾಮ್ ।
ಮೂರ್ತಿಮೀಕ್ಷಸ್ವ ನೋ ದೇವ ಪ್ರಹಾರೈರ್ಜರ್ಝರೀಕೃತಾಮ್ ॥ ೬೩ ॥

ಶರಣಂ ತ್ವಾಂ ಪ್ರಪನ್ನಾಃ ಸ್ಮ ಗತಿರ್ಭವ ಮಹೇಶ್ವರ ॥ ೬೪ ॥

ದೇವಾ– ಎಲೈ ದೇವನೇ, ವೃತ್ರನ ಉಪದ್ರವದಿಂದ ಸಾಮರ್ಥ್ಯವನ್ನು ಕಳೆದುಕೊಂಡ ನಮಗೆ ನೀನು ಗತಿಯಾಗು. ವೃತ್ರನ ಪ್ರಹಾರಗಳಿಂದ ಜರ್ಝರಿತವಾದ ನಮ್ಮ ಶರೀರಗಳನ್ನು ನೋಡು. ಮಹೇಶ್ವರನೇ, ನಿನಗೆ ಶರಣಾಗತರಾಗಿದ್ದೇವೆ. ನಮಗೆ ಗತಿಯಾಗು.

ಈಶ್ವರಃ

ವಿದಿತಂ ಮೇ ಯಥಾ ದೇವಾಃ ಕೃತ್ಯೇಯಂ ಸುಮಹಾಬಲಾ ।
ತ್ವಷ್ಟುಸ್ತೇಜೋದ್ಭವಾ ಘೋರಾ ದುರ್ನಿವಾರ್ಯಾಽಕೃತಾತ್ಮಭಿಃ ।
ಅವಶ್ಯಂ ತು ಮಯಾ ಕಾರ್ಯಂ ಸಾಹ್ಯಂ ಸರ್ವದಿವೌಕಸಾಮ್ ॥೬೫॥

ಈಶ್ವರ– ಎಲೈ ದೇವತೆಗಳೇ, ಈ ಕೃತ್ಯವು (ಭೂತವು) ತ್ವಷ್ಟೃವಿನ ತೇಜಸ್ಸಿನಿಂದ ಜನಿಸಿ, ಮಹಾಬಲವನ್ನು ಹೊಂದಿದುದಾಗಿ, ಘೋರವಾಗಿ, ಮನೋಜಯವಿಲ್ಲ-

ದವರಿಂದ ನಿವಾರಿಸಲು ಅಸಾಧ್ಯವಾಗಿ ಹೇಗೆ ಇದೆ ಎಂದು ನಾನು ತಿಳಿದಿದ್ದೇನೆ. ನಾನು ಎಲ್ಲ ದೇವತೆಗಳಿಗೂ ಅವಶ್ಯವಾಗಿ ಸಹಾಯವನ್ನು ಮಾಡಲೇಬೇಕು.

ಮಮೇದಂ ಗಾತ್ರಜಂ ಶಕ್ರ ಕವಚಂ ಗೃಹ್ಯ ಭಾಸ್ವರಮ್ ।
ಬಧ್ನಾನೈನಂ ತು ಮಂತ್ರೇಣ ಮಾನಸೇನ ಸುರೇಶ್ವರ ॥ ೬೬ ॥

ಎಲೈ ಇಂದ್ರನೇ, ನನ್ನ ದೇಹದಿಂದ ಉದ್ಭವಿಸಿದ ಈ ಪ್ರಕಾಶಮಾನವಾದ ಕವಚವನ್ನು ಧರಿಸುವವನಾಗು. ಎಲೈ ಸುರೇಶ್ವರನೇ, ಈ ಮಂತ್ರವನ್ನು ಮನಸ್ಸಿನಲ್ಲಿ ಧರಿಸಿ ಕವಚವನ್ನು ಧರಿಸು.

ದ್ರೋಣಃ

ಇತ್ಯುಕ್ತ್ವಾ ವರದಃ ಪ್ರಾದಾದ್ ವರ್ಮ ತನ್ಮಂತ್ರಮೇವ ಚ ।
ಸ ತೇನ ವರ್ಮಣಾ ಗುಪ್ತಃ ಪ್ರಾಯಾದ್ ವೃತ್ರಚಮೂಂ ಪ್ರತಿ ॥ ೬೭ ॥

ದ್ರೋಣ– ಹೀಗೆ ಹೇಳಿದ ವರದನಾದ ಮಹೇಶ್ವರನು ಆ ಕವಚವನ್ನು ಮತ್ತು ಆ ಮಂತ್ರವನ್ನು ಶಕ್ರನಿಗೆ ನೀಡಿದನು. ಆ ಕವಚದಿಂದ ರಕ್ಷಿತನಾಗಿ ಇಂದ್ರನು ವೃತ್ರ ಸೇನೆಯ ಜೊತೆಯಲ್ಲಿ ಯುದ್ಧವನ್ನು ಮಾಡಲು ಹೊರಟನು.

ನಾನಾವಿಧೈಸ್ತು ಶಸ್ತ್ರೌಘೈಃ ಪಾತ್ಯಮಾನೈಃ ಸಹಸ್ರಶಃ ।
ನ ಸಂಧಿಃ ಶಕ್ಯತೇ ಭೇತ್ತುಂ ವರ್ಮಬಂಧಸ್ಯ ತಸ್ಯ ತು ॥ ೬೮ ॥

ನಾನಾ ವಿಧವಾದ ಶಸ್ತ್ರ ಸಮೂಹಗಳನ್ನು ಸಹಸ್ರ ಸಂಖ್ಯೆಯಲ್ಲಿ ಪ್ರಯೋಗ ಮಾಡಿದರೂ ಇಂದ್ರನು ಧರಿಸಿದ ಕವಚಗಳ ಸಂಧಿಗಳನ್ನು ಭೇದಿಸಲು ವೃತ್ರ ಸೈನ್ಯಕ್ಕೆ ಸಾಧ್ಯವಾಗಲಿಲ್ಲ.

ಸ ತೇನ ವರ್ಮಣಾ ಗುಪ್ತೋ ವೃತ್ರಂ ದೇವರಿಪುಂ ತದಾ ।
ಜಘಾನ ಸಮರೇಽಭೀತಃ ಶಕ್ರೋ ದೇವಾಗ್ರಣೀಃ ಸ್ವಯಮ್ ॥ ೬೯ ॥

ದೇವನಾಯಕನಾದ ಇಂದ್ರನು ಆ ಕವಚದಿಂದ ರಕ್ಷಿತನಾಗಿ ಯುದ್ಧದಲ್ಲಿ ಭಯಗೊಳ್ಳದೆ, ಆಗ ದೇವರಿಪುವಾದ ವೃತ್ರನನ್ನು ತಾನೇ ಸಂಹರಿಸಿದನು.

ಸ ತನ್ಮಂತ್ರಮಯಂ ಬಂಧಂ ವರ್ಮ ಚಾಂಗಿರಸೇ ದದೌ ॥ ೭೦ ॥

ಅಂಗಿರಾಃ ಪ್ರಾಹ ಪುತ್ರಾಯ ಮಂತ್ರಜ್ಞಾಯ ಬೃಹಸ್ಪತೇಃ ।
ಬೃಹಸ್ಪತಿರಥೋವಾಚ ಅಗ್ನಿವೇಶ್ಯಾಯ ಧೀಮತೇ ॥ ೭೧ ॥

ಅಗ್ನಿವೇಶ್ಯೋ ಮಮ ಪ್ರಾದಾತ್ ತೇನ ಬಧ್ನಾಮಿ ವರ್ಮ ತೇ ।
ತವಾದ್ಯ ದೇಹರಕ್ಷಾರ್ಥಂ ಮಂತ್ರೇಣ ನೃಪಸತ್ತಮ ॥ ೭೨ ॥

ಅವನು ಆ ಮಂತ್ರ ಪೂರ್ವಕವಾದ ಬಂಧನವನ್ನು ಮತ್ತು ಕವಚವನ್ನು ಅಂಗಿರಸರಿಗೆ ಕೊಟ್ಟನು. ಅಂಗಿರಸರು ತಮ್ಮ ಪುತ್ರರೂ, ಮಂತ್ರಜ್ಞರೂ ಆದ ಬೃಹಸ್ಪತಿಗಳಿಗೆ ಕೊಟ್ಟರು. ಬೃಹಸ್ಪತಿಗಳು ಮೇಧಾವಿಯಾದ (ನನ್ನ ಚಕ್ಕಪ್ಪನಾದ) ಅಗ್ನಿವೇಶ್ಯರಿಗೆ ಆದನ್ನು ಉಪದೇಶಿಸಿದರು. ಅಗ್ನಿವೇಶ್ಯರು ನನಗೆ ನೀಡಿದರು. ಎಲೈ ನೃಪಶ್ರೇಷ್ಠನೇ, ನಿನ್ನ ದೇಹದ ರಕ್ಷಣೆಗಾಗಿ ನಾನು ಈ ದಿನ ಆ ಕವಚವನ್ನು ನಿನಗೆ ಕಟ್ಟುತ್ತಿದ್ದೇನೆ.

ಸಂಜಯಃ

ಏವಮುಕ್ತ್ವಾ ತತೋ ದ್ರೋಣಃ ತವ ಪುತ್ರಂ ಮಹಾದ್ಯುತಿಃ ।
ಪುನರೇವ ವಚಃ ಪ್ರಾಹ ಶನೈರಾಚಾರ್ಯಪುಂಗವಃ ॥ ೭೩ ॥

ಸಂಜಯ– ಮಹಾದ್ಯುತಿಯಾದ ದ್ರೋಣರು ನಿನ್ನ ಪುತ್ರನನ್ನು ಕುರಿತು ಹೀಗೆ ಹೇಳಿ, ಆಚಾರ್ಯಶ್ರೇಷ್ಠರಾದ ಅವರು ಪುನಃ ನಿಧಾನವಾಗಿ ಹೇಳಿದರು.

ದ್ರೋಣಃ

ಬ್ರಹ್ಮಸೂತ್ರೇಣ ಬಧ್ನಾಮಿ ಕವಚಂ ತವ ಪಾರ್ಥಿವ ।
ಹಿರಣ್ಯಗರ್ಭೇಣ ಯಥಾ ಬದ್ಧಂ ವಿಷ್ಣೋಸ್ತು ವೈಶಸೇ ॥ ೭೪ ॥

ಯಥಾ ಚ ಬ್ರಹ್ಮಣಾ ಬದ್ಧಂ ಸಂಗ್ರಾಮೇ ತಾರಕಾಮಯೇ ।
ಶಕ್ರಸ್ಯ ಕವಚಂ ದಿವ್ಯಂ ತಥಾ ಬಧ್ನಾಮ್ಯಹಂ ತವ ॥ ೭೫ ॥

ದ್ರೋಣರು– ಎಲೈ ರಾಜನೇ, ಬ್ರಹ್ಮಸೂತ್ರದಿಂದ ನಿನಗೆ ಕವಚವನ್ನು ಕಟ್ಟುತ್ತಿದ್ದೇನೆ. ಯುದ್ಧದ ಸಮಯದಲ್ಲಿ ವಿಷ್ಣುವಿಗೆ ಹಿರಣ್ಯಗರ್ಭರಾದ ಬ್ರಹ್ಮದೇವರು ಕಟ್ಟಿದಂತೆ ನಿನಗೆ ಬ್ರಹ್ಮಸೂತ್ರದಿಂದ ಈ ಕವಚವನ್ನು ಕಟ್ಟುತ್ತಿದ್ದೇನೆ. ಹೇಗೆ ತಾರಕಾಮಯವಾದ ಯುದ್ಧದಲ್ಲಿ ಬ್ರಹ್ಮದೇವರು ಇಂದ್ರನಿಗೆ ಕವಚವನ್ನು ತೊಡಿಸಿದರೋ ಹಾಗೆ ನಾನು ನಿನಗೆ ಈ ದಿವ್ಯವಾದ ಕವಚವನ್ನು ತೊಡಿಸುತ್ತಿದ್ದೇನೆ.

ಸಂಜಯಃ

ಬದ್ಧ್ವಾ ತು ಕವಚಂ ತಸ್ಯ ಮಂತ್ರೇಣ ವಿಧಿಪೂರ್ವಕಮ್ ।
ಪ್ರೇಷಯಾಮಾಸ ರಾಜಾನಂ ಯುದ್ಧಾಯ ಮಹತೇ ದ್ವಿಜಃ ॥ ೭೬ ॥

ಸಂಜಯ– ಬ್ರಾಹ್ಮಣರಾದ ದ್ರೋಣರು ವಿಧಿಪೂರ್ವಕವಾಗಿ ಮತ್ತು ಮಂತ್ರ ಪೂರ್ವಕವಾಗಿ ರಾಜನಿಗೆ ಆ ಕವಚವನ್ನು ತೊಡಿಸಿ, ಅವನನ್ನು ದೊಡ್ಡ ಯುದ್ಧಕ್ಕೆ ಕಳುಹಿಸಿದರು.

ಸ ಸನ್ನದ್ಧೋ ಮಹಾಬಾಹುರಾಚಾರ್ಯೇಣ ಮಹಾತ್ಮನಾ ।
ಪ್ರಸ್ಥಿತಃ ಸಹಸಾ ರಾಜನ್ ಯತ್ರ ಯಾತೋ ಧನಂಜಯಃ ॥ ೭೭ ॥

ಎಲೈ ರಾಜನೇ, ಮಹಾತ್ಮರಾದ ಆಚಾರ್ಯರಿಂದ ಸನ್ನದ್ಧನಾದ ಮಹಾಬಾಹುವಾದ ದುರ್ಯೋಧನನು ತಕ್ಷಣದಲ್ಲಿಯೇ ಅರ್ಜುನನು ಹೋದ ಮಾರ್ಗದಲ್ಲಿ ಹೊರಟನು.

ತತೋ ರಥಸಹಸ್ರೇಣ ತ್ರಿಗರ್ತಾನಾಂ ಪ್ರಹಾರಿಣಾಮ್ ।
ತಥಾ ದಂತಿಸಹಸ್ರೇಣ ಮತ್ತಾನಾಂ ವೀರ್ಯಶಾಲಿನಾಮ್ ॥ ೭೮ ॥

ಅಶ್ವಾನಾಂ ನಿಯುತೇನೈವ ತಥಾಽನ್ಯೈಶ್ಚ ಮಹಾರಥೈಃ ।
ವೃತಃ ಪ್ರಾಯಾನ್ಮಹಾಬಾಹುರರ್ಜುನಸ್ಯ ರಥಂ ಪ್ರತಿ ।
ದ್ರುತಂ ಪ್ರಯಾತಸ್ತೇ ಪುತ್ರೋ ಭೃಶಂ ಕ್ರೋಧಸಮನ್ವಿತಃ ॥ ೭೯ ॥

ಆಗ ಪ್ರಹಾರಶೀಲರಾದ ತ್ರಿಗರ್ತರ ಸಹಸ್ರ ರಥಗಳಿಂದಲೂ, ಮದಿಸಿದ ಪರಾಕ್ರಮವುಳ್ಳ ಸಹಸ್ರ ಗಜಗಳಿಂದಲೂ, ಹತ್ತು ಸಾವಿರ ಕುದುರೆಗಳಿಂದಲೂ, ಇನ್ನೂ ಅನೇಕ ಮಹಾರಥರಿಂದಲೂ ಪರಿವೃತನಾಗಿ ಮಹಾಬಾಹುವಾದ ಸುಯೋಧನನು ಅರ್ಜುನನ ರಥದ ಕಡೆಗೆ ಹೊರಟನು. ಕ್ರೋಧ ಸಮನ್ವಿತನಾದ ನಿನ್ನ ಪುತ್ರನು ಬಹಳ ಶೀಘ್ರವಾಗಿ ಹೊರಟನು.

ನಾನಾವಾದಿತ್ರಘೋಷೇಣ ನಾನಾಜನಪದಾಯುತಃ ।
ತವ ಪುತ್ರಃ ಪ್ರಯಾತಸ್ತು ಯಥಾ ವೈರೋಚನಿಸ್ತಥಾ ॥ ೮೦ ॥

ನಾನಾ ವಾದ್ಯಘೋಷಗಳಿಂದಲೂ, ನಾನಾ ದೇಶದ ಯೋಧರಿಂದಲೂ ಸಂವೃತನಾಗಿ ನಿನ್ನ ಪುತ್ರನು ವಿರೋಚನನ ಮಗನಾದ ಬಲಿಯು ಯುದ್ಧಕ್ಕೆ ಹೊರಟಂತೆ ಹೊರಟನು.

ತತಃ ಶಬ್ದೋ ಮಹಾನಾಸೀತ್ ಸೈನ್ಯಾನಾಂ ತವ ಭಾರತ ।
ಅಗಾಧಂ ಪ್ರಸ್ಥಿತಂ ದೃಷ್ಟ್ವಾ ಸಮುದ್ರಮಿವ ಕೌರವಮ್ ॥ ೮೧ ॥

ಎಲೈ ಭಾರತನೇ, ಆಗ ಅಗಾಧ ಸಮುದ್ರವನ್ನು ಪ್ರವೇಶಿಸುವಂತೆ ಕೌರವನು ಹೊರಟುದುದನ್ನು ನೋಡಿ ನಿನ್ನ ಸೈನ್ಯಗಳಲ್ಲಿ ದೊಡ್ಡ ನಾದ ಉಂಟಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರ್ಯಶೀತಿತಮೋऽಧ್ಯಾಯಃ ॥

॥ ಜಯದ್ರಥವಧಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ನಾಲ್ಕನೆಯ ಅಧ್ಯಾಯ

ರಾಜರ ದ್ವಂದ್ವಯುದ್ಧಗಳು.

ಸಂಜಯಃ

ಪ್ರವಿಷ್ಟಯೋರ್ಮಹಾರಾಜ ಪಾರ್ಥವಾಷ್ಣೇಯಯೋ ರಣೇ ।
ದುರ್ಯೋಧನೇ ಪ್ರಯಾತೇ ಚ ಪೃಷ್ಠತಃ ಪುರುಷರ್ಷಭಮ್ ॥ ೧ ॥

ಜವೇನಾಭ್ಯದ್ರವನ್ ದ್ರೋಣಂ ಮಹತಾ ನಿಸ್ವನೇನ ಚ ।
ಪಾಂಡವಾಃ ಸೋಮಕೈಃ ಸಾರ್ಧಂ ತತೋ ಯುದ್ಧಮವರ್ತತ ॥ ೨ ॥

ಸಂಜಯ– ಎಲೈ ಮಹಾರಾಜನೇ, ಕೃಷ್ಣಾರ್ಜುನರು ಸೈನ್ಯವನ್ನು ಪ್ರವೇಶಿಸುತ್ತಿರಲು ದುರ್ಯೋಧನನು ಪುರುಷಶ್ರೇಷ್ಠನಾದ ಅರ್ಜುನನ ಹಿಂದೆ ಹೋಗುತ್ತಿರಲು ಸೋಮಕರ ಜೊತೆಯಲ್ಲಿ ಕೂಡಿದ ಪಾಂಡವರು ಬಹಳ ವೇಗದಿಂದ ಮತ್ತು ದೊಡ್ಡ ನಾದದಿಂದ ದ್ರೋಣರ ಕಡೆಗೆ ಸಾಗಿದರು. ಆನಂತರ ಯುದ್ಧವು ಜರುಗಿತು.

ತದ್ ಯುದ್ಧಮಭವತ್ ತೀವ್ರಂ ತುಮುಲಂ ರೋಮಹರ್ಷಣಮ್ ।
ಪಾಂಚಾಲಾನಾಂ ಕುರೂಣಾಂ ಚ ವ್ಯೂಹಸ್ಯ ಪುರತೋಽದ್ಭುತಮ್ ॥೩॥

ವ್ಯೂಹದ ಮುಂಭಾಗದಲ್ಲಿ ಪಾಂಚಾಲರಿಗೂ ಮತ್ತು ಕೌರವರಿಗೂ ಅದ್ಭುತವೂ, ತೀವ್ರವೂ ಮತ್ತು ರೋಮಾಂಚಕಾರಿಯೂ ಆದ ಯುದ್ಧವು ನಡೆಯಿತು.

ರಾಜನ್ ಕದಾಚಿನ್ನಾಸ್ಮಾಭಿರ್ದೃಷ್ಟಂ ತಾದೃಙ್ ನ ಚ ಶ್ರುತಮ್ ।
ಯಾದೃಙ್ ಮಧ್ಯಗತೇ ಸೂರ್ಯೇ ಯುದ್ಧಮಾಸೀದ್ ವಿಶಾಂಪತೇ ॥೪॥

ಎಲೈ ರಾಜನೇ, ಸೂರ್ಯನು ಮಧ್ಯಗತನಾಗಿರುವಾಗ ಎಂತಹ ಯುದ್ಧವು ನಡೆಯಿತೋ ಅಂತಹ ಯುದ್ಧವನ್ನು ನಾವು ಎಂದೂ ನೋಡಿಯೂ ಇರಲಿಲ್ಲ, ಕೇಳಿಯೂ ಇರಲಿಲ್ಲ.

ಧೃಷ್ಟದ್ಯುಮ್ನಮುಖಾಃ ಪಾರ್ಥಾ ವ್ಯೂಢಾನೀಕಾಃ ಪ್ರಹಾರಿಣಃ ।
ದ್ರೋಣಸ್ಯ ಸೈನ್ಯಂ ತೇ ಸರ್ವೇ ಶರವರ್ಷೈರವಾಕಿರನ್ ॥ ೫ ॥

ಸೈನ್ಯವನ್ನು ವ್ಯೂಹ ಮಾಡಿದ, ಪ್ರಹಾರಶೀಲರಾದ ಧೃಷ್ಟದ್ಯುಮ್ನ ಮೊದಲಾದ ಪಾಂಡವರೆಲ್ಲರೂ ದ್ರೋಣರ ಸೈನ್ಯದ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ವಯಂ ದ್ರೋಣಂ ಪುರಸ್ಕೃತ್ಯ ಸರ್ವಶಸ್ತ್ರಭೃತಾಂ ವರಮ್ ।
ಪಾರ್ಷತಪ್ರಮುಖಾನ್ ಪಾರ್ಥಾನಭವರ್ಷಾಮ ಸಾಯಕೈಃ ॥ ೬ ॥

ನಾವು ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರನ್ನು ಮುಂದೆ ಮಾಡಿಕೊಂಡು ಧೃಷ್ಟದ್ಯುಮ್ನ ಮೊದಲಾದ ಪಾಂಡವರ ಮೇಲೆ ಬಾಣಗಳ ಮಳೆಯನ್ನು ಕರೆದೆವು.

ಮಹಾಮೇಘಾವಿವೋದೀರ್ಣೌ ಮಿಶ್ರವಾತೌ ಹಿಮಾತ್ಯಯೇ ।
ಸೇನಾಗ್ರೇ ತೇ ಪ್ರಕಾಶೇತೇ ರುಚಿರೇ ರತ್ನಭೂಷಿತೇ ॥ ೭ ॥

ರತ್ನಭೂಷಿತವಾದ ಮತ್ತು ಮನೋಹರವಾದ ಆ ಎರಡು ಸೇನಾ ಮುಂಭಾಗಗಳು ಹಿಮ ಋತುವಿನ ಕೊನೆಯಲ್ಲಿ ವಾಯುವಿನಿಂದ ಮಿಶ್ರವಾದ ಉನ್ನದ್ಧವಾದ ಎರಡು ಮಹಾಮೇಘಗಳಂತೆ ಪ್ರಕಾಶಿಸಿದವು.

ಸಮೇತ್ಯ ತೇ ಮಹಾಸೇನೇ ಚಕ್ರತುರ್ವೇಗಮುತ್ತಮಮ್ ।
ಜಾಹ್ನವೀಯಮುನೇ ನದ್ಯೌ ಪ್ರಾವೃಷೀವೋಲ್ಬಣೋದಕೇ ॥ ೮ ॥

ಆ ಎರಡು ಸೈನ್ಯಗಳು ಪರಸ್ಪರವಾಗಿ ಸಂಧಿಸಿ, ಮಳೆಗಾಲದಲ್ಲಿ ಉಲ್ಬಣವಾದ ಉದಕದಿಂದ ಕೂಡಿದ ಗಂಗಾ-ಯಮುನಾ ನದಿಗಳಂತೆ ಶ್ರೇಷ್ಠವಾದ ವೇಗವನ್ನು ತಾಳಿದವು.

ನಾನಾಶಸ್ತ್ರಪುರೋವಾತಃ ದ್ವಿಪಾಶ್ವರಥಸಂವೃತಃ ।
ಗದಾವಿದ್ಯುನ್ಮಹಾರೌದ್ರಃ ಸಂಗ್ರಾಮಜಲದೋ ಮಹಾನ್ ॥ ೯ ॥

ಭಾರದ್ವಾಜಾನಿಲೋದ್ಧೂತಃ ಶರಧಾರಾಃ ಸಹಸ್ರಶಃ ।
ಅಭ್ಯವರ್ಷನ್ ಮಹಾರೌದ್ರಂ ಪಾಂಡುಸೈನ್ಯಾಗ್ನಿಮುತ್ಥಿತಮ್ ॥ ೧೦ ॥

ನಾನಾ ಶಸ್ತ್ರಗಳೆಂಬ ಪೂರ್ವವಾಯುವಿನಿಂದ ಕೂಡಿದ, ಹಯಾಶ್ವ-ರಥಗಳಿಂದ ಸಂವೃತವಾದ ಗದೆಗಳೆಂಬ ವಿದ್ಯುತ್ತುಗಳಿಂದ ಮಹಾಭಯಂಕರವಾದ ಸಂಗ್ರಾಮವೆಂಬ ದೊಡ್ಡ ಮೋಡವು ದ್ರೋಣರೆಂಬ ವಾಯುವಿನಿಂದ ಮೇಲಕ್ಕೆ ಹಾರಿಸಲ್ಪಟ್ಟು ಸಹಸ್ರ ಶರಧಾರೆಗಳಿಂದ ಉತ್ಥಿತವಾದ ಪಾಂಡವರ ಮಹಾಭಯಂಕರವಾದ ಸೈನ್ಯಾಗ್ನಿಯ ಮೇಲೆ ಮಳೆಗರೆಯಿತು.

ಸಮುದ್ರಮಿವ ಘರ್ಮಾಂತೇ ವಿವಾನ್ ಘೋರೋ ಮಹಾನಿಲಃ ।
ವ್ಯಕ್ಷೋಭಯದನೀಕಾನಿ ಪಾಂಡವಾನಾಂ ದ್ವಿಜೋತ್ತಮಃ ॥ ೧೧ ॥

ಬೇಸಿಗೆಯ ಕೊನೆಯಲ್ಲಿ ಬೀಸುವ ಘೋರವಾದ ಬಿರುಗಾಳಿಗೆ ಸಿಲುಕಿದ ಸಮುದ್ರದಂತೆ ದ್ವಿಜಶ್ರೇಷ್ಠರಾದ ದ್ರೋಣರು ಪಾಂಡವರ ಸೇನೆಯನ್ನು ಕ್ಷೋಭೆಗೊಳಿಸಿದರು.

ತೇऽಪಿ ಸರ್ವಪ್ರಯತ್ನೇನ ದ್ರೋಣಮೇವ ಸಮಾದ್ರವನ್ ।
ಬಿಭತ್ಸಂತೋ ಮಹಾಸೇತುಂ ವಾರ್ಯೋಘಾಃ ಪ್ರಬಲಾ ಇವ ॥ ೧೨ ॥

ಪಾಂಡವ ಯೋಧರೂ ಸಹ ಪ್ರಬಲವಾದ ಜಲಸಮೂಹಗಳು ಮಹಾಸೇತುವನ್ನು ಭೇದಿಸಲು ಬಯಸಿದಂತೆ ಸರ್ವಪ್ರಯತ್ನದಿಂದ ದ್ರೋಣರ ಕಡೆಗೆ ಮುನ್ನುಗ್ಗಿದರು.

ವಾರಯಾಮಾಸ ತಾನ್ ದ್ರೋಣೋ ವಾರ್ಯೋಘಾನಚಲೋ ಯಥಾ।
ಪಾಂಡವಾನ್ ಸಮರೇ ಕ್ರುದ್ಧಾನ್ ಪಾಂಚಾಲಾಂಶ್ಚ ಸಕೇಕಯಾನ್ ॥

ಪರ್ವತವು ಜಲಪ್ರವಾಹವನ್ನು ತಡೆದಂತೆ ದ್ರೋಣರು ಕ್ರುದ್ಧರಾದ ಪಾಂಡವರನ್ನೂ, ಕೇಕಯ ಸಹಿತರಾದ ಪಾಂಚಾಲರನ್ನೂ ತಡೆದರು.

ಪರ್ಯವರ್ತಂತ ರಾಜಾನಃ ಕುರ್ವಾಣಾಸ್ತವ ಶಾಸನಮ್ ।
ಮಹಾಬಲಾ ರಣೇ ಶೂರಾಃ ಪಾಂಚಾಲಾನನ್ವವಾರಯನ್ ॥ ೧೪ ॥

ಮಹಾಬಲರೂ, ಶೂರರೂ ಆದ ರಾಜರು ನಿನ್ನ ಶಾಸನವನ್ನು ಪಾಲಿಸುತ್ತಾ ಅಲ್ಲಿಯೇ ನಿಂತು ರಣರಂಗದಲ್ಲಿ ಪಾಂಚಾಲರನ್ನು ತಡೆದರು.

ತತೋ ರಣೇ ನರವ್ಯಾಘ್ರಃ ಪಾರ್ಷತಃ ಪಾಂಡವೈಃ ಸಹ ।
ಸಂಜಘಾನಾಸಕೃದ್ ದ್ರೋಣಂ ಬಿಭಿತ್ಸುರಿವಾಹಿನೀಮ್ ॥ ೧೫ ॥

ಆಗ ನರವ್ಯಾಘ್ರನಾದ ಧೃಷ್ಟದ್ಯುಮ್ನನು ಪಾಂಡವರ ಜೊತೆಯಲ್ಲಿ ರಣರಂಗದಲ್ಲಿ ದ್ರೋಣರ ಸೈನ್ಯವನ್ನು ಭೇದಿಸಲು ಬಯಸಿ ಅನೇಕ ಬಾರಿ ದ್ರೋಣರಿಗೆ ಪ್ರಹಾರವನ್ನು ಮಾಡಿದನು.

ಯಥೈವ ಶರವರ್ಷಾಣಿ ದ್ರೋಣೋ ವರ್ಷತಿ ಪಾರ್ಷತೇ ।
ತಥೈವ ಶರವರ್ಷಾಣಿ ಧೃಷ್ಟದ್ಯುಮ್ನೋಽಪ್ಯವರ್ಷತ ॥ ೧೬ ॥

ದ್ರೋಣರು ಧೃಷ್ಟದ್ಯುಮ್ನನ ಮೇಲೆ ಹೇಗೆ ಬಾಣಗಳ ಮಳೆಯನ್ನು ಸುರಿಸುತ್ತಾರೆಯೋ ಹಾಗೆಯೇ ಧೃಷ್ಟದ್ಯುಮ್ನನೂ ಅವರ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಸನಿಸ್ತ್ರಿಂಶಪುರೋವಾತಃ ಶಕ್ತಿಪ್ರಾಸರ್ಷ್ಟಿಸಂವೃತಃ ।
ಜ್ಯಾವಿದ್ಯುಚ್ಚಾಪನಿರ್ಹ್ರಾದೋ ಧೃಷ್ಟದ್ಯುಮ್ನಬಲಾಹಕಃ ॥ ೧೭ ॥

ಶರಧಾರಾಶ್ಮವರ್ಷಾಣಿ ವ್ಯಸೃಜತ್ ಸರ್ವತೋದಿಶಮ್ ।
ನಿಘ್ನಂಸ್ತತ್ರ ನರಾಶ್ವೌಘಾನ್ ಪಾತಯಾಮಾಸ ವಾಹಿನೀಮ್ ॥ ೧೮ ॥

ಖಡ್ಗಗಳೆಂಬ ಪೂರ್ವವಾಯುವಿನಿಂದ ಸಹಿತವಾದ, ಶಕ್ತಿ-ಪ್ರಾಸ ಮತ್ತು ಋಷ್ಟಿಗಳೆಂಬ ಆಯುಧಗಳಿಂದ ಕೂಡಿದ, ಹೆದೆಗಳೆಂಬ ಮಿಂಚುಗಳಿಂದಲೂ, ಧನುಸ್ಸೆಂಬ ಗುಡುಗುಗಳಿಂದಲೂ ಕೂಡಿದ ಧೃಷ್ಟದ್ಯುಮ್ನನೆಂಬ ಮೋಡವು ಎಲ್ಲ ದಿಕ್ಕುಗಳಲ್ಲಿಯೂ ಬಾಣಗಳ ಧಾರೆ ಎಂಬ ಕಲ್ಲುಗಳ ಮಳೆಯನ್ನು ಕರೆದು, ಪದಾತಿಗಳನ್ನು ಮತ್ತು ಅಶ್ವಸಮೂಹಗಳನ್ನು ಕೊಲ್ಲುತ್ತಾ ಅಲ್ಲಿನಿನ್ನ ಸೈನ್ಯವನ್ನು ಬೀಳಿಸಿತು.

ಯಂ ಯಮಾರ್ಚ್ಛತ್ಸಮರೇ ದ್ರೋಣಃ ಪಾಂಡವಾನಾಂ ರಥವ್ರಜಮ್ ।
ತಸ್ಮಾತ್ ತಸ್ಮಾಚ್ಚರೈರ್ದ್ರೋಣಮಪಾಕರ್ಷತ ಪಾರ್ಷತಃ ॥ ೧೯ ॥

ದ್ರೋಣರು ಪಾಂಡವರ ರಥ ಸಮೂಹದಲ್ಲಿ ಯಾರ ಯಾರನ್ನು ಉದ್ದೇಶಿಸಿ ಶಸ್ತ್ರ ಪ್ರಯೋಗವನ್ನು ಮಾಡಲು ಬಯಸಿದರೋ ಧೃಷ್ಟದ್ಯುಮ್ನನು ಅವರವರಿಂದ ದ್ರೋಣರನ್ನು ತನ್ನ ಬಾಣಗಳಿಂದ ಬೇರೆ ಕಡೆಗೆ ಎಳೆದನು.

ತಥಾ ತು ಯತಮಾನಸ್ಯ ದ್ರೋಣಸ್ಯ ಯುಧಿ ಭಾರತ ।
ಧೃಷ್ಟದ್ಯುಮ್ನಂ ಸಮಾಸಾದ್ಯ ತ್ರಿಧಾ ಸೈನ್ಯಮಭಿದ್ಯತ ॥ ೨೦ ॥

ಎಲೈ ಭಾರತನೇ, ರಣರಂಗದಲ್ಲಿ ಹಾಗೆ ಪ್ರಯತ್ನಪಡುತ್ತಿದ್ದ ದ್ರೋಣರ ಸೈನ್ಯವು ಧೃಷ್ಟದ್ಯುಮ್ನನನ್ನು ಸಮೀಪಿಸಿ ಮೂರು ಭಾಗವಾಗಿ ಒಡೆಯಿತು.

ಭೋಜಮೇಕೇऽಭ್ಯವರ್ಷಂತ ಜಲಸಂಧಂ ತಥಾऽಪರೇ ।
ಪಾಂಡವೈರ್ಹನ್ಯಮಾನಾಶ್ಚ ದ್ರೋಣಮೇವಾಪರೇ ವ್ರಜನ್ ॥ ೨೧ ॥

ಕೆಲವರು ಕೃತವರ್ಮನ ಭಾಗದ ಮೇಲೆ ಬಾಣಗಳನ್ನು ಪ್ರಯೋಗಿಸಿದರು. ಇನ್ನು ಕೆಲವರು ಜಲಸಂಧನ ಭಾಗದ ಮೇಲೆ ಬಾಣಗಳನ್ನು ಕರೆದರು. ಇನ್ನು ಕೆಲವರು ದ್ರೋಣರ ಭಾಗದ ಮೇಲೆಯೇ ಎರಗಿದರು. ಎಲ್ಲರೂ ಪಾಂಡವರಿಂದ ಪ್ರಹಾರಕ್ಕೊಳಗಾದರು.

ಸಂಘಾತೇ ಯತತೇ ದ್ರೋಣಃ ಸೈನ್ಯಸ್ಯ ರಥಿನಾಂ ವರಃ ।
ವ್ಯಧಮಚ್ಚಾಪಿ ತಾನ್ಯಸ್ಯ ಧೃಷ್ಟದ್ಯುಮ್ನೋ ಮಹಾರಥಃ ॥ ೨೨ ॥

ರಥಿಶ್ರೇಷ್ಠರಾದ ದ್ರೋಣರು ಸೈನ್ಯವನ್ನು ಒಂದುಗೂಡಿಸಲು ಪ್ರಯತ್ನಪಟ್ಟರು. ಆದರೆ ಮಹಾರಥನಾದ ಧೃಷ್ಟದ್ಯುಮ್ನನು ಆ ಸೈನ್ಯವನ್ನು ಭಗ್ನಗೊಳಿಸಿದನು.

ಧಾರ್ತರಾಷ್ಟ್ರಾಸ್ತಥಾ ಭೂತಾ ವಧ್ಯಂತೇ ಪಾಂಡುಸೃಂಜಯೈಃ ।
ಅಗೋಪಾಃ ಪಶವೋಽರಣ್ಯೇ ಬಹುಭಿಃ ಶ್ವಾಪದೈರಿವ ॥ ೨೩ ॥

ಅಂತಹ ಸ್ಥಿತಿಗೆ ತಲುಪಿದ ಧೃತರಾಷ್ಟ್ರ ಪುತ್ರರು ಪಾಂಡವರಿಂದ ಮತ್ತು ಸೃಂಜಯರಿಂದ ಅರಣ್ಯದಲ್ಲಿ ರಕ್ಷಕರಿಲ್ಲದ ಪಶುಗಳು ಮಾಂಸಾಹಾರಿ ಪ್ರಾಣಿಗಳಿಗೆ ಸಿಲುಕಿದಂತೆ ಪ್ರಹಾರಕ್ಕೆ ಒಳಗಾದರು.

ಕಾಲಃ ಸಂಗೃಸತೇ ಯೋಧಾನ್ ಧೃಷ್ಟದ್ಯುಮ್ನೇನ ಮೋಹಿತಾನ್ ।
ಸಂಗ್ರಾಮೇ ತುಮುಲೇ ತಸ್ಮಿನ್ನಿತಿ ಸಮ್ಮೇನಿರೇ ಜನಾಃ ॥ ೨೪ ॥

ಈ ಘೋರವಾದ ಸಂಗ್ರಾಮದಲ್ಲಿ ಧೃಷ್ಟದ್ಯುಮ್ನನಿಂದ ಮೋಹಿತರಾದ ಯೋಧರನ್ನು ಕಾಲವೇ ಸಂಹರಿಸುತ್ತಿದೆ ಎಂದು ಜನರು ತಿಳಿದರು.

ಕುನೃಪಸ್ಯ ಯಥಾ ರಾಷ್ಟ್ರಂ ವ್ಯಾಧಿದುರ್ಭಿಕ್ಷತಸ್ಕರೈಃ ।
ಪೀಡ್ಯತೇ ತದ್ವದಾಪನ್ನಾ ಪಾಂಡವೈಸ್ತವ ವಾಹಿನೀ ॥ ೨೫ ॥

ಕೆಟ್ಟ ರಾಜನ ಆಳ್ವಿಕೆಯಲ್ಲಿ ರಾಷ್ಟ್ರವು ವ್ಯಾಧಿಗಳಿಂದ, ದುರ್ಭಿಕ್ಷದಿಂದ ಮತ್ತು ಕಳ್ಳರಿಂದ ಪೀಡಿತವಾದಂತೆ ನಿನ್ನ ಸೈನ್ಯವು ಪಾಂಡವರಿಂದ ಪೀಡೆಗೆ ಒಳಗಾಯಿತು.

ಅರ್ಕರಶ್ಮಿವಿಭಿನ್ನೇಷು ಶಸ್ತ್ರೇಷು ಕವಚೇಷು ಚ ।
ಚಕ್ಷೂಂಷಿ ಪ್ರತ್ಯಹನ್ಯಂತ ಸೈನ್ಯೇನ ರಜಸಾ ತಥಾ ॥ ೨೬ ॥

ಸೂರ್ಯರಶ್ಮಿ ಮಿಶ್ರಿತವಾದ ಶಸ್ತ್ರಗಳಿಂದ ಮತ್ತು ಕವಚದಿಂದ ಹಾಗೂ ಸೈನ್ಯದಿಂದ ಎದ್ದ ಧೂಳಿನಿಂದ ಯೋಧರ ದೃಷ್ಟಿಯು ಮಂಕಾಯಿತು.

ತ್ರಿಧಾ ಭೂತೇಷು ಸೈನ್ಯೇಷು ವಧ್ಯಮಾನೇಷು ಪಾಂಡವೈಃ ।
ಅಮರ್ಷಿತಸ್ತತೋ ದ್ರೋಣಃ ಪಾಂಚಾಲಾನ್ ವ್ಯಧಮಚ್ಛರೈಃ ॥ ೨೭ ॥

ತಮ್ಮ ಸೈನ್ಯವು ಮೂರು ಭಾಗವಾಗಿ ಪಾಂಡವರಿಂದ ಪ್ರಹಾರಕ್ಕೆ ಒಳಗಾಗುತ್ತಿರಲು ಕೋಪಗೊಂಡ ದ್ರೋಣರು ಪಾಂಚಾಲರನ್ನು ತಮ್ಮ ಬಾಣಗಳಿಂದ ನಾಶಗೊಳಿಸಿದರು.

ಮೃಗ್ಣತಸ್ತಾನ್ಯನೀಕಾನಿ ನಿಘ್ನತಶ್ಚಾಪಿ ಸಾಯಕೈಃ ।
ಬಭೂವ ರೂಪಂ ದ್ರೋಣಸ್ಯ ಕಾಲಾಗ್ನೇರಿವ ದೀಪ್ಯತಃ ॥ ೨೮ ॥

ಆ ಸೈನ್ಯಗಳನ್ನು ಮರ್ದಿಸುತ್ತಾ ಬಾಣಗಳಿಂದ ಸಂಹರಿಸುತ್ತಿದ್ದ ದ್ರೋಣರ ರೂಪವು ಜ್ವಲಿಸುವ ಕಾಲಾಗ್ನಿಯ ರೂಪದಂತೆ ಇದ್ದಿತು.

ರಥನಾಗಹಯಾಂಶ್ಚಾಪಿ ಪತ್ತೀಂಶ್ಚಾಪಿ ವಿಶಾಂಪತೇ ।
ವಿಕೃಷ್ಟೇನೇಷುಣಾ ಸಂಖೇ ನಿರ್ಬಿಭೇದ ಮಹಾರಥಃ ॥ ೨೯ ॥

ಎಲೈ ರಾಜನೇ, ಮಹಾರಥರಾದ ದ್ರೋಣರು ರಥ-ಗಜಾಶ್ವಗಳನ್ನು ಮತ್ತು ಪದಾತಿಗಳನ್ನು ಒಂದೊಂದೇ ಬಾಣದಿಂದ ರಣರಂಗದಲ್ಲಿ ಕತ್ತರಿಸಿದರು.

ಪಾಂಡವಾನಾಂ ತು ಸೈನ್ಯೇಷು ನಾಸ್ತಿ ರಾಜನ್ ಸ ಮಾನವಃ ।
ಅಧಾರಯತ ಯೋ ಬಾಣಾನ್ ದ್ರೋಣಚಾಪಚ್ಯುತಾನ್ ಪ್ರಭೋ ॥

ಪ್ರಭುವೇ, ಪಾಂಡವರ ಸೈನ್ಯದಲ್ಲಿ ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳನ್ನು ದಹಿಸುವ (ತಡೆಯುವ) ಒಬ್ಬ ಮನುಷ್ಯನೂ ಇರುವುದಿಲ್ಲ.

ತತ್ ಪಚ್ಯಮಾನಮಕೇ೯ಣ ದ್ರೋಣಸಾಯಕತಾಪಿತಮ್ ।
ಬಭ್ರಾಮ ಪಾರ್ಷತಂ ಸೈನ್ಯಂ ತತ್ರ ತತ್ರೈವ ಭಾರತ ॥ ೩೧ ॥

ಮಧ್ಯಾಹ್ನದ ಸೂರ್ಯನ ಬಿಸಿಲಿನಿಂದಲೂ ಮತ್ತು ದ್ರೋಣರ ಬಾಣದಿಂದಲೂ ತಪ್ತವಾದ ಧೃಷ್ಟದ್ಯುಮ್ನನ ಸೈನ್ಯವು ಎಲೈ ಭಾರತನೇ, ಅಲ್ಲಲ್ಲಿಯೇ ತಿರುಗಾಡಿತು.

ವಧ್ಯಮಾನಂ ತು ತತ್ ಸೈನ್ಯಂ ಭಾರದ್ವಾಜೇನ ಸರ್ವತಃ ।
ಶರೈರಗ್ನಿಪಾಕಾರ್ಹೈರ್ದಹ್ಯತೇ ಭರತರ್ಷಭ ॥ ೩೨ ॥

ಎಲೈ ಭರತರ್ಷಭನೇ, ದ್ರೋಣರಿಂದ ಎಲ್ಲ ಕಡೆಗಳಲ್ಲಿಯೂ ಅಗ್ನಿಪಿಪಯಂತಿರುವ ಬಾಣಗಳಿಂದ ಪ್ರಹಾರಕ್ಕೆ ಒಳಗಾದ ಆ ಸೈನ್ಯವು ದಹಿಸಲ್ಪಟ್ಟತು.

ತಥೈವ ಪಾರ್ಷತೇನಾಪಿ ಕಾಲ್ಯಮಾನಂ ಬಲಂ ತವ ।
ಅಭವತ್ ಸರ್ವತೋ ದೀಪ್ತಂ ಶುಷ್ಕಂ ವನಮಿವಾಗ್ನಿನಾ ॥ ೩೩ ॥

ಹಾಗೆಯೇ ಧೃಷ್ಟದ್ಯುಮ್ನನಿಂದ ಕಲಕಾಡಲ್ಪಡುವ ನಿನ್ನ ಸೈನ್ಯವು ಅಗ್ನಿಯು ಶುಷ್ಕವಾದ ವನವನ್ನು ದಹಿಸುವಂತೆ ಎಲ್ಲ ಕಡೆಯಲ್ಲಿಯೂ ಜ್ವಲಿಸಿತು.

ವಧ್ಯಮಾನೇಷು ಸೈನ್ಯೇಷು ದ್ರೋಣಪಾರ್ಷತಸಾಯಕೈಃ ।
ತ್ಯಕ್ತ್ವಾ ಪ್ರಾಣಾನ್ ಪರಂ ಶಕ್ಯಾ ಯುದ್ಧ್ಯಂತೇ ಸ್ವರ್ಗಲಿಪ್ಸವಃ ॥ ೩೪ ॥

ದ್ರೋಣರ ಮತ್ತು ಧೃಷ್ಟದ್ಯುಮ್ನನ ಬಾಣಗಳಿಂದ ಸೈನ್ಯಗಳು ವಧಿಸಲ್ಪಡುತ್ತಿರಲು ಸ್ವರ್ಗವನ್ನು ಬಯಸುವ ಯೋಧರು ತಮ್ಮ ಪ್ರಾಣದ ಹಂಗನ್ನು ತೊರೆದು ಶಕ್ತಿಯನ್ನು ಮೀರಿ ಯುದ್ಧವನ್ನು ಮಾಡಿದರು.

ತಾವಕಾನಾಂ ಪರೇಷಾಂ ಚ ಯುದ್ಧ್ಯತಾಂ ಭರತರ್ಷಭ ।
ನಾಸೀತ್ ಕಶ್ಚಿನ್ಮಹಾರಾಜ ಯೋಽಜಹಾತ್ ಸಂಯುಗಂ ಭಯಾತ್ ॥

ಎಲೈ ಭರತಶ್ರೇಷ್ಠನೇ, ಮಹಾರಾಜನೇ, ನಿನ್ನವರು ಮತ್ತು ಪಾಂಡವರು ಯುದ್ಧವನ್ನು ಮಾಡುತ್ತಿರುವಾಗ ಭಯದಿಂದ ರಣರಂಗವನ್ನು ತ್ಯಜಿಸುವ ವ್ಯಕ್ತಿಯು ಒಬ್ಬನೂ ಇರಲಿಲ್ಲ.

ಭೀಮಸೇನಂ ತು ಕೌಂತೇಯಂ ಸೋದರ್ಯಾಃ ಪರ್ಯವಾರಯನ್ ।
ವಿವಿಂಶತಿಶ್ಚಿತ್ರಸೇನೋ ವಿಕರ್ಣಶ್ಚ ಮಹಾರಥಃ ॥ ೩೬ ॥

ಕುಂತೀಪುತ್ರನಾದ ಭೀಮಸೇನನನ್ನು, ಸಹೋದರರಾದ ವಿವಿಂಶತಿ, ಚಿತ್ರಸೇನ ಮತ್ತು ಮಹಾರಥನಾದ ವಿಕರ್ಣರು ಸುತ್ತುವರಿದರು.

ವಿಂದಾನುವಿಂದಾವಾವಂತ್ಯೌ ಕ್ಷೇಮಧೂರ್ತಿಶ್ಚ ವೀರ್ಯವಾನ್ ।
ತ್ರಯಾಣಾಂ ತವ ಪುತ್ರಾಣಾಂ ತ್ರಯ ಏವಾನುಯಾಯಿನಃ ॥ ೩೭ ॥

ಅವಂತಿದೇಶದ ವಿಂದಾನುವಿಂದರು, ಪರಾಕ್ರಮಶಾಲಿಯಾದ ಕ್ಷೇಮಧೂರ್ತಿ ಇವರು ನಿನ್ನ ಮೂರು ಪುತ್ರರಿಗೆ ಮೂವರು ಹಿಂಬಾಲಕರಾದರು.

ಬಾಹ್ಲೀಕರಾಜಸ್ತೇಜಸ್ವೀ ಕುಲಪುತ್ರಾಂಸ್ತನುತ್ಯಜಃ ।
ಸಹಸೇನಃ ಸಹಾಮಾತ್ಯೋ ದ್ರೌಪದೇಯಾನವಾರಯತ್ ॥ ೩೮ ॥

ತೇಜಸ್ವಿಯಾದ ಬಾಹ್ಲೀಕರಾಜನು ತನ್ನ ಸೈನ್ಯ ಮತ್ತು ಅಮಾತ್ಯರಿಂದ ಒಡಗೂಡಿ, ಕುಲಪುತ್ರರೂ, ದೇಹತ್ಯಾಗವನ್ನು ಮಾಡಲು ಸಿದ್ಧರಾದವರೂ ಆದ ದ್ರೌಪದಿಯ ಪುತ್ರರನ್ನು ತಡೆದನು.

ಶೈಬ್ಯೋ ಗೋವಾಸನೋ ರಾಜಾ ಯೋದ್ಧೈರ್ದಶಶತಾವರೈಃ ।
ಕಾಶ್ಯಸ್ಯಾಭಿಭುವಃ ಪುತ್ರಂ ಪರಾಕ್ರಾಂತಮವಾರಯತ್ ॥ ೩೯ ॥

ಶೈಬ್ಯನಾದ ಗೋವಾಸನ ರಾಜನು ಸಹಸ್ರಸಂಖ್ಯೆಗೆ ಕಡಿಮೆಯಿಲ್ಲದ ಯೋಧರಿಂದ ಕೂಡಿ, ಪರಾಕ್ರಮಶಾಲಿಯಾದ ಕಾಶೀರಾಜನ ಪುತ್ರನನ್ನು ತಡೆದನು.

ಅಜಾತಶತ್ರುಂ ಕೌಂತೇಯಂ ಜ್ವಲಂತಮಿವ ಪಾವಕಮ್ ।
ಮದ್ರಾಣಾಮೀಶ್ವರಃ ಶಲ್ಯೋ ರಾಜಾ ರಾಜಾನಮಾವೃಣೋತ್ ॥ ೪೦ ॥

ಜ್ವಲಿಸುವ ಅಗ್ನಿಯಂತೆ ಇದ್ದ ಕುಂತೀಪುತ್ರನಾದ, ರಾಜನಾದ ಅಜಾತಶತ್ರುವನ್ನು ಮದ್ರಾಧಿಪತಿಯಾದ ರಾಜನಾದ ಶಲ್ಯ ತಡೆದನು.

ದುಃಶಾಸನಸ್ತ್ವವಸ್ಥಾಪ್ಯ ಸ್ವಮನೀಕಮಮರ್ಷಣಃ ।
ಸಾತ್ಯಕಿಂ ಪ್ರಯಯೌ ಕ್ರುದ್ಧಃ ಶೂರೋ ರಥವರಂ ಯುಧಿ ॥ ೪೧ ॥

ರೋಷಶೀಲನಾದ ದುಶ್ಶಾಸನನು ತನ್ನ ಸೈನ್ಯವನ್ನು ನಿಲ್ಲಿಸಿ, ಕ್ರುದ್ಧನೂ, ಶೂರನೂ ಆದ ಅವನು ರಥಶ್ರೇಷ್ಠನಾದ ಸಾತ್ಯಕಿಯ ಕಡೆಗೆ ರಣರಂಗದಲ್ಲಿ ಹೋದನು.

ತೇನೈವ ಹನ್ಯನೀಕೇನ ಸನದ್ಧಧ್ವಜಚಿದ್ಧಜಃ ।
ಚತುಃಶತೈರ್ಮಹೇಷ್ವಾಸೈಃ ಚೇಕಿತಾನಮವಾರಯತ್ ॥ ೪೨ ॥

ಅವನು ಆದೇ ಗಜಸಮೂಹದ ಜೊತೆಯಲ್ಲಿ ಕವಚ-ಧ್ವಜಗಳನ್ನು ಸನ್ನದ್ಧಗೊಳಿಸಿ, ನಾಲ್ನೂರು ಧನುರ್ಧಾರಿಗಳಿಂದ ಕೂಡಿದವನಾಗಿ ಚೇಕಿತಾನನನ್ನು ತಡೆದನು.

ಶಕುನಿಸ್ತು ಸಹಾನೀಕೋ ಮಾದ್ರೀಪುತ್ರಾವವಾರಯತ್ ।
ಸಗಾಂಧಾರೈಃ ಸಪ್ತಶತೈಃ ಚಾಪಶಕ್ತಿವರಾಸಿಭಿಃ ॥ ೪೩ ॥

ಶಕುನಿಯಾದರೋ ಧನುಸ್ಸನ್ನು ಮತ್ತು ಶ್ರೇಷ್ಠವಾದ ಖಡ್ಗ ಮತ್ತು ಶಕ್ತ್ಯಾಯುಧವನ್ನು ಧರಿಸಿದ, ಏಳುನೂರು ಗಾಂಧಾರರಿಂದ ಕೂಡಿದ ತನ್ನ ಸೈನ್ಯದೊಡನೆ ಮಾದ್ರೀಪುತ್ರರಾದ ನಕುಲ- ಸಹದೇವರನ್ನು ತಡೆದನು.

ವಿಂದಾನುವಿಂದಾವಾವಂತ್ಯೌ ವಿರಾಟಂ ಮಾತ್ಸ್ಯಮಾರ್ಚ್ಛತಾಮ್ ।
ಪ್ರಾಣಾಂಸ್ಯಕ್ತ್ವಾ ಮಹೇಷ್ವಾಸೌ ಮಿತ್ರಾರ್ಥೇಽಭ್ಯುದ್ಯತೌ ಯುಧಿ ॥೪೪॥

ಅವಂತಿದೇಶದ ಮಹಾಧನುರ್ಧಾರಿಗಳಾದ ವಿಂದಾನುವಿಂದರು ತಮ್ಮ ಪ್ರಾಣದ ಹಂಗನ್ನು ತೊರೆದು, ರಣರಂಗದಲ್ಲಿ ಮಿತ್ರನ ಸಲುವಾಗಿ ಪ್ರಯತ್ನ ಮಾಡುವವರಾಗಿ ಮತ್ಸ್ಯರಾಜನಾದ ವಿರಾಟನ ಮೇಲೆ ಎರಗಿದರು.

ಶಿಖಂಡಿನಂ ಯಾಜ್ಞಸೇನಿಂ ಯುವಾನಮಪರಾಜಿತಮ್ ।
ಬಾಹ್ಲೀಕಃ ಪ್ರತಿಸಂರಬ್ಧಃ ಪರಾಕ್ರಾಂತಮವಾರಯತ್ ॥ ೪೫ ॥

ಯಜ್ಞಸೇನನ ಪುತ್ರನಾದ ಯುವಕನಾದ ಅಪರಾಜಿತನಾದ ಪರಾಕ್ರಮಶಾಲಿಯಾದ ಶಿಖಂಡಿಯನ್ನು ಬಾಹ್ಲೀಕನು ತಾನೂ ಕೋಪಗೊಂಡು ತಡೆದನು.

ಧೃಷ್ಟದ್ಯುಮ್ನಂ ತು ಪಾಂಚಾಲ್ಯಂ ಕ್ರೂರೈಃ ಸಾರ್ಧಂ ಪ್ರಭದ್ರಕೈಃ ।
ಆವಂತ್ಯಃ ಸಹ ಸೌವೀರೈಃ ಕ್ರುದ್ಧರೂಪಮವಾರಯತ್ ॥ ೪೬ ॥

ಪಾಂಚಾಲ ದೇಶದವನಾದ ಧೃಷ್ಟದ್ಯುಮ್ನನನ್ನು ಕ್ರೂರರಾದ ಪ್ರಭದ್ರಕರಿಂದ ಒಡಗೂಡಿ ಮತ್ತು ಸೌವೀರ ಯೋಧರಿಂದ ಒಡಗೂಡಿ ಅವಂತಿ ದೇಶದ ರಾಜನು ತಡೆದನು.

ಘಟೋತ್ಕಚಂ ತಥಾ ಶೂರಂ ರಾಕ್ಷಸಂ ಕ್ರೂರಕರ್ಮಕೃತ್ ।
ಅಲಂಬುಸೋಽದ್ರವತ್ ತೂರ್ಣಂ ಕ್ರುದ್ಧಮಾಯಾಂತಮಾಹವೇ ॥೪೭॥

ಹಾಗೆಯೇ ಶೂರನೂ, ಕ್ರೂರಕರ್ಮವನ್ನು ಮಾಡುವವನೂ, ರಾಕ್ಷಸನೂ ಆದ ಕ್ರುದ್ಧನೂ, ರಣರಂಗವನ್ನು ಪ್ರವೇಶಿಸುತ್ತಿರುವವನೂ ಆದ ಘಟೋತ್ಕಚನನ್ನು ಶೀಘ್ರವಾಗಿ ಅಲಂಬುಸನು ಎದುರಿಸಿದನು.

ಅಲಂಬುಸಂ ರಾಕ್ಷಸೇಂದ್ರಂ ಕುಂತಿಭೋಜೋ ಮಹಾರಥಃ ।
ಸೈನ್ಯೇನ ಮಹತಾ ಯುಕ್ತಃ ಕ್ರುದ್ಧರೂಪಮವಾರಯತ್ ॥ ೪೮ ॥

ಮಹಾರಥನಾದ ಕುಂತಿಭೋಜನು ಕ್ರೋಧಗೊಂಡ, ದೊಡ್ಡ ಸೈನ್ಯದಿಂದ ಕೂಡಿದ, ರಾಕ್ಷಸಶ್ರೇಷ್ಠನಾದ ಅಲಂಬುಸನನ್ನು ತಡೆದನು.

ಸೈಂಧವಃ ಪೃಷ್ಠತಸ್ತಾ ಸ್ತೀತ್ ಸರ್ವಸೈನ್ಯಸ್ಯ ಭಾರತ ।
ರಕ್ಷಿತಃ ಪರಮೇಷ್ವಾಸೈಃ ಕೃಪಪ್ರಭೃತಿಭೀ ರಥೈಃ ॥ ೪೯ ॥

ಎಲೈ ಭಾರತನೇ, ಸೈಂಧವನು ಮಹಾಧನುರ್ಧಾರಿಗಳಾದ ಕೃಪ ಮೊದಲಾದ ಮಹಾರಥರಿಂದ ರಕ್ಷಿಸಲ್ಪಟ್ಟು ಎಲ್ಲಸೈನ್ಯದ ಹಿಂಭಾಗದಲ್ಲಿ ಇದ್ದನು.

ತಸ್ಯಾಸ್ತಾಂ ಚಕ್ರರಕ್ಷೌ ದ್ವೌ ಸೈಂಧವಸ್ಯ ಬೃಹತ್ತಮೌ ।
ದ್ರೋಣರ್ದಕ್ಷಿಣತೋ ರಾಜನ್ ಸೂತಪುತ್ರಶ್ಚ ವಾಮತಃ ॥ ೫೦ ॥

ಎಲೈ ರಾಜನೇ, ಆ ಸೈಂಧವನ ಚಕ್ರರಕ್ಷಕರಾಗಿ ಬೃಹತ್ತಮರಾದ ಅಶ್ವತ್ಥಾಮರು ಬಲಭಾಗದಲ್ಲಿ ಮತ್ತು ಕರ್ಣನು ಎಡಭಾಗದಲ್ಲಿ ಇದ್ದರು.

ಪೃಷ್ಠಗೋಪಾಸ್ತು ತಸ್ಯಾಸನ್ ಸೌಮದತ್ತಿಪುರೋಗಮಾಃ ।
ಕೃಪಶ್ಚ ವೃಷಸೇನಶ್ಚ ಶಲಃ ಶಲ್ಯಶ್ಚ ದುರ್ಜಯಃ ॥ ೫೧ ॥

ಅವನಿಗೆ ಭೂರಿಶ್ರವ ಮೊದಲಾದವರು, ಕೃಪರು, ವೃಷಸೇನ, ಶಲ, ಶಲ್ಯ ಮತ್ತು ದುರ್ಜಯರು (ದುರ್ಜಯನಾದ ಶಲ್ಯನು) ಹಿಂಭಾಗದಿಂದ ರಕ್ಷಕರಾಗಿದ್ದರು.

ನೀತಿಮಂತೋ ಮಹೇಷ್ವಾಸಾಃ ಸರ್ವಶಸ್ತ್ರವಿಶಾರದಾಃ ।
ಸೈಂಧವಸ್ಯ ರಥಸ್ಯೈವ ರಕ್ಷಾರ್ಥಂ ಯುಯುಧುಸ್ತದಾ ॥ ೫೨ ॥

ನೀತಿವಂತರೂ, ಮಹಾಧನುರ್ಧಾರಿಗಳೂ, ಸರ್ವಶಸ್ತ್ರಕುಶಲರೂ ಆದ ಅವರು ಸೈಂಧವನ ರಥದ ರಕ್ಷಣೆಗಾಗಿಯೇ ಆಗ ಯುದ್ಧವನ್ನು ಮಾಡಿದರು.

ರಾಜನ್ ಸಂಗ್ರಾಮಮಾಶ್ಚರ್ಯಂ ಶೃಣು ಕೀರ್ತಯತೋ ಮಮ ।
ಕುರೂಣಾಂ ಪಾಂಡವಾನಾಂ ಚ ಯಥಾ ಯುದ್ಧಮವರ್ತತ ॥ ೫೩ ॥

ರಾಜನೇ, ಕುರುಗಳಿಗೂ ಮತ್ತು ಪಾಂಡವರಿಗೂ ಹೇಗೆ ಆಶ್ಚರ್ಯಕರವಾದ ಯುದ್ಧವು ನಡೆಯಿತೆಂದು ಹೇಳುತ್ತೇನೆ. ಅದನ್ನು ಕೇಳು.

ಭಾರದ್ವಾಜಂ ಸಮಾಸಾದ್ಯ ವ್ಯೂಹಸ್ಯ ಪ್ರಮುಖೇ ಸ್ಥಿತಮ್ ।
ಯೋಧಯಂತಿ ರಣೇ ಪಾರ್ಥಾ ದ್ರೋಣಾನೀಕಬಭಿತ್ಸಯಾ ॥ ೫೪ ॥

ಪಾಂಡವರು ವ್ಯೂಹದ ಮುಂಭಾಗದಲ್ಲಿದ್ದ ದ್ರೋಣರನ್ನು ಸಮೀಪಿಸಿ, ಅವರ ಸೈನ್ಯವನ್ನು ಭೇದಿಸಲು ಬಯಸಿ ಅವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ರಕ್ಷಮಾಣಃ ಸ್ವಕಂ ವ್ಯೂಹಂ ದ್ರೋಣೋಽಪಿ ಸಹ ಸೈನಿಕೈಃ ।
ಅಯೋಧಯದ್ ರಣೇ ಪಾರ್ಥಾನ್ ಪ್ರಾರ್ಥಯಾನೋ ಮಹದ್ ಯಶಃ॥

ದ್ರೋಣರೂ ಸಹ ತಮ್ಮ ವ್ಯೂಹವನ್ನು ರಕ್ಷಿಸಿಕೊಂಡು, ದೊಡ್ಡ ಯಶಸ್ಸನ್ನು ಬಯಸುತ್ತಾ ರಣರಂಗದಲ್ಲಿ ಪಾರ್ಥರೊಡನೆ ಯುದ್ಧವನ್ನು ಮಾಡಿದರು.

ವಿಂದಾನುವಿಂದಾವಾವಂತ್ಯೌ ವಿರಾಟಂ ದಶಭಿಃ ಶರೈಃ ।
ಆಜಘ್ನತೂ ರಣೇ ಕ್ರುದ್ಧೌ ತವ ಪುತ್ರಹಿತೈಷಿಣೌ ॥ ೫೬ ॥

ನಿನ್ನ ಪುತ್ರನ ಹಿತವನ್ನು ಬಯಸುವ ಅವಂತಿದೇಶದ ವಿಂದಾನುವಿಂದರು ಕ್ರುದ್ಧರಾಗಿ ವಿರಾಟನನ್ನು ಹತ್ತು ಬಾಣಗಳಿಂದ ಹೊಡೆದರು.

ವಿರಾಟಶ್ಚ ಮಹಾರಾಜ ತಾವುಭೌ ಸಮರೇ ಸ್ಥಿತೌ ।
ಪರಾಕ್ರಾಂತೌ ಪರಾಕ್ರಮ್ಯ ಯೋಧಯಾಮಾಸ ಸಾನುಗೌ ॥ ೫೭ ॥

ಎಲೈ ಮಹಾರಾಜನೇ, ವಿರಾಟನೂ ಸಹ ಯುದ್ಧದಲ್ಲಿ ನಿಂತ ಪರಾಕ್ರಮಶಾಲಿಗಳಾದ ಅವರ ಅನುಚರರಿಂದ ಕೂಡಿದ ಅವರಿಬ್ಬರನ್ನೂ ಪರಾಕ್ರಮದಿಂದ ಎದುರಿಸಿ ಯುದ್ಧವನ್ನು ಮಾಡಿದನು.

ತೇಷಾಂ ಸಮಭವದ್ ಯುದ್ಧಂ ದಾರುಣಂ ರೋಮಹರ್ಷಣಮ್ ।
ಸಿಂಹಸ್ಯ ದ್ವಿಪಮುಖ್ಯಾಭ್ಯಾಂ ಪ್ರಭಿನ್ನಾಭ್ಯಾಂ ಯಥಾ ವನೇ ॥ ೫೮ ॥

ಅವರಿಗೆ ಅರಣ್ಯದಲ್ಲಿ ಸಿಂಹಕ್ಕೂ, ಎರಡು ಮದಗಜಗಳಿಗೂ ನಡೆದಂತೆ ರೋಮಹರ್ಷಣವೂ ಮತ್ತು ತೀವ್ರವೂ ಆದ ಯುದ್ಧವು ನಡೆಯಿತು.

ಬಾಹ್ಲೀಕಂ ರಭಸಂ ಯುದ್ಧೇ ಯಾಜ್ಞಸೇನಿರ್ಮಹಾಬಲಃ ।
ಆಜಘ್ನೇ ವಿಶಿಖೈರುಗ್ರೈರ್ಘೋರೈರ್ಮರ್ಮಾಸ್ಥಿಭೇದಿಭಿಃ ॥ ೫೯ ॥

ಮಹಾಬಲನಾದ ಧೃಷ್ಟದ್ಯುಮ್ನನು ಯುದ್ಧದಲ್ಲಿ ವೇಗಶಾಲಿಯಾದ ಬಾಹ್ಲೀಕನನ್ನು ಮರ್ಮಾಸ್ಥಿಭೇದಕಗಳಾದ ಘೋರವಾದ ಬಾಣಗಳಿಂದ ಹೊಡೆದನು.

ಬಾಹ್ಲೀಕೋ ಯಾಜ್ಞಸೇನಿಂ ತು ಹೇಮಪುಂಖೈಃ ಶಿಲಾಶಿತೈಃ ।
ಆಜಘಾನ ಭೃಶಂ ಕ್ರುದ್ಧೋ ನವಭಿರ್ನತಪರ್ವಭಿಃ ॥ ೬೦ ॥

ಬಾಹ್ಲೀಕ ರಾಜನಾದರೂ ಕೋಪಗೊಂಡು ಹೇಮಪುಂಖವನ್ನು ಹೊಂದಿ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳಿಂದ ಗಾಢವಾಗಿ ಹೊಡೆದನು.

ತದ್ ಯುದ್ಧಮಭವದ್ ಘೋರಂ ಶರಶಕ್ತಯ ।
ಭೀರೂಣಾಂ ತ್ರಾಸಜನನಂ ಶೂರಾಣಾಂ ಹರ್ಷವರ್ಧನಮ್ ॥ ೬೧ ॥

ಬಾಣಗಳು, ಶಕ್ತಿಗಳು ಮತ್ತು ಋಷ್ಟಿಗಳಿಂದ ನಿಬಿಡವಾದ, ಭೀರುಗಳಿಗೆ ಭಯಜನಕವೂ ಮತ್ತು ಶೂರರಿಗೆ ಸಂತೋಷಜನಕವೂ ಆದ, ಆ ಘೋರವಾದ ಯುದ್ಧವು ನಡೆಯಿತು.

ಆವಂತ್ಯೌ ಭ್ರಾತರೌ ಶೂರೌ ಧೃಷ್ಟದ್ಯುಮ್ನಮಯುದ್ಧ್ಯತಾಮ್ ।
ಸಾಲ್ವಕೋ ಬಿಲ್ವಕಶ್ಚೋಭೌ ಯಥಾ ವಿಷ್ಣುಂ ಕೃತೇ ಯುಗೇ ॥ ೬೨ ॥

ಆವಂತಿಯ ಶೂರರಾದ ಸಹೋದರರು ಕೃತಯುಗದಲ್ಲಿ ಸಾಲ್ವಕ ಮತ್ತು ಬಿಲ್ವಕ ದೈತ್ಯರು ವಿಷ್ಣುವಿನ ಜೊತೆಯಲ್ಲಿ ಯುದ್ಧವನ್ನು ಮಾಡಿದಂತೆ ಧೃಷ್ಟದ್ಯುಮ್ನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತೇಷಾಂ ತತ್ರ ಶರೈರ್ಮುಕ್ತೈರಂತರಿಕ್ಷಂ ದಿಶಸ್ತಥಾ ।
ಅಭವತ್ ಸಂವೃತಂ ಸರ್ವಂ ನ ಪ್ರಾಜ್ಞಾಯತ ಕಿಂಚನ ॥ ೬೩ ॥

ಅವರು ಅಲ್ಲಿ ಪ್ರಯೋಗಿಸಿದ ಬಾಣಗಳಿಂದ ದಿಕ್ಕುಗಳು ಮತ್ತು ಅಂತರಿಕ್ಷವೂ ತುಂಬಿಹೋಯಿತು. ಯಾವುದೂ ಕಾಣಲಿಲ್ಲ.

ಶೈಬ್ಯೋ ಗೋವಾಸನೋ ಯುದ್ಧೇ ಕಾಶ್ಯಪುತ್ರಂ ಮಹಾರಥಮ್ ।
ಸಹಸಾ ಯೋಧಯಾಮಾಸ ಗಜಃ ಪ್ರತಿಗಜಂ ಯಥಾ ॥ ೬೪ ॥

ಶೈಬ್ಯನಾದ ಗೋವಾಸನನು ಯುದ್ಧದಲ್ಲಿ ಮಹಾರಥನಾದ ಕಾಶಿರಾಜನ ಪುತ್ರನ ಜೊತೆಯಲ್ಲಿ ಗಜವು ಪ್ರತಿಗಜದ ಜೊತೆಯಲ್ಲಿ ಯುದ್ಧವನ್ನು ಮಾಡಿದಂತೆ ಯುದ್ಧವನ್ನು ಮಾಡಿದನು.

ಬಾಹ್ಲೀಕರಾಜಃ ಸಂಕ್ರುದ್ಧೋ ದ್ರೌಪದೇಯಾನ್ ಮಹಾರಥಾನ್ ।
ಮನಃ ಪಂಚೇಂದ್ರಿಯಾಣೀವ ಶುಶುಭೇ ಯೋಧಯನ್ ರಣೇ ॥ ೬೫ ॥

ಕೋಪಗೊಂಡ ಬಾಹ್ಲೀಕರಾಜನು ಮಹಾರಥರಾದ ದ್ರೌಪದಿಯ ಪುತ್ರರೊಡನೆ ರಣರಂಗದಲ್ಲಿ ಯುದ್ಧವನ್ನು ಮಾಡುತ್ತಾ ಪಂಚೇಂದ್ರಿಯಗಳ ಜೊತೆಯಲ್ಲಿ ಹೋರಾಡುವ ಮನಸ್ಸಿನಂತೆ ಶೋಭಿಸಿದನು.

ಅಯೋಧಯಂಸ್ತೇ ಚ ಭೃಶಂ ತಂ ಶರೌಘೈಃ ಸಮಂತತಃ ।
ಇಂದ್ರಿಯಾಣಿ ಯಥಾ ದೇಹಂ ಶಶ್ವದ್ ದೇಹವತಾಂ ವರ ॥ ೬೬ ॥

ಎಲೈ ದೇಹಧಾರಿಗಳಲ್ಲಿ ಶ್ರೇಷ್ಠನಾದವನೇ, ಅವರೂ ಸಹ ತಮ್ಮ ಬಾಣಗಳ ಸಮೂಹದಿಂದ ಎಲ್ಲಕಡೆಗಳಿಂದಲೂ ಇಂದ್ರಿಯಗಳು ದೇಹವನ್ನು ಘಾಸಿಗೊಳಿಸಿದಂತೆ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ವಾರ್ಷ್ಣೇಯಂ ಸಾತ್ಯಕಿಂ ಯುದ್ಧೇ ಪುತ್ರೋ ದುಃಶಾಸನಸ್ತವ ।
ಆಜಘ್ನೇ ಸಾಯಕೈಸ್ತೀಕ್ಷ್ಣೈರ್ನವಭಿರ್ದಶಭಿಸ್ತಥಾ ॥ ೬೭ ॥

ನಿನ್ನ ಪುತ್ರನಾದ ದುಶ್ಶಾಸನನು ತೀಕ್ಷ್ಣವಾದ ಒಂಬತ್ತು ಬಾಣಗಳಿಂದ, ಆನಂತರ ಹತ್ತು ಬಾಣಗಳಿಂದ ವೃಷ್ಣಿಕುಲ ಸಂಭೂತನಾದ ಸಾತ್ಯಕಿಯನ್ನು ಹೊಡೆದನು.

ಸೋಽತಿವಿದ್ಧೋ ಬಲವತಾ ಮಹೇಷ್ವಾಸೇನ ಧನ್ವಿನಾ ।
ಈಷನ್ಮೂರ್ಚ್ಛಾಂ ಜಗಾಮಾಶು ಸಾತ್ಯಕಿಃ ಸತ್ಯವಿಕ್ರಮಃ ॥ ೬೮ ॥

ಸತ್ಯವಿಕ್ರಮನಾದ ಸಾತ್ಯಕಿಯು, ಬಲಿಷ್ಠನೂ, ಮಹಾಧನುರ್ಧಾರಿಯೂ ಆದ ದುಶ್ಶಾಸನನಿಂದ ಗಾಢವಾಗಿ ಹೊಡೆಯಲ್ಪಟ್ಟು ಸ್ವಲ್ಪ ಮೂರ್ಛೆಯನ್ನು ಹೊಂದಿದನು.

ಸಮಾಶ್ವಸ್ತಸ್ತು ವಾರ್ಷ್ಣೇಯಃ ತವ ಪುತ್ರಂ ಮಹಾರಥಮ್ ।
ವಿವ್ಯಾಧ ದಶಭಿಸ್ತೂರ್ಣಂ ಸಾಯಕೈಃ ಕಂಕಪತ್ರಿಭಿಃ ॥ ೬೯ ॥

ಸುಧಾರಿಸಿಕೊಂಡ ಸಾತ್ಯಕಿಯು ಮಹಾರಥನಾದ ನಿನ್ನ ಪುತ್ರನನ್ನು ಕಂಕಪತ್ರವನ್ನು ಹೊಂದಿದ ಹತ್ತು ಬಾಣಗಳಿಂದ ಶೀಘ್ರವಾಗಿ ಹೊಡೆದನು.

ತಾವನ್ಯೋನ್ಯಂ ದೃಢಂ ವಿದ್ಧ್ವಾ ಹ್ಯನ್ಯೋನ್ಯಶರವಿಕ್ಷತೌ ।
ರೇಜತುಃ ಸಂಯುಗೇ ರಾಜನ್ ಪುಷ್ಪಿತಾವಿವ ಕಿಂಶುಕೌ ॥ ೭೦ ॥

ಎಲೈ ರಾಜನೇ, ಅವರು ಪರಸ್ಪರವಾಗಿ ಯುದ್ಧವನ್ನು ಮಾಡಿ, ಪರಸ್ಪರ ಬಾಣಗಳಿಂದ ಗಾಯಗೊಂಡು, ರಣರಂಗದಲ್ಲಿ ಪುಷ್ಪಭರಿತವಾದ ಕಿಂಶುಕ ವೃಕ್ಷದಂತೆ ಶೋಭಿಸಿದರು.

ಅಲಂಬುಸಸ್ತು ಸಂಕ್ರುದ್ಧಃ ಕುಂತಿಭೋಜಶರಾರ್ದಿತಃ ।
ಅಶೋಭತ ಭೃಶಂ ಲಕ್ಷ್ಮ್ಯಾ ಪುಷ್ಪಾಢ್ಯ ಇವ ಕಿಂಶುಕಃ ॥ ೭೧ ॥

ಕ್ರೋಧಗೊಂಡ ಅಲಂಬುಸನಾದರೂ ಕುಂತಿಭೋಜನ ಬಾಣಗಳಿಂದ ಪೀಡಿತನಾಗಿ ತನ್ನ ಕಾಂತಿಯಿಂದ ಪುಷ್ಪಭರಿತವಾದ ಕಿಂಶುಕ ವೃಕ್ಷದಂತೆ ಶೋಭಿಸಿದನು.

ಕುಂತಿಭೋಜಂ ತತೋ ರಕ್ಷೋ ವಿದ್ವಾ ಬಹುಭಿರಾಯಸೈಃ ।
ಆನದದ್ ಭೈರವಂ ನಾದಂ ವಾಹಿನ್ಯಾಃ ಪ್ರಮುಖೇ ತವ ॥ ೭೨ ॥

ತತಸ್ತೌ ಸಮರೇ ಶೂರೌ ಯೋಧಯಂತೌ ಪರಸ್ಪರಮ್ ।
ದದೃಶುಃ ಸರ್ವಸೈನ್ಯಾನಿ ಶಕ್ರಜಂಭೌ ಯಥಾ ಪುರಾ ॥ ೭೩ ॥

ಆನಂತರ ನಿನ್ನ ಸೈನ್ಯದ ಮುಂಭಾಗದಲ್ಲಿ ಅಲಂಬುಸ ರಾಕ್ಷಸನು ಕುಂತಿಭೋಜನನ್ನು ಕಬ್ಬಿಣದ ಅನೇಕ ಬಾಣಗಳಿಂದ ಹೊಡೆದು ಭೈರವ ನಾದವನ್ನು ಮಾಡಿದನು. ಆಗ ಎಲ್ಲ ಸೈನ್ಯಗಳೂ ಹಿಂದೆ ಇಂದ್ರ ಮತ್ತು ಜಂಭಾಸುರರ ಯುದ್ಧದಂತೆ ಪರಸ್ಪರವಾಗಿ ಯುದ್ಧವನ್ನು ಮಾಡುವ ಆ ಇಬ್ಬರು ಶೂರರನ್ನು ನೋಡಿದರು.

ಶಕುನಿಂ ರಭಸಂ ಯುದ್ಧೇ ಕೃತವೈರಂ ಚ ಭಾರತ ।
ಮಾದ್ರೀಪುತ್ರೌ ಸುಸಂಕ್ರುದ್ಧೌ ಶರೈರರ್ದಯತಾಂ ಭೃಶಮ್ ।
ತನ್ಮೂಲಃ ಸುಮಹಾನ್ ರಾಜನ್ ಪ್ರಾವರ್ತತ ಜನಕ್ಷಯಃ ॥ ೭೪ ॥

ಎಲೈ ಭಾರತನೇ, ಯುದ್ಧದಲ್ಲಿ ವೇಗಶಾಲಿಯಾದ, ಮಹಾವೈರವನ್ನುಂಟು ಮಾಡಿದ ಶಕುನಿಯನ್ನು ಕೋಪಗೊಂಡ ಮಾದ್ರೀಪುತ್ರರು ಬಾಣಗಳಿಂದ ಚೆನ್ನಾಗಿ ಅರ್ದಿಸಿದರು. ಎಲೈ ರಾಜನೇ, ಈ ದೊಡ್ಡ ಜನಕ್ಷಯಕ್ಕೆ ಅವನೇ ಮೂಲಕಾರಣನಷ್ಟೆ!

ತ್ವಯಾ ಸಂಜನಿತೋಽತ್ಯರ್ಥಂ ಕರ್ಣೇನ ಚ ವಿವರ್ಧಿತಃ ।
ರಕ್ಷಿತಸ್ತವ ಪುತ್ರೈಶ್ಚ ಕ್ರೋಧಮೂಲೋ ಹುತಾಶನಃ ।
ಯ ಇಮಾಂ ಪೃಥಿವೀಂ ಸರ್ವಾಂ ದಗ್ಧುಂ ರಾಜನ್ ಸಮುದ್ಯತಃ ॥

ಈ ಜನಕ್ಷಯವು ನಿನ್ನಿಂದ ಹುಟ್ಟುಹಾಕಲ್ಪಟ್ಟಿತು. ಕರ್ಣನಿಂದ ಚೆನ್ನಾಗಿ ಬೆಳೆಸಲ್ಪಟ್ಟಿತು. ಕ್ರೋಧಮೂಲಕವಾದ ಈ ಅಗ್ನಿಯು ನಿನ್ನ ಪುತ್ರರಿಂದ ರಕ್ಷಿಸಲ್ಪಟ್ಟಿತು. ಎಲೈ ರಾಜನೇ, ಆ ಅಗ್ನಿಯು ಸಮಸ್ತವಾದ ಈ ಭೂಮಿಯನ್ನು ದಹಿಸಲು ಉದ್ಯುಕ್ತವಾಗಿದೆ.

ಶಕುನಿಃ ಪಾಂಡುಪುತ್ರಾಭ್ಯಾಂ ಕೃತಃ ಸ ವಿಮುಖಃ ಶರೈಃ ॥ ೭೬ ॥

ನಾಭಿಜಾನಾತಿ ಕರ್ತವ್ಯಂ ಯುದ್ಧೇ ಕಿಂಚಿತ್ ಪರಾಕ್ರಮಮ್ ॥೭೭॥

ಶಕುನಿಯು ಪಾಂಡುಪುತ್ರರಾದ ನಕುಲ-ಸಹದೇವರಿಂದ ಅವರ ಬಾಣಗಳಿಂದ ಯುದ್ಧವಿಮುಖನಾಗಿ ಮಾಡಲ್ಪಟ್ಟನು. ಅವನಿಗೆ ಯುದ್ಧದಲ್ಲಿ ಪರಾಕ್ರಮ ಸಹಿತವಾಗಿ ಏನನ್ನು ಮಾಡಬೇಕೆಂದು ತಿಳಿಯಲಿಲ್ಲ.

ವಿಮುಖಂ ಚೈನಮಾಲೋಕ್ಯ ಮಾದ್ರೀಪುತ್ರೌ ಮಹಾರಥೌ ।
ವವರ್ಷತುಃ ಪುನರ್ಬಾಣೈರ್ಯಥಾ ಮೇಘೌ ಮಹಾಗಿರಿಮ್ ॥೭೮॥

ವಿಮುಖನಾದ ಅವನನ್ನು ನೋಡಿ ಮಹಾರಥರಾದ ಮಾದ್ರೀಪುತ್ರರು ಮೇಘಗಳು ಮಹಾಪರ್ವತದ ಮೇಲೆ ಮಳೆ ಸುರಿಸಿದಂತೆ ಅವನ ಮೇಲೆ ಪುನಃ ಬಾಣಗಳ ಮಳೆಯನ್ನು ಸುರಿಸಿದರು.

ಸ ವಧ್ಯಮಾನೋ ಬಹುಭಿಃ ಶರೈಃ ಸನ್ನತಪರ್ವಭಿಃ ।
ಸಂಪ್ರಾಯಾದ್ಭವನೈರಶ್ವೈಃ ದ್ರೋಣಾನೀಕಾಯ ಸೌಬಲಃ ॥ ೭೯ ॥

ಬಾಗಿದ ತುದಿಯುಳ್ಳ ಅನೇಕ ಬಾಣಗಳಿಂದ ಹೊಡೆಯಲ್ಪಡುತ್ತಿದ್ದ ಶಕುನಿಯು ವೇಗಶಾಲಿಗಳಾದ ಅಶ್ವಗಳಿಂದ ದ್ರೋಣರ ಸೈನ್ಯದ ಕಡೆಗೆ ಹೊರಟು ಹೋದನು.

ಘಟೋತ್ಕಚಸ್ತಥಾ ಶೂರೋ ರಾಕ್ಷಸಂ ತಮಲಂಬುಸಮ್ ।
ಅಭ್ಯಯಾದ್ ರಭಸಂ ಯುದ್ಧೇ ವೇಗಮಾಸ್ಥಾಯ ಮಧ್ಯಮಮ್ ॥೮೦॥

ಶೂರನಾದ ಘಟೋತ್ಕಚನು ಮಧ್ಯಮ ವೇಗವನ್ನು ಆಶ್ರಯಿಸಿ ವೇಗಶಾಲಿಯಾದ ಅಲಂಬುಸನ ಕಡೆಗೆ ರಣರಂಗದಲ್ಲಿ ಮುನ್ನುಗ್ಗಿದನು.

ತಯೋರ್ಯುದ್ಧಂ ಮಹಾರಾಜ ಚಿತ್ರರೂಪಮಿವಾಭವತ್ ।
ಯಾದೃಶಂ ಹಿ ಪುರಾವೃತ್ತಂ ರಾಮರಾವಣಯೋರ್ಮೃಧೇ ॥ ೮೧ ॥

ಎಲೈ ಮಹಾರಾಜನೇ, ಹಿಂದೆ ರಾಮ-ರಾವಣರಿಗೆ ನಡೆದ ಯುದ್ಧದಂತೆ ಆವರಿಬ್ಬರ ಯುದ್ಧವು ವಿಚಿತ್ರ ರೂಪವನ್ನು ಹೊಂದಿದ್ದಿತು.

ತತೋ ಯುಧಿಷ್ಠಿರೋ ರಾಜಾ ಮದ್ರರಾಜಾನಮಾಹವೇ ।
ವಿದ್ಧ್ವಾ ಪಂಚಶತೈರ್ಬಾಣೈಃ ಪುನರ್ವಿವ್ಯಾಧ ಸಪ್ತಭಿಃ ॥ ೮೨ ॥

ಆಗ ರಾಜನಾದ ಯುಧಿಷ್ಠಿರನು ರಣರಂಗದಲ್ಲಿ ಮದ್ರರಾಜನಾದ ಶಲ್ಯನ ಮೇಲೆ ಐದುನೂರು ಬಾಣಗಳನ್ನು ಪ್ರಯೋಗಿಸಿ ಪುನಃ ಏಳು ಬಾಣಗಳಿಂದ ಅವನನ್ನು ಹೊಡೆದನು.

ತತಃ ಪ್ರವವೃತೇ ಯುದ್ಧಂ ತಯೋರತ್ಯಂತಮದ್ಭುತಮ್ ।
ಯಥಾ ಪೂರ್ವಂ ಮಹಾರಾಜ ಶಂಬರಾಮರರಾಜಯೋಃ ॥ ೮೩ ॥

ಎಲೈ ಮಹಾರಾಜನೇ, ಅನಂತರ ಹಿಂದೆ ಶಂಬರನಿಗೂ ಮತ್ತು ದೇವೇಂದ್ರನಿಗೂ ನಡೆದಂತೆ ಅವರಿಬ್ಬರಿಗೆ ಅತ್ಯಂತ ಅದ್ಭುತವಾದ ಯುದ್ಧವು ನಡೆಯಿತು.

ವಿವಿಂಶತಿಶ್ಚಿತ್ರಸೇನೋ ವಿಕರ್ಣಶ್ಚ ತವಾತ್ಮಜಃ ।
ಅಯೋಧಯನ್ ಭೀಮಸೇನಂ ಮಹತ್ಯಾ ಸೇನಯಾ ವೃತಾಃ ॥ ೮೪ ॥

ವಿವಿಂಶತಿ, ಚಿತ್ರಸೇನ ಮತ್ತು ವಿಕರ್ಣ- ಈ ನಿನ್ನ ಪುತ್ರರು ದೊಡ್ಡ ಸೇನೆಯಿಂದ ಕೂಡಿದವರಾಗಿ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರಶೀತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೈದನೆಯ ಅಧ್ಯಾಯ

ದ್ರೋಣ-ಧೃಷ್ಟದ್ಯುಮ್ನರ ಯುದ್ಧ. ದ್ರೋಣರಿಂದ ತಮ್ಮ ರಥಕ್ಕೆ ಬಂದ ಧೃಷ್ಟದ್ಯುಮ್ನನ ಉಚ್ಚಾಟನೆ.

ಸಂಜಯಃ

ತಥಾ ತಸ್ಮಿನ್ ಪ್ರವೃತ್ತೇ ತು ಸಂಗ್ರಾಮೇ ರೋಮಹರ್ಷಣೇ ।
ಕೌರವೇಯಾಂಸ್ತ್ರಿಧಾ ಭೂತಾನ್ ಪಾಂಡವಾಃ ಸಮುಪಾದ್ರವನ್ ।
ಜಲಸಂಧಂ ಮಹಾಬಾಹುಂ ಭೀಮಸೇನೋಽಭ್ಯವರ್ತತ ॥ ೧ ॥

ಸಂಜಯ– ರೋಮಾಂಚಕಾರಿಯಾದ ಆ ಯುದ್ಧವು ಹಾಗೆ ನಡೆಯುತ್ತಿರಲು ಮೂರು ಭಾಗವಾದ ಕೌರವರ ಸೈನ್ಯದ ಮೇಲೆ ಪಾಂಡವರು ಮುನ್ನುಗ್ಗಿದರು. ಮಹಾಬಾಹುವಾದ ಜಲಸಂಧನು ಭೀಮಸೇನನನ್ನು ಸಮೀಪಿಸಿದನು.

ಯುಧಿಷ್ಠಿರಃ ಸಹಾನೀಕಃ ಕೃತವರ್ಮಾಣಮಾಹವೇ ।
ಕಿರನ್ ಸ ಶರವರ್ಷಾಣಿ ರೋಚಮಾನ ಇವಾಂಶುಮಾನ್ ॥ ೨ ॥

ಧೃಷ್ಟದ್ಯುಮ್ನೋ ಮಹಾರಾಜ ದ್ರೋಣಮಭ್ಯದ್ರವದ್ ರಣೇ ॥ ೩ ॥

ಯುಧಿಷ್ಠಿರನು ತನ್ನ ಸೈನ್ಯದ ಜೊತೆಯಲ್ಲಿ ರಣರಂಗದಲ್ಲಿ ಕೃತವರ್ಮನ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ ಸೂರ್ಯನಂತೆ ಕಂಗೊಳಿಸಿದನು. ಎಲೈ ಮಹಾರಾಜನೇ, ಧೃಷ್ಟದ್ಯುಮ್ನನು ರಣರಂಗದಲ್ಲಿ ದ್ರೋಣರ ಕಡೆಗೆ ಸಾಗಿದನು.

ತತಃ ಪ್ರವವೃತೇ ಯುದ್ಧಂ ತ್ವರತಾಂ ಸರ್ವಧನ್ವಿನಾಮ್ ।
ಕುರೂಣಾಂ ಪಾಂಡವಾನಾಂ ಚ ಕ್ರುದ್ಧಾನಾಮಿತರೇತರಮ್ ॥ ೪ ॥

ಅನಂತರ ಕ್ರುದ್ಧರಾದ, ಧನುರ್ಧಾರಿಗಳಾದ, ತ್ವರೆ ಮಾಡುವ ಕೌರವ ಮತ್ತು ಪಾಂಡವ ಯೋಧರಿಗೆ ಪರಸ್ಪರವಾಗಿ ಯುದ್ಧವು ಪ್ರಾರಂಭವಾಯಿತು.

ಸಂಕ್ಷಯೇ ತು ತಥಾಭೂತೇ ವರ್ತಮಾನೇ ಮಹಾಭಯೇ ।
ದ್ವಂದ್ವೀಭೂತೇಷು ಸೈನ್ಯೇಷು ಯುದ್ಧ್ಯಮಾನೇಷ್ವಭೀತವತ್ ॥ ೫ ॥

ದ್ರೋಣಃ ಪಾಂಚಾಲಪುತ್ರೇಣ ಬಲೀ ಬಲವತಾ ಸಹ ।
ವ್ಯಪಾಸೃಜತ್ ಪೃಷತೋತ್ಕೃಷ್ಟಾನ್ ತದದ್ಭುತಮಿವಾಭವತ್ ॥ ೬ ॥

ಮಹಾಭಯಂಕರವಾದ ಕ್ಷತ್ರಿಯ ನಾಶವು ಹಾಗೆ ನಡೆಯುತ್ತಿರಲು, ಸೈನ್ಯಗಳು ದ್ವಂದ್ವ ಯುದ್ಧಗಳಲ್ಲಿ ನಿರತವಾಗಿ ನಿರ್ಭೀತವಾಗಿ ಯುದ್ಧದಲ್ಲಿ ತೊಡಗಿರಲು, ಬಲಿಷ್ಠರಾದ ದ್ರೋಣರು ಬಲಿಷ್ಠನಾದ ಧೃಷ್ಟದ್ಯುಮ್ನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. ಅದು ಅದ್ಭುತವಾಗಿದ್ದಿತು.

ಪುಂಡರೀಕವನಾನೀವ ವಿಧ್ವಸ್ತಾನಿ ಸಮಂತತಃ ।
ಚಕ್ರಾತೇ ದ್ರೋಣಪಾಂಚಾಲ್ಯೌ ನೃಣಾಂ ಶೀರ್ಷಾಣ್ಯನೇಕಶಃ ॥ ೭ ॥

ದ್ರೋಣ-ಧೃಷ್ಟದ್ಯುಮ್ನರಿಬ್ಬರೂ ತಮ್ಮ ಬಾಣಗಳಿಂದ ಅನೇಕ ಯೋಧರ ಶಿರಸ್ಸುಗಳನ್ನು ಕತ್ತರಿಸಿ, ರಣರಂಗವನ್ನು ಕಮಲಪುಷ್ಪಗಳು ಚೆಲ್ಲಾಡಿದ ವನದಂತೆ ಮಾಡಿದರು.

ವಿಕೀರ್ಣಾನಿ ಚ ವೀರಾಣಾಮನೀಕೇಷು ಸಮಂತತಃ ।
ವಸ್ತ್ರಾಭರಣಶಸ್ತ್ರಾಣಿ ಧ್ವಜವರ್ಮಾಯುಧಾನಿ ಚ ॥ ೮ ॥

ವೀರರ ವಸ್ತ್ರಾಭರಣ-ಶಸ್ತ್ರಗಳು, ಧ್ವಜ-ಕವಚ ಮತ್ತು ಆಯುಧಗಳು ಎಲ್ಲ ಕಡೆಗಳಲ್ಲಿಯೂ ಸೈನ್ಯದಲ್ಲಿ ಚೆಲ್ಲಾಡಿದವು.

ಸುವರ್ಣಚಿತ್ರಾಭರಣಾಃ ಸಂಸಿಕ್ತಾ ರುಧಿರೇಣ ಚ ।
ಕೋವಿದಾರಾ ಇವಾಭಾಂತಿ ಪುಷ್ಪಿತಾಸ್ತತ್ರ ಭಾರತ ।
ತಾವಕಾಃ ಸಮರೇ ಯೋಧಾಃ ಪಾಂಡವೇಯಾಶ್ಚ ವಿಕ್ಷತಾಃ ॥ ೯ ॥

ಎಲೈ ಭಾರತನೇ, ಯುದ್ಧದಲ್ಲಿ ನಿನ್ನ ಮತ್ತು ಪಾಂಡವರ ಯೋಧರು ಬಹಳ ಗಾಯಗೊಂಡು ಸುವರ್ಣವಿಚಿತ್ರಾಭರಣಗಳನ್ನು ಧರಿಸಿದವರಾಗಿ, ರಕ್ತದಿಂದ ತೋಯಿಸಲ್ಪಟ್ಟು ಪುಷ್ಪಭರಿತವಾದ ಕೋವಿದಾರ ವೃಕ್ಷಗಳಂತೆ ತೋರಿದರು.

ಕುಂಜರಾಂಶ್ಚ ನರಾನನ್ಯೇ ಪಾತಯಂತಿ ಸ್ಮ ಪತ್ತಿಭಿಃ ।
ತಾಳಮಾತ್ರಾಣಿ ಚಾಪಾನಿ ವಿಕರ್ಷಂತೋ ಮಹಾರಥಾಃ ॥ ೧೦ ॥

ಇನ್ನು ಕೆಲವು ಮಹಾರಥರು ತಾಳವೃಕ್ಷದಷ್ಟು ಎತ್ತರದ ಧನುಸ್ಸುಗಳನ್ನು ಎಳೆಯುತ್ತಾ ಗಜಗಳನ್ನೂ ಮತ್ತು ಪದಾತಿಗಳನ್ನೂ ಪತ್ರಸಹಿತವಾದ ಬಾಣಗಳಿಂದ ಹೊಡೆದು ಉರುಳಿಸಿದರು.

ಅಸಿಚರ್ಮಾಣಿ ಚಾಪಾನಿ ಶಿರಾಂಸಿ ಕವಚಾನಿ ಚ ।
ವಿಪ್ರಕೀರ್ಯಂತ ಶೂರಾಣಾಂ ಸಂಪ್ರಹಾರೇ ಮಹಾತ್ಮನಾಮ್ ॥ ೧೧ ॥

ಅಂತಹ ಯುದ್ಧವು ನಡೆಯುತ್ತಿರುವಾಗ ಮಹಾತ್ಮರಾದ ಶೂರರ ಖಡ್ಗ-ಚರ್ಮಗಳು, ಧನುಸ್ಸುಗಳು, ಶಿರಸ್ಸುಗಳು ಮತ್ತು ಕವಚಗಳು ರಣರಂಗದಲ್ಲಿ ಚೆಲ್ಲಾಡಿದವು.

ಉತ್ಥಿತಾನ್ಯಗಣೇಯಾನಿ ಕಬಂಧಾನಿ ಸಮಂತತಃ ।
ಅದೃಶ್ಯಂತ ಮಹಾರಾಜ ತಸ್ಮಿನ್ ಪರಮಸಂಕುಲೇ ॥ ೧೨ ॥

ಎಲೈ ಮಹಾರಾಜನೇ, ಆ ಸಂಕುಲ ಯುದ್ಧದಲ್ಲಿ ಎಲ್ಲ ಕಡೆಗಳಲ್ಲಿಯೂ ಅನೇಕ ಕಬಂಧಗಳು (ರುಂಡಗಳು) ಎದ್ದಿರುವುದು ಕಂಡುಬಂದಿತು.

ಗೃಧ್ರಾಃ ಕಂಕಾ ಬಲಾಃ ಶ್ಯೇನಾ ವಾಯಸಾ ಜಂಬುಕಾಸ್ತಥಾ ।
ಬಹವಃ ಪಿಶಿತಾಶಾಶ್ಚ ತತ್ರಾದೃಶ್ಯಂತ ಮಾರಿಷ ॥ ೧೩ ॥

ಎಲೈ ಪೂಜ್ಯನೇ, ಹದ್ದುಗಳು, ಕಂಕಗಳು, ಬಲಗಳು, ಗಿಡಗಗಳು, ಕಾಗೆಗಳು, ನರಿಗಳು ಮೊದಲಾದ ಅನೇಕ ಮಾಂಸಾಹಾರಿಗಳು ಅಲ್ಲಿ ಕಂಡುಬಂದವು.

ಭಕ್ಷಯಂತಶ್ಚ ಮಾಂಸಾನಿ ಪಿಬಂತಶ್ಚಾಪಿ ಶೋಣಿತಮ್ ।
ವಿಲುಂಪಮಾನಾಃ ಕೇಶಾಂಶ್ಚ ಮಜ್ಜಾಶ್ಚ ಬಹುಧಾ ನೃಪ ॥ ೧೪ ॥

ಆಕರ್ಷಂತಃ ಶರೀರಾಣಿ ಶರೀರಾವಯವಾಂಸ್ತಥಾ ।
ನರಾಶ್ವಗಜಸಂಘಾನಾಂ ಶಿರಾಂಸಿ ಚ ತತಸ್ತತಃ ॥ ೧೫ ॥

ಮಾಂಸಗಳನ್ನು ಭಕ್ಷಿಸುತ್ತಾ, ರಕ್ತವನ್ನು ಪಾನ ಮಾಡುತ್ತಾ, ಕೇಶಗಳನ್ನು ಮತ್ತು ಮಜ್ಜೆಗಳನ್ನು ಹಿಡಿದು ಎಳೆದಾಡುತ್ತಾ, ನರಾಶ್ವ-ಗಜ ಸಮೂಹಗಳ ಶರೀರಗಳನ್ನು ಶರೀರಾವಯವಗಳನ್ನು ಮತ್ತು ಶಿರಸ್ಸುಗಳನ್ನು ಎಳೆಯುತ್ತಿರುವುದು ಕಂಡುಬಂದಿತು.

ಕೃತಾಸ್ತ್ರಾ ರಣದೀಕ್ಷಾಭಿಃ ದೀಕ್ಷಿತಾಃ ಶರಮಾಲಿನಃ ।
ರಣೇ ಜಯಂ ಪ್ರಾರ್ಥಯಾನಾ ಭೃಶಂ ಯುಯುಧಿರೇ ತದಾ ॥ ೧೬ ॥

ಅಸಿಮಾರ್ಗಾನ್ ಬಹುವಿಧಾನ್ ವಿಚೇರುಶ್ಚಾಪರೇ ರಣೇ ॥ ೧೭ ॥

ಅಸ್ಖಲಿತರಾದ ರಣದೀಕ್ಷೆಯಿಂದ ದೀಕ್ಷಿತರಾದ, ಶರಮಾಲೆಗಳನ್ನು ಧರಿಸಿದ, ಯುದ್ಧದಲ್ಲಿ ಜಯವನ್ನು ಪ್ರಾರ್ಥಿಸುವ ಅನೇಕ ಯೋಧರು ಆಗ ತೀವ್ರವಾಗಿ ಯುದ್ಧವನ್ನು ಮಾಡಿದರು. ಇನ್ನು ಕೆಲವರು ಬಹುವಿಧವಾದ ಖಡ್ಗಮಾರ್ಗಗಳಲ್ಲಿ ಸಂಚರಿಸಿದರು.

ಋಷ್ಟಿಭಿಃ ಶಕ್ತಿಭಿಃ ಪ್ರಾಸೈಃ ಶೂಲತೋಮರಪಟ್ಟಸೈಃ ।
ಗದಾಭಿಃ ಪರಿಘೈಶ್ಚಾನ್ಯೈಃ ವ್ಯಾಯತೈಶ್ಚ ಭುಜೈರಪಿ ।
ಅನ್ಯೋನ್ಯಂ ನ್ಯಹನನ್ ಸಂಖೇ ಯುದ್ಧರಂಗಗತಾ ನರಾಃ ॥ ೧೮ ॥

ರಥಿನೋ ರಥಿಭಿಃ ಸಾರ್ಧಮಶ್ವಾರೋಹಾಶ್ಚ ಸಾದಿಭಿಃ ।
ಮಾತಂಗಾ ವರಮಾತಂಗೈಃ ಪದಾತಾಶ್ಚ ಪದಾತಿಭಿಃ ॥ ೧೯ ॥

ಇನ್ನು ಕೆಲವು ಯೋಧರು ಋಷ್ಟಿಗಳಿಂದಲೂ, ಶಕ್ತಿಗಳಿಂದಲೂ, ಪ್ರಾಸಗಳಿಂದಲೂ, ಶೂಲ-ತೋಮರ-ಪಟ್ಟಸಗಳಿಂದಲೂ, ಗದೆಗಳಿಂದಲೂ, ಪರಿಘಗಳಿಂದಲೂ, ಇನ್ನು ಕೆಲವರು ತಮ್ಮ ವಿಸ್ತಾರವಾದ ಭುಜಗಳಿಂದಲೂ ಯುದ್ಧರಂಗ ಗತರಾಗಿ ಪರಸ್ಪರವಾಗಿ ಹೊಡೆದಾಡಿದರು. ರಥಿಕರು ರಥಿಗಳಿಂದಲೂ, ಅಶ್ವಾರೋಹಿಗಳು ಅಶ್ವಾರೋಹಿಗಳಿಂದಲೂ, ಗಜಗಳು ಶ್ರೇಷ್ಠ ಗಜಗಳಿಂದಲೂ, ಪದಾತಿಗಳು ಪದಾತಿಗಳಿಂದಲೂ ಯುದ್ಧವನ್ನು ಮಾಡಿದರು.

ಕ್ಷೀಬಾ ಇವಾನ್ಯೇ ಚೋನ್ಮತ್ತಾ ರಂಗೇಷ್ವೇವ ಚ ವಾರಣಾಃ ।
ಉಚ್ಚುಕ್ರುಶುರಥಾನ್ಯೋನ್ಯಂ ಜಘ್ನುರನ್ಯೋನ್ಯಮಾಹವೇ ॥ ೨೦ ॥

ಇನ್ನು ಕೆಲವು ಗಜಗಳು ಪಾನಮತ್ತರಾದಂತೆ ಉನ್ಮತ್ತವಾಗಿ ರಣಭೂಮಿಯಲ್ಲಿಯೇ ಗರ್ಜಿಸಿ ಪರಸ್ಪರವಾಗಿ ಯುದ್ಧವನ್ನು ಮಾಡಿದವು.

ವರ್ತಮಾನೇ ಮಹಾಯುದ್ಧೇ ನಿರ್ಮರ್ಯಾದೇ ವಿಶಾಂಪತೇ ।
ಧೃಷ್ಟದ್ಯುಮ್ನೋ ಹಯಾನಶ್ವೈದ್ರೋಣಸ್ಯಾಮಿಶ್ರಯತ್ ಸ್ವಕೈಃ ॥ ೨೧ ॥

ಎಲೈ ರಾಜನೇ, ಎಲ್ಲೆಗಳನ್ನು ಮೀರಿದ ಆ ಮಹಾಯುದ್ಧವು ನಡೆಯುತ್ತಿರಲು ಧೃಷ್ಟದ್ಯುಮ್ನನು ತನ್ನ ರಥದ ಅಶ್ವಗಳನ್ನು ದ್ರೋಣರ ರಥದ ಅಶ್ವಗಳೊಂದಿಗೆ ಬೆರೆಸಿದನು.

ತೇ ಹಯಾಃ ಸಾದ್ವಶೋಭಂತ ಮಿಶ್ರಿತಾ ವಾತರಂಹಸಃ ।
ಪಾರಾವತಸವರ್ಣಾಶ್ಚ ರಕ್ತಶೋಣಾಶ್ಚ ಮಾರಿಷ ॥ ೨೨ ॥

ಹಯಾಃ ಶುಶುಭಿರೇ ರಾಜನ್ ಮೇಘಾ ಇವ ಸವಿದ್ಯುತಃ ॥ ೨೩ ॥

ಎಲೈ ಪೂಜ್ಯನೇ, ವಾಯುವೇಗವುಳ್ಳ ಪಾರಿವಾಳ ಬಣ್ಣದ ಮತ್ತು ರಕ್ತಕೆಂಪು ಬಣ್ಣದ ಅಶ್ವಗಳು ಪರಸ್ಪರವಾಗಿ ಮಿಶ್ರಿತವಾಗಿ ಬಹಳವಾಗಿ ಶೋಭಿಸಿದವು. ಎಲೈ ರಾಜನೇ, ಅಶ್ವಗಳು ಮಿಂಚಿನಿಂದ ಕೂಡಿದ ಮೋಡಗಳಂತೆ ಶೋಭಿಸಿದವು.

ಧೃಷ್ಟದ್ಯುಮ್ನಸ್ತು ಸಂಪ್ರೇಕ್ಷ್ಯ ದ್ರೋಣಮಭ್ಯಾಶಮಾಗತಮ್ ।
ಅಸಿಚರ್ಮಾದದೇ ವೀರೋ ಧನುರುತ್ಸೃಜ್ಯ ಭಾರತ ॥ ೨೪ ॥

ಎಲೈ ಭಾರತನೇ, ಧೃಷ್ಟದ್ಯುಮ್ನನಾದರೋ ತನ್ನ ಸಮೀಪಕ್ಕೆ ಬಂದ ದ್ರೋಣರನ್ನು ನೋಡಿ ವೀರನಾದ ಅವನು ಧನುಸ್ಸನ್ನು ಬಿಟ್ಟು ಖಡ್ಗ-ಚರ್ಮಗಳನ್ನು ತೆಗೆದುಕೊಂಡನು.

ಚಿಕೀರ್ಷುರ್ದುಷ್ಕರಂ ಕರ್ಮ ಪಾರ್ಷತಃ ಪರವೀರಹಾ ।
ಈಷಾಯಾಃ ಸಮತಿಕ್ರಮ್ಯ ದ್ರೋಣಸ್ಯ ರಥಮಾವಿಶತ್ ॥ ೨೫ ॥

ಪರವೀರಘಾತಕನಾದ ಧೃಷ್ಟದ್ಯುಮ್ನನು ದುಷ್ಕರವಾದ ಕರ್ಮವನ್ನು ಮಾಡಲು ಬಯಸಿ ತನ್ನ ರಥದ ಮೂಕಿಯಿಂದ ಹಾರಿ ದ್ರೋಣರ ರಥವನ್ನು ಸೇರಿದನು.

ಅತಿಷ್ಠದ್ ಯುಗಮಧ್ಯೇಷು ಯುಗಸನ್ನಹನೇಷು ಚ ।
ಜಘನಾಂಸೇಷು ಚಾಶ್ವಾನಾಂ ತತ್ ಸೈನ್ಯಂ ಸಮಪೂಜಯತ್ ॥ ೨೬ ॥

ಅವನು ನೊಗದ ಮಧ್ಯದಲ್ಲಿಯೂ, ನೊಗದ ಕಡಗೂಟಗಳಲ್ಲಿಯೂ, ಅಶ್ವಗಳ ಜಘನಪ್ರದೇಶಗಳಲ್ಲಿಯೂ ಸಂಚರಿಸಿದರು. ಅದನ್ನು ಸೈನ್ಯವು ಗೌರವಿಸಿತು.

ಖಡ್ಗೇನ ಚರತಸ್ತಸ್ಯ ಶೋಣಾಶ್ವಾನ್ಪಧಿತಿಷ್ಠತಃ ।
ನ ದದರ್ಶಾಂತರಂ ದ್ರೋಣಃ ತದದ್ಭುತಮಿವಾಭವತ್ ॥ ೨೭ ॥

ದ್ರೋಣರ ಕೆಂಪು ಕುದುರೆಗಳನ್ನು ನಿಯಂತ್ರಣದಲ್ಲಿಟ್ಟು, ಖಡ್ಗವನ್ನು ಹಿಡಿದು ಚಲಿಸುವ ಅವನಲ್ಲಿ ದ್ರೋಣರು ಒಂದು ಸಣ್ಣ ಛಿದ್ರವನ್ನೂ ಕಾಣಲಿಲ್ಲ. ಅದು ಅದ್ಭುತವಾಗಿದ್ದಿತು.

ಯಥಾ ಶ್ಯೇನಸ್ಯ ಚರತೋ ದ್ರುತಮಾಮಿಷಗೃದ್ಧಿನಃ ।
ತಥೈವಾಸೀದಭಿನರಸ್ತಸ್ಯ ದ್ರೋಣಂ ಜಿಘಾಂಸತಃ ॥ ೨೮ ॥

ಆಮಿಷವನ್ನು ನೋಡಿ ಬಯಸಿ, ಚಲಿಸುವ ಗಿಡುಗದಂತೆಯೇ ದ್ರೋಣರನ್ನು ಕೊಲ್ಲಲು ಬಯಸಿ ಚಲಿಸುವ ಧೃಷ್ಟದ್ಯುಮ್ನನ ಚಲನೆಯು ಇದ್ದಿತು.

ತತಃ ಶರಶತೇನಾಸ್ಯ ಶತಚಂದ್ರಮಪಾತಯತ್ ॥ ೨೯ ॥

ದ್ರೋಣೋ ದ್ರುಪದಪುತ್ರಸ್ಯ ಖಡ್ಗಂ ಚ ದಶಭಿಃ ಶರೈಃ ।
ಹಯಾಂಶ್ಚೈವ ಚತುಃಷಷ್ಟ್ಯಾ ಶರಾಣಾಂ ಜಘ್ನಿವಾನ್ ಬಲೀ ॥ ೩೦ ॥

ಆಗ ಬಲಿಷ್ಠರಾದ ದ್ರೋಣರು ನೂರು ಬಾಣಗಳಿಂದ ಅವನ ಚರ್ಮವನ್ನು (ಗುರಾಣಿಯನ್ನು) ಕೆಳಗೆ ಬೀಳಿಸಿದರು. ಧೃಷ್ಟದ್ಯುಮ್ನನ ಖಡ್ಗವನ್ನು ಹತ್ತು ಬಾಣಗಳಿಂದಲೂ, ಅವನ ಕುದುರೆಗಳನ್ನು ಅರವತ್ನಾಲ್ಕು ಬಾಣಗಳಿಂದಲೂ ಹೊಡೆದರು.

ಅಥಾಸ್ಯೈ ತ್ವರಿತೋ ಬಾಣಮಪರಂ ಜೀವಿತಾಂತಕಮ್ ।
ಧೃಷ್ಟದ್ಯುಮ್ನಾಯ ಚಿಕ್ಷೇಪ ಶಚೀಪತಿರಿವಾಶನಿಮ್ ॥ ೩೧ ॥

ಅನಂತರ ತ್ವರೆ ಮಾಡಿ ಜೀವಿತಾಂತಕವಾದ ಇನ್ನೊಂದು ಬಾಣವನ್ನು ತೆಗೆದುಕೊಂಡು ಶಚೀಪತಿಯು ವಜ್ರಾಯುಧವನ್ನು ಪ್ರಯೋಗಿಸಿದಂತೆ ಅದನ್ನು ಧೃಷ್ಟದ್ಯುಮ್ನನ ಮೇಲೆ ಪ್ರಯೋಗಿಸಿದರು.

ತಂ ಚತುರ್ದಶಭಿರ್ಬಾಣೈರ್ಬಾಣಾಂಶ್ಚಿಚ್ಛೇದ ಸಾತ್ಯಕಿಃ ।
ಗೃಸ್ತಮಾಚಾರ್ಯಮುಖ್ಯೇನ ಧೃಷ್ಟದ್ಯುಮ್ನಮಮೋಚಯತ್ ॥ ೩೨ ॥

ಆಗ ಸಾತ್ಯಕಿಯು ಹದಿನಾಲ್ಕು ಬಾಣಗಳನ್ನು ಪ್ರಯೋಗಿಸಿ, ಆಚಾರ್ಯರ ಬಾಣಗಳನ್ನು ಕತ್ತರಿಸಿ, ಆಚಾರ್ಯ ಶ್ರೇಷ್ಠರಾದ ದ್ರೋಣರಿಂದ ಗ್ರಸ್ತನಾದ ಧೃಷ್ಟದ್ಯುಮ್ನನ್ನು ಬಿಡುಗಡೆಗೊಳಿಸಿದನು.

ಸಿಂಹೇನೇವ ಮೃಗಂ ಗೃಸ್ತಂ ನರಸಿಂಹೇನ ಸಂಯುಗೇ ।
ದ್ರೋಣಾದ್ ವೈ ಮೋಚಯಾಮಾಸ ಪಾಂಚಾಲ್ಯಂ ಶಿನಿಪುಂಗವಃ ॥೩೩॥

ಸಿಂಹದಿಂದ ಹಿಡಿಯಲ್ಪಟ್ಟ ಜಿಂಕೆಯನ್ನು ಬಿಡಿಸಿದಂತೆ, ರಣರಂಗದಲ್ಲಿ ನರಸಿಂಹರಾದ ದ್ರೋಣರಿಂದ ಹಿಡಿಯಲ್ಪಟ್ಟ ಧೃಷ್ಟದ್ಯುಮ್ನನನ್ನು ಶಿನಿಪುಂಗವನಾದ ಸಾತ್ಯಕಿಯು ದ್ರೋಣರಿಂದ ಬಿಡುಗಡೆಗೊಳಿಸಿದನು.

ಸಾತ್ಯಕಿಂ ಪ್ರೇಕ್ಷ್ಯ ಗೋಪ್ತಾರಂ ಪಾಂಚಾಲಸ್ಯ ಮಹಾಹವೇ ।
ಶರಾಣಾಂ ತ್ವರಿತೋ ದ್ರೋಣಃ ಷಡ್ವಿಂಶತ್ಯಾ ಸಮರ್ಪಯತ್ ॥ ೩೪ ॥

ಮಹಾಯುದ್ಧದಲ್ಲಿ ಸಾತ್ಯಕಿಯು ಧೃಷ್ಟದ್ಯುಮ್ನನಿಗೆ ರಕ್ಷಣನಾಗಿ ಬಂದುದನ್ನು ನೋಡಿ ದ್ರೋಣರು ಶೀಘ್ರವಾಗಿ ಸಾತ್ಯಕಿಯ ಮೇಲೆ ಇಪ್ಪತ್ತಾರು ಬಾಣಗಳನ್ನು ಪ್ರಯೋಗಿಸಿದರು.

ತತೋ ದ್ರೋಣಂ ಶಿನೇರ್ನಪ್ತಾ ಗ್ರಸಂತಮಿವ ಸೃಂಜಯಾನ್ ।
ಪ್ರತ್ಯವಿಧ್ಯಚ್ಚತೈರ್ಬಾಣೈಃ ಷಡ್ವಿಂಶತ್ಯಾ ಸ್ತನಾಂತರೇ ॥ ೩೫ ॥

ಆಗ ಶಿನಿಯ ಮೊಮ್ಮಗನಾದ ಸಾತ್ಯಕಿಯು ಸೃಂಜಯರ ಕಡೆಗೆ ಮುನ್ನುಗ್ಗಿ ಬರುತ್ತಿದ್ದ ದ್ರೋಣರ ಮೇಲೆ ಹರಿತವಾದ ಇಪ್ಪತ್ತಾರು ಬಾಣಗಳನ್ನು ಪ್ರಯೋಗಿಸಿ ಅವರ ಸ್ತನಗಳ ಮಧ್ಯದಲ್ಲಿ ಹೊಡೆದನು.

ತತಃ ಸರ್ವೇ ರಥಾತ್ ತೂರ್ಣಂ ಪಾಂಚಾಲಾ ಜಯಗೃದ್ಧಿನಃ ।
ಸಾತ್ವತಾಭಿಸೃತೇ ದ್ರೋಣೇ ಧೃಷ್ಟದ್ಯುಮ್ನಮಚೋದಯನ್ ॥ ೩೬ ॥

ಆಗ ಜಯಾಕಾಂಕ್ಷಿಗಳಾದ ಪಾಂಚಾಲರೆಲ್ಲರೂ ತಮ್ಮ ತಮ್ಮ ರಥಗಳಲ್ಲಿ ಕುಳಿತು ಸಾತ್ಯಕಿಯಿಂದ ಎದುರಿಸಲ್ಪಟ್ಟ ದ್ರೋಣರ ಮೇಲೆ ಎರಗುವಂತೆ ಧೃಷ್ಟದ್ಯುಮ್ನನನ್ನು ಪ್ರಚೋದಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಾಶೀತಿತಮೋಽಧ್ಯಾಯಃ ॥

॥ ಜಯದ್ರಥಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತಾರನೆಯ ಅಧ್ಯಾಯ

ದ್ರೋಣ-ಸಾತ್ಯಕಿಯರ ಯುದ್ಧ. ಬಾಯಾರಿದ ಅಶ್ವಗಳಿಗಾಗಿ ಅರ್ಜುನನಿಂದ ಸರೋವರದ ನಿರ್ಮಾಣ.

ಧೃತರಾಷ್ಟ್ರ:

ಬಾಣೇ ತಸ್ಮಿನ್ ನಿಕೃತ್ತೇ ತು ಧೃಷ್ಟದ್ಯುಮ್ನೇ ಚ ಮೋಕ್ಷಿತೇ ।
ತೇನ ವೃಷ್ಣಿಪ್ರವೀರೇಣ ಯುಯುಧಾನೇನ ಸಂಯುಗೇ ॥ ೧ ॥

ಅಮರ್ಷಿತೋ ಮಹೇಷ್ವಾಸಃ ಸರ್ವಶಸ್ತ್ರಭೃತಾಂ ವರಃ ।
ರಥವ್ಯಾಘ್ರಂ ಶಿನೇಃ ಪೌತ್ರಂ ದ್ರೋಣಃ ಕಿಮಕರೋದ್ ಯುಧಿ ॥ ೨ ॥

ಧೃತರಾಷ್ಟ್ರ– ದ್ರೋಣರ ಬಾಣವು ಕತ್ತರಿಸಲ್ಪಟ್ಟು ರಣರಂಗದಲ್ಲಿ ವೃಷ್ಣಿವೀರನಾದ ಸಾತ್ಯಕಿಯಿಂದ ಧೃಷ್ಟದ್ಯುಮ್ನನು ಬಿಡುಗಡೆಗೊಳಿಸಲ್ಪಡುತ್ತಿರಲು, ಕೋಪಗೊಂಡ ಮಹಾಧನುರ್ಧಾರಿಗಳೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ ಆದ ದ್ರೋಣರು ಶಿನಿಯ ಪೌತ್ರನೂ, ರಥವ್ಯಾಘ್ರನೂ ಆದ ಸಾತ್ಯಕಿಗೆ ಯುದ್ಧದಲ್ಲಿ ಏನು ಮಾಡಿದರು?

ಸಂಜಯಃ

ಸಂಪ್ರಸ್ರುತಕ್ರೋಧವಿಷೋ ವ್ಯಾದಿತಾಸ್ಯ ಇವಾಂತಕಃ ।
ತೀಕ್ಷ್ಣಧಾರೈಃ ಪುದಶನಃ ಶಿತನಾರಾಚದಂಷ್ಟ್ರವಾನ್ ॥ ೩ ॥

ಸಂರಂಭಾಮರ್ಷತಾಮ್ರಾಕ್ಷೋ ಮಹಾಹಿರಿವ ನಿಃಶ್ವಸನ್ ।
ನರವೀರಃ ಪ್ರಮುದಿತೈಃ ಶೋಣೈರಶ್ವೈರ್ಮಹಾಜವೈಃ ॥ ೪ ॥

ಉತ್ತತರ್ದ್ಧಿವಾಕಾಶಂ ಪತದ್ಭಿರಿವ ಸರ್ವತಃ ।
ರುಗ್ಮಪುಂಖಾನ್ ಶರಾನನ್ಯಾನ್ ಯುಯುಧಾನಮುಪಾದ್ರವತ್ ॥ ೫ ॥

ಸಂಜಯ– ಕ್ರೋಧವೆಂಬ ವಿಷವನ್ನು ಸುರಿಸುತ್ತಾ, ಬಾಯಿ ತೆರೆದ ಅಂತಕನಂತೆ ತೀಕ್ಷ್ಣಧಾರೆಯುಳ್ಳ ಬಾಣಗಳ ದಂತಗಳನ್ನೂ, ಹರಿತವಾದ ನಾರಾಚವೆಂಬ ಕೋರೆದಾಡೆಗಳನ್ನೂ ಹೊಂದಿ, ಕೋಪ-ರೋಷಗಳಿಂದ ಕೆಂಪಾದ ಕಣ್ಣುಳ್ಳ, ಮಹಾಸರ್ಪದಂತೆ ಉಸಿರನ್ನು ಬಿಡುವ, ನರವೀರರಾದ ದ್ರೋಣರು ಮಹಾವೇಗಶಾಲಿಗಳಾದ,

ಸಂತೋಷಗೊಂಡ, ರಕ್ತವರ್ಣವನ್ನು ಹೊಂದಿದ, ಆಕಾಶಕ್ಕೆ ನೆಗೆಯುವಂತೆ ಎಲ್ಲ ಕಡೆಗಳಲ್ಲಿಯೂ ಚಲಿಸುವ ಅಶ್ವಗಳಿಂದ ಹೂಡಿದ ರಥದಲ್ಲಿ ಕುಳಿತು ಸುವರ್ಣ ಪುಂಖಗಳುಳ್ಳ ಬಾಣಗಳನ್ನು ಪ್ರಯೋಗಿಸುತ್ತಾ ಸಾತ್ಯಕಿಯ ಕಡೆಗೆ ಧಾವಿಸಿದರು.

ಶರಪಾತಮಹಾವರ್ಷಂ ರಥಘೋಷಬಲಾಹಕಮ್ ।
ಕಾರ್ಮುಕಾಕರ್ಷವಿಕ್ಷೇಪಂ ನಾರಾಚಬಹುವಿದ್ಯುತಮ್ ॥ ೬ ॥

ಶಕ್ತಿಖಡ್ಗಾಶನಿಧರಂ ಕ್ರೋಧವೇಗಸಮುತ್ಥಿತಮ್ ।
ದ್ರೋಣಮೇಘಮನಾವಾರ್ಯಂ ಹಯಮಾರುತಚೋದಿತಮ್ ॥ ೭ ॥

ದೃಷ್ಟ್ವೈವಾಭಿಪತಂತಂ ತಂ ಶೂರಃ ಪರಪುರಂಜಯಃ ।
ಉವಾಚ ಸೂತಂ ಶೈನೇಯಃ ಪ್ರಹಸನ್ ಯುದ್ಧದುರ್ಮದಃ ॥ ೮ ॥

ಶರಪಾತವೆಂಬ ಮಹಾಮಳೆಯುಳ್ಳ, ರಥಘೋಷವೆಂಬ ಬಿಳಿಯ ಮೋಡ ಸಮೂಹವುಳ್ಳ, ಧನುಸ್ಸಿನ ಎಳೆಯುವಿಕೆ ಎಂಬ ವಿಕ್ಷೇಪವುಳ್ಳ, ನಾರಾಚವೆಂಬ ಅನೇಕ ಮಿಂಚುಗಳುಳ್ಳ, ಶಕ್ತಿ-ಖಡ್ಗಗಳೆಂಬ ಸಿಡಿಲುಗಳುಳ್ಳ, ಕ್ರೋಧವೇಗದಿಂದ ಮೇಲಕ್ಕೆದ್ದ, ಇನ್ನೊಬ್ಬರು ನಿವಾರಿಸಲು ಸಾಧ್ಯವಿಲ್ಲದ, ಅಶ್ವಗಳೆಂಬ ಮಾರುತಗಳಿಂದ ಚೋದಿತವಾದ ದ್ರೋಣರೆಂಬ (ನೀಲ) ಮೇಘವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದ ತಕ್ಷಣವೇ ಶೂರನೂ, ಪರಪುರಂಜಯನೂ, ಯುದ್ಧದುರ್ಮದನೂ ಆದ ಸಾತ್ಯಕಿಯು ನಗುತ್ತಾ ತನ್ನ ಸೂತನನ್ನು ಕುರಿತು ಹೇಳಿದನು.

ವಿತಂ ವೈ ಬ್ರಾಹ್ಮಣಂ ಕ್ರೂರಂ ಸ್ವಕರ್ಮಣ್ಯನವಸ್ಥಿತಮ್ ।
ಆಶ್ರಯಂ ಧಾರ್ತರಾಷ್ಟ್ರಾಣಾಂ ಧರ್ಮರಾಜಭಯಾವಹಮ್ ॥ ೯ ॥

ಶೀಘ್ರಂ ಪ್ರಜವಿತೈರಶ್ವೈಃ ಪ್ರತ್ಯುದ್ಯಾಹಿ ಪ್ರಹೃಷ್ಟವತ್ ।
ಆಚಾರ್ಯಂ ರಾಜಪುತ್ರಾಣಾಂ ಸತತಂ ಶೂರಮಾನಿನಮ್ ।
ಏವಮುಕ್ತಸ್ತತಃ ಸೂತಃ ಸಾತ್ಯಕಿಮ್ಯಾವಹದ್ ರಥಮ್ ॥ ೧೦ ॥

ಈ ಕ್ರೂರರಾದ, ತಮ್ಮ ಕರ್ಮಾನುಷ್ಠಾನದಲ್ಲಿ ಇಲ್ಲದಿರುವ, ದುರ್ಯೋಧನಾದಿಗಳಿಗೆ ಆಶ್ರಯರಾದ, ಯುಧಿಷ್ಠಿರನ ಭಯಕ್ಕೆ ಕಾರಣರಾದ, ಯಾವಾಗಲೂ ತಮ್ಮನ್ನು ಶೂರನೆಂದು ತಿಳಿಯುವ, ರಾಜಕುಮಾರರಿಗೆ ಆಚಾರ್ಯರಾದ

ದ್ರೋಣರ ಬಳಿಗೆ ಶೀಘ್ರವಾಗಿ ವೇಗಶಾಲಿಗಳಾದ ಅಶ್ವಗಳಿಂದ ಕೂಡಿ ಸಂತೋಷದಿಂದ ಹೋಗುವವನಾಗು (ಎಂದು ಹೇಳಿದನು). ಹೀಗೆ ಹೇಳಲ್ಪಟ್ಟ ಸೂತನು ಸಾತ್ಯಕಿಯ ರಥವನ್ನು ಮುಂದೆ ನಡೆಸಿದನು.

ತತೋ ರಜತಸಂಕಾಶಾ ಮಾಧವಸ್ಯ ಹಯೋತ್ತಮಾಃ ।
ದ್ರೋಣಸ್ಯಾಭಿಮುಖಾಃ ಶೀಘ್ರಮವಹನ್ ವಾತರಂಹಸಃ ॥ ೧೧ ॥

ಆಗ ಬೆಳ್ಳಿಯ ಬಣ್ಣದಿಂದ ಕೂಡಿದ, ವಾಯುವೇಗವುಳ್ಳ, ಮಧುಕುಲದಲ್ಲಿ ಜನಿಸಿದ ಸಾತ್ಯಕಿಯ ಶ್ರೇಷ್ಠವಾದ ಹಯಗಳು ಸಾತ್ಯಕಿಯ ರಥವನ್ನು ದ್ರೋಣರಿಗೆ ಅಭಿಮುಖವಾಗಿ ಶೀಘ್ರವಾಗಿ ತೆಗೆದುಕೊಂಡು ಹೋದವು.

ತತಸ್ತೌ ದ್ರೋಣಶೈನೇಯೌ ಯುಯುಧಾತೇ ಪರಂತಪೌ ।
ಶರೈರನೇಕಸಾಹಸ್ರೈಸ್ತಾಡಯಂತೌ ಪರಸ್ಪರಮ್ ॥ ೧೨ ॥

ಆನಂತರ ಪರಂತಪರಾದ ದ್ರೋಣ-ಸಾತ್ಯಕಿಯರು ಅನೇಕ ಸಹಸ್ರ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡುತ್ತಾ ಯುದ್ಧವನ್ನು ಮಾಡಿದರು.

ಇಷುಜಾಲಾವೃತಂ ವ್ಯೋಮ ಚಕ್ರತುಃ ಪುರುಷರ್ಷಭೌ ।
ಪೂರಯಾಮಾಸತುರ್ವೀರಾವುಭೌ ದಶ ದಿಶಃ ಶರೈಃ ॥ ೧೩ ॥

ವೀರರೂ, ಪುರುಷಶ್ರೇಷ್ಠರೂ ಆದ ಅವರಿಬ್ಬರು ಆಕಾಶವನ್ನು ತಮ್ಮ ಬಾಣ ಸಮೂಹಗಳಿಂದ ಆವೃತವನ್ನಾಗಿ ಮಾಡಿ, ಹತ್ತು ದಿಕ್ಕುಗಳನ್ನು ತಮ್ಮ ಬಾಣಗಳಿಂದ ತುಂಬಿದರು.

ಮೇಘಾವಿವಾತಪಾತ್ಯಾಯೇ ಧಾರಾಭಿರಿತರೇತರಮ್ ।
ನ ಸ್ಮ ಸೂರ್ಯಸ್ತದಾ ಭಾತಿ ನ ವವೌ ಚ ಸಮೀರಣಃ ॥ ೧೪ ॥

ಬೇಸಿಗೆಯ ಕೊನೆಯಲ್ಲಿ ಬರುವ ಮೋಡಗಳಂತೆ, ಮಳೆಯಂತಿರುವ ಬಾಣ ಧಾರೆಗಳಿಂದ ಪರಸ್ಪರವಾಗಿ ಒಬ್ಬರನ್ನೊಬ್ಬರು ತುಂಬಿದರು. ಆಗ ಸೂರ್ಯನೂ ಕಾಣುತ್ತಿರಲಿಲ್ಲ, ವಾಯುವೂ ಬೀಸುತ್ತಿರಲಿಲ್ಲ.

ಇಷುಜಾಲಾವೃತಂ ವ್ಯೋಮ ಅಂಧಕಾರಮನಂತಕಮ್ ।
ಅನಾಧೃಷ್ಯಮಿವಾನ್ಯೇಷಾಂ ಶೂರಾಣಾಮಭವತ್ ತದಾ ।
ಅಂಧಕಾರೀಕೃತೇ ಲೋಕೇ ದ್ರೋಣಶೈನೇಯಯೋಃ ಶರೈಃ ॥ ೧೫ ॥

ದ್ರೋಣ-ಸಾತ್ಯಕಿಯರ ಬಾಣಗಳಿಂದ ಆವೃತವಾದ ಆಕಾಶವು ಅನಂತವಾದ ಅಂಧಕಾರಮಯವಾಯಿತು. ಉಳಿದ ಯಾವ ಶೂರರೂ ಅದನ್ನು ಪರಿಹರಿಸಲು ಸಾಧ್ಯವಾಗಲಿಲ್ಲ. ಲೋಕವೇ ಅಂಧಕಾರಮಯವಾಯಿತು.

ತಯೋಃ ಶೀಘ್ರಾಸ್ತ್ರವಿದುಷೋರ್ದ್ರೋಣಸಾತ್ಯಕಯೋಸ್ತದಾ ।
ನಾಂತರಂ ಶರವೃಷ್ಟೀನಾಂ ದೃಶ್ಯತೇ ನರಸಿಂಹಯೋಃ ॥ ೧೬ ॥

ಆಗ ಶೀಘ್ರಾಸ್ತ್ರವೇತ್ತರಾದ, ನರಸಿಂಹರಾದ ದ್ರೋಣ-ಸಾತ್ಯಕಿಯರ ಬಾಣ ವೃಷ್ಟಿಗಳಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ.

ತಯೋರ್ಜ್ಯಾತಳನಿರ್ಘೋಷಃ ಶ್ರೂಯತೇ ಯುದ್ಧಶೌಂಡಯೋಃ ।
ಪ್ರಾವೃಷೀವೇಂದ್ರಮುಕ್ತಾನಾಮಶನೀನಾಮಿವ ಸ್ವನಃ ॥ ೧೭ ॥

ಯುದ್ಧಕುಶಲರಾದ ಅವರ ಹೆದೆಯ ಘೋಷವು ಮಳೆಗಾಲದಲ್ಲಿ ಇಂದ್ರನಿಂದ ಸೃಷ್ಟವಾದ ಸಿಡಿಲಿನ ಘೋಷದಂತೆ ಕೇಳಿಬರುತ್ತಿದ್ದಿತು.

ನಾರಾಚೈರತಿವಿದ್ಧಾನಾಂ ಶೂರಾಣಾಂ ರೂಪಮಾಬಭೌ ।
ಆಶೀವಿಷವಿದಷ್ಟಾನಾಂ ಸರ್ಪಾಣಾಮಿವ ಭಾರತ ॥ ೧೮ ॥

ನಾರಾಚದಿಂದ ಗಾಢವಾಗಿ ಹೊಡೆಯಲ್ಪಟ್ಟ ಶೂರರ ರೂಪವು ಎಲೈ ಭಾರತನೇ, ದೃಷ್ಟಿವಿಷವಾದ ಸರ್ಪಗಳಿಂದ ಕಚ್ಚಲ್ಪಟ್ಟ ಸರ್ಪಗಳ ರೂಪದಂತೆ ಕಂಗೊಳಿಸಿತು.

ತಯೋರ್ಜ್ಯಾತಳನಿರ್ಘೋಷಃ ಶ್ರೂಯತೇ ಯುದ್ಧ್ಯಮಾನಯೋಃ ।
ಅಜಸ್ರಂ ಶೈಲಶೃಂಗಾಣಾಂ ವಜ್ರೇಣಾಹನ್ಯತಾಮಿವ ॥ ೧೯ ॥

ಯುದ್ಧಮಾಡುವ ಅವರ ಜ್ಯಾತಳ ನಿರ್ಘೋಷವು ವಜ್ರಾಯುಧದ ಹೊಡೆತಕ್ಕೆ ಸಿಕ್ಕಿದ ಪರ್ವತದ ಶಿಖರದ ಶಬ್ದಗಳಂತೆ ಸತತವಾಗಿ ಕೇಳಿ ಬರುತ್ತಿದ್ದಿತು.

ಉಭೌ ತೌ ಹಿ ರಥೌ ರಾಜನ್ ತೇ ಚಾಶ್ವಾಸ್ತೌ ಚ ಸಾರಥೀ ।
ರುಗ್ಮಪುಂಖೈಃ ಶರೈಶ್ಚಿನ್ನಾಃ ಚಿತ್ರರೂಪಾ ಬಭೂವುಸ್ತದಾ ॥ ೨೦ ॥

ಎಲೈ ರಾಜನೇ, ಆ ಇಬ್ಬರು ರಥಿಕರೂ ಮತ್ತು ಅವರ ಧೈರ್ಯಶಾಲಿ ಸಾರಥಿಗಳೂ ಸಹ ಸುವರ್ಣಪುಂಖವುಳ್ಳ ಬಾಣಗಳಿಂದ ಗಾಯಗೊಂಡು ಚಿತ್ರರೂಪವುಳ್ಳವರಾಗಿ ಶೋಭಿಸಿದರು.

ನಿರ್ಮಲಾನಾಮಜಿಹ್ಮಾನಾಂ ನಾರಾಚಾನಾಂ ವಿಶಾಂಪತೇ ।
ನಿರ್ಮುಕ್ತಾಶೀವಿಷಾಭಾನಾಂ ಸಂಪಾತೋಽಭೂತ್ ಸುದಾರುಣಃ ॥೨೧॥

ಎಲೈ ರಾಜನೇ, ನಿರ್ಮಲವಾದ ಮತ್ತು ನೇರವಾಗಿ ಸಾಗುವ ನಾರಾಚಗಳ ಸಂಘರ್ಷವು ಪೊರೆಯನ್ನು ಕಳಚಿದ ಆಶೀವಿಷ ಸರ್ಪಗಳ ಸಂಪಾತದಂತೆ ಬಹಳ ದಾರುಣವಾಗಿದ್ದಿತು.

ಉಭಯೋಃ ಪತಿತೇ ಚತ್ರೇ ಪತಿತೌ ಚ ಮಹಾಧ್ವಜೌ ।
ನಿಕೃಂತತೋಃ ಶರೈಸ್ತೀಕ್ಷ್ಣೈರ್ದ್ರೋಣಸಾತ್ಯಕಯೋಸ್ತದಾ ॥ ೨೨ ॥

ದ್ರೋಣ-ಸಾತ್ಯಕಿಯರು ಬಾಣಗಳಿಂದ ಪರಸ್ಪರವಾಗಿ ಕತ್ತರಿಸುವಾಗ ಇಬ್ಬರ ಛತ್ರಗಳೂ ಮತ್ತು ಮಹಾಧ್ವಜಗಳೂ ಕೆಳಗೆ ಬಿದ್ದವು.

ಉಭೌ ರುಧಿರಸಂಸಿಕ್ತಾವುಭೌ ಚ ವಿಜಯೈಷಿಣೌ ।
ಸ್ರವದ್ಭಿಃ ಶೋಣಿತಂ ಗಾತ್ರೈಃ ಪ್ರಸ್ರುತಾವಿವ ವಾರಣೌ ।
ಅನ್ಯೋನ್ಯಮಭಿವಿದ್ಧ್ಯೇತಾಂ ಜೀವಿತಾಂತಕರೈಃ ಶರೈಃ ॥ ೨೩ ॥

ಇಬ್ಬರೂ ರಕ್ತಸಿಕ್ತರಾಗಿ, ಇಬ್ಬರೂ ಜಯಾಕಾಂಕ್ಷಿಗಳಾಗಿ, ಇಬ್ಬರೂ ಮದಿಸಿದ ಆನೆಯು ಮದವನ್ನು ಸುರಿಸುವಂತೆ ಶರೀರದ ಗಾಯಗಳಿಂದ ರಕ್ತವನ್ನು ಸುರಿಸುತ್ತಾ, ಜೀವಿತಾಂತಕವಾದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ಗರ್ಜತಾಕ್ರುಷ್ಟಸನ್ನಾದಾಃ ಶಂಖದುಂದುಭಿನಿಸ್ವನಾಃ ।
ಉಪಾರಮನ್ ಮಹಾರಾಜ ವ್ಯಾಜಹಾರ ನ ಕಶ್ಚನ ॥ ೨೪ ॥

ಎಲೈ ಮಹಾರಾಜನೇ, ಯೋಧರ ಗರ್ಜನೆಗಳು, ಆಕ್ರೋಶಗಳು ಮತ್ತು ಸಿಂಹನಾದಗಳು ಅಡಗಿದವು. ಶಂಖದುಂದುಭಿಸ್ವನಗಳು ನಿಂತುಹೋದವು. ಯಾವನೂ ಮಾತನಾಡಲಿಲ್ಲ.

ತೂಷ್ಣೀಂಭೂತಾನ್ಯನೀಕಾನಿ ಯೋಧಾ ಯುದ್ಧಾದುಪಾರಮನ್ ।
ದದರ್ಶ ದ್ವೈರಥಂ ತಾಭ್ಯಾಂ ಜಾತಕೌತೂಹಲೋ ಜನಃ ॥ ೨೫ ॥

ಸೈನ್ಯಗಳು ಸುಮ್ಮನೆ ನಿಂತವು. ಯೋಧರು ತಮ್ಮ ಯುದ್ಧವನ್ನು ನಿಲ್ಲಿಸಿ ಅವರಿಬ್ಬರ ದ್ವೈರಥ ಯುದ್ಧವನ್ನು ನೋಡಿದರು. ಕುತೂಹಲಗೊಂಡ ಜನರೂ ಆ ದ್ವೈರಥ ಯುದ್ಧವನ್ನು ನೋಡಿದರು.

ರಥಿನೋ ಹಸ್ತಿಯಂತಾರೋ ಹಯಾರೋಹಾಃ ಪದಾತಯಃ ।
ಆವೇಕ್ಷನ್ನಚಲೈರ್ನೇತ್ರೈಃ ಪರಿವಾರ್ಯ ರಥರ್ಷಭೌ ॥ ೨೬ ॥

ರಥಿಕರು, ಗಜಾರೋಹಿಗಳು, ಹಯಾರೋಹಿಗಳು ಮತ್ತು ಪದಾತಿಗಳು ಆ ಇಬ್ಬರು ರಥಶ್ರೇಷ್ಠರನ್ನು ಸುತ್ತುವರಿದು ಅಲುಗಾಡದ ಕಣ್ಣುಗಳಿಂದ ಆ ಯುದ್ಧವನ್ನು ನೋಡಿದರು.

ಹಸ್ತ್ಯನೀಕಾನಿ ತಿಷ್ಠಂತಿ ತಥಾऽನೀಕಾನಿ ವಾಜಿನಾಮ್ ।
ತಿಷ್ಠಂತಿ ರಥವಾಹಿನ್ಯಃ ಪ್ರತಿವ್ಯೂಹೇ ವ್ಯವಸ್ಥಿತಾಃ ॥ ೨೭ ॥

ಪ್ರತಿವ್ಯೂಹದಲ್ಲಿಯೂ ತಮ್ಮ ತಮ್ಮ ಸ್ಥಳಗಳಲ್ಲಿ ಗಜಗಳ ಸಮೂಹಗಳು ನಿಂತವು. ಅಶ್ವಗಳ ಸಮೂಹಗಳು, ರಥಸೇನೆಯು ಹಾಗೆಯೇ ನಿಂತಿತು.

ಮುಕ್ತಾವಿದ್ರುಮಚಿತ್ರೈಶ್ಚ ಮಣಿಕಾಂಚನಭೂಷಿತೈಃ ।
ಧ್ವಜೈರಾಭರಣೈಶ್ಚಿತ್ರೈಃ ಕವಚೈಶ್ಚ ಹಿರಣ್ಮಯೈಃ ॥ ೨೮ ॥

ವೈಜಯಂತೀಪತಾಕಾಭಿಃ ಪರಿಸ್ತೋಮೈಶ್ಚ ಕಂಬಳೈಃ ।
ನಿರ್ಮಲೈರ್ನಿಶಿತೈಃ ಶಸ್ತ್ರೈರ್ಹಯಾನಾಂ ಚ ಪ್ರತೀರ್ಣಕೈಃ ॥ ೨೯ ॥

ಜಾತರೂಪಮಯೀಭಿಶ್ಚ ರಾಜತೀಭಿಶ್ಚ ಮೂರ್ಧನಿ ।
ಗಜಾನಾಂ ಕುಂಭಮಾಲಾಭರ್ದಂತವೇಷ್ಟೈಶ್ಚ ಭಾರತ ॥ ೩೦ ॥

ಸಬಲಾಕಾ ಸಖದ್ಯೋತಾ ಸೈರಾವತಶತಹ್ರದಾ ।
ಅದೃಶ್ಯತೋಷ್ಣಪರ್ಯಂತೇ ಮೇಘಾನಾಮಿವ ವಾಗುರಾ ॥ ೩೧ ॥

ಎಲೈ ಭಾರತನೇ, ಮುತ್ತು-ಹವಳಗಳಿಂದ ವಿಚಿತ್ರವಾದ, ಮಣಿಕಾಂಚನ ಭೂಷಿತವಾದ ಧ್ವಜಗಳಿಂದಲೂ, ಆಭರಣಗಳಿಂದಲೂ, ವಿಚಿತ್ರವಾದ ಸುವರ್ಣಮಯವಾದ ಕವಚಗಳಿಂದಲೂ, ವೈಜಯಂತಿಗಳಿಂದಲೂ, ಪತಾಕೆಗಳಿಂದಲೂ, ಗಜದ ಮೇಲಿನ ಹಾಸುಗಳಿಂದಲೂ, ಕಂಬಳಿಗಳಿಂದಲೂ, ನಿರ್ಮಲವಾದ ಮತ್ತು ಹರಿತವಾದ ಶಸ್ತ್ರಗಳಿಂದಲೂ, ಆಶ್ವಗಳ ಸುವರ್ಣಮಯವಾದ ಮತ್ತು ರಜತಮಯವಾದ ಮೂರ್ಧಾಭರಣಗಳಿಂದಲೂ, ಗಜಗಳ ಕುಂಭಮಾಲೆಗಳಿಂದಲೂ, ದಂತಾಭರಣಗಳಿಂದಲೂ ಕೂಡಿದ ಸೈನ್ಯವು ಬಲಾಕ ಪಕ್ಷಿಗಳಿಂದಲೂ, ಖದ್ಯೋತಗಳಿಂದಲೂ, ಐರಾವತ ರೂಪವಾದ ಮಿಂಚುಗಳಿಂದಲೂ ಕೂಡಿದ ಬೇಸಿಗೆ ಕಾಲದ ನಂತರ ಬರುವ ಮೇಘಗಳ ಬಲೆಯಂತೆ ಕಂಡುಬಂದಿತು.

ಅಪಶ್ಯನ್ಸತ್ಯಧೀಯಾಶ್ಚ ತೇ ಚ ಯೌಧಿಷ್ಠಿರಾಸ್ತದಾ ।
ತದ್ ಯುದ್ಧಂ ಯುಯುಧಾನಸ್ಯ ದ್ರೋಣಸ್ಯ ಚ ಮಹಾತ್ಮನಃ ॥ ೩೨ ॥

ನಮ್ಮವರು ಮತ್ತು ಯುಧಿಷ್ಠಿರನ ಸೈನ್ಯದವರು ಆಗ ಮಹಾತ್ಮರಾದ ಸಾತ್ಯಕಿ ಮತ್ತು ದ್ರೋಣರ ನಡುವೆ ನಡೆಯುವ ಆ ಯುದ್ಧವನ್ನು ನೋಡಿದರು.

ವಿಮಾನಸ್ಥಾಸ್ತದಾ ದೇವಾ ಬ್ರಹ್ಮೇಮಪುರೋಗಮಾಃ ।
ಸಿದ್ಧಚಾರಣಸಂಘಾಶ್ಚ ವಿದ್ಯಾಧರಮಹೋರಗಾಃ ॥ ೩೩ ॥

ಗಂಧರ್ವಾ ದಾನವಾ ಯಕ್ಷಾ ರಾಕ್ಷಸಾಪ್ಸರಸಃ ಖಗಾಃ ।
ಗತಪ್ರತ್ಯಾಗತಾಕ್ಷೇಪೈಃ ಚಿತ್ರೈಃ ಶಸ್ತ್ರವಿಘಾತನೈಃ ॥ ೩೪ ॥

ವಿವಿದ್ಧೈರ್ವಿಸ್ಮಯಂ ಜಗ್ಮುಸ್ತಯೋಃ ಪುರುಷಸಿಂಹಯೋಃ ॥ ೩೫ ॥

ವಿಮಾನದಲ್ಲಿ ಕುಳಿತ ಬ್ರಹ್ಮ-ರುದ್ರ ಮೊದಲಾದ ದೇವತೆಗಳು, ಸಿದ್ಧ-ಚಾರಣರ ಸಮೂಹಗಳು, ವಿದ್ಯಾಧರ-ಮಹೋರಗರು, ಗಂಧರ್ವ-ದಾನವ-ಯಕ್ಷರು, ರಾಕ್ಷಸರು, ಅಪ್ಸರೆಯರು, ಪಕ್ಷಿಗಳು, ಪುರುಷಸಿಂಹರಾದ ಅವರಿಬ್ಬರ ವಿವಿಧವಾದ ಗಮನ-ಪ್ರತ್ಯಾಗಮನಗಳಿಂದಲೂ, ವಿಚಿತ್ರವಾದ ಶಸ್ತ್ರವಿಘಾತಗಳಿಂದಲೂ ವಿಸ್ಮಯವನ್ನು ಹೊಂದಿದರು.

ಹಸ್ತಲಾಘವಮಸ್ತ್ರೇಷು ದರ್ಶಯಂತೌ ಮಹಾರಥೌ ।
ಅನ್ಯೋನ್ಯಮಭಿವಿದ್ಧ್ಯೇತಾಂ ತೀಕ್ಷ್ಣೈಸ್ತೌ ದ್ರೋಣಸಾತ್ಯಕೀ ॥೩೬॥

ಮಹಾರಥರಾದ ಆ ದ್ರೋಣ-ಸಾತ್ಯಕಿಯರು ಪ್ರಯೋಗಿಸುವ ಅಸ್ತ್ರಗಳಲ್ಲಿ ತಮ್ಮ ಹಸ್ತದ ಕ್ಷಿಪ್ರತೆಯನ್ನು ತೋರಿಸುತ್ತಾ ತೀಕ್ಷ್ಣವಾದ ಬಾಣಗಳಿಂದ ಪರಸ್ಪರವಾಗಿ ಯುದ್ಧ ಮಾಡಿದರು.

ತತೋ ದ್ರೋಣಸ್ಯ ವಾರ್ಷ್ಣೇಯೋ ಬಾಣಾಂಶ್ಚಿಚ್ಛೇದ ಸಂಯುಗೇ ।
ಪತ್ರಿಭಿಃ ಸುದೃಢೈರಾಶು ಧನುಶ್ಚೈವ ಮಹೀಪತೇ ॥ ೩೭ ॥

ಆನಂತರ ಎಲೈ ರಾಜನೇ, ಸಾತ್ಯಕಿಯು ಪತ್ರಸಹಿತವಾದ ಬಾಣಗಳಿಂದ ರಣರಂಗದಲ್ಲಿ ದ್ರೋಣರ ಬಾಣಗಳನ್ನೂ ಮತ್ತು ಧನುಸ್ಸನ್ನೂ ಶೀಘ್ರವಾಗಿ ಕತ್ತರಿಸಿದನು.

ನಿಮೇಷಾಂತರಮಾತ್ರೇಣ ಭಾರದ್ವಾಜೋಽಪರಂ ಧನುಃ ।
ಸಜ್ಯಂ ಚಕಾರ ತಚ್ಚಾಶು ಚಿಚ್ಛೇದಾಸ್ಯ ಸ ಸಾತ್ಯಕಿಃ ॥ ೩೮ ॥

ದ್ರೋಣರು ಒಂದು ನಿಮಿಷದಲ್ಲಿ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಹೆದೆಯನ್ನೇರಿಸಿದರು. ಸಾತ್ಯಕಿಯು ಅದನ್ನೂ ಶೀಘ್ರವಾಗಿ ಕತ್ತರಿಸಿದನು.

ತತ ಆಶು ಪುನರ್ದ್ರೋಣೋ ಧನುರ್ಹಸ್ತೋ ವ್ಯತಿಷ್ಠತ ।
ಸಜ್ಯಂ ಸಜ್ಯಂ ಪುನಶ್ಚಾಪಂ ಚಿಚ್ಛೇದ ನಿಶಿತೈಃ ಶರೈಃ ॥ ೩೯ ॥

ಆಗ ಪುನಃ ದ್ರೋಣರು ಶೀಘ್ರವಾಗಿ ಕೈಯಲ್ಲಿ ಇನ್ನೊಂದು ಧನುಸ್ಸನ್ನು ಹಿಡಿದು ನಿಂತರು. ಹೀಗೆ ದ್ರೋಣರು ಹೆದೆ ಏರಿಸಿದ ಧನುಸ್ಸೆಲ್ಲವನ್ನೂ ಹರಿತವಾದ ಬಾಣಗಳಿಂದ ಸಾತ್ಯಕಿಯು ಕತ್ತರಿಸಿದನು.

ತತೋಽಸ್ಯ ಸಂಯುಗೇ ದ್ರೋಣೋ ದೃಷ್ಟ್ವಾ ಕರ್ಮಾತಿಮಾನುಷಮ್ ।
ಯುಯುಧಾನಸ್ಯ ರಾಜೇಂದ್ರ ಮನಸೈತದಚಿಂತಯತ್ ॥ ೪೦ ॥

ಎಲೈ ರಾಜೇಂದ್ರನೇ, ಆಗ ದ್ರೋಣರು ಯುದ್ಧದಲ್ಲಿ ಸಾತ್ಯಕಿಯ ಅತಿಮಾನುಷವಾದ ಕರ್ಮವನ್ನು ನೋಡಿ ಮನಸ್ಸಿನಲ್ಲಿ ಹೀಗೆ ಚಿಂತಿಸಿದರು.

ಏತದಸ್ತ್ರಬಲಂ ರಾಮೇ ಕಾರ್ತವೀರ್ಯೇ ಧನಂಜಯೇ ।
ಭೀಷ್ಮೇ ಚ ಪುರುಷವ್ಯಾಘ್ರೇ ಸಾತ್ಯಕೇ ಚಾಶುವಿಕ್ರಮೇ ॥ ೪೧ ॥

ಈ ಅಸ್ತ್ರಬಲವು ಪರಶುರಾಮನಲ್ಲಿ, ಕಾರ್ತವೀರ್ಯನಲ್ಲಿ, ಅರ್ಜುನನಲ್ಲಿ, ಪುರುಷವ್ಯಾಘ್ರರಾದ ಭೀಷ್ಮರಲ್ಲಿಮತ್ತು ಶೀಘ್ರಪರಾಕ್ರಮಿಯಾದ ಸಾತ್ಯಕಿಯಲ್ಲಿಮಾತ್ರ ಇದೆ (ಎಂದು ಚಿಂತಿಸಿದರು).

ತಂ ಚಾಸ್ಯ ಮನಸಾ ದ್ರೋಣಃ ಪೂಜಯಾಮಾಸ ವಿಕ್ರಮಮ್ ।
ಲಾಘವಂ ವೃಷ್ಣಿವೀರಸ್ಯ ವಾಸವಸ್ಯೇವ ದೃಶ್ಯ ಸಃ ॥ ೪೨ ॥

ದ್ರೋಣರು ವೃಷ್ಣಿವೀರನಾದ ಸಾತ್ಯಕಿಯ ಇಂದ್ರನಿಗೆ ಸಮವಾದ ಕ್ಷಿಪ್ರತೆಯನ್ನು ಮತ್ತು ಪರಾಕ್ರಮವನ್ನು ನೋಡಿ ಅದನ್ನು ಮನಸ್ಸಿನಲ್ಲಿಯೇ ಗೌರವಿಸಿದರು.

ತುಷ್ಟುವುರ್ಲಾಘವಂ ತಸ್ಯ ದೇವಾಃ ಸಾಗ್ನಿಪುರೋಗಮಾಃ ।
ಸಿದ್ಧಚಾರಣಸಂಘಾಶ್ಚ ಸಾಧು ಸಾಧ್ವಿತಿ ಚುಕ್ರುಶುಃ ।
ನ ತಸ್ಯ ಲಘುತಾಮನ್ಯೇऽಲಕ್ಷಯನ್ ಶೀಘ್ರಕಾರಿಣಃ ॥ ೪೩ ॥

ಅಗ್ನಿ ಮೊದಲಾದ ದೇವತೆಗಳು ಸಾತ್ಯಕಿಯ ಕ್ಷಿಪ್ರತೆಯನ್ನು ಪ್ರಶಂಸಿಸಿದರು. ಸಿದ್ಧ-ಚಾರಣ ಸಮೂಹಗಳು ಸಾಧು-ಸಾಧು ಎಂದು ಕಿರುಚಿದವು. ಉಳಿದವರು ಶೀಘ್ರಕಾರಿಯಾದ ಅವನ ಕ್ಷಿಪ್ರತೆಯನ್ನು ಗಮನಿಸಲಿಲ್ಲ.

ದೇವಾಸ್ತು ಯುಯುಧಾನಸ್ಯ ಗಂಧರ್ವಾಶ್ಚ ವಿಶಾಂಪತೇ ।
ಸಿದ್ಧಚಾರಣಸಂಘಾಶ್ಚ ವಿದುರ್ದ್ರೋಣಸ್ಯ ಕರ್ಮ ತತ್ ॥ ೪೪ ॥

ಎಲೈ ರಾಜನೇ, ದೇವತೆಗಳು, ಗಂಧರ್ವರು ಮತ್ತು ಸಿದ್ಧ-ಚಾರಣರು ಯುಯುಧಾನನ ಮತ್ತು ದ್ರೋಣರ ಆ ಕ್ಷಿಪ್ರಕರ್ಮವನ್ನು ತಿಳಿದರು.

ತತೋऽನ್ಯದ್ ಧನುರಾದಾಯ ದ್ರೋಣಃ ಶಸ್ತ್ರಭೃತಾಂ ವರಃ ।
ಯುಯುಧಾನಂ ನರವ್ಯಾಘ್ರಂ ಯೋಧಯಾಮಾಸ ಭಾರತ ॥ ೪೫ ॥

ಎಲೈ ಭಾರತನೇ, ಆಗ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು, ನರವ್ಯಾಘ್ರನಾದ ಯುಯುಧಾನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತಸ್ಯಾಸ್ತ್ರಾಣ್ಯಸ್ತ್ರಮಾಯಾಭಿಃ ಪ್ರಹಸನ್ ಶಿನಿಪುಂಗವಃ ।
ನಿಜಘ್ನೇ ನಿಶಿತೈರ್ಬಾಣೈಃ ತದದ್ಭುತಮಿವಾಭವತ್ ॥ ೪೬ ॥

ಶಿನಿಪುಂಗವನಾದ ಸಾತ್ಯಕಿಯು ನಗುತ್ತಾ, ಅವರ ಅಸ್ತ್ರಗಳನ್ನು ತನ್ನ ಅಸ್ತ್ರಗಳ ಸಾಮರ್ಥ್ಯದಿಂದ ಹರಿತವಾದ ಬಾಣಗಳನ್ನು ಪ್ರಯೋಗಿಸಿ ನಾಶಗೊಳಿಸಿದನು. ಅದು ಅದ್ಭುತವಾಗಿದ್ದಿತು.

ತಸ್ಯಾತಿಮಾನುಷಂ ಕರ್ಮ ದೃಷ್ಟ್ವಾನ್ಯೈರಸಮಂ ರಣೇ ।
ಯುಕ್ತಂ ಯೋಗೇನ ಯೋಗಜ್ಞಾಃ ಪೂಜಯಂತಿ ಸ್ಮ ತಾವಕಾಃ ॥ ೪೭ ॥

ಇನ್ನೊಬ್ಬರಿಗೆ ಸಮವಲ್ಲದ ಅವನ ರಣರಂಗದ ಅಮಾನುಷ ಕರ್ಮವನ್ನು ನೋಡಿ ಮತ್ತು ಅಂತಹ ಯೋಗದಿಂದ ಕೂಡಿರುವುದನ್ನು ನೋಡಿ ಅಂತಹ ಕೌಶಲವನ್ನು ತಿಳಿದ ನಿನ್ನವರು ಅದನ್ನು ಪೂಜಿಸಿದರು.

ಯದಸ್ತ್ರಮಸ್ಯತಿ ದ್ರೋಣಃ ತದೇವಾಸ್ಯತಿ ಸಾತ್ಯಕಿಃ ।
ಅಸಂಭ್ರಾಂತಸ್ತದಾಚಾರ್ಯೋ ಯೋಧಯತ್ಯರಿಸೂದನಃ ॥ ೪೮ ॥

ದ್ರೋಣರು ಯಾವ ಅಸ್ತ್ರವನ್ನು ಪ್ರಯೋಗಿಸುತ್ತಾರೆಯೋ ಅದೇ ಅಸ್ತ್ರವನ್ನು ಗಾಬರಿಯಿಲ್ಲದೆ ಸಾತ್ಯಕಿಯೂ ಪ್ರಯೋಗಿಸುತ್ತಾನೆ. ಆಗ ಶತ್ರುಸೂದನರಾದ ಆಚಾರ್ಯರು ಪುನಃ ಯುದ್ಧವನ್ನು ಮಾಡಿದರು.

ತತಃ ಕ್ರುದ್ಧೋ ಮಹಾರಾಜ ಧನುರ್ವೇದಸ್ಯ ಪಾರಗಃ ।
ಆಗ್ನೇಯಂ ಯುಯುಧಾನಸ್ಯ ದಿವ್ಯಮಸ್ತ್ರಮುದೈರಯತ್ ॥ ೪೯ ॥

ಎಲೈ ಮಹಾರಾಜನೇ, ಆಗ ಧನುರ್ವೇದ ಪಾರಂಗತರಾದ ದ್ರೋಣರು ಕ್ರುದ್ಧರಾಗಿ ಸಾತ್ಯಕಿಯ ಮೇಲೆ ದಿವ್ಯವಾದ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದರು.

ತದಾಗ್ನೇಯಂ ಮಹಾರಾಜ ರಿಪುಘ್ನಮುಪಲಕ್ಷ್ಯ ಸಃ ।
ಅಸ್ತ್ರಂ ದಿವ್ಯಂ ಮಹೇಷ್ವಾಸೋ ವಾರುಣಂ ಸಮುದೈರಯತ್ ॥ ೫೦ ॥

ಎಲೈ ಮಹಾರಾಜನೇ, ದ್ರೋಣರು ಶತ್ರುನಾಶಕವಾದ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿರುವುದನ್ನು ನೋಡಿ ಮಹಾಧನುರ್ಧಾರಿಯಾದ ಸಾತ್ಯಕಿಯು ದಿವ್ಯವಾದ ವಾರುಣಾಸ್ತ್ರವನ್ನು ಪ್ರಯೋಗಿಸಿದನು.

ಹಾಹಾಕಾರೋ ಮಹಾನಾಸೀದ್ ದೃಷ್ಟ್ವಾ ದಿವ್ಯಾಸ್ತ್ರಧಾರಿಣೌ ।
ನ ಚೇರುಶ್ಚ ತದಾऽಕಾಶೇ ಭೂತಾನ್ಯಾಕಾಶಗಾನ್ಯಪಿ ॥ ೫೧ ॥

ದಿವ್ಯಾಸ್ತ್ರಧಾರಿಗಳಾದ ಅವರಿಬ್ಬರನ್ನೂ ನೋಡಿ ಲೋಕದಲ್ಲಿ ದೊಡ್ಡ ಹಾಹಾಕಾರವು ಉಂಟಾಯಿತು. ಆಗ ಆಕಾಶದಲ್ಲಿ ಪಕ್ಷಿ ಮೊದಲಾದ ಆಕಾಶ ಸಂಚಾರಿ ಪ್ರಾಣಿಗಳೂ ಸಂಚರಿಸಲಿಲ್ಲ.

ಅಸ್ತ್ರೇ ತೇ ವಾರುಣಾಗ್ನೇಯೇ ತಾಭ್ಯಾಂ ಬಾಣೈಃ ಸಮಾಹಿತೇ ।
ನ ತದಾ ವ್ಯಭಷಜ್ಯೇತೇ ವ್ಯಾವರ್ತದಥ ಭಾಸ್ಕರಃ ॥ ೫೨ ॥

ಅವರು ಬಾಣಗಳಲ್ಲಿ ಅಭಿಮಂತ್ರಿಸಿದ ವಾರುಣಾಗ್ನೇಯ ಅಸ್ತ್ರಗಳು ಪರಸ್ಪರವಾಗಿ ಸಂಧಿಸಿದವು. ಯಾವುದೂ ಹಿಂದೆ ಬರಲಿಲ್ಲ. ಆಗ ಸೂರ್ಯನು ಪಶ್ಚಿಮ ಸರಿದನು.

ತತೋ ಯುಧಿಷ್ಠಿರೋ ರಾಜಾ ಭೀಮಸೇನಶ್ಚ ಪಾಂಡವಃ ।
ನಕುಲಃ ಸಹದೇವಶ್ಚ ಪರ್ಯರಕ್ಷಂತ ಸಾತ್ಯಕಿಮ್ ॥ ೫೩ ॥

ಆಗ ರಾಜನಾದ ಯುಧಿಷ್ಠಿರನೂ, ಪಾಂಡುಪುತ್ರನಾದ ಭೀಮಸೇನನೂ, ನಕುಲ-ಸಹದೇವರೂ ಸಾತ್ಯಕಿಯನ್ನು ರಕ್ಷಿಸಿದರು.

ಧೃಷ್ಟದ್ಯುಮ್ನಮುಖೈಃ ಸಾರ್ಧಂ ವಿರಾಟಃ ಕೇಕಯೈಃ ಸಹ ।
ಮಾತ್ಸ್ಯಸಾಲ್ವೇಯಸೇನಾಶ್ಚ ದ್ರೋಣಮಭ್ಯಯುರಂಜಸಾ ॥ ೫೪ ॥

ಧೃಷ್ಟದ್ಯುಮ್ನ ಮೊದಲಾದವರ ಜೊತೆಯಲ್ಲಿ, ವಿರಾಟ ಮತ್ತು ಕೇಕಯರ ಜೊತೆಯಲ್ಲಿ ಮತ್ಸ್ಯ-ಸಾಲ್ವಸೇನೆಗಳು ದ್ರೋಣರ ಮೇಲೆ ಚೆನ್ನಾಗಿ ಎರಗಿದವು.

ದುಃಶಾಸನಂ ಪುರಸ್ಕೃತ್ಯ ರಾಜಪುತ್ರಾಃ ಸಹಸ್ರಶಃ ।
ದ್ರೋಣಮಭ್ಯವಪದ್ಯಂತ ಸಪತ್ನೈಃ ಪರಿವಾರಿತಮ್ ॥ ೫೫ ॥

ಶತ್ರುಗಳಿಂದ ಪರಿವಾರಿತರಾದ ದ್ರೋಣರನ್ನು ರಕ್ಷಿಸಲು ದುಶ್ಶಾಸನನನ್ನು ಮುಂದೆ ಮಾಡಿಕೊಂಡು ರಾಜಪುತ್ರರು ಸಹಸ್ರಸಂಖ್ಯೆಯಲ್ಲಿ ಅವರ ಸಮೀಪಕ್ಕೆ ಬಂದರು.

ತತೋ ಯುದ್ಧಮಭೂದ್ ರಾಜನ್ ತವ ತೇಷಾಂ ಚ ಧನ್ವಿನಾಮ್ ।
ರಜಸಾ ಸಂವೃತೇ ಲೋಕೇ ಶರಜಾಲಸಮಾವೃತೇ ॥ ೫೬ ॥

ಲೋಕವು ಧೂಳಿನಿಂದ ಸಂವೃತವಾಗುತ್ತಿರಲು ಮತ್ತು ಬಾಣಗಳ ಸಮೂಹದಿಂದ ಆವರಿಸಲ್ಪಡುತ್ತಿರಲು ಎಲೈ ರಾಜನೇ, ನಿನ್ನ ಮತ್ತು ಅವರ ಧನುರ್ಧಾರಿಗಳಿಗೆ ಯುದ್ಧವು ನಡೆಯಿತು.

ಸರ್ವಮಾವಿಗ್ನಮಭವನ್ನ ಪ್ರಾಜ್ಞಾಯತ ಕಿಂಚನ ।
ಸೈನ್ಯೇನ ರಜಸಾ ಧ್ವಸ್ತೇ ನಿರ್ಮರ್ಯಾದಮವರ್ತತ ॥ ೫೭ ॥

ಸೈನ್ಯದಿಂದ ಎದ್ದ ಧೂಳಿನಿಂದ ಆವೃತವಾದ ಕಾರಣದಿಂದ ಎಲ್ಲವೂ ಮಂಕಾಯಿತು. ಯಾವುದೂ ಸರಿಯಾಗಿ ಕಾಣಿಸಲಿಲ್ಲ. ಎಲ್ಲೆಯನ್ನು ಮೀರಿದ ಯುದ್ಧವು ಜರುಗಿತು.

ತೇನಾಂತರೇಣ ಪಾರ್ಥಸ್ತು ರಣೇ ಜಿತ್ವಾ ಮಹಾರಥಾನ್ ।
ಅತಿಕ್ರಾಂತಸ್ತದಾ ಯುದ್ಧಂ ಕೃತ್ವಾ ಪರ್ಯವತಿಷ್ಠವಾನ್ ॥ ೫೮ ॥

ಈ ಮಧ್ಯದಲ್ಲಿ ಅರ್ಜುನನು ಯುದ್ಧದಲ್ಲಿ ಮಹಾರಥರನ್ನು ಗೆದ್ದು ಅವರನ್ನು ದಾಟಿ ಮುಂದೆ ಹೋಗಿ ಯುದ್ಧವನ್ನು ಮಾಡುತ್ತಾ ನಿಂತನು.

ವರ್ತಮಾನೇ ತದಾ ಯುದ್ಧೇ ದ್ರೋಣಸ್ಯ ಸಹ ಪಾಂಡುಭಿಃ ।
ಪರಿವರ್ತಮಾನ ಆದಿತ್ಯೇ ತತ್ರಾಸ್ತಶಿಖರಂ ಪ್ರತಿ ॥ ೫೯ ॥

ರಜಸಾ ಕೀರ್ಯಮಾಣಾಶ್ಚ ಮಂದೀಭೂತಾಶ್ಚ ಕೌರವಾಃ ॥ ೬೦ ॥

ದ್ರೋಣರಿಗೂ ಮತ್ತು ಪಾಂಡವರಿಗೂ ಹಾಗೆ ಯುದ್ಧವು ನಡೆಯುತ್ತಿರಲು, ಆದಿತ್ಯನು ಅಸ್ತಪರ್ವತದ ಕಡೆಗೆ ಸಾಗುತ್ತಿರಲು, ಧೂಳಿನಿಂದ ಆವೃತವಾದ ಕೌರವರು ಮಂದಗತಿಯುಳ್ಳವರಾದರು.

ತಿಷ್ಠತಾಂ ಯುದ್ಧ್ಯಮಾನಾನಾಂ ಪುನರಾವರ್ತತಾಮಪಿ ।
ಜಯತಾಂ ಭಜ್ಯಮಾನಾನಾಂ ಜಗಾಮ ತದಹಃ ಶನೈಃ ॥ ೬೧ ॥

ಹೀಗೆ ನಿಲ್ಲುತ್ತಾ, ಯುದ್ಧವನ್ನು ಮಾಡುತ್ತಾ, ಪುನಃ ಹಿಂದಿರುಗುತ್ತಾ, ಜಯಗಳಿಸುತ್ತಾ, ಭಗ್ನಗೊಳ್ಳುತ್ತಾ ಆ ದಿನವು ಸಾಗಿತು.

ತಥಾ ತೇಷು ವಿಷಕ್ತೇಷು ಸೈನ್ಯೇಷು ಜಯಗೃದ್ಧಿಷು ।
ಅರ್ಜುನೋ ವಾಸುದೇವಶ್ಚ ಸೈಂಧವಾಯೈವ ಜಗ್ಮತುಃ ॥ ೬೨ ॥

ಜಯಾಕಾಂಕ್ಷಿಗಳಾದ ಸೇನೆಗಳು ಹಾಗೆ ಪರಸ್ಪರವಾಗಿ ಸಂಧಿಸುತ್ತಿರಲು ಅರ್ಜುನ ಮತ್ತು ಕೃಷ್ಣರು ಸೈಂಧವನ ಕಡೆಗೇ ಹೊರಟರು.

ರಥಮಾರ್ಗಪ್ರಮಾಣಂ ತು ಕೌಂತೇಯೋ ನಿಶಿತೈಃ ಶರೈಃ ।
ಚಕಾರ ಯಂ ಚ ಪಂಥಾನಂ ಯಯೌ ತೇನ ಜನಾರ್ದನಃ ॥ ೬೩ ॥

ಅರ್ಜುನನು ತನ್ನ ಹರಿತವಾದ ಬಾಣಗಳಿಂದ ರಥವು ಹೋಗುವಷ್ಟು ಮಾರ್ಗವನ್ನು ಬಿಡಿಸಿದನು. ಜನಾರ್ದನನು ಆ ಮಾರ್ಗದಲ್ಲಿಯೇ ರಥವನ್ನು ಮುಂದೆ ನಡೆಸಿದನು.

ಯತ್ರ ಯತ್ರ ರಥೋ ಯಾತಿ ಪಾಂಡವಸ್ಯ ಮಹಾತ್ಮನಃ ।
ತತ್ರ ತತ್ರೈವ ದೀರ್ಯಂತೇ ಸೇನಾಸ್ತವ ವಿಶಾಂಪತೇ ॥ ೬೪ ॥

ಎಲೈ ರಾಜನೇ, ಮಹಾತ್ಮನಾದ ಅರ್ಜುನನ ರಥವು ಎಲ್ಲೆಲ್ಲಿ ಹೋಗುತ್ತದೆಯೋ ಆಲ್ಲೆಲ್ಲಾನಿನ್ನ ಸೈನ್ಯವು ಭಗ್ನವಾಗುತ್ತಿದೆ.

ರಥಶಿಕ್ಷಾಂ ತು ದಾಶಾರ್ಹೋ ದರ್ಶಯಾಮಾಸ ವೀರ್ಯವಾನ್ ।
ಉತ್ತಮಾಧಮಮಧ್ಯಾನಿ ಮಂಡಲಾನಿ ವಿದರ್ಶಯನ್ ॥ ೬೫ ॥

ದಾಶಾರ್ಹನೂ, ಪರಾಕ್ರಮಶಾಲಿಯೂ ಆದ ಕೃಷ್ಣನು ರಥಮಾರ್ಗಗಳಲ್ಲಿ ಉತ್ತಮಾಧಮಮಧ್ಯಮ ಮಂಡಲಗಳನ್ನು ತೋರಿಸುತ್ತಾ, ತನ್ನ ರಥಶಿಕ್ಷಣ ಕೌಶಲವನ್ನು ತೋರಿಸಿದನು.

ತೇ ತು ನಾಮಾಂಕಿತಾ ಪೀತಾಃ ಕಾಲಜ್ವಲನಸನ್ನಿಭಾಃ ।
ಸ್ನಾಯುಬದ್ಧಾಃ ಸುಪರ್ವಾಣಃ ಪೃಥವಃ ಪ್ರಿಯದರ್ಶನಾಃ ॥ ೬೬ ॥

ವೈಣವಾಯಸ್ಮಯಶರಾಃ ಸ್ವಾಯತಾ ವಿವಿಧಾನನಾಃ ।
ರುಧಿರಂ ವಿಹಗೈಃ ಸಾರ್ಧಂ ಪ್ರಾಣಿನಾಂ ಪಪುರಾಹವೇ ॥ ೬೭ ॥

ಅರ್ಜುನನ ನಾಮಾಂಕಿತವಾದ, ನೀರನ್ನು ಕುಡಿಸಿ ಹದಮಾಡಿದ, ಕಾಲಾಗ್ನಿಯ ಕಾಂತಿಯುಳ್ಳ, ಸ್ನಾಯುಬದ್ಧವಾದ, ಒಳ್ಳೆಯ ಅಲುಗುಳ್ಳ, ವಿಸ್ತಾರವಾದ, ಮನೋಹರವಾದ, ಬಿದಿರು ಮತ್ತು ಕಬ್ಬಿಣದಿಂದ ಮಾಡಿದ ದಂಡವುಳ್ಳ ಅಗಲವಾದ, ವಿವಿಧವಾದ ಮುಖವುಳ್ಳ ಬಾಣಗಳು ಪಕ್ಷಿಗಳ ಜೊತೆಯಲ್ಲಿ ರಣರಂಗದಲ್ಲಿ ಪ್ರಾಣಿಗಳ ರಕ್ತವನ್ನು ಪಾನ ಮಾಡಿದವು.

ರಥಸ್ಥಿತೋಽಗ್ರತಃ ಕ್ರೋಶೇ ಯಾನಸ್ಯತ್ಯರ್ಜುನಃ ಶರಾನ್ ।
ರಥೇ ಕ್ರೋಶಮತಿಕ್ರಾಂತೇ ತಸ್ಯ ತೇ ಘ್ನಂತಿ ಶಾತ್ರವಾನ್ ॥ ೬೮ ॥

ಅರ್ಜುನನು ರಥದಲ್ಲಿ ಕುಳಿತು ಪ್ರಯೋಗಿಸಿದ ಬಾಣಗಳು ಅರ್ಜುನನ ರಥವು ಮುಂದೆ ಹೋದಮೇಲೆ ಹಿಂದೆ ಒಂದು ಕ್ರೋಶದೂರದಲ್ಲಿ ಶತ್ರುಗಳನ್ನು ಕೊಲ್ಲುತ್ತಿದ್ದವು. (ಅರ್ಜುನನ ಬಾಣಗಳ ವೇಗಕ್ಕಿಂತ ಕೃಷ್ಣನು ನಡೆಸುವ ರಥದ ವೇಗವು ಅತ್ಯಂತ ಅಧಿಕವಾದುದು ಎಂದು ಅಭಿಪ್ರಾಯ).

ತಾರ್ಕ್ಷ್ಯಮಾರುತರಂಹೋಭ್ರವಾಜಿಭಃ ಸಾಧುವಾಹಿಭಃ ।
ಯಥಾಽಗಚ್ಛದ್ ಹೃಷೀಕೇಶಃ ಕೃತ್ಸ್ನಂ ವಿಸ್ಮಾಪಯನ್ ಜಗತ್ ॥ ೬೯ ॥

ನ ತಥಾ ಗಚ್ಛತಿ ರಥಃ ತಪನಸ್ಯ ವಿಶಾಂಪತೇ ।
ನ ಶಕ್ರಸ್ಯ ನ ರುದ್ರಸ್ಯ ನ ಚ ವೈಶ್ರವಣಸ್ಯ ಚ ॥ ೭೦ ॥

ಗರುಡ ವೇಗ ಮತ್ತು ವಾಯುವೇಗವುಳ್ಳ ಚೆನ್ನಾಗಿ ಎಳೆಯುವ ಅಶ್ವಗಳನ್ನು ಹೂಡಿದ ಕೃಷ್ಣನ ರಥವು ಜಗತ್ತನ್ನು ವಿಸ್ಮಯಗೊಳಿಸುತ್ತಾ ಹೇಗೆ ಸಾಗಿತೋ ಹಾಗೆ ಎಲೈ ರಾಜನೇ, ಸೂರ್ಯನ ರಥವಾಗಲೀ, ಇಂದ್ರನ ರಥವಾಗಲೀ, ರುದ್ರ ರಥವಾಗಲೀ, ಕುಬೇರನ ರಥವಾಗಲೀ ಎಂದೂ ಹೋಗುವುದಿಲ್ಲ.

ನಾನ್ಯಸ್ಯ ಸಮರೇ ರಾಜನ್ ಗತಪೂರ್ವಸ್ತಥಾ ರಥಃ ।
ಯಥಾ ಯಯಾವರ್ಜುನಸ್ಯ ಮನೋಽಭಿಪ್ರಾಯಶೀಘ್ರಗಃ ॥ ೭೧ ॥

ಎಲೈ ರಾಜನೇ, ಅರ್ಜುನನ ರಥವು ಹೇಗೆ ಮನೋವೇಗಕ್ಕಿಂತಲೂ ಶೀಘ್ರವಾಗಿ ಸಂಚರಿಸಿತೋ ಹಾಗೆ ಯುದ್ಧದಲ್ಲಿ ಇನ್ನೊಬ್ಬರ ರಥವು ಇದಕ್ಕಿಂತ ಮೊದಲು ಎಂದೂ ಚಲಿಸಲಿಲ್ಲ.

ಪ್ರವಿಶ್ಯ ತು ರಣೇ ರಾಜನ್ ಕೇಶವಃ ಪರವೀರಹಾ ।
ಸೇನಾಮಧ್ಯೇ ಹಯಾಂಸ್ತೂರ್ಣಂ ಚೋದಯಾಮಾಸ ಭಾರತ ॥ ೭೨ ॥

ಎಲೈ ರಾಜನೇ, ಪರವೀರಘಾತಕನಾದ ಕೇಶವನು ನಿನ್ನ ಸೈನ್ಯವನ್ನು ಪ್ರವೇಶಿಸಿ ಸೇನೆಯ ಮಧ್ಯದಲ್ಲಿ ತನ್ನ ರಥದ ಅಶ್ವಗಳನ್ನು ಶೀಘ್ರವಾಗಿ ಪ್ರಚೋದಿಸಿದನು.

ತತಸ್ತಸ್ಯ ರಥೌಘಸ್ಯ ಮಧ್ಯಂ ಪ್ರಾಪ್ಯ ಹಯೋತ್ತಮಾಃ ।
ಕೃಚ್ಛ್ರೇಣ ರಥಮೂಹುಸ್ತೇ ಕ್ಷುತ್ಪಿಪಾಸಾಶ್ರಮಾನ್ವಿತಾಃ ॥ ೭೩ ॥

ಆಗ ರಥ ಸಮೂಹದ ಮಧ್ಯವನ್ನು ಪ್ರವೇಶಿಸಿದ ಅವನ ಶ್ರೇಷ್ಠವಾದ ಅಶ್ವಗಳು ಹಸಿವು, ಬಾಯಾರಿಕೆಗಳಿಂದ ಬಳಲಿ ಕಷ್ಟದಿಂದ ರಥವನ್ನು ಮುಂದೆ ಎಳೆದವು.

ಕ್ಷತಾಶ್ಚ ಬಹುಭಿಃ ಶಸ್ತ್ರೈರ್ಯುದ್ಧಶೌಂಡೈರನೇಕಶಃ ।
ಮಂಡಲಾನಿ ವಿಚಿತ್ರಾಣಿ ವಿಚೇರುಸ್ತೇ ಮುಹುರ್ಮುಹುಃ ॥ ೭೪ ॥

ಯುದ್ಧವಿಶಾರದರಾದ ಅನೇಕರಿಂದ ಅನೇಕ ರೀತಿಯಲ್ಲಿ ಗಾಯಗೊಂಡ ಅವು ವಿಚಿತ್ರವಾದ ಮಂಡಲಗಳಲ್ಲಿ ಮತ್ತೆ ಮತ್ತೆ ಸಂಚರಿಸಿದವು.

ಹತಾನಾಂ ವಾಜಿನಾಗಾನಾಂ ರಥಾನಾಂ ಚ ನರೈಃ ಸಹ ।
ಉಪರಿಷ್ಟಾದತಿಕ್ರಾಂತಾಃ ಶೈಲಾಭಾನಾಂ ಸಹಸ್ರಶಃ ॥ ೭೫ ॥

ಅವು ಸಹಸ್ರ ಸಂಖ್ಯೆಯಲ್ಲಿ ಮೃತವಾಗಿ ಬಿದ್ದಿದ್ದ ಅಶ್ವಗಳ, ಪರ್ವತ ಪ್ರಾಯವಾದ ಗಜಗಳ, ರಥಗಳ ಮತ್ತು ಪದಾತಿಗಳ ಮೇಲೆ ತಿರುಗಾಡಿದವು.

ಶ್ರಮೇಣ ಮಹತಾ ಯುಕ್ತಾಸ್ತೇ ಹಯಾ ವಾತರಂಹಸಃ ।
ಮಂದವೇಗಗತಾ ರಾಜನ್ ಸಂವೃತ್ತಾಸ್ತತ್ರ ಸಂಯುಗೇ ॥ ೭೬ ॥

ಎಲೈ ರಾಜನೇ, ವಾಯುವೇಗವುಳ್ಳ ಆ ಅಶ್ವಗಳು ತುಂಬ ಶ್ರಮದಿಂದ ಕೂಡಿದವುಗಳಾಗಿ ರಣರಂಗದಲ್ಲಿ ಮಂದಗತಿಯುಳ್ಳವುಗಳಾದವು.

ಏತಸ್ಮಿನ್ನಂತರೇ ವೀರಾವಾವಂತ್ಯೌ ಭ್ರಾತರೌ ನೃಪ ।
ಸಹಸೈನ್ಯೌ ತಮಾರ್ಚ್ಛೇತಾಂ ಪಾಂಡವಂ ಕ್ಲಾಂತವಾಹನಮ್ ॥ ೭೭ ॥

ಎಲೈ ರಾಜನೇ, ಈ ಮಧ್ಯದಲ್ಲಿ ಅವಂತಿದೇಶದ ವೀರರಾದ ಸಹೋದರರು ತಮ್ಮ ಸೈನ್ಯದ ಜೊತೆಯಲ್ಲಿ ದಣಿದ ವಾಹನವುಳ್ಳ ಅರ್ಜುನನನ್ನು ಎದುರಿಸಿ ಯುದ್ಧವನ್ನು ಮಾಡಿದರು.

ತಾವರ್ಜುನಂ ಚತುಃಷಷ್ಟ್ಯಾ ಸಪ್ತತ್ಯಾ ಚ ಜನಾರ್ದನಮ್ ।
ಶರಾಣಾಂ ಚ ಶತೇನಾಶ್ವಾನವಿದ್ಧ್ಯೇತಾಂ ಮುದಾऽನ್ವಿತೌ ॥ ೭೮ ॥

ಅವರು ಅರ್ಜುನನನ್ನು ಅರವತ್ನಾಲ್ಕು ಬಾಣಗಳಿಂದಲೂ, ಕೃಷ್ಣನನ್ನು ಎಪ್ಪತ್ತು ಬಾಣಗಳಿಂದಲೂ, ಅಶ್ವಗಳನ್ನು ನೂರು ಬಾಣಗಳಿಂದಲೂ ಸಂತೋಷಯುಕ್ತರಾಗಿ ಹೊಡೆದರು.

ತಾವರ್ಜುನೋ ಮಹಾರಾಜ ನವಭಿರ್ನತಪರ್ವಭಿಃ ।
ಆಜಘಾನ ರಣೇ ಕ್ರುದ್ಧೋ ಮರ್ಮಜ್ಞೋ ಮರ್ಮಭೇದಿಭಿಃ ॥ ೭೯ ॥

ಮರ್ಮಜ್ಞನಾದ ಅರ್ಜುನನು ಎಲೈ ಮಹಾರಾಜನೇ, ಅವರಿಬ್ಬರ ಮೇಲೆಯೂ ಮರ್ಮಭೇದಿಗಳಾದ, ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ತತಸ್ತೌ ತು ಶರೌಘೇಣ ಬೀಭತ್ಸುಂ ಸಹಕೇಶವಮ್ ।
ಛಾದಯೇತಾಂ ಸುಸಂರಬ್ಧೌ ಸಿಂಹನಾದಂ ಚ ಚಕ್ರತುಃ ॥ ೮೦ ॥

ಆಗ ಅವರಿಬ್ಬರೂ ಬಹಳ ಕೋಪಗೊಂಡು ಕೃಷ್ಣಾರ್ಜುನರನ್ನು ತಮ್ಮ ಶರ ಸಮೂಹಗಳಿಂದ ಮುಚ್ಚಿ ಸಿಂಹನಾದವನ್ನು ಮಾಡಿದರು.

ತಯೋಸ್ತು ಧನುಷೀ ಚಿತ್ರೇ ಭಲ್ಲಾಭ್ಯಾಂ ಶ್ವೇತವಾಹನಃ ।
ಚಿಚ್ಛೇದ ಸಮರೇ ತೂರ್ಣಂ ಭೂಯ ಏವ ಧನಂಜಯಃ ।
ಅಥಾನ್ಯೈರ್ವಿಶಿಖೈಸ್ತೂರ್ಣಂ ಧ್ವಜೌ ಚ ಕನಕೋಜ್ಜ್ವಲೌ ॥ ೮೧ ॥

ಶ್ವೇತವಾಹನನಾದ ಅರ್ಜುನನು ಅವರ ವಿಚಿತ್ರವಾದ ಧನುಸ್ಸುಗಳನ್ನು ಎರಡು ಭಲ್ಲದಿಂದ ಪುನಃ ಶೀಘ್ರವಾಗಿ ಕತ್ತರಿಸಿದನು. ಅನಂತರ ಬೇರೆ ಬಾಣಗಳಿಂದ ರಣರಂಗದಲ್ಲಿ ಅವರ ಕನಕೋಜ್ವಲವಾದ ಧ್ವಜವನ್ನು ಕತ್ತರಿಸಿದನು.

ಅಥಾನ್ಯೇ ಧನುಷೀ ರಾಜನ್ ಪ್ರಗೃಹ್ಯ ಸಮರೇ ತದಾ ।
ಪಾಂಡವಂ ಭೃಶಸಂಕ್ರುದ್ಧಾವರ್ದಯಾಮಾಸತುಃ ಶರೈಃ ॥ ೮೨ ॥

ಎಲೈ ರಾಜನೇ, ಆಗ ಅವರಿಬ್ಬರೂ ಇನ್ನೂ ಬಹಳ ಕೋಪಗೊಂಡು, ಬೇರೆ ಧನುಸ್ಸುಗಳನ್ನು ಹಿಡಿದು ರಣರಂಗದಲ್ಲಿ ತಮ್ಮ ಬಾಣಗಳಿಂದ ಅರ್ಜುನನನ್ನು ಹಿಂಸಿಸಿದರು.

ತೌ ತು ಶಸ್ತ್ರಭೃತಾಂ ಶ್ರೇಷ್ಠಃ ಶರೈಃ ಸಂತಾಡ್ಯ ಭಾರತ ।
ಧನುಷೀ ಚಿಚ್ಛಿದೇ ತೂರ್ಣಂ ಭೂಯ ಏವ ಧನಂಜಯಃ ॥ ೮೩ ॥

ಎಲೈ ಭಾರತನೇ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಧನಂಜಯನು ಅವರಿಬ್ಬರನ್ನೂ ತನ್ನ ಬಾಣಗಳಿಂದ ಹೊಡೆದು ಪುನಃ ಅವರ ಧನುಸ್ಸುಗಳನ್ನು ಶೀಘ್ರವಾಗಿ ಕತ್ತರಿಸಿದನು.

ಅಥಾನ್ಯೈರ್ದಶಭಿಸ್ತೂರ್ಣಂ ಹೇಮಪುಂಖೈಃ ಶಿಲಾಶಿತೈಃ ।
ಜಘಾನಾಶ್ವಾಂಸ್ತಥಾ ಸೂತಂ ಪಾರ್ಷ್ಣಿಂ ಚ ಸಪದಾನುಗಮ್ ॥ ೮೪ ॥

ಅನಂತರ ಹೇಮಪುಂಖವನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಬೇರೆ ಹತ್ತು ಬಾಣಗಳಿಂದ ಅವರ ಸೂತರನ್ನೂ, ಸಹಾಯಕರನ್ನೂ ಮತ್ತು ಹಿಂಬಾಲಕರನ್ನೂ ಮತ್ತು ಅಶ್ವಗಳನ್ನೂ ಹೊಡೆದನು.

ಜ್ಯೇಷ್ಠಸ್ಯ ತು ಕ್ಷುರಪ್ರೇಣ ಶಿರಃ ಕಾಯಾನ್ನ್ಯಕೃಂತತ ।
ಸ ಪಪಾತ ಹತಃ ಪೃಥ್ವ್ಯಾಂ ವಾತರುಗ್ಣ ಇವ ದ್ರುಮಃ ॥ ೮೫ ॥

ಅರ್ಜುನನು ಅವರಲ್ಲಿ ಅಣ್ಣನ ಶಿರಸ್ಸನ್ನು ಕ್ಷುರಪ್ರದಿಂದ ಕತ್ತರಿಸಿದನು. ಅವನು ಬಿರುಗಾಳಿಗೆ ಭಗ್ನವಾದ ವೃಕ್ಷದಂತೆ ಮೃತನಾಗಿ ಭೂಮಿಯ ಮೇಲೆ ಬಿದ್ದನು.

ವಿಂದಂ ತು ನಿಹತಂ ದೃಷ್ಟ್ವಾ ಅನುವಿಂದಃ ಪ್ರತಾಪವಾನ್ ।
ಹತಾಶ್ವಂ ರಥಮುತ್ಸೃಜ್ಯ ಗದಾಂ ಗೃಹ್ಯ ಮಹಾಬಲಃ ॥ ೮೬ ॥

ಅಭ್ಯದ್ರವತ ಸಂಗ್ರಾಮೇ ಭ್ರಾತುರ್ವಧಮನುಸ್ಮರನ್ ।
ಗದಯಾ ಗದಿನಾಂ ಶ್ರೇಷ್ಠೋ ನೃತ್ಯನ್ನಿವ ಮಹಾರಥಃ ॥ ೮೭ ॥

ಅಣ್ಣನಾದ ವಿಂದನು ಹತನಾದುದನ್ನು ನೋಡಿ, ಪ್ರತಾಪಶಾಲಿಯೂ, ಮಹಾಬಲನೂ, ಮಹಾರಥನೂ ಆದ ಅನುವಿಂದನು ಅಶ್ವಗಳು ಮೃತವಾದ ರಥವನ್ನು ಬಿಟ್ಟು ಗದಾಧರರಲ್ಲಿ ಶ್ರೇಷ್ಠನಾದ ಅವನು ಗದೆಯನ್ನು ಹಿಡಿದು, ಅಣ್ಣನ ಮರಣವನ್ನು ಸ್ಮರಿಸುತ್ತಾ ನೃತ್ಯವನ್ನು ಮಾಡುವವನಂತೆ ರಣರಂಗದಲ್ಲಿ ಅರ್ಜುನನ ಮೇಲೆ ಮುನ್ನುಗ್ಗಿದನು.

ಅನುವಿಂದಃ ಸ ಗದಯಾ ಲಲಾಟೇ ಮಧುಸೂದನಮ್ ।
ಸ್ಪೃಷ್ಟ್ವಾ ನಾಕಂಪಯತ್ ಕ್ರುದ್ಧೋ ಮೈನಾಕಮಿವ ಪರ್ವತಮ್ ॥೮೮॥

ಅನುವಿಂದನು ಕ್ರುದ್ಧನಾಗಿ ಕೃಷ್ಣನನ್ನು ತನ್ನ ಗದೆಯಿಂದ ಕ್ರುದ್ಧನಾಗಿ ಲಲಾಟದಲ್ಲಿ (ಹಣೆ) ಹೊಡೆದರೂ ಮೈನಾಕ ಪರ್ವತದಂತಿದ್ದ ಅವನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.

ತತ್ರಾರ್ಜುನಃ ಶರೈಃ ಷಡ್ಭಿಃ ಗ್ರೀವಾಂ ಪಾದೌ ಭುಜೌ ಶಿರಃ ।
ನಿಚಕರ್ತ ಸ ತು ಚ್ಛಿನ್ನಃ ಪಪಾತಾದ್ರಿಚಯೋ ಯಥಾ ॥ ೮೯ ॥

ಆಗ ಅರ್ಜುನನು ಆರು ಬಾಣಗಳಿಂದ ಅವನ ಕತ್ತನ್ನೂ, ಪಾದಗಳನ್ನೂ, ಭುಜಗಳನ್ನೂ ಮತ್ತು ಶಿರಸ್ಸನ್ನೂ ಕತ್ತರಿಸಿದನು. ಆಗ ಅನುವಿಂದನು ಹೀಗೆ ಕತ್ತರಿಸಲ್ಪಟ್ಟು ಪರ್ವತ ಸಮೂಹದಂತೆ ಭೂಮಿಯ ಮೇಲೆ ಬಿದ್ದನು.

ತತಸ್ತೌ ನಿಹತೌ ದೃಷ್ಟ್ವಾ ತಯೋ ರಾಜನ್ ಪದಾನುಗಾಃ ।
ಅಭ್ಯದ್ರವಂತ ಸಂಕ್ರುದ್ಧಾಃ ಕಿರಂತಃ ಶತಶಃ ಶರಾನ್ ॥ ೯೦ ॥

ಎಲೈ ರಾಜನೇ, ಅವರಿಬ್ಬರೂ ಹತರಾದುದನ್ನು ನೋಡಿ ಅವರ ಅನುಯಾಯಿಗಳು ಕೋಪಗೊಂಡು ನೂರರ ಸಂಖ್ಯೆಯಲ್ಲಿ ಬಾಣಗಳನ್ನು ಪ್ರಯೋಗಿಸುತ್ತಾ ಓಡಿ ಹೋದರು.

ತಾನರ್ಜುನಃ ಶರೈಸ್ತೂರ್ಣಂ ನಿಹತ್ಯ ಭರತರ್ಷಭ ।
ವ್ಯರೋಚತ ಯಥಾ ವಹ್ನಿರ್ದಾವಂ ದಗ್ಧ್ವಾ ಹಿಮಾತ್ಯಯೇ ॥ ೯೧ ॥

ಎಲೈ ಭರತರ್ಷಭನೇ, ಅರ್ಜುನನು ಅವರನ್ನು ಶೀಘ್ರವಾಗಿ ತನ್ನ ಬಾಣಗಳಿಂದ ಕೊಂದು ಹಿಮಕಾಲವು ಕಳೆದ ಮೇಲೆ ವನವನ್ನು ಸುಟ್ಟ ಅಗ್ನಿಯಂತೆ ಶೋಭಿಸಿದನು.

ತಯೋಃ ಸೇನಾಮತಿಕ್ರಮ್ಯ ಕೃಚ್ಛ್ರಾನ್ನಿಷ್ಣನ್ ಧನಂಜಯಃ ।
ವಿಬಭೌ ಜಲದಾನ್ ಹಿತ್ವಾ ದಿವಾಕರ ಇವೋದಿತಃ ॥ ೯೨ ॥

ಆವರಿಬ್ಬರ ಸೈನ್ಯವನ್ನು ದಾಟಿ ಧನಂಜಯನು ಕಷ್ಟದಿಂದ ಅವರನ್ನು ಕೊಲ್ಲುತ್ತಾ ಮೇಘವನ್ನು ಬಿಟ್ಟುಮೇಲಕ್ಕೆ ಎದ್ದ ಸೂರ್ಯನಂತೆ ಶೋಭಿಸಿದನು.

ತಂ ದೃಷ್ಟ್ವಾ ಕುರವಸ್ತ್ರಸ್ತಾಃ ಪ್ರಹೃಷ್ಟಾಶ್ಚಾಭವನ್ ಪುನಃ ।
ಅಭ್ಯದ್ರವಂತ ಪಾರ್ಥಂ ಚ ಸಮಂತಾದ್ ಭರತರ್ಷಭ ॥ ೯೩ ॥

ಅವನನ್ನು ನೋಡಿ ಕುರುಗಳು ಹೆದರಿದರು ಮತ್ತು ಪುನಃ ಹರ್ಷಗೊಂಡರು (ಅರ್ಜುನನ ಪರಾಕ್ರಮವನ್ನು ಸ್ಮರಿಸಿ ಭಯ ಮತ್ತು ಅರ್ಜುನನ ಶ್ರಮವನ್ನು ನೋಡಿ ಪ್ರಹರ್ಷ ಎಂದು ಅಭಿಪ್ರಾಯ). ಅವರು ಎಲ್ಲಕಡೆಗಳಿಂದಲೂ ಅರ್ಜುನನ ಮೇಲೆ ನುಗ್ಗಿದರು.

ಶ್ರಾಂತಂ ಚೈನಂ ಸಮಾಲಕ್ಷ್ಯ ಜ್ಞಾತ್ವಾ ದೂರೇ ಚ ಸೈಂಧವಮ್ ।
ಸಿಂಹನಾದೇನ ಮಹತಾ ಸರ್ವತಃ ಪರ್ಯವಾರಯನ್ ॥ ೯೪ ॥

ಅವನು ದಣಿದಿರುವುದನ್ನು ಗಮನಿಸಿ, ಸೈಂಧವನು ದೂರದಲ್ಲಿದ್ದಾನೆಂದು ತಿಳಿದು ಅವರು ದೊಡ್ಡ ಸಿಂಹನಾದವನ್ನು ಮಾಡಿ ಎಲ್ಲ ಕಡೆಗಳಿಂದಲೂ ಅವನನ್ನು ಸುತ್ತುವರಿದರು.

ತಾಂಸ್ತು ದೃಷ್ಟ್ವಾ ಸುಸಂರಬ್ಧಾನ್ ಉತ್ಥಾಯನ್ ಪುರುಷರ್ಷಭಃ ।
ಶನಕೈರಿವ ದಾಶಾರ್ಹಮರ್ಜುನೋ ವಾಕ್ಯಮಬ್ರವೀತ್ ॥ ೯೫ ॥

ಪುರುಷಶ್ರೇಷ್ಠನಾದ ಅರ್ಜುನನು ಅವರು ಸುಟ್ಟುಗೊಂಡಿರುವುದನ್ನು ನೋಡಿ ನಗುತ್ತಾ, ಕೃಷ್ಣನನ್ನು ಕುರಿತು ಮೆಲ್ಲನೆ ಮಾತನಾಡಿದನು.

ಶರಾರ್ದಿತಾಶ್ಚ ಕ್ಲಾಂತಾಶ್ಚ ಹಯಾ ದೂರೇ ಚ ಸೈಂಧವಃ ।
ಕಿಮಿಹಾನಂತರಂ ಕಾರ್ಯಂ ಜ್ಯಾಯಿಷ್ಠಂ ತವ ರೋಚತೇ ॥ ೯೬ ॥

ಬ್ರೂಹಿ ಕೃಷ್ಣ ಯಥಾತತ್ತ್ವಂ ತ್ವಂ ಹಿ ಪ್ರಾಜ್ಞತಮಃ ಸದಾ ।
ಭವನ್ನೇತ್ರಾ ರಣೇ ಶತ್ರೂನ್ ವಿಜೇಷ್ಯಂತಿ ಹಿ ಪಾಂಡವಾಃ ॥ ೯೭ ॥

ಮಮ ತ್ವನಂತರಂ ಕೃತ್ಯಂ ಯದ್ವೈತತ್ ಸನ್ನಿಬೋಧ ಮೇ ।
ಹಯಾನ್ ವಿಮುಚ್ಯ ಹಿ ಸುಖಂ ವಿಶಲ್ಯಾನ್ ಕುರು ಮಾಧವ ॥ ೯೮ ॥

ನನ್ನ ಕುದುರೆಗಳು ಬಾಣಗಳಿಂದ ಗಾಯಗೊಂಡು ವ್ಯಥೆಗೊಂಡಿವೆ ಮತ್ತು ದಣಿದಿವೆ. ಸೈಂಧವನು ದೂರದಲ್ಲಿದ್ದಾನೆ. ನಿನಗೆ ನಾನು ಏನು ಮಾಡುವುದು ಒಳ್ಳೆಯದೆಂದು ತೋರುತ್ತದೆ? ಕೃಷ್ಣನೇ, ಅದನ್ನು ಸರಿಯಾಗಿ ಹೇಳು. ನೀನು ಯಾವಾಗಲೂ ಬಹಳ ವಿವೇಕಿಯಾದವನು. ನಿನ್ನನ್ನು ನಾಯಕನನ್ನಾಗಿ ಹೊಂದಿ ಪಾಂಡವರು ಶತ್ರುಗಳನ್ನು ಗೆಲ್ಲುವರು. ನಾನು ಸದ್ಯದಲ್ಲಿಮಾಡಬೇಕಾದ ಕಾರ್ಯವೇನು ಎಂದು ನನಗೆ ಚೆನ್ನಾಗಿ ಹೇಳು. ಎಲೈ ಮಾಧವನೇ, ಕುದುರೆಗಳನ್ನು ರಥದಿಂದ ಸುಖವಾಗಿ ಬಿಡಿಸಿ ಅವುಗಳಿಗೆ ಚುಚ್ಚಿರುವ ಬಾಣಗಳನ್ನು ತೆಗೆದು ಸಮಾಧಾನಗೊಳಿಸು.

ಏವಮುಕ್ತಸ್ತು ಪಾರ್ಥೇನ ಕೇಶವಃ ಪ್ರತ್ಯುವಾಚ ತಮ್ ।
ಮಮಾಪ್ಯೇತನ್ಮತಂ ಪಾರ್ಥ ಯದಿದಂ ತೇ ಪ್ರಭಾಷಿತಮ್ ॥ ೯೯ ॥

ಹೀಗೆ ಅರ್ಜುನನಿಂದ ಹೇಳಲ್ಪಟ್ಟ ಕೇಶವನು- ಎಲೈ ಅರ್ಜುನನೇ, ನೀನು ಆಡಿದ ಮಾತುಗಳು ನನಗೂ ಸಮ್ಮತವಾಗಿವೆ ಎಂದು ಉತ್ತರವನ್ನು ಕೊಟ್ಟನು.

ಅರ್ಜುನಃ

ಅಹಂ ಹಿ ವಾರಯಿಷ್ಯಾಮಿ ಸರ್ವಸೈನ್ಯಾನಿ ಕೇಶವ ।
ತ್ವಮಪ್ಯತ್ರ ಯಥಾನ್ಯಾಯಂ ಕುರು ಕಾರ್ಯಮನಂತರಮ್ ॥ ೧೦೦ ॥

ಅರ್ಜುನ– ಎಲೈ ಕೇಶವನೇ, ನಾನು ಕೌರವರ ಎಲ್ಲಸೈನ್ಯವನ್ನೂ ತಡೆಯುವೆನು. ನೀನು ಶಾಸ್ತ್ರೋಕ್ತ ರೀತಿಯಿಂದ ಮಾಡಬೇಕಾದ ಕಾರ್ಯವನ್ನು ಮಾಡು.

ಸಂಜಯಃ

ಸೋಽವತೀರ್ಯ ರಥೋಪಸ್ಥಾದ್ ಅಸಂಭ್ರಾಂತೋ ಧನಂಜಯಃ ।
ಗಾಂಡೀವಂ ಧನುರಾದಾಯ ತಸ್ಥೌ ಗಿರಿರಿವಾಚಲಃ ॥ ೧೦೧ ॥

ಸಂಜಯ– ಧನಂಜಯನು ರಥಪೀಠದಿಂದ ಇಳಿದು ಗಾಬರಿ ಇಲ್ಲದೆ ಗಾಂಡೀವ ಧನುಸ್ಸನ್ನು ಹಿಡಿದು ಪರ್ವತದಂತೆ ನಿಂತನು.

ತಮಭ್ಯಧಾವನ್ ಕ್ರೋಶಂತಃ ಕ್ಷತ್ರಿಯಾ ಜಯಕಾಂಕ್ಷಿಣಃ ।
ಇದಂ ಚ್ಛಿದ್ರಮಿತಿ ಜ್ಞಾತ್ವಾ ಧರಣೀಸ್ಥಂ ಧನಂಜಯಮ್ ॥ ೧೦೨ ॥

ಅರ್ಜುನನು ಭೂಮಿಯ ಮೇಲೆ ನಿಂತಿರುವುದನ್ನು ನೋಡಿ ಇದೇ ಅವಕಾಶವೆಂದು ತಿಳಿದು ಜಯಾಕಾಂಕ್ಷಿಗಳಾದ ಕ್ಷತ್ರಿಯರು ಸಿಂಹನಾದವನ್ನು ಮಾಡುತ್ತಾ ಅವನ ಮೇಲೆ ನುಗ್ಗಿದರು.

ತ ಏನಂ ರಥವಂಶೇನ ಸಮಂತಾತ್ ಪರ್ಯವಾರಯನ್ ॥ ೧೦೩ ॥

ವಿಕರ್ಷಂತಶ್ಚ ತೇ ಚಾಪಾನ್ ವಿಸೃಜಂತಶ್ಚ ಸಾಯಕಾನ್ ।
ವಿಚಿತ್ರಾಣಿ ಚ ಶಸ್ತ್ರಾಣಿ ಕ್ರುದ್ಧಾಸ್ತತ್ರ ವ್ಯದರ್ಶಯನ್ ॥ ೧೦೪ ॥

ಅವರು ತಮ್ಮ ರಥಸಮೂಹಗಳಿಂದ ಅವನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು. ಅವರು ತಮ್ಮ ಬಿಲ್ಲುಗಳನ್ನು ಎಳೆದು ಬಾಣಗಳನ್ನು ಪ್ರಯೋಗಿಸುತ್ತಾ ಕೋಪಗೊಂಡು ತಮ್ಮ ವಿಚಿತ್ರ ಶಸ್ತ್ರಗಳನ್ನು ಪ್ರದರ್ಶಿಸಿದರು.

ಛಾದಯಂತಃ ಶರೈಃ ಪಾರ್ಥಂ ಮೇಘಾ ಇವ ದಿವಾಕರಮ್ ।
ಆದ್ರವಂಶ್ಚಾಪಿ ವೇಗೇನ ಕ್ಷತ್ರಿಯಾ ಕ್ಷತ್ರಿಯರ್ಷಭಮ್ ।
ರಥಸಿಂಹಂ ರಥೋದಾರಾಃ ಸಿಂಹಂ ಮತ್ತಾ ಇವ ದ್ವಿಪಾಃ ॥ ೧೦೫ ॥

ಮೋಡಗಳು ಸೂರ್ಯನನ್ನು ಮುಚ್ಚುವಂತೆ ತಮ್ಮ ಬಾಣಗಳಿಂದ ಅರ್ಜುನನನ್ನು ಮುಚ್ಚುತ್ತಾ ರಥಶ್ರೇಷ್ಠರಾದ ಕ್ಷತ್ರಿಯರಾದ ಅವರು ಕ್ಷತ್ರಿಯಶ್ರೇಷ್ಠನಾದ, ರಥಸಿಂಹನಾದ ಅರ್ಜುನನ ಮೇಲೆ ಮದಗಜಗಳು ಸಿಂಹದ ಮೇಲೆ ಎರಗುವಂತೆ ವೇಗದಿಂದ ಎರಗಿದರು.

ತತ್ರ ಪಾರ್ಥಸ್ಯ ಭುಜಯೋರ್ಮಹದ್ ಬಲಮದೃಶ್ಯತ ।
ಯತ್ ಕ್ರುದ್ಧಾ ಬಹವಃ ಸೇನಾಃ ಸರ್ವತಃ ಪರ್ಯವಾರಯತ್ ॥

ಕ್ರುದ್ಧರಾದ ಅನೇಕ ಸೈನ್ಯಗಳು ಎಲ್ಲ ಕಡೆಗಳಿಂದಲೂ ಅರ್ಜುನನನ್ನು ಮುತ್ತಿದಾಗ ಅರ್ಜುನನ ಭುಜಗಳ ದೊಡ್ಡ ಬಲವು ಕಂಡುಬಂದಿತು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ದ್ವಿಷತಾಂ ಸರ್ವತೋ ವಿಭುಃ ।
ಇಷುಭಿರ್ಬಹುಭಿಸ್ತೂರ್ಣಂ ಸರ್ವಾನೇವ ಸಮಾವೃಣೋತ್ ॥ ೧೦೭ ॥

ವಿಭುವಾದ ಅರ್ಜುನನು ಶತ್ರುಗಳ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ನಿವಾರಿಸಿ, ತಾನು ಪ್ರಯೋಗಿಸಿದ ಅನೇಕ ಬಾಣಗಳಿಂದ ಎಲ್ಲರನ್ನೂ ಮುಚ್ಚಹಾಕಿದನು.

ತತ್ರಾಂತರಿಕ್ಷೇ ಬಾಣಾನಾಂ ಪ್ರಗಾಢಾನಾಂ ವಿಶಾಂಪತೇ ।
ಸಂಘರ್ಷೇಣ ಮಹಾರ್ಚಿಷ್ಮಾನ್ ಪಾವಕಃ ಸಮಜಾಯತ ॥ ೧೦೮ ॥

ಎಲೈ ರಾಜನೇ, ಬಾಣಗಳಿಗೆ ಉಂಟಾದ ಸಂಘರ್ಷದಿಂದ ಅಂತರಿಕ್ಷದಲ್ಲಿ ಜ್ವಾಲೆಯುಳ್ಳ ದೊಡ್ಡ ಅಗ್ನಿಯು ಉಂಟಾಯಿತು.

ತತ್ರ ತೈಶ್ಚ ಮಹೇಷ್ವಾಸೈಃ ಶ್ವಸದ್ಭಿಃ ಶೋಣಿತೋಕ್ಷಿತೈಃ ।
ಹಯೈರ್ನಾಗೈಶ್ಚ ಸಂಭಿನ್ನೈರ್ನದದ್ಭಿಶ್ಚಾರಿಕರ್ಶನ ॥ ೧೦೯ ॥

ಸಂರಬ್ಧೈಶ್ಚಾರಿಭಿರ್ವೀರೈಃ ಪ್ರಾರ್ಥಯದ್ಭಿರ್ಜಯಂ ಮೃಧೇ ।
ಏಕೈಶ್ಚಿರ್ಬಹುಭಿಃ ಕ್ರುದ್ಧೈರೂರ್ಮಿವ ಸಮಜಾಯತ ॥ ೧೧೦ ॥

ಆಲ್ಲಿರಕ್ತಸಿಕ್ತರಾಗಿ ದೊಡ್ಡ ಉಸಿರನ್ನು ಬಿಡುವ ಆ ಮಹಾಧನುರ್ಧಾರಿಗಳಿಂದಲೂ, ದೇಹವು ಕತ್ತರಿಸಲ್ಪಟ್ಟು ಗರ್ಜಿಸುವ ಅಶ್ವಗಳಿಂದ ಮತ್ತು ಗಜಗಳಿಂದಲೂ, ಕೋಪಗೊಂಡು ಒಂದು ಕಡೆಯಲ್ಲಿ ನಿಂತು ವಿಜಯವನ್ನು ಪ್ರಾರ್ಥಿಸುವ ಅನೇಕ ವೀರರಿಂದಲೂ, ಆ ಯುದ್ಧಭೂಮಿಯು ಸಮುದ್ರದಂತಾಯಿತು.

ಶರೋರ್ಮಿಣಂ ಗಜಾವರ್ತಂ ನಾಗನಕ್ರಂ ದುರತ್ಯಯಮ್ ।
ಪದಾತಿಮತ್ಸ್ಯಕಲಿಲಂ ಶಂಖದುಂದುಭಿನಿಸ್ವನಮ್ ॥ ೧೧೧ ॥

ಅಸಂಖ್ಯೇಯಮಪಾರಂ ಚ ರಜೋನೀರಮತೀವ ಚ ।
ಉಷ್ಣೀಷಕಮಠಚ್ಛನ್ನಂ ಪತಾಕಾಫೇನಮಾಲಿನಮ್ ॥ ೧೧೨ ॥

ರಥಸಾಗರಮಕ್ಷೋಭ್ಯಂ ಮಾತಂಗಾಂಗಶಿಲಾಚಿತಮ್ ।
ವೇಲಾಭೂತಸ್ತದಾ ಪಾರ್ಥಃ ಪತ್ರಿಭಿಃ ಸಮವಾರಯತ್ ॥ ೧೧೩ ॥

ಬಾಣಗಳೆಂಬ ತರಂಗವುಳ್ಳ, ಗಜಗಳೆಂಬ ಸುಳಿಗಳುಳ್ಳ, ಅಶ್ವಗಳೆಂಬ ಮೊಸಳೆಗಳುಳ್ಳ, ದಾಟಲು ಅಸಾಧ್ಯವಾದ, ಪದಾತಿಗಳೆಂಬ ಮತ್ಸ್ಯ ಸಮೂಹಗಳುಳ್ಳ, ಶಂಖ-ದುಂದುಭಿಗಳ ಘೋಷವನ್ನು ಹೊಂದಿದ, ಗಣನೆಯಿಲ್ಲದ ಅಪಾರವಾದ

ರಥಗಳೆಂಬ ನೀರನ್ನು ಹೊಂದಿದ, ಉಷ್ಣೀಷಗಳೆಂಬ ಕೂರ್ಮಗಳಿಂದ ಆವೃತವಾದ, ಪತಾಕೆಗಳೆಂಬ ನೊರೆಗಳ ಮಾಲೆಗಳನ್ನು ಹೊಂದಿದ, ಆನೆಗಳ ಅಂಗಗಳೆಂಬ ಶಿಲೆಗಳಿಂದ ತುಂಬಿದ, ಅಲುಗಾಡಿಸಲು ಅಸಾಧ್ಯವಾದ ಆ ಸೈನ್ಯಸಾಗರವನ್ನು ಅರ್ಜುನನು ಪತ್ರವುಳ್ಳ ತನ್ನ ಬಾಣಗಳಿಂದ ತೀರದಂತೆ ತಡೆದನು.

ತತೋ ಜನಾರ್ದನಃ ಸಂಖೇ ಪ್ರಿಯಂ ಪುರುಷಸತ್ತಮಮ್ ।
ಅಸಂಭ್ರಾಂತಂ ಮಹಾಬಾಹುಮರ್ಜುನಂ ವಾಕ್ಯಮಬ್ರವೀತ್ ॥ ೧೧೪ ॥

ಉದಪಾನಮಿಹಾಶ್ವಾನಾಂ ನಾಲ್ಪಮಸ್ತಿ ರಣೇಽರ್ಜುನ ।
ಪರೀಪ್ಸಂತೇ ಜಲಂ ಚೇಮೇ ಪೇಯಂ ನ ತ್ವವಗಾಹನಮ್ ॥ ೧೧೫ ॥

ಆಗ ಜನಾರ್ದನನು ರಣರಂಗದಲ್ಲಿ ತನಗೆ ಪ್ರಿಯನೂ, ಪುರುಷಶ್ರೇಷ್ಠನೂ, ಗಾಬರಿಗೊಳ್ಳದವನೂ, ಮಹಾಬಾಹುವೂ ಆದ ಅರ್ಜುನನನ್ನು ಕುರಿತು- ಎಲೈ ಅರ್ಜುನನೇ, ಇಲ್ಲಿ ಅಶ್ವಗಳಿಗೆ ಅಲ್ಪವೂ ನೀರಿಲ್ಲ. ಈ ಅಶ್ವಗಳು ಕುಡಿಯುವ ನೀರನ್ನು ಅಪೇಕ್ಷಿಸುತ್ತವೆ, ಸ್ನಾನವನ್ನು ಅಪೇಕ್ಷಿಸುವುದಿಲ್ಲವೆಂದು ಹೇಳಿದನು.

ಸಂಜಯಃ

ಇದಮಸ್ತೀತ್ಯಸಂಭ್ರಾಂತೋ ಬ್ರುವನ್ನಸ್ತ್ರೇಣ ಮೇದಿನೀಮ್ ।
ಅಭಿಹತ್ಯಾರ್ಜುನಶ್ಚಕ್ರೇ ವಾಜಿಪಾನಂ ಸರಃ ಶುಭಮ್ ॥ ೧೧೬ ॥

ಸಂಜಯ– ಅರ್ಜುನನು ಗಾಬರಿಗೊಳ್ಳದೆ ಇಲ್ಲಿ ನೀರಿದೆ ಎಂದು ಹೇಳುತ್ತಾ ತನ್ನ ಅಸ್ತ್ರದಿಂದ ಭೂಮಿಯನ್ನು ಭೇದಿಸಿ, ಕುದುರೆಗಳು ಕುಡಿಯುವುದಕ್ಕೆ ಯೋಗ್ಯವಾದ ನೀರಿರುವ ಒಂದು ಶುದ್ಧ ಸರೋವರವನ್ನು ಮಾಡಿದನು.

ಶರವಂಶಂ ಶರಸ್ಥೂಣಂ ಶರಾಚ್ಛಾದನಮದ್ಭುತಮ್ ।
ಶರವೇಶ್ಮಾಕರೋತ್ ಪಾರ್ಥಃ ತ್ವಷ್ಟೇವಾದ್ಭುತಕರ್ಮಕೃತ್ ॥ ೧೧೭ ॥

ಬಾಣಗಳ ಕಂಬಗಳು, ಬಾಣಗಳ ಹೊದಿಕೆ, ಬಾಣಗಳ ತಡಿಕೆಯನ್ನು ಹೊಂದಿದ ಒಂದು ಅದ್ಭುತವಾದ ಬಾಣಗೃಹವನ್ನು ಅದ್ಭುತ ಕರ್ಮಕಾರಕನಾದ ತ್ವಷ್ಟೃವಿನಂತೆ ನಿರ್ಮಿಸಿದನು.

ತತಃ ಪ್ರಹಸ್ಯ ಗೋವಿಂದಃ ಸಾಧು ಸಾಧ್ವಿತ್ಯಥಾಬ್ರವೀತ್ ।
ಶರವೇಶ್ಮನಿ ಪಾರ್ಥೇನ ಕೃತೇ ತಸ್ಮಿನ್ ಮಹಾರಣೇ ॥ ೧೧೮ ॥

ಮಹಾರಣರಂಗದಲ್ಲಿ ಅರ್ಜುನನು ಅಂತಹ ಶರಗೃಹವನ್ನು ಮಾಡುತ್ತಿರಲು ಗೋವಿಂದನು ನಕ್ಕು, ಚೆನ್ನಾಗಿದೆ, ಚೆನ್ನಾಗಿದೆ ಎಂದು ಹೇಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಡಶೀತಿತಮೋऽಧ್ಯಾಯಃ ॥

॥ ಜಯದ್ರಥವಧಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೇಳನೆಯ ಅಧ್ಯಾಯ

ಅಶ್ವಗಳನ್ನು ಬಿಚ್ಚಿ, ನೀರನ್ನು ಕುಡಿಸಿ, ಸಮಾಧಾನ ಮಾಡಿ
ಕೃಷ್ಣನಿಂದ ಸೈಂಧವನ ಕಡೆಗೆ ರಥದ ಪ್ರಯಾಣ.

ಸಂಜಯಃ

ಸಲಿಲೇ ಜನಿತೇ ತಸ್ಮಿನ್ ಕೌಂತೇಯೇನ ಮಹಾತ್ಮನಾ ।
ನಿವಾರಿತೇ ದ್ವಿಷತ್ಸೈನ್ಯೇ ಕೃತೇ ಚ ಶರವೇಶ್ಮನಿ ॥ ೧ ॥

ವಾಸುದೇವೋ ರಥಾತ್ ತೂರ್ಣಮವತೀರ್ಯ ಮಹಾದ್ಯುತಿಃ ।
ಮೋಚಯಾಮಾಸ ತುರಗಾನ್ ವಿನುನ್ನಾನ್ ಕಂಕಪತ್ರಿಭಃ ॥ ೨ ॥

ಸಂಜಯ– ಮಹಾತ್ಮನಾದ ಅರ್ಜುನನು ಅಲ್ಲಿ ನೀರನ್ನು ಸೃಷ್ಟಿಸಿ, ಶರಗೃಹವನ್ನು ರಚಿಸಿ, ಶತ್ರುಸೈನ್ಯವನ್ನು ತಡೆಯುತ್ತಿರಲು ಮಹಾದ್ಯುತಿಯುಳ್ಳ ವಾಸುದೇವನು ಶೀಘ್ರವಾಗಿ ರಥದಿಂದ ಇಳಿದು, ಬಾಣಗಳಿಂದ ವ್ಯಥೆಗೊಂಡ ಅಶ್ವಗಳನ್ನು ರಥದಿಂದ ಬಿಚ್ಚಿದನು.

ಸಿದ್ಧಚಾರಣಸಂಘಾನಾಂ ಸೈನಿಕಾನಾಂ ಚ ಸರ್ವಶಃ ।
ಅದೃಷ್ಟಪೂರ್ವಂ ತದ್ ದೃಷ್ಟ್ವಾ ಸಿಂಹನಾದೋ ಮಹಾನಭೂತ್ ॥ ೩ ॥

ಹಿಂದೆ ಎಂದೂ ನಡೆಯದಿದ್ದ ಅಂತಹ ಒಂದು ಘಟನೆಯನ್ನು ನೋಡಿ ಸಿದ್ಧ-ಚಾರಣ ಸಮೂಹಗಳು ಮತ್ತು ಸೈನಿಕರು ಎಲ್ಲ ಕಡೆಯಲ್ಲಿಯೂ ದೊಡ್ಡ ಸಿಂಹನಾದವನ್ನು ಮಾಡಿದರು.

ಪದಾತಿನಂ ತು ಕೌಂತೇಯಂ ಯುದ್ಧ್ಯಮಾನಂ ನರರ್ಷಭಾಃ ।
ನಾಶಕ್ನುವನ್ ವಾರಯಿತುಂ ತದದ್ಭುತಮಿವಾಭವತ್ ॥ ೪ ॥

ಪದಾತಿಯಾಗಿ ನಿಂತು ಯುದ್ಧವನ್ನು ಮಾಡುವ ಅರ್ಜುನನನ್ನು ತಡೆಯಲು ಯಾವ ರಾಜರಿಗೂ ಸಾಧ್ಯವಾಗಲಿಲ್ಲ. ಅದು ಅದ್ಭುತವಾಗಿದ್ದಿತು.

ಆಪತತ್ಸು ರಥೌಘೇಷು ಪ್ರಭೂತಗಜವಾಜಿಷು ।
ನಾಸಂಭ್ರಮತ್ ತದಾ ಪಾರ್ಥಸ್ತದಸ್ಯ ಪುರುಷಾನತಿ ॥ ೫ ॥

ಬಹಳ ಗಜಾಶ್ವಗಳಿಂದ ಕೂಡಿದ ರಥ-ಸಮೂಹಗಳು ಅವನ ಮೇಲೆ ಬೀಳುತ್ತಿರಲು ಅರ್ಜುನನು ಗಾಬರಿಗೊಳ್ಳಲಿಲ್ಲ. ಇದು ಬೇರೆ ಪುರುಷರನ್ನು ಮೀರಿದ ಅವನ ಶೌರ್ಯದ ಸ್ಥಿತಿ.

ವ್ಯಸೃಜಂತ ಶರೌಘಾಂಸ್ತೇ ಪಾಂಡವಂ ಪ್ರತಿ ಪಾರ್ಥಿವಾಃ ।
ನ ಚಾವ್ಯಥತ ಧರ್ಮಾತ್ಮಾ ವಾಸವಿಃ ಪರವೀರಹಾ ॥ ೬ ॥

ಆ ರಾಜರು ಅರ್ಜುನನ ಮೇಲೆ ಬಾಣಗಳ ಸಮೂಹಗಳನ್ನು ಪ್ರಯೋಗಿಸಿದರು. ಧರ್ಮಿಷ್ಠನೂ ಶತ್ರುವೀರಘಾತಕನೂ ಆದ ಅರ್ಜುನನು ವ್ಯಥೆಪಡಲಿಲ್ಲ.

ಸ ತಾನಿ ಶರಜಾಲಾನಿ ಗದಾಃ ಪ್ರಾಸಾಂಶ್ಚ ವೀರ್ಯವಾನ್ ।
ಸಮಂತಾದ್ ಗ್ರಸತೇ ಪಾರ್ಥಃ ಸರಿತಃ ಸಾಗರೋ ಯಥಾ ॥ ೭ ॥

ಪರಾಕ್ರಮಶಾಲಿಯಾದ ಅರ್ಜುನನು ಸಾಗರವು ನದಿಗಳನ್ನು ನುಂಗುವಂತೆ ಎಲ್ಲ ಕಡೆಗಳಿಂದ ಬರುವ ಆ ಬಾಣಸಮೂಹಗಳನ್ನು, ಗದೆಗಳನ್ನೂ, ಪ್ರಾಸಗಳನ್ನೂ ನುಂಗಿದನು.

ಅಸ್ತ್ರವೇಗೇನ ಮಹತಾ ಪಾರ್ಥೋ ಬಾಹುಬಲೇನ ಚ ।
ಸರ್ವೇಷಾಂ ಪಾರ್ಥಿವೇಂದ್ರಾಣಾಮಗ್ರಸತ್ ತಾನ್ ಶರೋತ್ತಮಾನ್ ॥

ಅರ್ಜುನನು ತನ್ನ ಅಸ್ತ್ರಗಳ ದೊಡ್ಡ ವೇಗದಿಂದಲೂ ಮತ್ತು ಬಾಹುಬಲದಿಂದಲೂ ಎಲ್ಲ ರಾಜರುಗಳು ಪ್ರಯೋಗಿಸಿದ ಶ್ರೇಷ್ಠವಾದ ಬಾಣಗಳನ್ನು ನುಂಗಿದನು (ವಿನಾಶಗೊಳಿಸಿದನು).

ತತ್ ತು ಪಾರ್ಥಸ್ಯ ವಿಕ್ರಾಂತಂ ವಾಸುದೇವಸ್ಯ ಚೋಭಯೋಃ ।
ಅಪೂಜಯನ್ ಮಹಾರಾಜ ಕೌರವಾಃ ಪರಮಾದ್ಭುತಮ್ ॥ ೯ ॥

ಎಲೈ ಮಹಾರಾಜನೇ, ಅರ್ಜುನ ಮತ್ತು ಕೃಷ್ಣರ ಆ ಅದ್ಭುತವಾದ ಪರಾಕ್ರಮವನ್ನು ಕೌರವರೂ ಸಹ ಸ್ತುತಿಸಿದರು.

ಕೌರವಾಃ

ಕಿಂಚಾದ್ಭುತತರಂ ಲೋಕೇ ಭವಿತಾ ಚಾಥವಾಪ್ಯಭೂತ್ ।
ಯದಶ್ವಾನ್ ಪಾರ್ಥಗೋವಿಂದೌ ಪಾಯಯಾಮಾಸತೂ ರಣೇ ॥೧೦॥

ಕೌರವರು– ಕೃಷ್ಣಾರ್ಜುನರು ಸೇರಿ ರಣರಂಗದಲ್ಲಿ ಅಶ್ವಗಳಿಗೆ ನೀರು ಕುಡಿಸುವುದಕ್ಕಿಂತ ಅದ್ಭುತವಾದ ಘಟನೆಯು ಲೋಕದಲ್ಲಿ ಮುಂದೆ ಯಾವುದಾದೀತು? ಅಥವಾ ಹಿಂದೆ ಯಾವುದು ನಡೆದಿದೆ?

ಭಯಂ ವಿಪುಲಮಸ್ಮಾಸು ಧತ್ತಾಮತಿಮಹಾರಥೌ ।
ತೇಜೋ ವಿದಧತುಶ್ಚೋಗ್ರಂ ವಿಸ್ರಂಭಾದ್ ರಣಮೂರ್ಧನಿ ।
ದಧಾರ್ಕೋ ರಣೇ ಪಾರ್ಥೋ ವೇಲೋದ್ಧತಮಿವಾರ್ಣವಮ್ ॥೧೧॥

ಮಹಾರಥರಾದ ಕೃಷ್ಣ-ಪಾಂಡವರು ನಮಗೆ ಅಪಾರವಾದ ಭಯವನ್ನು ಉಂಟು ಮಾಡಿದ್ದಾರೆ. ಶ್ರೇಷ್ಠವಾದ ರಣಮಧ್ಯದಲ್ಲಿ ತಮ್ಮ ಆತ್ಮವಿಶ್ವಾಸದಿಂದ ಉಗ್ರವಾದ ತೇಜಸ್ಸನ್ನು ತೋರಿಸಿದ್ದಾರೆ. ಸಂಕ್ಷುಬ್ಧವಾದ ಸಾಗರವನ್ನು ತೀರವು ತಡೆದಂತೆ ಅರ್ಜುನನೊಬ್ಬನೇ ರಣರಂಗದಲ್ಲಿ ನಮ್ಮನ್ನು ತಡೆಹಿಡಿದಿದ್ದಾನೆ.

ಸಂಜಯಃ

ಪಾರ್ಥಸ್ಯ ಶರಸಂಧಾನೇ ತಸ್ಮಿನ್ ವೇಶ್ಮನಿ ಭಾರತ ।
ಆಕಾಶಮಿವ ಸಂಪ್ರಾಪ್ಯ ವಿಚೇರುಸ್ತತ್ರ ಪಕ್ಷಿಣಃ ॥ ೧೨ ॥

ಸಂಜಯ– ಎಲೈ ಭಾರತನೇ, ಅರ್ಜುನನ ಬಾಣಗಳಿಂದ ಚೆನ್ನಾಗಿ ಮುಚ್ಚಲ್ಪಟ್ಟ ಆ ಬಾಣಗೃಹದಲ್ಲಿ ಆಕಾಶವನ್ನು ಸೇರುವಂತೆ ಪಕ್ಷಿಗಳು ಸೇರಿ ಹಾರಾಡಿದವು.

ನ ಚೈನಂ ಯುಧಿ ತಿಷ್ಠಂತಂ ತವ ಸೈನ್ಯೇಷು ಭಾರತ ।
ಅಭ್ಯದ್ರವತ ಸಂಕ್ರುದ್ಧಃ ಪುಮಾನ್ ಕಶ್ಚಿತ್ ತು ತಾವಕಃ ॥ ೧೩ ॥

ಸರ್ವೇ ಏಮನಸೋ ಭೂತ್ವಾ ತವ ಯೋಧಾ ವಿಶಾಂಪತೇ ।
ಸಂಪ್ರೇಕ್ಷ್ಯ ತತ್ರ ಗೋವಿಂದಂ ಪಾಂಡವಂ ಚ ಧನಂಜಯಮ್ ॥ ೧೪ ॥

ಅರ್ಜುನನನ್ನು ಮತ್ತು ಕೃಷ್ಣನನ್ನು ನೋಡಿ ಎಲೈ ರಾಜನೇ, ನಿನ್ನ ಸೈನ್ಯದ ಯೋಧರೆಲ್ಲರೂ ಉತ್ಸಾಹಹೀನರಾಗಿ, ಅರ್ಜುನನು ರಣರಂಗದಲ್ಲಿ ಪದಾತಿಯಾಗಿ ನಿಂತಿದ್ದರೂ ನಿನ್ನ ಸೈನ್ಯದಲ್ಲಿನ ಯಾವ ಯೋಧನೂ ಕ್ರೋಧದಿಂದ ಅವನ ಕಡೆಗೆ ಮುನ್ನುಗ್ಗಲಿಲ್ಲ.

ಅಥೋತ್ಸ್ಮಯನ್ ಹೃಷೀಕೇಶಃ ಸ್ತ್ರೀಮಧ್ಯ ಇವ ಭಾರತ ।
ಅರ್ಜುನೇನ ಕೃತೇ ಸಂಖೇ ಶರಗರ್ಭಗೃಹೇ ವಿಭೋ ॥ ೧೫ ॥

ಉಪಾವರ್ತಯದವ್ಯಗ್ರಃ ತಾನಶ್ವಾನ್ ಪುಷ್ಕರೇಕ್ಷಣಃ ।
ಮಿಷತಾಂ ಸರ್ವಸೈನ್ಯಾನಾಂ ತ್ವದೀಯಾನಾಂ ವಿಶಾಂಪತೇ ॥ ೧೬ ॥

ಅರ್ಜುನನು ರಣರಂಗದಲ್ಲಿ ಬಾಣಗಳಿಂದ ಗೃಹವನ್ನು ನಿರ್ಮಿಸಿದ ಮೇಲೆ, ಎಲೈ ಭಾರತನೇ, ವಿಭುವೇ, ಕೃಷ್ಣನು ಸ್ತ್ರೀಯರ ಮಧ್ಯದಲ್ಲಿಯೋ ಎಂಬಂತೆ ನಗುತ್ತಾ ನಿನ್ನ ಸೈನ್ಯವೆಲ್ಲವೂ ನೋಡುತ್ತಿರುವಂತೆಯೇ ಯಾವ ಗಾಬರಿಯೂ ಇಲ್ಲದಂತೆ, ಯಾವ ಗಡಿಬಿಡಿಯೂ ಇಲ್ಲದೆ ಅವನು ಅಶ್ವಗಳನ್ನು ಅಲ್ಲಿಗೆ ಕರೆತಂದನು.

ಉಪಾವೃತ್ಯೋತ್ತಿಷ್ಠಾನಶ್ವಾನ್ ಪಾಣಿಭ್ಯಾಂ ಪುಷ್ಕರೇಕ್ಷಣಃ ।
ಸಮ್ಮಾರ್ಜಯದ್ ರಣೇ ರಾಜನ್ ಪಶ್ಯತಾಂ ಸರ್ವಯೋಧಿನಾಮ್ ॥

ಎಲೈ ರಾಜನೇ, ರಥದಿಂದ ಬಚ್ಚಿ ತನ್ನ ಬಳಿಯಲ್ಲಿ ನಿಂತ ಅಶ್ವಗಳನ್ನು ಪುಷ್ಕರಾಕ್ಷನಾದ ಕೃಷ್ಣನು ಎಲ್ಲ ಯೋಧರೂ ನೋಡುತ್ತಿರುವಂತೆಯೇ ತನ್ನ ಕೈಗಳಿಂದ ಸವರಿದನು.

ತೇಷಾಂ ಶ್ರಮಂ ಚ ಗ್ಲಾನಿಂ ಚ ವಮಥುಂ ವೇಪಥುಂ ವ್ರಣಾನ್ ।
ಸರ್ವಾಣ್ಯಪಾನುದತ್ ಕೃಷ್ಣಃ ಕುಶಲೋ ಹ್ಯಶ್ವಕರ್ಮಣಿ ॥ ೧೮ ॥

ಅಶ್ವಕರ್ಮಗಳಲ್ಲಿ ಕುಶಲನಾದ ಕೃಷ್ಣನು ಅವುಗಳ ಶ್ರಮವನ್ನೂ, ನೋವನ್ನೂ, ನಡುಕವನ್ನೂ ಮತ್ತು ವಮಥುಗಳನ್ನೂ (ಒಂದೊಂದು ಸ್ಥಳದಲ್ಲಿ ಚರ್ಮಗಳನ್ನು ಅಲ್ಲಾಡಿಸುವುದು), ಗಾಯಗಳೆಲ್ಲವನ್ನೂ ನಿವಾರಿಸಿದನು.

ಶಲ್ಯಾನುದ್ಧೃತ್ಯ ಪಾಣಿಭ್ಯಾಂ ಪರಿಮೃಜ್ಯ ಚ ತಾನ್ ಹಯಾನ್ ।
ಉಪಾವೃತ್ತಾನ್ ಯಥಾಕಾಮಂ ಪಾಯಯಾಮಾಸ ವಾರಿ ಚ ॥ ೧೯ ॥

ಶರೀರದಲ್ಲಿ ನೆಟ್ಟ ಬಾಣಗಳನ್ನು ತೆಗೆದು, ಅವುಗಳನ್ನು ನೇವರಿಸಿ, ರಥದಿಂದ ಬಿಚ್ಚಿ ಮುಂದೆ ಬಂದ ಅವುಗಳಿಗೆ ಇಷ್ಟವಾದಷ್ಟು ನೀರನ್ನು ಕುಡಿಸಿದನು.

ತತೋ ಲಬ್ಧೋದಕಾನ್ ಸ್ನಾತಾನ್ ಜಗ್ಧಾನ್ನಾನ್ ವಿಗತಕ್ಲಮಾನ್ ।
ಯೋಜಯಾಮಾಸ ಸಂಹೃಷ್ಟಃ ಪುನರೇವ ರಥೋತ್ತಮೇ ॥ ೨೦ ॥

ಅನಂತರ ನೀರನ್ನು ಕುಡಿದು, ಸ್ನಾನವನ್ನು ಮಾಡಿ, ತಮ್ಮ ಆಹಾರವನ್ನು ಸ್ವೀಕರಿಸಿ, ಶ್ರಮವನ್ನು ಕಳೆದುಕೊಂಡ ಅಶ್ವಗಳನ್ನು ಪುನಃ ಶ್ರೇಷ್ಠವಾದ ರಥದಲ್ಲಿ ಹೂಡಿದನು.

ಸ ತಂ ರಥವರಂ ಶೌರಿಃ ಸರ್ವಶಸ್ತ್ರಭೃತಾಂ ವರಃ ।
ಸಮಾಸ್ಥಾಯ ಮಹಾತೇಜಾಃ ಸಾರ್ಜುನಃ ಪ್ರಯಯೌ ದ್ರುತಮ್ ॥೨೧॥

ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಮಹಾತೇಜಸ್ವಿಯಾದ ಶೌರಿಯಾದ ಕೃಷ್ಣನು ಆ ಶ್ರೇಷ್ಠ ರಥದಲ್ಲಿ ಸಾರಥಿಯಾಗಿ ಕುಳಿತು ಅರ್ಜುನನ ಜೊತೆಯಲ್ಲಿ ಶೀಘ್ರವಾಗಿ ಹೊರಟನು.

ಯೋಜಯಿತ್ವಾ ಹಯಾಂಸ್ತತ್ರ ವಿಧಿದೃಷ್ಟೇನ ಕರ್ಮಣಾ ।
ರಣೇ ಚಚಾರ ಗೋವಿಂದಃ ತೃಣೀಕೃತ್ಯ ಮಹಾರಥಾನ್ ॥ ೨೨ ॥

ಶಾಸ್ತ್ರೋಕ್ತ ರೀತಿಯಲ್ಲಿ ಅಶ್ವಗಳನ್ನು ರಥಕ್ಕೆ ಹೂಡಿ, ಗೋವಿಂದನು ಎಲ್ಲ ಮಹಾರಥರನ್ನು ತೃಣಪ್ರಾಯರನ್ನಾಗಿ ಮಾಡಿ ರಣರಂಗದಲ್ಲಿ ಸಂಚರಿಸಿದನು.

ರಥಂ ರಥವರಸ್ಯಾಜೌ ಯುಕ್ತಂ ಲಬ್ಧೋದಕೈರ್ಹಯೈಃ ।
ದೃಷ್ಟ್ವಾ ಕುರುಬಲಶ್ರೇಷ್ಠಾಃ ಪುನರ್ವಿಮನಸೋಽಭವನ್ ॥ ೨೩ ॥

ನೀರನ್ನು ಕುಡಿದು ಸ್ನಾನ ಮಾಡಿದ ಅಶ್ವಗಳು ಪುನಃ ರಥದಲ್ಲಿ ಹೂಡಲ್ಪಟ್ಟುದನ್ನು ನೋಡಿ ಕುರುಸೈನ್ಯದ ಶ್ರೇಷ್ಠರಾದ ಯೋಧರು ಪುನಃ ಉತ್ಸಾಹಹೀನರಾದರು.

ವಿನಿಃಶ್ವಸಂತಸ್ತೇ ರಾಜನ್ ಭಗ್ನದಂಷ್ಟ್ರಾ ಇವೋರಗಾಃ ।
ಧಿಗಹೋऽಧಿಗತಃ ಪಾರ್ಥಃ ಕೃಷ್ಣಶ್ಚೇತ್ಯಬ್ರುವನ್ ಪೃಥಕ್ ॥ ೨೪ ॥

ತತ್ ಸೈನ್ಯಂ ಸರ್ವತೋ ದೃಷ್ಟ್ವಾ ಲೋಮಹರ್ಷಣಮದ್ಭುತಮ್ ।
ತ್ವರದ್ಧ್ವಮಿತಿ ಚಾಕ್ರಂದನ್ ನೈತದಸ್ತೀತಿ ಚಾಬ್ರುವನ್ ॥ ೨೫ ॥

ಎಲೈ ರಾಜನೇ, ಹಲ್ಲುಮುರಿದ ಸರ್ಪಗಳಂತೆ ಅವರು ನಿಟ್ಟುಸಿರನ್ನು ಬಿಡುತ್ತಾ, ನಮಗೆ ಧಿಕ್ಕಾರವಿರಲಿ. ಕೃಷ್ಣಾರ್ಜುನರು ಪುನಃ ಮುಂದೆ ಬರುತ್ತಿದ್ದಾರೆ ಎಂದು ಒಬ್ಬೊಬ್ಬರೂ ಬೇರೆ ಬೇರೆ ಆಯುಧ ಹಿಡಿದರು. ಆ ಸೈನ್ಯವು ರೋಮಾಂಚಕಾರಿಯೂ, ಅದ್ಭುತವೂ ಆದ ಆ ದೃಶ್ಯವನ್ನು ನೋಡಿ ಕೃಷ್ಣಾರ್ಜುನರ ಮೇಲೆ ಶೀಘ್ರವಾಗಿ ಎರಗಿ. ಇದು ಸಾಧ್ಯವಿಲ್ಲ (ನಡೆಯಬಾರದ ಘಟನೆ) ಎಂದು ಹೇಳಿತು.

ಸೈನಿಕಾಃ

ಸರ್ವಕ್ಷತ್ರಸ್ಯ ಮಿಷತೋ ರಥೇನೈಕೇನ ದಂಶಿತೌ ।
ಬಾಲಃ ಕ್ರೀಡನಕೇನೇವ ಕದರ್ಥೀಕೃತ್ಯ ನೋ ಬಲಮ್ ॥ ೨೬ ॥

ಕ್ರೋಶತಾಂ ಯತಮಾನಾನಾಮಸಂಸಕ್ತೌ ಪರಂತಪೌ ।
ದರ್ಶಯಿತ್ವಾऽऽತ್ಮನೋ ವೀರ್ಯಂ ಪ್ರಯಾತೌ ಸರ್ವರಾಜಸು ॥ ೨೭ ॥

ಯಥಾ ದೈವಾಸುರೇ ಯುದ್ಧೇ ತೃಣೀಕೃತ್ಯ ಚ ದಾನವಾನ್ ।
ಇಂದ್ರಾವಿಷ್ಣೂ ಪುರಾ ರಾಜನ್ ಜಂಭಸ್ಯ ವಧಕಾಂಕ್ಷಿಣೌ ॥ ೨೮ ॥

ಸೈನಿಕರು– ಎಲೈ ರಾಜನೇ, ಯುದ್ಧಸನ್ನದ್ಧರಾದ ಅವರಿಬ್ಬರೂ ಎಲ್ಲ ಕ್ಷತ್ರಿಯರು ನೋಡುತ್ತಿರುವಂತೆಯೇ ಬಾಲಕನು ಆಟದ ಸಾಮಾನುಗಳ ಜೊತೆಯಲ್ಲಿ ಆಡುವಂತೆ ನಮ್ಮ ಸೈನ್ಯವನ್ನು ತೃಣೀಕರಿಸಿ, ನಾವು ಕಿರುಚಿ ಪ್ರಯತ್ನ ಪಡುತ್ತಿದ್ದರೂ ಪರಂತಪರಾದ ಅವರು ಪರಸ್ಪರವಾಗಿ ದೂರದಲ್ಲಿಯೇ ನಿಂತು, ತಮ್ಮ ಪರಾಕ್ರಮವನ್ನು ಎಲ್ಲ ರಾಜರುಗಳಿಗೂ ತೋರಿಸಿ ಹೊರಟಿದ್ದಾರೆ. ಹಿಂದೆ ದೇವಾಸುರ ಯುದ್ಧದಲ್ಲಿ ಇಂದ್ರ-ವಿಷ್ಣು ಇವರಿಬ್ಬರೂ ದಾನವರನ್ನು ತೃಣೀಕರಿಸಿ ಜಂಭಾಸುರನ ವಧೆಗಾಗಿ ಹೊರಟಂತೆ (ಹೊರಟಿದ್ದಾರೆ).

ತೌ ಪ್ರಯಾತೌ ಪುನರ್ದೃಷ್ಟ್ವಾ ತವಾऽನ್ಯೇ ಸೈನಿಕಾಬ್ರುವನ್ ।
ತ್ವರದ್ಧ್ವಂ ಕುರವಃ ಸರ್ವೇ ವಧೇ ಕೃಷ್ಣಕಿರೀಟಿನೋಃ ॥ ೨೯ ॥

ಅವರಿಬ್ಬರೂ ಅಲ್ಲಿಂದ ಹೊರಟುದನ್ನು ನೋಡಿ ಉಳಿದ ಸೈನಿಕರು ಕೃಷ್ಣಾರ್ಜುನರ ವಧೆಯನ್ನು ಮಾಡಲು ಎಲ್ಲಕೌರವರೂ ತ್ವರೆ ಮಾಡಿ ಎಂದು ಮಾತನಾಡಿದರು.

ರಥಂ ಯುಂಕ್ತ್ವಾ ತು ದಾಶಾರ್ಹೋ ಮಿಷತಾಂ ಸರ್ವಧನ್ವಿನಾಮ್ ।
ಜಯದ್ರಥಾಯ ಯಾತ್ಯೇಷ ಕದರ್ಥೀಕೃತ್ಯ ನೋ ರಣೇ ॥ ೩೦ ॥

ದಾಶಾರ್ಹನಾದ ಕೃಷ್ಣನು ಸರ್ವಧನುರ್ಧಾರಿಗಳೂ ನೋಡುತ್ತಿರುವಂತೆಯೇ ರಥವನ್ನು ಹೂಡಿ, ರಣರಂಗದಲ್ಲಿ ನಮ್ಮನ್ನು ತೃಣೀಕರಿಸಿ ಜಯದ್ರಥನ ಕಡೆಗೆ ಸಾಗುತ್ತಿದ್ದಾನೆ ಎಂದು ಮಾತನಾಡಿಕೊಂಡರು.

ಸಂಜಯಃ

ತತ್ರ ಕೇಚಿನ್ಮಹಾರಾಜ ಸಮಭಾಷಂತ ಭೂಮಿಪಾಃ ।
ಅದೃಷ್ಟಪೂರ್ವಂ ಸಂಗ್ರಾಮೇ ತದ್ ದೃಷ್ಟ್ವಾ ಮಹದದ್ಭುತಮ್ ॥ ೩೧ ॥

ಸರ್ವಸೈನ್ಯಾನಿ ರಾಜಾ ಚ ಧೃತರಾಷ್ಟ್ರೋऽತ್ಯಯಂ ಗತಃ ।
ದುರ್ಯೋಧನಾಪರಾಧೇನ ಕ್ಷತ್ರಂ ಕೃತ್ಸ್ನಂ ಚ ಮೇದಿನೀ ॥ ೩೨ ॥

ವಿಲಯಂ ಸಮನುಪ್ರಾಪ್ತಾ ತಚ್ಚ ರಾಜಾ ನ ಬುಧ್ಯತೇ ।
ಇತ್ಯೇವಂ ಕ್ಷತ್ರಿಯಾಸ್ತತ್ರ ಬ್ರುವಂತ್ಯನ್ಯೇ ಚ ಭಾರತ ॥ ೩೩ ॥

ಸಂಜಯ– ಎಲೈ ಮಹಾರಾಜನೇ, ಎಂದೂ ನೋಡದ ಆ ಅದ್ಭುತವಾದ ಘಟನೆಯನ್ನು ನೋಡಿ ರಣರಂಗದಲ್ಲಿ ರಾಜರು ಪರಸ್ಪರವಾಗಿ ಮಾತನಾಡುತ್ತಿದ್ದರು. ಸರ್ವಸೈನ್ಯಗಳೂ ರಾಜನಾದ ದುರ್ಯೋಧನನೂ, ಧೃತರಾಷ್ಟ್ರನೂ ಸಹ ವಿನಾಶವನ್ನು ಹೊಂದಿದ್ದಾರೆ. ದುರ್ಯೋಧನನ ಅಪರಾಧದಿಂದ ಎಲ್ಲ ಕ್ಷತ್ರಿಯರು ಮತ್ತು ಭೂಮಿಯು ವಿನಾಶವನ್ನು ಹೊಂದಿವೆ. ಅದನ್ನು ರಾಜನು (ಧೃತರಾಷ್ಟ್ರನು) ತಿಳಿಯುತ್ತಿಲ್ಲ. ಎಲೈ ಭಾರತನೇ, ಹೀಗೆ ಅಲ್ಲಿ ಬೇರೆ ಕ್ಷತ್ರಿಯರು ಮಾತನಾಡಿಕೊಂಡರು.

ಸಿಂಧುರಾಜಸ್ಯ ಯತ್ ಕೃತ್ಯಂ ಗತಸ್ಯ ಯಮಸಾದನಮ್ ।
ತತ್ ಕರೋತು ವೃಥಾದೃಷ್ಟಿರ್ಧಾರ್ತರಾಷ್ಟ್ರೋಽನುಪಾಯವಿತ್ ॥ ೩೪ ॥

ಬೇರೆ ಉಪಾಯವನ್ನು ಕಾಣದ ಧೃತರಾಷ್ಟ್ರನು ಸಿಂಧುರಾಜನು ಮೃತನಾದ ಮೇಲೆ ಮಾಡಬೇಕಾದ ಕಾರ್ಯವನ್ನು ಮಾಡಲು ಸಿದ್ಧನಾಗಲಿ (ಎಂದೂ ಮಾತನಾಡಿಕೊಂಡರು).

ಸಂಜಯಃ

ತತಃ ಶೀಘ್ರತರಂ ಪ್ರಾಯಾತ್ ಸೈಂಧವಂ ಪ್ರತಿ ಪಾಂಡವಃ ।
ವಿವರ್ತಮಾನೇ ತಿಗ್ಮಾಂಶೌ ಹೃಷ್ಟೈಃ ಪೀತೋದಕೈರ್ಹಯೈಃ ॥ ೩೫ ॥

ಸಂಜಯ– ಆಗ ಸೂರ್ಯನು ಪಶ್ಚಿಮದ ಕಡೆಗೆ ಸಾಗುತ್ತಿರಲು ನೀರನ್ನು ಕುಡಿದು ಸಂತೋಷಗೊಂಡ ಅಶ್ವಗಳನ್ನು ಹೂಡಿದ ರಥದಲ್ಲಿ ಅರ್ಜುನನು ಸೈಂಧವನ ಕಡೆಗೆ ಶೀಘ್ರವಾಗಿ ಹೋದನು.

ತಂ ಪ್ರಯಾಂತಂ ಮಹಾಬಾಹುಂ ಸರ್ವಶಸ್ತ್ರಭೃತಾಂ ವರಮ್ ।
ನಾಶಕ್ನುವನ್ ಧಾರಯಿತುಂ ಯೋಧಾಃ ಕ್ರುದ್ಧಮಿವಾಂತಕಮ್ ॥ ೩೬ ॥

ಕೋಪಗೊಂಡ ಯಮನಂತೆ ಹೋಗುತ್ತಿದ್ದ ಮಹಾಬಾಹುವೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ ಆದ ಅವನನ್ನು ಹಿಡಿಯಲು ಯಾವ ಯೋಧರಿಗೂ ಸಾಧ್ಯವಾಗಲಿಲ್ಲ.

ವಿದ್ರಾವ್ಯ ತು ತತಃ ಸೈನ್ಯಂ ಪಾಂಡವಃ ಶ್ವೇತವಾಹನಃ ।
ಯಥಾ ಮೃಗಗಣಾನ್ ಸಿಂಹಃ ಸೈಂಧವಾರ್ಥೇ ವ್ಯಲೋಲಯತ್ ॥೩೭॥

ಸಿಂಹವು ಜಿಂಕೆಗಳ ಸಮೂಹವನ್ನು ಓಡಿಸುವಂತೆ ಶ್ವೇತವಾಹನನಾದ ಅರ್ಜುನನು ಸೈಂಧವನನ್ನು ತಲುಪುವ ಸಲುವಾಗಿ ಆ ಸೈನ್ಯವನ್ನು ಕಲಕಾಡಿ ಓಡಿಸಿದನು.

ಗಾಹಮಾನೋ ಹ್ಯನೀಕಾನಿ ತೂರ್ಣಮಶ್ವಾನ್ಚೋದಯತ್ ।
ಬಲಾಕವರ್ಣಂ ದಾಶಾರ್ಹಃ ಪಾಂಚಜನ್ಯಂ ವ್ಯನಾದಯತ್ ॥ ೩೮ ॥

ಕೌರವರ ಸೈನ್ಯಗಳನ್ನು ಪ್ರವೇಶಿಸಿ ದಾಟುತ್ತಾ ಕೃಷ್ಣನು ಶೀಘ್ರವಾಗಿ ಅಶ್ವಗಳನ್ನು ನಡೆಸಿದನು. ಮತ್ತು ಬಲಾಕ ಪಕ್ಷಿಯಂತಿದ್ದ ಶ್ವೇತವರ್ಣದ ಪಾಂಚಜನ್ಯ ಶಂಖವನ್ನು ಊದಿದನು.

ಕೌಂತೇಯೇನಾಗ್ರತಃ ಸೃಷ್ಟಾ ನ್ಯಪತನ್ ಪೃಷ್ಠತಃ ಶರಾಃ ।
ತೂರ್ಣಾತ್ ತೂರ್ಣತರಂ ಹ್ಯಶ್ವಾಃ ತೇಽವಹನ್ ವಾತರಂಹಸಃ ॥೩೯॥

ಅರ್ಜುನನು ಮೊದಲು ಪ್ರಯೋಗಿಸಿದ ಬಾಣಗಳು ಅವನ ರಥದ ಹಿಂದೆ ಬಿದ್ದವು. ವಾಯುವೇಗವುಳ್ಳ ಆ ಅಶ್ವಗಳು ಅತ್ಯಂತ ಶೀಘ್ರವಾಗಿ ರಥವನ್ನು ತೆಗೆದುಕೊಂಡು ಹೋದವು.

ವಾತೋದ್ಧೂತಪತಾಕಾಂತಂ ರಥಂ ಜಲದನಿಸ್ವನಮ್ ।
ಘೋರಂ ಕಪಿಧ್ವಜಂ ದೃಷ್ಟ್ವಾ ವಿಷಣ್ಣಾ ಬಹವೋಽಭವನ್ ॥ ೪೦ ॥

ಗಾಳಿಗೆ ಅಲುಗಾಡುವ ಪತಾಕೆಗಳನ್ನು ಹೊಂದಿದ, ಮೇಘ ಘೋಷವುಳ್ಳ, ಕಪಿಧ್ವಜದಿಂದ ಕೂಡಿದ, ಘೋರವಾದ ರಥವನ್ನು ನೋಡಿ ಅನೇಕರು ವಿಷಾದವನ್ನು ಹೊಂದಿದರು.

ದಿವಾಕರೇಽಥ ರಜಸಾ ಸರ್ವತಃ ಸಂವೃತೇ ಭೃಶಮ್ ।
ಶರಾರ್ಚಾಶ್ಚ ರಣೇ ಯೋಧಾ ನ ಕೃಷ್ಣೌ ಶೇಕುರೀಕ್ಷಿತುಮ್ ॥ ೪೧ ॥

ಎಲ್ಲ ಕಡೆಗಳಲ್ಲಿಯೂ ಎದ್ದ ಧೂಳಿನಿಂದ ಸೂರ್ಯನು ಮುಚ್ಚಲ್ಪಡುತ್ತಿರಲು ಅರ್ಜುನನ ಬಾಣಗಳ ಪ್ರಹಾರಕ್ಕೆ ಒಳಗಾದ ಯೋಧರು ರಣರಂಗದಲ್ಲಿ ಕೃಷ್ಣಾರ್ಜುನರನ್ನು ನೋಡಲೂ ಸಾಧ್ಯವಾಗಲಿಲ್ಲ.

ತತೋ ನೃಪತಯಃ ಕ್ರುದ್ಧಾಃ ಪರಿವವ್ರುರ್ಧನಂಜಯಮ್ ।
ಕ್ಷತ್ರಿಯಾ ಬಹವಶ್ಚೈನೇ ಜಯದ್ರಥವಧೈಷಿಣಮ್ ॥ ೪೨ ॥

ಆಗ ಕೌರವಸೈನ್ಯದ ರಾಜರು ಕೋಪಗೊಂಡು, ಜಯದ್ರಥನ ವಧೆಯನ್ನು ಬಯಸುತ್ತಿದ್ದ ಪುರುಷಶ್ರೇಷ್ಠನಾದ ಅರ್ಜುನನನ್ನು ಸುತ್ತುವರಿದರು.

ಬಲೇಷು ಮ್ರಿಯಮಾಣೇಷು ವೀಕ್ಷ್ಯ ತಂ ಪುರುಷರ್ಷಭಮ್ ।
ದುರ್ಯೋಧನೋಽಭ್ಯಯಾತ್ ಪಾರ್ಥಂ ತ್ವರಮಾಣೋ ಸಹಾನುಗಃ ॥

ತನ್ನ ಸೈನ್ಯಗಳು ಮೃತವಾಗುತ್ತಿರಲು ಅದನ್ನು ನೋಡಿದ ದುರ್ಯೋಧನನು ತನ್ನ ತಮ್ಮನಾದ ದುಶ್ಶಾಸನನ ಜೊತೆಯಲ್ಲಿತ್ತರೆ ಮಾಡುತ್ತಾ, ಪುರುಷಶ್ರೇಷ್ಠನಾದ ಅರ್ಜುನನ ಕಡೆಗೆ ಧಾವಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಾತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆಂಟನೆಯ ಅಧ್ಯಾಯ

ಜಯದ್ರಥನ ಕಡೆಗೆ ಸಾಗುವ ಅರ್ಜುನನಿಗೆ ದುರ್ಯೋಧನನಿಂದ ತಡೆ.

ಸಂಜಯಃ

ಸ್ರಂಸಂತ ಇವ ರಾಜಾನಃ ತಾವಕಾನಾಂ ಭಯಾನ್ನೃಪ ।
ತೌ ದೃಷ್ಟ್ವಾ ಸಮತಿಕ್ರಾಂತೌ ವಾಸುದೇವಧನಂಜಯೌ ॥ ೧ ॥

ಸಂಜಯ– ಕೃಷ್ಣಾರ್ಜುನರು ತಮ್ಮನ್ನು ದಾಟಿ ಹೋದುದನ್ನು ನೋಡಿ ಎಲೈ ರಾಜನೇ, ನಿನ್ನ ಸೈನ್ಯದ ರಾಜರು ಭಯದಿಂದ ಕುಸಿದು ಹೋದರು.

ಸರ್ವೇ ತು ಪ್ರತಿಸಂರಬ್ಧಾ ಹ್ರೀಮಂತಃ ಸತ್ತ್ವಚೋದಿತಾಃ ।
ಸ್ಥಿರೀಭೂತಾ ಮಹಾತ್ಮಾನಃ ಪ್ರತ್ಯಗೃಹ್ಣನ್ ಧನಂಜಯಮ್ ॥ ೨ ॥

ನಾಚಿಕೆಯುಳ್ಳವರೂ, ಹಿಂದೆ ಧೈರ್ಯಶಾಲಿಗಳಾಗಿದ್ದವರೂ ಆದ ಮಹಾತ್ಮರಾದ ಅವರು ಪುನಃ ಧೈರ್ಯವನ್ನು ತಂದುಕೊಂಡು ಅರ್ಜುನನ ಕಡೆಗೆ ಸಾಗಿದರು.

ಯೇ ಗತಾಃ ಪಾಂಡವಂ ಯುದ್ಧೇ ಕ್ರೋಧಾಮರ್ಷಸಮನ್ವಿತಾಃ ।
ತೇಽದ್ಯಾಪಿ ನ ನಿವರ್ತಂತೇ ಸಿಂಧವಃ ಸಾಗರಾದಿವ ॥ ೩ ॥

ಯಾರು ಕ್ರೋಧಾಮರ್ಷ ಸಹಿತರಾಗಿ ಅರ್ಜುನನ ಮೇಲೆ ಯುದ್ಧವನ್ನು ಮಾಡಲು ಹೋದರೋ ಅವರು ಸಾಗರವನ್ನು ಸೇರಿದ ನದಿಗಳಂತೆ ಇನ್ನೂ ಹಿಂದಕ್ಕೆ ಬರಲಿಲ್ಲ.

ಅಸಂತಸ್ತು ನಿವರ್ತಂತೇ ವೇದೇಭ್ಯ ಇವ ನಾಸ್ತಿಕಾಃ ।
ನರಕಂ ಭಜಮಾನಾಸ್ತೇ ಪ್ರತ್ಯಪದ್ಯಂತ ಕಿಲ್ಬಿಷಮ್ ॥ ೪ ॥

ಅಸಜ್ಜನರಾದ ಕ್ಷತ್ರಿಯರು ಮಾತ್ರ ವೇದಗಳಿಂದ ನಾಸ್ತಿಕರು ಹಿಂದೆ ಬಂದಂತೆ ಅರ್ಜುನನಿಂದ ಹಿಂದೆ ಬಂದು ಪಾಪವನ್ನು ಸಂಪಾದಿಸಿ ನರಕಭಾಜನರಾದರು.

ತಾವತೀತ್ಯ ರಥಾನೀಕಂ ವಿಮುಕ್ತೌ ಪುರುಷರ್ಷಭೌ ।
ದದೃಶಾತೇ ಯಥಾ ರಾಹೋರಾಸ್ಯಾನ್ಮುಕ್ತೌ ಪ್ರಭಾಕರೌ ॥ ೫ ॥

ರಥಸಮೂಹಗಳನ್ನು ದಾಟಿ ಅವುಗಳಿಂದ ಬಿಡುಗಡೆ ಹೊಂದಿದ ಪುರುಷಶ್ರೇಷ್ಠರಾದ ಆ ಕೃಷ್ಣಾರ್ಜುನರು ರಾಹುವಿನ ವದನದಿಂದ ಮುಕ್ತರಾದ ಇಬ್ಬರು ಸೂರ್ಯರಂತೆ ಕಂಡುಬಂದರು.

ಮತ್ಸ್ಯಾ ಇವ ಮಹಾಜಾಲಂ ವಿದಾರ್ಯ ವಿಗತಜ್ವರೌ ।
ತಥಾ ಕೃಷ್ಣಾವದೃಶ್ಯೇತಾಂ ಸೇನಾಜಾಲಂ ವಿದಾರ್ಯ ತತ್ ॥ ೬ ॥

ದೊಡ್ಡ ಬಲೆಯನ್ನು ಹರಿದು ಹೊರಗೆ ಬಂದು ನಿರಾತಂಕಗೊಂಡ ಮತ್ಸ್ಯಗಳಂತೆ ಕೃಷ್ಣಾರ್ಜುನರು ಆ ಸೇನಾಜಾಲವನ್ನು ಹರಿದು ಹೊರಗೆ ಬಂದುದು ಕಂಡುಬಂದಿತು.

ವಿಮುಕ್ತೌ ಶಸ್ತ್ರಸಂಬಾಧಾತ್ ದ್ರೋಣಾನೀಕಾತ್ತು ದುರ್ಭಿದಾತ್ ।
ಅದೃಶ್ಯೇತಾಂ ಮಹಾತ್ಮಾನೌ ಕಾಲಸೂರ್ಯಾವಿವೋದಿತೌ ॥ ೭ ॥

ರಥಸಮೂಹಗಳಿಂದಲೂ, ದುರ್ಭೇದ್ಯವಾದ ದ್ರೋಣರ ಸೇನೆಯಿಂದಲೂ ವಿಮುಕ್ತರಾದ ಆ ಇಬ್ಬರು ಮಹಾತ್ಮರು ಉದಯಿಸಿದ ಕಾಲಸೂರ್ಯರಂತೆ ಕಂಡು ಬಂದರು.

ಅಸ್ತ್ರಸಂಬಾಧನಿರ್ಮುಕ್ತೌ ವಿಮುಕ್ತೌ ಶಸ್ತ್ರಸಂಕಟಾತ್ ।
ಅದೃಶ್ಯೇತಾಂ ಮಹಾತ್ಮಾನೌ ಶಸ್ತ್ರಸಂಬಾಧಕಾರಿಣೌ ॥ ೮ ॥

ಆಸ್ತ ಬಾಧೆಗಳಿಂದ ನಿರ್ಮುಕ್ತರಾಗಿ, ಶಸ್ತ್ರಸಂಕಟದಿಂದಲೂ ನಿರ್ಮುಕ್ತರಾದ ಆ ಮಹಾತ್ಮರು ಶತ್ರುಗಳ ಮೇಲೆ ಶಸ್ತ್ರಗಳಿಂದ ಬಾಧೆಯನ್ನುಂಟು ಮಾಡುವುದು ಕಂಡುಬಂದಿತು.

ವಿಮುಕ್ತೌ ಜ್ವಲನಸ್ಪರ್ಶಾತ್ ಝಷಾಸ್ಯಾನ್ಮಕರಾವಿವ ।
ವ್ಯಕ್ಷೋಭಯೇತಾಂ ಸೇನಾಂ ತೌ ಸಮುದ್ರಂ ಮಕರಾವಿವ ॥ ೯ ॥

ಮೊಸಳೆಯ ಬಾಯಿಂದ ತಪ್ಪಿಸಿಕೊಂಡ ಮೀನುಗಳಂತೆ ಅಗ್ನಿಸ್ಪರ್ಶರೂಪವಾದ ಶಸ್ತ್ರಗಳಿಂದ ವಿಮುಕ್ತರಾದ ಅವರು ಮಕರಗಳು ಸಮುದ್ರವನ್ನು ಕ್ಷೋಭೆಗೊಳಿಸುವಂತೆ ನಿನ್ನ ಸೈನ್ಯವನ್ನು ಕ್ಷೋಭೆಗೊಳಿಸಿದರು.

ತಾವಕಾಸ್ತವ ಪುತ್ರಾಶ್ಚ ದ್ರೋಣಾನೀಕಸ್ಥಯೋರ್ದ್ವಯೋಃ ।
ನೇಮೌ ತರಿಷ್ಯತೋ ದ್ರೋಣಮಿತಿ ಚಕ್ರುಸ್ತದಾ ಮತಿಮ್ ॥ ೧೦ ॥

ಅವರು ದ್ರೋಣರ ಸೈನ್ಯದಲ್ಲಿರುವವರೆಗೆ ನಿನ್ನ ಪುತ್ರರು ಮತ್ತು ರಾಜರು ಇವರು ದ್ರೋಣರ ಸೈನ್ಯವನ್ನು ದಾಟುವುದಿಲ್ಲ ಎಂದು ತಿಳಿದಿದ್ದರು.

ತೇ ತು ದೃಷ್ಟ್ವಾ ವ್ಯತಿಕ್ರಾಂತೌ ದ್ರೋಣಾನೀಕಂ ಮಹಾದ್ಯುತಿಮ್ ।
ನಾಶಶಂಸುರ್ಮಹಾರಾಜ ಸಿಂಧುರಾಜಸ್ಯ ಜೀವಿತಮ್ ॥ ೧೧ ॥

ಆದರೆ ಮಹಾಪ್ರತಾಪಶಾಲಿಯಾದ ದ್ರೋಣಸೈನ್ಯವನ್ನು ದಾಟಿದುದನ್ನು ನೋಡಿ ಎಲೈ ಮಹಾರಾಜನೇ, ಸಿಂಧುರಾಜನ ಜೀವಿತದಲ್ಲಿ ಅವರು ಆಸೆಯನ್ನು ತೊರೆದರು.

ಆಶಾ ಬಲವತೀ ರಾಜನ್ ಪುತ್ರಾಣಾಮಭವತ್ ತವ ।
ದ್ರೋಣಹಾರ್ದಿಕ್ಯಯೋಃ ಕೃಷ್ಣೌ ನ ಮೋಕ್ಷ್ಯೇತೇ ಇತಿ ಪ್ರಭೋ ।
ತಾಮಾಶಾಂ ವಿಫಲಾಂ ಕೃತ್ವಾ ನಿಸ್ತೀರ್ಣೌ ತೌ ಪರಂತಪೌ ॥ ೧೨ ॥

ಎಲೈ ರಾಜನೇ, ಅವರು ದ್ರೋಣರ ಸೈನ್ಯದ ಮಧ್ಯದಲ್ಲಿದ್ದಾಗ ನಿನ್ನ ಪುತ್ರರಿಗೆ ಕೃಷ್ಣಾರ್ಜುನರು ದ್ರೋಣ ಮತ್ತು ಕೃತವರ್ಮರ ಸೈನ್ಯದಿಂದ ಬಿಡುಗಡೆ ಹೊಂದುವುದಿಲ್ಲ ಎಂಬ ಆಸೆಯು ಪ್ರಬಲವಾಗಿದ್ದಿತು. ಎಲೈ ಪ್ರಭುವೇ, ಪರಂತಪರಾದ ಅವರು ಆ ಆಸೆಯನ್ನು ವ್ಯರ್ಥಗೊಳಿಸಿ ಆ ಸೈನ್ಯವನ್ನು ದಾಟಿದರು.

ದ್ರೋಣಾನೀಕಂ ಸುದುರ್ಧರ್ಷಂ ಭೋಜಾನೀಕಂ ಚ ದುಸ್ತರಮ್ ।
ಅಥ ದೃಷ್ಟ್ವಾ ವ್ಯತಿಕ್ರಾಂತೌ ಜ್ವಲಿತಾವಿವ ಪಾವಕೌ ॥ ೧೩ ॥

ನಿರಾಶಾಃ ಸಿಂಧುರಾಜಸ್ಯ ಜೀವಿತಂ ನಾಶಶಂಸಿರೇ ॥ ೧೪ ॥

ಸೋಲಿಸಲು ಅಸಾಧ್ಯವಾದ ದ್ರೋಣರ ಸೈನ್ಯವನ್ನು ಮತ್ತು ದಾಟಲು ಅಸಾಧ್ಯವಾದ ಕೃತವರ್ಮನ ಸೈನ್ಯವನ್ನು ದಾಟಿ ಜ್ವಲಿಸುವ ಅಗ್ನಿಗಳಂತಿರುವ ಅವರನ್ನು ನೋಡಿ ನಿರಾಶೆಗೊಂಡ ಅವರು ಸೈಂಧವನ ಜೀವಿತದಲ್ಲಿ ಆಸೆಯನ್ನು ತೊರೆದರು.

ಮಿಥಶ್ಚ ಸಮಭಾಷೇತಾಮತೀತೌ ಭಯವರ್ಧನೌ ।
ಜಯದ್ರಥವಧೇ ವಾಚಸ್ತಾಸ್ತಾಃ ಕೃಷ್ಣಧನಂಜಯೌ ॥ ೧೫ ॥

ಆ ಸೈನ್ಯಗಳನ್ನು ದಾಟಿ ಶತ್ರುಗಳಿಗೆ ಭಯವನ್ನುಂಟು ಮಾಡಿದ ಕೃಷ್ಣಾರ್ಜುನರು ಜಯದ್ರಥನ ವಧೆಯನ್ನು ಕುರಿತು ಆ ಕಾಲಕ್ಕೆ ಯೋಗ್ಯವಾದ ಮಾತುಗಳನ್ನು ಪರಸ್ಪರವಾಗಿ ಆಡಿದರು.

ಅಸೌ ಮಧ್ಯೇ ಕೃತಃ ಷಡ್ಭಿರ್ಧಾರ್ತರಾಷ್ಟ್ರೈರ್ಮಹಾರಥೈಃ ।
ಚಕ್ಷುರ್ವಿಷಯಸಂಪ್ರಾಪ್ತೋ ನ ನೋ ಮೋಕ್ಷ್ಯತಿ ಸೈಂಧವಃ ॥ ೧೬ ॥

ಧೃತರಾಷ್ಟ್ರಪುತ್ರರಾದ ಆರು ಮಹಾರಥರಿಂದ ಮಧ್ಯದಲ್ಲಿ ಸೇರಿಸಿಕೊಳ್ಳಲ್ಪಟ್ಟ ಈ ಸೈಂಧವನು ನಮ್ಮ ಕಣ್ಣಿಗೆ ಕಾಣಿಸುತ್ತಿದ್ದಾನೆ. ಅವನು ನಮ್ಮಿಂದ ಬಿಡುಗಡೆಯನ್ನು ಹೊಂದುವುದಿಲ್ಲ.

ಯದ್ಯಸ್ಯ ಸಮರೇ ಗೋಪ್ತಾ ಶಕ್ರೋ ದೇವೈಃ ಸಮಾಗತಃ ।
ತಥಾಽಪ್ಯೇನಂ ಹನಿಷ್ಯಾವ ಇತಿ ಕೃಷ್ಣಾವಭಾಷತಾಮ್ ॥ ೧೭ ॥

ಸಾಕ್ಷಾತ್ ಇಂದ್ರನೇ ದೇವತೆಗಳ ಜೊತೆಯಲ್ಲಿ ರಣರಂಗದಲ್ಲಿ ಅವನಿಗೆ ರಕ್ಷಕನಾಗಿ ಬಂದರೂ ನಾವಿಬ್ಬರೂ ಅವನನ್ನು ಕೊಲ್ಲುವೆವು ಎಂದು ಕೃಷ್ಣಾರ್ಜುನರು ಮಾತನಾಡಿಕೊಂಡರು.

ಇತಿ ಕೃಷ್ಣೌ ಮಹಾಬಾಹೂ ಮಿಥಃ ಕಥಯತಸ್ತದಾ ।
ಸಿಂಧುರಾಜಮವೇಕ್ಷಂತೌ ತತ್ ಪುತ್ರಾಸ್ತವ ಶುಶ್ರುವುಃ ॥ ೧೮ ॥

ಹೀಗೆ ಸೈಂಧವನನ್ನು ನೋಡುತ್ತಾ ಮಹಾಬಾಹುಗಳಾದ ಕೃಷ್ಣಾರ್ಜುನರು ಪರಸ್ಪರವಾಗಿ ಮಾತನಾಡಿಕೊಳ್ಳುವುದನ್ನು ನಿನ್ನ ಪುತ್ರರು ಕೇಳಿಸಿಕೊಂಡರು.

ಆತೀತ್ಯ ಮರುಧನ್ವೇಷು ತಪಾಂತೇ ತೃಷಿತೌ ಗಜೌ ।
ಪೀತ್ವಾ ವಾರಿ ಸಮಾಶ್ವಸ್ತೌ ತಥೈವಾಸ್ತಾಮರಿಂದಮೌ ॥ ೧೯ ॥

ಶತ್ರುತಾಪಕರಾದ ಕೃಷ್ಣಾರ್ಜುನರಾದರೋ ಬೇಸಿಗೆಯ ಕೊನೆಯಲ್ಲಿ ಬಾಯಾರಿ ಮರುಭೂಮಿಯನ್ನು ದಾಟಿ ಅನಂತರ ಜಲಪಾನವನ್ನು ಮಾಡಿದ ಗಜಗಳಂತೆ ಇದ್ದರು.

ವ್ಯಾಘ್ರಸಿಂಹಸಮಾಕೀರ್ಣಮತಿಕ್ರಮ್ಯೇವ ಪರ್ವತಮ್ ।
ವಣಿಜಾವಿವ ದೃಶ್ಯೇತಾಂ ಹೀನಮೃತ್ಯೂ ಜರಾತಿಗೌ ॥ ೨೦ ॥

ಜರಾಮೃತ್ಯುರಹಿತರಾದ ಅವರು ಹುಲಿ-ಸಿಂಹಗಳಿಂದ ತುಂಬಿದ ಪರ್ವತವನ್ನು ದಾಟಿದ ವಣಿಜ(ವ್ಯಾಪಾರಿ)ರಂತೆ ಕಂಡುಬಂದರು.

ತಥಾ ಹಿ ಮುಖವರ್ಣೋऽಯಮನಯೋರಿತಿ ಮೇನಿರೇ ।
ತಾವಕಾ ದೃಶ್ಯ ಮುಕ್ತೌ ತೌ ವಿಕ್ರೋಶಂತಿ ಸ್ಮ ಸರ್ವತಃ ॥೨೧॥

ನಿನ್ನ ಸೈನ್ಯದವರು ನಿನ್ನ ಸೈನ್ಯದಿಂದ ಮುಕ್ತರಾದ ಅವರನ್ನು ನೋಡಿ ಅವರ ಮುಖವರ್ಣವು ಆ ರೀತಿಯಿದೆ ಎಂದು ತಿಳಿದು ಗಟ್ಟಿಯಾಗಿ ಮಾತನಾಡಿದರು (ಕಿರುಚಿದರು).

ದ್ರೋಣಾದಾಶೀವಿಷಾಕಾರಾತ್ ಜ್ವಲಿತಾದಿವ ಪಾವಕಾತ್ ।
ನಿರಾಶಾಃ ಸಿಂಧುರಾಜಸ್ಯ ಜೀವಿತಂ ನಾಶಶಂಸಿರೇ ॥ ೨೨ ॥

ದೃಷ್ಟಿವಿಷವುಳ್ಳ ಸರ್ಪದಂತಿರುವ, ಉರಿಯುವ ಅಗ್ನಿಯಂತಿರುವ ದ್ರೋಣರನ್ನು ದಾಟಿ ಬಂದುದನ್ನು ನೋಡಿ, ಸಿಂಧುರಾಜನ ಜೀವಿತವನ್ನು ಬಯಸುವುದನ್ನು ತ್ಯಜಿಸಿದರು.

ಆನ್ಯೇಭ್ಯಃ ಪಾರ್ಥಿವೇಭ್ಯಶ್ಚ ಭಾಸ್ವಂತಾವಿವ ಭಾಸ್ಕರೌ ।
ತೌ ಮುಕ್ತೌ ಸಾಗರಪ್ರಖ್ಯಾದ್ ದ್ರೋಣಾನೀಕಾದರಿಂದಮೌ ।
ಅದೃಶ್ಯೇತಾಂ ಮುದಾ ಯುಕ್ತೌ ಸಮುತ್ತೀರ್ಯಾರ್ಣವಂ ಯಥಾ ॥೨೩॥

ಪ್ರಕಾಶಿಸುವ ಎರಡು ಸೂರ್ಯರಂತೆ ಬೇರೆ ರಾಜರ ಸೈನ್ಯಗಳಿಂದಲೂ, ಸಾಗರವನ್ನು ಹೋಲುವ ದ್ರೋಣಸೈನ್ಯದಿಂದಲೂ ಹೊರಬಂದ, ಅರಿಂದಮರಾದ ಅವರು ಸಂತೋಷದಿಂದ ಕೂಡಿ ಸಮುದ್ರವನ್ನು ದಾಟಿದವರಂತೆ ಕಂಡುಬಂದರು.

ಶಸ್ತ್ರೌಘಾನ್ಮಹತೋ ಮುಕ್ತೌ ದ್ರೋಣಹಾರ್ದಿಕ್ಯರಕ್ಷಿತಾತ್ ।
ರೋಚಮಾನಾವದೃಶ್ಯೇತಾಮ್ ಇಂದ್ರಾಗ್ನ್ಯೋಃ ಸದೃಶೌ ಗುಣೈಃ ॥೨೪॥

ದ್ರೋಣ ಮತ್ತು ಕೃತವರ್ಮರಿಂದ ರಕ್ಷಿತವಾದ ಸೈನ್ಯದ ದೊಡ್ಡ ಶಸ್ತ್ರ ಸಮೂಹಗಳಿಂದ ಮುಕ್ತರಾಗಿ ಅವರು ತಮ್ಮ ಗುಣಗಳಿಂದ ಇಂದ್ರಾಗ್ನಿಗಳಿಗೆ ಸದೃಶರಾಗಿ ಪ್ರಕಾಶಿಸುತ್ತಿರುವುದು ಕಂಡುಬಂದಿತು.

ಉದ್ವಿಗ್ನರುಧಿರೌ ಕೃಷ್ಣೌ ಭಾರದ್ವಾಜಸ್ಯ ಸಾಯಕೈಃ ।
ಶಿತೈಃ ಶರೈರ್ವ್ಯರೋಚೇತಾಂ ಕರ್ಣಕಾರೈರಿವಾಚಲೌ ॥ ೨೫ ॥

ದ್ರೋಣರ ಹರಿತವಾದ ಬಾಣಗಳಿಂದ ರಕ್ತವನ್ನು ಸ್ರವಿಸುತ್ತಿದ್ದ ಕೃಷ್ಣಾರ್ಜುನರು ಕರ್ಣಕಾರ ವೃಕ್ಷದಿಂದ ಕೂಡಿದ ಪರ್ವತದಂತೆ ಶೋಭಿಸಿದರು.

ದ್ರೋಣಗ್ರಾಹಪ್ರದಾನ್ಮುಕ್ತೌ ಶಕ್ಯಪ್ಯ ವಿಷಕಂಟಕಾತ್ ।
ಅಯೋಮುಸಲಸಂಬಾಧಾತ್ ಕ್ಷತ್ರಿಯಪ್ರವರೌಘಸಃ ॥ ೨೬ ॥

ಜ್ಯಾಘೋಷತಳನಿರ್ಹ್ರಾದಾದ್ ಗದಾನಿಸ್ತ್ರಿಂಶವಿದ್ಯುತಃ ।
ದ್ರೋಣಾಸ್ತ್ರಮೇಘಾನ್ನಿರ್ಮುಕ್ತೌ ಸೂರ್ಯೇಂದೂ ತಿಮಿರಾದಿವ ॥ ೨೭ ॥

ದ್ರೋಣರೆಂಬ ಮೊಸಳೆಯಿಂದ ಕೂಡಿದ ಮಡುವಿನಿಂದಲೂ, ಶಕ್ತಿ-ಋಷ್ಟಿಗಳೆಂಬ ಕಂಟಕ ಸಹಿತ ವಿಷಮಕ್ಷವಳಿಂದಲೂ, ಕಬ್ಬಿಣದ ಒನಕೆಗಳ ಸಮೂಹದಿಂದಲೂ, ಕ್ಷತ್ರಿಯ ಶ್ರೇಷ್ಠರೆಂಬ ಪ್ರವಾಹದಿಂದಲೂ, ಹೆದೆಗಳ ಘೋಷವೆಂಬ ಸಿಡಿಲುಗಳಿಂದಲೂ, ಗದೆಗಳು-ಖಡ್ಗಗಳೆಂಬ ಮಿಂಚುಗಳಿಂದಲೂ, ದ್ರೋಣರ ಅಸ್ತ್ರಗಳೆಂಬ ಮೇಘದಿಂದಲೂ ನಿರ್ಮುಕ್ತರಾದ ಅವರು ಅಂಧಕಾರದಿಂದ ನಿರ್ಮುಕ್ತರಾದ ಸೂರ್ಯಚಂದ್ರರಂತೆ ಕಂಡುಬಂದರು.

ಬಾಹುಭ್ಯಾಮಿವ ಸಂತೀರ್ಣೌ ಸಿಂಧುಷಷ್ಠಾಃ ಸಮುದ್ರಗಾಃ ।
ತಪಾಂತೇ ಸ್ನಿತಃ ಪೂರ್ಣಾ ಮಹಾಗ್ರಾಹಸಮಾಕುಲಾಃ ॥ ೨೮ ॥

ಬೇಸಿಗೆಯ ಅನಂತರದಲ್ಲಿ ಮಳೆಗಾಲದಲ್ಲಿ ದೊಡ್ಡ ಮೊಸಳೆಗಳಿಂದ ನಿಬಿಡವಾದ, ಪೂರ್ಣಪ್ರವಾಹದಿಂದ ಹರಿಯುವ ಸಿಂಧು ಮೊದಲಾದ ಸಮುದ್ರಗಾಮಿಗಳಾದ ಆರು ನದಿಗಳನ್ನು ಬಾಹುಗಳಿಂದಲೇ ದಾಟಿದವರಂತೆ ಕಂಡುಬಂದರು.

ಮಹಾಶೈಲೋಚ್ಚಯಾಂ ಘೋರಾಂ ಲಂಘಯಿತ್ವಾ ಮಹಾನದೀಮ್ ।
ನಿಸ್ತೀರ್ಣಾವಧ್ವಗೌ ಯದ್ವತ್ ತದ್ವತ್ ತೌ ತಾರಿತೌ ರಣೇ ॥ ೨೯ ॥

ಮಹಾಶೈಲ ಸಮೂಹಗಳಿಂದ ಕೂಡಿದ ಘೋರವಾದ ಮಹಾನದಿಯನ್ನು ದಾಟಿದ ದಾರಿಹೋಕರಂತೆ ಅವರು ಕೌರವ ಸೈನ್ಯವನ್ನು ದಾಟಿದರು.

ಇತಿ ಕೃಷ್ಣೌ ಮಹಾಭಾಗೌ ಯಶಸಾ ಲೋಕವಿಶ್ರುತೌ ।
ಸರ್ವಭೂತಾನ್ಯಮನ್ಯಂತ ದ್ರೋಣಾಸ್ತ್ರಬಲವಿಸ್ಮಯಾತ್ ॥ ೩೦ ॥

ದ್ರೋಣರ ಅಸ್ತ್ರಬಲವನ್ನು ತಿಳಿದ ಯೋಧರು ವಿಸ್ಮಯದಿಂದ, ಮಹಾಭಾಗರೂ, ತಮ್ಮ ಕೀರ್ತಿಯಿಂದ ಲೋಕವಿಶ್ರುತರೂ ಆದ ಕೃಷ್ಣಾರ್ಜುನರನ್ನು ನೋಡಿ ಹೀಗೆ ತಿಳಿದರು.

ಜಯದ್ರಥಂ ಸಮೀಪಸ್ಥಂ ಸಮೀಕ್ಷಂತೌ ಜಿಘಾಂಸಯಾ ।
ರುರುಂ ನಿಘಾನೇ ಲಪ್ಸಂತೌ ವ್ಯಾಘ್ರೌವತ್ ತಾವತಿಷ್ಠತಾಮ್ ॥ ೩೧ ॥

ಜಯದ್ರಥನನ್ನು ಸಮೀಪದಿಂದ ನೋಡಿ, ಅವನನ್ನು ಕೊಲ್ಲಲು ಬಯಸಿ ರುರು (ಜಿಂಕೆ) ಮೃಗವನ್ನು ಜಲಪಾನದಲ್ಲಿ ಕೊಲ್ಲಲು ಬಯಸಿದ ಎರಡು ವ್ಯಾಘ್ರಗಳಂತೆ ಅವರು ನಿಂತರು.

ಯಥಾ ಹಿ ಮುಖವರ್ಣೋ೭ಯಮಸಯೋರಿತಿ ಮೇನಿರೇ ।
ತವ ಯೋಧಾ ಮಹಾರಾಜ ಹತಮಾಹುರ್ಜಯದ್ರಥಮ್ ॥ ೩೨ ॥

ಅವರ ಮುಖದ ಕಾಂತಿಯನ್ನು ನೋಡಿದರೆ ಹಾಗೆ ತೋರುತ್ತದೆ ಎಂದು ತಿಳಿದರು. ಎಲೈ ಮಹಾರಾಜನೇ, ನಿನ್ನ ಯೋಧರು ಜಯದ್ರಥನು ವಿನಾಶವನ್ನು ಹೊಂದಿದನು ಎಂದೇ ಹೇಳಿದರು.

ಪ್ರಕಾಶಿಸುವ ಎರಡು ಸೂರ್ಯರಂತೆ ಬೇರೆ ರಾಜರ ಸೈನ್ಯಗಳಿಂದಲೂ, ಸಾಗರವನ್ನು ಹೋಲುವ ದ್ರೋಣಸೈನ್ಯದಿಂದಲೂ ಹೊರಬಂದ, ಅರಿಂದಮರಾದ ಅವರು ಸಂತೋಷದಿಂದ ಕೂಡಿ ಸಮುದ್ರವನ್ನು ದಾಟಿದವರಂತೆ ಕಂಡುಬಂದರು.

ಶಸ್ತ್ರೌಘಾನ್ಮಹತೋ ಮುಕ್ತೌ ದ್ರೋಣಹಾರ್ದಿಕ್ಯರಕ್ಷಿತಾತ್ ।
ರೋಚಮಾನಾವದೃಶ್ಯೇತಾಮ್ ಇಂದ್ರಾಗ್ನ್ಯೋಃ ಸದೃಶೌ ಗುಣೈಃ ॥೨೪॥

ದ್ರೋಣ ಮತ್ತು ಕೃತವರ್ಮರಿಂದ ರಕ್ಷಿತವಾದ ಸೈನ್ಯದ ದೊಡ್ಡ ಶಸ್ತ್ರ ಸಮೂಹಗಳಿಂದ ಮುಕ್ತರಾಗಿ ಅವರು ತಮ್ಮ ಗುಣಗಳಿಂದ ಇಂದ್ರಾಗ್ನಿಗಳಿಗೆ ಸದೃಶರಾಗಿ ಪ್ರಕಾಶಿಸುತ್ತಿರುವುದು ಕಂಡುಬಂದಿತು.

ಉದ್ದಿಗ್ನರುಧಿರೌ ಕೃಷ್ಣೌ ಭಾರದ್ವಾಜಸ್ಯ ಸಾಯಕೈಃ ।
ಶಿತೈಃ ಶರೈರ್ವ್ಯರೋಚೇತಾಂ ಕರ್ಣಿಕಾರೈರಿವಾಚಲೌ ॥ ೨೫ ॥

ದ್ರೋಣರ ಹರಿತವಾದ ಬಾಣಗಳಿಂದ ರಕ್ತವನ್ನು ಸ್ರವಿಸುತ್ತಿದ್ದ ಕೃಷ್ಣಾರ್ಜುನರು ಕರ್ಣಿಕಾರ ವೃಕ್ಷದಿಂದ ಕೂಡಿದ ಪರ್ವತದಂತೆ ಶೋಭಿಸಿದರು.

ದ್ರೋಣಗ್ರಾಹಪ್ರದಾನ್ಮುಕ್ತೌ ಶಕ್ತ್ಯೃಷ್ಟಿ ವಿಷಕಂಟಕಾತ್ ।
ಆಯೋಮುಸಲಸಂಬಾಧಾತ್ ಕ್ಷತ್ರಿಯಪ್ರವರಾಂಭಸಃ ॥ ೨೬ ॥

ಜ್ಯಾಘೋಷತಳನಿರ್ಹ್ರಾದಾದ್ ಗದಾನಿಸ್ತ್ರಿಂಶವಿದ್ಯುತಃ ।
ದ್ರೋಣಾಸ್ತ್ರಮೇಘಾನ್ನಿರ್ಮುಕ್ತೌ ಸೂರ್ಯೇಂದೂ ತಿಮಿರಾದಿವ॥ ೨೭ ॥

ದ್ರೋಣರೆಂಬ ಮೊಸಳೆಯಿಂದ ಕೂಡಿದ ಮಡುವಿನಿಂದಲೂ, ಶಕ್ತಿ-ಋಷ್ಟಿಗಳೆಂಬ ಕಂಟಕ ಸಹಿತ ವಿಷವೃಕ್ಷಗಳಿಂದಲೂ, ಕಬ್ಬಿಣದ ಒನಕೆಗಳ ಸಮೂಹದಿಂದಲೂ, ಕ್ಷತ್ರಿಯ ಶ್ರೇಷ್ಠರೆಂಬ ಪ್ರವಾಹದಿಂದಲೂ, ಹೆದೆಗಳ ಘೋಷವೆಂಬ ಸಿಡಿಲುಗಳಿಂದಲೂ, ಗದೆಗಳು-ಖಡ್ಗಗಳೆಂಬ ಮಿಂಚುಗಳಿಂದಲೂ, ದ್ರೋಣರ ಅಸ್ತ್ರಗಳೆಂಬ ಮೇಘದಿಂದಲೂ ನಿರ್ಮುಕ್ತರಾದ ಅವರು ಅಂಧಕಾರದಿಂದ ನಿರ್ಮುಕ್ತರಾದ ಸೂರ್ಯಚಂದ್ರರಂತೆ ಕಂಡುಬಂದರು.

ಬಾಹುಭ್ಯಾಮಿವ ಸಂತೀರ್ಣೌ ಸಿಂಧುಷಷ್ಠಾಃ ಸಮುದ್ರಗಾಃ ।
ತಪಾಂತೇ ಸರಿತಃ ಪೂರ್ಣಾ ಮಹಾಗ್ರಾಹಸಮಾಕುಲಾಃ ॥ ೨೮ ॥

ಬೇಸಿಗೆಯ ಅನಂತರದಲ್ಲಿ ಮಳೆಗಾಲದಲ್ಲಿ ದೊಡ್ಡ ಮೊಸಳೆಗಳಿಂದ ನಿಬಿಡವಾದ, ಪೂರ್ಣಪ್ರವಾಹದಿಂದ ಹರಿಯುವ ಸಿಂಧು ಮೊದಲಾದ ಸಮುದ್ರಗಾಮಿಗಳಾದ ಆರು ನದಿಗಳನ್ನು ಬಾಹುಗಳಿಂದಲೇ ದಾಟಿದವರಂತೆ ಕಂಡುಬಂದರು.

ಮಹಾಶೈಲೋಚ್ಚಯಾಂ ಘೋರಾಂ ಲಂಘಯಿತ್ವಾ ಮಹಾನದೀಮ್ ।
ನಿಸ್ತೀರ್ಣಾವಧ್ವಗೌ ಯದ್ವತ್ ತದ್ವತ್ ತೌ ತಾರಿತೌ ರಣೇ ॥ ೨೯ ॥

ಮಹಾಶೈಲ ಸಮೂಹಗಳಿಂದ ಕೂಡಿದ ಘೋರವಾದ ಮಹಾನದಿಯನ್ನು ದಾಟಿದ ದಾರಿಹೋಕರಂತೆ ಅವರು ಕೌರವ ಸೈನ್ಯವನ್ನು ದಾಟಿದರು.

ಇತಿ ಕೃಷ್ಣೌ ಮಹಾಭಾಗೌ ಯಶಸಾ ಲೋಕವಿಶ್ರುತೌ ।
ಸರ್ವಭೂತಾನ್ಯಮನ್ಯಂತ ದ್ರೋಣಾಸ್ತ್ರಬಲವಿಸ್ಮಯಾತ್ ॥ ೩೦ ॥

ದ್ರೋಣರ ಅಸ್ತ್ರಬಲವನ್ನು ತಿಳಿದ ಯೋಧರು ವಿಸ್ಮಯದಿಂದ, ಮಹಾಭಾಗರೂ, ತಮ್ಮ ಕೀರ್ತಿಯಿಂದ ಲೋಕವಿಶ್ರುತರೂ ಆದ ಕೃಷ್ಣಾರ್ಜುನರನ್ನು ನೋಡಿ ಹೀಗೆ ತಿಳಿದರು.

ಜಯದ್ರಥಂ ಸಮೀಪಸ್ಥಂ ಸಮೀಕ್ಷಂತೌ ಜಿಘಾಂಸಯಾ ।
ರುರುಂ ನಿಪಾನೇ ಲಪ್ಸಂತೌ ವ್ಯಾಘ್ರವತ್ ತಾವತಿಷ್ಠತಾಮ್ ॥ ೩೧ ॥

ಜಯದ್ರಥನನ್ನು ಸಮೀಪದಿಂದ ನೋಡಿ, ಅವನನ್ನು ಕೊಲ್ಲಲು ಬಯಸಿ ರುರು (ಜಿಂಕೆ) ಮೃಗವನ್ನು ಜಲಪಾನದಲ್ಲಿ ಕೊಲ್ಲಲು ಬಯಸಿದ ಎರಡು ವ್ಯಾಘ್ರಗಳಂತೆ ಅವರು ನಿಂತರು.

ಯಥಾ ಹಿ ಮುಖವರ್ಣೋ ಽಯಮನಯೋರಿತಿ ಮೇನಿರೇ ।
ತವ ಯೋಧಾ ಮಹಾರಾಜ ಹತಮಾಹುರ್ಜಯದ್ರಥಮ್ ॥ ೩೨ ॥

ಅವರ ಮುಖದ ಕಾಂತಿಯನ್ನು ನೋಡಿದರೆ ಹಾಗೆ ತೋರುತ್ತದೆ ಎಂದು ತಿಳಿದರು. ಎಲೈ ಮಹಾರಾಜನೇ, ನಿನ್ನ ಯೋಧರು ಜಯದ್ರಥನು ವಿನಾಶವನ್ನು ಹೊಂದಿದನು ಎಂದೇ ಹೇಳಿದರು.

ಲೋಹಿತಾಕ್ಷೌ ಮಹಾಬಾಹೂ ಸಂಯತ್ತೌ ಕೃಷ್ಣಪಾಂಡವೌ ।
ಸಿಂಧುರಾಜಮಭಿಪ್ರೇಕ್ಷ್ಯ ಹೃಷ್ಟೌ ನಿನದತುರ್ಮುಹುಃ ॥ ೩೩ ॥

ಲೋಹಿತಾಕ್ಷರೂ, ಮಹಾಬಾಹುಗಳೂ, ಪ್ರಯತ್ನಶೀಲರೂ ಆದ ಕೃಷ್ಣಪಾಂಡವರು ಸೈಂಧವನನ್ನು ನೋಡಿ ಸಂತೋಷಗೊಂಡವರಾಗಿ ಪುನಃ ಪುನಃ ಸಿಂಹನಾದವನ್ನು ಮಾಡಿದರು.

ಶೌರೇರಭೀಶುಹಸ್ತಸ್ಯ ಪಾರ್ಥಸ್ಯ ಚ ಧನುಷ್ಮತಃ ।
ತಯೋರಾಸೀತ್ ಪ್ರಭಾ ರಾಜನ್ ಸೂರ್ಯಪಾವಕಯೋರಿವ ॥ ೩೪ ॥

ಚಾವಟಿಯನ್ನು ಹಿಡಿದ ಕೃಷ್ಣನ ಮತ್ತು ಧನುಸ್ಸನ್ನು ಹಿಡಿದ ಅರ್ಜುನನ ಕಾಂತಿಯು ಎಲೈ ರಾಜನೇ, ಸೂರ್ಯಾಗ್ನಿಗಳ ಕಾಂತಿಯಂತೆ ಇದ್ದಿತು.

ಹರ್ಷ ಏವಂ ತಯೋರಾಸೀದ್ ದ್ರೋಣಾನೀಕಾತ್ ಪ್ರಮುಕ್ತಯೋಃ ।
ಸಮೀಪೇ ಸೈಂಧವಂ ದೃಷ್ಟ್ವಾ ಶ್ಯೇನಯೋರಾಮಿಷಂ ಯಥಾ ॥ ೩೫ ॥

ದ್ರೋಣರ ಸೈನ್ಯವನ್ನು ದಾಟಿ ಮುಂದೆ ಬಂದ ಆವರಿಗೆ ಸೈಂಧವನನ್ನು ನೋಡಿ ಮಾಂಸವನ್ನು ನೋಡಿದ ಗಿಡುಗಗಳಿಗೆ ಉಂಟಾಗುವಂತೆ ಹರ್ಷ ಉಂಟಾಯಿತು.

ತೌ ತು ಸೈಂಧವಮಾಲೋಕ್ಯ ವರ್ತಮಾನಮಿವಾಂತಿಕೇ ।
ಸಹಸಾ ಪೇತತುಃ ಕ್ರುದ್ಧೌ ಕ್ಷಿಪ್ರಂ ಶ್ಯೇನಾವಿವಾಮಿಷೇ ॥ ೩೬ ॥

ಅವರು ಸಮೀಪದಲ್ಲಿಯೇ ಇರುವಂತೆ ತೋರುತ್ತಿದ್ದ ಸೈಂಧವನನ್ನು ನೋಡಿ ತಕ್ಷಣ ಕೋಪಗೊಂಡು ಗಿಡಗಗಳು ಮಾಂಸದ ತುಂಡಿನ ಮೇಲೆ ಎರಗಿದಂತೆ ಅವನ ಮೇಲೆ ಎರಗಿದರು.

ತೌ ತು ದೃಷ್ಟ್ವಾ ವ್ಯತಿಕ್ರಾಂತೌ ಹೃಷೀಕೇಶಧನಂಜಯೌ ।
ಸಿಂಧುರಾಜಸ್ಯ ರಕ್ಷಾರ್ಥಂ ಪರಾಕ್ರಾಂತಃ ಸುತಸ್ತವ ॥ ೩೭ ॥

ಕೃಷ್ಣಾರ್ಜುನರು ದ್ರೋಣರ ಸೈನ್ಯವನ್ನು ದಾಟಿದುದನ್ನು ನೋಡಿ ನಿನ್ನ ಪುತ್ರನಾದ ದುರ್ಯೋಧನನು ಪರಾಕ್ರಮಶಾಲಿಯಾದ ಸಿಂಧುರಾಜನ ರಕ್ಷಣೆಗಾಗಿ ಬಂದನು.

ದ್ರೋಣೇನ ಬದ್ಧಕವಚೋ ರಾಜಾ ದುರ್ಯೋಧನಸ್ತದಾ ।
ಯಯಾವೇಕರಥೇನಾಜೌ ಹಯಸಂಸ್ಕಾರವಿತ್ ಪ್ರಭೋ ॥ ೩೮ ॥

ದ್ರೋಣರಿಂದ ಕವಚಧಾರಣೆಯನ್ನು ಮಾಡಿಸಿಕೊಂಡ ರಾಜನಾದ, ಅಶ್ವಸಂಸ್ಕಾರಗಳನ್ನು ತಿಳಿದ ದುರ್ಯೋಧನನು ಎಲೈ ಪ್ರಭುವೇ, ಒಂದು ರಥದಿಂದ ಕೃಷ್ಣಾರ್ಜುನರ ಕಡೆಗೆ ಬಂದನು.

ಕೃಷ್ಣಪಾರ್ಥೌ ಮಹೇಷ್ವಾಸೌ ವ್ಯತಿಕ್ರಮ್ಯ ತು ತೇ ಸುತಃ ।
ಅಗ್ರತಃ ಪುಂಡರೀಕಾಕ್ಷಂ ಪ್ರತೀಯಾಯ ನರಾಧಿಪಃ ॥ ೩೯ ॥

ರಾಜನಾದ ನಿನ್ನ ಪುತ್ರನು ಮಹಾಧನುರ್ಧಾರಿಗಳಾದ ಕೃಷ್ಣಾರ್ಜುನರನ್ನು ದಾಟಿ ಕೃಷ್ಣನಿಗೆ ಎದುರಾಗಿ ಮುಂದೆ ನಿಂತನು.

ತತಃ ಸೈನ್ಯಾನಿ ಸರ್ವಾಣಿ ವಾದಿತ್ರಾಣಿ ಪ್ರಹೃಷ್ಟವತ್ ।
ಅವಾದಯನ್ನತಿಕ್ರಾಂತೇ ಪುತ್ರೇ ತವ ಧನಂಜಯಮ್ ॥ ೪೦ ॥

ಆಗ ನಿನ್ನ ಪುತ್ರನು ಧನಂಜಯನನ್ನು ದಾಟಿ ಹೋದಾಗ ನಿನ್ನ ಸೈನ್ಯವೆಲ್ಲವೂ ಸಂತೋಷದಿಂದ ಕೂಡಿದವರಂತೆ ವಾದ್ಯಗಳನ್ನು ಬಾರಿಸಿದವು.

ಸಿಂಹನಾದರವಾಶ್ಚಾಸನ್ ಶಂಖಶಬ್ದವಿಮಿಶ್ರಿತಾಃ ।
ದೃಷ್ಟ್ವಾ ದುರ್ಯೋಧನಂ ತತ್ರ ಕೃಷ್ಣೌ ಪ್ರಮುಖೇ ಸ್ಥಿತಮ್ ॥೪೧॥

ದುರ್ಯೋಧನನು ಕೃಷ್ಣಾರ್ಜುನರ ಎದುರಿಗೆ ನಿಂತಿರುವುದನ್ನು ನೋಡಿ ಆಗ ಶಂಖಘೋಷಗಳಿಂದ ಮಿಶ್ರಿತವಾದ ಸಿಂಹನಾದವು ಉಂಟಾದವು.

ಯೇ ಚ ತೇ ಸಿಂಧುರಾಜಸ್ಯ ಗೋಪ್ತಾರಃ ಪಾವಕೋಪಮಾಃ ।
ತೇಽಪ್ಯಹೃಷ್ಯಂತ ಸಮರೇ ದೃಷ್ಟ್ವಾ ಪುತ್ರಂ ತವಾಭಿಭೋ ॥ ೪೨ ॥

ಎಲೈ ಶತ್ರುಪರಾಭಾವಕನೇ, ಸಿಂಧುರಾಜನ ರಕ್ಷಕರಾದ ಅಗ್ನಿಸದೃಶರಾದ ರಾಜರೂ ಸಹ ರಣರಂಗದಲ್ಲಿ ಸಮೀಪದಲ್ಲಿ ದುರ್ಯೋಧನನನ್ನು ನೋಡಿ ಹರ್ಷಗೊಂಡರು.

ದೃಷ್ಟ್ವಾ ದುರ್ಯೋಧನಂ ಕೃಷ್ಣಃ ತ್ವತ್ಕ್ರಾಂತಂ ಸಹಾನುಗಮ್ ।
ಅಬ್ರವೀದರ್ಜುನಂ ರಾಜನ್ ಪ್ರಾಪ್ತಕಾಲಮಿದಂ ವಚಃ ॥ ೪೩ ॥

ಕೃಷ್ಣನು ತನ್ನ ಅನುಯಾಯಿಗಳ ಜೊತೆಯಲ್ಲಿ ದುರ್ಯೋಧನನು ತಮ್ಮನ್ನು ದಾಟಿದುದನ್ನು ನೋಡಿ ಎಲೈ ರಾಜನೇ, ಆ ಕಾಲದಲ್ಲಿ ಅರ್ಜುನನನ್ನು ಕುರಿತು ಯೋಗ್ಯವಾದ ಈ ಮಾತುಗಳನ್ನು ಆಡಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ

ದ್ರೋಣಪರ್ವಣಿ ಅಷ್ಟಾಶೀತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂಬತ್ತನೆಯ ಅಧ್ಯಾಯ

ದುರ್ಯೋಧನನು ತಡೆಯುತ್ತಿರಲು ಕೃಷ್ಣನಿಂದ ಅರ್ಜುನನಿಗೆ ಅವನ ದುಷ್ಕೃತ್ಯಗಳ ಜ್ಞಾಪನೆ. ಅರ್ಜುನನನ್ನು ಕುರಿತು ದುರ್ಯೋಧನನ ಪಿಯೋಚನ.

ಶ್ರೀಭಗವಾನ್

ಸುಯೋಧನಮತಿಕ್ರಾಂತಮೇನಂ ಪಶ್ಯ ಧನಂಜಯ ।
ಆಪದ್ಗತಮಿಮಂ ಮನ್ಯೇ ನಾಸ್ಯಸ್ಯ ಸದೃಶೋ ರಥಃ ॥ ೧ ॥

ಶ್ರೀಭಗವಾನ್– ಎಲೈ ಧನಂಜಯನೇ, ಸುಯೋಧನನು ನಮ್ಮನ್ನು ದಾಟಿ ಹೋದುದನ್ನು ನೋಡು. ಅವನು ಆಪತ್ತಿನಲ್ಲಿದ್ದಾನೆಂದು ನಾನು ಭಾವಿಸುತ್ತೇನೆ. ಇಲ್ಲಿ ಅವನಿಗೆ ಸಹಾಯ ಮಾಡುವ ಸದೃಶವಾದ ರಥವು ಯಾವುದೂ ಇಲ್ಲ.

ದೂರಪಾತೀ ಮಹೇಷ್ವಾಸಃ ಕೃತಾಸ್ತ್ರೋ ಯುದ್ಧದುರ್ಮದಃ ।
ದೃಢಹಸ್ತಶ್ಚಿತ್ರಯೋಧೀ ಧಾರ್ತರಾಷ್ಟ್ರೋ ಮಹಾರಥಃ ॥ ೨ ॥

ದುರ್ಯೋಧನನು ದೂರದವರೆಗೂ ಬಾಣಗಳನ್ನು ಪ್ರಯೋಗಿಸುವವನೂ, ಮಹಾಧನುರ್ಧಾರಿಯೂ, ಅಸ್ತ್ರಜ್ಞಾನವುಳ್ಳವನೂ, ಯುದ್ಧದುರ್ಮದನೂ, ದೃಢವಾದ ಹಸ್ತವುಳ್ಳವನೂ, ವಿಚಿತ್ರವಾಗಿ ಯುದ್ಧವನ್ನು ಮಾಡುವವನೂ ಆದ ಮಹಾರಥನಾಗಿದ್ದಾನೆ.

ಆತ್ಯಂತಸುಖಿಸಂವೃದ್ಧೋ ಮಾನಿತಶ್ಚ ಮಹಾರಥೈಃ ।
ಕೃತೀ ಚ ಸತತಂ ಪಾರ್ಥ ನಿತ್ಯಂ ದ್ವೇಷ್ಟಿ ಚ ಪಾಂಡವಾನ್ ॥ ೩ ॥

ಅವನು ಬಹಳ ಸುಖಿವಾಗಿ ಬೆಳೆದವನು. ಮಹಾರಥರಿಂದ ಸಮ್ಮಾನಿತನಾದವನು. ಎಲೈ ಅರ್ಜುನನೇ, ಸತತವಾಗಿ ಪ್ರಯತ್ನಶೀಲನಾದವನು ಮತ್ತು ಯಾವಾಗಲೂ ಪಾಂಡವರಾದ ನಿಮ್ಮನ್ನು ದ್ವೇಷಿಸುವವನು.

ತೇನ ಯುದ್ಧಮಹಂ ಮನ್ಯೇ ಪ್ರಾಪ್ತಕಾಲಮರಿಂದಮ ।
ಅತ್ರ ವೋ ದ್ಯೂತಮಾಯತ್ತಂ ವಿಜಯಸ್ಯೇತರಸ್ಯ ವಾ ॥ ೪ ॥

ಎಲೈ ಅರಿಂದಮನೇ, ಅವನ ಜೊತೆಯಲ್ಲಿ ಯುದ್ಧವು ಈಗ ಯೋಗ್ಯವಾದುದೆಂದು ನಾನು ಭಾವಿಸುತ್ತೇನೆ. ಜಯವನ್ನು ಅಥವಾ ಪರಾಜಯವನ್ನು ಪಣವಾಗಿಟ್ಟು ನಡೆಯುವ ಈ ನಿಮ್ಮ ದ್ಯೂತವು ಇವನನ್ನು ಅವಲಂಬಿಸಿದೆ.

ಅತ್ರ ಕೋಪವಿಷಂ ಪಾರ್ಥ ವಿಮುಂಚ ಚಿರಸಂಭೃತಮ್ ।
ಏಷ ಮೂಲಂ ಹ್ಯನರ್ಥಾನಾಂ ಪಾಂಡವಾನಾಂ ಮಹಾತ್ಮನಾಮ್ ॥೫॥

ಎಲೈ ಅರ್ಜುನನೇ, ಬಹಳ ಕಾಲದಿಂದ ತಡೆಹಿಡಿದಿಟ್ಟುಕೊಂಡಿರುವ ನಿನ್ನ ಕೋಪದ ವಿಷವನ್ನು ಇವನ ಮೇಲೆ ಚೆಲ್ಲುವವನಾಗು. ಮಹಾತ್ಮರಾದ ಪಾಂಡವರಿಗೆ ಉಂಟಾದ ಎಲ್ಲ ಅನರ್ಥಗಳಿಗೂ ಇವನೇ ಮೂಲ ಕಾರಣನಾದವನು.

ಸೋಽಯಂ ಪ್ರಾಪ್ತವ್ಯಾಕ್ಷೇಪೇ ಪಶ್ಯ ಸಾಫಲ್ಯಮಾತ್ಮನಃ ।
ಕಥಂ ಹಿ ರಾಜಾ ರಾಜ್ಯಾರ್ಥೀ ತ್ವಯಾ ಗಚ್ಛೇತ ಸಂಯುಗಮ್ ॥ ೬ ॥

ಅಂತಹ ಇವನು ನಿನ್ನ ಬಾಣದ ವ್ಯಾಪ್ತಿಯಲ್ಲಿ ಸಿಲುಕಿದ್ದಾನೆ. ನಿನ್ನ ವಿದ್ಯೆಯು ಸಫಲವಾಗುವುದು, ನೋಡು. ಇಲ್ಲದಿದ್ದರೆ ರಾಜ್ಯಾರ್ಥಿಯಾದ ರಾಜನಾದ ಅವನು ನಿನ್ನ ಜೊತೆಯಲ್ಲಿ ಹೇಗೆ ಯುದ್ಧಕ್ಕೆ ಸಿದ್ಧನಾಗುವನು?

ದಿಷ್ಟ್ಯಾ ತ್ವಿದಾನೀಂ ಸಂಪ್ರಾಪ್ತ ಏಷ ತೇ ಬಾಣಗೋಚರಮ್ ।
ಯದ್ಧೈಷ ಜೀವಿತಂ ಜಹ್ಯಾತ್ ತಥಾ ಕುರು ಧನಂಜಯ ॥ ೭ ॥

ದೇವರ ದಯದಿಂದ ಈ ದಿನ ನಿನ್ನ ಬಾಣದ ವ್ಯಾಪ್ತಿಯಲ್ಲಿ ಸಿಲುಕಿದ್ದಾನೆ. ಎಲೈ ಧನಂಜಯನೇ, ಅವನು ಪ್ರಾಣವನ್ನು ತೊರೆಯುವಂತೆ ಮಾಡು.

ಐಶ್ವರ್ಯಮದಸಮ್ಮೂಢೋ ನೈಷ ದುಃಖಮುಪೇಯಿವಾನ್ ।
ನ ಚ ತೇ ಸಂಯುಗೇ ವೀರ್ಯಂ ಜಾನಾತಿ ಪುರುಷರ್ಷಭ ॥ ೮ ॥

ಐಶ್ವರ್ಯಮದದಿಂದ ಮತ್ತನಾದ ಅವನು ಇದುವರೆಗೆ ದುಃಖವನ್ನು ಹೊಂದಲಿಲ್ಲ. ಎಲೈ ಪುರುಷಶ್ರೇಷ್ಠನೇ, ಅವನು ಯುದ್ಧದಲ್ಲಿ ನಿನ್ನ ಪರಾಕ್ರಮವನ್ನು ತಿಳಿದಿಲ್ಲ.

ತ್ವಾಂ ಹಿ ಲೋಕಾಸ್ತ್ರಯಃ ಪಾರ್ಥ ಸಸುರಾಸುರಮಾನವಾಃ ।
ನೋತ್ಸಹಂತೇ ರಣೇ ಜೇತುಂ ಕಿಮುತೈಕಃ ಸುಯೋಧನಃ ॥ ೯ ॥

ಎಲೈ ಅರ್ಜುನನೇ, ಸುರಾಸುರ-ಗಂಧರ್ವ ಸಹಿತರಾದ ಮೂರುಲೋಕಗಳೂ ನಿನ್ನನ್ನು ಯುದ್ಧದಲ್ಲಿ ಗೆಲ್ಲಲಾರವು. ಇನ್ನು ಒಬ್ಬ ಸುಯೋಧನನು ಹೇಗೆ ಗೆದ್ದಾನು?

ದಿಷ್ಟ್ಯಾ ಸ ಸಮರೇ ಪ್ರಾಪ್ತಃ ತವ ಪಾರ್ಥ ರಥಾಂತಿಕಮ್ ।
ಜಹ್ಯೇನಂ ವೈ ಮಹಾಬಾಹೋ ಯಥಾ ವೃತ್ರಂ ಪುರಂದರಃ ॥ ೧೦ ॥

ಎಲೈ ಅರ್ಜುನನೇ, ದೇವರ ದಯೆಯಿಂದ ಅವನು ಈ ದಿನ ರಣರಂಗದಲ್ಲಿ ನಿನ್ನ ರಥದ ಸಮೀಪಕ್ಕೆ ಬಂದಿದ್ದಾನೆ. ಎಲೈ ಮಹಾಬಾಹುವೇ, ಇಂದ್ರನು ವೃತ್ರನನ್ನು ಕೊಂದಂತೆ ಅವನನ್ನು ಕೊಲ್ಲುವವನಾಗು.

ಏಷ ಹ್ಯನರ್ಥೇ ಸತತಂ ಪರಾಕ್ರಾಂತಸ್ತವಾನಘ ।
ನಿಕೃತ್ಯಾ ಧರ್ಮರಾಜಂ ಚ ದ್ಯೂತೇ ವಂಚಿತವಾನಯಮ್ ॥ ೧೧ ॥

ಎಲೈ ಅನಘನೇ, ಇವನು ಸತತವಾಗಿ ನಿಮಗೆ ಅನರ್ಥವನ್ನುಂಟು ಮಾಡುವುದರಲ್ಲಿ ಪ್ರಯತ್ನಶೀಲನಾಗಿದ್ದಾನೆ. ದ್ಯೂತದಲ್ಲಿ ಧರ್ಮರಾಜನನ್ನು ಮೋಸದಿಂದ ವಂಚನೆ ಮಾಡಿದ್ದಾನೆ.

ಬಹೂನಿ ಸುನೃಶಂಸಾನಿ ಕೃತಾನ್ಯೇತೇನ ಮಾನದ ।
ಯುಷ್ಮಾಸು ಪಾಪಮತಿನಾ ಅಪಾಪೇಷ್ವಪಿ ನಿತ್ಯದಾ ॥ ೧೨ ॥

ಎಲೈ ಮಾನದನೇ, ನೀವು ನಿರಪರಾಧಿಗಳಾದರೂ ನಿಮ್ಮಲ್ಲಿ ದುಷ್ಟಬುದ್ಧಿಯಿಂದ ನಿಮಗೆ ಅನೇಕ ಕ್ರೂರಕರ್ಮಗಳನ್ನು ಮಾಡಿದ್ದಾನೆ.

ತಮನಾರ್ಯಂ ಸದಾ ಕ್ಷುದ್ರಂ ಪರುಷಂ ಕಾಮಚಾರಿಣಮ್ ।
ಆರ್ಯಾಂ ಯುದ್ಧೇ ಮತಿಂ ಕೃತ್ವಾ ಜಹಿ ಪಾರ್ಥಾವಿಚಾರಯನ್ ॥೧೩॥

ನಿಕೃತ್ಯಾ ರಾಜ್ಯಹರಣಂ ವನವಾಸಂ ಚ ಪಾಂಡವ ।
ಪರಿಕ್ಲೇಶಂ ಚ ಕೃಷ್ಣಾಯಾ ಹೃದಿ ಕೃತ್ವಾ ಪರಾಕ್ರಮಮ್ ॥ ೧೪ ॥

ಎಲೈ ಪಾಂಡವನೇ, ಮೋಸದಿಂದ ರಾಜ್ಯಾಪಹಾರ, ವನವಾಸ, ದ್ರೌಪದಿಯ ಕ್ಲೇಶಗಳು ಎಲ್ಲವನ್ನೂ ಸ್ಮರಿಸಿ, ಪರಾಕ್ರಮವನ್ನು ಸ್ಮರಿಸಿ, ಯುದ್ಧದಲ್ಲಿ ಶ್ರೇಷ್ಠವಾದ ನಿರ್ಧಾರವನ್ನು ಹೊಂದಿದವನಾಗಿ, ಯಾವ ವಿಕಾರವನ್ನೂ ಹೊಂದದೆ, ಎಲೈ ಪಾರ್ಥನೇ, ಸದಾ ಅನಾಗರಿಕನೂ, ಕುದ್ಧನೂ, ಕ್ರೂರನೂ, ಕಾಮಚಾರಿಯೂ ಆದ ಅವನನ್ನು ಕೊಲ್ಲುವವನಾಗು.

ದಿಷ್ಟ್ಯಾಽಸ ತವ ಬಾಣಾನಾಂ ಗೋಚರೇ ಪರಿವರ್ತತೇ ।
ವಿಘಾತೇ ತವ ಕಾರ್ಯಸ್ಯ ದಿಷ್ಟ್ಯಾ ಚ ಚರತೇಽಗ್ರತಃ ॥ ೧೫ ॥

ನಿನ್ನ ಎಲ್ಲ ಉದ್ದೇಶವನ್ನು ವಿಘಟನೆ ಮಾಡಲು ಉದ್ದೇಶಿಸಿರುವ ಅವನು ದೇವರ ದಯದಿಂದ ನಿನ್ನ ಬಾಣದ ವ್ಯಾಪ್ತಿಗೆ ಸಿಲುಕಿ ನಿನ್ನ ಮುಂಭಾಗದಲ್ಲಿ ಸಂಚರಿಸುತ್ತಿದ್ದಾನೆ.

ದಿಷ್ಟ್ಯಾ ಜಾನಾತಿ ಸಂಗ್ರಾಮೇ ಯೋದ್ಧವ್ಯಂ ಹಿ ತ್ವಯಾ ಸಹ ।
ದಿಷ್ಟ್ಯಾ ಹಿ ಸಫಲಾಃ ಪಾರ್ಥ ಸರ್ವೇ ಕಾಮಾಶ್ಚ ಕಾಮದ ॥ ೧೬ ॥

ದೇವರ ದಯದಿಂದಲೇ ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡಲು ಈಗ ಯೋಗ್ಯವೆಂದು ತಿಳಿದಿದ್ದಾನೆ. ಎಲೈ ಕಾಮದನೇ, ಪಾರ್ಥನೇ, ದೇವರ ದಯದಿಂದ ನಮ್ಮ ಆಸೆಯೆಲ್ಲವೂ ಈಗ ಸಫಲವಾಗಿವೆ.

ತಸ್ಮಾಜ್ಜಹಿ ರಣೇ ಪಾರ್ಥ ಧಾರ್ತರಾಷ್ಟ್ರಂ ಕುಲಾಧಮಮ್ ।
ಯಥೇಂದ್ರೇಣ ಹತಃ ಪೂರ್ವಂ ಜಂಭೋ ದೈವಾಸುರೇ ಮೃಧೇ ॥೧೭॥

ಎಲೈ ಪಾರ್ಥನೇ, ಆದ್ದರಿಂದ ಹಿಂದೆ ದೇವಾಸುರರ ಯುದ್ಧದಲ್ಲಿ ಇಂದ್ರನು ಜಂಭಾಸುರನನ್ನು ಕೊಂದಂತೆ ಕುಲಾಧಮನಾದ, ಧೃತರಾಷ್ಟ್ರಪುತ್ರನಾದ ಇವನನ್ನು ಕೊಲ್ಲುವವನಾಗು.

ಅಸ್ಮಿನ್ ಹತೇ ತ್ವಯಾ ಸೈನ್ಯಮನಾಥಂ ಭಿದ್ಯತಾಮಿದಮ್ ।
ವೈರಸ್ಯ ದಿಷ್ಟ್ಯಾ ಸಹಜಂ ಮೂಲಂ ಛಿಂಧಿ ದುರಾತ್ಮನಃ ॥ ೧೮ ॥

ಇವನು ನಿನ್ನಿಂದ ಹತನಾದರೆ ಅನಾಥವಾದ ಈ ಸೈನ್ಯವು ಭಗ್ನವಾಗುತ್ತದೆ. ವೈರಕ್ಕೆ ಮೂಲಕಾರಣನಾದ ಈ ದುರಾತ್ಮನನ್ನು ಕೊಲ್ಲುವವನಾಗು.

ಸಂಜಯಃ

ತಂ ತಥೇತ್ಯಬ್ರವೀತ್ ಪಾರ್ಥಃ ಕೃತ್ಯರೂಪಮಿದಂ ಮಮ ।
ಸರ್ವಸೈನ್ಯಮನಾದೃತ್ಯ ಗಚ್ಛ ಯತ್ರ ಸುಯೋಧನಃ ॥ ೧೯ ॥

ಸಂಜಯ– ಅವನನ್ನು ಕುರಿತು ಪಾರ್ಥನು, ಇದು ನಾನು ಮಾಡಬೇಕಾದ ಶ್ರೇಷ್ಠವಾದ ಕಾರ್ಯ. ಎಲ್ಲಸೈನ್ಯವನ್ನೂ ಉಪೇಕ್ಷಿಸಿ ಸುಯೋಧನನು ಇದ್ದಲ್ಲಿಗೆ ರಥವನ್ನು ನಡೆಸು ಎಂದು ಹೇಳಿದನು.

ಯೇನೈತದ್ ದೀರ್ಘಕಾಲಂ ನೋ ಭುಕ್ತಂ ರಾಜ್ಯಮಕಂಟಕಮ್ ।
ತತೋಽಪ್ಯಸ್ಯ ವ್ಯತಿಕ್ರಮ್ಯ ಚ್ಛಿಂದ್ಯಾಂ ಮೂರ್ಧಾನಮಾಹವೇ ॥ ೨೦ ॥

ಯಾವ ಕಾರಣದಿಂದ ಇವನು ದೀರ್ಘಕಾಲದವರೆಗೆ ನಮ್ಮ ರಾಜ್ಯವನ್ನು ನಿಷ್ಕಂಟಕವಾಗಿ ಭೋಗಿಸಿದ್ದಾನೆಯೋ ಆ ಕಾರಣದಿಂದಲೇ ಅವನನ್ನು ಆಕ್ರಮಿಸಿ ಅವನ ಶಿರಸ್ಸನ್ನು ಕತ್ತರಿಸುವೆನು.

ಅಪಿ ತಸ್ಯಾ ಅನರ್ಹಾಯಾಃ ಪರಿಕ್ಲೇಶಸ್ಯ ಮಾಧವ ।
ಕೃಷ್ಣಾಯಾಃ ಶಕ್ನುಯಾಂ ಹಂತುಂ ಪದವೀಂ ಕಲಹಸ್ಯ ಚ ॥ ೨೧ ॥

ಎಲೈ ಮಾಧವನೇ, ದುಃಖಕ್ಕೆ ಅನರ್ಹಳಾದ ಆ ದ್ರೌಪದಿಯ ದುಃಖಗಳಿಗೂ ಮತ್ತು ಕಲಹಕ್ಕೂ ಕಾರಣನಾದ ಇವನನ್ನು ಈ ದಿನ ಕೊಲ್ಲಲು ಸಮರ್ಥನಾದೇನು.

ಅಪ್ಯಹಂ ತಾನಿ ದುಃಖಾನಿ ಪೂರ್ವವೃತ್ತಾನಿ ಮಾಧವ ।
ದುರ್ಯೋಧನಂ ರಣೇ ಹತ್ವಾ ಪ್ರತಿಮೋಕ್ಷ್ಯೇ ಕಥಂಚನ ॥ ೨೨ ॥

ಎಲೈ ಮಾಧವನೇ, ನಾನು ಈ ದಿನ ದುರ್ಯೋಧನನನ್ನು ಕೊಂದು ಹಿಂದೆ ಅನುಭವಿಸಿದ ಆ ದುಃಖಗಳಿಂದ ಹೇಗಾದರೂ ಬಿಡುಗಡೆಯನ್ನು ಹೊಂದುವೆನು.

ಇತ್ಯೇವಂವಾದಿನೌ ಹೃಷ್ಟೌ ಕೃಷ್ಣೌ ಶ್ವೇತಾನ್ ಹಯೋತ್ತಮಾನ್ ।
ಪ್ರೇಷಯಾಮಾಸತುಃ ಸಂಖೇ ಪ್ರೇಪ್ಸಂತೌ ತಂ ನರಾಧಿಪಮ್ ॥ ೨೩ ॥

ಹೀಗೆ ಮಾತನಾಡುತ್ತಾ ಸಂತೋಷಗೊಂಡ ಕೃಷ್ಣಾರ್ಜುನರು ಶ್ರೇಷ್ಠವಾದ ಶ್ವೇತಾಶ್ವಗಳನ್ನು ರಣರಂಗದಲ್ಲಿ ರಾಜನಾದ ದುರ್ಯೋಧನನ ಕಡೆಗೆ ಪ್ರಚೋದಿಸಿದರು.

ತಯೋಃ ಸಮೀಪಂ ಸಂಪ್ರಾಪ್ಯ ಪುತ್ರಸ್ತೇ ಭರತರ್ಷಭ ।
ನ ಚಕಾರ ಭಯಂ ಪ್ರಾಪ್ತೇ ಭಯೇ ಮಹತಿ ಮಾರಿಷ ॥ ೨೪ ॥

ಎಲೈ ಭರತಶ್ರೇಷ್ಠನೇ, ಪೂಜ್ಯನೇ, ಅವರ ಸಮೀಪಕ್ಕೆ ಬಂದ ನಿನ್ನ ಪುತ್ರನು ದೊಡ್ಡ ಭಯವು ಪ್ರಾಪ್ತವಾಗಿದ್ದರೂ ಭಯಪಡಲಿಲ್ಲ.

ತದಸ್ಯ ಕ್ಷತ್ರಿಯಾಃ ಕರ್ಮ ಸರ್ವ ಏವಾಭ್ಯಪೂಜಯನ್ ।
ಯದರ್ಜುನಹೃಷೀಕೇಶೌ ಪ್ರತ್ಯುದ್ಯಾತೋಽವಿಚಾರಯನ್ ॥ ೨೫ ॥

ಯಾವ ವಿಚಾರವನ್ನೂ ಮಾಡದೆ ಕೃಷ್ಣಾರ್ಜುನರ ವಿರುದ್ಧವಾಗಿ ನಿಂತ ಅವನ ಆ ಕರ್ಮವನ್ನು ಎಲ್ಲ ಕ್ಷತ್ರಿಯರೂ ಪೂಜಿಸಿದರು.

ತತಃ ಸರ್ವಸ್ಯ ಸೈನ್ಯಸ್ಯ ತಾವಕಸ್ಯ ವಿಶಾಂಪತೇ ।
ಮಹಾನ್ ನಾದೋ ಹ್ಯಭೂತ್ ತತ್ರ ದೃಷ್ಟ್ವಾ ರಾಜಾನಮಾಹವೇ॥೨೬॥

ಎಲೈ ರಾಜನೇ, ಆಗ ರಾಜನಾದ ದುರ್ಯೋಧನನು ರಣರಂಗದಲ್ಲಿ ಅವರ ಎದುರಿನಲ್ಲಿ ನಿಂತುದನ್ನು ನೋಡಿ, ನಿನ್ನ ಸೈನ್ಯದಲ್ಲಿ ಸಂತೋಷದ ದೊಡ್ಡ ನಾದ ಉಂಟಾಯಿತು.

ತಸ್ಮಿನ್ ಜನಸಮುನ್ನಾದೇ ಪ್ರವೃತ್ತೇ ಭೈರವೇ ಸತಿ ।
ಕದರ್ಥೀಕೃತ್ಯ ತೇ ಪುತ್ರಃ ಪ್ರತ್ಯಮಿತ್ರಮವಾರಯತ್ ॥ ೨೭ ॥

ಅಂತಹ ಭಯಂಕರವಾದ ಸೈನ್ಯಘೋಷವು ಉಂಟಾಗುತ್ತಿರಲು ನಿನ್ನ ಪುತ್ರನು (ಶತ್ರುಗಳನ್ನು) ತೃಣೀಕರಿಸಿ ಶತ್ರುವಾದ ಅರ್ಜುನನನ್ನು ತಡೆದನು.

ಆವಾರಿತಸ್ತು ಕೌಂತೇಯಃ ತವ ಪುತ್ರೇಣ ಸಂಯುಗೇ ।
ಸಂರಂಭಮಗಮದ್ ಭೂಯಃ ಸ ಚ ತಸ್ಮಿನ್ ಪರಂತಪಃ ॥ ೨೮ ॥

ನಿನ್ನ ಪುತ್ರನಿಂದ ತಡೆಯಲ್ಪಟ್ಟ ಅರ್ಜುನನು ಅವನ ಮೇಲೆ ಬಹಳ ಕೋಪವನ್ನು ಹೊಂದಿದನು. ಪರಂತಪನಾದ ದುರ್ಯೋಧನನೂ ಸಹ ಅರ್ಜುನನ ಮೇಲೆ ಕೋಪವನ್ನು ಹೊಂದಿದನು.

ತೌ ದೃಷ್ಟ್ವಾ ಪ್ರತಿಸಂರಬ್ಧೌ ದುರ್ಯೋಧನಧನಂಜಯೌ ।
ಅಭ್ಯವೈಕ್ಷಂತ ರಾಜಾನೋ ಭೀಮವೇಗಾಃ ಸಮಂತತಃ ॥ ೨೯ ॥

ದುರ್ಯೋಧನ ಮತ್ತು ಅರ್ಜುನರು ಪರಸ್ಪರವಾಗಿ ಕೋಪಗೊಂಡುದನ್ನು ನೋಡಿ ಭಯಂಕರ ವೇಗವುಳ್ಳ ರಾಜರೆಲ್ಲರೂ ಎಲ್ಲ ಕಡೆಗಳಿಂದಲೂ ಅವರನ್ನು ನೋಡಿದರು.

ದೃಷ್ಟ್ವಾ ತು ಪಾರ್ಥಂ ಸಂರಬ್ಧಂ ವಾಸುದೇವಂ ಚ ಮಾರಿಷ ।
ಪ್ರಹಸನ್ನೇವ ಪುತ್ರಸ್ತೇ ಯೋದ್ಧುಕಾಮಃ ಸಮಾಹ್ವಯತ್ ॥ ೩೦ ॥

ಎಲೈ ಪೂಜ್ಯನೇ, ನಿನ್ನ ಪುತ್ರನು ಕೋಪಗೊಂಡ ಕೃಷ್ಣಾರ್ಜುನರನ್ನು ನೋಡಿ ನಗುತ್ತಲೇ ಅವರನ್ನು ಯುದ್ಧಕ್ಕೆ ಆಹ್ವಾನಿಸಿದನು.

ತತಃ ಪ್ರಹೃಷ್ಟೌ ದಾಶಾರ್ಹಃ ಪಾಂಡವಶ್ಚ ಧನಂಜಯಃ ।
ವ್ಯಾಕ್ರೋಶೇತಾಂ ಮಹಾತ್ಮಾನೌ ದಧ್ಮತುಶ್ಚಾಂಬುಜೋತ್ತಮೌ ॥ ೩೧ ॥

ಆಗ ಸಂತೋಷಗೊಂಡ, ಮಹಾತ್ಮರಾದ ಕೃಷ್ಣ ಮತ್ತು ಧನಂಜಯರು ಸಿಂಹನಾದವನ್ನು ಮಾಡಿ, ತಮ್ಮ ಶ್ರೇಷ್ಠವಾದ ಶಂಖಗಳನ್ನು ಊದಿದರು.

ತೌ ಹೃಷ್ಟರೂಪೌ ಸಂಪ್ರೇಕ್ಷ್ಯ ಕುರವಸ್ತತ್ರ ಸರ್ವಶಃ ।
ನಿರಾಶಾಃ ಸಮಪದ್ಯಂತ ಪುತ್ರಸ್ಯ ತವ ಜೀವಿತೇ ॥ ೩೨ ॥

ರಣರಂಗದಲ್ಲಿ ಸಂತೋಷಗೊಂಡ ಅವರಿಬ್ಬರನ್ನೂ ನೋಡಿ ಕೌರವರೆಲ್ಲರೂ ನಿನ್ನ ಮಗನ ಜೀವಿತದ ವಿಷಯದಲ್ಲಿ ಆಸೆಯನ್ನು ತೊರೆದರು.

ಶೋಕಮೀಯುಃ ಪರಂ ಚೈವ ಕುರವಃ ಸರ್ವ ಏವ ಹಿ ।
ಅಮನ್ಯಂತ ಚ ಪುತ್ರಂ ತೇ ವೈಶ್ವಾನರಮುಖೇ ಹುತಮ್ ॥ ೩೩ ॥

ಎಲ್ಲ ಕುರುಗಳೂ ಬಹಳ ಶೋಕವನ್ನು ಹೊಂದಿದರು. ನಿನ್ನ ಪುತ್ರನು ಅಗ್ನಿ ಮುಖದಲ್ಲಿ ಹೋಮ ಮಾಡಲ್ಪಟ್ಟಿದ್ದಾನೆ ಎಂದು ತಿಳಿದರು.

ತಥಾ ಚ ದೃಷ್ಟ್ವಾ ಯೋಧಾಸ್ತೇ ಪ್ರಹೃಷ್ಟೌ ಕೃಷ್ಣಪಾಂಡವೌ ।
ಹತೋ ರಾಜಾ ಹತೋ ರಾಜೇತ್ಯೂಚುರೇವಂ ಭಯಾರ್ದಿತಾಃ ।
ಜನಸ್ಯ ಸನ್ನಿನಾದಂ ತಂ ಶ್ರುತ್ವಾ ದುರ್ಯೋಧನೋಽಬ್ರವೀತ್ ॥ ೩೪ ॥

ವೈತು ವೋ ಭೀ ರಣೇ ಕೃಷ್ಣೌ ಪ್ರೇಷಯಿಷ್ಯಾಮಿ ಮೃತ್ಯವೇ ॥ ೩೫ ॥

ಹಾಗೆ ಸಂತೋಷಗೊಂಡ ಕೃಷ್ಣಾರ್ಜುನರನ್ನು ನೋಡಿ, ನಿನ್ನ ಯೋಧರೆಲ್ಲರೂ ಭಯಗೊಂಡವರಾಗಿ ರಾಜನು ಹತನಾದನು, ರಾಜನು ಹತನಾದನು ಎಂದು ಕಿರುಚಿದರು. ಯೋಧರ ಆ ದೊಡ್ಡ ಶಬ್ದವನ್ನು ಕೇಳಿ ದುರ್ಯೋಧನನು- 'ನಿಮ್ಮ ಭಯವನ್ನು ಬಿಡಿ, ಯುದ್ಧದಲ್ಲಿ ನಾನು ಕೃಷ್ಣಾರ್ಜುನರನ್ನು ಮೃತ್ಯುಲೋಕಕ್ಕೆ ಕಳುಹಿಸುವೆನು' ಎಂದು ಹೇಳಿದನು.

ಇತ್ಯುಕ್ತ್ವಾ ಸೈನಿಕಾನ್ ಸರ್ವಾನ್ ಜಯಾಪೇಕ್ಷೀ ನರಾಧಿಪಃ ।
ಪಾರ್ಥಮಾಭಾಷ್ಯ ಸಂರಂಭಾದಿದಂ ವಚನಮಬ್ರವೀತ್ ॥ ೩೬ ॥

ಎಲ್ಲರನ್ನೂ ಕುರಿತು ಹೀಗೆ ಹೇಳಿ, ಜಯಾಕಾಂಕ್ಷಿಯಾದ ರಾಜನು ಕೋಪದಿಂದ ಪಾರ್ಥನನ್ನು ಸಂಬೋಧಿಸಿ ಈ ಮಾತನ್ನು ಆಡಿದನು.

ಪಾರ್ಥ ಯಚ್ಚಿತ್ತಂ ತೇಽಸ್ತ್ರಂ ದಿವ್ಯಂ ಮಾನುಷಮೇವ ಚ ।
ತದ್ ದರ್ಶಯ ಮಯಿ ಕ್ಷಿಪ್ರಂ ಯದಿ ಜಾತೋಽಸಿ ಪಾಂಡುನಾ ॥೩೭॥

ಎಲೈ ಅರ್ಜುನನೇ, ನೀನು ಪಾಂಡುವಿನ ಪುತ್ರನೇ ಆದರೆ ನೀನು ಅಭ್ಯಾಸ ಮಾಡಿದ ದಿವ್ಯ ಮತ್ತು ಮಾನುಷವಾದ ಅಸ್ತ್ರಗಳನ್ನು ಶೀಘ್ರವಾಗಿ ನನಗೆ ತೋರಿಸುವವನಾಗು (ನನ್ನ ಮೇಲೆ ಪ್ರಯೋಗಿಸುವವನಾಗು).

ಯದ್ ಬಲಂ ತವ ವೀರ್ಯಂ ಚ ಕೇಶವಸ್ಯ ತಥೈವ ಚ ।
ತತ್ ಕುರುಷ್ವ ಮಯಿ ಕ್ಷಿಪ್ರಂ ಪಶ್ಯಾಮಸ್ತವ ಪೌರುಷಮ್ ॥ ೩೮ ॥

ನಿನ್ನ ಮತ್ತು ಕೃಷ್ಣನ ಬಲ ಮತ್ತು ಪರಾಕ್ರಮಗಳು ಏನಿವೆಯೋ ಅದನ್ನು ಶೀಘ್ರವಾಗಿ ನನಗೆ ತೋರಿಸುವವನಾಗು. ನಿನ್ನ ಪರಾಕ್ರಮವನ್ನು ನೋಡೋಣ.

ಅಸ್ಮತ್ಪರೋಕ್ಷಂ ಕರ್ಮಾಣಿ ಪ್ರವದಂತ್ಯದ್ಭುತಾನಿ ತೇ ।
ಸ್ವಾಮಿಸತ್ಕಾರಯುಕ್ತಾನಿ ಯಾನಿ ತಾನೀಹ ದರ್ಶಯ ॥ ೫೯ ॥

ನಿನ್ನ ಸ್ವಾಮಿಯಾದ ಕೃಷ್ಣನಿಂದ ಪ್ರಶಂಸಿಸಲ್ಪಟ್ಟ, ನನ್ನ ಪರೋಕ್ಷದಲ್ಲಿ ಮಾಡಿದ ನಿನ್ನ ಅದ್ಭುತವಾದ ಕರ್ಮಗಳನ್ನು ಕುರಿತು ಎಲ್ಲರೂ ಮಾತನಾಡುತ್ತಾರೆ. ಅವೇನಿವೆಯೋ ಅವುಗಳನ್ನು ಇಲ್ಲಿನನಗೆ ತೋರಿಸುವವನಾಗು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನನವತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಬತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತನೆಯ ಅಧ್ಯಾಯ

ಅರ್ಜುನನಿಂದ ದುರ್ಯೋಧನನ ಪರಾಜಯ ಮತ್ತು
ಸೈಂಧವನ ಕಡೆಗೆ ಅರ್ಜುನನ ಗಮನ.

ಸಂಜಯಃ

ಏವಮುಕ್ತ್ವಾಽರ್ಜುನಂ ರಾಜಾ ತ್ರಿಭಿರ್ಮರ್ಮಾತಿಗೈಃ ಶರೈಃ ।
ಪ್ರತ್ಯವಿದ್ಧ್ಯನ್ಹಾವೇಗೈಃ ಚತುರ್ಭಿಶ್ಚತುರೋ ಹಯಾನ್ ॥ ೧ ॥

ಸಂಜಯ– ರಾಜನಾದ ದುರ್ಯೋಧನನು ಅರ್ಜುನನಿಗೆ ಹೀಗೆ ಹೇಳಿ ಅವನನ್ನು ಮಹಾವೇಗವುಳ್ಳ, ಮರ್ಮಭೇದಿಗಳಾದ ಮೂರು ಬಾಣಗಳಿಂದ ಹೊಡೆದು, ನಾಲ್ಕು ಬಾಣಗಳಿಂದ ರಥದ ನಾಲ್ಕು ಅಶ್ವಗಳನ್ನೂ ಹೊಡೆದನು.

ವಾಸುದೇವಂ ಚ ದಶಭಿಃ ಪ್ರತ್ಯವಿದ್ಧ್ಯತ್ ಸ್ತನಾಂತರೇ ।
ಪ್ರತೋದಂ ಚಾಸ್ಯ ಭಲ್ಲೇನ ಛಿತ್ತ್ವಾ ಭೂಮಾವಪಾತಯತ್ ॥ ೨ ॥

ಕೃಷ್ಣನನ್ನೂ ಸಹ ಹತ್ತು ಬಾಣಗಳಿಂದ ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು. ಅವನ ಹಸ್ತದಲ್ಲಿದ್ದ ಚಾವಟಿಯನ್ನೂ ಸಹ ಭಲ್ಲದಿಂದ ಹೊಡೆದು ಭೂಮಿಯ ಮೇಲೆ ಕೆಡವಿದನು.

ತಂ ಚತುರ್ದಶಭಿಃ ಪಾರ್ಥಃ ಚಿತ್ರಪುಂಖೈಃ ಶಿಲಾಶಿತೈಃ ।
ಅವಿಧ್ಯತ್ ತೂರ್ಣಮವ್ಯಗ್ರೋ ತೇ ಚಾಭ್ರಶ್ಯಂತ ವರ್ಮಣಿ ॥ ೩ ॥

ಅರ್ಜುನನು ಯಾವ ಗಾಬರಿಯೂ ಇಲ್ಲದೆ, ವಿಚಿತ್ರವಾದ ಪುಂಖಗಳನ್ನು ಹೊಂದಿದ್ದ, ಕಲ್ಲಿನಿಂದ ಸಾಣೆಯನ್ನು ಹಿಡಿದ ಹದಿನಾಲ್ಕು ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು. ಆ ಬಾಣಗಳು ದುರ್ಯೋಧನನ ಕವಚವನ್ನು ತಲುಪಿ ಭ್ರಷ್ಟವಾದವು.

ತೇಷಾಂ ವೈಫಲ್ಯಮಾಲೋಕ್ಯ ಪುನರ್ನವ ಚ ಪಂಚ ಚ ।
ಪ್ರಾಹಿಣೋನ್ನಿಶಿತಾನ್ ಬಾಣಾನ್ ತೇ ಹ್ಯಭ್ರಶ್ಯಂತ ವರ್ಮಣಃ ॥ ೪ ॥

ಅರ್ಜುನನು ಅವುಗಳು ವಿಫಲವಾದುದನ್ನು ನೋಡಿ, ಪುನಃ ಅವನ ಮೇಲೆ ಹದಿನಾಲ್ಕು ಬಾಣಗಳನ್ನು ಪ್ರಯೋಗಿಸಿದನು. ಅವುಗಳೂ ಸಹ ಅವನ ಕವಚವನ್ನು ತಲುಪಿ ವ್ಯರ್ಥವಾದವು.

ಅಷ್ಟಾವಿಂಶಚ್ಛಿತಾನ್ ಬಾಣಾನ್ ತಾನ್ ವೈ ಪ್ರೇಕ್ಷ್ಯ ಸ ನಿಷ್ಫಲಾನ್ ।
ಅಬ್ರವೀತ್ ಪರವೀರಘ್ನಃ ಕೃಷ್ಣೋSರ್ಜುನಮಿದಂ ವಚಃ ॥ ೫ ॥

ಇಪ್ಪತ್ತೆಂಟು ಬಾಣಗಳು ವ್ಯರ್ಥವಾದುದನ್ನು ನೋಡಿ, ಪರವೀರಘಾತಕನಾದ ಕೃಷ್ಣನು ಅರ್ಜುನನನ್ನು ಕುರಿತು ಈ ಮಾತನ್ನು ಆಡಿದನು.

ಅದೃಷ್ಟಪೂರ್ವಂ ಪಶ್ಯಾಮಿ ಶಿಲಾನಾಮಿವ ಸರ್ಪಣಮ್ ।
ತ್ವಯಾ ಸಂಪ್ರೇಷಿತಾಃ ಪಾರ್ಥ ನಾರ್ಥಂ ಕುರ್ವಂತಿ ಪತ್ರಿಣಃ ॥ ೬ ॥

ಹಿಂದೆಂದೂ ನೋಡದಿದ್ದ ಬಂಡೆಗಳ ಚಲನೆಯಂತಿರುವ ದೃಶ್ಯವನ್ನು ನೋಡುತ್ತಿದ್ದೇನೆ. ಎಲೈ ಅರ್ಜುನನೇ, ನೀನು ಪ್ರಯೋಗಿಸಿದ ಪತ್ರಸಹಿತವಾದ ಬಾಣಗಳು ವ್ಯರ್ಥವಾಗುತ್ತಿವೆ.

ಕಚ್ಚಿದ್ ಗಾಂಡೀವಜಃ ಪ್ರಾಣಃ ತಥೈವ ಭರತರ್ಷಭ ।
ಮುಷ್ಣಿಶ್ಚ ತೇ ಯಥಾಪೂರ್ವಂ ಭುಜಯೋಶ್ಚ ಬಲಂ ತವ ॥ ೭ ॥

ಎಲೈ ಭರತಶ್ರೇಷ್ಠನೇ, ಗಾಂಡೀವದ ಪ್ರಾಣವಾಗಲೀ, ನಿನ್ನ ಮುಷ್ಟಿಯಾಗಲೀ, ನಿನ್ನ ಭುಜಗಳ ಬಲವಾಗಲೀ ಹಿಂದಿನಂತೆಯೇ ಇವೆಯಷ್ಟೆ?

ವಿಧೇರ್ಬಲಾದಯಂ ಕಾಲಃ ಪ್ರಾಪ್ತಃ ಸ್ಯಾದದ್ಯ ಪಶ್ಚಿಮಃ ।
ತವ ಚೈವಾಸ್ಯ ಶತ್ರೋಶ್ಚ ತನ್ಮಮಾಚಕ್ಷ್ವ ಪೃಚ್ಛತಃ ॥ ೮ ॥

ಅಥವಾ ವಿಧಿಯ ಇಚ್ಛೆಯಂತೆ ಇಂತಹ ನಿನ್ನ ಪಶ್ಚಿಮ ಕಾಲವು ಮತ್ತು ನಿನ್ನ ಶತ್ರುವಿನ ಉದಯ ಕಾಲವು ಉಂಟಾಗಿರಬಹುದು. ನಿನ್ನನ್ನು ಕೇಳುತ್ತಿರುವ ನನಗೆ ಅದನ್ನು ಹೇಳು.

ವಿಸೃಜೋ ಮೇ ಮಹಾನ್ ಪಾರ್ಥ ತವ ದೃಷ್ಟ್ವಾ ಶರಾನಿಮಾನ್ ।
ವ್ಯರ್ಥಾನ್ನಿಪತಿತಾನ್ ಸಂಖೇ ದುರ್ಯೋಧನರಥಂ ಪ್ರತಿ ॥ ೯ ॥

ಎಲೈ ಪಾರ್ಥನೇ, ನಿನ್ನ ಈ ಬಾಣಗಳು ದುರ್ಯೋಧನನ ರಥದ ಬಳಿಯಲ್ಲಿ ವ್ಯರ್ಥವಾಗಿ ಬೀಳುತ್ತಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ.

ವಜ್ರಾಶನಿಸಮಾ ಘೋರಾಃ ಪರಕಾಯಾವಭೇದಿನಃ ।
ಶರಾಃ ಕುರ್ವಂತಿ ತೇ ಪಾರ್ಥ ಪಾರ್ಥಿವೇಽದ್ಯ ವಿಡಂಬನಾಮ್ ॥೧೦॥

ವಜ್ರಾಯುಧಕ್ಕೂ ಮತ್ತು ಸಿಡಿಲುಗಳಿಗೂ ಸಮನಾದ, ಪರಕಾಯವನ್ನು ಸೀಳುವ ಘೋರವಾದ ಈ ಬಾಣಗಳು ಎಲೈ ಪಾರ್ಥನೇ, ನಿನ್ನನ್ನು ಅಪಹಾಸ ಮಾಡುತ್ತಿವೆ.

ಅರ್ಜುನಃ

ದ್ರೋಣೇನ ನಿಯತಂ ಕೃಷ್ಣ ಧಾರ್ತರಾಷ್ಟ್ರೇ ನಿವೇಶಿತಮ್ ।
ಅಂತೇ ವಿಹಿತಮಸ್ತ್ರಾಣಾಮೇತತ್ಕವಚಧಾರಣಮ್ ॥ ೧೧ ॥

ಅರ್ಜುನ– ಎಲೈ ಕೃಷ್ಣನೇ, ಖಂಡಿತವಾಗಿ ದ್ರೋಣರು ನನ್ನ ಅಸ್ತ್ರಗಳ ವಿನಾಶಕ್ಕಾಗಿ ದುರ್ಯೋಧನನಿಗೆ ಈ ಕವಚಧಾರಣೆಯನ್ನು ಮಾಡಿಸಿದ್ದಾರೆ.

ಆಸ್ಮನ್ನಂತರ್ಹಿತಂ ಕೃಷ್ಣ ತ್ರೈಲೋಕ್ಯಮಪಿ ವರ್ಮಣಿ ।
ಏಕೋ ದ್ರೋಣೋ ಹಿ ವೇದೈತದಹಂ ತಸ್ಮಾಚ್ಚ ಸತ್ತಮಾತ್ ॥ ೧೨ ॥

ಎಲೈ ಕೃಷ್ಣನೇ, ಈ ಕವಚದಲ್ಲಿ ಮೂರುಲೋಕಗಳೂ ಅಡಗಿವೆ. ಈ ಕವಚದ ಸಂವಿಧಾನವು ದ್ರೋಣರೊಬ್ಬರಿಗೇ ತಿಳಿದಿದೆ. ಆ ಸಜ್ಜನಶ್ರೇಷ್ಠರ ಉಪದೇಶದಿಂದ ನಾನೂ ತಿಳಿದಿದ್ದೇನೆ.

ನ ಶಕ್ಯಮೇತತ್ ಕವಚಂ ಬಾಣೈರ್ಭೇತ್ತುಂ ಕಥಂಚನ ।
ಅಪಿ ವಜ್ರೇಣ ಗೋವಿಂದ ಸ್ವಯಂ ಮಘವತಾ ಯುಧಿ ॥ ೧೩ ॥

ಈ ಕವಚವನ್ನು ಬಾಣಗಳಿಂದ ಯಾವ ರೀತಿಯಿಂದಲೂ ಭೇದಿಸಲು ಶಕ್ಯವಿಲ್ಲ. ಗೋವಿಂದನೇ, ಸ್ವತಃ ಇಂದ್ರನೂ ಸಹ ಇದನ್ನು ಯುದ್ಧದಲ್ಲಿ ವಜ್ರಾಯುಧದಿಂದಲೂ ಭೇದಿಸಲಾರ.

ಜಾನಂಸ್ತ್ವಮಪಿ ವೈ ಕೃಷ್ಣ ಮಾಂ ವೈ ಮೋಹಯಸೇ ಕಥಮ್ ।
ಯದ್ ವೃತ್ತಂ ತ್ರಿಷು ಲೋಕೇಷು ವರ್ತತೇ ಯಚ್ಚ ಕೇಶವ ॥ ೧೪ ॥

ತಥಾ ಭವಿಷ್ಯದ್ ಯಚ್ಚೈವ ತತ್ ಸರ್ವಂ ವಿದಿತಂ ತವ ।
ನತ್ವಿದಂ ವೇದ ತತ್ ಕಶ್ಚಿದ್ ಯಥಾ ತ್ವಂ ಮಧುಸೂದನ ॥ ೧೫ ॥

ಎಲೈ ಕೃಷ್ಣನೇ, ನೀನು ಎಲ್ಲವನ್ನೂ ತಿಳಿದಿದ್ದರೂ ನನಗೆ ಮೋಹವನ್ನುಂಟು ಮಾಡುತ್ತಿದ್ದೀಯೆ. ಮೂರುಲೋಕಗಳಲ್ಲಿ ಭೂತ-ಭವಿಷ್ಯತ್-ವರ್ತಮಾನ ಕಾಲದಲ್ಲಿ ನಡೆಯುವುದೆಲ್ಲವೂ ನಿನಗೆ ತಿಳಿದಿದೆ. ಎಲೈ ಮಧುಸೂದನನೇ, ನಿನಗೆ ತಿಳಿದಿರುವಂತೆ ಬೇರೆ ಯಾರಿಗೂ ತಿಳಿದಿಲ್ಲ.

ಏಷ ದುರ್ಯೋಧನಃ ಕೃಷ್ಣ ದ್ರೋಣೇನ ವಿಹಿತಾಮಿಮಾಮ್ ।
ತಿಷ್ಠತ್ಯಭೇತವತ್ ಸಂಖೇ ಬಿಭ್ರತ್ ಕವಚಧಾರಣಾಮ್ ॥ ೧೬ ॥

ಎಲೈ ಕೃಷ್ಣನೇ, ಈ ದುರ್ಯೋಧನನು ದ್ರೋಣರು ವಿಧಾನ ಮಾಡಿದ ಕವಚವನ್ನು ಧರಿಸಿ ರಣರಂಗದಲ್ಲಿ ನಿರ್ಭೀತನಾದವನಂತೆ ಇದ್ದಾನೆ.

ಯತ್ ತತ್ರ ವಿಹಿತಂ ಕಾರ್ಯಂ ನೈಷ ತದ್ ವೇತ್ತಿ ಮಾಧವ ।
ಸ್ತ್ರೀವದೇಷ ಬಿಭರ್ತ್ಯೇತಾಂ ಯುಕ್ತಾಂ ಕವಚಧಾರಣಾಮ್ ॥ ೧೭ ॥

ಎಲೈ ಮಾಧವನೇ, ಈ ಕವಚದ ವಿಷಯದಲ್ಲಿ ಏನು ಮಾಡಬೇಕೆಂದು ಅವನಿಗೆ ತಿಳಿದಿಲ್ಲ. ದ್ರೋಣರು ಅಭಿಮಂತ್ರಿಸಿಕೊಟ್ಟ ಕವಚವನ್ನು ಕೇವಲ ಸ್ತ್ರೀಯಂತೆ ಅವನು ಧರಿಸಿದ್ದಾನೆ.

ಪಶ್ಯ ಬಾಹ್ವೋಶ್ಚ ಮೇ ವೀರ್ಯಂ ಧನುಷಶ್ಚ ಜನಾರ್ದನ ।
ಪರಾಜಯಿಷ್ಯೇ ಕೌರವ್ಯಂ ಕವಚೇನಾಭಿರಕ್ಷಿತಮ್ ॥ ೧೮ ॥

ಎಲೈ ಜನಾರ್ದನನೇ, ನನ್ನ ಬಾಹುವಿನ ಬಲವನ್ನೂ ಮತ್ತು ಧನುಸ್ಸಿನ ಶಕ್ತಿಯನ್ನೂ ನೋಡುವವನಾಗು. ದುರ್ಯೋಧನನು ಕವಚದಿಂದ ರಕ್ಷಿತನಾಗಿದ್ದರೂ ಅವನನ್ನು ಸೋಲಿಸುವೆನು.

ಇದಮಂಗಿರಸೇ ಪ್ರಾದಾದ್ ದೇವೇಶೋ ವರ್ಮ ಭಾಸ್ವರಮ್ ।
ತಸ್ಮಾದ್ ಬೃಹಸ್ಪತಿಃ ಪ್ರಾಪ ತತಃ ಪ್ರಾಪ ಪುರಂದರಃ ।
ಪುನರ್ದದೌ ಸುರಪತಿರ್ಮಹ್ಯಂ ವರ್ಮಸುಸಂಗ್ರಹಮ್ ॥ ೧೯ ॥

ಈ ಪ್ರಕಾಶಮಾನವಾದ ಕವಚವನ್ನು ಬ್ರಹ್ಮದೇವರು ಅಂಗಿರಸರಿಗೆ ಕೊಟ್ಟರು. ಅಂಗಿರಸರಿಂದ ಅದು ಬೃಹಸ್ಪತ್ಯಾಚಾರ್ಯರಿಗೆ ಬಂದಿತು. ಬೃಹಸ್ಪತ್ಯಾಚಾರ್ಯರಿಂದ ಪುನಃ ಇಂದ್ರನು ತೆಗೆದುಕೊಂಡನು. ಸುರಪತಿಯಾದ ಅವನು ಈ ಕವಚದ ಸಂವಿಧಾನವನ್ನು ನನಗೆ ನೀಡಿದನು.

ದೈವಂ ಯದ್ಯಸ್ಯ ವರ್ಮೈತದ್ ಬ್ರಹ್ಮಣಾ ವಾ ಸ್ವಯಂ ಕೃತಮ್ ।
ನೈವ ಗೋಪ್ಸ್ಯಂತಿ ದುರ್ಬುದ್ಧಿಂ ವರ್ಮ ಬಾಣಹತಂ ಮಯಾ ॥೨೦॥

ಈ ಕವಚವು ಎಷ್ಟೇ ದೈವಿಕವಾಗಿದ್ದರೂ ಅಥವಾ ಬ್ರಹ್ಮದೇವರೇ ಸ್ವಯಂ ಮಾಡಿದ್ದರೂ ನನ್ನ ಬಾಣಗಳಿಂದ ಹತನಾಗುವ ದುರ್ಬುದ್ಧಿಯುಳ್ಳ ದುರ್ಯೋಧನನನ್ನು ಅದು ರಕ್ಷಿಸುವುದಿಲ್ಲ.

ಏವಮುಕ್ತ್ವಾರ್ಜುನೋ ಬಾಣಾನ್ ಅಭಿಮಂತ್ರ್ಯ ವ್ಯಕರ್ಷತ ।
ವಿಕೃಷ್ಯಮಾಣಾನೇವೈತಾನ್ ಧನುರ್ಮಧ್ಯಗತಾನ್ ಶರಾನ್ ।
ತಾನಸ್ಯಾಸ್ತ್ರೇಣ ಚಿಚ್ಛೇದ ದ್ರೋಣಃ ಸರ್ವಾಸ್ತ್ರಘಾತಿನಾ ॥ ೨೧ ॥

ಹೀಗೆ ಹೇಳಿ ಅರ್ಜುನನು ಬಾಣಗಳನ್ನು ಅಭಿಮಂತ್ರಿಸಿ, ಧನುಸ್ಸಿನ ಮಧ್ಯದಲ್ಲಿ ಹೂಡಿ ಹೆದೆಯನ್ನು ಎಳೆದನು. ಅವನು ಹೆದೆಯನ್ನು ಎಳೆಯುತ್ತಿರುವಾಗಲೇ ಅಶ್ವತ್ಥಾಮರು ಸರ್ವಾಸ್ತ್ರಘಾತಿಯಾದ ಅಸ್ತ್ರದಿಂದ ಆ ಬಾಣಗಳನ್ನು ಕತ್ತರಿಸಿದರು.

ತಾನ್ ನಿಕೃತ್ತಾನಿಷೂನ್ ದೃಷ್ಟ್ವಾ ದೂರತೋ ಬ್ರಹ್ಮವಾದಿನಾ ।
ನ್ಯವೇದಯತ್ ಕೇಶವಾಯ ವಿಸ್ಮಿತಃ ಶ್ವೇತವಾಹನಃ ॥ ೨೨ ॥

ಬ್ರಹ್ಮವಾದಿಗಳಾದ ಅಶ್ವತ್ಥಾಮರು ದೂರದಿಂದಲೇ ತನ್ನ ಬಾಣಗಳನ್ನು ಕತ್ತರಿಸಿದುದನ್ನು ನೋಡಿ ವಿಸ್ಮಯಗೊಂಡ ಶ್ವೇತವಾಹನನು ಕೃಷ್ಣನನ್ನು ಕುರಿತು ಮಾತನಾಡಿದನು.

ಅರ್ಜುನಃ

ನೈತದಸ್ತ್ರಂ ಮಯಾ ಶಕ್ಯಂ ದ್ವಿಃ ಪ್ರಯೋಕ್ತುಂ ಜನಾರ್ದನ ।
ಅಸ್ತ್ರಂ ಮಾಮೇವ ಹನ್ಯಾದ್ಧಿ ಪಶ್ಚಾದ್ಯಾಸ್ಯಬ್ಬಲಂ ಮಮ ॥ ೨೩ ॥

ಅರ್ಜುನ– ಎಲೈ ಜನಾರ್ದನನೇ, ಈ ಅಸ್ತ್ರವನ್ನು ನಾನು ಎರಡು ಬಾರಿ ಪ್ರಯೋಗಿಸಲು ಶಕ್ಯವಿಲ್ಲ. ಎರಡನೆಯ ಬಾರಿ ಪ್ರಯೋಗಿಸಿದರೆ ಅದು ನನ್ನನ್ನೇ ಕೊಂದೀತಷ್ಟೆ! ಈ ದಿನ ನನ್ನ (ಬೇರೆ) ಅಸ್ತ್ರಗಳ ಬಲವನ್ನು ನೋಡು.

ತತೋ ದುರ್ಯೋಧನಃ ಕೃಷ್ಣೌ ನವಭಿರ್ನತಪರ್ವಭಿಃ ।
ಅವಿಧ್ಯತ್ ರಣೇ ರಾಜನ್ ತ್ವರಯಾऽऽಶೀವಿಷೋಪಮೈಃ ॥ ೨೪ ॥

ಎಲೈ ರಾಜನೇ, ಆಗ ದುರ್ಯೋಧನನು ಕೃಷ್ಣಾರ್ಜುನರ ಮೇಲೆ ಸರ್ಪದಂತಿದ್ದ ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳನ್ನು ಶೀಘ್ರವಾಗಿ ಪ್ರಯೋಗಿಸಿದನು.

ಭೂಯ ಏವಾಭ್ಯವರ್ಷಚ್ಚ ಸ ರಣೇ ಕೃಷ್ಣಪಾಂಡವೌ ।
ಶರವರ್ಷೇಣ ಮಹತಾ ತತೋऽಹೃಷ್ಯಂತ ತಾವಕಾಃ ॥ ೨೫ ॥

ಚಕ್ರುರ್ವಾದಿತ್ರನಿನದಾನ್ ಸಿಂಹನಾದರವಾಂಸ್ತದಾ ॥ ೨೬ ॥

ಅವನು ಪುನಃ ಕೃಷ್ಣಾರ್ಜುನರ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಕರೆದನು. ಆಗ ನಿನ್ನವರೆಲ್ಲರೂ ಹರ್ಷಗೊಂಡು ವಾದ್ಯಘೋಷಗಳನ್ನೂ ಮತ್ತು ಸಿಂಹನಾದವನ್ನೂ ಮಾಡಿದರು.

ತತಃ ಕ್ರುದ್ಧೋ ರಣೇ ಪಾರ್ಥಃ ಸೃಕ್ಕಿಣೇ ಪರಿಲೇಲಿಹನ್ ।
ನಾಪಶ್ಯತ ತತೋಽಸ್ಯಾಂಗಂ ಯನ್ನ ಸ್ಯಾದ್ ವರ್ಮರಕ್ಷಿತಮ್ ॥ ೨೭ ॥

ಆಗ ಅರ್ಜುನನು ರಣರಂಗದಲ್ಲಿ ಕೋಪಗೊಂಡು, ಕಟಬಾಯಿಯನ್ನು ಸವರಿಕೊಳ್ಳುತ್ತಾ, ಕವಚರಕ್ಷಿತವಲ್ಲದ ದುರ್ಯೋಧನನ ಯಾವ ಅಂಗವನ್ನೂ ಕಾಣಲಿಲ್ಲ.

ತತೋಽಸ್ಯ ನಿಶಿತೈರ್ಬಾಣೈಃ ಜ್ವಲನಾರ್ಕಾನಿಲೋಪಮೈಃ ।
ಹಯಾಂಶ್ಚಕಾರ ನಿರ್ದೇಹಾನ್ ತಥೋಭೌ ಪಾರ್ಷ್ಣಿಸಾರಥೀ ॥ ೨೮ ॥

ಆಗ ಹರಿತವಾದ ಜ್ವಲಿಸುವ ಅಗ್ನಿಯನ್ನು ಹೋಲುವ ಬಾಣಗಳನ್ನು ಪ್ರಯೋಗಿಸಿ ಅವನ ಅಶ್ವಗಳನ್ನು ಕೊಂದು, ಅವನ ಇಬ್ಬರು ಪಾರ್ಷ್ಣಿಸಾರಥಿಗಳನ್ನೂ ಸಂಹರಿಸಿದನು.

ಧನುರಸ್ಯಾಚ್ಚಿನತ್ ಕ್ಷಿಪ್ರಂ ಹಸ್ತಾವಾಪಂ ಚ ವೀರ್ಯವಾನ್ ।
ರಥಂ ಚ ಶಕಲೀಕರ್ತುಂ ಸವ್ಯಸಾಚೀ ಪ್ರಚಕ್ರಮೇ ॥ ೨೯ ॥

ಪರಾಕ್ರಮಶಾಲಿಯಾದ ಸವ್ಯಸಾಚಿಯು ಅವನ ಧನುಸ್ಸು ಮತ್ತು ಬತ್ತಳಿಕೆಗಳನ್ನು ಕತ್ತರಿಸಿ, ಅವನ ರಥವನ್ನು ಪುಡಿ ಮಾಡಲು ಉಪಕ್ರಮಿಸಿದನು.

ದುರ್ಯೋಧನಂ ತು ಬಾಣಾಭ್ಯಾಂ ತೀಕ್ಷ್ಣಾಭ್ಯಾಂ ವಿರಥೀಕೃತಮ್ ।
ಅವಿದ್ಧ್ಯದ್ ಹಸ್ತತಳಯೋರುಭಯೋರರ್ಜುನಸ್ತದಾ ॥ ೩೦ ॥

ರಥವನ್ನು ಕಳೆದುಕೊಂಡ ದುರ್ಯೋಧನನನ್ನು ಉದ್ದೇಶಿಸಿ ಎರಡು ತೀಕ್ಷ್ಣವಾದ ಬಾಣಗಳನ್ನು ಅರ್ಜುನನು ಅವನ ಎರಡು ಅಂಗೈಗಳಿಗೆ ಹೊಡೆದನು.

ತಂ ಕೃಚ್ಛ್ರಮಾಪದಂ ಪ್ರಾಪ್ತಂ ದೃಷ್ಟ್ವಾ ಪರಮಧನ್ವಿನಃ ।
ಸಮುತ್ಪೇತುಃ ಪರೀಪ್ಸಂತೋ ಧನಂಜಯಶರಾರ್ದಿತಮ್ ॥ ೩೧ ॥

ಬಹಳ ಕಷ್ಟಕ್ಕೆ ಸಿಲುಕಿದ ದುರ್ಯೋಧನನನ್ನು ನೋಡಿ ಶ್ರೇಷ್ಠ ಧನುರ್ಧಾರಿಗಳು ಬಾಣ ಪೀಡಿತನಾದ ಅವನನ್ನು ರಕ್ಷಿಸಲು ಎಲ್ಲ ಕಡೆಗಳಿಂದಲೂ ಅವನ ಸಮೀಪಕ್ಕೆ ಬಂದರು.

ತೇ ರಥೈರ್ಬಹುಸಾಹಸ್ರೈಃ ಕಲ್ಪಿತೈಃ ಕುಂಜರೈರ್ಹಯೈಃ ।
ಪದಾತ್ಯೋಘೈಶ್ಚ ಸಂರಬ್ಧಾಃ ಪರಿವವ್ರುರ್ಧನಂಜಯಮ್ ॥ ೩೨ ॥

ಅವರು ಅನೇಕ ಸಹಸ್ರ ರಥಗಳಿಂದಲೂ, ಯುದ್ಧಕ್ಕೆ ಸಿದ್ಧಗೊಳಿಸಿದ ಗಜಾಶ್ವಗಳಿಂದಲೂ, ಪದಾತಿಗಳ ಸಮೂಹದಿಂದಲೂ ಕೂಡಿದವರಾಗಿ ಅರ್ಜುನನನ್ನು ಸುತ್ತುವರಿದರು.

ಅಥ ನಾರ್ಜುನಗೋವಿಂದೌ ರಥೋ ವಾऽಪಿ ವ್ಯದೃಶ್ಯತ ।
ಅಸ್ತ್ರವರ್ಷೇಣ ಮಹತಾ ಶರೌಘೈಶ್ಚಾಪಿ ಸಂವೃತಾಃ ॥ ೩೩ ॥

ಆಗ ಅವರು ಪ್ರಯೋಗಿಸಿದ ಅಸ್ತ್ರಗಳ ಮತ್ತು ಶಸ್ತ್ರಗಳ ಮಳೆಯಿಂದ ಕೃಷ್ಣನಾಗಲೀ, ಅರ್ಜುನನಾಗಲೀ, ಅವರ ರಥವಾಗಲೀ ಕಾಣಲಿಲ್ಲ.

ತತೋऽರ್ಜುನೋऽಸ್ತ್ರವೀರ್ಯೇಣ ವ್ಯಧಮತ್ ತಾಂ ವರೂಥಿನೀಮ್।
ತತ್ರ ವ್ಯಂಗಾಃ ಕೃತಾಃ ಪೇತುಃ ಶತಶೋऽಥ ರಥದ್ವಿಪಾಃ ॥ ೩೪ ॥

ಆಗ ಅರ್ಜುನನು ಸುತ್ತುವರಿದ ಆ ಸೈನ್ಯವನ್ನು ತನ್ನ ಅಸ್ತ್ರವೇಗದಿಂದ ನಾಶಗೊಳಿಸಿದನು. ರಥಗಳು ಮತ್ತು ಗಜಗಳು ತಮ್ಮ ಅಂಗಗಳನ್ನು ಕಳೆದುಕೊಂಡು ನೂರಾರು ಸಂಖ್ಯೆಯಲ್ಲಿ ಅಲ್ಲಿ ಬಿದ್ದವು.

ತೇ ಹತಾ ಹನ್ಯಮಾನಾಶ್ಚ ನ್ಯಗೃಹ್ಣಂಸ್ತಂ ರಥೋತ್ತಮಮ್ ।
ಸ ರಥಃ ಸ್ತಂಭಿತಸ್ತಸ್ಥೌ ಕ್ರೋಶಮಾತ್ರಂ ಸಮಂತತಃ ।
ತತೋऽರ್ಜುನಂ ವೃಷ್ಣಿವೀರಃ ತ್ವರಿತೋ ವಾಕ್ಯಮಬ್ರವೀತ್ ॥ ೩೫ ॥

ಧನುರ್ವಿಷ್ಫಾರ್ಯಯಾತ್ಯರ್ಥಮಹಂ ಧ್ಮಾಸ್ಯಾಮಿ ಚಾಂಬುಜಮ್ ॥ ೩೬ ॥

ಮೃತವಾಗಿ ಬಿದ್ದಿದ್ದ ಮತ್ತು ಬೀಳುತ್ತಿದ್ದ ಗಜಾಶ್ವಗಳು ಅರ್ಜುನನ ಶ್ರೇಷ್ಠವಾದ ರಥವನ್ನು ಒಂದು ಕ್ರೋಶ ದೂರದಲ್ಲಿಯೇ ನಿಲ್ಲಿಸಿದವು. ಆಗ ವೃಷ್ಣಿವೀರನಾದ ಕೃಷ್ಣನು ಅರ್ಜುನನನ್ನು ಕುರಿತು ಶೀಘ್ರವಾಗಿ ಮಾತನಾಡುತ್ತಾ, ನೀನು ಧನುಸ್ಸನ್ನು ಬಲವಾಗಿ ಎಳೆದು ಬಾಣಗಳನ್ನು ಪ್ರಯೋಗಿಸು, ನಾನು ಶಂಖವನ್ನು ಊದುವೆನು ಎಂದು ಹೇಳಿದನು.

ತತೋ ವಿಷ್ಫಾರ್ಯ ಬಲವದ್ ಗಾಂಡೀವಂ ನ್ಯಹನದ್ ರಿಪೂನ್ ।
ಮಹತಾ ಶರವರ್ಷೇಣ ತಳಶಬ್ದೇನ ಚಾರ್ಜುನಃ ॥ ೩೭ ॥

ಆಗ ಅರ್ಜುನನು ಗಾಂಡೀವ ಧನುಸ್ಸನ್ನು ಬಲವಾಗಿ ಎಳೆದು, ತನ್ನ ಬಾಣಗಳ ಮಳೆಯಿಂದಲೂ, ಹಸ್ತತಳ ಶಬ್ದದಿಂದಲೂ (ಜ್ಯಾತಳ ಶಬ್ದದಿಂದಲೂ) ಶತ್ರುಗಳನ್ನು ಸಂಹರಿಸಿದನು.

ಪಾಂಜಜನ್ಯಂ ಚ ಬಲವದ್ ದಧ್ಮೌ ತಾರೇಣ ಕೇಶವಃ ।
ರಜಸಾ ಧ್ವಸ್ತಪಕ್ಷ್ಮಾಕ್ಷಃ ಪ್ರಸ್ವಿನ್ನವದನೋ ಭೃಶಮ್ ॥ ೩೮ ॥

ಕೇಶವನು ತನ್ನ ಕಣ್ಣುರೆಪ್ಪೆಗಳು ಮತ್ತು ಕಣ್ಣುಗಳು ಯುದ್ಧದ ಧೂಳಿನಿಂದ ತುಂಬಿರಲು, ಬೆವರುತ್ತಾ ಬಹಳ ಬಲದಿಂದ ಶಂಖವನ್ನು ಊದಿದನು.

ತೇನಾಚ್ಯುತೋಷ್ಮಯುಗಪೂರಿತಮಾರುತೇನ
ಶಂಖಾಂತರೋದರವಿವೃದ್ಧವಿನಿಃಸೃತೇನ ।
ನಾದೇನ ಸಾಸುರವಿಯತ್ಸುರಲೋಕಪಾಲಮ್
ಉದ್ವಿಗ್ನಮೀಶ್ವರ ಜಗತ್ ಸ್ಫುಟತೀವ ಸರ್ವಮ್ ॥ ೩೯ ॥

ಕೃಷ್ಣನು ತನ್ನ ತುಟಿಗಳಿಂದ ಊದಿದ ವಾಯುವು ಶಂಖದ ಉದರವನ್ನು ಪ್ರವೇಶಿಸಿ ಉಂಟು ಮಾಡಿದ ಶಬ್ದದಿಂದ ಸುರಾಸುರ ಲೋಕಪಾಲಕರಿಂದ ಸಹಿತವಾದ ಮೂರು ಲೋಕಗಳೂ ಉದ್ವಿಗ್ನವಾದವು. ಎಲೈ ರಾಜನೇ, ಆ ಶಂಖನಾದವು ಜಗತ್ತನ್ನೇ ಒಡೆಯುವಂತೆ ತೋರಿತು.

ತಸ್ಯ ಶಂಖಸ್ಯ ನಾದೇನ ಧನುಷೋ ನಿಸ್ವನೇನ ಚ ।
ನಿಃಸತ್ತ್ವಾ ಶ್ಚ ಸಸತ್ತ್ವಾ ಶ್ಚ ಕ್ಷಿತೌ ಪೇತುಸ್ತದಾ ಜನಾಃ ॥ ೪೦ ॥

ಆ ಶಂಖನಾದವನ್ನೂ ಮತ್ತು ಧನುಸ್ಸಿನ ನಾದವನ್ನೂ ಕೇಳಿದ ಧೈರ್ಯಶಾಲಿಗಳೂ ಮತ್ತು ಧೈರ್ಯಶಾಲಿಗಳಲ್ಲದವರೂ ಆದ ಜನರು ಭೂಮಿಯ ಮೇಲೆ ಕುಸಿದು ಬಿದ್ದರು.

ತೈರ್ವಿಮುಕ್ತೋ ರಥೋ ರೇಜೇ ವಾಯ್ವೀರಿತ ಇವಾಂಬುದಃ ।
ಜಯದ್ರಥಸ್ಯ ಗೋಪ್ತಾರಃ ತತಃ ಕ್ಷುಬ್ಧಾಃ ಸಹಾನುಗಾಃ ॥ ೪೧ ॥

ಅವರು ತಡೆಹಿಡಿದಿದ್ದ ರಥವು ಅವರಿಂದ ಬಿಡುಗಡೆಯನ್ನು ಹೊಂದಿ, ವಾಯುವಿನಿಂದ ಪ್ರೇರಿತವಾದ ಮೇಘದಂತೆಕಂಗೊಳಿಸಿ ಜಯದ್ರಥನ ಸಮೀಪಕ್ಕೆ ಹೋಯಿತು. ಆಗ ಜಯದ್ರಥನ ರಕ್ಷಕರೂ ಮತ್ತು ಅವನ ಅನುಯಾಯಿಗಳು ಕ್ಷೋಭೆಗೊಂಡರು.

ತೇ ದೃಷ್ಟ್ವಾ ಸಹಸಾ ಪಾರ್ಥಂ ಗೋಪ್ತಾರಃ ಸೈಂಧವಸ್ಯ ತು ।
ಚಕ್ರುರ್ನಾದಾನ್ ಮಹೇಷ್ವಾಸಾಃ ಕಂಪಯಂತೋ ವಸುಂಧರಾಮ್ ॥

ಅರ್ಜುನನು ಇದ್ದಕ್ಕಿದ್ದಂತೆಯೇ ಸೈಂಧವನ ಸಮೀಪಕ್ಕೆ ಬಂದುದನ್ನು ನೋಡಿ ಮಹಾಧನುರ್ಧಾರಿಗಳಾದ ಸೈಂಧವನ ರಕ್ಷಕರು ಭೂಮಿಯನ್ನು ನಡುಗಿಸುತ್ತಾ ಸಿಂಹನಾದಗಳನ್ನು ಮಾಡಿದರು.

ಬಾಣಶಬ್ದರವಾಂಶ್ಚೋಗ್ರಾನ್ ವಿಮಿಶ್ರಾನ್ ಶಂಖನಿಸ್ವನೈಃ ।
ಪ್ರಾದುಶ್ಚಕ್ರುರ್ಮಹಾತ್ಮಾನಃ ಸಿಂಹನಾದರವಾನಪಿ ॥ ೪೩ ॥

ಮಹಾತ್ಮರಾದ ಅವರು ಶಂಖಧ್ವನಿಮಿಶ್ರಿತವಾದ, ಉಗ್ರವಾದ ಬಾಣಶಬ್ದಗಳ ಘೋಷವನ್ನೂ, ಸಿಂಹನಾದವನ್ನೂ ಪ್ರಾದುರ್ಭವಿಸಿದರು.

ತಂ ಶ್ರುತ್ವಾ ನಿನದಂ ಘೋರಂ ತಾವಕಾನಾಂ ಸಮುತ್ಥಿತಮ್ ।
ಪ್ರದಧ್ಮತುಃ ಶಂಖವರೌ ವಾಸುದೇವಧನಂಜಯೌ ॥ ೪೪ ॥

ನಿನ್ನವರು ಉಂಟುಮಾಡಿದ ಆ ನಿನಾದವನ್ನು ಕೇಳಿ ಕೃಷ್ಣಾರ್ಜುನರು ತಮ್ಮ ಶ್ರೇಷ್ಠವಾದ ಶಂಖಗಳನ್ನು ಊದಿದರು.

ತೇನ ಶಬ್ದೇನ ಮಹತಾ ಪೂರಿತೇಯಂ ವಸುಂಧರಾ ।
ಸಶೈಲಾ ಸಾರ್ಣವದ್ವೀಪಾ ಸಪಾತಾಳಾ ವಿಶಾಂಪತೇ ॥ ೪೫ ॥

ಎಲೈ ರಾಜನೇ, ಕೃಷ್ಣಾರ್ಜುನರು ಊದಿದ ಶಂಖದ ದೊಡ್ಡ ಧ್ವನಿಯಿಂದ ಶೈಲ-ಸಮುದ್ರ-ದ್ವೀಪ-ಪಾತಾಳಾದಿ ಸಹಿತವಾದ ಈ ಭೂಮಿಯು ತುಂಬಿಹೋಯಿತು.

ಸ ಶಬ್ದೋ ಭರತಶ್ರೇಷ್ಠ ವ್ಯಾಪ್ಯ ಸರ್ವಾ ದಿಶೋ ದಶ ।
ಪ್ರತಿಸಸ್ವಾನ ತತ್ರೈವ ಕುರುಪಾಂಡವಯೋರ್ಬಲೇ ॥ ೪೬ ॥

ಎಲೈ ಭರತಶ್ರೇಷ್ಠನೇ, ಆ ಶಬ್ದವು ಹತ್ತುದಿಕ್ಕುಗಳನ್ನೂ ವ್ಯಾಪಿಸಿ ಪುನಃ ಹಿಂದಿರುಗಿ ಕುರುಪಾಂಡವರ ಸೈನ್ಯದಲ್ಲಿ ಪ್ರತಿಧ್ವನಿಸಿತು.

ತಾವಕಾ ರಥಿನಸ್ತತ್ರ ದೃಷ್ಟ್ವಾ ಕೃಷ್ಣಧನಂಜಯೌ ।
ತೇನ ಶಬ್ದೇನ ಮಹತಾ ಸರ್ವಸೈನ್ಯೇಷು ಪಾರ್ಥಿವಾಃ ।
ಸಂಭ್ರಮಂ ಪರಮಂ ಪ್ರಾಪ್ತಾಃ ತ್ವರಮಾಣಾ ಮಹಾರಥಾಃ ॥ ೪೭ ॥

ನಿನ್ನ ರಥಿಕರು ಕೃಷ್ಣಾರ್ಜುನರನ್ನು ನೋಡಿ ನಿನ್ನ ಎಲ್ಲ ಸೈನ್ಯಗಳಲ್ಲಿದ್ದ ಮಹಾರಥರಾದ ಆ ರಾಜರುಗಳು ಆ ದೊಡ್ಡ ಶಂಖನಾದವನ್ನು ಕೇಳಿ, ಬಹಳ ಗಾಬರಿಗೊಂಡು ತ್ವರೆ ಮಾಡಿದರು.

ಅಥ ಕೃಷ್ಣೌ ಮಹಾಭಾಗೌ ತಾವಕಾ ದೃಶ್ಯ ದಂಸಿತಾಃ ।
ಅಭ್ಯದ್ರವನ್ ಯುಧಾಂ ಶ್ರೇಷ್ಠಾಸ್ತದದ್ಭುತಮಿವಾಭವತ್ ॥ ೪೮ ॥

ಅನಂತರ ಯುದ್ಧ ಮಾಡುವವರಲ್ಲಿ ಶ್ರೇಷ್ಠರಾದ ಅವರು ಮಹಾನುಭಾವರಾದ ಕೃಷ್ಣಾರ್ಜುನರು ಸನ್ನದ್ಧರಾಗಿರುವುದನ್ನು ನೋಡಿ ಅವರ ಮೇಲೆ ಎರಗಿದರು. ಆ ದೃಶ್ಯವು ಅದ್ಭುತವಾಗಿದ್ದಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ನವತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂದನೆಯ ಅಧ್ಯಾಯ

ಭೂರಿಶ್ರವ ಮೊದಲಾದ ಎಂಟು ಮಹಾರಥರ ಜೊತೆಯಲ್ಲಿ
ಅರ್ಜುನನ ಯುದ್ಧ.

ಸಂಜಯಃ

ತಾವಕಾಸ್ತ್ವಭಿಸಂಪ್ರೇಕ್ಷ್ಯ ವೃಷ್ಣ್ಯಂಧಕಕುರೂತ್ತಮೌ ।
ಅತ್ವರಂಸ್ತೇ ಜಿಘಾಂಸಂತಸ್ತಥೈವ ವಿಜಯಃ ಪರಾನ್ ॥ ೧ ॥

ಸಂಜಯ- ನಿನ್ನವರು ವೃಷ್ಣ್ಯಂಧಕ-ಕುರೂತ್ತಮನೂ, ಕುರುಕುಲೋತ್ತಮನೂ ಆದ ಕೃಷ್ಣಾರ್ಜುನರನ್ನು ನೋಡಿ ಅವರನ್ನು ಕೊಲ್ಲಲು ಬಯಸಿ ತ್ವರೆ ಮಾಡಿದರು. ಅರ್ಜುನನೂ ಶತ್ರುಗಳನ್ನು ಕೊಲ್ಲಲು ತ್ವರೆ ಮಾಡಿದನು.

ಸುವರ್ಣಚಿತ್ರೈರ್ವ್ಯಾಘ್ರೈಃ ಸ್ವನವದ್ಭಿರ್ಮಹಾರಥೈಃ ।
ದೀಪಯಂತೋ ದಿಶಃ ಸರ್ವಾ ಜ್ವಲದ್ಭಿರಿವ ಪಾವಕೈಃ ॥ ೨ ॥

ರುಗ್ಮಪೃಷ್ಠೈಶ್ಚ ದುಷ್ಪ್ರೇಕ್ಷ್ಯೈಃ ಕಾರ್ಮುಕೈಃ ಪೃಥಿವೀಪತೇ ।
ಕೂಜದ್ಭಿರತುಲಾನ್ ನಾದಾನ್ ರೋಷಿತೈರುರಗೈರಿವ ॥ ೩ ॥

ಭೂರಿಶ್ರವಾಃ ಶಲಃ ಕರ್ಣೋ ವೃಷಸೇನೋ ಜಯದ್ರಥಃ ।
ಕೃಪಶ್ಚ ಮದ್ರರಾಜಶ್ಚ ದ್ರೌಣಿಶ್ಚ ರಥಿನಾಂ ವರಃ ॥ ೪ ॥

ತೇ ಪಿಬಂತ ಇವಾಕಾಶಮಶ್ವೈರಪ್ಟೌ ಮಹಾರಥಾಃ ।
ವ್ಯನಾದಯನ್ ದಶ ದಿಶೋ ವೈಯಾಘ್ರೈರ್ಹೇಮಚಂದ್ರಕೈಃ ॥ ೫ ॥

ಸುವರ್ಣಾಲಂಕೃತವಾದ, ವ್ಯಾಘ್ರಚರ್ಮದಿಂದ ಹೊದಿಸಲ್ಪಟ್ಟ, ಮಹಾಘೋಷದಿಂದ ಕೂಡಿದ ಮಹಾರಥದಿಂದ ಜ್ವಲಿಸುವ ಅಗ್ನಿಯಂತೆ ಎಲ್ಲ ದಿಕ್ಕುಗಳನ್ನೂ ಪ್ರಕಾಶಿಸುತ್ತಾ ಎಲೈ ರಾಜನೇ, ಚಿನ್ನದ ಹಿಡಿಯಿರುವ, ನೋಡಲೂ ಅಸಾಧ್ಯವಾದ, ಘೋಷದಿಂದ ಕೂಡಿದ ರೋಷಗೊಂಡ ಉರಗಗಳಂತೆ ನಾದವನ್ನು ಮಾಡುವ ಧನುಸ್ಸುಗಳಿಂದ ಸಹಿತರಾದ ಭೂರಿಶ್ರವ, ಶಲ, ಕರ್ಣ, ವೃಷಸೇನ, ಜಯದ್ರಥ, ಕೃಪ, ಶಲ್ಯ, ಅಶ್ವತ್ಥಾಮ- ಈ ಎಂಟು ಮಹಾರಥರು ತಮ್ಮ ರಥದ ಆಶ್ವಗಳಿಂದ ಆಕಾಶವನ್ನೇ ಪಾನ ಮಾಡುವವರಂತೆ ವ್ಯಾಘ್ರಚರ್ಮದ ಪುಂಖಗಳನ್ನು ಹೊರಿಕೆ ಮತ್ತು ಸುವರ್ಣಮಯವಾದ ಚಂದ್ರಗಳಿಂದ ಕೂಡಿದ ತಮ್ಮ ರಥಗಳಿಂದ ಹತ್ತು ದಿಕ್ಕುಗಳನ್ನೂ ಪ್ರತಿಧ್ವನಿಸಿದರು.

ತೇ ದಂಸಿತಾಃ ಸುಸಂರಬ್ಧಾ ರಥೈರ್ಮೇಘೌಘನಿಸ್ವನೈಃ ।
ಸಮಾವೃಣ್ವನ್ ದಿಶಃ ಸರ್ವಾಃ ಪಾರ್ಥಂ ಚ ವಿಶಿಖೈಃ ಸಹ ॥ ೬ ॥

ಕವಚಾದಿ ಯುಕ್ತರೂ, ಬಹಳ ಕೋಪಗೊಂಡವರೂ ಆದ ಅವರು ಮೇಘ ಸಮೂಹಗಳ ನಾದವನ್ನು ಹೋಲುವ ತಮ್ಮ ರಥಗಳಿಂದ ಎಲ್ಲ ದಿಕ್ಕುಗಳನ್ನೂ ಮತ್ತು ಅರ್ಜುನನನ್ನೂ ತಮ್ಮ ಬಾಣಗಳಿಂದ ಆವರಿಸಿದರು.

ಕೌತೂಹಲಾದ್ ಹಯಾಶ್ಚಿತ್ರಾ ವಹಂತಶ್ಚ ಮಹಾರಥಾನ್ ।
ವ್ಯಶೋಭಂತ ತದಾऽऽಕಾಶೇ ದೀಪಯಂತೋ ದಿಶೋ ದಶ ॥ ೭ ॥

ಕುತೂಹಲದಿಂದ ಆ ಮಹಾರಥರನ್ನು ಹೊರುತ್ತಿದ್ದ ವಿಚಿತ್ರವಾದ ಅಶ್ವಗಳು ಆಕಾಶದಲ್ಲಿ ಹತ್ತುದಿಕ್ಕುಗಳನ್ನೂ ಬೆಳಗುತ್ತಾ ಶೋಭಿಸಿದವು.

ಆಜಾನೇಯೈರ್ಮಹಾವೇಗೈರ್ನಾನಾದೇಶಸಮುದ್ಭವೈಃ ।
ಪಾರ್ವತೀಯೈರ್ನದೀಜೈಶ್ಚ ಸೈಂಧವೈಶ್ಚ ಹಯೋತ್ತಮೈಃ ॥ ೮ ॥

ಕುರುಯೋಧವರಾ ರಾಜಂಸ್ತವ ಪುತ್ರಮಭೀಪ್ಸವಃ ।
ಧನಂಜಯರಥಂ ಶೀಘ್ರಂ ಸರ್ವತಃ ಸಮುಪಾದ್ರವನ್ ॥ ೯ ॥

ಎಲೈ ರಾಜನೇ, ಒಳ್ಳೆಯ ಅಶ್ವಕುಲದಲ್ಲಿ ಜನಿಸಿದ, ಮಹಾವೇಗವುಳ್ಳ, ನಾನಾ ದೇಶಗಳಲ್ಲಿ ಜನಿಸಿದ, ಪರ್ವತ ಪ್ರದೇಶದ, ನದೀತೀರ ಪ್ರದೇಶದ ಸಿಂಧುದೇಶದ ಶ್ರೇಷ್ಠವಾದ ಅಶ್ವಗಳಿಂದ ಹೂಡಿದ ರಥದಲ್ಲಿ ಕುಳಿತು ಶ್ರೇಷ್ಠರಾದ ಕುರುಯೋಧರು ನಿನ್ನ ಪುತ್ರನನ್ನು ರಕ್ಷಿಸುವ ಉದ್ದೇಶದಿಂದ ಶೀಘ್ರವಾಗಿ ಅರ್ಜುನನ ರಥದ ಕಡೆಗೆ ಎಲ್ಲ ದಿಕ್ಕುಗಳಿಂದಲೂ ಧಾವಿಸಿದರು.

ಪ್ರಗೃಹ್ಯ ತು ಮಹಾಶಂಖಾನ್ ದಧ್ಮುಃ ಪುರುಷಸತ್ತಮಾಃ ।
ಪೂರಯಂತೋ ದಿವಂ ರಾಜನ್ ಪೃಥಿವೀಂ ಚ ಸಸಾಗರಾಮ್ ॥ ೧೦ ॥

ಎಲೈ ರಾಜನೇ, ಪುರುಷಶ್ರೇಷ್ಠರಾದ ಅವರು ದೊಡ್ಡ ಶಂಖಗಳನ್ನು ತೆಗೆದುಕೊಂಡು, ಅಂತರಿಕ್ಷವನ್ನು ಮತ್ತು ಸಾಗರಸಹಿತವಾದ ಭೂಮಿಯನ್ನು ತುಂಬುತ್ತಾ, ಅವುಗಳನ್ನು ಊದಿದರು.

ತಥೈವ ದಧ್ಮತುಃ ಶಂಖೌ ವಾಸುದೇವಧನಂಜಯೌ ।
ಪ್ರವರೌ ಸರ್ವಯೋಧಾನಾಂ ಸರ್ವಶಂಖವರೌ ಭುವಿ ।
ದೇವದತ್ತಂ ಚ ಕೌಂತೇಯಃ ಪಾಂಚಜನ್ಯಂ ಚ ಕೇಶವಃ ॥ ೧೧ ॥

ಸರ್ವಯೋಧರಲ್ಲಿ ಶ್ರೇಷ್ಠರಾದ ಕೃಷ್ಣಾರ್ಜುನರೂ ಸಹ ಭೂಮಿಯಲ್ಲಿ ಎಲ್ಲ ಶಂಖಗಳಲ್ಲಿ ಶ್ರೇಷ್ಠವಾದ ತಮ್ಮ ಶಂಖಗಳನ್ನು ಹಾಗೆಯೇ ಊದಿದರು. ಅರ್ಜುನನು ದೇವದತ್ತವನ್ನೂ ಮತ್ತು ಕೃಷ್ಣನು ಪಾಂಚಜನ್ಯವನ್ನೂ ಊದಿದನು.

ಶಬ್ದಸ್ತು ದೇವದತ್ತಸ್ಯ ಧನಂಜಯಸಮೀರಿತಃ ।
ಪೃಥಿವೀಮಂತರಿಕ್ಷಂ ಚ ದಿಶಶ್ಚೈವ ಸಮಾವೃಣೋತ್ ॥ ೧೨ ॥

ಅರ್ಜುನನು ಊದಿದ ದೇವದತ್ತಶಂಖದ ಶಬ್ದವು ಭೂಮಿಯನ್ನು, ಅಂತರಿಕ್ಷವನ್ನು ಮತ್ತು ಹತ್ತು ದಿಕ್ಕುಗಳನ್ನು ಆವರಿಸಿತು.

ತಥೈವ ಪಾಂಚಜನ್ಯೋಽಪಿ ವಾಸುದೇವಸಮೀರಿತಃ ।
ಸರ್ವಶಬ್ದಾನತಿಕ್ರಮ್ಯ ಪೂರಯಾಮಮಾಸ ರೋದಸೀ ॥ ೧೩ ॥

ಹಾಗೆಯೇ ಕೃಷ್ಣನು ಊದಿದ ಪಾಂಚಜನ್ಯ ಶಬ್ದವೂ ಉಳಿದೆಲ್ಲ ಶಬ್ದಗಳನ್ನೂ ಮೀರಿ ಭೂಮಿ ಮತ್ತು ಅಂತರಿಕ್ಷವನ್ನು ತುಂಬಿತು.

ತಸ್ಮಿಂಸ್ತದಾ ವರ್ತಮಾನೇ ದಾರುಣೇ ನಾದಸಂಕುಲೇ ।
ಭೀರೂಣಾಂ ತ್ರಾಸಜನನೇ ಶೂರಾಣಾಂ ಹರ್ಷವರ್ಧನೇ ॥ ೧೪ ॥

ಪ್ರವಾದಿತಾಸು ಭೇರೀಷು ಝರ್ಝರೇಷ್ವಾನಕೇಷು ಚ ।
ಮೃದಂಗೇಷು ಚ ರಾಜೇಂದ್ರ ವಾದ್ಯಮಾನೇಷ್ವನೇಕಶಃ ॥ ೧೫ ॥

ಮಹಾರಥಸಮಾಖ್ಯಾತಾ ದುರ್ಯೋಧನಹಿತೈಷಿಣಃ ।
ಅಮೃಷ್ಯಮಾಣಾಸ್ತಂ ಶಬ್ದಂ ಕ್ರುದ್ಧಾಃ ಪರಮಧನ್ವಿನಃ ॥ ೧೬ ॥

ನಾನಾದೇಶ್ಯಾ ಮಹೀಪಾಲಾ ಸ್ವಸೈನ್ಯಪರಿರಕ್ಷಿಣಃ ।
ಅಮರ್ಷಿತಾ ಮಹಾಶಂಖಾನ್ ದಧ್ಮುರ್ವೀರಾ ಮಹಾರಥಾಃ ॥ ೧೭ ॥

ಕೃತೇ ಪ್ರತಿಕರಿಷ್ಯಂತಃ ಕೇಶವಸ್ಯಾರ್ಜುನಸ್ಯ ಚ ॥ ೧೮ ॥

ಭೀರುಗಳಿಗೆ ಭಯಜನಕವೂ, ಶೂರರಿಗೆ ಸಂತೋಷಜನಕವೂ ಆದ ಆ ನಾದಗಳ ಸಮೂಹವು ಹಾಗೆ ದಾರುಣವಾಗಿರುತ್ತಿರಲು, ಎಲೈ ರಾಜೇಂದ್ರನೇ, ಭೇರಿಗಳು, ಝರ್ಝರಗಳು, ಆನಕಗಳು ಮತ್ತು ಮೃದಂಗಗಳು ಅನೇಕ ಸಂಖ್ಯೆಯಲ್ಲಿ ಬಾರಿಸಲ್ಪಡುತ್ತಿರಲು, ಮಹಾರಥರಿಂದ ಪರಿವೃತರಾದ, ದುರ್ಯೋಧನನ ಹಿತೈಷಿಗಳಾದ ನಾನಾ ದೇಶದಿಂದ ಬಂದ ತಮ್ಮ ತಮ್ಮ ಸೈನ್ಯವನ್ನು ರಕ್ಷಿಸುವ ರಾಜರು ಆ ಶಂಖಧ್ವನಿಯನ್ನು ಕೇಳಿ ಸಹಿಸದೆ ಕ್ರುದ್ಧರಾಗಿ ಮಹಾಧನುರ್ಧಾರಿಗಳೂ,

ಮಹಾರಥರೂ, ವೀರರೂ ಆದ ಅವರು ಕೋಪದಿಂದ ಕೂಡಿದವರಾಗಿ ಕೇಶವಾರ್ಜುನರು ಮಾಡಿದುದಕ್ಕೆ ಪ್ರತಿಯಾಗಿ ಎಲ್ಲವನ್ನೂ ಮಾಡುತ್ತಾ, ತಮ್ಮ ಮಹಾಶಂಖಗಳನ್ನು ಊದಿದರು.

ಬಭೂವ ತವ ತತ್ ಸೈನ್ಯಂ ಶಂಖಶಬ್ದೇ ಸಮೀರಿತೇ ।
ಉದ್ವಿಗ್ನನರನಾಗಾಶ್ವಮಸ್ವಸ್ಥಮಪಿ ಚಾಭಿಭೋ ॥ ೧೯ ॥

ಎಲೈ ಶತ್ರುನಿವಾರಕನೇ, ಕೃಷ್ಣಾರ್ಜುನರು ಹಾಗೆ ಶಂಖಶಬ್ದವನ್ನು ಉಂಟು ಮಾಡುತ್ತಿರಲು ಅದನ್ನು ಕೇಳಿದ ನರ-ನಾಗಾಶ್ವಗಳಿಂದ ಕೂಡಿದ ನಿನ್ನ ಸೈನ್ಯವು ಉದ್ವೇಗವನ್ನು ಹೊಂದಿತು ಮತ್ತು ಅಸ್ವಸ್ಥವಾಯಿತು.

ತತ್ ಪ್ರಯುಕ್ತಮನಾಧೃಷ್ಯಂ ಭೇರೀಶಂಖನಿನಾದಿತಮ್ ।
ಬಭೂವ ಭೃಶಮುದ್ವಿಗ್ನಂ ನಿರ್ಘಾತೈರಿವ ಸಂವೃತಮ್ ॥ ೨೦ ॥

ಕೃಷ್ಣಾರ್ಜುನರಿಂದ ಸಂಯುಕ್ತವಾದ, ಭೇರೀ ಶಂಖ ಸಹಿತವಾದ, ಅಡಗಿಸಲು ಅಸಾಧ್ಯವಾದ ಆ ಶಂಖನಾದವನ್ನು ಕೇಳಿ ಸಿಡಿಲುಗಳ ಹೊಡೆತಕ್ಕೆ ಸಿಲುಕಿದಂತೆ ನಿನ್ನ ಸೈನ್ಯವು ಬಹಳ ಉದ್ವಿಗ್ನವಾಯಿತು.

ಸ ಶಬ್ದಃ ಸುಮಹಾನ್ ರಾಜನ್ ದಿಶಃ ಸರ್ವಾ ವಿನಾದಯನ್ ।
ತ್ರಾಸಯಾಮಾಸ ತತ್ ಸೈನ್ಯಂ ಯುಗಾಂತ ಇವ ಸಂವೃತಮ್ ॥ ೨೧ ॥

ಎಲೈ ರಾಜನೇ, ಆ ಶಬ್ದವು ಬಹಳ ದೊಡ್ಡದಾಗಿದ್ದು, ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುತ್ತಾ ಯುಗಾಂತ ಕಾಲದಲ್ಲಿಯೋ ಎಂಬಂತೆ ಸಮೃದ್ಧವಾಗಿದ್ದ ನಿನ್ನ ಸೈನ್ಯವನ್ನು ಭಯಗೊಳಿಸಿತು.

ತತೋ ದುರ್ಯೋಧನೋಽಷ್ಟೌ ಚ ರಾಜಾನಸ್ತೇ ಮಹಾರಥಾಃ ।
ಜಯದ್ರಥಸ್ಯ ರಕ್ಷಾರ್ಥಂ ಪಾಂಡವಂ ಪರ್ಯವಾರಯನ್ ॥ ೨೨ ॥

ಆಗ ದುರ್ಯೋಧನನೂ ಮತ್ತು ಮಹಾರಥರಾದ ಆ ಎಂಟು ರಾಜರೂ ಸಹ ಸೈಂಧವನನ್ನು ರಕ್ಷಣೆ ಮಾಡುವ ಸಲುವಾಗಿ ಅರ್ಜುನನನ್ನು ಸುತ್ತುವರಿದರು.

ತತೋ ದ್ರೌಣಿಸ್ತ್ವರನ್ತ್ಯಾ ವಾಸುದೇವಮತಾಡಯತ್ ।
ಅರ್ಜುನಂ ಚ ತ್ರಿಭಿರ್ಭಲ್ಲೈರ್ದ್ವಿಜಮಶ್ವಾಂಶ್ಚ ಪಂಚಭಿಃ ॥ ೨೩ ॥

ಆಗ ಅಶ್ವತ್ಥಾಮರು ಎಪ್ಪತ್ತೂರು ಬಾಣಗಳಿಂದ ಕೃಷ್ಣನನ್ನೂ, ಮೂರು ಬಾಣಗಳಿಂದ ಅರ್ಜುನನನ್ನೂ, ಅರ್ಜುನನ ರಥದ ಧ್ವಜಾಶ್ವಗಳನ್ನು ಐದು ಭಲ್ಲಗಳಿಂದಲೂ ಹೊಡೆದರು.

ತಮರ್ಜುನಃ ಪೃಷತಾನಾಂ ಶತೈಃ ಷಡ್ಭಿರತಾಡಯತ್ ।
ಆತ್ಮಾರ್ಥಮಿವ ಸಂಕ್ರುದ್ಧಃ ಪ್ರತಿವಿದ್ಧೋ ಜನಾರ್ದನೇ ॥ ೨೪ ॥

ಕೃಷ್ಣನು ಅಶ್ವತ್ಥಾಮರಿಂದ ಹೊಡೆಯಲ್ಪಡುತ್ತಿರಲು ಬಹಳ ಕೋಪಗೊಂಡ ಅರ್ಜುನನು ಅಶ್ವತ್ಥಾಮರನ್ನು ಆರುನೂರು ಬಾಣಗಳಿಂದ ಹೊಡೆದನು.

ಕರ್ಣಂ ದ್ವಾದಶಭಿರ್ವಿದ್ಧ್ವಾ ವೃಷಸೇನಂ ತ್ರಿಭಿಸ್ತಥಾ ।
ಶಲ್ಯಸ್ಯ ಸಶರಂ ಚಾಪಂ ಮುಷ್ಟೌ ಚಿಚ್ಛೇದ ವೀರ್ಯವಾನ್ ।
ಗೃಹೀತ್ವಾ ಧನುರನ್ಯತ್ ತು ಶಲ್ಯೋ ವಿವ್ಯಾಧ ಪಾಂಡವಮ್ ॥ ೨೫ ॥

ಕರ್ಣನನ್ನು ಹನ್ನೆರಡು ಬಾಣಗಳಿಂದಲೂ, ವೃಷಸೇನನನ್ನು ಮೂರು ಬಾಣಗಳಿಂದಲೂ ಹೊಡೆದು, ಪರಾಕ್ರಮಶಾಲಿಯಾದ ಅರ್ಜುನನು ಬಾಣ ಸಹಿತವಾದ ಶಲ್ಯನ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು. ಶಲ್ಯನಾದರೂ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಭೂರಿಶ್ರವಾಸ್ತ್ರಿಭುರ್ಬಾಣೈರ್ಹೇಮಪುಂಖೈಃ ಶಿಲಾಶಿತೈಃ ।
ಕರ್ಣೋ ದ್ವಾವಿಂಶತಾ ಚೈವ ವೃಷಸೇನಶ್ಚ ಪಂಚಭಿಃ ॥ ೨೬ ॥

ಜಯದ್ರಥಸ್ತ್ರಿಸಪ್ತತ್ಯಾ ಕೃಪಶ್ಚ ದಶಭಿಃ ಶರೈಃ ।
ಮದ್ರರಾಜಶ್ಚ ದಶಭಿರ್ವಿವ್ಯಧುಃ ಫಲ್ಗುನಂ ರಣೇ ॥ ೨೭ ॥

ಆಗ ಭೂರಿಶ್ರವನು ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಸುವರ್ಣಪುಂಖಗಳನ್ನು ಹೊಂದಿದ ಮೂರು ಬಾಣಗಳಿಂದಲೂ, ಕರ್ಣನು ಇಪ್ಪತ್ತೆರಡು ಬಾಣಗಳಿಂದಲೂ, ವೃಷಸೇನನು ಐದು ಬಾಣಗಳಿಂದಲೂ, ಜಯದ್ರಥನು ಎಪ್ಪತ್ತೂರು ಬಾಣಗಳಿಂದಲೂ, ಕೃಪರು ಹತ್ತು ಬಾಣಗಳಿಂದಲೂ, ಮದ್ರರಾಜನು ಹತ್ತು ಬಾಣಗಳಿಂದಲೂ ಅರ್ಜುನನನ್ನು ರಣರಂಗದಲ್ಲಿ ಹೊಡೆದರು.

ತತಃ ಶರಾಣಾಂ ಷಷ್ಟ್ಯಾ ತು ದ್ರೌಣಿಃ ಪಾರ್ಥಮವಾಕಿರತ್ ।
ವಾಸುದೇವಂ ಚ ಸಪ್ತತ್ಯಾ ಪುನಃ ಪಾರ್ಥಂ ಚ ಸಪ್ತಭಿಃ ॥ ೨೮ ॥

ಅನಂತರ ಅಶ್ವತ್ಥಾಮರು ಆರವತ್ತು ಬಾಣಗಳಿಂದ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. ಕೃಷ್ಣನನ್ನು ಎಪ್ಪತ್ತು ಬಾಣಗಳಿಂದಲೂ, ಅರ್ಜುನನನ್ನು ಪುನಃ ಏಳು ಬಾಣಗಳಿಂದಲೂ ಹೊಡೆದರು.

ಪ್ರಹಸಂಸ್ತು ನರವ್ಯಾಘ್ರಃ ಶ್ವೇತಾಶ್ವಃ ಕೃಷ್ಣಸಾರಥಿಃ ।
ಪ್ರತ್ಯವಿಧ್ಯತ್ ತಾನ್ ಸರ್ವಾನ್ ದರ್ಶಯನ್ ಪಾಣಿಲಾಘವಮ್ ॥

ನರವ್ಯಾಘ್ರನೂ, ಶ್ವೇತಾಶ್ವವಾಹನನೂ, ಕೃಷ್ಣಸಾರಥಿಯೂ ಆದ ಅರ್ಜುನನು ನಗುತ್ತಾ, ತನ್ನ ಹಸ್ತಲಾಘವವನ್ನು ತೋರಿಸುತ್ತಾ ಅವರೆಲ್ಲರನ್ನೂ ಪ್ರತಿಯಾಗಿ ಹೊಡೆದನು.

ಕರ್ಣಂ ದ್ವಾದಶಭಿರ್ವಿದ್ಧ್ವಾ ವೃಷಸೇನಂ ತ್ರಿಭಿಃ ಶರೈಃ ।
ಶಲ್ಯಸ್ಯ ಸಶರಂ ಚಾಪಂ ಮುಷ್ಟಿದೇಶೇ ನ್ಯಕೃಂತತ ॥ ೩೦ ॥

ಅವನು ಕರ್ಣನನ್ನು ಹನ್ನೆರಡು ಬಾಣಗಳಿಂದಲೂ, ವೃಷಸೇನನನ್ನು ಮೂರು ಬಾಣಗಳಿಂದಲೂ ಹೊಡೆದು, ಶಲ್ಯನ ಬಾಣಸಹಿತವಾದ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು.

ಸೌಮದತ್ತಿಂ ತ್ರಿಭಿರ್ವಿದ್ಧ್ವಾ ಶಲ್ಯಂ ಚ ನವಭಿಃ ಶರೈಃ ।
ಶರೈರಾಶೀವಿಷಾಕಾರೈರ್ದ್ರೌಣಿಂ ವಿವ್ಯಾಧ ಚಾಷ್ಟಭಿಃ ॥ ೩೧ ॥

ಭೂರಿಶ್ರವನನ್ನು ಮೂರು ಬಾಣಗಳಿಂದಲೂ, ಶಲ್ಯನನ್ನು ಒಂಬತ್ತು ಬಾಣಗಳಿಂದಲೂ ಹೊಡೆದು, ಸರ್ಪವನ್ನು ಹೋಲುವ ಎಂಟು ಬಾಣಗಳಿಂದ ಅಶ್ವತ್ಥಾಮರನ್ನು ಹೊಡೆದನು.

ಗೌತಮಂ ಪಂಚವಿಂಶತ್ಯಾ ಸೈಂಧವಂ ಚ ಶತೇನ ಹ ।
ಪುನರ್ದ್ರೌಣಿಂ ಚ ವಿಂಶತ್ಯಾ ಶರಾಣಾಂ ಸೋಽಭ್ಯತಾಡಯತ್ ॥ ೩೨ ॥

ಕೃಪರನ್ನು ಇಪ್ಪತ್ತೈದು ಬಾಣಗಳಿಂದಲೂ, ಸೈಂಧವನನ್ನು ನೂರು ಬಾಣಗಳಿಂದಲೂ, ಅಶ್ವತ್ಥಾಮರನ್ನು ಪುನಃ ಇಪ್ಪತ್ತು ಬಾಣಗಳಿಂದಲೂ ಅವನು ಹೊಡೆದನು.

ಭೂರಿಶ್ರವಾಸ್ತು ಸಂಕ್ರುದ್ಧಃ ಪ್ರತೋದಂ ಚಿಚ್ಛೇದ ಹರೇಃ ।
ಅರ್ಜುನಂ ಚ ತ್ರಿಸಪ್ತತ್ಯಾ ಬಾಣಾನಾಮಾಜಘಾನ ಹ ॥ ೩೩॥

ಭೂರಿಶ್ರವನಾದರೋ ಬಹಳ ಕೋಪಗೊಂಡು ಕೃಷ್ಣನ ಚಾವಟಿಯನ್ನು ಕತ್ತರಿಸಿದನು. ಮತ್ತು ಅರ್ಜುನನನ್ನು ಎಪ್ಪತ್ಮೂರು ಬಾಣಗಳಿಂದ ಹೊಡೆದನು.

ತತಃ ಶರಶತೈಸ್ತೀಕ್ಷ್ಣೈಸ್ತಾನರೀನ್ ಶ್ವೇತವಾಹನಃ ।
ಪ್ರತ್ಯಷೇಧದ್ ದ್ರುತಂ ಕ್ರುದ್ಧೋ ಮಹಾವಾತೋ ಘನಾನಿವ ॥ ೩೪ ॥

ಆಗ ಶ್ವೇತವಾಹನನಾದ ಅರ್ಜುನನು ಶೀಘ್ರವಾಗಿ ಕ್ರುದ್ಧನಾಗಿ ಆ ಶತ್ರುಗಳನ್ನು ಮಹಾವಾಯುವು ಮೋಡಗಳನ್ನು ತಡೆದಂತೆ ತೀಕ್ಷ್ಣವಾದ ನೂರು ಬಾಣಗಳಿಂದ ಆ ಶತ್ರುವನ್ನು ತಡೆದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕನವತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆರಡನೆಯ ಅಧ್ಯಾಯ

ಸಂಜಯನಿಂದ ಸೈನ್ಯದ ರಥ-ಧ್ವಜಗಳ ವರ್ಣನೆ.

ಧೃತರಾಷ್ಟ್ರಃ

ಧ್ವಜಾನ್ ಬಹುವಿಧಾಕಾರಾನ್ ಭ್ರಾಜಮಾನಾನತಿಶ್ರಿಯಾ ।
ಪಾರ್ಥಾನಾಂ ಮಾಮಕಾನಾಂ ಚ ತಾನ್ ಮಮಾಚಕ್ಷ್ವ ಸಂಜಯ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಬಹಳ ಕಾಂತಿಯಿಂದ ಬೆಳಗುವ ನಾನಾ ವಿಧ ಆಕಾರವನ್ನು ಹೊಂದಿರುವ ಪಾಂಡವರ ಮತ್ತು ನನ್ನವರ ಧ್ವಜಗಳನ್ನು ನನಗೆ ತಿಳಿಸು.

ಸಂಜಯಃ

ಧ್ವಜಾನ್ ಬಹುವಿಧಾಕಾರಾನ್ ಶೃಣು ತೇಷಾಂ ಮಹಾತ್ಮನಾಮ್ ।
ಪ್ರತ್ಯದೃಶ್ಯಂತ ರಾಜೇಂದ್ರ ಜ್ವಲಿತಾ ಇವ ಪಾವಕಾಃ ॥ ೨ ॥

ತೇಷಾಂ ತು ರಥಮುಖ್ಯಾನಾಂ ರಥೇಷು ವಿವಿಧಾ ಧ್ವಜಾಃ ॥ ೩ ॥

ಸಂಜಯ– ಎಲೈ ರಾಜೇಂದ್ರನೇ, ಮಹಾತ್ಮರಾದ ಆ ರಥಶ್ರೇಷ್ಠರ ಜ್ವಲಿಸುವ ಅಗ್ನಿಗಳಂತೆ ಶೋಭಿಸುವ, ನಾನಾ ವಿಧವಾದ ಆಕಾರವನ್ನು ಹೊಂದಿದ, ವಿವಿಧವಾದ ರಥದಲ್ಲಿ ಯೋಜಿಸಿದ ಧ್ವಜಗಳನ್ನು ಕೇಳು.

ಕಾಂಚನಾಃ ಕಾಂಚನಾಪೀಡಾಃ ಕಾಂಚನಸ್ರಗಲಂಕೃತಾಃ ।
ಕಾಂಚನಾನೀವ ಶೃಂಗಾಣಿ ಕಾಂಚನಸ್ಯ ಮಹಾಗಿರೇಃ ॥ ೪ ॥

ಸುವರ್ಣಮಯವಾದ, ಮೇಲ್ಭಾಗದಲ್ಲಿ ಸುವರ್ಣಾಭರಣವನ್ನು ಹೊಂದಿದ, ಸುವರ್ಣಮಯವಾದ ಮಾಲೆಗಳಿಂದ ಅಲಂಕೃತವಾದ ಆ ಧ್ವಜಗಳು ಸುವರ್ಣ ಪರ್ವತದ ಸುವರ್ಣಶೃಂಗಗಳಂತೆ ಇವೆ.

ಅನೇಕವರ್ಣಾ ವಿವಿಧಾ ಧ್ವಜಾಃ ಪರಮಶೋಭನಾಃ ।
ತೇ ಧ್ವಜಾಃ ಸಂವೃತಾಸ್ತೇಷಾಂ ಪತಾಕಾಭಿಃ ಸಮಂತತಃ ।
ನಾನಾವರ್ಣವಿಚಿತ್ರಾಭಿಃ ಶೋಭಂತೇ ಸರ್ವತೋದಿಶಃ ॥ ೫ ॥

ಆ ಧ್ವಜಗಳು ಅನೇಕ ವರ್ಣಗಳಿಂದ ಕೂಡಿದ್ದು ಸುಂದರವಾಗಿ ವಿಧವಿಧವಾಗಿವೆ. ಆ ಧ್ವಜಗಳು ಎಲ್ಲ ಕಡೆಗಳಿಂದಲೂ ನಾನಾ ವರ್ಣದ ವಿಚಿತ್ರವಾದ ಪತಾಕೆಗಳಿಂದ ಆವೃತವಾಗಿವೆ.

ಪತಾಕಾಶ್ಚ ತತಸ್ತಾಸ್ತು ಶ್ವಸನೇನ ಸಮೀರಿತಾಃ ।
ನೃತ್ಯಮಾನಾಃ ಪ್ರದೃಶ್ಯಂತೇ ರಂಗಮಧ್ಯೇ ಯಥಾ ಸ್ತ್ರಿಯಃ ॥ ೬ ॥

ವಾಯುವಿನ ವೇಗದಿಂದ ಪ್ರಚೋದಿಸಲ್ಪಟ್ಟ ಆ ಪತಾಕೆಗಳು ರಂಗಮಧ್ಯದಲ್ಲಿ ನರ್ತನವನ್ನು ಮಾಡುವ ಸ್ತ್ರೀಯರಂತೆ ಕಂಡುಬರುತ್ತವೆ.

ಇಂದ್ರಾಯುಧಸವರ್ಣಾಭಾಃ ಪತಾಕಾ ಭರತರ್ಷಭ ।
ದೋಧೂಯಮಾನಾ ರಥಿನಾಂ ಶೋಭಯಂತಿ ಮಹಾರಥಾಃ ॥ ೭ ॥

ಎಲೈ ಭರತಶ್ರೇಷ್ಠನೇ, ಇಂದ್ರಾಯುಧಕ್ಕೆ ಸಮಾನವಾದ ಕಾಂತಿಯುಳ್ಳ ಗಾಳಿಯಲ್ಲಿ ಪಟಪಟಿಸುವ ಆ ಪತಾಕೆಗಳು ರಥಶ್ರೇಷ್ಠರ ಮಹಾರಥಗಳಿಗೆ ಶೋಭೆಯನ್ನು ತಂದುಕೊಡುತ್ತವೆ.

ಸಿಂಹಲಾಂಗೂಲಮುಗ್ರಾಸ್ಯಂ ಧ್ವಜಂ ವಾನರಲಕ್ಷಣಮ್ ।
ಧನಂಜಯಸ್ಯ ಸಂಗ್ರಾಮೇ ಪ್ರತ್ಯಪಶ್ಯಾಮ ಭೈರವಮ್ ॥ ೮ ॥

ಸ ವಾನರಧ್ವಜೋ ರಾಜನ್ ಪತಾಕಾಭರಲಂಕೃತಃ ।
ತ್ರಾಸಯಾಮಾಸ ತತ್ ಸೈನ್ಯಂ ಧ್ವಜೋ ಗಾಂಡೀವಧನ್ವನಃ ॥ ೯ ॥

ಸಿಂಹಲಾಂಗೂಲ(ಬಾಲ)ವನ್ನು ಹೊಂದಿದ, ಭಯಂಕರವಾದ ಮುಖವನ್ನು ಹೊಂದಿದ, ಭೀಕರವಾದ ಧನಂಜಯನ ವಾನರ ಧ್ವಜವನ್ನು ನಾವು ರಣರಂಗದಲ್ಲಿ ನೋಡಿದೆವು. ಎಲೈ ರಾಜನೇ, ಗಾಂಡೀವ ಧನುರ್ಧಾರಿಯಾದ, ಪತಾಕೆಗಳಿಂದ ಅಲಂಕೃತವಾದ ಅರ್ಜುನನ ಆ ಧ್ವಜವು ನಿನ್ನ ಸೈನ್ಯವನ್ನು ಭಯಗೊಳಿಸಿತು.

ತಥೈವ ಸಿಂಹಲಾಂಗೂಲಂ ದ್ರೋಣಪುತ್ರಸ್ಯ ಭಾರತ ।
ಧ್ವಜಾಗ್ರೇ ಸಮಪಶ್ಯಾಮ ಬಾಲಸೂರ್ಯಸಮಪ್ರಭಮ್ ॥ ೧೦ ॥

ಕಾಂಚನಂ ಪವನೋದ್ಧೂತಂ ಶಕ್ರಧ್ವಜಸಮದ್ಯುತಿ ।
ನಂದನಂ ಕೌರವೇಯಾಣಾಂ ದ್ರೌಣೇರ್ಲಕ್ಷಣಮುಚ್ಛ್ರಿತಮ್ ॥ ೧೧ ॥

ಎಲೈ ಭಾರತನೇ, ಹಾಗೆಯೇ ಬಾಲಸೂರ್ಯ ಕಾಂತಿಯುಳ್ಳ ಸಿಂಹಲಾಂಗೂಲ (ಬಾಲ)ಧ್ವಜವನ್ನು ನಾವು ಅಶ್ವತ್ಥಾಮರ ರಥದ ಮೇಲ್ಭಾಗದಲ್ಲಿ ನೋಡಿದೆವು. ಶಕ್ರಧ್ವಜಕ್ಕೆ ಸಮವಾದ ಕಾಂತಿಯುಳ್ಳ ವಾಯುವಿನಿಂದ ಮೇಲ್ಮುಖವಾಗಿ ಮಾಡಲ್ಪಟ್ಟ ಕಾಂಚನ ಮಯವಾದ, ಎತ್ತರವಾದ ಅಶ್ವತ್ಥಾಮರ ಧ್ವಜವು ಕೌರವರಿಗೆ ಸಂತೋಷವನ್ನು ಕೊಡುವುದಾಗಿದ್ದಿತು.

ಹಸ್ತಕಾಕ್ಯಾ ಪುನರ್ಹ್ಯೇಮೀ ಬಭೂವಾಧಿರಥೇರ್ಧ್ವಜಃ ।
ಖಂ ಚಾಹವೇ ಮಹಾರಾಜ ದದೃಶೇ ಪೂರಯನ್ನಿವ ॥ ೧೨ ॥

ಪತಾಕೀ ಕಾಂಚನಃ ಸ್ರಗ್ವೀ ಧ್ವಜಃ ಕರ್ಣಸ್ಯ ಸಂಯುಗೇ ।
ನೃತ್ಯತೀವ ರಥೋಪಸ್ಥೇ ಶ್ವಸನೇನ ಸಮೀರಿತಃ ॥ ೧೩ ॥

ಎಲೈ ಮಹಾರಾಜನೇ, ಹಸ್ತಪ್ರಮಾಣದ ಸುವರ್ಣಮಯವಾದ ಕಾಕದಿಂದ ಕೂಡಿದ ಧ್ವಜವು ಕರ್ಣನ ಧ್ವಜ. ಯುದ್ಧದಲ್ಲಿ ಅದು ಆಕಾಶವನ್ನು ತುಂಬುವಂತೆ ತೋರುತ್ತಿದ್ದಿತು. ಪತಾಕೆಗಳನ್ನು ಧರಿಸಿದ ಕರ್ಣನ ಸುವರ್ಣಮಯವಾದ ಧ್ವಜವು ರಣರಂಗದಲ್ಲಿ ರಥಮಧ್ಯದಲ್ಲಿ ವಾಯುವಿನಿಂದ ಪ್ರೇರಿತವಾಗಿ ನರ್ತನವನ್ನು ಮಾಡುವಂತಿದ್ದಿತು.

'ಉತ್ಪತ್ಯ ತು ಮಹಾವೇಗಃ ಕಾಕಮಭ್ಯಾಹನತ್ ಕಪಿಃ' ಎಂದು ಕರ್ಣಪರ್ವದಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ ಹಸ್ತಕಾಕ್ಯಾ ಶಬ್ದಕ್ಕೆ ಹಸ್ತಪ್ರಮಾಣದ ಕಾಗೆಯೆಂದೇ ಅರ್ಥವನ್ನು ಮಾಡಬೇಕು. ಹಸ್ತಿಕಕ್ಷ್ಯಾ ಎಂದು ಪಾಠವಿದ್ದರೂ ಅದಕ್ಕೆ ಲಕ್ಷಣಾವೃತ್ತಿಯಿಂದ ಅಥವಾ ರೂಢಿಯಿಂದ ಕಾಕ ಎಂದೇ ಅರ್ಥವನ್ನು ಮಾಡಬೇಕು- ಲಕ್ಷಾಲಂಕಾರ.

ಆಚಾರ್ಯಸ್ಯ ಚ ಪಾಂಡೂನಾಂ ಬ್ರಾಹ್ಮಣಸ್ಯ ಯಶಸ್ವಿನಃ ।
ಗೋವೃಷೋ ಗೌತಮಸ್ಯಾಸೀತ್ ಕೃಪಸ್ಯ ಚ ಪರಿಷ್ಕೃತಃ ॥ ೧೪ ॥

ಸ ತೇನ ಭ್ರಾಜತೇ ರಾಜನ್ ಗೋವೃಷೇಣ ಮಹಾರಥಃ ।
ತ್ರಿಪುರಘ್ನರಥೋ ಯದ್ವದ್ ಗೋವೃಷೇಣ ವಿರಾಜತಾ ॥ ೧೫ ॥

ಪಾಂಡವರಿಗೆ ಆಚಾರ್ಯರಾದ, ಗೌತಮರಾದ ಕೃಪಾಚಾರ್ಯರ ಧ್ವಜವು ಅಲಂಕೃತವಾದ ಗೋವೃಷವಾಗಿದೆ. ಎಲೈ ರಾಜನೇ, ಮಹಾರಥರಾದ ಅವರು ಆ ಗೋವೃಷಭದಿಂದ ತ್ರಿಪುರಸಂಹಾರಿಯಾದ ರುದ್ರನು ಗೋವೃಷಧ್ವಜದಿಂದ ವಿರಾಜಿಸುವಂತೆ ವಿರಾಜಿಸುತ್ತಾರೆ.

ಮಯೂರೋ ವೃಷಸೇನಸ್ಯ ಕಾಂಚನೋ ಮಣಿರತ್ನವಾನ್ ।
ವ್ಯಾಹರನ್ನಿವ ಚಾತಿಷ್ಠತ್ ಸೇನಾಗ್ರಮಭಿಶೋಭಯನ್ ॥ ೧೬ ॥

ತೇನ ತಸ್ಯ ರಥೋ ಭಾತಿ ಮಯೂರೇಣ ಮಹಾತ್ಮನಃ ।
ಯಥಾ ಸ್ಕಂದರಥೋ ರಾಜನ್ ಮಯೂರೇಣ ವಿರಾಜತಾ ॥ ೧೭ ॥

ವೃಷಸೇನನ ಧ್ವಜವು ಕಾಂಚನಮಯವಾದ, ಮಣಿರತ್ನಭೂಷಿತವಾದ ಮಯೂರ. ಆ ಧ್ವಜವು ಅವನ ಸೇನಾಮುಖವನ್ನು ಶೋಭಿಸುತ್ತಾ ಮಾತನಾಡುವಂತೆ ತೋರುತ್ತಿದ್ದಿತು. ಎಲೈ ರಾಜನೇ, ಮಯೂರಧ್ವಜಯುಕ್ತವಾದ ಮಹಾತ್ಮನಾದ ಅವನ ರಥವು ಮಯೂರದಿಂದ ಕೂಡಿಕೊಂಡು ವಿರಾಜಮಾನವಾದ ಷಣ್ಮುಖನ ರಥದಂತೆ ಶೋಭಿಸುತ್ತದೆ.

ಮದ್ರರಾಜಸ್ಯ ಶಲ್ಯಸ್ಯ ಧ್ವಜಾಗ್ರೇऽಗ್ನಿಶಿಖಾಮಿವ ।
ಸೌವರ್ಣೀಂ ಪ್ರತ್ಯಪಶ್ಯಾಮ ಸೀತಾಮಪ್ರತಿಮಾಂ ಶುಭಾಮ್ ॥ ೧೮ ॥

ಸಾ ಸೀತಾ ಭ್ರಾಜತೇ ತಸ್ಯ ರಥಮಾಸ್ಥಾಯ ಮಾರಿಷ ।
ಸರ್ವಬೀಜವಿರೂಢೇವ ಯಥಾ ಸೀತಾ ಶ್ರಿಯಾ ವೃತಾ ॥ ೧೯ ॥

ಮದ್ರರಾಜನ ಶಲ್ಯನ ಧ್ವಜದ ಮೇಲ್ಭಾಗದಲ್ಲಿ ಸುವರ್ಣಮಯವಾದ ಚೌಕಾಕಾರವಾದ ಭೂಮಿಯಿದೆ. ಎಲೈ ಪೂಜ್ಯನೇ, ಆ ಭೂಮಿಯಾದರೂ ಸರ್ವಸಸ್ಯಗಳು ಅಂಕುರಿಸಿದ ಕೇದಾರದಂತೆ (ಚಚ್ಚೌಕ್ಕವಾದ ಭೂಮಿಯಂತೆ) ಶೋಭಿಸುತ್ತದೆ.

ವರಾಹಃ ಸಿಂಧುರಾಜಸ್ಯ ರಾಜತೋऽಭವಿರಾಜತೇ ।
ಧ್ವಜಾಗ್ರೇ ಲೋಹಿತಾರ್ಕಾಭೋ ಹೇಮಜಾಲಪರಿಷ್ಕೃತಃ ॥ ೨೦ ॥

ಶುಶುಭೇ ಕೇತುನಾ ತೇನ ರಾಜತೇನ ಜಯದ್ರಥಃ ।
ಯಥಾ ದೈವಾಸುರೇ ಯುದ್ಧೇ ಪುರಾ ಪೂಷಾ ಸ್ಮ ಶೋಭತೇ ॥ ೨೧ ॥

ಸಿಂಧುರಾಜನ ರಜತಮಯವಾದ, ಹೇಮಜಾಲಪರಿಷ್ಕೃತವಾದ ವರಾಹವು ಲೋಹಿತವರ್ಣದ ಸೂರ್ಯನ ಕಾಂತಿಯನ್ನು ಹೊಂದಿ ಅವನ ಧ್ವಜಾಗ್ರದಲ್ಲಿ ಶೋಭಿಸುತ್ತದೆ. ಹಿಂದೆ ದೇವಾಸುರ ಯುದ್ಧದಲ್ಲಿ ಪೂಷಣನು ರಜತಮಯವಾದ ಧ್ವಜದಿಂದ ಶೋಭಿಸಿದಂತೆ ಜಯದ್ರಥನು ರಜತಮಯವಾದ ಧ್ವಜದಿಂದ ಶೋಭಿಸುತ್ತಾನೆ.

ಸೌಮದತ್ತೇಃ ಪುನರ್ಯೂಪೋ ಯಜ್ಞಶೀಲಸ್ಯ ಧೀಮತಃ ।
ಧ್ವಜಃ ಸೂರ್ಯ ಇವಾಭಾತಿ ರಥೇ ಚಾತ್ರ ಪ್ರದೃಶ್ಯತೇ ॥ ೨೨ ॥

ಸ ಯೂಪಃ ಕಾಂಚನೋ ರಾಜನ್ ಸೌಮದತ್ತೇರ್ವಿರಾಜತೇ ।
ರಾಜಸೂಯೇ ಮಖಶ್ರೇಷ್ಠೇ ಯಥಾ ಯೂಪಃ ಸಮುಚ್ಛ್ರಿತಃ ॥ ೨೩॥

ಯಜ್ಞಶೀಲನೂ, ಮೇಧಾವಿಯೂ ಆದ ಭೂರಿಶ್ರವನ ಯೂಪಧ್ವಜವು ಸೂರ್ಯನಂತೆ ಶೋಭಿಸುತ್ತದೆ. ಎಲೈ ರಾಜನೇ, ಶ್ರೇಷ್ಠಯಾಗವಾದ ರಾಜಸೂಯದಲ್ಲಿ ಎತ್ತರವಾದ ಯೂಪವು ಶೋಭಿಸುವಂತೆ ಭೂರಿಶ್ರವನ ಆ ಸುವರ್ಣಮಯವಾದ ಯೂಪವು ಶೋಭಿಸುತ್ತದೆ.

ಶಲ್ಯಸ್ಯ ತು ಮಹಾರಾಜ ರಾಜತೇ ದ್ವಿರದೋ ಮಹಾನ್ ।
ಕೇತನಃ ಕಾಂಚನಸ್ತತ್ರ ಮಯೂಖೈರಿವ ಶೋಭಿತಃ ॥ ೨೪ ॥

ಸ ಧ್ವಜೋಽಶೋಭಯತ್ ಸೈನ್ಯಂ ತಾವಕಂ ಭರತರ್ಷಭ ।
ಯಥಾ ಶ್ವೇತೋ ಮಹಾನಾಗೋ ದೇವರಾಜಚಮೂಂ ತಥಾ ॥ ೨೫ ॥

ಎಲೈ ಮಹಾರಾಜನೇ, ಶಲ್ಯನ ರಥದಲ್ಲಿಸುವರ್ಣಮಯವಾದ, ಕಿರಣಗಳಿಂದ ಶೋಭಿಸುವ, ಮಹಾಗಜವು ಶೋಭಿಸುತ್ತದೆ. ಎಲೈ ಭರತಶ್ರೇಷ್ಠನೇ, ಮಹಾಗಜವಾದ ಐರಾವತವು ಇಂದ್ರನ ಸೇನೆಗೆ ಶೋಭೆಯನ್ನು ಉಂಟುಮಾಡುವಂತೆ ಆ ಧ್ವಜವು ನಿನ್ನ ಸೇನೆಗೆ ಶೋಭೆಯನ್ನುಂಟು ಮಾಡುತ್ತದೆ.

ನಾಗೋ ಮಣಿಮಯೋ ರಾಜ್ಞೋ ಧ್ವಜಃ ಕೇತನಸಂವೃತಃ ।
ಕಿಂಕಿಣೀಶತನಿರ್ಹ್ರಾದೋ ಭ್ರಾಜಂಜ್ಯೈತ್ರೇ ರಥೋತ್ತಮೇ ॥ ೨೬ ॥

ವ್ಯಭ್ರಾಜತ ಭೃಶಂ ರಾಜನ್ ಪುತ್ರಸ್ತವ ವಿಶಾಂಪತೇ ।
ಧ್ವಜೇನ ಮಹತಾ ಸಂಖೇ ಕುರೂಣಾಮೃಷಭಸ್ತದಾ ॥ ೨೭ ॥

ಮಣಿಮಯವಾದ, ನೂರು ಕಿಂಕಿಣಿ ನಾದಗಳಿಂದ ಸಹಿತವಾದ ನಾಗವು ಜಯಶೀಲವಾದ ದುರ್ಯೋಧನನ ರಥದಲ್ಲಿ ಶೋಭಿಸುತ್ತದೆ. ಎಲೈ ರಾಜನೇ, ಕುರುಶ್ರೇಷ್ಠನಾದ ನಿನ್ನ ಪುತ್ರನು ಆ ರಥದಲ್ಲಿ ಅಂತಹ ಧ್ವಜದಿಂದ ಬಹಳವಾಗಿ ಶೋಭಿಸುತ್ತಾನೆ.

ನವೈತೇ ತವ ವಾಹಿನ್ಯಾಮುಚ್ಛ್ರಿತಾಃ ಪರಮಧ್ವಜಾಃ ।
ವ್ಯದೀಪಯಂಸ್ತೇ ಪೃತನಾಂ ಯುಗಾಂತಾದಿತ್ಯಸನ್ನಿಭಾಃ ॥ ೨೮ ॥

ಈ ಒಂಬತ್ತು ನಿನ್ನ ಸೈನ್ಯದಲ್ಲಿ ಉನ್ನತವಾದ ಮತ್ತು ಶ್ರೇಷ್ಠವಾದ ಧ್ವಜಗಳು. ಯುಗಾಂತಕಾಲದ ಸೂರ್ಯನ ಕಾಂತಿಯನ್ನು ಹೊಂದಿದ ಆ ಧ್ವಜಗಳು ನಿನ್ನ ಸೈನ್ಯವನ್ನು ಪ್ರಕಾಶಗೊಳಿಸುತ್ತವೆ.

ದಶಮಸ್ತ ರ್ಜುನಸ್ಯಾಸೀದೇಕ ಏವ ಮಹಾಕಪಿಃ ।
ಆದೀಪ್ಯದರ್ಜುನಸ್ತೇನ ಹಿಮವಾನಿವ ಶಂಭುನಾ ॥ ೨೯ ॥

ಹತ್ತನೆಯ ರಥವು ಅರ್ಜುನನ ರಥ. ಅದರಲ್ಲಿ ಒಂದೇ ಒಂದು ಮಹಾಕಪಿ ಇದೆ. ಹಿಮಾಲಯವು ರುದ್ರನ ಜೊತೆಯಲ್ಲಿ ಆಟವಾಡಿದಂತೆ ಅರ್ಜುನನು ಆ ಕಪಿಯ ಜೊತೆಯಲ್ಲಿ ಆಟವಾಡುತ್ತಾನೆ.

ತತಶ್ಚಿತ್ರಾಣಿ ಶುಭ್ರಾಣಿ ಸುಮಹಾಂತಿ ಮಹಾರಥಾಃ ।
ಕಾರ್ಮುಕಾನ್ಯಾದದುಸ್ತೂರ್ಣಮರ್ಜುನಾರ್ಥಂ ಪರಂತಪಾಃ ॥ ೩೦ ॥

ಆನಂತರ ಶತ್ರುತಾಪಕರೂ, ಮಹಾರಥರೂ ಆದ ನಿನ್ನ ಯೋಧರು ಶುಭ್ರವೂ, ವಿಚಿತ್ರವೂ ಮತ್ತು ಬಹಳ ದೊಡ್ಡವೂ ಆದ ಧನುಸ್ಸುಗಳನ್ನು ಅರ್ಜುನನ ಎದುರಿನಲ್ಲಿ ಯುದ್ಧವನ್ನು ಮಾಡಲು ಶೀಘ್ರವಾಗಿ ತೆಗೆದುಕೊಂಡರು.

ತಥೈವ ಧನುರಾಯಚ್ಛತ್ ಪಾರ್ಥಃ ಶತ್ರುವಿನಾಶನಮ್ ।
ಗಾಂಡೀವಂ ದಿವ್ಯಕರ್ಮಾಣಂ ರಾಜನ್ ದುರ್ಮಂತ್ರಿತೇ ತವ ॥ ೩೧ ॥

ಎಲೈ ರಾಜನೇ, ನಿನ್ನ ದುರ್ಮಂತ್ರದ ಫಲವಾಗಿ ಅರ್ಜುನನೂ ಸಹ ಶತ್ರುವಿನಾಶಕವಾದ ಮತ್ತು ದಿವ್ಯ ಕರ್ಮವನ್ನು ಮಾಡುವ ಗಾಂಡೀವ ಧನುಸ್ಸನ್ನು ಹಿಡಿದು ಎಳೆದನು.

ತವಾಪರಾಧಾದ್ ರಾಜೇಂದ್ರ ಬಹುಧಾ ನಿಹತಾ ಯುಧಿ ।
ನಾನಾದಿಗ್ಭ್ಯಃ ಸಮಾಹೂತಾಃ ಸಹಯಾಃ ಸರಥದ್ವಿಪಾಃ ॥ ೩೨ ॥

ಎಲೈ ರಾಜೇಂದ್ರನೇ, ನಿನ್ನ ಅಪರಾಧದಿಂದ ನಾನಾ ದಿಕ್ಕುಗಳಿಂದ ಆಹ್ವಾನಿಸಿ ಬಂದ ಹಯ-ರಥ-ಗಜ ಸಹಿತರಾದ ಅನೇಕ ಕ್ಷತ್ರಿಯರು ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದಾರೆ.

ತೇಷಾಮಾಸೀದ್ ವ್ಯತಿಕ್ಷೇಪೋ ಗರ್ಜತಾಮಿತರೇತರಮ್ ।
ದುರ್ಯೋಧನಮುಖಾನಾಂ ಚ ಪಾಂಡೂನಾಮೃಷಭಸ್ಯ ಚ ॥ ೩೩ ॥

ಪರಸ್ಪರವಾಗಿ ಗರ್ಜಿಸುವ ದುರ್ಯೋಧನ ಮೊದಲಾದವರಿಗೂ ಮತ್ತು ಪಾಂಡವ ಶ್ರೇಷ್ಠನಾದ ಅರ್ಜುನನಿಗೂ ದೊಡ್ಡ ಸಂಘರ್ಷ ಉಂಟಾಯಿತು.

ತತ್ರಾದ್ಭುತಂ ಪರಂ ಚಕ್ರೇ ಕೌಂತೇಯಃ ಕೃಷ್ಣಸಾರಥಿಃ ।
ಯದೇಕೋ ಬಹುಭಿಃ ಸಾರ್ಧಂ ಸಮಾಗಚ್ಛದಭೀತವತ್ ॥ ೩೪ ॥

ಅಲ್ಲಿ ಕುಂತೀಪುತ್ರನೂ, ಕೃಷ್ಣಸಾರಥಿಯೂ ಆದ ಒಬ್ಬನೇ ಅರ್ಜುನನು ಯಾವ ಭಯವೂ ಇಲ್ಲದೆ ಅನೇಕರನ್ನು ಎದುರಿಸಿ, ಯುದ್ಧವನ್ನು ಮಾಡಿ ಅದ್ಭುತವಾದ ಕರ್ಮವನ್ನು ಮಾಡಿದನು.

ಅಶೋಭತ ಮಹಾಬಾಹುರ್ಗಾಂಡೀವಂ ವಿಕ್ಷಿಪನ್ ಧನುಃ ।
ಜಿಗೀಷುಸ್ತಾನ್ ರಥಶ್ರೇಷ್ಠಾನ್ ಜಿಘಾಂಸುಶ್ಚ ಜಯದ್ರಥಮ್ ॥ ೩೫ ॥

ಮಹಾಬಾಹುವಾದ ಅವನು ಆ ರಥಶ್ರೇಷ್ಠರನ್ನು ಹಾಗೆಯೇ ಜಯದ್ರಥನನ್ನು ಕೊಲ್ಲಲು ಬಯಸಿ ಗಾಂಡೀವ ಧನುಸ್ಸನ್ನು ಎಳೆಯುತ್ತಾ ಶೋಭಿಸಿದನು.

ತತೋಽರ್ಜುನೋ ಮಹಾರಾಜ ಶರೈರ್ಮುಕ್ತೈಃ ಸಹಸ್ರಶಃ ।
ಅದೃಶ್ಯಾನಕರೋದ್ ಯೋಧಾಂಸ್ತಾವಕಾನ್ ಶತ್ರುತಾಪನಃ ॥ ೩೬ ॥

ಎಲೈ ಮಹಾರಾಜನೇ, ಆಗ ಶತ್ರುತಾಪನನಾದ ಅರ್ಜುನನು ಸಹಸ್ರ ಸಂಖ್ಯೆಯಲ್ಲಿ ಬಾಣಗಳನ್ನು ಪ್ರಯೋಗಿಸಿ, ನಿನ್ನ ಯೋಧರನ್ನು ಅದೃಶ್ಯರನ್ನಾಗಿ ಮಾಡಿದನು.

ತತಸ್ತೇಽಪಿ ನರವ್ಯಾಘ್ರಾಃ ಸರ್ವೇ ಪಾರ್ಥಂ ಮಹಾರಥಾಃ ।
ಅದೃಶ್ಯಂ ಸಮರೇ ಚಕ್ರುಃ ಸಾಯಕೌಘೈಃ ಸಮಂತತಃ ॥ ೩೭ ॥

ಆಗ ನರವ್ಯಾಘ್ರರಾದ ಆ ಮಹಾರಥರೆಲ್ಲರೂ ಸಹ ಎಲ್ಲ ಕಡೆಗಳಿಂದಲೂ ಬಾಣ ಸಮೂಹಗಳನ್ನು ಪ್ರಯೋಗಿಸಿ, ರಣರಂಗದಲ್ಲಿ ಅರ್ಜುನನನ್ನು ಅದೃಶ್ಯನನ್ನಾಗಿ ಮಾಡಿದರು.

ಸಂವೃತೇ ನರಸಿಂಹೇ ತೈಃ ಕುರೂಣಾಮೃಷಭೇಽರ್ಜುನೇ ।
ಮಹಾನಾಸೀತ್ ಸಮುದ್ಧೂತಃ ತಸ್ಯ ಸೈನ್ಯಸ್ಯ ನಿಸ್ವನಃ ॥ ೩೮ ॥

ಕುರುಶ್ರೇಷ್ಠನಾದ ಅರ್ಜುನನು ನರಸಿಂಹರಾದ ನಿನ್ನ ಆ ಯೋಧರಿಂದ ಸುತ್ತುವರಿಯಲ್ಪಡುತ್ತಿರಲು ಪಾಂಡವರ ಸೈನ್ಯದಲ್ಲಿ ದೊಡ್ಡನಾದವು ಉಂಟಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿನವತಿತಮೋಽಧ್ಯಾಯಃ ॥
॥ ಜಯದ್ರಥವಧಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೂರನೆಯ ಅಧ್ಯಾಯ

ದ್ರೋಣ-ಯುಧಿಷ್ಠಿರರ ಯುದ್ಧ. ದ್ರೋಣರಿಂದ ಯುಧಿಷ್ಠಿರನ ಪರಾಜಯ.

ಧೃತರಾಷ್ಟ್ರಃ

ಅರ್ಜುನೇ ಸೈಂಧವಂ ಯಾತೇ ಭಾರದ್ವಾಜೇನ ಸಂವೃತಾಃ ।
ಪಾಂಚಾಲಾಃ ಕುರುಭಿಃ ಸಾರ್ಧಂ ಕಿಮಕುರ್ವತ ಸಂಜಯ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ಅರ್ಜುನನು ಸೈಂಧವನ ಕಡೆಗೆ ಹೋಗುತ್ತಿರಲು ದ್ರೋಣರಿಂದ ಸುತ್ತುವರಿಯಲ್ಪಟ್ಟ ಪಾಂಚಾಲರು ಕುರುಗಳ ಜೊತೆಯಲ್ಲಿ ಹೇಗೆ ಯುದ್ಧ ಮಾಡಿದರು?

ಸಂಜಯಃ

ಅಪರಾಹ್ಣೇ ಮಹಾರಾಜ ಸಂಗ್ರಾಮೇ ರೋಮಹರ್ಷಣೇ ।
ಪಾಂಚಾಲಾನಾಂ ಕುರೂಣಾಂ ಚ ದ್ರೋಣೇ ಯುದ್ಧಮವರ್ತತ ॥ ೨ ॥

ಸಂಜಯ– ಎಲೈ ಮಹಾರಾಜನೇ, ಅಪರಾಹ್ಣದಲ್ಲಿ ರೋಮಾಂಚಕಾರಿಯಾದ ಯುದ್ಧದಲ್ಲಿ ದ್ರೋಣರನ್ನು ಕೇಂದ್ರೀಕರಿಸಿ, ಪಾಂಚಾಲರಿಗೂ ಮತ್ತು ಕುರುಗಳಿಗೂ ಯುದ್ಧವು ನಡೆಯಿತು.

ಪಾಂಚಾಲಾ ಹಿ ಜಿಘಾಂಸಂತೋ ದ್ರೋಣಂ ಸಂಹೃಷ್ಟಚೇತಸಃ ।
ಅಭ್ಯಮುಂಚಂತ ಗರ್ಜಂತಃ ಶರವರ್ಷಾಣಿ ಭೂರಿಶಃ ॥ ೩ ॥

ಪಾಂಚಾಲರಾದರೂ ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ದ್ರೋಣರನ್ನು ವಧೆ ಮಾಡಲು ಬಯಸಿ, ವೀರಗರ್ಜನೆಯನ್ನು ಮಾಡುತ್ತಾ ಅನೇಕ ಬಾಣಗಳ ಮಳೆಯನ್ನು ಅವರ ಮೇಲೆ ಸುರಿಸಿದರು.

ತತಃ ಸುತುಮುಲಸ್ತೇಷಾಂ ಸಂಗ್ರಾಮೋಽವರ್ತತಾದ್ಭುತಃ ।
ಪಾಂಚಾಲಾನಾಂ ಕುರೂಣಾಂ ಚ ಘೋರೋ ದೈವಾಸುರೋಪಮಃ ॥

ಆನಂತರ ಪಾಂಚಾಲರಿಗೂ ಮತ್ತು ಕುರುಗಳಿಗೂ ದೇವಾಸುರ ಯುದ್ಧಕ್ಕೆ ಸಮವಾದ ಘೋರವೂ, ತೀವ್ರವೂ ಮತ್ತು ಅದ್ಭುತವೂ ಆದ ಯುದ್ಧವು ನಡೆಯಿತು.

ಸರ್ವೇ ದ್ರೋಣರಥಂ ಪ್ರಾಪ್ಯ ಪಾಂಚಾಲಾಃ ಪಾಂಡವೈಃ ಸಹ ।
ತದನೀಕಂ ವಿಭಿತ್ಸಂತೋ ಮಹಾಸ್ತ್ರಾಣಿ ವ್ಯದರ್ಶಯನ್ ॥ ೫ ॥

ಪಾಂಡವರ ಜೊತೆಯಲ್ಲಿ ಸೇರಿದ ಪಾಂಚಾಲರೆಲ್ಲರೂ ದ್ರೋಣರ ರಥದ ಸಮೀಪಕ್ಕೆ ಬಂದು ದ್ರೋಣರ ಸೇನೆಯನ್ನು ಭಗ್ನಗೊಳಿಸಲು ಇಚ್ಛಿಸಿ ಮಹಾಸ್ತ್ರಗಳನ್ನು ಪ್ರದರ್ಶಿಸಿದರು.

ದ್ರೋಣಸ್ಯ ರಥಪರ್ಯಂತಂ ರಥಿನೋ ರಥಮಾಸ್ಥಿತಾಃ ।
ಕಂಪಯಂತೋಽಭ್ಯವರ್ಷಂತ ವೇಗಮಾಸ್ಥಾಯ ಮಧ್ಯಮಮ್ ॥ ೬ ॥

ರಥಿಕರು ತಮ್ಮ ರಥದಲ್ಲಿ ನಿಂತು ದ್ರೋಣರ ರಥದವರೆಗೂ ಬಂದು ಮಧ್ಯಮ ವೇಗವನ್ನು ಆಶ್ರಯಿಸಿ ದ್ರೋಣರ ಸೇನೆಯನ್ನು ನಡುಗಿಸುತ್ತಾ ಬಾಣಗಳ ಮಳೆಯನ್ನು ಸುರಿಸಿದರು.

ತಮಭ್ಯಯಾದ್ ಬೃಹತ್ಕ್ಷತ್ರಃ ಕೇಕಯಾನಾಂ ಮಹಾರಥಃ ।
ಪ್ರವಪನ್ನಿಶಿತಾನ್ ಬಾಣಾನ್ ಮಹೇಂದ್ರಾಶನಿಸನ್ನಿಭಾನ್ ॥ ೭ ॥

ಮಹಾರಥನಾದ ಕೇಕಯನಾದ ಬೃಹತ್ಕ್ಷತ್ರನು ಇಂದ್ರನ ವಜ್ರಾಯುಧವನ್ನು ಹೋಲುವ ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ದ್ರೋಣರ ಸಮೀಪಕ್ಕೆ ಬಂದನು.

ತಂ ತು ಪ್ರತ್ಯುದಿಯಾಚ್ಛೈಘ್ರ್ಯಂ ಕ್ಷೇಮಧೂರ್ತಿರ್ಮಹಾಯಶಾಃ ।
ವಿಮುಂಚನ್ ನಿಶಿತಾನ್ ಬಾಣಾನ್ ಶತಶೋಽಥ ಸಹಸ್ರಶಃ ॥ ೮ ॥

ಆಗ ಮಹಾಕೀರ್ತಿವಂತನಾದ ಕ್ಷೇಮಧೂರ್ತಿಯು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ಶೀಘ್ರವಾಗಿ ಬೃಹತ್ಕ್ಷತ್ರನ ಎದುರಿಗೆ ಬಂದು ಅವನನ್ನು ಎದುರಿಸಿದನು.

ಧೃಷ್ಟಕೇತುಶ್ಚ ಚೇದೀನಾಮ್ ಋಷಭೋಽತಿಬಲೋದಿತಃ ।
ತ್ವರಿತೋಽಭ್ಯದ್ರವದ್ ದ್ರೋಣಂ ಮಹೇಂದ್ರಮಿವ ಶಂಬರಃ ॥ ೯ ॥

ಚೇದಿಗಳ ಅಧಿಪತಿಯಾದ ಅತಿಬಲಿಷ್ಠನಾದ ಧೃಷ್ಟಕೇತುವೂ ಸಹ ಶಂಬರನು ಇಂದ್ರನ ಬಳಿಗೆ ಬಂದಂತೆ ಶೀಘ್ರವಾಗಿ ದ್ರೋಣರ ಸಮೀಪಕ್ಕೆ ಬಂದನು.

ತಮಾಪತಂತಂ ಸಹಸಾ ವ್ಯಾದಿತಾಸ್ಯಮಿವಾಂತಕಮ್ ।
ವೀರಧನ್ವಾ ಮಹೇಷ್ವಾಸಃ ತ್ವರಮಾಣಃ ಸಮಭ್ಯಯಾತ್ ॥ ೧೦ ॥

ಬಾಯಿ ತೆರೆದ ಮೃತ್ಯುವಿನಂತೆ ಶೀಘ್ರವಾಗಿ ಬರುತ್ತಿದ್ದ ಅವನನ್ನು ನೋಡಿ ಮಹಾಧನುರ್ಧಾರಿಯಾದ ವೀರಧನ್ವನು ಜಾಗ್ರತೆಯಾಗಿ ಅವನ ಕಡೆಗೆ ಮುನ್ನುಗ್ಗಿದನು.

ಯುಧಿಷ್ಠಿರಂ ಮಹಾರಾಜ ಜಿಗೀಷುಂ ಸಮವಸ್ಥಿತಮ್ ।
ಸಹಾನೀಕಂ ಸ್ಮಯನ್ ದ್ರೋಣೋ ನ್ಯವಾರಯತ ತದ್ ಬಲೀ ॥ ೧೧ ॥

ಎಲೈ ಮಹಾರಾಜನೇ, ಬಲಿಷ್ಠರಾದ ದ್ರೋಣರು ತಮ್ಮನ್ನು ಗೆಲ್ಲಲು ಬಯಸಿ ಎದುರಿಗಿದ್ದ ಯುಧಿಷ್ಠಿರನನ್ನು ಅವನ ಸೈನ್ಯದ ಜೊತೆಯಲ್ಲಿ ನಗುತ್ತಲೇ ತಡೆದರು.

ನಕುಲಂ ಕುಶಲಂ ಯುದ್ಧೇ ಪರಾಕ್ರಾಂತಂ ಪರಾಕ್ರಮೀ ।
ಅಭ್ಯಗಚ್ಛತ್ ಸಮಾಯಾಂತಂ ವಿಕರ್ಣಸ್ತೇ ಸುತಃ ಪ್ರಭೋ ॥ ೧೨ ॥

ಪ್ರಭುವೇ, ಯುದ್ಧದಲ್ಲಿ ತನ್ನ ಪರಾಕ್ರಮವನ್ನು ತೋರಿಸುತ್ತಿದ್ದ ತನ್ನ ಕಡೆಗೆ ಬರುತ್ತಿದ್ದ ಕುಶಲನಾದ ನಕುಲನನ್ನು ಕುರಿತು ಪರಾಕ್ರಮಶಾಲಿಯಾದ ನಿನ್ನ ಪುತ್ರನಾದ ವಿಕರ್ಣನು ಅವನ ಎದುರಿಗೆ ಹೋದನು.

ಸಹದೇವಂ ತಥಾSSಯಾಂತಂ ದುರ್ಮುಖಃ ಶತ್ರುಕರ್ಶನಃ ।
ಶರೈರನೇಕಸಾಹಸ್ರೈಃ ಸಮವಾರಯದಾಶುಗೈಃ ॥ ೧೩ ॥

ಹಾಗೆಯೇ ತನ್ನ ಕಡೆಗೆ ಬರುತ್ತಿದ್ದ ಸಹದೇವನನ್ನು ಶತ್ರುಸೂದನನಾದ (ನಿನ್ನ ಪುತ್ರನಾದ) ದುರ್ಮುಖನು ಶೀಘ್ರಗಾಮಿಗಳಾದ ಅನೇಕ ಸಹಸ್ರ ಬಾಣಗಳಿಂದ ತಡೆದನು.

ಸಾತ್ಯಕಂ ತು ನರವ್ಯಾಘ್ರಂ ವ್ಯಾಘ್ರದತ್ತಸ್ತ್ವವಾಕಿರತ್ ।
ಶರೈಃ ಸುನಿಶಿತೈಸ್ತೀಕ್ಷ್ಣೈಃ ಕಂಪಯನ್ ವೈ ಮುಹುರ್ಮುಹುಃ ॥ ೧೪ ॥

ನರವ್ಯಾಘ್ರನಾದ ಸಾತ್ಯಕಿಯನ್ನು ವ್ಯಾಘ್ರದತ್ತನು ಬಹಳ ತೀಕ್ಷ್ಣವಾದ ಬಾಣಗಳನ್ನು ಪುನಃ ಪುನಃ ಪ್ರಯೋಗಿಸುತ್ತಾ ಅವನ ಸೈನ್ಯವನ್ನು ನಡುಗಿಸುತ್ತಾ ಬಾಣಗಳ ಮಳೆಯನ್ನು ಕರೆದನು.

ದ್ರೌಪದೇಯಾನ್ ನರವ್ಯಾಘ್ರಾನ್ ಮುಂಚತಃ ಸಾಯಕೋತ್ತಮಾನ್ ।
ಸಂರಬ್ಧಾನ್ ರಥಿನಾಂ ಶ್ರೇಷ್ಠಃ ಸೌಮದತ್ತಿರವಾರಯತ್ ॥ ೧೫ ॥

ಶ್ರೇಷ್ಠವಾದ ಬಾಣಗಳನ್ನು ಪ್ರಯೋಗಿಸುತ್ತಿದ್ದ ಕೋಪಗೊಂಡ ನರವ್ಯಾಘ್ರರಾದ ದ್ರೌಪದಿಯ ಐವರು ಪುತ್ರರನ್ನು ರಥಿಶ್ರೇಷ್ಠನಾದ ಭೂರಿಶ್ರವನು ತಡೆದನು.

ಭೀಮಸೇನಂ ತಥಾ ಕ್ರುದ್ಧಂ ಘೋರರೂಪೋ ಭಯಾನಕಃ ।
ಪ್ರತ್ಯವಾರಯದಾಯಾಂತಮಾರ್ಷ್ಯಶೃಂಗಿರ್ಮಹಾರಥಃ ॥ ೧೬ ॥

ಹಾಗೆಯೇ ಕೋಪಗೊಂಡಿದ್ದ ಮುಂದೆ ಬರುತ್ತಿದ್ದ ಭೀಮಸೇನನನ್ನು ಘೋರರೂಪವುಳ್ಳವನೂ, ಭಯಂಕರನೂ, ಮಹಾರಥನೂ ಆದ ಋಷ್ಯಶೃಂಗನ ಪುತ್ರನಾದ ಅಲಂಬುಸನು ತಡೆದನು.

ತಯೋಃ ಸಮಭವದ್ ಯುದ್ಧಂ ನರರಾಕ್ಷಸಯೋರ್ಮೃಧೇ ।
ಯಾದೃಶಂ ವೈ ಪುರಾವೃತ್ತಂ ರಾಮರಾವಣಯೋರ್ನೃಪ ॥ ೧೭ ॥

ನರ-ರಾಕ್ಷಸರಾದ ಅವರಿಬ್ಬರಿಗೆ ಹಿಂದೆ ರಾಮ-ರಾವಣರಿಗೆ ನಡೆದ ಯುದ್ಧದಂತೆ ಯುದ್ಧವು ನಡೆಯಿತು.

ತತೋ ಯುಧಿಷ್ಠಿರೋ ದ್ರೋಣಂ ನವತ್ಯಾ ನತಪರ್ವಣಾಮ್ ।
ಆಜಘ್ನೇ ಭರತಶ್ರೇಷ್ಠ ಸರ್ವಮರ್ಮಸು ಭಾರತ ॥ ೧೮ ॥

ಎಲೈ ಭಾರತನೇ, ಭರತಶ್ರೇಷ್ಠನಾದ ಯುಧಿಷ್ಠಿರನು ಬಾಗಿದ ತುದಿಯುಳ್ಳ ತೊಂಬತ್ತು ಬಾಣಗಳಿಂದ ದ್ರೋಣರಿಗೆ ಸರ್ವಮರ್ಮಗಳಲ್ಲಿಯೂ ಹೊಡೆದನು.

ತಂ ದ್ರೋಣಃ ಪಂಚವಿಂಶತ್ಯಾ ನಿಜಘಾನ ಸ್ತನಾಂತರೇ ।
ರೋಷಿತೋ ಭರತಶ್ರೇಷ್ಠ ಕೌಂತೇಯೇನ ಮಹಾತ್ಮನಾ ।
ಭೂಯ ಏವ ಹಿ ವಿಂಶತ್ಯಾ ಸಾಯಕಾನಾಂ ಸಮಾಚಿನೋತ್ ॥ ೧೯ ॥

ಎಲೈ ಭರತಶ್ರೇಷ್ಠನೇ, ಮಹಾತ್ಮನಾದ ಯುಧಿಷ್ಠಿರನಿಂದ ಕೋಪಗೊಳಿಸಲ್ಪಟ್ಟ ದ್ರೋಣರು ಇಪ್ಪತ್ತೈದು ಬಾಣಗಳಿಂದ ಯುಧಿಷ್ಠಿರನನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದರು ಮತ್ತು ಪುನಃ ಇಪ್ಪತ್ತು ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದರು.

ಅದೃಶ್ಯಂ ಸಮರೇ ಚಕ್ರೇ ರಾಜಾನಂ ಸಾಯಕೋತ್ತಮೈಃ ।
ಸಾಶ್ವಸೂತಧ್ವಜಂ ದ್ರೋಣಃ ಪಶ್ಯತಾಂ ಸರ್ವಧನ್ವಿನಾಮ್ ॥ ೨೦ ॥

ದ್ರೋಣರು ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆಯೇ ತಮ್ಮ ಶ್ರೇಷ್ಠವಾದ ಬಾಣಗಳಿಂದ ಅಶ್ವ-ಸೂತ-ಧ್ವಜಸಹಿತನಾದ ಯುಧಿಷ್ಠಿರನನ್ನು ರಣರಂಗದಲ್ಲಿ ಅದೃಶ್ಯನನ್ನಾಗಿ ಮಾಡಿದರು.

ತಾನ್ ಶರಾನ್ ದ್ರೋಣಮುಕ್ತಾನ್ ಸ್ಮ ಶರವರ್ಷೇಣ ಪಾಂಡವಃ ।
ನ್ಯವಾರಯತ ಧರ್ಮಾತ್ಮಾ ದರ್ಶಯನ್ ಹಸ್ತಲಾಘವಮ್ ॥ ೨೧ ॥

ಧರ್ಮಾತ್ಮನಾದ ಯುಧಿಷ್ಠಿರನಾದರೂ ತನ್ನ ಹಸ್ತದ ಕ್ಷಿಪ್ರತೆಯನ್ನು ತೋರಿಸುತ್ತಾ ದ್ರೋಣರು ಪ್ರಯೋಗಿಸಿದ ಬಾಣಗಳನ್ನು ತನ್ನ ಬಾಣಗಳ ಮಳೆಯಿಂದ ನಿವಾರಿಸಿದನು.

ತತೋ ದ್ರೋಣೋ ಭೃಶಂ ಕ್ರುದ್ಧೋ ಧರ್ಮರಾಜಸ್ಯ ಸಂಯುಗೇ ।
ಚಿಚ್ಛೇದ ಸಹಸಾ ಧನ್ವೀ ಧನುಸ್ತಸ್ಯ ಮಹಾತ್ಮನಃ ॥ ೨೨ ॥

ಆಗ ದ್ರೋಣರು ಇನ್ನೂ ಕೋಪಗೊಂಡು ರಣರಂಗದಲ್ಲಿ ಮಹಾತ್ಮನಾದ ಧರ್ಮರಾಜನ ಧನುಸ್ಸನ್ನು ತಕ್ಷಣ ಕತ್ತರಿಸಿದರು.

ಅಥೈನಂ ಛಿನ್ನಧನ್ವಾನಂ ತ್ವರಮಾಣೋ ಮಹಾರಥಃ ।
ಶರೈರನೇಕಸಾಹಸ್ರೈಃ ಪೂರಯಾಮಾಸ ಸರ್ವತಃ ॥ ೨೩ ॥

ಅನಂತರ ಅವನ ಧನುಸ್ಸನ್ನು ಕತ್ತರಿಸಿದ ಮೇಲೆ ಮಹಾರಥರಾದ ದ್ರೋಣರು ತ್ವರೆ ಮಾಡುತ್ತಾ, ಅನೇಕ ಸಹಸ್ರ ಬಾಣಗಳಿಂದ ಅವನನ್ನು ಎಲ್ಲ ಕಡೆಗಳಲ್ಲಿಯೂ ತುಂಬಿದರು.

ಅದೃಶ್ಯಂ ದೃಶ್ಯ ರಾಜಾನಂ ಭಾರದ್ವಾಜಸ್ಯ ಸಾಯಕೈಃ ।
ಸರ್ವಭೂತಾನ್ಯಮನ್ಯಂತ ಹತಮೇವ ಯುಧಿಷ್ಠಿರಮ್ ॥ ೨೪ ॥

ದ್ರೋಣರ ಬಾಣಗಳಿಂದ ಅದೃಶ್ಯನಾದ ರಾಜನನ್ನು ನೋಡಿ ಎಲ್ಲ ಯೋಧರೂ ಯುಧಿಷ್ಠಿರನು ಹತನಾದನೆಂದೇ ತಿಳಿದರು.

ಕೇಚಿತ್ತ್ವೇನಮಮನ್ಯಂತ ತಥಾ ವೈ ವಿಮುಖೀಕೃತಮ್ ।
ಹೃತೋ ರಾಜೇತಿ ರಾಜೇಂದ್ರ ಬ್ರಾಹ್ಮಣೇನ ಯಶಸ್ವಿನಾ ॥ ೨೫ ॥

ಎಲೈ ರಾಜೇಂದ್ರನೇ, ಹಾಗೆ ವಿಮುಖಗೊಳಿಸಲ್ಪಟ್ಟ ರಾಜನನ್ನು ಕೀರ್ತಿವಂತರಾದ ಬ್ರಾಹ್ಮಣರಾದ ದ್ರೋಣರಿಂದ ರಾಜನು ಅಪಹರಿಸಲ್ಪಟ್ಟಿದ್ದಾನೆ ಎಂದು ಕೆಲವರು ತಿಳಿದರು.

ಸ ಕೃಚ್ಛ್ರಂ ಪರಮಂ ಪ್ರಾಪ್ತೋ ಧರ್ಮರಾಜೋ ಯುಧಿಷ್ಠಿರಃ ।
ತ್ಯಕ್ತ್ವಾ ತತ್ ಕಾರ್ಮುಕಂ ಛಿನ್ನಂ ಭಾರದ್ವಾಜೇನ ಸಂಯುಗೇ ।
ಆದದೇಽನ್ಯದ್ ಧನುರ್ದಿವ್ಯಂ ಭಾರಕ್ಷಂ ವೇಗವತ್ತರಮ್ ॥ ೨೬ ॥

ಬಹಳ ಸಂಕಟಕ್ಕೆ ಸಿಲುಕಿದ ಧರ್ಮರಾಜನಾದ ಯುಧಿಷ್ಠಿರನು ಯುದ್ಧದಲ್ಲಿ ದ್ರೋಣರಿಂದ ಕತ್ತರಿಸಲ್ಪಟ್ಟ ಧನುಸ್ಸನ್ನು ತ್ಯಜಿಸಿ, ವೇಗಶಾಲಿಯಾದ ಮತ್ತು ಶತ್ರುವಿನ ವೇಗವನ್ನು ನಾಶಮಾಡುವ ದಿವ್ಯವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡನು.

ತತಸ್ತಾನ್ ಸಾಯಕಾನ್ ಸರ್ವಾನ್ ದ್ರೋಣಮುಕ್ತಾನ್ ಸಹಸ್ರಶಃ ।
ಚಿಚ್ಛೇದ ಸಮರೇ ವೀರಃ ತದದ್ಭುತಮಿವಾಭವತ್ ॥ ೨೭ ॥

ಅನಂತರ ವೀರನಾದ ಅವನು ಆ ಧನುಸ್ಸಿನಿಂದ ಸಹಸ್ರ ಸಂಖ್ಯೆಯಲ್ಲಿ ದ್ರೋಣರು ಪ್ರಯೋಗಿಸಿದ್ದ ಎಲ್ಲ ಬಾಣಗಳನ್ನೂ ಕತ್ತರಿಸಿದನು. ಅದು ಅದ್ಭುತವಾಗಿದ್ದಿತು.

ಛಿತ್ತ್ವಾ ಚ ತಾನ್ ಶರಾನ್ ರಾಜನ್ ಕ್ರೋಧಸಂರಕ್ತಲೋಚನಃ ।
ಶಕ್ತಿಂ ಜಗ್ರಾಹ ಸಮರೇ ಗಿರೀಣಾಮಪಿ ದಾರಣೀಮ್ ॥ ೨೮ ॥

ಸ್ವರ್ಣದಂಡಾಂ ಮಹಾಘೋಷಾಮ್ ಅಷ್ಟಘಂಟಾಂ ಭಯಾವಹಾಮ್ ।
ಸಮುತ್ಕ್ಷಿಪ್ಯ ಚ ತಾಂ ಹೃಷ್ಟೋ ನನಾದ ಬಲವದ್ ಬಲೀ ॥ ೨೯ ॥

ಎಲೈ ರಾಜನೇ, ಕೋಪದಿಂದ ಕೆಂಪಾದ ಕಣ್ಣುಗಳನ್ನು ಹೊಂದಿದ ಅವನು ಆ ಬಾಣಗಳನ್ನು ಕತ್ತರಿಸಿ, ಸ್ವರ್ಣದಂಡವಿರುವ, ಮಹಾಘೋಷದಿಂದ ಕೂಡಿದ, ಎಂಟು ಘಂಟೆಗಳಿಂದ ಕೂಡಿದ, ಭಯಂಕರವಾದ ಪರ್ವತವನ್ನೂ ಭೇದಿಸುವ ಶಕ್ತಿಯನ್ನು ತೆಗೆದುಕೊಂಡು ಅದನ್ನು ದ್ರೋಣರ ಮೇಲೆ ಎಸೆದು ಬಲಿಷ್ಠನಾದ ಅವನು ಸಂತೋಷಗೊಂಡು ಗಟ್ಟಿಯಾದ ಸಿಂಹನಾದವನ್ನು ಮಾಡಿದನು.

ತಾಂ ರಣೇ ಸರ್ವಭೂತಾನಿ ತ್ರಾಸಯಂತೀಮಿವ ಪ್ರಭೋ ।
ಶಕ್ತಿಂ ಸಮುದ್ಯತಾಂ ದೃಷ್ಟ್ವಾ ಧರ್ಮರಾಜೇನ ಸಂಯುಗೇ ॥ ೩೦ ॥

ಸ್ವಸ್ತಿ ದ್ರೋಣಾಯ ಸಹಸಾ ಸರ್ವಸೈನ್ಯಾನ್ಯಥಾಬ್ರುವನ್ ॥ ೩೧ ॥

ಎಲೈ ಪ್ರಭುವೇ, ಯುದ್ಧದಲ್ಲಿ ಧರ್ಮರಾಜನಿಂದ ಪ್ರಯೋಗಿಸಲ್ಪಟ್ಟ ಎಲ್ಲರನ್ನೂ ಭಯಗೊಳಿಸಿದ ಆ ಶಕ್ತಿಯನ್ನು ನೋಡಿ ಎಲ್ಲ ಸೈನ್ಯಗಳೂ ತಕ್ಷಣ ದ್ರೋಣರಿಗೆ ಕ್ಷೇಮವಾಗಲಿ ಎಂದು ಹೇಳಿದವು.

ಸಾ ರಾಜಭುಜನಿರ್ಮುಕ್ತಾ ನಿರ್ಮುಕ್ತೋರಗಸನ್ನಿಭಾ ।
ಪ್ರಜ್ವಾಲಯಂತೀ ಗಗನಂ ದಿಶಶ್ಚ ವಿದಿಶಸ್ತಥಾ ॥ ೩೨ ॥

ದ್ರೋಣಾಂತಿಕಮನುಪ್ರಾಪ್ತಾ ದೀಪ್ತಾಸ್ಯಾ ಪನ್ನಗೀ ಯಥಾ ॥ ೩೩ ॥

ರಾಜನಾದ ಯುಧಿಷ್ಠಿರನಿಂದ ಪ್ರಯೋಗಿಸಲ್ಪಟ್ಟ ಪೊರೆಯನ್ನು ಬಿಚ್ಚಿದ ಹಾವಿನಂತೆ ಶೋಭಿಸುವ ಆ ಶಕ್ತಿಯು ಆಕಾಶವನ್ನೂ, ದಿಕ್ಕು-ವಿದಿಕ್ಕುಗಳನ್ನೂ ಪ್ರಕಾಶಿಸುತ್ತಾ, ಜ್ವಲಿಸುವ ಮುಖವುಳ್ಳ ಹೆಣ್ಣುಸರ್ಪದಂತೆ ದ್ರೋಣರ ಬಳಿಗೆ ಬಂದಿತು.

ತಾಮಾಪತಂತೀಂ ಸಹಸಾ ಪ್ರೇಕ್ಷ್ಯ ದ್ರೋಣೋ ವಿಶಾಂಪತೇ ।
ಪ್ರಾದುಶ್ಚಕ್ರೇ ತತೋ ಬ್ರಾಹ್ಮಮಸ್ತ್ರಮಸ್ತ್ರವಿದಾಂ ವರಃ ॥ ೩೪ ॥

ಎಲೈ ರಾಜನೇ, ತನ್ನ ಬಳಿಗೆ ಕ್ಷಿಪ್ರವಾಗಿ ಬರುತ್ತಿದ್ದ ಆ ಶಕ್ತಿಯನ್ನು ನೋಡಿ ಅಸ್ತ್ರಜ್ಞಾನಿಗಳಲ್ಲಿ ಶ್ರೇಷ್ಠರಾದ ದ್ರೋಣರು ಬ್ರಹ್ಮಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದರು.

ತದಸ್ತ್ರಂ ಭಸ್ಮಸಾತ್ ಕೃತ್ವಾ ತಾಂ ಶಕ್ತಿಂ ಘೋರದರ್ಶನಾಮ್ ।
ಜಗಾಮ ಸ್ಯಂದನಂ ತೂರ್ಣಂ ಪಾಂಡವಸ್ಯ ಯಶಸ್ವಿನಃ ॥ ೩೫ ॥

ಆ ಬ್ರಹ್ಮಾಸ್ತ್ರವು ಘೋರರೂಪವನ್ನು ತಳೆದಿದ್ದ ಆ ಶಕ್ತ್ಯಾಯುಧವನ್ನು ಸುಟ್ಟು, ಶೀಘ್ರವಾಗಿ ಕೀರ್ತಿಶಾಲಿಯಾದ ಯುಧಿಷ್ಠಿರನ ರಥದ ಬಳಿಗೆ ಹೋಯಿತು.

ತತೋ ಯುಧಿಷ್ಠಿರೋ ರಾಜಾ ದ್ರೋಣಾಸ್ತ್ರಂ ತತ್ ಸಮುದ್ಯತಮ್ ।
ಅಶಾಮಯನ್ಮಹಾಪ್ರಾಜ್ಞೋ ಬ್ರಹ್ಮಾಸ್ತ್ರೇಣೈವ ಭಾರತ ॥ ೩೬ ॥

ಎಲೈ ಭಾರತನೇ, ಆಗ ರಾಜನಾದ, ಮಹಾಪ್ರಾಜ್ಞನಾದ ಯುಧಿಷ್ಠಿರನು ತನ್ನ ಬಳಿಗೆ ಬರುತ್ತಿದ್ದ ಆ ಬ್ರಹ್ಮಾಸ್ತ್ರವನ್ನು ಬ್ರಹ್ಮಾಸ್ತ್ರದಿಂದಲೇ ಶಮನಗೊಳಿಸಿದನು.

ಸ ವಿವ್ಯಾಧ ರಣೇ ದ್ರೋಣಂ ಪಂಚಭಿರ್ನತಪರ್ವಭಿಃ ।
ಕ್ಷುರಪ್ರೇಣ ಚ ತೀಕ್ಷ್ಣೇನ ಚಿಚ್ಛೇದಾಸ್ಯ ಮಹದ್ ಧನುಃ ॥ ೩೭ ॥

ಅವನು ಯುದ್ಧದಲ್ಲಿ ದ್ರೋಣರ ಮೇಲೆ ಬಾಗಿದ ತುದಿಯುಳ್ಳ ಐದು ಬಾಣಗಳನ್ನು ಪ್ರಯೋಗಿಸಿ ಹರಿತವಾದ ಕ್ಷುರಪ್ರದಿಂದ ಅವರ ದೊಡ್ಡ ಧನುಸ್ಸನ್ನು ಕತ್ತರಿಸಿದನು.

ತದಪಾಸ್ಯ ಧನುಶ್ಛಿನ್ನಂ ದ್ರೋಣಃ ಕ್ಷತ್ರಿಯಮರ್ದನಃ ।
ಗದಾಂ ಚಿಕ್ಷೇಪ ಸಹಸಾ ಧರ್ಮಪುತ್ರಾಯ ಮಾರಿಷ ॥ ೩೮ ॥

ಎಲೈ ಪೂಜ್ಯನೇ, ಕ್ಷತ್ರಿಯಮರ್ದನರಾದ ದ್ರೋಣರು ಕತ್ತರಿಸಲ್ಪಟ್ಟ ಆ ಧನುಸ್ಸನ್ನು ತ್ಯಜಿಸಿ ತಕ್ಷಣ ಧರ್ಮರಾಜನ ಮೇಲೆ ಗದೆಯನ್ನು ಎಸೆದರು.

ತಾಮಾಪತಂತೀಂ ಸಹಸಾ ಗದಾಂ ದೃಷ್ಟ್ವಾ ಯುಧಿಷ್ಠಿರಃ ।
ಗದಾಮೇವಾಗ್ರಹೀತ್ ಕ್ರುದ್ಧಃ ಚಿಕ್ಷೇಪ ಚ ಪರಂತಪಃ ॥ ೩೯ ॥

ತನ್ನ ಕಡೆಗೆ ವೇಗದಿಂದ ಸಾಗಿ ಬರುತ್ತಿದ್ದ ಗದೆಯನ್ನು ನೋಡಿ ಪರಂತಪನಾದ ಯುಧಿಷ್ಠಿರನು ಕೋಪಗೊಂಡು ತಾನೂ ಗದೆಯನ್ನೇ ತೆಗೆದುಕೊಂಡು ಎಸೆದನು.

ತೇ ಗದೇ ಸಹಸಾ ಮುಕ್ತೇ ಸಮಾಸಾದ್ಯ ಪರಸ್ಪರಮ್ ।
ಸಂಘರ್ಷಾತ್ ಪಾವಕಂ ಮುಕ್ತ್ವಾ ಸಮೇಯಾತಾಂ ಮಹೀತಲೇ ॥೪೦॥

ಬಲದಿಂದ ಪ್ರಯೋಗಿಸಲ್ಪಟ್ಟ ಆ ಗದೆಗಳು ಪರಸ್ಪರವಾಗಿ ಸಮಾಗಮವನ್ನು ಹೊಂದಿ, ಸಂಘರ್ಷದಿಂದ ಅಗ್ನಿಯನ್ನು ಉತ್ಪಾದಿಸಿ ಭೂತಳದಲ್ಲಿ ಬಿದ್ದವು.

ತತೋ ದ್ರೋಣೋ ಭೃಶಂ ಕ್ರುದ್ಧೋ ಧರ್ಮರಾಜಸ್ಯ ಮಾರಿಷ ।
ಚತುರ್ಭಿರ್ನಿಶಿತೈರ್ಜಘ್ನೇ ಹಯಾಂಸ್ತೀಕ್ಷ್ಣೈಃ ಶರೋತ್ತಮೈಃ ॥ ೪೧ ॥

ಎಲೈ ಪೂಜ್ಯನೇ, ಆಗ ದ್ರೋಣರು ಬಹಳ ಕೋಪಗೊಂಡು ತೀಕ್ಷ್ಣವಾದ ತಮ್ಮ ಶ್ರೇಷ್ಠವಾದ ನಾಲ್ಕು ಬಾಣಗಳಿಂದ ಧರ್ಮರಾಜನ ರಥದ ನಾಲ್ಕು ಅಶ್ವಗಳನ್ನು ಸಂಹರಿಸಿದರು.

ಧನುಶ್ಚೈಕೇನ ಬಾಣೇನ ಚಿಚ್ಛೇದೇಂದ್ರಧ್ವಜೋಪಮಮ್ ।
ಕೇತುಮೇಕೇನ ಚಿಚ್ಛೇದ ಪಾಂಡವಂ ಚಾರ್ದಯತ್ ತ್ರಿಭಿಃ ॥ ೪೨ ॥

ಇಂದ್ರಧ್ವಜದಂತಿದ್ದ ಅವನ ಧನುಸ್ಸನ್ನು ಒಂದು ಬಾಣದಿಂದ ಕತ್ತರಿಸಿದರು. ಯುಧಿಷ್ಠಿರನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿ ಅವನನ್ನು ಪೀಡಿಸುತ್ತಾ ಅವನ ರಥದ ಧ್ವಜವನ್ನು ಒಂದು ಬಾಣದಿಂದ ಕತ್ತರಿಸಿದರು.

ಹತಾಶ್ವಾತ್ ತದ್ರಥಾತ್ ತೂರ್ಣಮವಪ್ಲುತ್ಯ ಯುಧಿಷ್ಠಿರಃ ।
ತಸ್ಥಾವೂರ್ಧ್ವಭುಜೋ ರಾಜಾ ವ್ಯಾಯುಧೋ ಭರತರ್ಷಭ ॥ ೪೩ ॥

ಎಲೈ ಭರತಶ್ರೇಷ್ಠನೇ, ರಾಜನಾದ ಯುಧಿಷ್ಠಿರನು ಅಶ್ವಗಳು ಮೃತವಾದ ತನ್ನ ರಥದಿಂದ ಶೀಘ್ರವಾಗಿ ಕೆಳಗೆ ಹಾರಿ, ಆಯುಧವನ್ನೂ ಕಳೆದುಕೊಂಡು ಭುಜಗಳನ್ನು ಮೇಲಕ್ಕೆತ್ತಿ ನಿಂತನು.

ವಿರಥಂ ತಂ ಸಮಾಲೋಕ್ಯ ವ್ಯಾಯುಧಂ ಚ ವಿಶೇಷತಃ ।
ದ್ರೋಣೋ ವ್ಯಮೋಹಯಚ್ಛತ್ರೂನ್ ಸರ್ವಸೈನ್ಯಾನಿ ಚಾಭಿಭೋ ॥೪೪॥

ಎಲೈ ಶತ್ರುಸೂದನನೇ, ಯುಧಿಷ್ಠಿರನು ರಥಹೀನನಾಗಿಯೂ ಮತ್ತು ವಿಶೇಷವಾಗಿ ಆಯುಧಹೀನನಾಗಿಯೂ ಇರುವುದನ್ನು ನೋಡಿ ದ್ರೋಣರು ಶತ್ರುಗಳ ಎಲ್ಲಸೈನ್ಯವನ್ನೂ ವಿಮೋಹಗೊಳಿಸಿದರು.

ಮುಂಚನ್ನಿಷುಗಣಾಂಸ್ತೀಕ್ಷ್ಣಾನ್ ಲಘುಹಸ್ತೋ ದೃಢವ್ರತಃ ।
ಅಭಿದುದ್ರಾವ ರಾಜಾನಂ ಸಿಂಹೋ ದ್ವಿಪಮಿವೋನ್ಮದಮ್ ॥ ೪೫ ॥

ದೃಢವ್ರತರೂ, ಕ್ಷಿಪ್ರಹಸ್ತರೂ ಆದ ಅವರು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ, ಸಿಂಹವು ಮದಗಜದೆಡೆಗೆ ಸಾಗಿದಂತೆ ರಾಜನ ಕಡೆಗೆ ಧಾವಿಸಿದರು.

ತಮಭಿದುತಮಾಲೋಕ್ಯ ದ್ರೋಣೇನಾಮಿತ ಪ್ರಾತಿನಾ ।

ತೊಂಬತ್ನಾಲ್ಕನೆಯ ಅಧ್ಯಾಯ

ಸಂಕುಲ ಯುದ್ಧ. ಬೃಹತ್ಕ್ಷತ್ರನಿಂದ ಕ್ಷೇಮಧೂರ್ತಿಯ ವಧೆ.
ದ್ರೌಪದಿಯ ಪುತ್ರರಿಂದ ಶಲನ ವಧೆ ಮತ್ತು
ಭೀಮಸೇನನಿಂದ ಅಲಂಬುಸನ ಪರಾಜಯ.

ಸಂಜಯಃ

ಬೃಹತ್ಕ್ಷತ್ರಮಥಾಯಾಂತಂ ಕೇಕಯಂ ದೃಢವಿಕ್ರಮಮ್ ।
ಕ್ಷೇಮಧೂರ್ತಿರ್ಮಹಾರಾಜ ವಿವ್ಯಾಧೋರಸಿ ಮಾರ್ಗಣೈಃ ॥ ೧ ॥

ಸಂಜಯ– ಎಲೈ ಮಹಾರಾಜನೇ, ದೃಢಪರಾಕ್ರಮವುಳ್ಳ ತನ್ನೆಡೆಗೆ ಸಾಗಿ ಬರುತ್ತಿರುವ ಕೇಕಯನಾದ ಬೃಹತ್ಕ್ಷತ್ರನನ್ನು ಕ್ಷೇಮಧೂರ್ತಿಯು ಬಾಣಗಳಿಂದ ಅವನ ಎದೆಯಲ್ಲಿ ಹೊಡೆದನು.

ಬೃಹತ್ಕ್ಷತ್ರಸ್ತು ತಂ ರಾಜಾ ನವತ್ಯಾ ನತಪರ್ವಭಿಃ ।
ಆಜಘ್ನೇ ತ್ವರಿತೋ ಯುದ್ಧೇ ದ್ರೋಣಾನೀಕಭಿತ್ಸಯಾ ॥ ೨ ॥

ಬೃಹತ್ಕ್ಷತ್ರನಾದರೋ ದ್ರೋಣ ಸೈನ್ಯವನ್ನು ಭೇದಿಸಲು ಬಯಸಿ ಬಾಗಿದ ತುದಿಯುಳ್ಳ ತೊಂಬತ್ತು ಬಾಣಗಳಿಂದ ಶೀಘ್ರವಾಗಿ ಅವನನ್ನು ಹೊಡೆದನು.

ಕ್ಷೇಮಧೂರ್ತಿಸ್ತು ಸಂಕ್ರುದ್ಧಃ ಕೇಕಯಸ್ಯ ಮಹಾತ್ಮನಃ ।
ಧನುಶ್ಚಿಚ್ಛೇದ ಭಲ್ಲೇನ ಪೀತೇನ ನಿಶಿತೇನ ಚ ॥ ೩ ॥

ಕ್ಷೇಮಧೂರ್ತಿಯೂ ಸಹ ಬಹಳ ಕೋಪಗೊಂಡು ನೀರನ್ನು ಕುಡಿಸಿ ಹದಮಾಡಿದ ಹರಿತವಾದ ಭಲ್ಲದಿಂದ ಮಹಾತ್ಮನಾದ ಕೇಕಯನ ಧನುಸ್ಸನ್ನು ಕತ್ತರಿಸಿದನು.

ಅಥೈನಂ ಛಿನ್ನಧನ್ವಾನಂ ಶಿತೇನ ನತಪರ್ವಣಾ ।
ವಿವ್ಯಾಧ ಹೃದಯೇ ತೂರ್ಣಂ ಪ್ರವರಂ ಸರ್ವಧನ್ವಿನಾಮ್ ॥ ೪ ॥

ಆನಂತರ ಧನುಸ್ಸು ಕತ್ತರಿಸಲ್ಪಟ್ಟ ಶ್ರೇಷ್ಠ ಧನುರ್ಧಾರಿಯಾದ ಅವನ ಮೇಲೆ ಬಾಗಿದ ತುದಿಯುಳ್ಳ ಹರಿತವಾದ ಬಾಣವನ್ನು ಅವನ ವಕ್ಷಸ್ಥಲದಲ್ಲಿ ಪ್ರಯೋಗಿಸಿದನು.

ಅಥಾನ್ಯದ್ ಧನುರಾದಾಯ ಬೃಹತ್ಕ್ಷತ್ರೋ ಹಸನ್ನಿವ ।
ವ್ಯಶ್ವಸೂತಧ್ವಜಂ ಚಕ್ರೇ ಕ್ಷೇಮಧೂರ್ತಿಂ ಮಹಾರಥಮ್ ॥ ೫ ॥

ಬೃಹತ್ಕ್ಷತ್ರನು ನಗುವವನಂತೆ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಮಹಾರಥನಾದ ಕ್ಷೇಮಧೂರ್ತಿಯನ್ನು ಅಶ್ವ-ಧ್ವಜ-ಸೂತರಹಿತನನ್ನಾಗಿ ಮಾಡಿದನು.

ತತೋऽಪರೇಣ ಭಲ್ಲೇನ ಪೀತೇನ ನಿಶಿತೇನ ಚ ।
ಜಹಾರ ನೃಪತೇಃ ಕಾಯಾತ್ ಶಿರೋ ಜ್ವಲಿತಕುಂಡಲಮ್ ॥ ೬ ॥

ಅನಂತರ ನೀರನ್ನು ಕುಡಿಸಿ ಹದಮಾಡಿದ ಇನ್ನೊಂದು ಭಲ್ಲದಿಂದ ಕುಂಡಲಗಳಿಂದ ಶೋಭಿಸುತ್ತಿದ್ದ ಕ್ಷೇಮಧೂರ್ತಿ ರಾಜನ ಶಿರಸ್ಸನ್ನು ಅವನ ದೇಹದಿಂದ ಕತ್ತರಿಸಿದನು.

ತಚ್ಛಿನ್ನಂ ಸಹಸಾ ತಸ್ಯ ಶಿರಃ ಕುಂಚಿತಮೂರ್ಧಜಮ್ ।
ಸಕಿರೀಟಂ ಮಹೀಂ ಪ್ರಾಪ್ಯ ಬಭೌ ಜ್ಯೋತಿರಿವಾಂಬರಾತ್ ॥ ೭ ॥

ಗುಂಗುರು ಕೂದಲುಗಳನ್ನುಹೊಂದಿದ್ದ, ಕಿರೀಟವನ್ನು ಧರಿಸಿದ್ದಕ್ಷೇಮಧೂರ್ತಿಯ ಶಿರಸ್ಸು ಕತ್ತರಿಸಲ್ಪಟ್ಟು ಶೀಘ್ರವಾಗಿ ಭೂಮಿಯ ಮೇಲೆ ಬಿದ್ದು ಆಕಾಶದಿಂದ ಬಿದ್ದ ಜ್ಯೋತಿಯಂತೆ ಶೋಭಿಸಿತು.

ತಂ ನಿಹತ್ಯ ರಣೇ ಹೃಷ್ಟೋ ಬೃಹತ್ಕ್ಷತ್ರೋ ಮಹಾರಥಃ ।
ಸಹಸಾऽಭ್ಯದ್ರವತ್ ಸೈನ್ಯಂ ತಾವಕಂ ದ್ರೋಣಕಾರಣಾತ್ ॥ ೮ ॥

ಮಹಾರಥನಾದ ಬೃಹತ್ಕ್ಷತ್ರನು ಯುದ್ಧದಲ್ಲಿ ಅವನನ್ನು ಕೊಂದು ಸಂತೋಷಗೊಂಡವನಾಗಿ ತಕ್ಷಣ ದ್ರೋಣರನ್ನು ಉದ್ದೇಶಿಸಿ ನಿನ್ನ ಸೈನ್ಯದ ಕಡೆಗೆ ಧಾವಿಸಿದನು.

ದೃಷ್ಟಕೇತುಮಥಾऽऽಯಾಂತಂ ದ್ರೋಣಹೇತೋಃ ಪರಾಕ್ರಮೀ ।
ವೀರಧನ್ವಾ ಮಹೇಷ್ವಾಸೋ ವಾರಯಾಮಾಸ ಭಾರತ ॥ ೯ ॥

ಎಲೈ ಭಾರತನೇ, ದ್ರೋಣರನ್ನು ಉದ್ದೇಶಿಸಿ ಶೀಘ್ರವಾಗಿ ಬರುತ್ತಿದ್ದ ದೃಷ್ಟಕೇತುವನ್ನು (ಬೃಹತ್ಕ್ಷತ್ರನನ್ನು) ಪರಾಕ್ರಮಶಾಲಿಯೂ, ಮಹಾರಥನೂ ಆದ ವೀರಧನ್ವನು ತಡೆದನು.

ತೌ ಪರಸ್ಪರಮಾಸಾದ್ಯ ಶರದಂಷ್ಟ್ರೌ ತರಸ್ವಿನೌ ।
ಶರೈರನೇಕಸಾಹಸ್ರೈರನ್ಯೋನ್ಯಮಭಿಜಘ್ನತುಃ ॥ ೧೦ ॥

ಬಾಣವೆಂಬ ದಂಷ್ಟ್ರಗಳುಳ್ಳ, ನರಶಾರ್ದೂಲರಾದ ಅವರು ಪರಸ್ಪರವಾಗಿ ಸಂಧಿಸಿ, ದೊಡ್ಡ ಕಾಡಿನಲ್ಲಿ ಎರಡು ಸಲಗಗಳಂತೆ ತೀವ್ರಮದದಿಂದ ಕೂಡಿದವರಾಗಿ ಯುದ್ಧವನ್ನು ಮಾಡಿದರು.

ತಾವುಭೌ ನರಶಾರ್ದೂಲೌ ಯುಯುಧಾತೇ ಪರಸ್ಪರಮ್ ।
ಮಹಾವನೇ ತೀವ್ರಮದೌ ವಾರಣಾವಿವ ಯೂಥಪೌ ॥ ೧೧ ॥

ಗಿರಿಗಹ್ವರಮಾಸಾದ್ಯ ಶಾರ್ದೂಲಾವಿವ ರೋಷಿತೌ ।
ತಾವುಭೌ ನರಶಾರ್ದೂಲೌ ಪೀಡಯಂತೌ ಪರಸ್ಪರಮ್ ॥ ೧೨ ॥

ಪರ್ವತದ ಗುಹೆಯಲ್ಲಿ ಕೋಪಗೊಂಡ ಎರಡು ವ್ಯಾಘ್ರಗಳಂತೆ, ಎರಡು ಸಲಗಗಳಂತೆ ನರಶಾರ್ದೂಲರಾದ ಅವರಿಬ್ಬರು ಪರಸ್ಪರವಾಗಿ ಪೀಡಿಸುತ್ತಾ ಯುದ್ಧವನ್ನು ಮಾಡಿದರು.

ತದ್ ಯುದ್ಧಮಾಸೀತ್ ತುಮುಲಂ ಪ್ರೇಕ್ಷಣೀಯಂ ವಿಶಾಂಪತೇ ।
ಸಿದ್ಧಚಾರಣಸಂಘಾನಾಂ ವಿಸ್ಮಯಾದ್ಭುತದರ್ಶನಮ್ ॥ ೧೩ ॥

ಎಲೈ ರಾಜನೇ, ಆ ತೀವ್ರವಾದ ಯುದ್ಧವು ಮನೋಹರವಾಗಿದ್ದಿತು. ಸಿದ್ಧ-ಚಾರಣ ಸಮೂಹಗಳಿಗೂ ವಿಸ್ಮಯವನ್ನುಂಟು ಮಾಡುವಂತೆ ಅದ್ಭುತವಾಗಿ ತೋರುತ್ತಿದ್ದಿತು.

ವೀರಧನ್ವಾ ತತಃ ಕ್ರುದ್ಧೋ ಧೃಷ್ಟಕೇತೋಃ ಶರಾಸನಮ್ ।
ದ್ವಿಧಾ ಚಿಚ್ಛೇದ ಭಲ್ಲೇನ ಪ್ರಹಸನ್ನಿವ ಭಾರತ ॥ ೧೪ ॥

ಎಲೈ ಭಾರತನೇ, ಆಗ ವೀರಧನ್ವನು ನಗುತ್ತಲೇ ಬಹಳ ಕೋಪಗೊಂಡು ಧೃಷ್ಟಕೇತುವಿನ ಧನುಸ್ಸನ್ನು ಭಲ್ಲದಿಂದ ಎರಡು ಭಾಗವಾಗಿ ಕತ್ತರಿಸಿದನು.

ತದುತ್ಸೃಜ್ಯ ಧನುಶ್ಚಿನ್ನಂ ಚೈದ್ಯೋ ರಾಜಾ ಮಹಾಯಶಾಃ ।
ಶಕ್ತಿಂ ಜಗ್ರಾಹ ವಿಪುಲಾಂ ರುಗ್ಮದಂಡಾಮಯಸ್ಮಯೀಮ್ ॥ ೧೫ ॥

ಮಹಾಕೀರ್ತಿವಂತನಾದ ಚೈದ್ಯರಾಜನಾದ ಧೃಷ್ಟಕೇತುವು ಛಿನ್ನವಾದ ಧನುಸ್ಸನ್ನು ತ್ಯಜಿಸಿ, ಸುವರ್ಣದಂಡವನ್ನು ಹೊಂದಿದ್ದ, ಕಬ್ಬಿಣದಿಂದ ಮಾಡಿದ ಒಂದು ಶಕ್ತ್ಯಾಯುಧವನ್ನು ತೆಗೆದುಕೊಂಡನು.

ತಾಂ ತು ಶಕ್ತಿಂ ಮಹಾವೀರ್ಯಾಂ ಮಹತೀಮಥ ಭಾರತ ।
ಚಿಕ್ಷೇಪ ಸಹಸಾ ಯತ್ತೋ ವೀರಧನ್ವರಥಂ ಪ್ರತಿ ॥ ೧೬ ॥

ಎಲೈ ಭಾರತನೇ, ಮಹಾಬಲವುಳ್ಳ ಆ ದೊಡ್ಡ ಶಕ್ತ್ಯಾಯುಧವನ್ನು ಅವನು ಎಚ್ಚರಿಕೆಯಿಂದ ವೀರಧನ್ವನ ರಥದ ಮೇಲೆ ಶೀಘ್ರವಾಗಿ ಎಸೆದನು.

ಸ ತಯಾ ವೀರಘಾತಿನ್ಯಾ ಶಕ್ತ್ಯಾ ತ್ವಭಿಹತೋ ಭೃಶಮ್ ।
ನಿರ್ಭಿನ್ನಹೃದಯಸ್ತೂರ್ಣಂ ನಿಪಪಾತ ರಥಾನ್ಮಹೀಮ್ ॥ ೧೭ ॥

ವೀರಧನ್ವನಾದರೋ ವೀರಘಾತಿಯಾದ ಆ ಶಕ್ತಿಯಿಂದ ಗಾಢವಾಗಿ ಹೊಡೆಯಲ್ಪಟ್ಟುಹೃದಯವು ಒಡೆದು ರಥದಿಂದ ಭೂಮಿಯ ಮೇಲೆ ಬಿದ್ದನು.

ತಸ್ಮಿನ್ ವಿನಿಹತೇ ವೀರೇ ತ್ರಿಗರ್ತಾನಾಂ ಮಹಾರಥೇ ।
ಬಲಂ ತೇಽಭಜ್ಯತ ವಿಭೋ ಪಾಂಡವೇಯೈಃ ಸಮಂತತಃ ॥ ೧೮ ॥

ಎಲೈ ವಿಭುವೇ, ತ್ರಿಗರ್ತರ ಮಹಾರಥನಾದ ವೀರನಾದ ವೀರಧನ್ವನು ಮರಣ ಹೊಂದುತ್ತಿರಲು, ಪಾಂಡವ ಯೋಧರು ನಿನ್ನ ಸೈನ್ಯವನ್ನು ಎಲ್ಲ ಕಡೆಗಳಿಂದಲೂ ಭಗ್ನಗೊಳಿಸಿದರು.

ಸಹದೇವೇ ತತಃ ಷಷ್ಟಿಂ ಸಾಯಕಾನ್ ದುರ್ಮುಖೋಽಕ್ಷಿಪತ್ ।
ನನಾದ ಚ ಮಹಾನಾದಂ ತರ್ಜಯನ್ ಪಾಂಡವಂ ರಣೇ ॥ ೧೯ ॥

ದುರ್ಮುಖನು ಸಹದೇವನ ಮೇಲೆ ಅರವತ್ತು ಬಾಣಗಳನ್ನು ಪ್ರಯೋಗಿಸಿ ಯುದ್ಧದಲ್ಲಿ ಅವನನ್ನು ಹೆದರಿಸುತ್ತಾ ದೊಡ್ಡ ಸಿಂಹನಾದವನ್ನು ಮಾಡಿದನು.

ಮಾದ್ರೇಯಸ್ತು ತತಃ ಕ್ರುದ್ಧೋ ದುರ್ಮುಖಂ ದಶಭಿಃ ಶರೈಃ ।
ಭ್ರಾತಾ ಭ್ರಾತರಮಾಯತ್ತೋ ವಿವ್ಯಾಧ ಪ್ರಹಸನ್ನಿವ ॥ ೨೦ ॥

ಮಾದ್ರೀಪುತ್ರನಾದ ಸಹದೇವನು ನಗುತ್ತಲೇ ಕೋಪಗೊಂಡು ತನ್ನ ಸಹೋದರನಾದ ದುರ್ಮುಖನನ್ನು ಹತ್ತು ಬಾಣಗಳಿಂದ ಹೊಡೆದನು.

ತಂ ರಣೇ ರಭಸಂ ದೃಷ್ಟ್ವಾ ಸಹದೇವಂ ಮಹಾಬಲಮ್ ।
ದುರ್ಮುಖೋ ನವಭಿರ್ಬಾಣೈಃ ತಾಡಯಾಮಾಸ ಭಾರತ ॥ ೨೧ ॥

ಎಲೈ ಭಾರತನೇ, ಮಹಾಬಲನಾದ ಸಹದೇವನು ಯುದ್ಧದಲ್ಲಿ ವೇಗಶಾಲಿಯಾಗಿರುವುದನ್ನು ನೋಡಿ ದುರ್ಮುಖನು ಅವನ ಮೇಲೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ದುರ್ಮುಖಸ್ಯ ತು ಭಲ್ಲೇನ ಚ್ಛಿತ್ತ್ವಾ ಕೇತುಂ ಮಹಾಬಲಃ ।
ಜಘಾನ ಚತುರೋ ವಾಹಾಂಶ್ಚತುರ್ಭಿರ್ನಿಶಿತೈಃ ಶರೈಃ ॥ ೨೨ ॥

ಮಹಾಬಲನಾದ ಸಹದೇವನು ಒಂದು ಭಲ್ಲದಿಂದ ದುರ್ಮುಖನ ಧ್ವಜವನ್ನು ಕತ್ತರಿಸಿ, ನಾಲ್ಕು ಹರಿತವಾದ ಬಾಣಗಳಿಂದ ಅವನ ರಥದ ನಾಲ್ಕು ಕುದುರೆಗಳನ್ನು ಕೊಂದನು.

ಅಥಾಪರೇಣ ಭಲ್ಲೇನ ಪೀತೇನ ನಿಶಿತೇನ ಚ ।
ಚಚ್ಛೇದ ಸಾರಥೇಃ ಕಾಯಾತ್ ಶಿರೋ ಜ್ವಲಿತಕುಂಡಲಮ್ ॥ ೨೩ ॥

ಅನಂತರ ನೀರನ್ನು ಕುಡಿಸಿ ನಿಶಿತವನ್ನಾಗಿ ಮಾಡಿದ ಇನ್ನೊಂದು ಭಲ್ಲದಿಂದ ಕುಂಡಲಗಳಿಂದ ಶೋಭಿತವಾದ ಅವನ ಸಾರಥಿಯ ಶಿರಸ್ಸನ್ನು ದೇಹದಿಂದ ಕತ್ತರಿಸಿದನು.

ಕ್ಷುರಪ್ರೇಣ ಚ ತೀಕ್ಷ್ಣೇನ ಕೌರವ್ಯಸ್ಯ ಮಹದ್ ಧನುಃ ।
ಸಹದೇವೋ ರಣೇ ಭಿತ್ತ್ವಾ ತಂ ಚ ವಿವ್ಯಾಧ ಪಂಚಭಿಃ ॥ ೨೪ ॥

ಹರಿತವಾದ ಕ್ಷುರಪ್ರದಿಂದ ಕೌರವನಾದ ದುರ್ಮುಖನ ದೊಡ್ಡ ಧನುಸ್ಸನ್ನು ಕತ್ತರಿಸಿ ಸಹದೇವನು ಯುದ್ಧದಲ್ಲಿ ಅವನನ್ನು ಪುನಃ ಐದು ಬಾಣಗಳಿಂದ ಹೊಡೆದನು.

ಹತಾಶ್ವಂ ತು ರಥಂ ತ್ಯಕ್ತ್ವಾ ದುರ್ಮುಖೋ ವಿಮನಾಸ್ತದಾ ।
ಆರುರೋಹ ರಥಂ ರಾಜನ್ ನಿರಮಿತ್ರಸ್ಯ ಭಾರತ ॥ ೨೫ ॥

ಎಲೈ ಭಾರತನೇ, ದುರ್ಮುಖನು ಬೇಸರಗೊಂಡು ಅಶ್ವಗಳು ಮೃತವಾದ ತನ್ನ ರಥವನ್ನು ತ್ಯಜಿಸಿ ನಿರಮಿತ್ರನ ರಥವನ್ನು ಏರಿದನು.

ಸಹದೇವಸ್ತು ಸಂಕ್ರುದ್ಧೋ ನಿರಮಿತ್ರಂ ಮಹಾಹವೇ ।
ಜಘಾನ ಪೃತನಾಮಧ್ಯೇ ಭಲ್ಲೇನ ಪರವೀರಹಾ ॥ ೨೬ ॥

ಪರವೀರಘಾತಕನಾದ ಸಹದೇವನಾದರೋ ಮಹಾಯುದ್ಧದಲ್ಲಿ ಕೋಪಗೊಂಡವನಾಗಿ ಸೈನ್ಯದ ಮಧ್ಯದಲ್ಲಿ ಭಲ್ಲದಿಂದ ನಿರಮಿತ್ರನನ್ನು ಕೊಂದನು.

ಸ ಪಪಾತ ರಥೋಪಸ್ಥಾನ್ನಿರಮಿತ್ರೋ ಜನೇಶ್ವರಃ ।
ತ್ರಿಗರ್ತರಾಜಸ್ಯ ಸುತೋ ವ್ಯಥಯಂಸ್ತವ ವಾಹಿನೀಮ್ ॥ ೨೭ ॥

ತ್ರಿಗರ್ತರಾಜನ ಪುತ್ರನಾದ ಸ್ವತಃ ರಾಜನಾದ ನಿರಮಿತ್ರನು ನಿನ್ನ ಸೈನ್ಯವನ್ನು ವ್ಯಥೆಗೊಳಿಸುತ್ತಾ ರಥದ ಮಧ್ಯದಿಂದ ಬಿದ್ದನು.

ಹತ್ವಾ ತಂ ತು ಮಹಾಬಾಹುಃ ಸಹದೇವೋ ವ್ಯರೋಚತ ।
ಯಥಾ ದಾಶರಥೀ ರಾಮಃ ಖರಂ ಹತ್ವಾ ಮಹಾಬಲಮ್ ॥ ೨೮ ॥

ಮಹಾಬಾಹುವಾದ ಸಹದೇವನು ಅವನನ್ನು ಕೊಂದು ಮಹಾಬಲನಾದ ಖರನನ್ನು ಕೊಂದ ದಶರಥ ಪುತ್ರನಾದ ರಾಮನಂತೆ ಶೋಭಿಸಿದನು.

ಹಾಹಾಕಾರೋ ಮಹಾನಾಸೀತ್ ತ್ರಿಗರ್ತಾನಾಂ ಜನೇಶ್ವರ ।
ರಾಜಪುತ್ರಂ ಹತಂ ದೃಷ್ಟ್ವಾ ನಿರಮಿತ್ರಂ ಮಹಾಬಲಮ್ ॥ ೨೯ ॥

ಎಲೈ ರಾಜನೇ, ಮಹಾಬಲನಾದ ರಾಜಕುಮಾರನಾದ ನಿರಮಿತ್ರನು ಹತನಾದುದನ್ನು ನೋಡಿ ತ್ರಿಗರ್ತರ ಸೈನ್ಯದಲ್ಲಿ ದೊಡ್ಡ ಹಾಹಾಕಾರ ಉಂಟಾಯಿತು.

ನಕುಲಸ್ತೇ ಸುತಂ ವೀರೋ ವಿಕರ್ಣಂ ಪೃಥುಲೋಚನಮ್ ।
ಮುಹೂರ್ತಾಜ್ಜಿತವಾನ್ ಸಂಖೇ ತದದ್ಭುತಮಿವಾಭವತ್ ॥ ೩೦ ॥

ವೀರನಾದ ನಕುಲನು ನಿನ್ನ ಪುತ್ರನಾದ, ವಿಸ್ತಾರನೇತ್ರವುಳ್ಳ ವಿಕರ್ಣನನ್ನು ಯುದ್ಧದಲ್ಲಿ ಒಂದು ಮುಹೂರ್ತದಲ್ಲಿ ಜಯಿಸಿದನು. ಅದು ಅದ್ಭುತವಾಗಿದ್ದಿತು.

ಸಾತ್ಯಕಿಂ ವ್ಯಾಘ್ರದತ್ತಸ್ತು ಶರೈಃ ಸನ್ನತಪರ್ವಭಿಃ ।
ಚಕ್ರೇಽದೃಶ್ಯಂ ಸಾಶ್ವಸೂತಂ ಸಧ್ವಜಂ ಪೃತನಾಂತರೇ ॥ ೩೧ ॥

ಇನ್ನೊಂದು ಸೈನ್ಯದಲ್ಲಿ ವ್ಯಾಘ್ರದತ್ತನು ಬಾಗಿದ ತುದಿಯುಳ್ಳ ಬಾಣಗಳಿಂದ ಅಶ್ವ-ಸೂತ-ಧ್ವಜ ಸಹಿತನಾದ ಸಾತ್ಯಕಿಯನ್ನು ಅದೃಶ್ಯನನ್ನಾಗಿ ಮಾಡಿದನು.

ತಾನ್ ನಿವಾರ್ಯ ಶರಾನ್ ಶೂರಃ ಶೈನೇಯಃ ಕೃತಹಸ್ತವತ್ ।
ಸಾಶ್ವಸೂತಧ್ವಜಂ ಬಾಣೈರ್ವ್ಯಾಘ್ರದತ್ತಮಪಾತಯತ್ ॥ ೩೨ ॥

ಶೂರನೂ, ಪಳಗಿದ ಹಸ್ತವುಳ್ಳವನೂ ಆದ ಸಾತ್ಯಕಿಯು ಅವನ ಬಾಣಗಳನ್ನು ನಿವಾರಿಸಿ ತನ್ನ ಬಾಣಗಳಿಂದ ಅಶ್ವ-ಸೂತ-ಧ್ವಜ ಸಹಿತನಾದ ವ್ಯಾಘ್ರದತ್ತನನ್ನು ರಥದಿಂದ ಬೀಳಿಸಿದನು.

ಕುಮಾರೇ ನಿಹತೇ ತಸ್ಮಿನ್ ಮಾಗಧಸ್ಯ ಸುತೇ ಪ್ರಭೋ ।
ಮಾಗಧಾಃ ಸರ್ವತೋ ಯತ್ತಾ ಯುಯುಧಾನಮಯೋಧಯನ್ ॥

ಎಲೈ ಪ್ರಭುವೇ, ಮಗಧದೇಶದ ರಾಜಕುಮಾರನಾದ ವ್ಯಾಘ್ರದತ್ತನು ಬೀಳಿಸಲ್ಪಡುತ್ತಿರಲು ಮಾಗಧಯೋಧರೆಲ್ಲರೂ ಪ್ರಯತ್ನಪೂರ್ವಕವಾಗಿ ಎಲ್ಲ ಕಡೆಯಿಂದಲೂ ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ವಿಸೃಜಂತಃ ಶರಾಂಶ್ಚೈವ ತೋಮರಾಂಶ್ಚ ಸಹಸ್ರಶಃ ।
ಭಿಂಡಿಪಾಲಾಂಸ್ತಥಾ ಪ್ರಾಸಾನ್ ಮುಸಲಾನ್ ಮುದ್ಗರಾನಪಿ ।
ಅಯೋಧಯನ್ ರಣೇ ವೀರಾಃ ಸಾತ್ವತಂ ಯುದ್ಧದುರ್ಮದಮ್ ॥

ವೀರರಾದ ಅವರು ರಣರಂಗದಲ್ಲಿ ಸಹಸ್ರ ಸಂಖ್ಯೆಯಲ್ಲಿ ಬಾಣಗಳನ್ನೂ, ತೋಮರಗಳನ್ನೂ, ಭಿಂಡಿಪಾಲಗಳನ್ನೂ, ಪ್ರಾಸಗಳನ್ನೂ, ಮುಸಲಗಳನ್ನೂ, ಮುದ್ಗರಗಳನ್ನೂ ಪ್ರಯೋಗಿಸುತ್ತಾ ಯುದ್ಧದುರ್ಮದನಾದ ಸಾತ್ಯಕಿಯನ್ನು ಪೀಡಿಸಿದರು.

ತಾಂಸ್ತು ಸರ್ವಾನ್ ಸ ಬಲವಾನ್ ಸಾತ್ಯಕಿರ್ಯುದ್ಧದುರ್ಮದಃ ।
ನಾತಿಕೃಚ್ಛ್ರಾದ್ ಹಸನ್ನೇವ ವಿಜಿಗ್ಯೇ ಪುರುಷರ್ಷಭ ॥ ೩೫ ॥

ಎಲೈ ಪುರುಷಶ್ರೇಷ್ಠನೇ, ರಾಜನೇ, ಮಹಾಬಲನೂ, ಯುದ್ಧದುರ್ಮದನೂ ಆದ ಸಾತ್ಯಕಿಯು ನಗುತ್ತಲೇ ಬಹಳ ಪ್ರಯಾಸವಿಲ್ಲದೆ ಅವರೆಲ್ಲರನ್ನೂ ಸೋಲಿಸಿದನು.

ಮಾಗಧಾನ್ ದ್ರವತೋ ದೃಷ್ಟ್ವಾ ಹತಶೇಷಾನ್ ಸಮಂತತಃ ।
ಅಭಜ್ಯತ ಬಲಂ ತತ್ ತೇ ಯುಯುಧಾನಶರಾರ್ದಿತಮ್ ॥ ೩೬ ॥

ಅಳಿದುಳಿದ ಮಾಗಧರು ಎಲ್ಲ ಕಡೆಗಳಲ್ಲಿಯೂ ಓಡಿಹೋಗುವುದನ್ನು ನೋಡಿ ಸಾತ್ಯಕಿಯ ಬಾಣಗಳಿಂದ ಪೀಡಿತವಾದ ನಿನ್ನ ಸೈನ್ಯವು ಭಗ್ನವಾಯಿತು.

ನಾಶಯಿತ್ವಾ ರಣೇ ಸೈನ್ಯಂ ತ್ವದೀಯಾಂಶ್ಚ ಸಮಂತತಃ ।
ವಿಧೂನ್ವಾನೋ ಧನುಃಶ್ರೇಷ್ಠಂ ವ್ಯಭ್ರಾಜತ ಮಹಾಯಶಾಃ ॥ ೩೭ ॥

ಯಥಾ ದೈತ್ಯಚಮೂಂ ಹತ್ವಾ ಶಕ್ರೋ ರಾಜನ್ ವ್ಯರೋಚತ ॥ ೩೮ ॥

ಎಲೈ ರಾಜನೇ, ನಿನ್ನ ಸೈನ್ಯವನ್ನು ಎಲ್ಲ ಕಡೆಗಳಲ್ಲಿಯೂ ನಾಶವನ್ನು ಮಾಡಿ, ತನ್ನ ಶ್ರೇಷ್ಠವಾದ ಧನುಸ್ಸನ್ನು ತೂಗಾಡಿಸುವ ಮಹಾಕೀರ್ತಿವಂತನಾದ ಸಾತ್ಯಕಿಯು ದೈತ್ಯಸೈನ್ಯವನ್ನು ಸಂಹರಿಸಿದ ಇಂದ್ರನಂತೆ ಶೋಭಿಸಿದನು.

ಭಜ್ಯಮಾನಂ ಬಲಂ ರಾಜನ್ ಸಾತ್ವತೇನ ಮಹಾತ್ಮನಾ ।
ನಾಭ್ಯವರ್ತತ ಯುದ್ಧಾಯ ತ್ರಾಸಿತಂ ದೀರ್ಘಬಾಹುನಾ ॥ ೩೯ ॥

ಎಲೈ ರಾಜನೇ, ಮಹಾತ್ಮನಾದ ಸಾತ್ವತನಾದ ದೀರ್ಘಬಾಹುವಾದ ಸಾತ್ಯಕಿಯಿಂದ ಭಯಗೊಳಿಸಲ್ಪಟ್ಟು ಭಗ್ನವಾದ ನಿನ್ನ ಸೈನ್ಯವು ಪುನಃ ಯುದ್ಧಕ್ಕೆ ಬರಲಿಲ್ಲ.

ತತೋ ದ್ರೋಣೋ ಭೃಶಂ ಕ್ರುದ್ಧಃ ಸಹಸೋದ್ಭೃತ್ಯ ಚಕ್ಷುಷೀ ।
ಸಾತ್ಯಕಿಂ ಸತ್ಯಕರ್ಮಾಣಂ ಸ್ವಯಮೇವಾಭ್ಯದುದ್ರುವೇ ॥ ೪೦ ॥

ಆಗ ದ್ರೋಣರು ಬಹಳ ಕೋಪಗೊಂಡು ಕಣ್ಣುಗಳನ್ನು ವಿಸ್ತಾರವಾಗಿ ತೆರೆದು ಸತ್ಯಕರ್ಮನಾದ ಸಾತ್ಯಕಿಯ ಮೇಲೆ ತಾವೇ ಧಾವಿಸಿದರು.

ದ್ರೌಪದೇಯಾನ್ ಮಹೇಷ್ವಾಸಾನ್ ಸೌಮದತ್ತಿರ್ಮಹಾರಥಃ ।
ಏಕೈಕಂ ಪಂಚಭಿರ್ವಿದ್ಧ್ವಾ ಪುನರ್ವಿವ್ಯಾಧ ಸಪ್ತಭಿಃ ॥ ೪೧ ॥

ಮಹಾರಥನೂ, ಸೋಮದತ್ತನ ಪುತ್ರನೂ ಆದ ಶಲನು ಮಹಾಧನುರ್ಧಾರಿಗಳಾದ ದ್ರೌಪದಿಯ ಪುತ್ರರಲ್ಲಿ ಒಬ್ಬೊಬ್ಬರ ಮೇಲೆಯೂ ಐದು ಬಾಣಗಳನ್ನು ಪ್ರಯೋಗಿಸಿ, ಪುನಃ ಏಳು ಬಾಣಗಳನ್ನು ಪ್ರಯೋಗಿಸಿದನು.

ತೇ ಪೀಡಿತಾ ಭೃಶಂ ತೇನ ರೌದ್ರೇಣ ಸಹಸಾ ಪ್ರಭೋ ।
ಸಮ್ಮೂಢಾ ನೈವ ವಿವಿದುರ್ಮ್ಯಧೇ ಕೃತ್ಯಂ ಹಿ ಕಿಂಚನ ॥ ೪೨ ॥

ಎಲೈ ಪ್ರಭುವೇ, ಭಯಂಕರವಾದ ಅವನ ಬಾಣಗಳಿಂದ ಪೀಡಿಸಲ್ಪಟ್ಟ ಅವರು ಸಮ್ಮೂಢರಾಗಿ ಯುದ್ಧದಲ್ಲಿ ಏನು ಮಾಡಬೇಕೆಂದು ತಿಳಿಯದಾದರು.

ನಾಕುಲಶ್ಚ ಶತಾನೀಕಃ ಸೌಮದತ್ತಿಂ ನರರ್ಷಭಮ್ ।
ದ್ವಾಭ್ಯಾಂ ವಿದ್ವಾನದದ್ ಧೃಷ್ಟಃ ಶರಾಭ್ಯಾಂ ಶತ್ರುತಾಪನಃ ॥ ೪೩ ॥

ನಕುಲಪುತ್ರನಾದ, ಶತ್ರುತಾಪನನಾದ, ಧೈರ್ಯಶಾಲಿಯಾದ ಶತಾನೀಕನು ನರಶ್ರೇಷ್ಠನಾದ ಸೌಮದತ್ತಿಯನ್ನು ಎರಡು ಬಾಣಗಳಿಂದ ಹೊಡೆದು ಸಿಂಹನಾದವನ್ನು ಮಾಡಿದನು.

ತಥೇತರೇ ರಣೇ ಯತ್ತಾಃ ತ್ರಿಭಿಸ್ತ್ರಿಭಿರಜಿಹ್ಮಗೈಃ ।
ವಿವ್ಯಧುಃ ಸಮರೇ ತೂರ್ಣಂ ಸೌಮದತ್ತಿಮಮರ್ಷಣಮ್ ॥ ೪೪ ॥

ಹಾಗೆಯೇ ಉಳಿದ ದ್ರೌಪದಿಯ ಪುತ್ರರೂ ಸಹ ಪ್ರಯತ್ನಪೂರ್ವಕವಾಗಿ ನೇರವಾಗಿ ಸಾಗುವ ಮೂರು-ಮೂರು ಬಾಣಗಳಿಂದ ರೋಷಗೊಂಡ ಸೌಮದತ್ತಿಯನ್ನು ಶೀಘ್ರವಾಗಿ ಹೊಡೆದರು.

ಸ ತಾನ್ ಪ್ರತಿ ಮಹಾರಾಜ ಚಿಕ್ಷಿಪೇ ಪಂಚ ಸಾಯಕಾನ್ ।
ಏಕೈಕಂ ಹೃದಿ ಚಾಜಘ್ನೇ ಏಕೈಕೇನ ಮಹಾಯಶಾಃ ॥ ೪೫ ॥

ಎಲೈ ಮಹಾರಾಜನೇ, ಮಹಾಕೀರ್ತಿವಂತನಾದ ಅವನು ಅವರ ಮೇಲೆ ಐದು ಬಾಣಗಳನ್ನು ಪ್ರಯೋಗಿಸಿ ಒಬ್ಬೊಬ್ಬರನ್ನೂ ಹೃದಯದಲ್ಲಿ ಒಂದೊಂದು ಬಾಣಗಳಿಂದ ಹೊಡೆದನು.

ತತಸ್ತೇ ಭ್ರಾತರಃ ಪಂಚ ಶರೈರ್ವಿದ್ಧಾ ಮಹಾತ್ಮನಾ ।
ಪರಿವಾರ್ಯ ರಥೈರ್ವೀರಂ ವಿವ್ಯಧುಃ ಸಾಯಕೈಶ್ಚಮ್ ॥ ೪೬ ॥

ಆಗ ಮಹಾತ್ಮನಾದ ಭೂರಿಶ್ರವನ ಬಾಣಗಳಿಂದ ಹೊಡೆಯಲ್ಪಟ್ಟ ಐವರು ಸಹೋದರರು ತಮ್ಮ ರಥಗಳಿಂದ ಸುತ್ತುವರಿದು, ತಮ್ಮ ಬಾಣಗಳಿಂದ ವೀರನಾದ ಶಲನನ್ನು ಚೆನ್ನಾಗಿ ಪೀಡಿಸಿದರು.

ಆರ್ಜುನಿಸ್ತು ಹಯಾಂಶ್ಚಸ್ಯ ಚತುರ್ಭಿರ್ನಿಶಿತೈಃ ಶರೈಃ ।
ಪ್ರೇಷಯಾಮಾಸ ಸಂಕ್ರುದ್ಧೋ ಯಮಸ್ಯ ಸದನಂ ಪ್ರತಿ ॥ ೪೭ ॥

ಅರ್ಜುನಪುತ್ರನಾದ ಶ್ರುತಕರ್ಮನು ಕೋಪಗೊಂಡು ತನ್ನ ಹರಿತವಾದ ಬಾಣಗಳಿಂದ ಅವನ ರಥದ ನಾಲ್ಕು ಕುದುರೆಗಳನ್ನು ಯಮಲೋಕಕ್ಕೆ ಕಳುಹಿಸಿದನು.

ಭೈಮಸೇನಿರ್ಧನುಶ್ಚಿತ್ತ್ವಾ ಸೌಮದತ್ತೇರ್ಮಹಾತ್ಮನಃ ।
ನನಾದ ಬಲವನ್ನಾದಂ ವಿವ್ಯಾಧ ನಿಶಿತೈಃ ಶರೈಃ ॥ ೪೮ ॥

ಭೀಮಸೇನನ ಪುತ್ರನಾದ ಸುತಸೋಮನು ಮಹಾತ್ಮನಾದ ಸೋಮದತ್ತನ ಪುತ್ರನಾದ ಶಲನ ಧನುಸ್ಸನ್ನು ಕತ್ತರಿಸಿ, ದೊಡ್ಡ ನಾದವನ್ನು ಮಾಡಿ ಪುನಃ ಅವನನ್ನು ಹರಿತವಾದ ಬಾಣಗಳಿಂದ ಹೊಡೆದನು.

ಯೌಧಿಷ್ಠಿರೋ ಧ್ವಜಂ ಛಿತ್ತ್ವಾ ತಸ್ಯ ಭೂಮಾವಪಾತಯತ್ ।
ನಾಕುಲಶ್ಚಾಸ್ಯ ಯಂತಾರಂ ರಥನೀಡಾದಪಾತಯತ್ ॥ ೪೯ ॥

ಯುಧಿಷ್ಠಿರನ ಮಗನಾದ ಪ್ರತಿವಿಂಧ್ಯನು ಅವನ ಧ್ವಜವನ್ನು ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದನು. ನಕುಲನ ಪುತ್ರನಾದ ಶ್ರುತಸೇನನು ಅವನ ಸಾರಥಿಯನ್ನು ರಥದ ಮುಂಭಾಗದಿಂದ ಕೆಡವಿದನು.

ಸಾಹದೇವಿಸ್ತು ತಂ ಹತ್ವಾ ಭ್ರಾತೃಭಿರ್ವಿಮುಖೀಕೃತಮ್ ।
ಕ್ಷುರಪ್ರೇಣ ಶಿರೋ ರಾಜನ್ ನಿಚಕರ್ತ ಮಹಾಹವೇ ॥ ೫೦ ॥

ಎಲೈ ರಾಜನೇ, ಸಹದೇವನ ಪುತ್ರನಾದ ಶತಾನೀಕನು ತನ್ನ ಸಹೋದರರಿಂದ ಯುದ್ಧ ವಿಮುಖನನ್ನಾಗಿ ಮಾಡಲ್ಪಟ್ಟ ಶಲನನ್ನು ಒಂದು ಕ್ಷುರಪ್ರದಿಂದ ಹೊಡೆದು ಮಹಾಯುದ್ಧದಲ್ಲಿ ಅವನ ಶಿರಸ್ಸನ್ನು ಕತ್ತರಿಸಿದನು.

ತಚ್ಛಿರೋ ನೃಪತದ್ ಭೂಮೌ ತಪನೀಯವಿಭೂಷಿತಮ್ ।
ಭಾಸಯತ್ ತದ್ ರಣೋದ್ದೇಶಂ ಬಾಲಸೂರ್ಯಸಮಪ್ರಭಮ್ ॥೫೧॥

ಬಾಲಸೂರ್ಯನ ಕಾಂತಿಗೆ ಸಮವಾದ ಕಾಂತಿಯುಳ್ಳ, ಸುವರ್ಣಾಲಂಕೃತವಾದ ಅವನ ಶಿರಸ್ಸು ಆ ರಣಪ್ರದೇಶವನ್ನು ಬೆಳಗುತ್ತಾ ಭೂಮಿಯ ಮೇಲೆ ಬಿದ್ದಿತು.

ಸೌಮದತ್ತೇಃ ಶಿರೋ ದೃಷ್ಟ್ವಾ ನಿಪತತ್ ತನ್ಮಹಾತ್ಮನಃ ।
ವಿತ್ರಸ್ತಾಸ್ತಾವಕಾ ರಾಜನ್ ಪ್ರದುದ್ರುವುರನೇಕಧಾ ॥ ೫೨ ॥

ಎಲೈ ರಾಜನೇ, ಮಹಾತ್ಮನಾದ ಶಲನ ಶಿರಸ್ಸು ಭೂಮಿಯ ಮೇಲೆ ಬೀಳುವುದನ್ನು ನೋಡಿ ಹೆದರಿದ ನಿನ್ನ ಸೈನಿಕರು ಅನೇಕ ರೀತಿಗಳಲ್ಲಿ ಓಡಿ ಹೋದರು.

ಆಲಂಬುಸಸ್ತು ಸಮರೇ ಭೀಮಸೇನಂ ಮಹಾಬಲಮ್ ।
ಯೋಧಯಾಮಾಸ ಸಂಕ್ರುದ್ಧೋ ಲಕ್ಷ್ಮಣಂ ರಾವಣಿರ್ಯಥಾ ॥ ೫೩ ॥

ಆಲಂಬುಸನಾದರೋ ಬಹಳ ಕೋಪಗೊಂಡವನಾಗಿ ರಣರಂಗದಲ್ಲಿ ಲಕ್ಷ್ಮಣನ ಜೊತೆಯಲ್ಲಿ ಇಂದ್ರಜಿತುವು ಯುದ್ಧಮಾಡಿದಂತೆ ಮಹಾಬಲನಾದ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸಂಪ್ರಯುದ್ಧ್ಯೌ ರಣೇ ದೃಷ್ಟ್ವಾ ತಾವುಭೌ ನರರಾಕ್ಷಸೌ ।
ವಿಸ್ಮಯಃ ಸರ್ವಭೂತಾನಾಂ ಭಯಂ ಚಾಪೀತ್ ಸುದಾರುಣಮ್ ॥೫೪॥

ನರರಾಕ್ಷಸರಾದ ಅವರಿಬ್ಬರೂ ಘೋರವಾಗಿ ಯುದ್ಧಮಾಡುತ್ತಿರುವುದನ್ನು ನೋಡಿ ಎಲ್ಲ ಪ್ರಾಣಗಳಿಗೂ ತೀವ್ರವಾದ ಭಯವೂ ಮತ್ತು ಆಶ್ಚರ್ಯವೂ ಉಂಟಾಯಿತು.

ಆರ್ಷ್ಯಶೃಂಗಿಂ ತದಾ ಭೀಮೋ ನವಭಿರ್ನಿಶಿತೈಃ ಶರೈಃ ।
ವಿವ್ಯಾಧ ಪ್ರಹಸನ್ ರಾಜನ್ ರಾಕ್ಷಸೇಂದ್ರಮಮರ್ಷಣಮ್ ॥ ೫೫ ॥

ಎಲೈ ರಾಜನೇ, ಆಗ ಭೀಮನು ರಾಕ್ಷಸೇಂದ್ರನೂ, ಕ್ರೋಧಶೀಲನೂ ಆದ ಆಲಂಬುಸನನ್ನು ಹರಿತವಾದ ಒಂಬತ್ತು ಬಾಣಗಳಿಂದ ನಗುತ್ತಾ ಪ್ರಹಾರ ಮಾಡಿದನು.

ತದ್ರಕ್ಷಃ ಸಮರೇ ವಿದ್ಧಂ ನಾದಂ ಕೃತ್ವಾ ಭಯಾವಹಮ್ ।
ಅಭ್ಯದ್ರವತ್ ತತೋ ಭೀಮಂ ಯೇ ಚ ತಸ್ಯ ಪದಾನುಗಾಃ ॥ ೫೬ ॥

ಆ ರಾಕ್ಷಸನಾದರೋ ಭಯಂಕರವಾದ ನಾದವನ್ನು ಮಾಡಿ ಭೀಮಸೇನನ ಮೇಲೆ ಮತ್ತು ಅವನ ಅನುಯಾಯಿಗಳ ಮೇಲೆ ಧಾವಿಸಿ ಬಂದನು.

ಸ ಭೀಮಂ ಪಂಚಭಿರ್ವಿದ್ಧ್ವಾ ಶರೈಃ ಸನ್ನತಪರ್ವಭಿಃ ।
ಭೀಮಾನುಗಾನ್ ಜಘಾನಾಶು ರಥಾನ್ ತ್ರಿಂಶದರಿಂದಮಃ ।
ಪುನಶ್ಚತುಃಶತಾನ್ ಹತ್ವಾ ಭೀಮಂ ವಿವ್ಯಾಧ ಪತ್ರಿಣಾ ॥ ೫೭ ॥

ಅರಿಂದಮನಾದ ಆ ರಾಕ್ಷಸನು ಬಾಗಿದ ತುದಿಯುಳ್ಳ ಏದು ಬಾಣಗಳಿಂದ ಭೀಮಸೇನನನ್ನು ಹೊಡೆದು, ಭೀಮಸೇನನ ಅನುಯಾಯಿಗಳಾದ ಮೂವತ್ತು ರಥರನ್ನು ಶೀಘ್ರವಾಗಿ ಕೊಂದನು. ಪುನಃ ನಾಲ್ನೂರು ಯೋಧರನ್ನು ಕೊಂದು ಪತ್ರವುಳ್ಳ ಬಾಣಗಳಿಂದ ಭೀಮಸೇನನನ್ನು ಹೊಡೆದನು.

ಸೋಽತಿವಿದ್ಧಸ್ತದಾ ಭೀಮೋ ರಾಕ್ಷಸೇನ ಮಹಾಬಲಃ ।
ನಿಷಸಾದ ರಥೋಪಸ್ಥೇ ಮೂರ್ಚ್ಛಯಾಽಭಿಪರಿಪ್ಲುತಃ ॥ ೫೮ ॥

ರಾಕ್ಷಸನಿಂದ ತೀವ್ರವಾಗಿ ಹೊಡೆಯಲ್ಪಟ್ಟ ಮಹಾಬಲನಾದ ಭೀಮಸೇನನು ರಥದ ಮಧ್ಯಭಾಗದಲ್ಲಿ ಕುಳಿತು ಮೂರ್ಛೆಯನ್ನು ಹೊಂದಿದನು.

ಪ್ರತಿಲಭ್ಯ ತತಃ ಸಂಜ್ಞಾಂ ಮಾರುತಿಃ ಕ್ರೋಧಮೂರ್ಚ್ಛಿತಃ ।
ವಿಕೃಷ್ಯ ಕಾರ್ಮುಕಂ ಘೋರಂ ಭಾರಸಾಧನಮುತ್ತಮಮ್ ॥ ೫೯ ॥

ಅಲಂಬುಸಂ ಶರೈಸ್ತೀಕ್ಷ್ಣೈರರ್ದಯಾಮಾಸ ಭಾರತ ॥ ೬೦ ॥

ಎಲೈ ಭಾರತನೇ, ಅನಂತರ ಮಾರುತಿಯಾದ ಭೀಮಸೇನನು ಸಂಜ್ಞೆಯನ್ನು ಮರಳಿ ಪಡೆದು, ಕ್ರೋಧಮೂರ್ಛಿತನಾಗಿ ತನ್ನ ಭಾರಸಾಧನವೂ, ಶ್ರೇಷ್ಠವೂ ಆದ ಘೋರವಾದ ಬಿಲ್ಲನ್ನು ಎಳೆದು ಅಲಂಬುಸನನ್ನು ತೀಕ್ಷ್ಣವಾದ ಬಾಣಗಳಿಂದ ಪೀಡಿಸಿದನು.

ಸ ಏದ್ರೋ ಬಹುಭಿರ್ಬಾಣೈರ್ನೀಲಾಂಜನಚಯೋಪಮಃ ।
ಶುಶುಭೇ ಸರ್ವತೋ ರಾಜನ್ ಪ್ರಫುಲ್ಲ ಇವ ಕಿಂಶುಕಃ ॥ ೬೧ ॥

ಕಪ್ಪಾದ ಕಾಡಿಗೆಯ ರಾಶಿಯಂತಿದ್ದ ಅಲಂಬುಸನು ಭೀಮನ ಬಾಣಗಳಿಂದ ತೀವ್ರವಾಗಿ ಹೊಡೆಯಲ್ಪಟ್ಟು ಎಲೈ ರಾಜನೇ, ಎಲ್ಲ ಕಡೆಗಳಲ್ಲಿಯೂ ಗಾಯಗೊಂಡು ರಕ್ತವನ್ನು ಸುರಿಸುತ್ತಾ ಹೂವರಳಿದ ಕಿಂಶುಕ ವೃಕ್ಷದಂತೆ ಶೋಭಿಸಿದನು.

ಸ ವದ್ಯಮಾನಃ ಸಮರೇ ಭೀಮಚಾಪಚ್ಯುತೈಃ ಶರೈಃ ।
ಸ್ಮರನ್ ಭ್ರಾತೃವಧಂ ಚೈವ ಪಾಂಡವೇನ ಮಹಾತ್ಮನಾ ।
ಘೋರಂ ರೂಪಮಥೋ ಕೃತ್ವಾ ಭೀಮಸೇನಮಭಾಷತ ॥ ೬೨ ॥

ತಿಷ್ಠೇದಾನೀಂ ರಣೇ ಪಾರ್ಥ ಪಶ್ಯ ಮೇಽದ್ಯ ಪರಾಕ್ರಮಮ್ ॥ ೬೩ ॥

ಬಕೋ ನಾಮ ಸುದುರ್ಬುದ್ಧೇ ರಾಕ್ಷಸಪ್ರವರೋ ಬಲೀ ।
ಪರೋಕ್ಷಂ ಮಮ ತದ್ ವೃತ್ತಂ ಯನ್ಮೇ ಭ್ರಾತಾ ಹತಸ್ತ್ವಯಾ ॥ ೬೪ ॥

ಭೀಮನ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳಿಂದ ರಣರಂಗದಲ್ಲಿ ಹೊಡೆಯಲ್ಪಟ್ಟ ಅವನು ಮಹಾತ್ಮನಾದ ಪಾಂಡವನು ತನ್ನ ಸಹೋದರನಾದ ಬಕನನ್ನು ಸಂಹರಿಸಿದುದನ್ನು ಸ್ಮರಿಸಿ, ಭಯಂಕರವಾದ ರೂಪವನ್ನು ತಾಳಿ, ಭೀಮಸೇನನನ್ನು ಕುರಿತು ಎಲೈ ಪಾರ್ಥನೇ, ಯುದ್ಧದಲ್ಲಿ ನಿಲ್ಲುವವನಾಗು. ಈ ದಿನ ನನ್ನ ಪರಾಕ್ರಮವನ್ನು ನೋಡು. ಎಲೈ ದುರ್ಬುದ್ಧಿಯೇ, ರಾಕ್ಷಸಶ್ರೇಷ್ಠನೂ, ಬಲಿಷ್ಠನೂ ಆದ ಬಕನು ನಿನ್ನಿಂದ ವಧಿಸಲ್ಪಟ್ಟನು. ಆ ಘಟನೆಯು ನನಗೆ ಪರೋಕ್ಷವಾಗಿ (ನಾನು ಇಲ್ಲದಿದ್ದಾಗ) ನಡೆಯಿತು ಎಂದು ಹೇಳಿದನು.

ಏವಮುಕ್ತ್ವಾ ತತೋ ಭೀಮಮಂತರ್ಧಾನಂ ಗತಸ್ತದಾ ।
ಮಹತಾ ಶರವರ್ಷೇಣ ಭೃಶಂ ತಂ ಸಮವಾಕಿರತ್ ॥ ೬೫ ॥

ಭೀಮಸೇನನನ್ನು ಕುರಿತು ಹೀಗೆ ಹೇಳಿ ಅನಂತರ ಅಂತರ್ಧಾನವನ್ನು ಹೊಂದಿ ಬಾಣಗಳ ದೊಡ್ಡ ಮಳೆಯನ್ನು ಭೀಮಸೇನನ ಮೇಲೆ ಸುರಿಸಿದನು.

ಭೀಮಸ್ತು ಸಮರೇ ರಾಜನ್ನದೃಶ್ಯೇ ರಾಕ್ಷಸೇ ತದಾ ।
ಆಕಾಶಂ ಪೂರಯಾಮಾಸ ಶರೈಃ ಸನ್ನತಪರ್ವಭಿಃ ॥ ೬೬ ॥

ಅಲಂಬುಸ ರಾಕ್ಷಸನು ಅದೃಶ್ಯನಾಗುತ್ತಿರಲು ಆಗ ಭೀಮಸೇನನು ಯುದ್ಧದಲ್ಲಿ ಬಾಗಿದ ತುದಿಯುಳ್ಳ ಬಾಣಗಳಿಂದ ಆಕಾಶವನ್ನೆಲ್ಲಾ ತುಂಬಿದನು.

ಸ ವಧ್ಯಮಾನೋ ಭೀಮೇನ ನಿಮೇಷಾದ್ ರಥಮಾಸ್ಥಿತಃ ।
ಜಗಾಮ ಧರಣೀಂ ಕ್ಷುದ್ರಃ ಖಂ ಚೈವ ಸಹಸಾऽಗಮತ್ ॥ ೬೭ ॥

ಕ್ಷುದ್ರನಾದ ಆ ರಾಕ್ಷಸನು ಭೀಮಸೇನನ ಬಾಣಗಳಿಂದ ಹೊಡೆಯಲ್ಪಟ್ಟವನಾಗಿ ಒಂದು ನಿಮಿಷದಲ್ಲಿ ರಥವನ್ನೇರಿ ಭೂಮಿಗೆ ಇಳಿದನು. ತಕ್ಷಣವೇ ಆಕಾಶಕ್ಕೆ ಹಾರಿದನು.

ಉಚ್ಚಾವಚಾನಿ ರೂಪಾಣಿ ಸ ಚಕಾರ ಬಹೂನಿ ಚ ।
ಅಣುರ್ಭೂತ್ವತದಾ ನಾದಾನ್ ಕುರ್ವನ್ ವರ್ಷನ್ನಿವಾಂಬುದಃ ।
ಉಚ್ಚಾವಚಾಸ್ತಥಾ ವಾಚೋ ವ್ಯಾಜಹಾರ ಸಮಂತತಃ ॥ ೬೮ ॥

ಅವನು ಸಣ್ಣ ಮತ್ತು ದೊಡ್ಡ ಅನೇಕ ರೂಪಗಳನ್ನು ತೆಗೆದುಕೊಂಡನು. ಸಣ್ಣ ಮತ್ತು ಅನೇಕ ದೊಡ್ಡನಾದಗಳನ್ನು ಮಾಡಿದನು. ಮಳೆಯನ್ನು ಸುರಿಸುವ ಮೋಡದ ಘೋಷದಂತೆ ಉಚ್ಚ-ನೀಚವಾದ ಅನೇಕ ಮಾತುಗಳನ್ನು ಆಡಿದನು.

ನಿಪೇತುರ್ಗಗನಾಚ್ಚೈವ ಶರಧಾರಾಃ ಸಹಸ್ರಶಃ ।
ಶಕ್ತ್ಯಃ ಕರ್ಷಣಾಃ ಪ್ರಾಸಾಃ ಶೂಲಪಟ್ಟಸತೋಮರಾಃ ॥ ೬೯ ॥

ಶತಘ್ನ್ಯಃ ಪರಿಘಾಶ್ಚೈವ ಭಿಂಡಿಪಾಲಾಃ ಪರಶ್ವಧಾಃ ।
ಶಿಲಾಃ ಖಡ್ಗಾ ಗುಳಾಶ್ಚೈವ ಋಷ್ಟಿರ್ವಜ್ರಾಣಿ ಚೈವ ಹ ॥ ೭೦ ॥

ಆಕಾಶದಿಂದ ಶರಧಾರೆಗಳು ಸಹಸ್ರಸಂಖ್ಯೆಯಲ್ಲಿ ಬಿದ್ದವು. ಶಕ್ತಿಗಳು, ಕರ್ಷಣಗಳು, ಪ್ರಾಸಗಳು, ಶೂಲ-ಪಟ್ಟಸ-ತೋಮರಗಳು, ಶತಘ್ನಿಗಳು, ಪರಿಘಗಳು, ಭಿಂಡಿಪಾಲಗಳು, ಪರಶುಗಳು, ಶಿಲೆಗಳು, ಖಡ್ಗಗಳು, ಗುಳಗಳು, ಋಷ್ಟಿಗಳು ಮತ್ತು ವಜ್ರಗಳೂ ಬಿದ್ದವು.

ಸಾ ರಾಕ್ಷಸವಿಸೃಷ್ಟಾ ತು ಶಸ್ತ್ರವೃಷ್ಟಿಃ ಸುದಾರುಣಾ ।
ಜಘಾನ ಪಾಂಡುಪುತ್ರಸ್ಯ ಸೈನಿಕಾನಾಂ ಚ ಮೂರ್ಧನಿ ॥ ೭೧ ॥

ರಾಕ್ಷಸನಿಂದ ಸೃಷ್ಟವಾದ ದಾರುಣವಾದ ಶಸ್ತ್ರದ ಮಳೆಯು ಪಾಂಡುಪುತ್ರರ ಸೈನಿಕರ ತಲೆಯ ಮೇಲೆ ಬಿದ್ದು ಅವರನ್ನು ಕೊಂದಿತು.

ತೇನ ಪಾಂಡವಸೈನ್ಯಾನಾಂ ಮೃದಿತಾ ಯುಧಿ ವಾರಣಾಃ ।
ಹಯಾಶ್ಚ ಬಹವೋ ರಾಜನ್ ಪತ್ತಯಶ್ಚ ತಥಾ ಪುನಃ ।
ರಥೇಭ್ಯೋ ರಥಿನಸ್ತತ್ರ ಪೇತೂ ರಾಕ್ಷಸಸಾಯಕೈಃ ॥ ೭೨ ॥

ಆ ಶಸ್ತ್ರದ ಮಳೆಯಿಂದ ಯುದ್ಧದಲ್ಲಿ ಪಾಂಡವಸೈನ್ಯದ ಅನೇಕ ಗಜಗಳೂ, ಅಶ್ವಗಳೂ ಮತ್ತು ಪದಾತಿಗಳೂ ಬಿದ್ದು ನಾಶವನ್ನು ಹೊಂದಿದವು. ಎಲೈ ರಾಜನೇ, ರಾಕ್ಷಸನ ಬಾಣಗಳಿಂದ ತಾಡಿತರಾದ ರಥಿಕರು ತಮ್ಮ ರಥಗಳಿಂದ ಕೆಳಗೆ ಬಿದ್ದರು.

ಶೋಣಿತೋದಾಂ ರಥಾವರ್ತಾಂ ಹಸ್ತಿಗ್ರಾಹಾಂ ಧ್ವಜಾಕುಲಾಮ್ ।
ಛತ್ರಹಂಸಾಂ ಮಜ್ಜಪಂಕಾಂ ಬಾಹುಪನ್ನಗಸಂಕುಲಾಮ್ ॥ ೭೩ ॥

ವಹಂತೀಂ ಸೃಂಜಯಾಂಶ್ಚೈವ ಪಾಂಚಾಲಾನಥ ಬಾಹ್ಲಿಕಾನ್ ।
ನದೀಂ ಪ್ರವರ್ತಯಾಮಾಸ ರಕ್ಷೋಗಣಸಮಾಕುಲಾಮ್ ॥ ೭೪ ॥

ರಾಕ್ಷಸನಾದ ಅಲಂಬುಸನು ರಕ್ತದ ಉದಕವುಳ್ಳ, ರಥದ ಸುಳಿಗಳುಳ್ಳ, ಗಜಗಳೆಂಬ ಮೊಸಳೆಗಳುಳ್ಳ, ಧ್ವಜಗಳಿಂದ ನಿಬಿಡವಾದ, ಛತ್ರವೆಂಬ ಹಂಸವುಳ್ಳ, ಮಜ್ಜೆಎಂಬ ಕೆಸರುಳ್ಳ, ಬಾಹುವೆಂಬ ಸರ್ಪಗಳಿಂದ ನಿಬಿಡವಾದ, ಪಾಂಚಾಲರನ್ನೂ ಮತ್ತು ಸೃಂಜಯರನ್ನೂ ಕೊಚ್ಚಿಕೊಂಡು ಹೋಗುವ, ರಾಕ್ಷಸಗಣಗಳಿಂದ ತುಂಬಿದ ನದಿಯನ್ನು ಹರಿಸಿದನು.

ತಂ ತಥಾ ಸಮರೇ ರಾಜನ್ ವಿಚರಂತಮಭೀತವತ್ ।
ಪಾಂಡವಾ ಭೃಶಸಂವಿಗ್ನಾಃ ಪ್ರಾಪಶ್ಯಂಸ್ತಸ್ಯ ವಿಕ್ರಮಮ್ ॥ ೭೫ ॥

ತಾವಕಾನಾಂ ತು ಸೈನ್ಯಾನಾಂ ಪ್ರಹರ್ಷಃ ಸಮಜಾಯತ ॥ ೭೬ ॥

ಎಲೈ ರಾಜನೇ, ಯಾವ ಭಯವೂ ಇಲ್ಲದೆ ಯುದ್ಧದಲ್ಲಿ ಸಂಚರಿಸುವ ಅವನ ಪರಾಕ್ರಮವನ್ನು ಬಹಳ ಸಂವಿಗ್ನರಾದ ಪಾಂಡವರೆಲ್ಲರೂ ನೋಡಿದರು. ಆದರೆ ನಿನ್ನ ಸೈನ್ಯಕ್ಕೆ ಮಾತ್ರ ಬಹಳ ಹರ್ಷ ಉಂಟಾಯಿತು.

ತತೋ ವಾದಿತ್ರನಿನದಃ ಸುಮಹಾನ್ ಲೋಮಹರ್ಷಣಃ ।
ಪ್ರಹರ್ಷಯನ್ ರಣೇ ರಕ್ಷಃ ಪಾಂಡವಾಂಶ್ಚ ವ್ಯಮೋಹಯತ್ ॥ ೭೭ ॥

ಆಗ ರಾಕ್ಷಸನನ್ನು ಸಂತೋಷಗೊಳಿಸುವ ಮತ್ತು ಪಾಂಡವರನ್ನು ಮೋಹಗೊಳಿಸುವ ರೋಮಾಂಚಕಾರಿಯಾದ ವಾದ್ಯಗಳ ದೊಡ್ಡ ಶಬ್ದವು ಉಂಟಾಯಿತು.

ತಂ ಶ್ರುತ್ವಾ ನಿನದಂ ಘೋರಂ ತವ ಸೈನ್ಯೇಷು ಪಾಂಡವಾಃ ।
ನಾಮೃಷ್ಯಂತ ಯಥಾ ನಾಗಾಃ ತಳಶಬ್ದಂ ಸಮೀರಿತಮ್ ॥ ೭೮ ॥

ಪಾಂಡವರು ನಿನ್ನ ಸೈನ್ಯಗಳಿಂದ ಉಂಟಾದ ಘೋರವಾದ ಆ ನಾದಗಳನ್ನು ಕೇಳಿ ಗಜಗಳು ಚಪ್ಪಾಳೆ ಶಬ್ದವನ್ನು ಸಹಿಸದಂತೆ ಅದನ್ನು ಸಹಿಸಲಿಲ್ಲ.

ತತಃ ಕ್ರೋಧಾಭಿತಾಮ್ರಾಕ್ಷೋ ನಿರ್ದಹನ್ನಿವ ಭಾರತ ।
ಸಂದಧೇ ತಾಷ್ಟ್ರಮಸ್ತ್ರಂ ಸ ಸ್ವಯಂ ತ್ವಷ್ಟೇವ ಮಾರಿಷ ।
ತತಃ ಶರಸಹಸ್ರಾಣಿ ಪ್ರಾದುರಾಸನ್ ಸಮಂತತಃ ॥ ೭೯ ॥

ತೈಃ ಶರೈಸ್ತವ ಸೈನ್ಯಸ್ಯ ವಿದ್ರವಃ ಸುಮಹಾನಭೂತ್ ॥ ೮೦ ॥

ಎಲೈ ಪೂಜ್ಯನೇ, ಭಾರತನೇ, ಆಗ ಭೀಮಸೇನನು ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ, ಜಗತ್ತನ್ನೇ ಸುಡುವವನಂತೆ ಸಾಕ್ಷಾತ್ ತ್ವಷ್ಟೃವಿನಂತೆ ತ್ವಾಷ್ಟ್ರಾಸ್ತ್ರವನ್ನು ಬಿಲ್ಲಿನಲ್ಲಿ ಹೂಡಿದನು. ಅದರಿಂದ ಎಲ್ಲ ಕಡೆಗಳಲ್ಲಿಯೂ ಸಾವಿರಾರು ಬಾಣಗಳು ಪ್ರಾದುರ್ಭವಿಸಿದವು. ಆ ಬಾಣಗಳಿಂದ ಹೊಡೆಯಲ್ಪಟ್ಟ ನಿನ್ನ ಸೈನ್ಯದಲ್ಲಿ ಎಲ್ಲ ಕಡೆಗಳಲ್ಲಿಯೂ ದೊಡ್ಡ ಧಾವನವು ಉಂಟಾಯಿತು (ಯೋಧರು ಓಡಿ ಹೋದರು).

ತದಸ್ತ್ರಂ ಪ್ರೇಷಿತಂ ತೇನ ಭೀಮಸೇನೇನ ಸಂಯುಗೇ ।
ರಾಕ್ಷಸಸ್ಯ ಮಹಾಮಾಯಾಂ ಹತ್ವಾ ರಾಕ್ಷಸಮಾರ್ದಯತ್ ॥ ೮೧ ॥

ಯುದ್ಧದಲ್ಲಿ ಭೀಮಸೇನನಿಂದ ಪ್ರಯೋಗಿಸಲ್ಪಟ್ಟ ಆ ಅಸ್ತ್ರವು ಅಲಂಬುಸ ರಾಕ್ಷಸನ ಮಹಾಮಾಯೆಯನ್ನು ವಿನಾಶಗೊಳಿಸಿ ಅವನನ್ನು ಪೀಡಿಸಿತು.

ಸ ವಧ್ಯಮಾನೋ ಬಹುಧಾ ಭೀಮಸೇನೇನ ರಾಕ್ಷಸಃ ।
ಸಂತ್ಯಜ್ಯ ಸಂಯುಗೇ ಭೀಮಂ ದ್ರೋಣಾನೀಕಮಥಾವ್ರಜತ್ ॥ ೮೨ ॥

ಭೀಮಸೇನನಿಂದ ಅನೇಕ ರೀತಿಯಾಗಿ ಪೀಡಿಸಲ್ಪಟ್ಟ ಆ ರಾಕ್ಷಸನು ಭೀಮನ ಜೊತೆಯಲ್ಲಿ ಯುದ್ಧವನ್ನು ಮಾಡುವುದನ್ನು ಬಿಟ್ಟು ದ್ರೋಣರ ಸೈನ್ಯಕ್ಕೆ ಹೋಗಿ ಸೇರಿಕೊಂಡನು.

ತಸ್ಮಿಂಸ್ತು ನಿರ್ಜಿತೇ ರಾಜನ್ ರಾಕ್ಷಸೇಂದ್ರೇ ಮಹಾತ್ಮನಾ ।
ವ್ಯನಾದಯನ್ ಸಿಂಹನಾದ್ಯೈಃ ಪಾಂಡವಾಃ ಸರ್ವತೋದಿಶಮ್ ॥ ೮೩ ॥

ರಾಕ್ಷಸೇಂದ್ರನಾದ ಅಲಂಬುಸನು ಮಹಾತ್ಮನಾದ ಭೀಮಸೇನನಿಂದ ಪರಾಜಿತನಾಗುತ್ತಿರಲು ಎಲೈ ರಾಜನೇ, ಪಾಂಡವರು ಎಲ್ಲ ದಿಕ್ಕುಗಳಲ್ಲಿಯೂ ಸಿಂಹನಾದವನ್ನು ಮಾಡಿದರು.

ಅಪೂಜಯನ್ ಮಾರುತಿಂ ಚ ಸಂಹೃಷ್ಟಾಸ್ತೇ ಮಹಾಬಲಮ್ ।
ಪ್ರಹ್ಲಾದಮಿವ ದೈತೇಯಾ ಯಥಾ ಶಕ್ರಂ ಮರುದ್ಗಣಾಃ ॥ ೮೪ ॥

ದೈತ್ಯರು ಪ್ರಹ್ಲಾದನನ್ನು ಪೂಜಿಸಿದಂತೆ, ಮರುದ್ಗಣಗಳು ಇಂದ್ರನನ್ನು ಪೂಜಿಸಿದಂತೆ ಅವರು ಸಂತೋಷಗೊಂಡು ಮಹಾಬಲನಾದ ಭೀಮಸೇನನನ್ನು ಪೂಜಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರ್ನವತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೈದನೆಯ ಅಧ್ಯಾಯ

ಘಟೋತ್ಕಚನಿಂದ ಅಲಂಬುಸನ ವಧೆ.

ಸಂಜಯಃ

ಕಿರಂತಂ ಶರವರ್ಷಾಣಿ ರೋಷಾದ್ ದ್ರೋಣಂ ಮಹಾಮೃಧೇ ।
ವಿತ್ರಾಸಯಂತಂ ತಾಂ ಸೇನಾಂ ಕೌಂತೇಯಾನಾಂ ಮಹೀಪತೇ ॥ ೧ ॥

ದೃಷ್ಟ್ವಾ ತತೋ ಮಹೇಷ್ವಾಸೋ ನಿಘ್ನಂತಂ ಚ ರಥಾನ್ ಭೃಶಮ್ ।
ಘಟೋತ್ಕಚೋ ಮಹಾಬಾಹೂ ರಣಾಯಾಭಿಜಗಾಮ ಹ ॥ ೨ ॥

ಸಂಜಯ– ಎಲೈ ರಾಜನೇ, ದೊಡ್ಡ ಯುದ್ಧದಲ್ಲಿ ರೋಷದಿಂದ ಬಾಣಗಳ ಮಳೆಯನ್ನು ಸುರಿಸುತ್ತಾ, ಪಾಂಡವರ ಸೇನೆಯನ್ನು ಭಯಗೊಳಿಸುತ್ತಿದ್ದ ಹಾಗೆಯೇ ರಥಿಕರನ್ನು ಸಂಹರಿಸುತ್ತಿದ್ದ ದ್ರೋಣರನ್ನು ನೋಡಿ ಮಹಾಬಾಹುವಾದ ಘಟೋತ್ಕಚನು ಅವರ ಜೊತೆಯಲ್ಲಿ ಯುದ್ಧಮಾಡಲು ಧಾವಿಸಿ ಬಂದನು.

ಪಿಶಾಚವದನೈರ್ಯುಕ್ತಂ ರಥಂ ಕಾಂಚನಭೂಷಿತಮ್ ।
ಸಮಾಸ್ಥಾಯ ಮಹಾರಾಜ ನಾನಾಪ್ರಹರಣೈರ್ವೃತಮ್ ॥ ೩ ॥

ದಂಶಿತಸ್ತಪನೀಯೇನ ಕವಚೇನ ಸುವರ್ಚಸಾ ।
ಭೂಷಣೈಶ್ಚಾಚಿತಾಂಗಶ್ಚ ನದನ್ನಿವ ಚ ತೋಯದಃ ।
ಹೈಡಿಂಬೇಯಃ ಸುಸಂಕ್ರುದ್ಧಃ ದ್ರೋಣಮಭ್ಯದ್ರವದ್ ಬಲೀ ॥ ೪ ॥

ಪಿಶಾಚಮುಖಗಳಿಂದ ಕೂಡಿದ, ಸುವರ್ಣಾಲಂಕೃತವಾದ, ನಾನಾ ವಿಧವಾದ ಆಯುಧಗಳನ್ನೂ ತುಂಬಿದ್ದ ರಥವನ್ನು ಏರಿ, ಸುವರ್ಣಮಯವಾದ ಕವಚವನ್ನು ಧರಿಸಿ, ಭೂಷಣಗಳಿಂದ ಅಲಹ್ಕತನಾಗಿ, ಮೇಘದಂತೆ ಗರ್ಜಿಸುತ್ತಾ, ಬಹಳ ಕೋಪಗೊಂಡ ಬಲಿಷ್ಠನಾದ ಘಟೋತ್ಕಚನು ದ್ರೋಣರ ಕಡೆಗೆ ಧಾವಿಸಿದನು.

ತಮಭ್ಯಧಾವದಾಯಾಂತಂ ಕ್ರುದ್ಧರೂಪಮಲಂಬುಸಃ ।
ಋಕ್ಷಚರ್ಮಪರಿಚ್ಛಿಪ್ತಂ ರಥಮಾಸ್ಥಾಯ ದಂಶಿತಃ ॥ ೫ ॥

ಬಹಳ ಕೋಪಗೊಂಡು ಮುಂದೆ ಬರುತ್ತಿದ್ದ ಅವನನ್ನು ಕರಡಿಯ ಚರ್ಮದ ಹೊದಿಕೆಯುಳ್ಳ ರಥವನ್ನು ಏರಿ ಕವಚಾದಿಗಳನ್ನು ಧರಿಸಿ ಕೋಪಗೊಂಡ ಅಲಂಬುಸನು ಘಟೋತ್ಕಚನ ಕಡೆಗೆ ಧಾವಿಸಿದನು.

ರಕ್ತೋಷ್ಣವದನಃ ಪ್ರಾಂಶುಃ ಸಾಲವೃಕ್ಷ ಇವ ಸ್ಥಿತಃ ।
ಕ್ಷಿಪನ್ ಶತಘ್ನೀಂ ವಿಪುಲಾಂ ಮುಸಲೋಪಮತೋಮರಾನ್ ॥ ೬ ॥

ಮುಸುಂಢೀರ್ಬಹುಲಾಶ್ಚೈವ ತ್ರಿಶೂಲಾನಪಿ ಪಟ್ಟಸಾನ್ ।
ಕರ್ಷಣಾನ್ ಶತಧಾರಾಂಶ್ಚ ಪಿನಾಕಾನ್ ವಿವಿಧಾಂಸ್ತಥಾ ॥ ೭ ॥

ಚಕ್ರಾಣಿ ಚ ಕ್ಷುರಪ್ರಾಣಿ ಕ್ಷೇಪಣೀಶ್ಚ ಕಟಂಕಟಾನ್ ।
ನಾರಾಚಾನ್ ವಿವಿಧಾನಸ್ಯನ್ ಸಕಂಕೋಲೂಕವಾಯಸಾನ್ ॥ ೮ ॥

ಚಿಕ್ಷೇಪ ಧನುರಾದಾಯ ನಿನದನ್ ಭೈರವಾನ್ ರವಾನ್ ॥ ೯ ॥

ರಕ್ತವರ್ಣದ ತುಟಿ ಮತ್ತು ಮುಖವನ್ನು ಹೊಂದಿ, ಸಾಲವೃಕ್ಷದಂತೆ ಎತ್ತರವಾಗಿದ್ದು, ವಿಪುಲವಾದ ಶತಘ್ನಿಗಳನ್ನೂ, ಒನಕೆಯಂತಿದ್ದ ತೋಮರಗಳನ್ನೂ, ಅನೇಕ ಮುಸುಂಢಿಗಳನ್ನೂ, ತ್ರಿಶೂಲಗಳನ್ನೂ, ಪಟ್ಟಸಗಳನ್ನೂ, ಕರ್ಷಣಗಳನ್ನೂ, ಶತಧಾರಗಳನ್ನೂ, ವಿವಿಧವಾದ ಪಿನಾಕಗಳನ್ನೂ, ಚಕ್ರಗಳನ್ನೂ, ಕ್ಷುರಪ್ರಗಳನ್ನೂ, ಕ್ಷೇಪಣಿಗಳನ್ನೂ, ಕಟಂಕಟಗಳನ್ನೂ, ಕಂಕ, ಉಲೂಕ, ವಾಯಸ ಧ್ವಜಗಳಿಂದ ಕೂಡಿದ ವಿವಿಧವಾದ ನಾರಾಚಗಳನ್ನೂ ಧನುಸ್ಸಿನಲ್ಲಿ ಹೂಡಿ ಪ್ರಯೋಗಿಸಿ ಭೈರವನಾದವನ್ನು ಮಾಡಿದನು.

ತಂ ರೌದ್ರಂ ಕ್ರೂರಮಾಯಾಂತಂ ದೃಷ್ಟ್ವಾ ಕಾಲಮಿವಾಗತಮ್ ।
ಪ್ರಾದ್ರವದ್ ಭಯಸಂವಿಗ್ನ ಸಾ ರಾಜನ್ ಪಾಂಡುವಾಹಿನೀ ॥೧೦॥

ಎಲೈ ರಾಜನೇ, ಮೃತ್ಯುವಿನಂತೆ ಸಮೀಪಕ್ಕೆ ಬಂದ ಭಯಂಕರನೂ, ಶೂರನೂ ಆದ ಅವನನ್ನು ನೋಡಿ ಭಯದಿಂದ ಕೂಡಿದ ಆ ಪಾಂಡವರ ಸೇನೆಯು ಓಡಿ ಹೋಯಿತು.

ಸಾತ್ಯಕಿಸ್ತು ರಥವ್ಯಾಘ್ರೋ ದೃಷ್ಟ್ವಾ ತಂ ರಾಕ್ಷಸಂ ಯುಧಿ ।
ಅಭ್ಯಯಾದಮರಪ್ರಖ್ಯೋ ಭ್ರಾಮಯಿತ್ವಾ ಮಹದ್ಧನುಃ ॥ ೧೧ ॥

ದೇವತಾಸದೃಶನಾದ, ರಥಶ್ರೇಷ್ಠನಾದ ಸಾತ್ಯಕಿಯಾದರೂ ಯುದ್ಧದಲ್ಲಿ ಆ ರಾಕ್ಷಸನನ್ನು ನೋಡಿ ತನ್ನ ದೊಡ್ಡ ಧನುಸ್ಸನ್ನು ತೂಗಾಡಿಸುತ್ತಾ ಅವನ ಕಡೆಗೆ ಸಾಗಿದನು.

ಅಭ್ಯದ್ರವಚ್ಚ ತದ್ರಕ್ಷಃ ತಿಷ್ಠ ತಿಷ್ಠೇತಿ ಚಾಬ್ರವೀತ್ ।
ಅಲಂಬುಸಂ ರಾಕ್ಷಸೇಂದ್ರಂ ಸೋಽಸ್ತ್ರವರ್ಷೈರವಾಕಿರತ್ ॥ ೧೨ ॥

ಅಲಂಬುಸ ರಾಕ್ಷಸನ ಕಡೆಗೆ ಹೋಗಿ ನಿಲ್ಲು-ನಿಲ್ಲು ಎಂದು ಹೇಳಿದನು ಮತ್ತು ರಾಕ್ಷಸಶ್ರೇಷ್ಠನಾದ ಅಲಂಬುಸನ ಮೇಲೆ ಅವನು ಅಸ್ತ್ರಗಳ ಮಳೆಯನ್ನು ಕರೆದನು.

ತತಃ ಪಾಂಡವಸೈನ್ಯಾನಿ ವಿದ್ರುತಾನ್ಯಥ ಭಾರತ ।
ನಿರೀಕ್ಷ್ಯಾಭ್ಯದ್ರವತ್ ತೂರ್ಣಂ ತ್ವರಮಾಣೋ ಘಟೋತ್ಕಚಃ ॥ ೧೩ ॥

ಎಲೈ ಭಾರತನೇ, ಆಗ ಪಾಂಡವ ಸೈನ್ಯಗಳು ಓಡಿಹೋದವು. ಅದನ್ನು ನೋಡಿ ಘಟೋತ್ಕಚನು ಶೀಘ್ರವಾಗಿ ಅಲಂಬುಸನ ಕಡೆಗೆ ಎರಗಿದನು.

ಚಿಕ್ಷೇಪ ಚ ಗದಾಃ ಶಕ್ತೀಃ ತೋಮರಾನಥ ಪಟ್ಟಸಾನ್ ।
ಹೇಮಚಿತ್ರತ್ಸರೂನುಗ್ರಾನ್ ಖಡ್ಗಾನಾಕಾಶಸಪ್ರಭಾನ್ ॥ ೧೪ ॥

ಅವನು ಅಲಂಬುಸನ ಮೇಲೆ ಗದೆಗಳನ್ನೂ, ಶಕ್ತಿಗಳನ್ನೂ, ತೋಮರವನ್ನೂ, ಪಟ್ಟಸಗಳನ್ನೂ, ಚಿನ್ನದ ವಿಚಿತ್ರವಾದ ಹಿಡಿಗಳಿರುವ, ಆಕಾಶದಂತೆ ಹೊಳೆಯುವ ಘೋರವಾದ ಖಡ್ಗಗಳನ್ನೂ ಎಸೆದನು.

ಅನ್ಯೋನ್ಯಮಾರಾದಾಲೋಕ್ಯ ರಾಕ್ಷಸೌ ತೌ ಮಹಾಬಲೌ ।
ಭೈರವಂ ನೇದತುರ್ನಾದಾನ್ ಸತೋಯಾವಿವ ತೋಯದೌ ॥ ೧೫ ॥

ಮಹಾಬಲರಾದ ಆ ರಾಕ್ಷಸರಿಬ್ಬರೂ ಸಮೀಪದಿಂದ ಒಬ್ಬರನ್ನೊಬ್ಬರು ನೋಡಿ ನೀರಿನಿಂದ ಕೂಡಿದ ಮೋಡಗಳಂತೆ ಭೈರವ ನಾದಗಳನ್ನು ಮಾಡಿದರು.

ತತಃ ಪ್ರವವೃತೇ ಯುದ್ಧಂ ತಯೋ ರಾಕ್ಷಸಸಿಂಹಯೋಃ ।
ಯಾದೃಗೇವ ಪುರಾ ವೃತ್ತಂ ರಾಮರಾವಣಯೋರ್ಮೃಧೇ ॥ ೧೬ ॥

ಅನಂತರ ಹಿಂದೆ ರಾಮ-ರಾವಣರಿಗೆ ನಡೆದ ಯುದ್ಧದಂತೆ ಆ ಇಬ್ಬರು ರಾಕ್ಷಸ ಶ್ರೇಷ್ಠರಿಗೆ ಯುದ್ಧವು ಪ್ರಾರಂಭವಾಯಿತು.

ಸ ಶಕ್ತೀಶ್ಚ ಪಿನಾಕಾಂಶ್ಚ ವಜ್ರಾನ್ ಖಡ್ಗಾನ್ ಪರಶ್ವಥಾನ್ ।
ಅನ್ಯೋನ್ಯಮಭಿಸಂಕ್ರುದ್ಧೌ ತದಾ ವ್ಯಸೃಜತಾಮುಭೌ ॥ ೧೭ ॥

ಅವರಿಬ್ಬರೂ ಶಕ್ತಿಗಳನ್ನೂ, ಪಿನಾಕಗಳನ್ನೂ, ವಜ್ರಗಳನ್ನೂ, ಖಡ್ಗಗಳನ್ನೂ ಮತ್ತು ಪರಶ್ವಥಗಳನ್ನೂ ಕ್ರೋಧದಿಂದ ಪರಸ್ಪರವಾಗಿ ಪ್ರಯೋಗಿಸಿದರು.

ಆಕೃಷ್ಯಮಾಣೇ ಧನುಷಿ ತಯೋರ್ಬಾಹುಬಲೇನ ಚ ।
ಯಂತ್ರೇಣೇವ ತದಾ ರಾಜನ್ ಭೃಶಂ ನಾದಾನ್ ಪ್ರಚಕ್ರತುಃ ॥ ೧೮ ॥

ಎಲೈ ರಾಜನೇ, ಅವರು ತಮ್ಮ ಬಾಹುಬಲದಿಂದ ಧನುಸ್ಸನ್ನು ಎಳೆದು ಯಂತ್ರದಿಂದಲೋ ಎಂಬಂತೆ ದೊಡ್ಡ ನಾದಗಳನ್ನು ಮಾಡಿದರು.

ಅಲಂಬುಸಸ್ತತಶ್ಚಕ್ರಂ ಕೃತಾಂತಜ್ವಲನಪ್ರಭಮ್ ।
ಘಟೋತ್ಕಚಾಯ ಚಿಕ್ಷೇಪ ಯತ್ನಮಾಸ್ಥಾಯ ವೀರ್ಯವಾನ್ ॥ ೧೯ ॥

ಆಗ ಪರಾಕ್ರಮಶಾಲಿಯಾದ ಅಲಂಬುಸನು ಮೃತ್ಯುಚಕ್ರದ ಕಾಂತಿಯನ್ನು ಹೊಂದಿದ್ದ ಚಕ್ರವನ್ನು ಪ್ರಯತ್ನ ಪೂರ್ವಕವಾಗಿ ಘಟೋತ್ಕಚನ ಮೇಲೆ ಎಸೆದನು.

ತದ್ ಭೈಮಸೇನಿಃ ಸಂಪ್ರೇಕ್ಷ್ಯ ಚಕ್ರಂ ವೇಗವದಂತರೇ ।
ಗದಯಾ ತಾಡಯಾಮಾಸ ತದ್ ದೀರ್ಣಂ ಶತಧಾऽಭವತ್ ॥ ೨೦ ॥

ಭೀಮಸೇನನ ಪುತ್ರನಾದ ಘಟೋತ್ಕಚನು ಚಕ್ರವು ವೇಗದಿಂದ ಬರುತ್ತಿರುವುದನ್ನು ನೋಡಿ ಅದನ್ನು ಮಧ್ಯದಲ್ಲಿಯೇ ತನ್ನ ಗದೆಯಿಂದ ಹೊಡೆದನು. ಚಕ್ರವು ಮುರಿದು ನೂರಾರು ಚೂರಾಯಿತು.

ತತೋಽಗ್ನಿಚೂರ್ಣೈಃ ಸಹಸಾ ಚಕ್ರಘಾತವಿನಿಸೃತೈಃ ।
ದಂಶಕೈರಿವ ಸಾ ಸೇನಾ ಪತದ್ಭಿರ್ಭಶಸಂಕುಲಾ ॥ ೨೧ ॥

ಚಕ್ರಘಾತದಿಂದ ತಕ್ಷಣ ಉಂಟಾದ ಅಗ್ನಿಕಣಗಳಿಂದ ನೊಣಗಳಿಂದ ಹೇಗೋ ಹಾಗೆ ಆ ಕೌರವ ಸೈನ್ಯವು ಬಹಳ ದುಃಖಕ್ಕೆ ಈಡಾಯಿತು.

ತತಃ ಪ್ರತಿಹತೇ ಚಕ್ರೇ ಸ ವೀರೋ ರೋಷಸಂಕುಲಃ ।
ಪ್ರಾಹಿಣೋತ್ ತರಸಾ ತೂರ್ಣಂ ಶಕ್ತಿಶತಂ ತದಾ ॥ ೨೨ ॥

ತನ್ನ ಚಕ್ರವು ಪ್ರತಿಹತವಾಗುತ್ತಿರಲು ವೀರನಾದ ಅಲಂಬುಸನು ಬಹಳ ರೋಷದಿಂದ ಕೂಡಿದವನಾಗಿ ಒಂದು ಸಾವಿರ ಶಕ್ತಿಗಳನ್ನು ಶೀಘ್ರವಾಗಿ ಪ್ರಯೋಗಿಸಿದನು.

ಜ್ವಲಂತೀಶ್ಚ ಕಿರಂತೀಶ್ಚ ಜ್ವಾಲಾಮಾಲಾಃ ಸಮಂತತಃ ।
ಯುಗಾಂತೋಲ್ಕಾನಿಭಾಸ್ತೀಕ್ಷ್ಣಾ ಹೇಮದಂಡಾ ಮಹಾಸ್ವನಾಃ ॥ ೨೩ ॥

ಹೇಮದಂಡವನ್ನು ಹೊಂದಿ ಮಹಾಶಬ್ದವನ್ನು ಮಾಡುತ್ತಿದ್ದ ಅವು ಸ್ವತಃ ಜ್ವಲಿಸುತ್ತಾ, ಎಲ್ಲಾ ದಿಕ್ಕುಗಳಲ್ಲಿಯೂ ಜ್ವಾಲೆಯ ಮಾಲೆಯನ್ನು ಸೂಸುತ್ತಾ, ಯುಗಾಂತಕಾಲದ ಉಲ್ಕೆಗಳಂತೆ ತೀಕ್ಷ್ಣವಾಗಿದ್ದವು.

ತಾಶ್ಚಾಪತಂತೀಃ ಸಂಪ್ರೇಕ್ಷ್ಯ ರಾಕ್ಷಸಸ್ಯ ಘಟೋತ್ಕಚಃ ।
ಅರ್ಧಚಂದ್ರೈಃ ಪ್ರಚಿಚ್ಛೇದ ನಾರಾಚೈಃ ಕಂಕಪತ್ರಿಭಿಃ ॥ ೨೪ ॥

ರಾಕ್ಷಸನಾದ ಅಲಂಬುಸನ ಆ ಶಕ್ತ್ಯಾಯುಧಗಳು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಘಟೋತ್ಕಚನು ಕಂಕಪತ್ರಗಳನ್ನು ಹೊಂದಿದ್ದ ಅರ್ಧಚಂದ್ರಗಳಿಂದಲೂ ಮತ್ತು ನಾರಾಚಗಳಿಂದಲೂ ಅವುಗಳನ್ನು ಕತ್ತರಿಸಿದನು.

ತತೋ ರೋಷಪರೀತಾಂಗಃ ಪ್ರಮುಮೋಚ ಸ ರಾಕ್ಷಸಃ ।
ಶರವರ್ಷಂ ಮಹಾಘೋರಂ ಘಟೋತ್ಕಚರಥಂ ಪ್ರತಿ ॥ ೨೫ ॥

ಆಗ ರೋಷಪೂರ್ಣವಾದ ಶರೀರವುಳ್ಳ ಆ ರಾಕ್ಷಸನು ಘಟೋತ್ಕಚನ ರಥದ ಮೇಲೆ ಮಹಾಘೋರವಾದ ಬಾಣಗಳ ಮಳೆಯನ್ನು ಕರೆದನು.

ಅಲಂಬುಸಂ ತಥಾ ಯುದ್ಧೇ ವಿಚರಂತಮಭೀತವತ್ ।
ಹೈಡಿಂಬಃ ಪ್ರಯಯೌ ತೂರ್ಣಂ ವಿವ್ಯಾಧ ಚ ಶಿತೈಃ ಶರೈಃ ॥ ೨೬ ॥

ಆ ರೀತಿಯಲ್ಲಿ ಯುದ್ಧದಲ್ಲಿ ನಿರ್ಭಯವಾಗಿ ಸಂಚರಿಸುತ್ತಿದ್ದ ಅಲಂಬುಸನನ್ನು ನೋಡಿ ಘಟೋತ್ಕಚನು ಶೀಘ್ರವಾಗಿ ಅವನನ್ನು ಸಮೀಪಿಸಿ ಅವನ ಮೇಲೆ ಹರಿತವಾದ ಬಾಣಗಳನ್ನು ಪ್ರಯೋಗಿಸಿದನು.

ತಯೋರಪ್ರತಿಮಂ ಯುದ್ಧಮಾಸೀದ್ ರಾಕ್ಷಸಸಿಂಹಯೋಃ ।
ಮುಂಚತೋರ್ವಿವಿಧಾ ಮಾಯಾಃ ಶಕ್ರಶಂಬರಯೋರಿವ ॥ ೨೭ ॥

ಇಂದ್ರ-ಶಂಬರರಂತೆ ಅನೇಕ ವಿಧವಾದ ಮಾಯೆಗಳನ್ನು ಸೃಷ್ಟಿಸಿ ರಾಕ್ಷಸಸಿಂಹರಾದ ಅವರಿಬ್ಬರಿಗೆ ಅಸದೃಶವಾದ ಯುದ್ಧವು ನಡೆಯಿತು.

ಅಲಂಬುಸೋ ಭೃಶಂ ಕ್ರುದ್ಧೋ ಘಟೋತ್ಕಚಮತಾಡಯತ್ ।
ತಯೋರ್ಯುದ್ಧಂ ಸಮಭವದ್ ರಕ್ಷೋಗ್ರಾಮಣಿಮುಖ್ಯಯೋಃ ।
ಯಾದೃಗೇವ ಪುರಾ ವೃತ್ತಂ ರಾಮರಾವಣಯೋರ್ಮೃಧೇ ॥ ೨೮ ॥

ಅಲಂಬುಸನು ಬಹಳ ಕೋಪಗೊಂಡು ಘಟೋತ್ಕಚನನ್ನು ಹೊಡೆದನು. ಹಿಂದೆ ರಾಮ-ರಾವಣರಿಗೆ ನಡೆದ ಯುದ್ಧದಂತೆ ರಾಕ್ಷಸಶ್ರೇಷ್ಠನಾದ ಮತ್ತು ಗ್ರಾಮ ನಾಯಕ ಶ್ರೇಷ್ಠನಾದ ಅವರಿಬ್ಬರಿಗೆ ಯುದ್ಧವು ನಡೆಯಿತು.

ಘಟೋತ್ಕಚಸ್ತು ವಿಂಶತ್ಯಾ ನಾರಾಚಾನಾಂ ಸ್ತನಾಂತರೇ ।
ಅಲಂಬುಸಮಥೋ ವಿದ್ವಾ ಸಿಂಹವದ್ ವ್ಯನದನ್ಮುಹುಃ ॥ ೨೯ ॥

ಘಟೋತ್ಕಚನಾದರೋ ಇಪ್ಪತ್ತು ನಾರಾಚಗಳಿಂದ ಅಲಂಬುಸನನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದು ಸಿಂಹದಂತೆ ಪುನಃ ಪುನಃ ಗರ್ಜಿಸಿದನು.

ತಥೈವಾಲಂಬುಸೋ ರಾಜನ್ ಹೈಡಿಂಬಂ ಯುದ್ಧದುರ್ಮದಮ್ ।
ವಿದ್ವಾ ವಿದ್ವಾಽನದದ್ ಧೃಷ್ಟಃ ಪೂರಯನ್ ಖಂ ಸಮಂತತಃ ॥೩೦॥

ಎಲೈ ರಾಜನೇ, ಹಾಗೆಯೇ ಅಲಂಬುಸನು ಯುದ್ಧದುರ್ಮದನಾದ ಘಟೋತ್ಕಚನನ್ನು ಹೊಡೆದು-ಹೊಡೆದು ತನ್ನ ನಾದದಿಂದ ಆಕಾಶವನ್ನು ಎಲ್ಲ ಕಡೆಗಳಲ್ಲಿಯೂ ತುಂಬುತ್ತಾ ನಾದವನ್ನು ಮಾಡಿದನು.

ತಥಾ ತೌ ಭೃಶಸಂಕ್ರುದ್ಧೌ ರಾಕ್ಷಸೇಂದ್ರೌ ಮಹಾಬಲೌ ।
ನಿರ್ವಿಶೇಷಮಯುದ್ಧ್ಯೇತಾಂ ಮಾಯಾಭಿರಿತರೇತರಮ್ ॥ ೩೧ ॥

ಮಹಾಬಲರಾದ ಆ ಇಬ್ಬರು ರಾಕ್ಷಸಶ್ರೇಷ್ಠರು ಬಹಳ ಕೋಪಗೊಂಡವರಾಗಿ ರಾಕ್ಷಸಮಾಯೆಯನ್ನು ಆಶ್ರಯಿಸಿ, ಯಾವ ವ್ಯತ್ಯಾಸವೂ ಇಲ್ಲದೆ ಯುದ್ಧವನ್ನು ಮಾಡಿದರು.

ಮಾಯಾಶತಜ್ಞೌ ದೃಪ್ತೌ ಮೋಹಯಂತೌ ಪರಸ್ಪರಮ್ ।
ಮಾಯಾಯುದ್ಧೇಷು ಕುಶಲೌ ಮಾಯಾಯುದ್ಧಮಯುದ್ಧ್ಯತಾಮ್ ॥

ಮಾಯಾಯುದ್ಧದಲ್ಲಿ ಕುಶಲರಾದ ಅವರಿಬ್ಬರೂ ದರ್ಪದಿಂದ ಕೂಡಿದವರಾಗಿ ನೂರು ಮಾಯೆಗಳನ್ನು ಸೃಷ್ಟಿಮಾಡಿ ಪರಸ್ಪರವಾಗಿ ಮೋಹವನ್ನುಂಟು ಮಾಡುತ್ತಾ, ಮಾಯಾ ಯುದ್ಧವನ್ನು ಮಾಡಿದರು.

ಯಾಂ ಯಾಂ ಘಟೋತ್ಕಚೋ ಯುದ್ಧೇ ಮಾಯಾಂ ದರ್ಶಯತೇ ನೃಪ ।
ತಾಂ ತಾಮಲಂಬುಸೋ ರಾಜನ್ ಮಾಯಯೈವಾಭಿಜಘ್ನಿವಾನ್ ॥ ೩೩ ॥

ತೃಷ್ಟಾಂ ಸೃಷ್ಟಾಂ ಪುನರ್ಮಾಯಾಂ ಭೈಮಸೇನೇರಲಂಬುಸಃ ।
ಮಾಯಯೈವಾಹನದ್ ವೀರಃ ಪ್ರಾಕ್ರುದ್ಧಸ್ತತ್ರ ಪಾಂಡವಾಃ ॥ ೩೪ ॥

ಎಲೈ ರಾಜನೇ, ಘಟೋತ್ಕಚನು ಯುದ್ಧದಲ್ಲಿ ಯಾವ ಯಾವ ಮಾಯೆಯನ್ನು ತೋರಿಸುತ್ತಾನೆಯೋ ಅದನ್ನೆಲ್ಲ ಅಲಂಬುಸನು ಮಾಯೆಯಿಂದಲೇ ವಿನಾಶಗೊಳಿಸಿದನು. ಘಟೋತ್ಕಚನು ಪುನಃ ಪುನಃ ಸೃಷ್ಟಿಮಾಡಿದ ಮಾಯೆಯನ್ನು ವೀರನಾದ ಅಲಂಬುಸನು ಮಾಯೆಯಿಂದಲೇ ನಾಶಗೊಳಿಸಿದನು. ಆಗ ಪಾಂಡವರು ಕೋಪಗೊಂಡರು.

ತಂ ತಥಾ ಯುದ್ಧ್ಯಮಾನಂ ತು ಮಾಯಾಯುದ್ಧವಿಶಾರದಮ್ ।
ಅಲಂಬುಸಂ ರಾಕ್ಷಸೇಂದ್ರಂ ದೃಷ್ಟ್ವಾಕ್ರುದ್ಧ್ಯಂತ ಪಾಂಡವಾಃ ॥ ೩೫ ॥

ಮಾಯಾಯುದ್ಧವಿಶಾರದನಾದ, ರಾಕ್ಷಸೇಂದ್ರನಾದ ಅಲಂಬುಸನು ಹಾಗೆ ಯುದ್ಧ ಮಾಡುತ್ತಿರುವುದನ್ನು ನೋಡಿ ಪಾಂಡವರು ಕೋಪಗೊಂಡರು.

ತತ ಏನಂ ಭೃಶಂ ಕ್ರುದ್ಧಾಃ ಸರ್ವತಃ ಪರಿವಾರಿತಾಃ ।
ಅಭ್ಯದ್ರವಂತ ಸಂರಬ್ಧಾ ಭೀಮಸೇನಾದಯೋ ನೃಪ ॥ ೩೬ ॥

ಎಲೈ ರಾಜನೇ, ಆಗ ಭೀಮಸೇನಾದಿಗಳು ಬಹಳ ಕೋಪಗೊಂಡು ಎಲ್ಲ ಕಡೆಗಳಿಂದಲೂ ಪರಿವಾರ ಸಹಿತರಾಗಿ ಅಲಂಬುಸನ ಕಡೆಗೆ ಓಡಿದರು.

ತ ಏನಂ ಕೋಷ್ಠಕೀಕೃತ್ಯ ರಥವಂಶೇನ ಮಾರಿಷ ।
ಸರ್ವತೋ ವ್ಯಕಿರನ್ ಬಾಣೈರುಲ್ಕಾಭಿರಿವ ಕುಂಜರಮ್ ॥ ೩೭ ॥

ಎಲೈ ಪೂಜ್ಯನೇ, ಅವರು ಅಲಂಬುಸನನ್ನು ತಮ್ಮ ರಥ ಸಮೂಹದಿಂದ ಒಳಗೆ ಸೇರಿಸಿಕೊಂಡು ಪಂಜುಗಳಿಂದ ಗಜವನ್ನು ಹೊಡೆದಂತೆ ಎಲ್ಲ ಕಡೆಗಳಿಂದಲೂ ಬಾಣಗಳಿಂದ ಅವನನ್ನು ಹೊಡೆದರು.

ಸ ತೇಷಾಮಸ್ತ್ರವೇಗಂ ತಂ ಪ್ರತಿಹತ್ಯಾಸ್ತ್ರಮಾಯಯಾ ।
ತಸ್ಮಾದ್ ರಥವ್ರಜಾನ್ಮುಕ್ತೋ ವನದಾಹಾದಿವ ದ್ವಿಪಃ ॥ ೩೮ ॥

ಅಲಂಬುಸನು ತನ್ನ ಅಸ್ತ್ರಮಾಯೆಯಿಂದ ಅವರ ಅಸ್ತ್ರಗಳನ್ನು ನಿವಾರಿಸಿ, ಕಾಡ್ಗಿಚ್ಚಿನಿಂದ ಬಿಡುಗಡೆ ಹೊಂದಿದ ಗಜದಂತೆ ಆ ರಥಸಮೂಹದಿಂದ ಮುಕ್ತನಾದನು.

ಸ ವಿಷ್ಫಾರ್ಯ ಧನುಘೋರಮ್ ಇಂದ್ರಾಶನಿಸಮಸ್ವನಮ್ ।
ಮಾರುತಿಂ ಪಂಚವಿಂಶತ್ಯಾ ಭೈಮಸೇನಿಂ ಚ ಪಂಚಭಿಃ ॥ ೩೯ ॥

ಯುಧಿಷ್ಠಿರಂ ತ್ರಿಭಿರ್ವಿದ್ಧ್ವಾ ಸಹದೇವಂ ಚ ಸಪ್ತಭಿಃ ।
ನಕುಲಂ ಚ ತ್ರಿಸಪ್ತತ್ಯಾ ದ್ರೌಪದೇಯಾಂಶ್ಚ ಮಾರಿಷ ॥ ೪೦ ॥

ಪಂಚಭಿಃ ಪಂಚಭಿರ್ವಿದ್ಧ್ವಾ ಘೋರಂ ನಾದಂ ಚಕಾರ ಹ ॥ ೪೧ ॥

ಅವನು ಇಂದ್ರನ ವಜ್ರಾಯುಧಕ್ಕೆ ಸಮವಾದ ಘೋಷವುಳ್ಳ ತನ್ನ ಘೋರವಾದ ಧನುಸ್ಸನ್ನು ಎಳೆದು, ಮಾರುತಿಯಾದ ಭೀಮಸೇನನನ್ನು ಇಪ್ಪತ್ತೈದು ಬಾಣಗಳಿಂದಲೂ, ಭೀಮಸೇನನ ಪುತ್ರನಾದ ಘಟೋತ್ಕಚನನ್ನು ಐದು ಬಾಣಗಳಿಂದಲೂ, ಯುಧಿಷ್ಠಿರನನ್ನು

ಮೂರು ಬಾಣಗಳಿಂದಲೂ, ಸಹದೇವನನ್ನು ಏಳು ಬಾಣಗಳಿಂದಲೂ, ನಕುಲನನ್ನು ಎಪ್ಪತ್ತೂರು ಬಾಣಗಳಿಂದಲೂ, ಎಳ್ಳೆ ಪೂಜ್ಯನೇ, ದ್ರೌಪದಿಯ ಪುತ್ರರನ್ನು ಐದೈದು ಬಾಣಗಳಿಂದಲೂ ಹೊಡೆದು ಘೋರವಾದ ನಾದವನ್ನು ಮಾಡಿದನು.

ತಂ ಭೀಮಸೇನೋ ನವಭಿಃ ಸಹದೇವಶ್ಚ ಪಂಚಭಿಃ ।
ಯುಧಿಷ್ಠಿರಃ ಶತೇನೈವ ರಾಕ್ಷಸಂ ಪ್ರತ್ಯವಿದ್ಧ್ಯತ ।
ನಕುಲಶ್ಚ ಚತುಃಷಷ್ಟ್ಯಾ ದ್ರೌಪದೇಯಾಸ್ತ್ರಿಭಿಸ್ತ್ರಿಭಿಃ ॥ ೪೨ ॥

ಭೀಮಸೇನನ ಪುತ್ರನು ಆ ರಾಕ್ಷಸನನ್ನು ಒಂಬತ್ತು ಬಾಣಗಳಿಂದಲೂ, ಸಹದೇವನು ಐದು ಬಾಣಗಳಿಂದಲೂ, ಯುಧಿಷ್ಠಿರನು ನೂರು ಬಾಣಗಳಿಂದಲೂ ಪ್ರತಿಯಾಗಿ ಹೊಡೆದರು. ನಕುಲನು ಅರವತ್ನಾಲ್ಕು ಬಾಣಗಳಿಂದಲೂ, ದ್ರೌಪದಿಯ ಪುತ್ರರು ಮೂರು-ಮೂರು ಬಾಣಗಳಿಂದಲೂ ಹೊಡೆದರು.

ಹೈಡಿಂಬೋ ರಾಕ್ಷಸಂ ವಿದ್ಧ್ವಾ ಯುದ್ಧೇ ಪಂಚಾಶತಾ ಶರೈಃ ।
ಪುನರ್ವಿವ್ಯಾಧ ಸಪ್ತತ್ಯಾ ನನಾದ ಚ ಮಹಾಬಲಃ ॥ ೪೩ ॥

ಘಟೋತ್ಕಚನು ಐವತ್ತು ಬಾಣಗಳಿಂದ ಅಲಂಬುಸನನ್ನು ಹೊಡೆದು ಪುನಃ ಎಪ್ಪತ್ತು ಬಾಣಗಳನ್ನು ಪ್ರಯೋಗಿಸಿ, ಮಹಾಬಲನಾದ ಅವನು ನಾದವನ್ನು ಮಾಡಿದನು.

ತಸ್ಯ ನಾದೇನ ಮಹತಾ ಕಂಪಿತೇಯಂ ವಸುಂಧರಾ ।
ಸಪರ್ವತವನಾ ರಾಜನ್ ಸಪಾದಪಜಲಾಶಯಾ ॥ ೪೪ ॥

ಅವನ ಆ ದೊಡ್ಡ ನಾದದಿಂದ ಎಳ್ಳೆ ರಾಜನೇ, ಪರ್ವತ ವನಸಹಿತವಾದ, ಸಪ್ತ ಸಾಗರ ಸಹಿತವಾದ ಭೂಮಿಯು ನಡುಗಿದಂತೆ ತೋರಿತು.

ಸೋಽತಿವಿದ್ಧೋ ಮಹೇಷ್ವಾಸೈಃ ಸರ್ವತಸ್ತೈರ್ಮಹಾರಥೈಃ ।
ಪ್ರತಿವಿವ್ಯಾಧ ತಾನ್ ಸರ್ವಾನ್ ಪಂಚಭಿಃ ಪಂಚಭಿಃ ಶರೈಃ ॥ ೪೫ ॥

ಮಹಾರಥರೂ, ಮಹಾಧನುರ್ಧಾರಿಗಳೂ ಆದ ಅವರಿಂದ ಎಲ್ಲಕಡೆಗಳಿಂದಲೂ ಚೆನ್ನಾಗಿ ಹೊಡೆಯಲ್ಪಟ್ಟ ಅವನು, ಅವರಲ್ಲಿ ಒಬ್ಬೊಬ್ಬರ ಮೇಲೆಯೂ ಐದೈದು ಬಾಣಗಳನ್ನು ಪ್ರಯೋಗಿಸಿ, ಪ್ರತಿಯಾಗಿ ಯುದ್ಧವನ್ನು ಮಾಡಿದನು.

ಸಂಕ್ರುದ್ಧಂ ರಾಕ್ಷಸಂ ಯುದ್ಧೇ ಪ್ರತಿಕ್ರುದ್ಧಸ್ತು ಭಾರತ ।
ಹೈಡಿಂಬೋ ರಾಕ್ಷಸಶ್ರೇಷ್ಠಃ ಶರೈರ್ವಿವ್ಯಾಧ ಸಪ್ತಭಿಃ ॥ ೪೬ ॥

ಎಲೈ ಭಾರತನೇ, ಯುದ್ಧದಲ್ಲಿ ಕೋಪಗೊಂಡ ಅಲಂಬುಸ ರಾಕ್ಷಸನನ್ನು ಕೋಪಗೊಂಡ ರಾಕ್ಷಸಶ್ರೇಷ್ಠನಾದ ಘಟೋತ್ಕಚನು ಏಳು ಬಾಣಗಳಿಂದ ಹೊಡೆದನು.

ಸೋಽತಿವಿದ್ಧೋ ಬಲವತಾ ರಾಕ್ಷಸೇಂದ್ರೋ ಮಹಾಬಲಃ ।
ವ್ಯಸೃಜತ್ ಸಾಯಕಾಂಸ್ತೂರ್ಣಂ ಸ್ವರ್ಣಪುಂಖಾನ್ ಶಿಲಾಶಿತಾನ್ ॥

ಬಲಿಷ್ಠನಾದ ಘಟೋತ್ಕಚನಿಂದ ಬಹಳ ಗಾಢವಾಗಿ ಪ್ರಹಾರವನ್ನು ಹೊಂದಿದ ಮಹಾಬಲನಾದ ರಾಕ್ಷಸೇಂದ್ರನು ಶೀಘ್ರವಾಗಿ ಸ್ವರ್ಣಪುಂಖವನ್ನು ಹೊಂದಿದ, ಕಲ್ಲಿನ ಮೇಲೆ ಸಾಣೆಯನ್ನು ಹಿಡಿದ ಬಾಣಗಳನ್ನು ಪ್ರಯೋಗಿಸಿದನು.

ತೇ ಶರಾ ನತಪರ್ವಾಣೋ ಹೈಡಿಂಬಂ ವಿವಿಶುರ್ಭೃಶಮ್ ।
ರುಷಿತಾಃ ಪನ್ನಗಾ ಯದ್ವದ್ ಗಿರಿಮಗ್ರ್ಯಂ ಮಹಾಬಲಾಃ ॥ ೪೮ ॥

ಮಹಾಬಲವುಳ್ಳ ಸರ್ಪಗಳು ಕೋಪದಿಂದ ಪರ್ವತವನ್ನು ಪ್ರವೇಶಿಸುವಂತೆ, ಅಲಂಬುಸನು ಪ್ರಯೋಗಿಸಿದ ಬಾಗಿದ ತುದಿಯುಳ್ಳ ಆ ಬಾಣಗಳು ಘಟೋತ್ಕಚನ ಶರೀರವನ್ನು ಚೆನ್ನಾಗಿ ಪ್ರವೇಶಿಸಿದವು.

ತತಸ್ತೇ ಪಾಂಡವಾ ರಾಜನ್ ಸಮಂತಾನ್ನಿಶಿತೈಃ ಶರೈಃ ।
ಛಾದಯಾಮಾಸುರುದ್ವಿಗ್ನಾ ಹೈಡಿಂಬಶ್ಚ ಘಟೋತ್ಕಚಃ ॥ ೪೯ ॥

ಎಲೈ ರಾಜನೇ, ಆಗ ಆ ಉದ್ವಿಗ್ನರಾದ ಪಾಂಡವರು ತಮ್ಮ ಹರಿತವಾದ ಬಾಣಗಳಿಂದ ಎಲ್ಲ ಕಡೆಗಳಿಂದಲೂ ಅಲಂಬುಸನನ್ನು ಮುಚ್ಚಿದರು. ಹಿಡಿಂಬಾಪುತ್ರನಾದ ಘಟೋತ್ಕಚನೂ ಹಾಗೆಯೇ ಮಾಡಿದನು.

ಸ ವದ್ಯಮಾನಃ ಸಮರೇ ಪಾಂಡವೈರ್ಜಿತಕಾಶಿಭಿಃ ।
ನಾಭ್ಯಪದ್ಯತ ಕರ್ತವ್ಯಮಾರ್ಶ್ಯಶೃಂಗಿರ್ಮಹಾಬಲಃ ॥ ೫೦ ॥

ಋಶ್ಯಶೃಂಗರ ಪುತ್ರನೂ, ಮಹಾಬಲನೂ ಆದ ಅಲಂಬುಸನು ಜಯವನ್ನು ಆಶಿಸಿದ ಪಾಂಡವರಿಂದ ಯುದ್ಧದಲ್ಲಿ ಹೊಡೆಯಲ್ಪಟ್ಟು ಏನು ಮಾಡಬೇಕೆಂದು ತಿಳಿಯದಾದನು.

ಮರ್ತ್ಯಧರ್ಮಮನುಪ್ರಾಪ್ತಃ ಕರ್ತವ್ಯಂ ನಾನ್ವಪದ್ಯತ ।
ತತಃ ಸಮರಶೌಂಡೋ ವೈ ಭೈಮಸೇನಿರ್ಮಹಾಬಲಃ ।
ಸಮೀಕ್ಷ್ಯ ತಂ ತಥಾವಸ್ಥಂ ವಧಾಯಾಸ್ಯ ಮನೋ ದಧೇ ॥ ೫೧ ॥

ಮರ್ತ್ಯಧರ್ಮವನ್ನು ಹೊಂದಿದವನಾಗಿ ಮೂಢನಾದನು. ಆಗ ಯುದ್ಧಕುಶಲಾದ ಮಹಾಬಲನಾದ ಘಟೋತ್ಕಚನು ಅಂತಹ ಅವಸ್ಥೆಯಲ್ಲಿರುವ ಅವನನ್ನು ನೋಡಿ ಅವನ ವಧೆಯನ್ನು ಮಾಡಲು ನಿರ್ಧರಿಸಿದನು.

ವೇಗಂ ಚಕ್ರೇ ಮಹಾಂತಂ ವೈ ರಾಕ್ಷಸೇಂದ್ರರಥಂ ಪ್ರತಿ ।
ಘಟೋತ್ಕಚಂ ಮಹಾರಾಜ ಶರವರ್ಷೈರವಾಕಿರತ್ ॥ ೫೨ ॥

ರಾಕ್ಷಸಶ್ರೇಷ್ಠನಾದ ಅಲಂಬುಸನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಾ, ತನ್ನ ಬಾಣಗಳ ವೇಗವನ್ನು ಇನ್ನೂ ಹೆಚ್ಚಿಸಿದನು.

ದಗ್ಧಾದ್ರಿಕೂಟಸದೃಶಂ ತಮಂಜನಚಯೋಪಮಮ್ ॥ ೫೩ ॥

ಎಲೈ ಮಹಾರಾಜನೇ, ಸುಟ್ಟುಹೋದ ಪರ್ವತದ ಶಿಖರದಂತೆ, ಅಂಜನದ ರಾಶಿಯಂತೆ ಇದ್ದ ಘಟೋತ್ಕಚನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಘಟೋತ್ಕಚೋऽಪ್ಯಸಂಭ್ರಾಂತಃ ಶರವರ್ಷಂ ಮಹತ್ತರಮ್ ।
ಅಲಂಬುಸವಧಪ್ರೇಪ್ಸುರ್ಮಮೋಚಾಗ್ನಿವ ಜ್ವಲನ್ ॥ ೫೪ ॥

ಘಟೋತ್ಕಚನೂ ಸಹ ಗಾಬರಿಗೊಳ್ಳದೆ ಅಲಂಬುಸನ ವಧೆಯನ್ನು ಬಯಸುತ್ತಾ, ಅಗ್ನಿಯಂತೆ ಜ್ವಲಿಸುತ್ತಾ, ಮಹತ್ತರವಾದ ಬಾಣಗಳ ಮಳೆಯನ್ನು ಅವನ ಮೇಲೆ ಸುರಿಸಿದನು.

ಅಲಂಬುಸರಥಾಚ್ಚೋಗ್ರಾದ್ ಘಟೋತ್ಕಚರಥಾದಪಿ ।
ಶರಾಃ ಪ್ರಾದುರ್ಭವಂತಿ ಸ್ಮ ದ್ವಿರೇಫಾ ಇವ ಖಾದ್ ದಿಶಃ ॥ ೫೫ ॥

ಅಲಂಬುಸನ ಉಗ್ರವಾದ ರಥದಿಂದಲೂ ಮತ್ತು ಘಟೋತ್ಕಚನ ರಥದಿಂದಲೂ ಬಾಣಗಳು ದುಂಬಿಗಳು ಆಕಾಶದಿಂದ ದಿಕ್ಕು-ದಿಕ್ಕುಗಳಿಗೆ ಹೋಗುವಂತೆ ಪ್ರಾದುರ್ಭವಿಸಿದವು.

ಅಭ್ರಚ್ಛಾಯೇವ ರಚಿತಾ ಬಾಣೈಸ್ತತ್ರ ನರೇಶ್ವರ ।
ನ ಸ್ಮ ವಿಜ್ಞಾಯತೇ ಕಿಂಚಿದಂಧಕಾರೇ ಕೃತೇ ಶರೈಃ ॥ ೫೬ ॥

ಎಲೈ ನರೇಶ್ವರನೇ, ಆ ಬಾಣಗಳಿಂದ ಉಂಟಾದ ಛಾಯೆಯು ಮೋಡಗಳ ಛಾಯೆಯಂತಿದ್ದಿತು. ಬಾಣದಿಂದ ಅಂಧಕಾರವು ಸೃಷ್ಟಿಸಲ್ಪಡುತ್ತಿರಲು ಯಾವುದೂ ಕಾಣಿಸುತ್ತಿರಲಿಲ್ಲ.

ತತ ಆಕರ್ಣಕೃಷ್ಟೇನ ಭಲ್ಲೇನ ಚ ಘಟೋತ್ಕಚಃ ।
ಅಲಂಬುಸಸ್ಯ ಚಿಚ್ಛೇದ ಶಿರೋ ಯಂತುರ್ಮಹಾಬಲಃ ॥ ೫೭ ॥

ಅನಂತರ ಮಹಾಬಲನಾದ ಘಟೋತ್ಕಚನು ತನ್ನ ಕಿವಿಯವರೆಗೂ ಎಳೆದು ಪ್ರಯೋಗಿಸಿದ ಭಲ್ಲದಿಂದ ಅಲಂಬುಸನ ಸಾರಥಿಯ ಶಿರಸ್ಸನ್ನು ಕತ್ತರಿಸಿದನು.

ತತೋಽಪರೈರ್ವೇಗವದ್ಭಿಃ ಕ್ಷುರೈಸ್ತಸ್ಯ ಘಟೋತ್ಕಚಃ ।
ಅಕ್ಷಮೀಷಾಂ ಯುಗಂ ಚೈವ ಚಿಚ್ಛೇದ ಯುಧಿ ತಾಡಯನ್ ॥ ೫೮ ॥

ಆನಂತರ ಘಟೋತ್ಕಚನು ವೇಗಶಾಲಿಗಳಾದ ಬೇರೆ ಕ್ಷುರಗಳಿಂದ ಯುದ್ಧದಲ್ಲಿ ಅವನ ರಥದ ಅಶ್ವವನ್ನೂ, ಮೂಕಿಯನ್ನೂ ಮತ್ತು ನೊಗವನ್ನೂ ಹೊಡೆದು ಕತ್ತರಿಸಿದನು.

ಅವಸ್ಕಂದ್ಯ ರಥಾತ್ ತೂರ್ಣಂ ಕೈಮೀರಿಃ ಕ್ರೋಧಮೂರ್ಚ್ಛಿತಃ ।
ತಸ್ಮಿನ್ ಮಾಯಾಮಯಂ ಘೋರಮಸ್ತ್ರವರ್ಷಂ ವವರ್ಷ ಹ ॥ ೫೯ ॥

ಕಿರ್ಮೀರನ ಪುತ್ರನಾದ ಅಲಂಬುಸನು ಕ್ರೋಧಮೂರ್ಛಿತನಾಗಿ, ರಥದಿಂದ ಇಳಿದು ಅವನ ಮೇಲೆ ಮಾಯಾಮಯವಾದ ಘೋರವಾದ ಅಸ್ತ್ರಗಳ ಮಳೆಯನ್ನು ಸುರಿಸಿದನು.

ಘಟೋತ್ಕಚೋಽಪ್ಯಾಶು ರಥಾತ್ ಪ್ರಸ್ಕಂದ್ಯ ಸಮಮೇವ ಚ ।
ಮಾಯಾಸ್ತ್ರೇಣೈವ ಮಾಯಾಸ್ತ್ರಂ ವ್ಯಧಮತ್ ಸಮರೇ ರಿಪೋಃ ॥ ೬೦ ॥

ಘಟೋತ್ಕಚನೂ ಸಹ ಅವನು ರಥದಿಂದ ಇಳಿಯುತ್ತಿರುವಾಗಲೇ ತಾನೂ ರಥದಿಂದ ಇಳಿದು ಶತ್ರುವಿನ ಮಾಯಾಸ್ತ್ರಗಳನ್ನು ಶೀಘ್ರವಾಗಿ ತನ್ನ ಮಾಯಾಸ್ತ್ರಗಳಿಂದ ನಾಶಗೊಳಿಸಿದನು.

ಹೈಡಿಂಬೇನಾರ್ದ್ಯಮಾನಸ್ತು ಯುಧಿ ಸೋಽಲಂಬುಸೋ ದೃಢಮ್ ।
ಅಂತರ್ಹಿತೋ ಮಹಾರಾಜ ಘಟೋತ್ಕಚಮಯೋಧಯತ್ ॥ ೬೧ ॥

ಎಲೈ ಮಹಾರಾಜನೇ, ಹಿಡಿಂಬಾಪುತ್ರನಾದ ಘಟೋತ್ಕಚನಿಂದ ಬಹಳವಾಗಿ ಪೀಡಿಸಲ್ಪಟ್ಟ ಅಲಂಬುಸನು ಅಂತರ್ಧಾನವನ್ನು ಹೊಂದಿ ಘಟೋತ್ಕಚನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಅಂತರ್ಧಾನಗತಂ ದೃಷ್ಟ್ವಾ ತತ್ರ ತತ್ರ ಘಟೋತ್ಕಚಃ ।
ಗದಯಾ ತಾಡಯಾಮಾಸ ವೇಗವತ್ಯಾ ಮಹಾಬಲಃ ॥ ೬೨ ॥

ಅವನು ಅಂತರ್ಧಾನವನ್ನು ಹೊಂದಿದುದನ್ನು ನೋಡಿ ಮಹಾಬಲನಾದ ಘಟೋತ್ಕಚನು ಎಲ್ಲ ಕಡೆಗಳಲ್ಲಿಯೂ ವೇಗಶಾಲಿಯಾದ ಗದೆಯಿಂದ ಹೊಡೆದನು.

ಉತ್ಪಪಾತ ತತೋ ವ್ಯೋಮ್ನಿ ಪ್ರಹಾರಪರಿಪೀಡಿತಃ ।
ಅಲಂಬುಸೋ ರಾಕ್ಷಸೇಂದ್ರಃ ಸಹಸಾ ಪಕ್ಷಿರಾಡಿವ ॥ ೬೩ ॥

ರಾಕ್ಷಸಶ್ರೇಷ್ಠನಾದ ಅಲಂಬುಸನು ಗದಾಪ್ರಹಾರ ಪೀಡಿತನಾಗಿ ಶ್ರೇಷ್ಠವಾದ ಪಕ್ಷಿಯಂತೆ ತಕ್ಷಣ ಆಕಾಶದಲ್ಲಿ ಮೇಲಕ್ಕೆ ಹಾರಿದನು.

ಘಟೋತ್ಕಚೋಽಪ್ಯಸಂಭ್ರಾಂತಃ ಖಡ್ಗಪಾಣಿರಥೋತ್ಪತತ್ ।
ತತೋ ವೇಗೇನ ಮಹತಾ ವಿವರ್ಷಿಷುರಿವಾಂಬುದಃ ॥ ೬೪ ॥

ಘಟೋತ್ಕಚನೂ ಕೂಡ ಗಾಬರಿಯಿಲ್ಲದೆ ಕೈಯಲ್ಲಿ ಖಡ್ಗವನ್ನು ಹಿಡಿದು ಮಳೆಯನ್ನು ಸುರಿಸಲಿರುವ ಮೋಡದಂತೆ ವೇಗದಿಂದ ಮೇಲಕ್ಕೆ ಹಾರಿದನು.

ತಮಾಪತಂತಂ ಸಂಪ್ರೇಕ್ಷ್ಯ ಕೈರ್ಮೀರೀ ರಾಕ್ಷಸೋತ್ತಮಃ ।
ಅಭಿದುದ್ರಾವ ವೇಗೇನ ಸಿಂಹಃ ಸಿಂಹಮಿವ ಸ್ಥಿತಮ್ ॥ ೬೫ ॥

ಅವನು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ರಾಕ್ಷಸಶ್ರೇಷ್ಠನೂ, ಕಿರ್ಮೀರ ಪುತ್ರನೂ ಆದ ಅಲಂಬುಸನು ಸಿಂಹವು ಸಿಂಹದ ಮೇಲೆ ಎರಗುವಂತೆ ಅವನ ಕಡೆಗೆ ಶೀಘ್ರವಾಗಿ ಓಡಿ ಬಂದನು.

ದಕ್ಷಿಣೇನಾಸಿಮುದ್ಯಮ್ಯ ವಕ್ಷಃ ಪ್ರಚ್ಛಾದ್ಯ ಚರ್ಮಣಾ ।
ಅಭಿದುದ್ರಾವ ವೇಗೇನ ವೇಗವಂತಂ ಘಟೋತ್ಕಚಃ ॥ ೬೬ ॥

ಘಟೋತ್ಕಚನು ತನ್ನ ಬಲಗೈಯಿಂದ ಖಡ್ಗವನ್ನು ಎತ್ತಿ, ಎಡಗೈಯಿಂದ ಗುರಾಣಿಯಿಂದ ತನ್ನ ಎದೆಯನ್ನು ರಕ್ಷಿಸಿ ವೇಗಶಾಲಿಯಾದ ಅಲಂಬುಸನ ಕಡೆಗೆ ವೇಗವಾಗಿ ಓಡಿಬಂದನು.

ತಾವುಭೌ ವೇಗಸಂರಬ್ಧಾವಲಂಬುಸಘಟೋತ್ಕಚೌ ।
ಅನ್ಯೋನ್ಯಸ್ಯ ತಥೈವೋರೂ ಸಮಾಜಘ್ನತುರಂಜಸಾ ॥ ೬೭ ॥

ವೇಗಶಾಲಿಗಳೂ ಮತ್ತು ಕೋಪಗೊಂಡವರೂ ಆದ ಅಲಂಬುಸ-ಘಟೋತ್ಕಚ ಇಬ್ಬರೂ ಪರಸ್ಪರವಾಗಿ ತೊಡೆಗಳಿಗೆ ಹೊಡೆದರು.

ಅನ್ಯೋನ್ಯಸ್ಯಾಭಿಘಾತೇನ ತಯೋ ರಾಕ್ಷಸಸಿಂಹಯೋಃ ।
ಶೈಲೇನಾಭಿಹತಸ್ಯೇವ ಶೈಲಸ್ಯಾಭೂನ್ಮಹಾಸ್ವನಃ ॥ ೬೮ ॥

ಆ ರಾಕ್ಷಸಶ್ರೇಷ್ಠರು ಪರಸ್ಪರವಾಗಿ ಹೊಡೆದಾಗ ಒಂದು ಬೆಟ್ಟವನ್ನು ಇನ್ನೊಂದು ಬೆಟ್ಟದಿಂದ ಹೊಡೆದಂತೆ ಮಹಾಶಬ್ದವುಂಟಾಯಿತು.

ತತೋऽಪಸೃತ್ಯ ಸಹಸಾ ಪುನರಾಪೇತತುರ್ಭೃಶಮ್ ।
ಚರಂತಾವಸಿಮಾರ್ಗಾಂಸ್ತಾನ್ ವಿವಿಧಾನ್ ರಾಕ್ಷಸೋತ್ತಮೌ ॥ ೬೯ ॥

ಆನಂತರ ಇಬ್ಬರೂ ಹಿಂದಕ್ಕೆ ಸರಿದು ರಾಕ್ಷಸಶ್ರೇಷ್ಠರಾದ ಅವರು ವಿಧವಿಧವಾದ ಖಡ್ಗ ಮಾರ್ಗಗಳಲ್ಲಿ ಸಂಚರಿಸುತ್ತಾ ಪರಸ್ಪರವಾಗಿ ಎರಗಿದರು.

ತಯೋರ್ಗಾತ್ರೇಷು ಪತಿತಾವಸೀ ಸನ್ನೌ ನಿಪೇತತುಃ ।
ವೇಗೋತ್ಪ್ಲವೇ ಮಘವತಾ ವಜ್ರೌ ಶೈಲತಟೇಷ್ವಿವ ॥ ೭೦ ॥

ಅವರ ಶರೀರಗಳಲ್ಲಿ ಬಿದ್ದ ಖಡ್ಗಗಳು ಇಂದ್ರನು ವೇಗದಿಂದ ಪರ್ವತ ತಟದಲ್ಲಿ ಪ್ರಯೋಗಿಸಿದ ವಜ್ರದಂತೆ ಪುನಃ ಪುನಃ ಹೊಡೆಯುವುದರಿಂದ ನಾಶವನ್ನು ಹೊಂದಿ ಬಿದ್ದವು.

ತತಃ ಸೈನ್ಯಾನಿ ದದೃಶುಃ ತದ್ ಯುದ್ಧಮತಿದಾರುಣಮ್ ।
ಯುದ್ಧಂ ತಯೋ ರಾಕ್ಷಸಯೋರಾಮಿಷೇ ಶ್ಯೇನಯೋರಿವ ॥ ೭೧ ॥

ಮಾಂಸದ ಸಲುವಾಗಿ ಹೊಡೆದಾಡುವ ಗಿಡುಗಗಳಂತೆ ಅವರಿಬ್ಬರ ನಡುವೆ ನಡೆದ ಬಹಳ ದಾರುಣವಾದ ಯುದ್ಧವನ್ನು ಸೈನ್ಯಗಳು ನೋಡಿದವು.

ತತೋ ಲೋಹಿತರಕ್ತಾಕ್ಷಾವುಭೌ ತೌ ರಾಕ್ಷಸೋತ್ತಮೌ ।
ಅಥೈಕ್ಷೇತಾಂ ತು ರಾಜೇಂದ್ರ ಸಂಧ್ಯಾರಕ್ತಾವಿವಾಂಬುದೌ ॥ ೭೨ ॥

ಆಗ ರಕ್ತದಂತೆ ಕೆಂಪಾದ ಕಣ್ಣುಳ್ಳ ಆ ಇಬ್ಬರು ರಾಕ್ಷಸಶ್ರೇಷ್ಠರು ಎಲೈ ರಾಜೇಂದ್ರನೇ, ಸಂಧ್ಯಾಕಾಲದ ರಕ್ತವರ್ಣದ ಮೋಡಗಳಂತೆ ಕಂಡುಬಂದರು.

ಚಕ್ರಾತೇ ಶ್ಯೇನವಚ್ಚೈವ ಮಂಡಲಾನಿ ಸಹಸ್ರಶಃ ।
ಉಭೌ ನಿಸ್ತ್ರಿಂಶಹಸ್ತೌ ತೌ ಸಪಕ್ಷಾವಿವ ಪಕ್ಷಿಣೌ ॥ ೭೩ ॥

ಅವರು ಕೈಯಲ್ಲಿ ಖಡ್ಗವನ್ನು ಹಿಡಿದು, ರೆಕ್ಕೆಯನ್ನು ಹೊಂದಿದ ಗಿಡುಗಗಳಂತೆ ಸಹಸ್ರಾರು ಮಂಡಲಗಳಲ್ಲಿ ಸಂಚರಿಸಿದರು.

ತತೋ ಭ್ರಾಮ್ಯ ತು ತಂ ಖಡ್ಗಂ ಪಾಕ್ಯೋಃ ಕಿರ್ಮೀರನಂದನಃ ।
ಚಿಕ್ಷೇಪಾಸ್ಯ ಶಿರೋ ಹರ್ತುಂ ಸ ಚ ತಸ್ಯ ಘಟೋತ್ಕಚಃ ॥ ೭೪ ॥

ಅನಂತರ ಕಿರ್ಮೀರ ಪುತ್ರನಾದ ಅಲಂಬುಸನು ತನ್ನ ಖಡ್ಗವನ್ನು ಎರಡು ಕೈಗಳಿಂದಲೂ ತಿರುಗಿಸಿ ಘಟೋತ್ಕಚನ ಶಿರಸ್ಸನ್ನು ಕತ್ತರಿಸಲು ಅವನ ಮೇಲೆ ಎಸೆದನು. ಘಟೋತ್ಕಚನೂ ಸಹ ಅಲಂಬುಸನ ಶಿರಸ್ಸನ್ನು ಕತ್ತರಿಸಲು ಹಾಗೆಯೇ ಮಾಡಿದನು.

ತಾವಸೀ ಯುಗಪದ್ ದೀಪ್ತೌ ಸಮೇತ್ಯ ವಿಪುಲೌ ಭುವಿ ।
ಪತಿತೌ ತೌ ತು ಬಾಹುಭ್ಯಾಂ ರಾಕ್ಷಸೌ ಸಮಸಜ್ಜತಾಮ್ ॥ ೭೫ ॥

ಆ ಜ್ವಲಿಸುವ ಎರಡು ವಿಸ್ತಾರವಾದ ಖಡ್ಗಗಳು ಒಂದನ್ನೊಂದು ಘಟ್ಟಿಸಿ ಭೂಮಿಯ ಮೇಲೆ ಬಿದ್ದವು. ಆನಂತರ ಆ ರಾಕ್ಷಸರು ಬಾಹುಯುದ್ಧವನ್ನು ಮಾಡಿದರು.

ಶೀರ್ಷಾಘಾತಾಂಸಘಾತೈಶ್ಚ ಪರಸ್ಪರಮಥಾಹತೌ ।
ಪುನರ್ವಿಮಿಶ್ರಿತೌ ವೀರೌ ವ್ಯಾಯುದ್ಧ್ಯೇತೇ ಮುಹುರ್ಮುಹುಃ ॥೭೬॥

ಶಿರಸ್ಸುಗಳನ್ನು ಪರಸ್ಪರವಾಗಿ ಘಟ್ಟಿಸಿ, ಭುಜಸಂಧಿಗಳನ್ನೂ ಪರಸ್ಪರವಾಗಿ ಘಟ್ಟಿಸಿ ಹೊಡೆದಾಡಿದ ವೀರರಾದ ಅವರು ಪುನಃ ಪುನಃ ಮಿಶ್ರಿತರಾಗಿ ಯುದ್ಧವನ್ನು ಮಾಡಿದರು.

ಭೈಮಸೇನಿರಥೋತ್ಕ್ಷಿಪ್ಯ ಸಮಾವಿದ್ಧ್ಯ ಪುನಃಪುನಃ ।
ನಿಷ್ಪಿಪೇಷ ಕ್ಷಿತೌ ಕ್ಷಿಪ್ರಂ ಪೂರ್ಣಕುಂಭಮಿವಾಶ್ಮನಿ ॥ ೭೭ ॥

ಭೀಮಸೇನನ ಪುತ್ರನಾದ ಘಟೋತ್ಕಚನು ಅಲಂಬುಸನನ್ನು ಮೇಲಕ್ಕೆ ಎಸೆದು ಪುನಃ ಪುನಃ ಹೊಡೆದು ಪೂರ್ಣಕುಂಭವನ್ನು ಕಲ್ಲಿನ ಮೇಲೆ ಪುಡಿ ಮಾಡಿದಂತೆ ಶೀಘ್ರವಾಗಿ ಅವನನ್ನು ಭೂಮಿಯ ಮೇಲೆ ಪುಡಿ ಮಾಡಿದನು.

ಬಲಲಾಘವಸಂಪನ್ನಃ ಸಂಪನ್ನೋ ವಿಕ್ರಮೇಣ ಚ ।
ಭೈಮಸೇನಿರಥ ಕ್ರುದ್ಧಃ ಸರ್ವಸೈನ್ಯಸ್ಯ ಪಶ್ಯತಃ ॥ ೭೮ ॥

ಅಸೃಕ್ಪ್ಲುತಸರ್ವಾಂಗಃ ಚೂರ್ಣಿತಾಸ್ಥಿವಿಭೂಷಣಃ ।
ಘಟೋತ್ಕಚೇನ ನಿಷ್ಪಿಷ್ಟೋ ಹತಃ ಸಾಲಕಟಂಕಟಃ ॥ ೭೯ ॥

ಬಲ, ಕ್ಷಿಪ್ರತೆ ಮತ್ತು ಪರಾಕ್ರಮದಿಂದ ಕೂಡಿದ ಭೀಮಸೇನನ ಪುತ್ರನಾದ ಘಟೋತ್ಕಚನು ಸರ್ವಸೈನ್ಯವೂ ನೋಡುತ್ತಿರುವಂತೆ ಕ್ರುದ್ಧನಾಗಿ ಅವನನ್ನು ವಿನಾಶಗೊಳಿಸಲು ಸಾಲಕಟಂಕಟನು (ಸಾಲವೃಕ್ಷದ ಮಧ್ಯೆ ಹೋಗುವಾಗ ಅವನ ಶರೀರವು ಸಾಲವೃಕ್ಷಗಳಿಗೆ ತಾಕಿದಾಗ ಕಟಕಟ ಶಬ್ದವು ಉಂಟಾಗುತ್ತಿದ್ದಿತು. ಅಂತಹ ಅಲಂಬುಸನು) ಘಟೋತ್ಕಚನಿಂದ ಪುಡಿ ಮಾಡಲ್ಪಟ್ಟು, ಅವನ ಶರೀರವೆಲ್ಲವೂ ರಕ್ತದಿಂದ ಸಿಕ್ತವಾಗಿ ಮೂಳೆಗಳೆಲ್ಲವೂ ಮುರಿದು (ಮುರಿದ ಮೂಳೆಗಳೆಂಬ ಆಭರಣದಿಂದ ಭೂಷಿತನಾಗಿ) ಹತನಾದನು.

ಪಾಂಡವಾನಾಂ ತತಃ ಸೇನಾ ತಂ ದೃಷ್ಟ್ವಾ ವಿನಿಪಾತಿತಮ್ ।
ನನಾದ ಸುಮಹಾನಾದಂ ಹರ್ಷವೇಗಸಮಾಪ್ಲುತಾ ॥ ೮೦ ॥

ಅವನು ಹತನಾಗಿ ಬಿದ್ದುದನ್ನು ನೋಡಿ ಪಾಂಡವರ ಸೈನ್ಯವು ಹರ್ಷವೇಗದಿಂದ ತುಂಬ ದೊಡ್ಡನಾದವನ್ನು ಮಾಡಿತು.

ತತೋ ಘಟೋತ್ಕಚೋ ಹತ್ವಾ ತದ್ ರಕ್ಷೋ ವೃತ್ರಸನ್ನಿಭಮ್ ।
ಪುನಃ ಸ ರಥಮಾಸ್ಥಾಯ ವಿಜಗೀಷುರ್ನನಾದ ಹ ॥ ೮೧ ॥

ಘಟೋತ್ಕಚನು ವೃತ್ರನಂತಿದ್ದ ಆ ರಾಕ್ಷಸನನ್ನು ಕೊಂದು ಪುನಃ ಯುದ್ಧವನ್ನು ಮಾಡಿ ಉಳಿದವರನ್ನು ಗೆಲ್ಲಲು ಬಯಸಿ ತನ್ನ ರಥವನ್ನು ಏರಿ ನಾದವನ್ನು ಮಾಡಿದನು.

ತತಃ ಸುಮನಸಃ ಪಾರ್ಥಾ ಹತೇ ತಸ್ಮಿನ್ ನಿಶಾಚರೇ ।
ಚುಕ್ರುಶುಃ ಸಿಂಹನಾದಾಂಶ್ಚ ವಾಸಾಂಸ್ಯಾದುಧುವುಶ್ಚ ಹ ॥ ೮೨ ॥

ಆಗ ಪ್ರಸನ್ನವಾದ ಮನಸ್ಸುಳ್ಳ ಪಾಂಡವರು ಅಲಂಬುಸ ರಾಕ್ಷಸನು ಹತನಾಗುತ್ತಿರಲು ಸಿಂಹನಾದಗಳನ್ನು ಮಾಡಿ ತಮ್ಮ ಉತ್ತರೀಯಗಳನ್ನು ಕೊಡವಿದರು.

ತಾವಕಾಸ್ತು ಹತಂ ದೃಷ್ಟ್ವಾ ರಾಕ್ಷಸೇಂದ್ರಂ ಮಹಾಬಲಮ್ ।
ಅಲಂಬುಸಂ ಭೀಮರೂಪಂ ವಿಶೀರ್ಣಮಿವ ಪರ್ವತಮ್ ॥ ೮೩ ॥

ಹಾಹಾಕಾರಮಕುರ್ವಂತ ಸೈನ್ಯಾನಿ ಚ ವಿಶಾಂಪತೇ ॥ ೮೪ ॥

ಬಿರಿದ ಪರ್ವತದಂತೆ ಮಹಾಬಲನಾದ, ರಾಕ್ಷಸೇಂದ್ರನಾದ ಅಲಂಬುಸನು ಭಯಂಕರ ರೂಪವನ್ನು ಧರಿಸಿ ಹತನಾದುದನ್ನು ನೋಡಿ ಎಲೈ ರಾಜನೇ, ನಿನ್ನ ಸೈನ್ಯಗಳೆಲ್ಲವೂ ಹಾಹಾಕಾರವನ್ನು ಮಾಡಿದವು.

ಜನಾಶ್ಚೈನದ್ ದದೃಶಿರೇ ರಕ್ಷಃ ಕೌತೂಹಲಾನ್ವಿತಾಃ ।
ಯದೃಚ್ಛಯಾ ನಿಪತಿತಂ ಭೂಮಾವಂಗಾರಕಂ ಯಥಾ ॥ ೮೫ ॥

ಉಳಿದ ಜನರೂ ಸಹ ಭಗವದಿಚ್ಛೆಯಿಂದ ಭೂಮಿಯ ಮೇಲೆ ಬಿದ್ದ ಅಂಗಾರಕನಂತಿದ್ದ ಅಲಂಬುಸ ರಾಕ್ಷಸನನ್ನು ಕುತೂಹಲಯುಕ್ತರಾಗಿ ನೋಡಿದರು.

ಘಟೋತ್ಕಚಸ್ತು ತಂ ಹತ್ವಾ ರಕ್ಷೋ ಬಲವತಾಂ ವರಃ ।
ಮುಮೋದ ಬಲವದ್ ರಾಜನ್ ಬಲಂ ಹತ್ವೇವ ವಾಸವಃ ॥ ೮೬ ॥

ಎಲೈ ರಾಜನೇ, ಬಲಿಷ್ಠರಲ್ಲಿ ಶ್ರೇಷ್ಠನಾದ ಘಟೋತ್ಕಚನಾದರೂ ಇಂದ್ರನು ಬಲಾಸುರನನ್ನು ಕೊಂದಂತೆ ಆ ರಾಕ್ಷಸನನ್ನು ಕೊಂದು ಬಹಳ ಸಂತೋಷಗೊಂಡನು.

ನನಾದ ಚಾತೀವ ಚ ಪಾಂಡವಾತ್ಮಜೋ ।
ರಣಾಜಿರೇ ಹೃಷ್ಟಮನಾ ಘಟೋತ್ಕಚಃ ॥ ೮೭ ॥

ಪಾಂಡವಪುತ್ರನಾದ ಘಟೋತ್ಕಚನು ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ರಣರಂಗದಲ್ಲಿ ಬಹಳ ನಾದವನ್ನು ಮಾಡಿದನು.

ಸ ಪೂಜ್ಯಮಾನಃ ಪಿತೃಭಿಃ ಸಬಾಂಧವೈಃ
ಘಟೋತ್ಕಚಃ ಕರ್ಮಣಿ ದುಷ್ಕರೇ ಕೃತೇ ।
ರಿಪುಂ ನಿಹತ್ಯಾಭಿನನಂದ ವೈ ತದಾ
ಹ್ಯಲಂಬುಸಂ ಪಕ್ವಮಲಂಬುಸಂ ಯಥಾ ॥ ೮೮ ॥

ಅಲಂಬುಸ ರಾಕ್ಷಸನು ಹತನಾಗುತ್ತಿರಲು ದುಷ್ಕರವಾದ ಕಾರ್ಯವನ್ನು ಮಾಡಿದ ಘಟೋತ್ಕಚನು ತನ್ನ ಪಿತೃಗಳು ಮತ್ತು ಬಾಂಧವರಿಂದ ಪೂಜಿಸಲ್ಪಟ್ಟನು. ಪಕ್ವವಾದ ಅಲಂಬು ಫಲದಂತೆ ಅಲಂಬುಸ ರಾಕ್ಷಸನನ್ನು ಕೊಂದು ಬಹಳ ಸಂತೋಷಗೊಂಡನು.

ತತೋ ನಿನಾದಃ ಸುಮಹಾನ್ ಸಮುತ್ಥಿತಃ
ಸಶಂಖಿನಾನಾವಿಧಘೋಷನಾದವಾನ್ ।
ನಿಶಮ್ಯ ತಂ ಪ್ರತ್ಯನಂದಂಸ್ತು ಕೌರವಾಃ
ತತೋ ಧ್ವನಿರ್ಭುವನಮನಾದಯದ್ ಭೃಶಮ್ ॥ ೮೯ ॥

ಆಗ ಶಂಖಧ್ವನಿಯಿಂದ ಕೂಡಿದ ನಾನಾವಿಧ ವಾದ್ಯಗಳ ಮಹಾಘೋಷವು ಉಂಟಾಯಿತು. ಆ ನಾದವನ್ನು ಕೇಳಿ ಕೌರವರೂ ಪ್ರತಿಯಾಗಿ ನಾದವನ್ನು ಮಾಡಿದರು. ಆ ನಾದವು ಭೂಮಿಯಲ್ಲೆಲ್ಲಾ ಬಹಳವಾಗಿ ಪ್ರತಿಧ್ವನಿಸಿತು.

ತತೋಽಭಿಗಮ್ಯ ರಾಜಾನಂ ಧರ್ಮಪುತ್ರಂ ಯುಧಿಷ್ಠಿರಮ್ ।
ಸ್ವಕರ್ಮಾವೇದಯನ್ಮೂರ್ಧ್ನಾ ಸಾಂಜಲಿರ್ನಿಪಪಾತ ಹ ॥ ೯೦ ॥

ಅನಂತರ ಘಟೋತ್ಕಚನು ರಾಜನಾದ ಯಮಧರ್ಮಪುತ್ರನಾದ ಯುಧಿಷ್ಠಿರನ ಬಳಿಗೆ ಬಂದು ತಾನು ಮಾಡಿದ ಕರ್ಮವನ್ನು ನಿವೇದಿಸಿ, ಕೈಗಳನ್ನು ಮುಗಿದು ಅವನಿಗೆ ಶಿರಸಾಷ್ಟಾಂಗ ನಮಸ್ಕಾರವನ್ನು ಮಾಡಿದನು.

ಮೂರ್ಧ್ನ್ಯುಪಾಘ್ರಾಯ ತಂ ಜ್ಯೇಷ್ಠಃ ಪರಿಷ್ವಜ್ಯ ಚ ಪಾಂಡವಃ ।
ಪ್ರೀತೋಽಸ್ಮೀತ್ಯಬ್ರವೀದ್ ರಾಜನ್ ಹರ್ಷಾದುತ್ಫುಲ್ಲಲೋಚನಃ॥ ೯೧ ॥

ಎಲೈ ರಾಜನೇ, ಹಿರಿಯನಾದ, ಪಾಂಡುಪುತ್ರನಾದ ಯುಧಿಷ್ಠಿರನು ಅವನನ್ನು ಆಲಿಂಗಿಸಿ ಶಿರಸ್ಸಿನಲ್ಲಿ ಆಘ್ರಾಣಿಸಿ, ಅರಳಿದ ಕಣ್ಣುಳ್ಳವನಾಗಿ ನಾನು ಸಂತೋಷಗೊಂಡಿದ್ದೇನೆ ಎಂದು ಹೇಳಿದನು.

ಘಟೋತ್ಕಚೇನ ನಿಷ್ಪಿಷ್ಟೇ ಮೃತೇ ಸಾಲಕಟಂಕಟೇ ।
ಬಭೂವುರ್ಮುದಿತಾಃ ಸರ್ವೇ ಹತೇ ತಸ್ಮಿನ್ ನಿಶಾಚರೇ ॥ ೯೨ ॥

ಘಟೋತ್ಕಚನಿಂದ ರಾಕ್ಷಸನಾದ ಅಲಂಬುಸನು ಹತನಾಗುತ್ತಿರಲು ಪಾಂಡವರೆಲ್ಲರೂ ಸಂತೋಷಗೊಂಡರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚನವತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತಾರನೆಯ ಅಧ್ಯಾಯ

ಅರ್ಜುನನ ಜೀವಿತವಿಷಯದಲ್ಲಿ ಸಂಶಯವನ್ನು ಹೊಂದಿದ ಯುಧಿಷ್ಠಿರನಿಂದ ಅವನ ಸಹಾಯಕ್ಕಾಗಿ ಹೋಗಲು ಸಾತ್ಯಕಿಗೆ ಒತ್ತಾಯ.

ಧೃತರಾಷ್ಟ್ರಃ

ಭಾರದ್ವಾಜಂ ಕಥಂ ಯುದ್ಧೇ ಯುಯುಧಾನೋ ನ್ಯವಾರಯತ್ ।
ಸಂಜಯಾಚಕ್ಷ್ವ ತತ್ತ್ವೇನ ಕೌತೂಹಲಮತೀವ ಮೇ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ದ್ರೋಣರನ್ನು ಸಾತ್ಯಕಿಯು ಯುದ್ಧದಲ್ಲಿ ಹೇಗೆ ನಿವಾರಿಸಿದನು? ಅದನ್ನು ನನಗೆ ಹೇಳು. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವಿದೆ.

ಸಂಜಯಃ

ಶೃಣು ರಾಜನ್ ಮಹಾಶ್ಚರ್ಯಂ ಸಂಗ್ರಾಮಂ ರೋಮಹರ್ಷಣಮ್ ।
ದ್ರೋಣಸ್ಯ ಪಾಂಡವೈಃ ಸಾರ್ಧಂ ಯುಯುಧಾನಪುರೋಗಮೈಃ ॥ ೨ ॥

ಸಂಜಯ– ಎಲೈ ರಾಜನೇ, ದ್ರೋಣರಿಗೆ ಸಾತ್ಯಕಿಯೇ ಮೊದಲಾದ ಪಾಂಡವರ ಜೊತೆಯಲ್ಲಿನಡೆದ ಆಶ್ಚರ್ಯಕರವಾದ ಮತ್ತು ರೋಮಾಂಚಕಾರಿಯಾದ ಯುದ್ಧವನ್ನು ಕೇಳುವವನಾಗು.

ವಧ್ಯಮಾನಂ ಬಲಂ ದೃಷ್ಟ್ವಾ ಯುಯುಧಾನೇನ ಮಾರಿಷ ।
ಅಭ್ಯದ್ರವತ್ ಸ್ವಯಂ ದ್ರೋಣಃ ಸಾತ್ಯಕಿಂ ಸತ್ಯವಿಕ್ರಮಮ್ ॥ ೩ ॥

ಎಲೈ ಪೂಜ್ಯನೇ, ಸಾತ್ಯಕಿಯಿಂದ ತಮ್ಮ ಸೈನ್ಯವು ವಧಿಸಲ್ಪಡುತ್ತಿರುವುದನ್ನು ನೋಡಿ ದ್ರೋಣರು ಸ್ವತಃ ಸತ್ಯಪರಾಕ್ರಮಿಯಾದ ಸಾತ್ಯಕಿಯ ಕಡೆಗೆ ಮುನ್ನುಗ್ಗಿದರು.

ತಮಾಪತಂತಂ ಸಹಸಾ ಭಾರದ್ವಾಜಂ ಮಹಾರಥಮ್ ।
ಸಾತ್ಯಕಿಃ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮರ್ಪಯತ್ ॥ ೪ ॥

ತನ್ನ ಕಡೆಗೆ ಶೀಘ್ರವಾಗಿ ಮುನ್ನುಗ್ಗುತ್ತಿದ್ದ ಮಹಾರಥರಾದ ದ್ರೋಣರ ಮೇಲೆ ಸಾತ್ಯಕಿಯು ಇಪ್ಪತ್ತೈದು ಸಣ್ಣ ಬಾಣಗಳನ್ನು ಪ್ರಯೋಗಿಸಿದನು.

ದ್ರೋಣೋಽಪಿ ಯುಧಿ ವಿಕ್ರಾಂತೋ ಯುಯುಧಾನಂ ಸಮಾಹಿತಮ್।
ಆವಿಧ್ಯತ್ ಪಂಚಭಿಸ್ತೂರ್ಣಂ ಹೇಮಪುಂಖೈಃ ಶಿಲಾಶಿತೈಃ ॥ ೫ ॥

ಯುದ್ಧದಲ್ಲಿ ಪರಾಕ್ರಮಶಾಲಿಗಳಾದ ದ್ರೋಣರೂ ಸಹ ಸ್ಥಿರವಾಗಿ ಯುದ್ಧ ಮಾಡುತ್ತಿದ್ದ ಯುಯುಧಾನನನ್ನು ಹೇಮಪುಂಖಿಗಳನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಐದು ಬಾಣಗಳಿಂದ ಹೊಡೆದರು.

ತೇ ವರ್ಮ ಭಿತ್ತ್ವಾ ಸುದೃಢಂ ದ್ವಿಷದ್ರುಧಿರಭೋಜನಾಃ ।
ಅಭ್ಯಯುರ್ಧರಣೀಂ ರಾಜನ್ ಶ್ವಸಂತ ಇವ ಪನ್ನಗಾಃ ॥ ೬ ॥

ಎಲೈ ರಾಜನೇ, ಶತ್ರುಗಳ ರಕ್ತವನ್ನು ಪಾನ ಮಾಡುವ ಆ ಬಾಣಗಳು ಸಾತ್ಯಕಿಯ ಕವಚವನ್ನು ದೃಢವಾಗಿ ಭೇದಿಸಿ, ಭುಸುಗುಟ್ಟುವ ಸರ್ಪಗಳಂತೆ ಭೂಮಿಯನ್ನು ಪ್ರವೇಶಿಸಿದವು.

ತಂ ದೀರ್ಘಬಾಹುಃ ಸಂಕ್ರುದ್ಧಃ ತೋತ್ರಾರ್ದಿತ ಇವ ದ್ವಿಪಃ ।
ದ್ರೋಣಂ ಪಂಚಾಶತಾऽವಿದ್ಧ್ಯನ್ನಾರಾಚೈರಗ್ನಿಸನ್ನಿಭೈಃ ॥ ೭ ॥

ದೀರ್ಘಬಾಹುವೂ, ಕೋಪಗೊಂಡವನೂ ಆದ ಸಾತ್ಯಕಿಯು ಅಂಕುಶದಿಂದ ಹೊಡೆಯಲ್ಪಟ್ಟ ಗಜದಂತೆ ದ್ರೋಣರನ್ನು ಅಗ್ನಿಯಂತಿದ್ದ ಇಪ್ಪತ್ತೈದು ನಾರಾಚಗಳಿಂದ ಹೊಡೆದನು.

ಭಾರದ್ವಾಜೋ ರಣೇ ವಿದ್ಧೋ ಯುಯುಧಾನೇನ ಸತ್ವರಮ್ ।
ಸಾತ್ಯಕಿಂ ನವಭಿರ್ಬಾಣೈರ್ಯತಮಾನಮವಿಧ್ಯತ ॥ ೮ ॥

ಯುದ್ಧದಲ್ಲಿ ಸಾತ್ಯಕಿಯಿಂದ ಹೊಡೆಯಲ್ಪಟ್ಟ ದ್ರೋಣರು ಶೀಘ್ರವಾಗಿ ಇನ್ನೂ ಬಾಣಗಳನ್ನು ಪ್ರಯೋಗಿಸಲು ಪ್ರಯತ್ನಿಸುತ್ತಿದ್ದ ಸಾತ್ಯಕಿಯನ್ನು ಒಂಬತ್ತು ಬಾಣಗಳಿಂದ ಹೊಡೆದರು.

ತತಃ ಕ್ರುದ್ಧೋ ಮಹೇಷ್ವಾಸೋ ಭೂಯ ಏವ ಮಹಾರಥಃ ।
ಸಾತ್ವತಂ ಪೀಡಯಾಮಾಸ ವ್ಯಾತೇನ ನತಪರ್ವಣಾಮ್ ॥ ೯ ॥

ಅನಂತರ ಕೋಪಗೊಂಡವರೂ, ಮಹಾಧನುರ್ಧಾರಿಗಳೂ, ಮಹಾರಥರೂ ಆದ ದ್ರೋಣರು ಪುನಃ ಬಾಗಿದ ತುದಿಯುಳ್ಳ ಬಾಣಗಳ ಸಮೂಹದಿಂದ ಸಾತ್ಯಕಿಯನ್ನು ಪೀಡಿಸಿದರು.

ಸ ವಧ್ಯಮಾನಃ ಸಮರೇ ಭಾರದ್ವಾಜೇನ ಸಾತ್ಯಕಿಃ ।
ನಾಭ್ಯಪದ್ಯತ ಕರ್ತವ್ಯಂ ಕಿಂಚಿದೇವ ವಿಶಾಂಪತೇ ॥ ೧೦ ॥

ಎಲೈ ರಾಜನೇ, ರಣರಂಗದಲ್ಲಿ ದ್ರೋಣರಿಂದ ಹೊಡೆಯಲ್ಪಟ್ಟ ಸಾತ್ಯಕಿಯು ಯುದ್ಧದಲ್ಲಿ ಏನು ಮಾಡಬೇಕೆಂದು ತಿಳಿಯದವನಾದನು.

ವಿಷಣ್ಣವದನಶ್ಚಾಪಿ ಯುಯುಧಾನೋऽಭವನ್ನೃಪ ।
ಭಾರದ್ವಾಜಂ ರಣೇ ದೃಷ್ಟ್ವಾ ವಿಸೃಜಂತಂ ಶರಾನ್ ಶಿತಾನ್ ॥ ೧೧ ॥

ಎಲೈ ರಾಜನೇ, ರಣರಂಗದಲ್ಲಿ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಿದ್ದ ದ್ರೋಣರನ್ನು ನೋಡಿ ಸಾತ್ಯಕಿಯು ವಿಷಾದದಿಂದ ಕೂಡಿದ ಮುಖವುಳ್ಳವನಾದನು.

ತಂ ತು ಸಂಪ್ರೇಕ್ಷ್ಯ ತೇ ಪುತ್ರಾಃ ಸೈನಿಕಾಶ್ಚ ವಿಶಾಂಪತೇ ।
ಪ್ರಹೃಷ್ಟಮನಸೋ ಭೂತ್ವಾ ಸಿಂಹವದ್ ವ್ಯನದನ್ ಮುಹುಃ ॥ ೧೨ ॥

ಎಲೈ ರಾಜನೇ, ಅವನನ್ನು ನೋಡಿದ ನಿನ್ನ ಪುತ್ರರು ಮತ್ತು ಸೈನಿಕರು ಸಂತೋಷಗೊಂಡ ಮನಸ್ಸುಳ್ಳವರಾಗಿ ಪುನಃ ಪುನಃ ಸಿಂಹನಾದವನ್ನು ಮಾಡಿದರು.

ತಂ ಶ್ರುತ್ವಾ ನಿನದಂ ಘೋರಂ ಪೀಡ್ಯಮಾನಂ ಚ ಮಾಧವಮ್ ।
ಯುಧಿಷ್ಠಿರೋಽಬ್ರವೀದ್ ರಾಜನ್ ಸರ್ವಸೈನ್ಯಾನಿ ಭಾರತ ॥ ೧೩ ॥

ಸಾತ್ಯಕಿಯು ಪೀಡಿತನಾಗಿ ಕೌರವ ಸೈನ್ಯದಲ್ಲಿ ಅಂತಹ ಘೋರ ನಿನಾದವು ಉಂಟಾಗುತ್ತಿರುವುದನ್ನು ಕೇಳಿದ ಯುಧಿಷ್ಠಿರನು, ಎಲೈ ಭಾರತನೇ, ರಾಜನೇ, ತನ್ನ ಸರ್ವಸೈನ್ಯಗಳನ್ನು ಕುರಿತು ಹೇಳಿದನು.

ಯುಧಿಷ್ಠಿರಃ

ಏಷ ವೃಷ್ಣಿವರೋ ವೀರಃ ಸಾತ್ಯಕಿಃ ಸತ್ಯವಿಕ್ರಮಃ ।
ಗ್ರಸ್ಯತೇ ಯುಧಿ ವೀರೇಣ ಆದಿತ್ಯ ಇವ ರಾಹುಣಾ ।
ಆಗಚ್ಛತಾಭಿದ್ರವತ ಸಾತ್ಯಕಿರ್ಯತ್ರ ಯುದ್ಧ್ಯತೇ ॥ ೧೪ ॥

ಯುಧಿಷ್ಠಿರ– ಸತ್ಯವಿಕ್ರಮನೂ, ವೀರನೂ, ವೃಷ್ಣಿಶ್ರೇಷ್ಠನೂ ಆದ ಸಾತ್ಯಕಿಯು ಸೂರ್ಯನು ರಾಹುವಿನಿಂದ ಗ್ರಸ್ತನಾದಂತೆ ಯುದ್ಧದಲ್ಲಿ ದ್ರೋಣರಿಂದ ನುಂಗಲ್ಪಡುತ್ತಿದ್ದಾನೆ. ಎಲ್ಲರೂ ಬಂದು ಸಾತ್ಯಕಿಯು ಯುದ್ಧ ಮಾಡುತ್ತಿರುವ ಸ್ಥಳಕ್ಕೆ ಶೀಘ್ರವಾಗಿ ಹೋಗಿ.

ಸಂಜಯಃ

ಧೃಷ್ಟದ್ಯುಮ್ನಂ ಚ ಪಾಂಚಾಲ್ಯಮಿದಮಾಹ ಜನಾಧಿಪ ॥ ೧೫ ॥

ದ್ರೋಣಂ ವಾರಯ ಸುಕ್ಷಿಪ್ರಂ ಸಾತ್ಯಕಿಂ ಮಾ ವಧೀದ್ ದ್ವಿಜಃ ।
ಅಭಿದ್ರವ ದ್ರುತಂ ದ್ರೋಣಂ ಕಿನ್ನು ತಿಷ್ಠಸಿ ಪಾರ್ಷತ ॥ ೧೬ ॥

ನ ಪಶ್ಯಸಿ ಭಯಂ ಘೋರಂ ದ್ರೋಣಾನ್ನಃ ಸಮುಪಸ್ಥಿತಮ್ ।
ಅಸೌ ದ್ರೋಣೋ ಮಹೇಷ್ವಾಸೋ ಯುಯುಧಾನೇನ ಸಂಯುಗೇ ।
ಕ್ರೀಡತೇ ಸೂತ್ರಬದ್ಧೇನ ಪಕ್ಷಿಣಾ ಬಾಲಕೋ ಯಥಾ ॥ ೧೭ ॥

ಸಂಜಯ– ಎಲೈ ರಾಜನೇ, ಧೃಷ್ಟದ್ಯುಮ್ನನನ್ನು ಕುರಿತು ಅವನು ಹೀಗೆ ಮಾತನಾಡಿದನು- 'ಬೇಗ ಹೋಗಿ ದ್ರೋಣರನ್ನು ತಡೆ. ಆ ಬ್ರಾಹ್ಮಣರು ಸಾತ್ಯಕಿಯನ್ನು ಕೊಲ್ಲುವುದು ಬೇಡ. ಎಲೈ ಪಾರ್ಷತನೇ, ಏಕೆ ನಿಂತಿದ್ದೀಯೆ? ಶೀಘ್ರವಾಗಿ ದ್ರೋಣರ ಕಡೆಗೆ ಓಡು. ದ್ರೋಣರಿಂದ ಉಂಟಾದ ಘೋರವಾದ ಭಯವನ್ನು ನೀನು ಕಾಣುತ್ತಿಲ್ಲವೇ? ಈ ಮಹಾಧನುರ್ಧಾರಿಗಳಾದ ದ್ರೋಣರು ಬಾಲಕನು ಸೂತ್ರದಿಂದ ಕಟ್ಟಿದ ಪಕ್ಷಿಯ ಜೊತೆಯಲ್ಲಿ ಆಡುವಂತೆ ಯುದ್ಧದಲ್ಲಿ ಸಾತ್ಯಕಿಯ ಜೊತೆಯಲ್ಲಿ ಆಟವಾಡುತ್ತಿದ್ದಾರೆ.

ತತ್ರೈವ ಸರ್ವೇ ಗಚ್ಛಂತು ಭೀಮಸೇನಮುಖಾ ರಥಾಃ ।
ತ್ವಯೈವ ಸಹಸಾ ಯತ್ತಾ ಯುಯುಧಾನರಥಂ ಪ್ರತಿ ॥ ೧೮ ॥

ನಿನ್ನಿಂದಲೇ ಶೀಘ್ರವಾಗಿ ನಿಯಂತ್ರಿಸಲ್ಪಟ್ಟ ಭೀಮಸೇನ ಮೊದಲಾದ ಮಹಾರಥರೆಲ್ಲರೂ ಸಾತ್ಯಕಿಯ ರಥದ ಬಳಿಗೆ ಹೋಗುವವರಾಗಲಿ.

ಪೃಷ್ಠತೋಽನುಗಮಿಷ್ಯಾಮಿ ತ್ವಾಮಹಂ ಸಹಸೈನಿಕಃ ।
ಸಾತ್ಯಕಿಂ ಮೋಕ್ಷಯಿಷ್ಯಾದ್ಯ ಯಮದಂಷ್ಟ್ರಾಂತರಂ ಗತಮ್ ॥ ೧೯ ॥

ನಾನು ನನ್ನ ಸೈನಿಕರ ಜೊತೆಯಲ್ಲಿ ನಿನ್ನ ಹಿಂದೆ ಬರುವೆನು. ಯಮನ ದಂತಗಳ ಮಧ್ಯೆ ಸಿಲುಕಿದಂತಿರುವ ಸಾತ್ಯಕಿಯನ್ನು ಈ ದಿನ ಬಿಡುಗಡೆಗೊಳಿಸು'.

ಸಂಜಯಃ

ಏವಮುಕ್ತ್ವಾ ತತೋ ರಾಜಾ ಸರ್ವಸೈನ್ಯೇನ ಪಾಂಡವಃ ।
ಅಭ್ಯದ್ರವದ್ ರಣೇ ದ್ರೋಣಂ ಯುಯುಧಾನಸ್ಯ ಕಾರಣಾತ್ ॥ ೨೦ ॥

ಸಂಜಯ– ಹೀಗೆ ಹೇಳಿ ಪಾಂಡವನಾದ ಯುಧಿಷ್ಠಿರನು ಸಾತ್ಯಕಿಯನ್ನು ರಕ್ಷಿಸುವ ಸಲುವಾಗಿ ತನ್ನ ಎಲ್ಲ ಸೈನ್ಯದ ಜೊತೆಯಲ್ಲಿ ದ್ರೋಣರ ಕಡೆಗೆ ಧಾವಿಸಿದನು.

ತತ್ರಾರಾವೋ ಮಹಾನಾಸೀದ್ ದ್ರೋಣಮೇಕಂ ಯುಯುತ್ಸತಾಮ್ ।
ಪಾಂಡವಾನಾಂ ಚ ಭದ್ರಂ ತೇ ಸೃಂಜಯಾನಾಂ ಚ ಸರ್ವಶಃ ॥ ೨೧ ॥

ನಿನಗೆ ಮಂಗಳವಾಗಲಿ. ಪಾಂಡವರು ಮತ್ತು ಸೃಂಜಯರು ದ್ರೋಣರೊಬ್ಬರ ಜೊತೆಯಲ್ಲಿಯುದ್ಧವನ್ನು ಮಾಡಲು ಬಯಸಿ ಹೊರಡುತ್ತಿದ್ದಾಗ ಎಲ್ಲಕಡೆಗಳಲ್ಲಿಯೂ ಮಹಾನಾದ ಉಂಟಾಯಿತು.

ತೇ ಸಮೇತ್ಯ ನರವ್ಯಾಘ್ರಾ ಭಾರದ್ವಾಜಂ ಮಹಾರಥಮ್ ।
ಅಭ್ಯವರ್ಷನ್ ಶರೈಸ್ತೀಕ್ಷ್ಣೈಃ ಕಂಕಬರ್ಹಣವಾಜಿತೈಃ ॥ ೨೨ ॥

ನರವ್ಯಾಘ್ರರಾದ ಅವರು ಮಹಾರಥರಾದ ದ್ರೋಣರನ್ನು ಸಮೀಪಿಸಿ, ಕಂಕ ಮೊದಲಾದ ಪಕ್ಷಿಗಳ ಗರಿಗಳನ್ನು ಹೊಂದಿದ ತೀಕ್ಷ್ಣವಾದ ಬಾಣಗಳ ಮಳೆಯನ್ನು ಅವರ ಮೇಲೆ ಸುರಿಸಿದರು.

ಸ್ವಯನ್ನೇವ ತು ತಾನ್ ವೀರೋ ದ್ರೋಣಃ ಪ್ರತ್ಯಗ್ರಹೀತ್ ಸ್ವಯಮ್ ।
ಅತಿಥೀನಾಗತಾನ್ ಯದ್ವದ್ ಆಸನೇನೋದಕೇನ ಚ ॥ ೨೩ ॥

ಆಗತರಾದ ಅತಿಥಿಗಳನ್ನು ಆಸನೋದಕಗಳಿಂದ ಸ್ವೀಕರಿಸುವಂತೆ ವೀರರಾದ ದ್ರೋಣರು ನಗುತ್ತಲೇ ಆ ಎಲ್ಲ ವೀರರನ್ನೂ (ವೀರರ ಬಾಣಗಳನ್ನು) ಸ್ವತಃ ಸ್ವೀಕರಿಸಿದರು.

ತರ್ಪಿತಾಸ್ತೇ ಶರೈಸ್ತಸ್ಯ ಭಾರದ್ವಾಜಸ್ಯ ಧನ್ವಿನಃ ।
ಆತಿಥೇಯಂ ಗೃಹಂ ಪ್ರಾಪ್ಯ ತರ್ಪ್ಯಂತೇಽತಿಥಯೋ ಯಥಾ ॥ ೨೪ ॥

ಯಜಮಾನನ ಮನೆಗೆ ಬಂದ ಬಾಯಾರಿದ ಅತಿಥಿಗಳನ್ನು ತೃಪ್ತಿಗೊಳಿಸುವಂತೆ ಧನುರ್ಧಾರಿಗಳಾದ ಪಾಂಡವವೀರರು ಆ ದ್ರೋಣರ ಬಾಣಗಳಿಂದ ತೃಪ್ತಿಗೊಳಿಸಲ್ಪಟ್ಟರು.

ಭಾರದ್ವಾಜಂ ಚ ತೇ ಯುದ್ಧೇ ನಾಶಕನ್ ಪ್ರತಿವೀಕ್ಷಿತುಮ್ ।
ಮಧ್ಯಂದಿನಮನುಪ್ರಾಪ್ತಂ ಸಹಸ್ರಾಂಶುಮಿವ ಪ್ರಭೋ ॥ ೨೫ ॥

ಎಲೈ ಪ್ರಭುವೇ, ಮಧ್ಯಾಹ್ನದಲ್ಲಿ ಇರುವ ಸೂರ್ಯನನ್ನು ನೋಡಲು ಸಾಧ್ಯವಾಗದಂತೆ ಯುದ್ಧದಲ್ಲಿ ದ್ರೋಣರನ್ನು ನೋಡಲು ಪಾಂಡವರ ಸೈನ್ಯದಲ್ಲಿ ಯಾರಿಗೂ ಸಾಧ್ಯವಾಗಲಿಲ್ಲ.

ತಾಂಸ್ತು ಸರ್ವಾನ್ ಮಹೇಷ್ವಾಸಾನ್ ದ್ರೋಣಃ ಶಸ್ತ್ರಭೃತಾಂ ವರಃ ।
ಆತಾಪಯಚ್ಛರವ್ರಾತೈರ್ಗಭಸ್ತಿಭಿರಿವಾಂಶುಮಾನ್ ॥ ೨೬ ॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು, ತನ್ನ ಕಿರಣಗಳಿಂದ ಸೂರ್ಯನು ಎಲ್ಲರನ್ನೂ ತಾಪಗೊಳಿಸುವಂತೆ ತಮ್ಮ ಬಾಣಗಳ ಸಮೂಹದಿಂದ ಎಲ್ಲ ಮಹಾಧನುರ್ಧಾರಿಗಳನ್ನೂ ಸಂತಾಪಗೊಳಿಸಿದರು.

ವಧ್ಯಮಾನಾ ರಣೇ ರಾಜನ್ ಪಾಂಡವಾಃ ಸೃಂಜಯಾಸ್ತಥಾ ।
ತ್ರಾತಾರಂ ನಾಧ್ಯಗಚ್ಛಂತ ಪಂಕೇ ಮಗ್ನಾ ಯಥಾ ಗಜಾಃ ॥ ೨೭ ॥

ಎಲೈ ರಾಜನೇ, ದ್ರೋಣರ ಬಾಣಗಳಿಂದ ಹೊಡೆಯಲ್ಪಟ್ಟ ಪಾಂಡವರು ಮತ್ತು ಸೃಂಜಯರು ಕೆಸರಲ್ಲಿ ಮುಳುಗಿದ ಗಜಗಳಂತೆ ಯಾವ ರಕ್ಷಕನನ್ನೂ ಕಾಣಲಿಲ್ಲ.

ತಸ್ಯ ದ್ರೋಣಸ್ಯ ದೃಶ್ಯಂತೇ ಪ್ರಭವಂತೋ ಮಹಾಶರಾಃ ।
ಗಭಸ್ತಯ ಇವಾರ್ಕಸ್ಯ ಪ್ರತಪಂತಃ ಸಮಂತತಃ ॥ ೨೮ ॥

ತಮ್ಮ ಕಾರ್ಯವನ್ನು ಮಾಡುವ ದ್ರೋಣರ ಮಹಾಬಾಣಗಳು ಎಲ್ಲಕಡೆಗಳಲ್ಲಿಯೂ ತಾಪಗೊಳಿಸುವ ಸೂರ್ಯನ ಕಿರಣಗಳಂತೆ ಕಂಡುಬಂದವು.

ತಸ್ಮಿನ್ ದ್ರೋಣೇನ ನಿಹತಾಃ ಪಾಂಚಾಲಾಃ ಪಂಚವಿಂಶತಿಃ ।
ಮಹಾರಥಸಮಾಖ್ಯಾತಾ ಧೃಷ್ಟದ್ಯುಮ್ನಸ್ಯ ಸಮ್ಮತಾಃ ॥ ೨೯ ॥

ಆ ರಣರಂಗದಲ್ಲಿ ಧೃಷ್ಟದ್ಯುಮ್ನನಿಗೆ ಸಮ್ಮತರಾದ, ಮಹಾರಥರೆಂದು ಪರಿಗಣಿತರಾದ ಇಪ್ಪತ್ತೈದು ಮಂದಿ ಪಾಂಚಾಲರು ದ್ರೋಣರಿಂದ ಹತರಾದರು.

ಪಾಂಡೂನಾಂ ಸರ್ವಸೈನ್ಯೇಷು ಪಾಂಚಾಲಾನಾಂ ತಥೈವ ಚ ।
ದ್ರೋಣಂ ಸ್ಮ ದದೃಶುಃ ಶೂರಾ ವಿನಿಘ್ನಂತಂ ವರಾನ್ ವರಾನ್ ॥೩೦॥

ಶೂರರಾದವರು ಪಾಂಡವರ ಮತ್ತು ಪಾಂಚಾಲರ ಸೈನ್ಯದಲ್ಲಿ ಎಲ್ಲಕಡೆಗಳಲ್ಲಿಯೂ ಶ್ರೇಷ್ಠರಾದವರನ್ನು ಆರಿಸಿ, ಆರಿಸಿ ಕೊಲ್ಲುತ್ತಿದ್ದ ದ್ರೋಣರನ್ನು ನೋಡಿದರು.

ಕೇಕಯಾನಾಂ ಶತಂ ಹತ್ವಾ ವಿದ್ರಾವ್ಯ ಚ ಸಮಂತತಃ ।
ದ್ರೋಣಸ್ತಸ್ಥೌ ಮಹಾರಾಜ ವ್ಯಾತ್ತಾನನ ಇವಾಂತಕಃ ॥ ೩೧ ॥

ಎಲೈ ಮಹಾರಾಜನೇ, ದ್ರೋಣರು ಕೇಕಯರ ನೂರು ವೀರರನ್ನು ಕೊಂದು, ಉಳಿದವರನ್ನು ಎಲ್ಲ ಕಡೆಗಳಲ್ಲಿಯೂ ಓಡಿಸಿ, ಬಾಯಿ ತೆರೆದ ಮೃತ್ಯುವಿನಂತೆ ರಣರಂಗದಲ್ಲಿನಿಂತರು.

ಪಾಂಚಾಲಾನ್ ಸೃಂಜಯಾನ್ ಮಾತ್ಸ್ಯಾನ್ ಕೇಕಯಾನ್ ಪಾಂಡವಾನಪಿ ।
ದ್ರೋಣೋಽಜಯನ್ಮಹಾಬಾಹುಃ ಶತಶೋಽಥ ಸಹಸ್ರಶಃ ॥ ೩೨ ॥

ಮಹಾಬಾಹುಗಳಾದ ದ್ರೋಣರು ಪಾಂಚಾಲರನ್ನೂ, ಸೃಂಜಯರನ್ನೂ, ಮಾತ್ಸ್ಯರನ್ನೂ, ಕೇಕಯರನ್ನೂ ಮತ್ತು ಪಾಂಡವರನ್ನೂ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಜಯಿಸಿದರು.

ತೇಷಾಂ ಸಮಭವಚ್ಛಬ್ದೋ ವಧ್ಯತಾಂ ದ್ರೋಣಸಾಯಕೈಃ ।
ವನೌಕಸಾಮಿವಾರಣ್ಯೇ ದಹ್ಯತಾಂ ಧೂಮಕೇತುನಾ ॥ ೩೩ ॥

ದ್ರೋಣರ ಬಾಣಗಳಿಂದ ವಧಿಸಲ್ಪಡುವ ಅವರ ಶಬ್ದವು ಅರಣ್ಯದಲ್ಲಿ ಅಗ್ನಿಗೆ ಸಿಲುಕಿ ದಹಿಸಲ್ಪಡುವ ವನವಾಸಿ ಪ್ರಾಣಿಗಳ ಶಬ್ದದಂತೆ ಇದ್ದಿತು.

ತತ್ರ ದೇವಾಃ ಸಗಂಧರ್ವಾಃ ಪಿತರಶ್ಚಾಬ್ರುವನ್ ನೃಪ ।
ಏತೇ ದ್ರವಂತಿ ಪಾಂಚಾಲಾಃ ಪಾಂಡವಾಃ ಸಹಸೈನಿಕಾಃ ॥ ೩೪ ॥

ಎಲೈ ರಾಜನೇ, ಆಗ ಗಂಧರ್ವರಿಂದ ಸಹಿತರಾದ ದೇವತೆಗಳು ಮತ್ತು ಪಿತೃಗಳು ಈ ಪಾಂಚಾಲರು ಮತ್ತು ಪಾಂಡವರು ತಮ್ಮ ಸೈನಿಕರ ಜೊತೆಯಲ್ಲಿ ಓಡುತ್ತಿದ್ದಾರೆ ಎಂದು ಹೇಳಿದರು.

ಸಂಜಯಃ

ತಂ ತಥಾ ಸಮರೇ ದ್ರೋಣಂ ನಿಘ್ನಂತಂ ಸೋಮಕಾನ್ ರಣೇ ।
ತಂ ಚಾಪ್ಯಭಿಯಯುಃ ಕೇಚಿದಪರೇ ನೈವ ವಿವ್ಯಧುಃ ॥ ೩೫ ॥

ಆ ರೀತಿಯಲ್ಲಿ ಸೋಮಕರನ್ನು ಕೊಲ್ಲುತ್ತಿದ್ದ ದ್ರೋಣರನ್ನು ನೋಡಿ ಕೆಲವು ಯೋಧರು ಅವರ ಕಡೆಗೆ ಹೋಗಲೇ ಇಲ್ಲ. ಇನ್ನು ಕೆಲವರು ದ್ರೋಣರ ಮೇಲೆ ಶಸ್ತ್ರಪ್ರಯೋಗವನ್ನೇ ಮಾಡಲಿಲ್ಲ.

ವರ್ತಮಾನೇ ತಥಾ ರೌದ್ರೇ ತಸ್ಮಿನ್ ವೀರವರಕ್ಷಯೇ ।
ಅಶೃಣೋತ್ ಸಹಸಾ ಪಾರ್ಥಃ ಪಾಂಚಜನ್ಯಸ್ಯ ನಿಸ್ವನಮ್ ॥ ೩೬ ॥

ಶ್ರೇಷ್ಠರಾದ ವೀರರಿಗೆ ವಿನಾಶವನ್ನುಂಟು ಮಾಡುವ ಆ ಯುದ್ಧವು ಭಯಂಕರವಾಗಿ ನಡೆಯುತ್ತಿರಲು ಯುಧಿಷ್ಠಿರನು ಇದಕ್ಕಿದಂತೆಯೇ ಪಾಂಚಜನ್ಯದ ಘೋಷವನ್ನು ಕೇಳಿದನು.

ಪೂರಿತೇ ವಾಸುದೇವೇನ ಶಂಖಿರಾಜೇ ಮಹಾತ್ಮನಾ ।
ಯುದ್ಧ್ಯಮಾನೇಷು ವೀರೇಷು ಸೈಂಧವಸ್ಯ ಚ ರಕ್ಷಿಷು ॥ ೩೭ ॥

ನದತ್ಸು ಧಾರ್ತರಾಷ್ಟ್ರೇಷು ವಿಜಯಸ್ಯ ರಥಂ ಪ್ರತಿ ।
ಗಾಂಡೀವಸ್ಯ ಚ ನಿರ್ಘೋಷೇ ವಿಪ್ರನಷ್ಟೇ ಸಮಂತತಃ ॥ ೩೮ ॥

ಕಶ್ಮಲಾಭಿಹತೋ ರಾಜಾ ಚಿಂತಯಾಮಾಸ ಪಾಂಡವಃ ॥ ೩೯ ॥

ಮಹಾತ್ಮನಾದ ಕೃಷ್ಣನು ತನ್ನ ಶ್ರೇಷ್ಠವಾದ ಶಂಖವನ್ನು ಊದುತ್ತಿರಲು, ಸೈಂಧವನ ರಕ್ಷಕರಾದ ವೀರರು ಯುದ್ಧವನ್ನು ಮಾಡುತ್ತಿರಲು, ಅರ್ಜುನನ ರಥದ ಬಳಿ ಕೌರವರು ಸಿಂಹನಾದವನ್ನು ಮಾಡುತ್ತಿರಲು, ಗಾಂಡೀವದ ಘೋಷವು ಎಲ್ಲಿಯೂ ಕೇಳಿ ಬರದಿರಲು, ವಿಷಾದಕ್ಕೆ ಒಳಗಾದ ಯುಧಿಷ್ಠಿರನು ಚಿಂತಿಸಿದನು.

ಯುಧಿಷ್ಠಿರಃ

ನ ನೂನಂ ಸ್ಪಷ್ಟ ಪಾರ್ಥಸ್ಯ ಯಥಾ ನದತಿ ಶಂಖಿರಾಟ್ ।
ಕೌರವಾಶ್ಚ ಯಥಾ ಹೃಷ್ಟಾ ವಿನದಂತಿ ಮುಹುರ್ಮುಹುಃ ।
ವ್ಯಕ್ತಮದ್ಯ ವಿನಶ್ಯಂತೇ ಸರ್ವಲೋಕಮಹಾರಥಾಃ ॥ ೪೦ ॥

ಯುಧಿಷ್ಠಿರ– ಶ್ರೇಷ್ಠವಾದ ಕೃಷ್ಣನ ಶಂಖವು ಘೋಷವನ್ನು ಮಾಡುವುದನ್ನು ಕೇಳಿದರೆ ಮತ್ತು ಕೌರವರೂ ಸಂತೋಷದಿಂದ ಪುನಃ ಪುನಃ ಸಿಂಹನಾದವನ್ನು ಮಾಡುವುದನ್ನು ಕೇಳಿದರೆ ಅರ್ಜುನನಿಗೆ ಕ್ಷೇಮವಿಲ್ಲವೆಂದು ತೋರುತ್ತದೆ. ಖಂಡಿತವಾಗಿ ಈ ದಿನ ಸರ್ವಲೋಕ ಮಹಾರಥರು ನಾಶವನ್ನು ಹೊಂದುತ್ತಾರೆ.

ಸಂಜಯಃ

ಶ್ರುತ್ವಾ ತು ನಿನದಂ ಘೋರಂ ಪಾಂಚಜನ್ಯಸ್ಯ ಮಾರಿಷ ।
ಚಿಂತಯಿತ್ವಾ ಭೃಶಂ ರಾಜಾ ವ್ಯಾಕುಲೇನಾಂತರಾತ್ಮನಾ ॥ ೪೧ ॥

ಅಜಾತಶತ್ರುಃ ಶೈನೇಯಮಭ್ಯಭಾಷತ ಸಾತ್ಯಕಿಮ್ ।
ಬಾಷ್ಪಗದ್ಗದಯಾ ವಾಚಾ ಮುಹ್ಯಮಾನೋ ಮುಹುರ್ಮುಹುಃ ॥೪೨॥

ಕೃತ್ಯಸ್ಯಾನಂತರಾಪೇಕ್ಷೀ ಶೈನೇಯಂ ಶಿನಿಪುಂಗವಮ್ ॥ ೪೩ ॥

ಸಂಜಯ– ಎಲೈ ಪೂಜ್ಯನೇ, ಪಾಂಚಜನ್ಯ ಶಂಖದ ಘೋರ ನಾದವನ್ನು ಕೇಳಿ ವ್ಯಾಕುಲಗೊಂಡ ಮನಸ್ಸಿನಿಂದ ಬಹಳವಾಗಿ ಚಿಂತಿಸಿ ರಾಜನಾದ, ಅಜಾತಶತ್ರುವಾದ ಯುಧಿಷ್ಠಿರನು ಬಾಷ್ಪಗದ್ಗದವಾದ ಮಾತುಗಳಿಂದ, ಪುನಃ ಪುನಃ ಮೋಹಕ್ಕೆ ಒಳಗಾಗುತ್ತಾ, ಮುಂದೆ ಮಾಡಬೇಕಾದ ಕಾರ್ಯವನ್ನು ಯೋಚಿಸುವವನಾಗಿ ಶಿನಿಶ್ರೇಷ್ಠನೂ, ಶಿನಿಯ ಪೌತ್ರನೂ ಆದ ಸಾತ್ಯಕಿಯನ್ನು ಕುರಿತು ಮಾತನಾಡಿದನು.

ಯುಧಿಷ್ಠಿರಃ

ಯೋಽಯಂ ಧರ್ಮಃ ಪುರಾ ಸೃಷ್ಟಃ ಸದ್ಭಿಃ ಶೈನೇಯ ಶಾಶ್ವತಃ ।
ಸಾಂಪರಾಯೇ ಸುಹೃತ್ಕೃತ್ಯೇ ತಸ್ಯ ಕಾಲೋಽಯಮಾಗತಃ ॥ ೪೪ ॥

ಯುಧಿಷ್ಠಿರ– ಎಲೈ ಶೈನೇಯನೇ, ಯುದ್ಧದಲ್ಲಿ ಸುಹೃದಯರಿಗೆ ಸಹಾಯ ಮಾಡಬೇಕೆಂಬ ಯಾವ ಶಾಶ್ವತವಾದ ಧರ್ಮವು ಸಜ್ಜನರಿಂದ ಹಿಂದೆಯೇ ನಿರೂಪಿಸಲ್ಪಟ್ಟಿದ್ದೆಯೋ ಅದನ್ನು ಆಚರಿಸುವ ಕಾಲವು ಈಗ ಬಂದಿದೆ.

ಸರ್ವೇಷ್ವಪಿ ಚ ಯೋಧೇಷು ಚಿಂತಯನ್ ಶಿನಿಪುಂಗವ ।
ತ್ವತ್ತಃ ಸುಹೃತ್ತಮಂ ಕಂಚಿನ್ನಾಭಿಜಾನಾಮಿ ಸಾತ್ವತ ॥ ೪೫ ॥

ಎಲೈ ಶಿನಿಪುಂಗವನೇ, ಸಾತ್ವತನೇ, ನಾನು ಎಷ್ಟು ವಿಚಾರ ಮಾಡಿದರೂ ಎಲ್ಲ ಯೋಧರಲ್ಲಿ ನಿನಗಿಂತಲೂ ಸುಹೃದಯನಾದ ಯಾವನೂ ನನಗೆ ಕಾಣುತ್ತಿಲ್ಲ.

ಪ್ರಿಯಃ ಪ್ರೀತಮನಾ ನಿತ್ಯಂ ಯಶ್ಚ ನಿತ್ಯಮನುವ್ರತಃ ।
ಸ ಕಾರ್ಯೇ ಸಾಂಪರಾಯೇ ವಾ ನಿಯೋಜ್ಯ ಇತಿ ಮೇ ಮತಿಃ ॥೪೬॥

ಪ್ರಿಯನೂ, ನಿತ್ಯವೂ ಸಂತೋಷಗೊಂಡ ಮನಸ್ಸುಳ್ಳವನೂ ಮತ್ತು ನಿತ್ಯವೂ ಅನುವ್ರತನಾದವನು ಯುದ್ಧದಲ್ಲಾಗಲೀ ಅಥವಾ ಬೇರೆ ಕಾರ್ಯದಲ್ಲಾಗಲೀ ನಿಯೋಜಿಸಲ್ಪಡಬೇಕು ಎಂದು ನನ್ನ ಅಭಿಪ್ರಾಯ.

ಯಥಾ ಹಿ ಕೇಶವೋ ನಿತ್ಯಂ ಪಾಂಡವಾನಾಂ ಪರಾಯಣಮ್ ।
ತಥಾ ತ್ವಮಪಿ ವಾರ್ಷ್ಣೇಯ ಕೃಷ್ಣತುಲ್ಯಪರಾಕ್ರಮಃ ॥ ೪೭ ॥

ಎಲೈ ವಾರ್ಷ್ಣೇಯನೇ, ಕೇಶವನು ಹೇಗೆ ಯಾವಾಗಲೂ ಪಾಂಡವರಿಗೆ ದೊಡ್ಡ ಆಶ್ರಯನಾಗಿದ್ದಾನೆಯೋ ಹಾಗೆಯೇ ಅವನಿಗೆ ಸಮಾನವಾದ ಪರಾಕ್ರಮವುಳ್ಳ ನೀನೂ ಸಹ ಪಾಂಡವರಿಗೆ ಆಶ್ರಯನಾಗಿದ್ದೀಯೆ.

ತ್ವಯಿ ಭಾರಂ ಸಮಾಧಾಸ್ಯೇ ತ್ವಂ ತಂ ವೋಢುಮಿಹಾರ್ಹಸಿ ।
ಅಭಿಪ್ರಾಯಂ ಚ ಮೇ ನಿತ್ಯಂ ನ ಮೃಷಾ ಕರ್ತುಮರ್ಹಸಿ ॥ ೪೮ ॥

ನಾನು ನಿನ್ನ ಮೇಲೆ ದೊಡ್ಡ ಭಾರವನ್ನು ಹೇರುತ್ತಿದ್ದೇನೆ. ನೀನು ಅದನ್ನು ಹೊರಬೇಕು. ನನ್ನ ಅಭಿಪ್ರಾಯವನ್ನು ನೀನು ಎಂದೂ ವ್ಯರ್ಥಗೊಳಿಸಬಾರದು.

ಸ ತ್ವಂ ಭ್ರಾತುರ್ವಯಸ್ಯಸ್ಯ ಗುರೋರಪಿ ಚ ಸಂಯುಗೇ ।
ಕುರು ಕೃಚ್ಛ್ರೇ ಸಹಾಯಾರ್ಥಮರ್ಜುನಸ್ಯ ಮಹಾಮೃಧೇ ॥ ೪೯ ॥

ಅಂತಹ ನೀನು ನಿನ್ನ ಸ್ನೇಹಿತನೂ, ಗುರುವೂ ಆದ ಅರ್ಜುನನಿಗೆ ಈ ದೊಡ್ಡ ಯುದ್ಧದಲ್ಲಿ ಅವನು ಕಷ್ಟದಲ್ಲಿರುವಾಗ ಸಹಾಯವನ್ನು ಮಾಡು.

ತ್ವಂ ಹಿ ಸತ್ಯವ್ರತಃ ಶೂರೋ ಮಿತ್ರಾಣಾಮಭಯಂಕರಃ ।
ಲೋಕೇ ವಿಖ್ಯಾಯಸೇ ಶೂರ ಕರ್ಮಭಿಃ ಸತ್ಯವಾಗಿತಿ ॥ ೫೦ ॥

ಎಲೈ ಶೂರನೇ, ನೀನು ಲೋಕದಲ್ಲಿ ಶೂರನೆಂದೂ, ಸತ್ಯವ್ರತನೆಂದೂ, ಸ್ನೇಹಿತರಿಗೆ ಅಭಯವನ್ನುಂಟು ಮಾಡುವವನೆಂದೂ, ಸತ್ಯವಚನನೆಂದೂ ನಿನ್ನ ಕರ್ಮಗಳಿಂದ ವಿಖ್ಯಾತನಾಗಿದ್ದೀಯೆ.

ಯೋ ಹಿ ಶೈನೇಯ ಮಿತ್ರಾರ್ಥೇ ಯುದ್ಧ್ಯಮಾನಸ್ತನುಂ ತ್ಯಜೇತ್ ।
ಪೃಥಿವೀಂ ಚ ದ್ವಿಜಾತಿಭ್ಯೋ ಯೋ ದದ್ಯಾತ್ ಸಮಮೇವ ತತ್ ॥೫೧॥

ಎಲೈ ಶೈನೇಯನೇ, ಯಾವನು ಸ್ನೇಹಿತನ ಸಲುವಾಗಿ ಯುದ್ಧವನ್ನು ಮಾಡುತ್ತಾ ದೇಹವನ್ನು ತ್ಯಜಿಸುತ್ತಾನೆಯೋ ಮತ್ತು ಯಾವನು ಬ್ರಾಹ್ಮಣರಿಗೆ ಭೂಮಿಯನ್ನು ದಾನ ಮಾಡುತ್ತಾನೆಯೋ ಅವರೆಡೂ ಸಮವಾದವುಗಳು.

ಶ್ರುತಾಶ್ಚ ಬಹವೋಽಸ್ಮಾಭೀ ರಾಜಾನೋ ಯೇ ದಿವಂ ಗತಾಃ ।
ದತ್ತೇಮಾಂ ಪೃಥಿವೀಂ ಕೃತ್ಸ್ನಾಂ ಬ್ರಾಹ್ಮಣೇಭ್ಯೋ ಯಥಾವಿಧಿ ॥ ೫೨ ॥

ಬ್ರಾಹ್ಮಣರಿಗೆ ಈ ಸಮಗ್ರವಾದ ಭೂಮಿಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ದಾನವನ್ನು ಮಾಡಿ ಸ್ವರ್ಗಕ್ಕೆ ಹೋದ ಅನೇಕ ರಾಜರುಗಳನ್ನು ನಾವು ಕೇಳಿದ್ದೇವೆ.

ದೀಯಮಾನಾ ಚ ಬಹುಭಿರ್ದಾಸ್ಯತೇ ಚ ಮುಹುರ್ಮಹೀ ।
ನತು ಕಶ್ಚಿದ್ ರಣೇ ಪ್ರಾಣಾನ್ ಮಿತ್ರಾರ್ಥೇ ತ್ಯಕ್ತವಾನಿಹ ।
ಏವಂ ತ್ವಾಮಪಿ ಧರ್ಮಾತ್ಮನ್ ಪ್ರಯಾಚೇಽಹಂ ಕೃತಾಂಜಲಿಃ ॥ ೫೩ ॥

ಪೃಥಿವೀದಾನತಸ್ತುಲ್ಯಮಧಿಕಂ ವಾ ಫಲಂ ವಿಭೋ ॥ ೫೪ ॥

ಈ ಭೂಮಿಯು ಹಿಂದೆ ಅನೇಕರಿಂದ ಕೊಡಲ್ಪಟ್ಟಿದೆ, ಮುಂದೆಯೂ ಕೊಡಲ್ಪಡುವುದು. ಆದರೆ ಮಿತ್ರನ ಸಲುವಾಗಿ ಯುದ್ಧದಲ್ಲಿ ಪ್ರಾಣಗಳನ್ನು ತ್ಯಜಿಸಿದವನನ್ನು ನಾವು ಯಾವನನ್ನೂ ಕೇಳಿಲ್ಲ. ಆದ್ದರಿಂದ ಎಲೈ ಧರ್ಮಾತ್ಮನೇ, ನಿನಗೆ ಕೈಗಳನ್ನು ಮುಗಿದು, ಪೃಥಿವೀ ದಾನಕ್ಕೆ ಸಮವಾದ ಅಥವಾ ಅದಕ್ಕಿಂತ ಹೆಚ್ಚಿನ ಫಲವನ್ನು ಕೊಡುವವನಾಗು ಎಂದು ಬೇಡುತ್ತಿದ್ದೇನೆ.

ಏಕ ಏವ ಸದಾ ಕೃಷ್ಣೋ ಮಿತ್ರಾಣಾಮಭಯಂಕರಃ ।
ರಣೇ ತ್ಯಜತಿ ಚ ಪ್ರಾಣಾನ್ ದ್ವಿತೀಯಸ್ತ್ವಂ ಚ ಸಾತ್ಯಕೇ ॥ ೫೫ ॥

ಕೃಷ್ಣನೊಬ್ಬನೇ ಯಾವಾಗಲೂ ಮಿತ್ರರಿಗೆ ಅಭಯವನ್ನು ಕೊಡುವವನು. ಆದಕ್ಕಾಗಿ ಯುದ್ಧದಲ್ಲಿ ಅವನು ಪ್ರಾಣವನ್ನೂ ತ್ಯಜಿಸುವನು. ಎಲೈ ಸಾತ್ಯಕಿಯೇ, ನೀನು ಎರಡನೆಯವನು.

ಶೂರಸ್ಯ ಯುದ್ಧ್ಯಮಾನಸ್ಯ ಯುದ್ಧಾತ್ ಪ್ರಾರ್ಥಯತೋ ಯಶಃ ।
ಶೂರ ಏವ ಸಹಾಯಃ ಸ್ಯಾನ್ನೇತರಃ ಪ್ರಾಕೃತೋ ಜನಃ ॥ ೫೬ ॥

ಯುದ್ಧವನ್ನು ಮಾಡುತ್ತಾ, ಯುದ್ಧದಲ್ಲಿ ಯಶಸ್ಸನ್ನು ಪ್ರಾರ್ಥಿಸುವ ಶೂರನಿಗೆ ಇನ್ನೊಬ್ಬ ಶೂರನೇ ಸಹಾಯನಾಗುತ್ತಾನೆ ಹೊರತು ಸಾಧಾರಣನಾದ ಮನುಷ್ಯನು ಸಹಾಯನಾಗುವುದಿಲ್ಲ.

ಈದೃಶೇ ಹಿ ಪರಾಮರ್ದೇ ವರ್ತಮಾನೇ ಚ ಮಾಧವ ।
ತ್ವದನ್ಯೋ ಹಿ ರಣೇ ಗೋಪ್ತಾ ವಿಜಯಸ್ಯ ನ ವಿದ್ಯತೇ ॥ ೫೭ ॥

ಎಲೈ ಮಧುಕುಲೋತ್ಪನ್ನನೇ, ಇಂತಹ ಸಂಘರ್ಷವು ನಡೆಯುತ್ತಿರುವಾಗ ನಿನ್ನನ್ನು ಬಿಟ್ಟು ಅರ್ಜುನನನ್ನು ರಕ್ಷಿಸುವವರು ಬೇರೆ ಯಾರೂ ಇರುವುದಿಲ್ಲ.

ಶ್ಲಾಘಯನ್ನೇವ ಕರ್ಮಾಣಿ ವಿಜಯಸ್ತವ ಮಾಧವ ।
ಮಮ ಸಂಜನಯನ್ ಹರ್ಷಂ ಪುನಃ ಪುನರಕೀರ್ತಯತ್ ॥ ೫೮ ॥

ಎಲೈ ಮಧುಕುಲೋತ್ಪನ್ನನೇ, ಅರ್ಜುನನು ನಿನ್ನ ಕರ್ಮಗಳನ್ನು ಪ್ರಶಂಸಿಸುತ್ತಾ, ನನಗೆ ಸಂತೋಷವನ್ನುಂಟು ಮಾಡುತ್ತಾ ಪುನಃ ಪುನಃ ಹೀಗೆ ಮಾತನಾಡಿದನು.

ಲಘುಸ್ವಸ್ತ್ರಿತ್ವಯೋಧೀ ಚ ತಥಾ ಲಘುಪರಾಕ್ರಮಃ ।
ಪ್ರಾಜ್ಞಃ ಸರ್ವಾಸ್ತ್ರವಿಚ್ಛೂರೋ ನ ಚ ಮುಹ್ಯತಿ ಸಂಯುಗೇ ॥ ೫೯ ॥

ಮಹೋರಸ್ಕೋ ಮಹಾಸ್ಕಂಧೋ ಮಹಾಬಾಹುರ್ಮಹಾಧನುಃ ।
ಮಹಾಬಲೋ ಮಹಾವೀರ್ಯೋ ಮಹಾತ್ಮಾ ಸ ಮಹಾರಥಃ ॥ ೬೦ ॥

ಶಿಷ್ಯೋ ಮಮ ಸಖಾ ಚೈವ ಪ್ರಿಯೋಸ್ಮಾಹಂ ಪ್ರಿಯಶ್ಚ ಮೇ ।
ಯುಯುಧಾನಃ ಸಹಾಯೋ ಮೇ ಪ್ರಮಥಿಷ್ಯತಿ ಕೌರವಮ್ ।
ಸತ್ಯಕೇನ ಸಹಾಯೇನ ಪ್ರಮಥಿಷ್ಯಾಮ್ಯಹಂ ಕುರೂನ್ ॥ ೬೧ ॥

ಸಾತ್ಯಕಿಯು ಕ್ಷಿಪ್ರವಾಗಿ ಅಸ್ತ್ರವನ್ನು ಪ್ರಯೋಗಿಸುವವನು, ವಿಚಿತ್ರವಾಗಿ ಯುದ್ಧವನ್ನು ಮಾಡುವವನು, ಸೂಕ್ಷ್ಮಪರಾಕ್ರಮವುಳ್ಳವನು, ಪ್ರಾಜ್ಞನಾದವನು, ಎಲ್ಲ ಅಸ್ತ್ರಗಳನ್ನೂ ತಿಳಿದವನು, ಶೂರನಾದವನು, ಯುದ್ಧದಲ್ಲಿ ಭ್ರಾಂತನಾಗದವನು, ಮಹೋರಸ್ಕನು, ಮಹಾಭುಜನು, ಮಹಾಬಾಹುವಾದವನು, ದೊಡ್ಡ ಧನುಸ್ಸನ್ನು ಹೊಂದಿದವನು, ಮಹಾಬಲನು, ಮಹಾವೀರನು, ಮಹಾತ್ಮನೂ ಆದ ಮಹಾರಥನು, ನನ್ನ ಸ್ನೇಹಿತ

ಮತ್ತು ಶಿಷ್ಯನಾದವನು, ನಾನೂ ಸಹ ಅವನಿಗೆ ಪ್ರಿಯನಾದವನು- ಅಂತಹ ಸಾತ್ಯಕಿಯು ನನಗೆ ಸಹಾಯನಾಗಿ ಕೌರವರನ್ನು ವಿನಾಶಗೊಳಿಸುವನು. ನಾನೂ ಸಹ ಸಾತ್ಯಕಿಯ ಸಹಾಯದಿಂದ ಕುರುಗಳನ್ನು ವಿನಾಶಗೊಳಿಸುವೆನು (ಎಂದು ಹೇಳಿದನು).

ಅಸ್ಮದರ್ಥಂ ಚ ರಾಜೇಂದ್ರ ಸನ್ನಹ್ಯೇದ್ ಯದಿ ಕೇಶವಃ ।
ರಾಮೋ ವಾऽಪ್ಯನಿರುದ್ಧೋ ವಾ ಪ್ರದ್ಯುಮ್ನೋ ವಾ ಮಹಾರಥಃ ॥೬೨॥

ಗದೋ ವಾ ಸಾರಣೋ ವಾऽಪಿ ಸಾಂಬೋ ವಾ ಸಹ ವೃಷ್ಣಿಭಿಃ ।
ಸಹಾಯಾರ್ಥಂ ಮಹಾರಾಜ ಸಂಗ್ರಾಮೋತ್ತಮಮೂರ್ಧನಿ ॥ ೬೩ ॥

ತಥಾऽಪ್ಯೇನಂ ನರವ್ಯಾಘ್ರಂ ಶೈನೇಯಂ ಸತ್ಯವಿಕ್ರಮಮ್ ।
ಸಾಹಾಯ್ಯೇ ವಿನಿಯೋಕ್ಷ್ಯಾಮಿ ನಾಸ್ತಿ ಮೇऽನ್ಯೋ ಹಿ ತತ್ಸಮಃ ॥೬೪॥

ಎಲೈ ರಾಜೇಂದ್ರನೇ, ನನ್ನ ಸಲುವಾಗಿ ಕೃಷ್ಣನಾಗಲೀ, ಬಲರಾಮನಾಗಲೀ, ಅನಿರುದ್ಧನಾಗಲೀ, ಮಹಾರಥನಾದ ಪ್ರದ್ಯುಮ್ನನಾಗಲೀ, ವೃಷ್ಣಿಗಳಿಂದ ಕೂಡಿದ ಗದ-ಸಾರಣ-ಸಾಂಬರಾಗಲೀ ಯುದ್ಧದಲ್ಲಿ ನಮ್ಮ ಸಹಾಯಕ್ಕೆ ಬಂದರೂ, ಎಲೈ ಮಹಾರಾಜನೇ, ನಾನು ಸತ್ಯಪರಾಕ್ರಮವುಳ್ಳ ಈ ಸಾತ್ಯಕಿಯನ್ನೇ ಸಹಾಯಕ್ಕಾಗಿ ವಿನಿಯೋಗಿಸುತ್ತೇನೆ. ಅವನಿಗೆ ಸಮರಾದವರು ಬೇರೆ ಯಾರೂ ಇಲ್ಲ.

ಇತಿ ದ್ವೈತವನೇ ತಾತ ಮಾಮುವಾಚ ಧನಂಜಯಃ ।
ಪರೋಕ್ಷಾಂಸ್ತ ದ್ಗುಣಾಂಸ್ತಥ್ಯಾನ್ ಕಥಯಾಮಾಸ ಸಂಸದಿ ॥ ೬೫ ॥

ಎಲೈ ಪ್ರೀತಿಪಾತ್ರನೇ, ಹೀಗೆ ಅರ್ಜುನನು ದ್ವೈತವನದಲ್ಲಿ ನನ್ನನ್ನು ಕುರಿತು ನನಗೆ ಪರೋಕ್ಷವಾದ ನಿಜವಾದ ನಿನ್ನ ಗುಣಗಳನ್ನು ಸಭೆಯಲ್ಲಿ ಹೇಳಿದನು.

ತಸ್ಯ ತ್ವಮೇವಂ ಸಂಕಲ್ಪಂ ನ ವೃಥಾ ಕರ್ತುಮರ್ಹಸಿ ।
ಧನಂಜಯಸ್ಯ ವಾರ್ಷ್ಣೇಯ ಮಮ ಭೀಮಸ್ಯ ಚೋಭಯೋಃ ॥ ೬೬ ॥

ಎಲೈ ವಾರ್ಷ್ಣೇಯನೇ, ನೀನು ಧನಂಜಯನ, ನನ್ನ ಮತ್ತು ಭೀಮನ ಅಭಿಪ್ರಾಯವನ್ನು ವ್ಯರ್ಥಮಾಡಬೇಡ.

ಯಚ್ಚಾಪಿ ತೀರ್ಥಂ ವಿಚರನ್ನಗಚ್ಛದ್ ದ್ವಾರಕಾಂ ಪ್ರತಿ ।
ತತ್ರಾಹಮಪಿ ತೇ ಭಕ್ತಿಮರ್ಜುನಂ ಪ್ರತಿ ದೃಷ್ಟವಾನ್ ॥ ೬೭ ॥

ಅರ್ಜುನನು ತೀರ್ಥಯಾತ್ರೆಯನ್ನು ಮಾಡುತ್ತಾ ದ್ವಾರಕೆಗೆ ಬಂದಾಗ, ನಿನಗೆ ಅರ್ಜುನನಲ್ಲಿರುವ ಭಕ್ತಿಯನ್ನು ನಾನೂ ಸಹ ನೋಡಿದ್ದೇನೆ.

ತತ್ ತೇ ಸೌಹಾರ್ದಮಸ್ಮಾಸು ಯಥಾ ಶೈನೇಯ ಲಕ್ಷಿತಮ್ ।
ತಥಾ ತ್ವಮಸ್ಮಾನ್ ಭಜಸೇ ವರ್ತಮಾನಾನುಪಪ್ಲವೇ ॥ ೬೮ ॥

ಎಲೈ ಸಾತ್ಯಕಿಯೇ, ನಿನ್ನ ಸೌಹಾರ್ದವನ್ನು ನಾನು ಹೇಗೆ ಗಮನಿಸಿದ್ದೇನೆಯೋ ಆದರಂತೆಯೇ ನೀನು ನಾವು ಉಪಪ್ಲವ ನಗರದಲ್ಲಿರುವಾಗ ನಮ್ಮ ಜೊತೆಯಲ್ಲಿ ನಡೆದುಕೊಂಡಿದ್ದೀಯೆ.

ಸೌಹಾರ್ದಸ್ಯ ಚ ಭಕ್ತಸ್ಯ ಸಖ್ಯಸ್ಯಾಚಾರ್ಯಕಸ್ಯ ಚ ।
ಸಂಭಾವನಾಯಾಃ ಪಾರ್ಥಸ್ಯ ಕುಲೀನತ್ವಸ್ಯ ಮಾಧವ ॥ ೬೯ ॥

ಸತ್ತ್ವಸ್ಯ ಚ ಮಹಾಬಾಹೋ ಅನುಕಂಪಾರ್ಥಮೇವ ಚ ।
ಅನುರೂಪಂ ಮಹೇಷ್ವಾಸ ಕರ್ಮ ಕರ್ತುಂ ತ್ವಮರ್ಹಸಿ ॥ ೭೦ ॥

ಎಲೈ ಮಹಾಬಾಹುವೇ, ಆ ಸೌಹಾರ್ದದ, ಭಕ್ತಿಯ, ಸ್ನೇಹದ, ಗುರುತ್ವದ, ಅರ್ಜುನನು ನಿನಗೆ ಕೊಟ್ಟ ಮರ್ಯಾದೆಯ ಮತ್ತು ನಿನ್ನ ಕುಲದ ಮತ್ತು ಪರಾಕ್ರಮದ ಸಲುವಾಗಿ ಎಲೈ ಮಹಾಧನುರ್ಧಾರಿಯೇ, ಮಧುಕುಲೋತ್ಪನ್ನನೇ, ಮತ್ತು ಅರ್ಜುನನ ಮೇಲಿನ ಅನುಕಂಪದಿಂದಾದರೂ ಎಲ್ಲದಕ್ಕೂ ಅನುಗುಣವಾದ ಕಾರ್ಯವನ್ನು ನೀನು ಮಾಡಬೇಕು.

ಸುಯೋಧನೋ ಹಿ ಸಹಸಾ ಗತೋ ದ್ರೋಣೇನ ದಂಶಿತಃ ।
ಪೂರ್ವಮೇವ ಚ ಯಾತಾಸ್ತೇ ಕೌರವಾಣಾಂ ಮಹಾರಥಾಃ ॥ ೭೧ ॥

ಸುಯೋಧನನು ದ್ರೋಣರಿಂದ ಕವಚಧಾರಣೆಯನ್ನು ಮಾಡಿಸಿಕೊಂಡು ತಕ್ಷಣವೇ ಯುದ್ಧಕ್ಕೆ ಹೊರಟಿದ್ದಾನೆ. ಕೌರವರ ಮಹಾರಥರೂ ಮೊದಲೇ ಹೋಗಿದ್ದಾರೆ.

ಸುಮಹಾನ್ ನಿನದಶ್ಚೈವ ಶ್ರೂಯತೇ ವಿಜಯಂ ಪ್ರತಿ ।
ಸ ಶೈನೇಯ ಜವೇನಾಶು ಗಂತುಮರ್ಹಸಿ ಮಾಧವ ॥ ೭೨ ॥

ಅರ್ಜುನನಿರುವ ಸ್ಥಳದಿಂದ ದೊಡ್ಡ ಶಬ್ದವು ಕೇಳಿಬರುತ್ತಿದೆ. ಎಲೈ ಮಾಧವನೇ, ಸಾತ್ಯಕಿಯೇ, ನೀನು ಶೀಘ್ರವಾಗಿ ಹೋಗಬೇಕು.

ಭೀಮಸೇನೋ ವಯಂ ಚೈವ ಸಮಸ್ತಾಃ ಸಹಸೈನಿಕಾಃ ।
ದ್ರೋಣಮಾವಾರಯಿಷ್ಯಾಮೋ ಯದಿ ತ್ವಾಂ ಪ್ರತಿಯೋತ್ಸ್ಯತೇ॥ ೭೩ ॥

ದ್ರೋಣರು ಒಂದು ಪಕ್ಷ ನಿನಗೆ ಪ್ರತಿಯಾಗಿ ಯುದ್ಧವನ್ನು ಮಾಡಿದರೆ ಭೀಮಸೇನನೂ, ನಾನೂ ಮತ್ತು ಸಮಸ್ತ ಸೈನಿಕರೂ ಅವರನ್ನು ತಡೆಯುವೆವು.

ಪಶ್ಯ ಶೈನೇಯ ಸೈನ್ಯಾನಿ ದ್ರವಮಾಣಾನಿ ಸಂಯುಗೇ ।
ಮಹಾಂಶ್ಚ ತುಮುಲಃ ಶಬ್ದೋ ದೀರ್ಯಮಾಣಾ ಚ ಭಾರತೀ ॥ ೭೪ ॥

ಸಾತ್ಯಕಿಯೇ, ಯುದ್ಧದಲ್ಲಿ ನಮ್ಮ ಸೈನ್ಯವು ಚದುರಿ ಹೋಗುತ್ತಿರುವುದನ್ನು ನೋಡು. ತೀವ್ರವೂ, ದೊಡ್ಡದೂ ಆದ ಶಬ್ದವು ಕೇಳಿಬರುತ್ತಿದೆ ಮತ್ತು ನಮ್ಮ ಭರತ ಸೈನ್ಯವು ಭಗ್ನವಾಗುತ್ತಿದೆ.

ಮಹಾವಾತಸಮುದ್ಧೂತಃ ಸಮುದ್ರ ಇವ ಪರ್ವಸು ।
ಧಾರ್ತರಾಷ್ಟ್ರಬಲಂ ತಾತ ವಿಕ್ಷಿಪ್ತಂ ಸವ್ಯಸಾಚಿನಾ ॥ ೭೫ ॥

ಎಲೈ ಪ್ರೀತಿಪಾತ್ರನೇ, ಪರ್ವಕಾಲದಲ್ಲಿ ಬಿರುಗಾಳಿಯಿಂದ ಪ್ರಕ್ಷುಬ್ಧಗೊಂಡ ಸಮುದ್ರದಂತೆ ಸವ್ಯಸಾಚಿಯಾದ ಅರ್ಜುನನಿಂದ ಸುಯೋಧನನ ಸೈನ್ಯವು ಕ್ಷೋಭೆಗೊಂಡಿದೆ.

ರಥೈಶ್ಚ ಪರಿಧಾವದ್ಭಿರ್ಮನುಷ್ಯಗಜವಾಜಿಭಃ ।
ಸೈನ್ಯಂ ರಜಃ ಸಮುದ್ಧೂತಮೇತತ್ ಸಂಪ್ರತಿ ದೃಶ್ಯತೇ ॥ ೭೬ ॥

ಸಂಚರಿಸುವ ರಥಗಳಿಂದಲೂ, ಪದಾತಿ-ಅಶ್ವ ಮತ್ತು ಗಜಗಳಿಂದಲೂ ಎದ್ದ ಸೈನ್ಯದ ಈ ಧೂಳು ಈಗ ಕಂಡುಬರುತ್ತಿದೆ.

ಸಂವೃತಃ ಸಿಂಧುಸೌವೀರೈರ್ನಖರಪ್ರಾಸಯೋಧಿಭಃ ।
ಆತ್ಯಂತಾಪಚಿತೈಃ ಶೂರೈಃ ಫಲ್ಗುನಃ ಪರವೀರಹಾ ॥ ೭೭ ॥

ನಮ್ಮಿಂದ ಅತ್ಯಂತ ಅಪಕಾರಕ್ಕೊಳಗಾದ, ನಖರ-ಪ್ರಾಸಗಳಿಂದ ಯುದ್ಧವನ್ನು ಮಾಡುವ ಸಿಂಧು-ಸೌವೀರ ದೇಶದ ಶೂರರಿಂದ ಪರವೀರಘಾತಕನಾದ ಅರ್ಜುನನು ಸುತ್ತುವರಿಯಲ್ಪಟ್ಟಿದ್ದಾನೆ.

ನೈತದ್ ಬಲಮಸಂವಾರ್ಯ ಶಕ್ಯೋ ಜೇತುಂ ಜಯದ್ರಥಃ ।
ಏತೇ ಹಿ ಸೈಂಧವಸ್ಯಾರ್ಥೇ ಸರ್ವೇ ಸಂತ್ಯಕ್ತಜೀವಿತಾಃ ॥ ೭೮ ॥

ಇವರೆಲ್ಲರೂ ಸೈಂಧವನ ಸಲುವಾಗಿ ತಮ್ಮ ಜೀವನದ ಆಸೆಯನ್ನು ತೊರೆದಿದ್ದಾರೆ. ಈ ಸೈನ್ಯವನ್ನು ತಡೆಯದೆ ಜಯದ್ರಥನನ್ನು ಗೆಲ್ಲಲು ಸಾಧ್ಯವಿಲ್ಲ.

ಶರಶಕ್ತಿಧ್ವಜವರಂ ಹಯನಾಗಸಮಾಕುಲಮ್ ।
ಪಶ್ಯೈತದ್ ಧಾರ್ತರಾಷ್ಟ್ರಾಣಾಮನೀಕಂ ಚ ದುರಾಸದಮ್ ॥ ೭೯ ॥

ನೋಡು ಬಾಣ-ಶಕ್ತಿ ಮತ್ತು ಶ್ರೇಷ್ಠ ಧ್ವಜಗಳನ್ನು ಹೊಂದಿದ, ಗಜಾಶ್ವಗಳಿಂದ ನಿಬಿಡವಾದ ದುರ್ಯೋಧನನ ಈ ಸೈನ್ಯವು ಸಮೀಪಿಸಲೂ ಅಸಾಧ್ಯವಾಗಿದೆ.

ಶೃಣು ದುಂದುಭಿನಿರ್ಘೋಷಂ ಶಂಖಿಶಬ್ದಾಂಶ್ಚ ಪುಷ್ಕಲಾನ್ ।
ಸಿಂಹನಾದರವಾಂಶ್ಚೈವ ರಥನೇಮಿಸ್ವನಾಂಸ್ತಥಾ ॥ ೮೦ ॥

ದುಂದುಭಿಘೋಷವನ್ನೂ, ಅನೇಕ ಶಂಖಿಶಬ್ದಗಳನ್ನೂ, ಸಿಂಹನಾದಗಳನ್ನೂ ಮತ್ತು ರಥಚಕ್ರದ ಘೋಷವನ್ನೂ ಕೇಳು.

ನಾಗಾನಾಂ ಶೃಣು ಶಬ್ದಾಂಶ್ಚ ಪತ್ತೀನಾಂ ಚ ಸಹಸ್ರಶಃ ।
ಸಾದಿನಾಂ ದ್ರವತಾಂ ಶಬ್ದಂ ಶೃಣು ಕಂಪಯತಾಂ ಮಹೀಮ್ ॥ ೮೧ ॥

ಗಜಗಳ ಶಬ್ದಗಳನ್ನೂ, ಸಹಸ್ರ ಸಂಖ್ಯೆಯಲ್ಲಿ ಚಲಿಸುವ ಪದಾತಿಗಳ ಶಬ್ದವನ್ನೂ ಕೇಳು. ಭೂಮಿಯನ್ನು ನಡುಗಿಸುತ್ತಾ ಚಲಿಸುವ ಅಶ್ವಾರೋಹಿಗಳ ಶಬ್ದವನ್ನೂ ಕೇಳು.

ಪುರಸ್ತಾತ್ ಸೈಂಧವಾನೀಕಂ ದ್ರೋಣಾನೀಕಸ್ಯ ಪೃಷ್ಠತಃ ।
ಬಹುತ್ವಂ ಹಿ ನರವ್ಯಾಘ್ರ ದೇವೇಂದ್ರಮಪಿ ಪೀಡಯೇತ್ ॥ ೮೨ ॥

ದ್ರೋಣರ ಸೈನ್ಯದ ಹಿಂಭಾಗದಲ್ಲಿ ಮೊದಲು ಸೈಂಧವಸೈನ್ಯವಿದೆ. ಎಲೈ ನರವ್ಯಾಘ್ರನೇ, ಆ ಸೈನ್ಯದ ಮಹತ್ವವು (ಬಹುತ್ವವು) ದೇವೇಂದ್ರನನ್ನೂ ಪೀಡಿಸಬಹುದು.

ಅಪರ್ಯಂತೇ ಬಲೇ ಮಗ್ನಾಃ ಪ್ರಜಹ್ಯಾದಪಿ ಜೀವಿತಮ್ ।
ತಸ್ಮಿಂಶ್ಚ ನಿಹತೇ ಯುದ್ಧೇ ಕಥಂ ಜೀವೇತ ಮಾದೃಶಃ ।
ಸರ್ವಥಾ ಸಮನುಪ್ರಾಪ್ತಃ ಸಕೃಚ್ಛ್ರಂ ಬತ ಜೀವಿತಮ್ ॥ ೮೩ ॥

ಅರ್ಜುನನು ಕೊನೆಯೇ ಇಲ್ಲದ ಅಂತಹ ಸೈನ್ಯದಲ್ಲಿ ಮುಳುಗಿ ಪ್ರಾಣವನ್ನೇ ತೊರೆದಾನು. ಅವನು ಯುದ್ಧದಲ್ಲಿ ಮೃತನಾದರೆ ನನ್ನಂತಹವನು ಹೇಗೆ ಜೀವಿಸಬಹುದು? ಸರ್ವಥಾ ಅವನ ಪ್ರಾಣಧಾರಣೆಯು ಕಷ್ಟಕ್ಕೆ ಸಿಲುಕಿದೆ.

ಅಭ್ರಶ್ಯಾಮೋ ಗುಡಾಕೇಶೋ ದರ್ಶನೀಯಶ್ಚ ಪಾಂಡವಃ ।
ಲಘ್ವಸ್ತ್ರಶ್ಚಿತ್ರಯೋಧೀ ಚ ಪ್ರವಿಷ್ಟಸ್ತ್ವ ಭಾರತೀಮ್ ॥ ೮೪ ॥

ಸೂರ್ಯೋದಯೇ ಮಹಾಬಾಹುರ್ದಿವಸಶ್ಚಾತಿವರ್ತತೇ ॥ ೮೫ ॥

ಮೇಘಶ್ಯಾಮನೂ, ಗುಡಾಕೇಶನೂ (ನಿದ್ರೆಯನ್ನು ಗೆದ್ದವನು), ಸುಂದರನೂ, ಕ್ಷಿಪ್ರವಾಗಿ ಅಸ್ತ್ರವನ್ನು ಪ್ರಯೋಗಿಸುವವನೂ, ಚಿತ್ರಯೋಧಿಯೂ, ಮಹಾಬಾಹುವೂ ಆದ ಅರ್ಜುನನು ಸೂರ್ಯೋದಯದ ಸಮಯದಲ್ಲಿ ದುರ್ಯೋಧನನ ಸೈನ್ಯವನ್ನು ಪ್ರವೇಶಿಸಿದನು. ಈಗ ದಿವಸವು ಕಳೆದುಹೋಗುತ್ತಿದೆ.

ತನ್ನ ಜಾನಾಮಿ ವಾರ್ಷ್ಣೇಯ ಯದಿ ಜೀವತಿ ವಾ ನ ವಾ ।
ಕುರೂಣಾಂ ಸುಮಹತ್ ಸೈನ್ಯಂ ಸಾಗರಪ್ರತಿಮಂ ಮಹತ್ ॥ ೮೬ ॥

ಏಕ ಏವ ಚ ಬೀಭತ್ಸುಃ ಪ್ರವಿಷ್ಟಸ್ತತ್ರ ಭಾರತೀಮ್ ।
ಅವಿಷಹ್ಯಾಂ ಮಹಾಬಾಹುಃ ಸುರೈರಪಿ ಮಹಾಮೃಧೇ ॥ ೮೭ ॥

ಎಲೈ ಸಾತ್ಯಕಿಯೇ, ಅವನು ಬದುಕಿದ್ದಾನೆಯೇ ಇಲ್ಲವೇ ಎಂದು ನನಗೆ ತಿಳಿಯುತ್ತಿಲ್ಲ. ಕುರುಗಳ ಸೈನ್ಯವು ಸಾಗರದಂತೆ ಬಹಳ ದೊಡ್ಡದಾಗಿದೆ. ಮಹಾಬಾಹುವಾದ ಅರ್ಜುನನು ದೇವತೆಗಳೂ ಯುದ್ಧದಲ್ಲಿ ಸಹಿಸಲಾರದ ಆ ಸೈನ್ಯವನ್ನು ಒಬ್ಬನೇ ಪ್ರವೇಶಿಸಿದ್ದಾನೆ.

ನ ಚ ಮೇ ವರ್ತತೇ ಬುದ್ಧಿರದ್ಯ ಯುದ್ಧೇ ಕಥಂಚನ ।
ದ್ರೋಣೋ ಹಿ ರಭಸೋ ಯುದ್ಧೇ ಮಮ ಪೀಡಯತೇ ಬಲಮ್ ।
ಪ್ರತ್ಯಕ್ಷಂ ತೇ ಮಹಾಬಾಹೋ ಯಥಾ ಸ ಚರತಿ ದ್ವಿಜಃ ॥ ೮೮ ॥

ನನಗೆ ಈ ದಿನ ಯುದ್ಧವನ್ನು ಮಾಡುವ ಬುದ್ಧಿಯಿಲ್ಲ. ಎಲೈ ಮಹಾಬಾಹುವೇ, ವೇಗಶಾಲಿಗಳಾದ ದ್ರೋಣರು ಸಂಚರಿಸುತ್ತಿರುವಂತೆ ನನ್ನ ಕಣ್ಣೆದುರಿಗೇ ಯುದ್ಧದಲ್ಲಿ ನನ್ನ ಸೈನ್ಯವನ್ನು ಪೀಡಿಸುತ್ತಿದ್ದಾರೆ.

ಯುಗಪತ್ ಸಮವೇತಾನಾಂ ಕಾರ್ಯಾಣಾಂ ತ್ವಂ ವಿಚಕ್ಷಣಃ ।
ಮಹಾರ್ಥಂ ಲಘುಸಂಯುಕ್ತಂ ಕರ್ತುಮರ್ಹಸಿ ಮಾಧವ ॥ ೮೯ ॥

ಎಲೈ ಮಧುಕುಲೋತ್ಪನ್ನನೇ, ಒಟ್ಟಿಗೆ ಅನೇಕ ಕಾರ್ಯವನ್ನು ಮಾಡಬೇಕಾಗಿ ಬಂದಾಗ ಮೇಧಾವಿಯಾದ ನೀನು ಅಲ್ಪಪ್ರಯತ್ನದಿಂದ ಮಹಾಫಲವನ್ನು ಉಂಟು ಮಾಡುವ ಕಾರ್ಯವನ್ನು ಮಾಡಬೇಕು.

ತಸ್ಯ ಮೇ ಸರ್ವಕಾರ್ಯೇಷು ಕಾರ್ಯಮೇತನ್ಮತಂ ಸದಾ ।
ಅರ್ಜುನಸ್ಯ ಪರಿತ್ರಾಣಂ ಕರ್ತವ್ಯಮಿತಿ ಸಂಯುಗೇ ॥ ೯೦ ॥

ನನ್ನ ಎಲ್ಲ ಕಾರ್ಯಗಳಲ್ಲಿಯೂ ಯುದ್ಧದಲ್ಲಿ ಅರ್ಜುನನನ್ನು ರಕ್ಷಿಸಬೇಕೆಂಬುದು ಅತ್ಯಂತ ಮುಖ್ಯವಾದ ಕಾರ್ಯ.

ನಾಹಂ ಶೋಚಾಮಿ ದಾಶಾರ್ಹಂ ಗೋಪ್ತಾರಂ ಜಗತಃ ಪ್ರಭುಮ್ ॥

ಸ ಹಿ ಶಕ್ತೋ ರಣೇ ತಾತ ತ್ರೀಲ್ಲೋಕಾನಪಿ ಸಂಗತಾನ್ ।
ವಿಜೇತುಂ ಪುರುಷವ್ಯಾಘ್ರ ಸತ್ಯಮೇತದ್ ಬ್ರವೀಮಿ ತೇ ।
ಕಿಂ ಪುನರ್ಧಾರ್ತರಾಷ್ಟ್ರಸ್ಯ ಬಲಮೇತತ್ ಸುದುರ್ಬಲಮ್ ॥ ೯೨ ॥

ನಾನು ಜಗತ್ತಿಗೆ ಪ್ರಭುವೂ, ಸರ್ವರಕ್ಷಕನೂ ಆದ ಕೃಷ್ಣನ ವಿಷಯದಲ್ಲಿ ಚಿಂತಿಸುತ್ತಿಲ್ಲ. ಎಲೈ ಪುರುಷವ್ಯಾಘ್ರನೇ, ಅವನು ಮೂರುಲೋಕಗಳು ಒಟ್ಟಿಗೇ ಬಂದರೂ ಯುದ್ಧದಲ್ಲಿ ಅವುಗಳನ್ನು ಜಯಿಸಲು ಸಮರ್ಥನಾಗಿದ್ದಾನೆ. ಸತ್ಯವಾದ ಈ ಮಾತನ್ನು ನಿನಗೆ ಹೇಳುತ್ತಿದ್ದೇನೆ. ಹೀಗಿರುವಾಗ ದುರ್ಬಲವಾದ ಈ ಸುಯೋಧನನ ಸೈನ್ಯವು ಅವನಿಗೆ ಏನು ಮಾಡೀತು?

ಅರ್ಜುನಸ್ತ್ವೇಷ ವಾರ್ಷ್ಣೇಯ ಪೀಡಿತೋ ಬಹುಭಿರ್ಯುಧಿ ।
ಪ್ರಜಹ್ಯಾತ್ ಸಮರೇ ಪ್ರಾಣಾನ್ ತಸ್ಮಾದ್ ಎಂದಾಮಿ ಕಶ್ಮಲಮ್ ॥

ಎಲೈ ವಾರ್ಷ್ಣೇಯನೇ, ಯುದ್ಧದಲ್ಲಿ ಅನೇಕರಿಂದ ಪೀಡಿತನಾದ ಈ ಅರ್ಜುನನು ಪ್ರಾಣಗಳನ್ನೂ ಬಿಡಬಹುದು. ಆದರಿಂದ ವಿಷಾದಕ್ಕೆ ಒಳಗಾಗಿದ್ದೇನೆ.

ತಸ್ಯ ತ್ವಂ ಪದವೀಂ ಗಚ್ಛ ಗಚ್ಛೇಯುಸ್ತ್ವದೃಶಾ ರಥಾಃ ।
ತಾದೃಶಸ್ಯೇದೃಶೇ ಕಾಲೇ ಮಾದೃಶೈರಭಿಚೋದಿತಾಃ ॥ ೯೪ ॥

ಅವನ ಮಾರ್ಗವನ್ನು ಹಿಡಿದು ಹೋಗು. ಇಂತಹ ಕಾಲದಲ್ಲಿ ನಿನ್ನಂತಹ ಮಹಾರಥರು ನನ್ನಂತಹವರಿಂದ ಪ್ರೇರಿತರಾಗಿ ಹೋಗುವರು.

ಸುಹೃದೋ ವೈ ಸುಹೃತ್ಕೃತೇ ಪರಮಾಸ್ಥಾಯ ವಿಕ್ರಮಮ್ ।
ಸುಹೃದಃ ಪದಮನ್ವಿಚ್ಛನ್ ನ ವ್ಯಥೇತ ಕಥಂಚನ ॥ ೯೫ ॥

ಸ್ನೇಹಿತನ ಸ್ನೇಹಕಾರ್ಯದಲ್ಲಿ ಬಹಳ ವಿಕ್ರಮವನ್ನು ತೋರಿಸಿ ಅವನ ಮಾರ್ಗವನ್ನು ಅನುಸರಿಸಿ ಹೋಗುವವನು ಎಂದೂ ವ್ಯಥಪಡಲಾರ.

ನನು ಸತ್ಯಕ ವೃಷ್ಣೀನಾಂ ದ್ವಾವೇವಾತಿರಥೌ ಸ್ಮೃತೌ ।
ಪ್ರದ್ಯುಮ್ನಶ್ಚ ಮಹಾಬಾಹುಸ್ತ್ವಂ ಚ ಸಾತ್ವತ ವಿಶ್ರುತಃ ॥ ೯೬ ॥

ಎಲೈ ಸತ್ಯಕನೇ, ವೃಷ್ಣಿಗಳಲ್ಲಿ ಅತಿರಥರೆಂದು ಪರಿಗಣಿತರಾದವರು ಇಬ್ಬರೇ ಅಷ್ಟೆ? ಮಹಾಬಾಹುವಾದ ಅರ್ಜುನನೊಬ್ಬನು ಮತ್ತು ಪ್ರಖ್ಯಾತನಾದ ನೀನು ಇನ್ನೊಬ್ಬನು.

ಅಸ್ತ್ರೇ ನಾರಾಯಣಸಮಃ ಸಂಕರ್ಷಣಸಮೋ ಬಲೇ ।
ವೀರತಾಯಾಂ ನರವ್ಯಾಘ್ರ ಧನಂಜಯಸಮೋ ಹ್ಯಸಿ ॥ ೯೭ ॥

ಎಲೈ ನರವ್ಯಾಘ್ರನೇ, ನೀನು ಅಸ್ತ್ರಜ್ಞಾನದಲ್ಲಿ ನಾರಾಯಣನಿಗೆ ಸಮನಾದವನು. ಬಲದಲ್ಲಿ ಬಲರಾಮನಿಗೂ, ಪರಾಕ್ರಮದಲ್ಲಿ ಅರ್ಜುನನಿಗೂ ಸಮನಾಗಿದ್ದೀಯೆ.

ಭೀಷ್ಮದ್ರೋಣಾವತಿಕ್ರಾಂತಂ ಸರ್ವಯುದ್ಧವಿಶಾರದಮ್ ।
ನಾಸಾಧ್ಯಂ ವಿದ್ಯತೇ ಲೋಕೇ ಸಾತ್ಯಕೇರಿತಿ ಮಾಧವ
ಭೀಷ್ಮದ್ರೋಣಾವತಿಕ್ರಾಂತಂ ಸರ್ವಶಸ್ತ್ರವಿಶಾರದಮ್ ।
ತ್ವಾಮದ್ಯ ಪುರುಷವ್ಯಾಘ್ರ ಲೋಕೇ ಸಂತಃ ಪ್ರಚಕ್ಷತೇ ॥ ೯೮ ॥

ಎಲೈ ಮಾಧವನೇ, ನೀನು ಭೀಷ್ಮ-ದ್ರೋಣರನ್ನು ಮೀರಿದವನು, ಸರ್ವಶಸ್ತ್ರ ವಿಶಾರದನಾದವನು ಅಂತಹ ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂದು ಎಲೈ ಪುರುಷವ್ಯಾಘ್ರನೇ, ಲೋಕದಲ್ಲಿ ಸಜ್ಜನರು ಹೇಳುತ್ತಾರೆ.

ಸದೇವಾಸುರಗಂಧರ್ವಾನ್ ಸಕಿನ್ನರಮಹೋರಗಾನ್ ।
ಯೋಧಯೇತ್ ಸ ಜಗತ್ ಸರ್ವಂ ವಿಜಯೇತ ರಿಪೂನ್ ಬಹೂನ್ ॥

ಇತಿ ಬ್ರುವಂತಿ ಲೋಕೇಷು ಜನಾಸ್ತವ ಗುಣಾನ್ ಸದಾ ॥ ೧೦೦ ॥

ಸಾತ್ಯಕಿಯು ದೇವಾಸುರ-ಗಂಧರ್ವರಿಂದ ಸಹಿತವಾದ, ಕಿನ್ನರ-ಮಹೋರಗರಿಂದ ಸಹಿತವಾದ, ಸರ್ವಜಗತ್ತಿನ ಜೊತೆಯಲ್ಲಿಯುದ್ಧವನ್ನು ಮಾಡಿ ಅನೇಕ ಶತ್ರುಗಳನ್ನು ಸೋಲಿಸಿಯಾನು ಎಂದು ನಿನ್ನ ಗುಣಗಳನ್ನು ಯಾವಾಗಲೂ ಲೋಕದಲ್ಲಿ ಜನರು ಹೇಳುತ್ತಾರೆ.

ಸಮಾಗಮೇಷು ಜಲ್ಪಂತಿ ಪೃಥಗೇವ ಚ ಸರ್ವದಾ ।
ನಾಸಾಧ್ಯಂ ವಿದ್ಯತೇ ಲೋಕೇ ಸತ್ಯಕಸ್ಯೇತಿ ಮಾಧವ ।
ತತ್ ತ್ವಾಂ ಯದಿಹ ವಕ್ಷ್ಯಾಮಿ ತತ್ ಕುರುಷ್ವ ಮಹಾಬಲ ॥೧೦೧॥

ಎಲೈ ಮಾಧವನೇ, ಸಮೂಹಗಳಲ್ಲಿಯೂ ಮತ್ತು ಪ್ರತ್ಯೇಕವಾಗಿಯೂ ಸಾತ್ಯಕಿಗೆ ಅಸಾಧ್ಯವಾದುದು ಈ ಲೋಕದಲ್ಲಿ ಯಾವುದೂ ಇಲ್ಲ ಎಂದು ಯಾವಾಗಲೂ ಹೇಳುತ್ತಾರೆ. ಆದ್ದರಿಂದ ಎಲೈ ಮಹಾಬಲನೇ, ನಾನು ನಿನಗೆ ಹೇಳುವುದನ್ನು ಈ ದಿನ ಮಾಡುವವನಾಗು.

ಸಂಭಾವನಾ ಹಿ ಪಾರ್ಥಸ್ಯ ಮಮ ಭೀಮಸ್ಯ ಚೋಭಯೋಃ ।
ನಾನ್ಯಥಾ ತನ್ಮಹಾಬಾಹೋ ಸಂಪ್ರಕರ್ತುಮಿಹಾರ್ಹಸಿ ॥ ೧೦೨ ॥

ಎಲೈ ಮಹಾಬಾಹುವೇ, ನಾನು, ಅರ್ಜುನ ಮತ್ತು ಭೀಮಸೇನರು ನಿನ್ನಲ್ಲಿ ಇಟ್ಟಿರುವ ಗೌರವಕ್ಕೆ ಅನುಗುಣವಾಗಿ ಕಾರ್ಯವನ್ನು ಮಾಡು. ಅನ್ಯಥಾ ಮಾಡುವುದು ಉಚಿತವಲ್ಲ.

ಪರಿತ್ಯಜ್ಯ ಪ್ರಿಯಾನ್ ಪ್ರಾಣಾನ್ ರಣೇ ವಿಚರ ವೀರವತ್ ।
ನಹಿ ಶೈನೇಯ ದಾಶಾರ್ಹಾ ರಣೇ ರಕ್ಷಂತಿ ಜೀವಿತಮ್ ॥ ೧೦೩ ॥

ಪ್ರಿಯವಾದ ಪ್ರಾಣಗಳನ್ನುತ್ಯಜಿಸಿ ರಣರಂಗದಲ್ಲಿವೀರನಂತೆ ಸಂಚರಿಸು. ಎಲೈ ಶೈನೇಯನೇ, ದಾಶಾರ್ಹಕುಲದವರು ಯುದ್ಧದಲ್ಲಿ ತಮ್ಮ ಜೀವಿತವನ್ನು ರಕ್ಷಿಸಿಕೊಳ್ಳುವುದಿಲ್ಲ.

ಅಯುದ್ಧಮನವಸ್ಥಾನಂ ಸಂಗ್ರಾಮೇ ಚ ಪಲಾಯನಮ್ ।
ಏಷ ಭೀರುಗತೋ ಮಾರ್ಗೋ ನೈವ ದಾಶಾರ್ಹಸೇವಿತಃ ॥ ೧೦೪ ॥

ಯುದ್ಧವನ್ನು ಮಾಡದಿರುವುದು, ರಣರಂಗದಲ್ಲಿ ನಿಲ್ಲದಿರುವುದು ಮತ್ತು ಯುದ್ಧದಿಂದ ಪಲಾಯನ ಮಾಡುವುದು ಇದು ಹೇಡಿಗಳ ಮಾರ್ಗ. ದಾಶಾರ್ಹರು ಸೇವಿಸುವ ಮಾರ್ಗವಲ್ಲ.

ತವಾರ್ಜುನೋ ಗುರುಸ್ತಾತ ಧರ್ಮಾತ್ಮಾ ಶಿನಿಪುಂಗವ ।
ವಾಸುದೇವೋ ಗುರುಶ್ಚೈವ ಅರ್ಜುನಸ್ಯ ತವೈವ ಚ ॥ ೧೦೫ ॥

ಎಲೈ ಶಿನಿಪುಂಗವನೇ, ಪ್ರೀತಿಪಾತ್ರನೇ, ನಿನಗೆ ಧರ್ಮಾತ್ಮನಾದ ಅರ್ಜುನನೂ ಮತ್ತು ನಿನಗೂ ಮತ್ತು ಅರ್ಜುನನಿಗೂ ಕೃಷ್ಣನೂ ಸಹ ಗುರುವಾಗಿದ್ದಾನೆ.

ಕಾರಣದ್ವಯಮೇತದ್ಧಿ ಜಾನಂಸ್ತಾ ವ್ಮಹಮಬ್ರುವಮ್ ।
ಮಾऽವಮಂಸ್ಥಾ ವಚೋ ಮೇऽದ್ಯ ಗುರೋಸ್ತವ ಗುರುರ್ಹ್ಯಹಮ್ ॥

ಈ ಎರಡು ಕಾರಣಗಳನ್ನು ತಿಳಿದು ನಾನು ನಿನಗೆ ಹೇಳಿದ್ದೇನೆ. ನಿನ್ನ ಗುರುವಿನ ಗುರುವಾದ ನನ್ನ ಮಾತನ್ನು ಈ ದಿನ ತಿರಸ್ಕರಿಸಬೇಡ.

ವಾಸುದೇವಮತಂ ಚೈತನ್ಮಮ ಚೈವಾರ್ಜುನಸ್ಯ ಚ ।
ಸತ್ಯಮೇತನ್ಮಯೋಕ್ತಂ ತೇ ಯಾಹಿ ಯತ್ರ ಧನಂಜಯಃ ॥ ೧೦೭ ॥

ಇದು ಕೃಷ್ಣನಿಗೂ ಮತ್ತು ಅರ್ಜುನನಿಗೂ ಸಮ್ಮತವಾದುದು. ನಾನು ಹೇಳಿದ ಈ ಮಾತುಗಳು ಸತ್ಯವಾದವುಗಳು. ಅರ್ಜುನನು ಇರುವ ಕಡೆಗೆ ಹೋಗು.

ಏತದ್ ವಚನಮಾಜ್ಞಾಯ ಮಮ ಸತ್ಯಪರಾಕ್ರಮ ।
ಪ್ರವಿಶೈತದ್ ಬಲಂ ತಾತ ಧಾರ್ತರಾಷ್ಟ್ರಸ್ಯ ದುರ್ಮತೇಃ ॥ ೧೦೮ ॥

ಎಲೈ ಸತ್ಯಪರಾಕ್ರಮನೇ, ಪ್ರೀತಿಪಾತ್ರನೇ, ಈ ನನ್ನ ಮಾತುಗಳನ್ನು ಚೆನ್ನಾಗಿ ತಿಳಿದು ದುರ್ಮತಿಯಾದ ದುರ್ಯೋಧನನ ಈ ಸೈನ್ಯವನ್ನು ಪ್ರವೇಶಿಸು.

ಪ್ರವಿಶ್ಯ ಚ ಯಥಾನ್ಯಾಯಂ ಸಂಗಮ್ಯ ಚ ಮಹಾರಥೈಃ ।
ಯಥಾರ್ಹಮಾತ್ಮನಃ ಕರ್ಮ ರಣೇ ಸತ್ಯಕ ದರ್ಶಯ ॥ ೧೦೯ ॥

ಎಲೈ ಸತ್ಯಕನೇ, ಸೈನ್ಯವನ್ನು ವಿಧಿವತ್ತಾಗಿ ಪ್ರವೇಶಿಸಿ, ಮಹಾರಥರ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಯುದ್ಧದಲ್ಲಿ ನಿನ್ನ ಯೋಗ್ಯತೆಗೆ ಅನುರೂಪವಾದ ಕರ್ಮವನ್ನು ತೋರಿಸುವವನಾಗು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಣ್ಣವತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೇಳನೆಯ ಅಧ್ಯಾಯ

ಯುಧಿಷ್ಠಿರನ ಮಾತಿಗೆ ಸಾತ್ಯಕಿಯ ಉತ್ತರ. ಭೀಮಾದ್ಯರಿಂದ ತನ್ನ ರಕ್ಷಣೆಯನ್ನು ಹೇಳಿ ಪುನಃ ಯುಧಿಷ್ಠಿರನಿಂದ ಒತ್ತಾಯ.

ಸಂಜಯಃ

ಪ್ರೀತಿಯುಕ್ತಂ ಚ ಹೃದ್ಯಂ ಚ ಮಧುರಾಕ್ಷರಮೇವ ಚ ।
ಕಾಲಯುಕ್ತಂ ಚ ಚಿತ್ರಂ ಚ ಸ್ವಧಿಯಾ ಚಾಭಿಭಾಷಿತಮ್ ॥ ೧ ॥

ಧರ್ಮರಾಜಸ್ಯ ತದ್ ವಾಕ್ಯಂ ನಿಶಮ್ಯ ಶಿನಿಪುಂಗವಃ ।
ಸಾತ್ಯಕಿರ್ಭರತಶ್ರೇಷ್ಠ ಪ್ರತ್ಯುವಾಚ ಯುಧಿಷ್ಠಿರಮ್ ॥ ೨ ॥

ಸಂಜಯ– ಎಲೈ ಭರತಶ್ರೇಷ್ಠನೇ, ಪ್ರೀತಿಯುಕ್ತವಾದ, ಮನೋಹರವಾದ, ಮಧುರಾಕ್ಷರಗಳಿಂದ ಕೂಡಿದ, ಆ ಕಾಲಕ್ಕೆ ಯೋಗ್ಯವಾದ, ವಿಚಿತ್ರವಾದ, ತನ್ನ ಬುದ್ಧಿಯಿಂದಲೇ ಆಡಿದ ಧರ್ಮರಾಜನ ಆ ಮಾತನ್ನು ಕೇಳಿ ಶಿನಿಪುಂಗವನಾದ ಸಾತ್ಯಕಿಯು ಯುಧಿಷ್ಠಿರನನ್ನು ಕುರಿತು ಮಾತನಾಡಿದನು.

ಶ್ರುತಂ ತೇ ಗದತೋ ವಾಕ್ಯಂ ಸರ್ವಮೇತನ್ಮಯಾಽಚ್ಯುತ ।
ನ್ಯಾಯಯುಕ್ತಂ ಚ ಚಿತ್ರಂ ಚ ಫಲ್ಗುನಾರ್ಥೇ ಯಶಸ್ಕರಮ್ ॥ ೩ ॥

ಎಲೈ ಅಚ್ಯುತನೇ, ನೀನು ಅರ್ಜುನನ ಸಲುವಾಗಿ ಆಡಿದ ನ್ಯಾಯಯುತವಾದ ಪ್ರೀತಿಕರವಾದ ವಿಚಿತ್ರವಾದ ನಿನ್ನ ಮಾತೆಲ್ಲವನ್ನೂ ಕೇಳಿದೆನು.

ಏವಂವಿಧೇ ತಥಾ ಕಾಲೇ ಮಾದೃಶಂ ಪ್ರೇಕ್ಷ್ಯ ಸಮ್ಮತಮ್ ।
ವಕ್ತುಮರ್ಹಸಿ ರಾಜೇಂದ್ರ ಯಥಾ ಪಾರ್ಥಂ ತಥೈವ ಮಾಮ್ ॥ ೪ ॥

ಎಲೈ ರಾಜೇಂದ್ರನೇ, ಇಂತಹ ಕಾಲದಲ್ಲಿ ನನ್ನಂತಹ ಸಮ್ಮತನಾದವನನ್ನು ನೋಡಿ ಅರ್ಜುನನಿಗೆ ಹೇಳುವಂತೆಯೇ ನೀನು ನನಗೂ ಹೇಳಬೇಕು.

ನ ಮೇ ಧನಂಜಯಸ್ಯಾರ್ಥೇ ಪ್ರಾಣಾ ರಕ್ಷ್ಯಾಃ ಕಥಂಚನ ।
ತ್ವತ್ಪ್ರಯುಕ್ತಃ ಪುನರಹಂ ಕಿಂ ನ ಕುರ್ಯಾಂ ಮಹಾಹವೇ ॥ ೫ ॥

ಧನಂಜಯನ ಸಲುವಾಗಿ (ಧನಂಜಯನು ಯುದ್ಧಕ್ಕೆ ಹೋಗಿರುವಾಗ) ನಾನು ನನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳಬೇಕಾದ ಸಂದರ್ಭವೇ ಇಲ್ಲ. ಇನ್ನು ನೀನು ಪ್ರಚೋದಿಸಿದ ಮೇಲೆ ದೊಡ್ಡ ಯುದ್ಧದಲ್ಲಿ ನಾನು ಏನನ್ನು ಮಾಡದೇ ಇರಲು ಸಾಧ್ಯ?

ತ್ರೀನ್ ಲೋಕಾನ್ ವಾರಯೇಯಂ ಚ ಸದೇವಾಸುರಮಾನುಷಾನ್ ।
ತ್ವತ್ಪ್ರಯುಕ್ತೋ ನರೇಂದ್ರೇಹ ಕಿಂ ಪುನಸ್ತಾನ್ ಸುದುರ್ಬಲಾನ್ ॥ ೬ ॥

ಎಲೈ ನರೇಂದ್ರನೇ, ನಿನ್ನಿಂದ ಆಜ್ಞಾಪಿಸಲ್ಪಟ್ಟರೆ ದೇವಾಸುರ-ಮನುಷ್ಯರಿಂದ ಸಹಿತವಾದ ಮೂರುಲೋಕಗಳನ್ನೂ ತಡೆದೇನು! ಇನ್ನು ಆ ದುರ್ಬಲರ ವಿಷಯದಲ್ಲಿ ಹೇಳುವುದೇನಿದೆ?

ದುರ್ಯೋಧನಬಲಂ ತ್ವದ್ಯ ಯೋಧಯೇಯಂ ಸಮಂತತಃ ।
ವಿಜೇಷ್ಯೇ ಚ ರಣೇ ರಾಜನ್ ಸತ್ಯಮೇತದ್ ಬ್ರವೀಮಿ ತೇ ॥ ೭ ॥

ಎಲೈ ರಾಜನೇ, ಈ ದಿನ ನಾನು ದುರ್ಯೋಧನನ ಸೈನ್ಯದ ಜೊತೆಯಲ್ಲಿ ಎಲ್ಲ ಕಡೆಗಳಿಂದಲೂ ಯುದ್ಧವನ್ನು ಮಾಡಿ ಗೆಲ್ಲುವೆನು. ಈ ಸತ್ಯವಾದ ಮಾತನ್ನು ನಿನಗೆ ಹೇಳುತ್ತಿದ್ದೇನೆ.

ಕುಶಲ್ಯಹಂ ಕುಶಲಿನಂ ಸಮಾಸಾದ್ಯ ಧನಂಜಯಮ್ ।
ಹತೇ ಜಯದ್ರಥೇ ಪಾಪೇ ಪುನರೇಷ್ಯಾಮಿ ತೇಽಂತಿಕಮ್ ॥ ೮ ॥

ಕ್ಷೇಮದಿಂದಿರುವ ನಾನು ಕ್ಷೇಮದಿಂದಿರುವ ಅರ್ಜುನನನ್ನು ಸಮೀಪಿಸಿ, ಪಾಪಿಯಾದ ಜಯದ್ರಥನು ಹತನಾದ ಮೇಲೆ ಪುನಃ ನಿನ್ನ ಸಮೀಪಕ್ಕೆ ಬರುವೆನು.

ಅವಶ್ಯಂ ತು ಮಯಾ ಸರ್ವಂ ವಿಜ್ಞಾಪ್ಯಸ್ತ್ವಂ ನರಾಧಿಪ ।
ಧನಂಜಯಸ್ಯ ಯದ್ ವಾಕ್ಯಂ ವಾಸುದೇವಸ್ಯ ಚೋಭಯೋಃ ॥ ೯ ॥

ಎಲೈ ರಾಜನೇ, ಅರ್ಜುನನ ಮತ್ತು ಕೃಷ್ಣನ ಎಲ್ಲ ಮಾತುಗಳನ್ನೂ ನಾನು ಅವಶ್ಯವಾಗಿ ನಿನಗೆ ವಿಜ್ಞಾಪಿಸಬೇಕು.

ದೃಢಂ ತ್ವಭಿಹಿತಶ್ಚಾಹಮಾಚಾರ್ಯೇಣ ಪುನಃಪುನಃ ।
ಮಧ್ಯೇ ಸರ್ವಸ್ಯ ಸೈನ್ಯಸ್ಯ ವಾಸುದೇವಸ್ಯ ಶೃಣ್ವತಃ ॥ ೧೦ ॥

ಆಚಾರ್ಯನಾದ ಅರ್ಜುನನು ಕೃಷ್ಣನು ಕೇಳುವಂತೆಯೇ ಎಲ್ಲಸೈನ್ಯದ ಮಧ್ಯದಲ್ಲಿ ಪುನಃ ಪುನಃ ನನಗೆ ದೃಢವಾಗಿ ಹೀಗೆ ಹೇಳಿದ್ದಾನೆ.

ಅದ್ಯ ಮಾಧವ ರಾಜಾನಮಪ್ರಮತ್ತೋಽನುಪಾಲಯ ।
ಆರ್ಯಾಂ ಯುದ್ಧೇ ಮತಿಂ ಕೃತ್ವಾ ಯಾವದ್ ಹನ್ಮಿ ಜಯದ್ರಥಮ್ ॥

ಎಲೈ ಮಧುಕುಲೋತ್ಪನ್ನನೇ, ಯುದ್ಧದಲ್ಲಿ ಶ್ರೇಷ್ಠವಾದ ಬುದ್ಧಿಯನ್ನು ಹೊಂದಿ ನಾನು ಜಯದ್ರಥನನ್ನು ಕೊಲ್ಲುವವರೆಗೆ ಎಚ್ಚರಿಕೆಯಿಂದ ಯುಧಿಷ್ಠಿರನನ್ನು ರಕ್ಷಿಸು.

ತ್ವಯಿ ಚಾಹಂ ಮಹಾಬಾಹೋ ಪ್ರದ್ಯುಮ್ನೇ ವಾ ಮಹಾರಥೇ ।
ರಾಜಗೋಪೇ ಹನಿಷ್ಯಾಮಿ ನಿರಪೇಕ್ಷೋ ಜಯದ್ರಥಮ್ ॥ ೧೨ ॥

ಎಲೈ ಮಹಾಬಾಹುವೇ, ನೀನಾಗಲೀ ಅಥವಾ ಮಹಾರಥನಾದ ಪ್ರದ್ಯುಮ್ನನಾಗಲೀ ರಾಜನನ್ನು ರಕ್ಷಿಸಿದರೆ ನಾನು ಬೇರೆ ಯಾವ ಅಪೇಕ್ಷೆಯೂ ಇಲ್ಲದೆ ಜಯದ್ರಥನನ್ನು ಕೊಲ್ಲುವೆನು.

ಸ ಏವಂ ಸುವಿನಿಕ್ಷಿಪ್ತೋ ನಿಕ್ಷೇಪಃ ಸವ್ಯಸಾಚಿನಾ ।
ಭಾರದ್ವಾಜಭಯಂ ತೇಽದ್ಯ ಮನ್ಯತೇ ವೈ ಧನಂಜಯಃ ॥ ೧೩ ॥

ಹೀಗೆ ಸವ್ಯಸಾಚಿಯಾದ ಅರ್ಜುನನಿಂದ ನನ್ನಲ್ಲಿ ನಿಕ್ಷೇಪವಾಗಿ ಇಡಲ್ಪಟ್ಟಿದ್ದೀಯೆ. ಅರ್ಜುನನು ನಿನಗೆ ಈ ದಿನ ದ್ರೋಣರಿಂದ ಭಯವಿದೆ ಎಂದು ತಿಳಿದಿದ್ದಾನೆ (ಅರ್ಜುನನು ನನಗೆ ಹೀಗೆ ಹೇಳಿದ್ದಾನೆ).

ಜಾನಾಸಿ ಹಿ ರಣೇ ದ್ರೋಣಂ ರಭಸಂ ಶ್ರೇಷ್ಠಸಮ್ಮತಮ್ ।
ಪ್ರತಿಜ್ಞಾ ಚಾಪಿ ತೇ ನಿತ್ಯಂ ಶ್ರುತಾ ದ್ರೋಣಸ್ಯ ಮಾಧವ ॥ ೧೪ ॥

ಎಲೈ ಮಾಧವನೇ, ಶ್ರೇಷ್ಠ ಸಮ್ಮತರಾದ ದ್ರೋಣರ ರಣರಂಗದಲ್ಲಿನ ವೇಗವನ್ನು ನೀನು ತಿಳಿದಿದ್ದೀಯೆ. ದ್ರೋಣರ ಪ್ರತಿಜ್ಞೆಯನ್ನೂ ಸಹ ಯಾವಾಗಲೂ ಕೇಳಿದ್ದೀಯೆ.

ಗ್ರಹಣಂ ಧರ್ಮರಾಜಸ್ಯ ಭಾರದ್ವಾಜೋಽಪಿ ಗೃಧ್ಯತಿ ।
ಶಕ್ತಶ್ಚಾಪಿ ರಣೇ ದ್ರೋಣೋ ನಿಗೃಹೀತುಂ ಯುಧಿಷ್ಠಿರಮ್ ॥ ೧೫ ॥

ದ್ರೋಣರು ಧರ್ಮರಾಜನನ್ನು ಸೆರೆಹಿಡಿಯಲು ಅಪೇಕ್ಷಿಸುತ್ತಾರೆ. ರಣರಂಗದಲ್ಲಿ ಯುಧಿಷ್ಠಿರನನ್ನು ಹಿಡಿಯಲು ಅವರು ಸಮರ್ಥರಾಗಿಯೂ ಇದ್ದಾರೆ.

ಏವಂ ತ್ವಯಿ ಸಮಾಧಾಯ ಧರ್ಮರಾಜಂ ನರೋತ್ತಮಮ್ ।
ಅಹಮದ್ಯ ಗಮಿಷ್ಯಾಮಿ ಸೈಂಧವಸ್ಯ ವಧಾಯ ಹಿ ॥ ೧೬ ॥

ಆದ್ದರಿಂದ ನರಶ್ರೇಷ್ಠನಾದ ಧರ್ಮರಾಜನನ್ನು ನಿನಗೆ ಒಪ್ಪಿಸಿ ನಾನು ಈ ದಿನ ಸೈಂಧವನ ವಧೆಗಾಗಿ ಹೋಗುವೆನು.

ಸ ತ್ವಮದ್ಯ ರಣೇ ಯತ್ತೋ ರಕ್ಷ ಮಾಧವ ಪಾಂಡವಮ್ ।
ರಕ್ಷಣೇ ಧರ್ಮರಾಜಸ್ಯ ಧ್ರುವೋ ಹಿ ವಿಜಯೋ ಮಮ ॥ ೧೭ ॥

ಎಲೈ ಮಾಧವನೇ, ಈ ದಿನ ನೀನು ಪಾಂಡುಪುತ್ರನಾದ ಧರ್ಮರಾಜನನ್ನು ಎಚ್ಚರಿಕೆಯಿಂದ ರಕ್ಷಿಸು. ನೀನು ಧರ್ಮರಾಜನನ್ನು ರಕ್ಷಿಸಿದರೆ ಯುದ್ಧದಲ್ಲಿನನ್ನ ಜಯವು ನಿಶ್ಚಿತವಾದುದು.

ಜಯದ್ರಥಮಹಂ ಹತ್ವಾ ಧ್ರುವಮೇಷ್ಯಾಮಿ ಮಾಧವ ।
ನ ಧರ್ಮರಾಜಂ ದ್ರೋಣಶ್ಚೇನ್ನಿಗೃಹ್ಣೀಯಾದ್ ರಣೇ ಬಲಾತ್ ॥ ೧೮ ॥

ಎಲೈ ಮಾಧವನೇ, ದ್ರೋಣರು ತಮ್ಮ ಸಾಮರ್ಥ್ಯದಿಂದ ರಣರಂಗದಲ್ಲಿ ಧರ್ಮರಾಜನನ್ನು ಸೆರೆಹಿಡಿಯದಿದ್ದರೆ ನಾನು ಜಯದ್ರಥನನ್ನು ಕೊಂದು ಖಂಡಿತವಾಗಿ ಮರಳಿ ಬರುವೆನು.

ನಿಗೃಹೀತೇ ನರಶ್ರೇಷ್ಠೇ ಭಾರದ್ವಾಜೇನ ಮಾಧವ ।
ಸೈಂಧವಸ್ಯ ವಧೋ ನ ಸ್ಯಾನ್ಮಮಾಪ್ರೀತಿಸ್ತಥಾ ಭವೇತ್ ॥ ೧೯ ॥

ಎಲೈ ಮಾಧವನೇ, ದ್ರೋಣರು ನರೋತ್ತಮನಾದ ಧರ್ಮರಾಜನನ್ನು ಸೆರೆಹಿಡಿದರೆ ಸೈಂಧವನ ವಧೆ ಆಗಲಾರದು. ನನಗೆ ಅಸಮಾಧಾನವೂ ಆದೀತು.

ಏವಂಗತೇ ನರಶ್ರೇಷ್ಠೇ ಪಾಂಡವೇ ಸತ್ಯವಾದಿನಿ ।
ಅಸ್ಮಾಕಂ ಗಮನಂ ವ್ಯಕ್ತಂ ವನಂ ಪ್ರತಿ ಭವೇತ್ಪುನಃ ॥ ೨೦ ॥

ಯದಿ ದ್ರೋಣೋ ರಣೇ ಕ್ರುದ್ಧೋ ನಿಗೃಹ್ಣೀಯಾದ್ ಯುಧಿಷ್ಠಿರಮ್ ।
ಸೋಽಯಂ ಮಮ ಜಯೋ ವ್ಯಕ್ತಂ ವ್ಯರ್ಥ ಏವ ಭವಿಷ್ಯತಿ ॥ ೨೧ ॥

ಸತ್ಯವಾದಿಯಾದ, ನರಶ್ರೇಷ್ಠನಾದ, ಪಾಂಡವನಾದ ಧರ್ಮರಾಜನು ಅಂತಹ ಪರಿಸ್ಥಿತಿಯನ್ನು ಹೊಂದಿದರೆ ನಾವು ಪುನಃ ಖಂಡಿತವಾಗಿ ವನವಾಸಕ್ಕೆ ಹೋಗಬೇಕಾದೀತು. ಕ್ರುದ್ಧರಾದ ದ್ರೋಣರು ರಣರಂಗದಲ್ಲಿ ಯುಧಿಷ್ಠಿರನನ್ನು ಹಿಡಿದರೆ ಈ ನನ್ನ ಜಯವೂ ಸಹ ಸ್ಪಷ್ಟವಾಗಿ ವ್ಯರ್ಥವಾಗುವುದು.

ಸ ತ್ವಮದ್ಯ ಮಹಾಬಾಹೋ ಪ್ರಿಯಾರ್ಥಂ ಮಮ ಮಾಧವ ।
ಜಯಾರ್ಥಂ ಚ ಯಶೋಽರ್ಥಂ ಚ ರಕ್ಷ ರಾಜಾನಮಾಹವೇ ॥ ೨೨ ॥

ಎಲೈ ಮಾಧವನೇ, ಮಹಾಬಾಹುವೇ, ಅಂತಹ (ಆದ್ದರಿಂದ) ನೀನು ಈ ದಿನ ನನ್ನ ಹಿತಕ್ಕಾಗಿ, ಜಯದ ಸಲುವಾಗಿ ಮತ್ತು ಕೀರ್ತಿಯ ಸಲುವಾಗಿ ರಾಜನನ್ನು ರಕ್ಷಿಸು (ಎಂದು ಅರ್ಜುನನು ನನಗೆ ಹೇಳಿದ್ದಾನೆ).

ಸ ಭವಾನ್ ಮಯಿ ನಿಕ್ಷೇಪೋ ನಿಕ್ಷಿಪ್ತಃ ಸವ್ಯಸಾಚಿನಾ ।
ಭಾರದ್ವಾದ್ವಾದ್ ಭಯಂ ನಿತ್ಯಂ ಪಶ್ಯಮಾನೇನ ತೇ ಪ್ರಭೋ ॥ ೨೩ ॥

ಎಲೈ ಪ್ರಭುವಾದ ಯುಧಿಷ್ಠಿರನೇ, ಅಂತಹ ನಿನ್ನನ್ನು ಅರ್ಜುನನು ದ್ರೋಣರಿಂದ ನಿತ್ಯವೂ ಭಯವನ್ನು ಆಶಂಕಿಸುತ್ತಾ ನನ್ನಲ್ಲಿ ನಿಕ್ಷೇಪವಾಗಿ ಇಟ್ಟಿದ್ದಾನೆ.

ತಸ್ಯಾಪಿ ಚ ಮಹಾಬಾಹೋ ಸತ್ಯಂ ಪಶ್ಯಾಮಿ ಸಂಯುಗೇ ।
ನಾನ್ಯಂ ಹಿ ಪ್ರತಿಯೋದ್ಧಾರಂ ರೌಗ್ಮಿಣೇಯಾದೃತೇ ಪ್ರಭೋ ॥ ೨೪ ॥

ಮಾಂ ಚಾಸೌ ಮನ್ಯತೇ ಯುದ್ಧೇ ಭಾರದ್ವಾಜಸ್ಯ ಧೀಮತಃ ॥ ೨೫ ॥

ಎಲೈ ಮಹಾಬಾಹುವೇ, ಆ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಲು ಸಹ ರಣರಂಗದಲ್ಲಿ ಪ್ರದ್ಯುಮ್ನನೊಬ್ಬನನ್ನು ಬಿಟ್ಟರೆ ಬೇರೆ ಯಾವ ಪ್ರತಿಯೋಧನನ್ನೂ ನಾನು ಖಂಡಿತವಾಗಿ ಕಾಣುವುದಿಲ್ಲ. ಮೇಧಾವಿಯಾದ ಅರ್ಜುನನು ನನ್ನನ್ನೂ ಸಹ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಲು ಸಮರ್ಥನೆಂದು ತಿಳಿದಿದ್ದಾನೆ.

ಸೋಽಹಂ ಸಂಭಾವನಾಂ ಚೈವಮಾಚಾರ್ಯವಚನಂ ಚ ತತ್ ।
ಪೃಷ್ಠತೋ ನೋತ್ಸಹೇ ಕರ್ತುಂ ನ ತ್ವಾಂ ತ್ಯಕ್ಷ್ಯಾಮಿ ಪಾಂಡವ ॥ ೨೬ ॥

ಎಲೈ ಪಾಂಡವನೇ, ಅಂತಹ ನಾನು ನೀನು ತೋರಿಸುವ ಗೌರವವನ್ನು ಮತ್ತು ನನಗೆ ಆಚಾರ್ಯನಾದ ಅರ್ಜುನನ ಮಾತನ್ನು ತಿರಸ್ಕರಿಸಲಾರೆ. ಆದ್ದರಿಂದ ನಿನ್ನನ್ನು ಬಿಟ್ಟುಹೋಗುವುದಿಲ್ಲ.

ಆಚಾರ್ಯೋ ಲಘುಹಸ್ತಶ್ಚ ಅವಧ್ಯಕವಚಾವೃತಃ ।
ಉಪಲಭ್ಯ ರಣೇ ಕ್ರೀಡೇದ್ ಯಥಾ ಶಕುನಿನಾ ಶಿಶುಃ ॥ ೨೭ ॥

ಆಚಾರ್ಯನಾದ ಅರ್ಜುನನು ಕ್ಷಿಪ್ರಹಸ್ತನೂ, ಅವಧ್ಯವಾದ ಕವಚವನ್ನು ಧರಿಸಿದವನೂ ಆಗಿದ್ದಾನೆ. ಅವನು ರಣಭೂಮಿಯನ್ನು ಸೇರಿ ಮಗುವು ಮರದ ಪಕ್ಷಿಯ ಜೊತೆಯಲ್ಲಿ ಆಡಿದಂತೆ ಆಡಿಯಾನು.

ಯದಿ ಕಾರ್ಷ್ಣಿರ್ಧನುಷ್ಪಾಣಿರಿಹ ಸ್ಯಾನ್ಮಕರಧ್ವಜಃ ।
ತಸ್ಯೈ ತ್ವಾಂ ವಿಸೃಜೇಯಂ ವೈ ಸ ತ್ವಾಂ ರಕ್ಷೇದ್ ಯಥಾಽರ್ಜುನಃ ॥

ಒಂದು ಪಕ್ಷ ಮಕರಧ್ವಜನಾದ ಪ್ರದ್ಯುಮ್ನನು ಧನುಷ್ಪಾಣಿಯಾಗಿ ಇಲ್ಲಿ ಇದ್ದಿದ್ದರೆ ನಿನ್ನನ್ನು ಅವನ ವಶಕ್ಕೆ ಒಪ್ಪಿಸುತ್ತಿದ್ದೆ. ಅರ್ಜುನನಂತೆಯೇ ಅವನು ನಿನ್ನನ್ನು ರಕ್ಷಿಸುತ್ತಿದ್ದನು.

ಕುರು ತ್ವಮಾತ್ಮನೋ ಗುಪ್ತಿಂ ಕಸ್ಯೇ ಗೋಪ್ತಾ ಗತೇ ಮಯಿ ।
ಯಃ ಪ್ರತೀಯಾದ್ ರಣೇ ದ್ರೋಣಂ ಯಾವದ್ ಗಚ್ಛಾಮಿ ಪಾಂಡವಮ್ ॥

ನಿನ್ನ ರಕ್ಷಣೆಯನ್ನು ನೀನೇ ಮಾಡಿಕೊಳ್ಳುವವನಾಗು. ನಾನು ಇಲ್ಲಿಂದ ಹೊರಟು ಪಾಂಡವನಾದ ಅರ್ಜುನನನ್ನು ಸೇರಿದರೆ, ನಾನು ಇಲ್ಲದಿರುವಾಗ ದ್ರೋಣರಿಗೆ ಪ್ರತಿಯಾಗಿ ಯುದ್ಧವನ್ನು ಮಾಡಿ ನಿನ್ನನ್ನು ರಕ್ಷಿಸುವವರು ಯಾರು?

ಮಾ ಹಿ ತೇ ಭಯಮದ್ಯಾಸ್ತು ರಾಜನ್ನರ್ಜುನಸಂಭವಮ್ ।
ನಹಿ ಜಾತು ಮಹಾಬಾಹುರ್ಭಾರಮುದ್ಯಮ್ಯ ಸೀದತಿ ॥ ೩೦ ॥

ಎಲೈ ರಾಜನೇ, ನಿನಗೆ ಅರ್ಜುನನ ವಿಷಯದಲ್ಲಿ ಈ ದಿನ ಭಯಪಡುವ ಕಾರಣವಿಲ್ಲ. ಮಹಾಬಾಹುವಾದ ಅರ್ಜುನನು ದೊಡ್ಡ ಭಾರವು ಒದಗಿದಾಗ ಎಂದೂ ವಿಷಾದ ಪಡುವವನಲ್ಲ.

ಯೇ ಚ ಸೌವೀರಕಾ ಯೋಧಾಸ್ತಥಾ ಸೈಂಧವಪೌರವಾಃ ।
ಉದೀಚ್ಯಾ ದಾಕ್ಷಿಣಾತ್ಯಾಶ್ಚ ಯೇ ಚಾನ್ಯೇಽಪಿ ಮಹಾರಥಾಃ ॥ ೩೧ ॥

ಯೇ ಚ ಕರ್ಣಮುಖಾ ರಾಜನ್ ರಥೋದಾರಾಃ ಪ್ರಕೀರ್ತಿತಾಃ ।
ಧನಂಜಯಸ್ಯ ಕ್ರುದ್ಧಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥ ೩೨ ॥

ಎಲೈ ರಾಜನೇ, ಸುವೀರದೇಶದ ಯೋಧರೂ, ಸೈಂಧವ-ಪೌರವ ಯೋಧರೂ, ಉತ್ತರ ದೇಶದ ಮತ್ತು ದಕ್ಷಿಣದೇಶದ ಯೋಧರೂ ಮತ್ತು ಉಳಿದ ಮಹಾರಥರೂ ಯಾರಿದ್ದಾರೆಯೋ, ಯಾವ ಕರ್ಣ ಮೊದಲಾದವರು ಶ್ರೇಷ್ಠರಾದ ರಥರೆಂದು ಹೇಳಲ್ಪಡುತ್ತಾರೆಯೋ ಅವರೆಲ್ಲರೂ ಕೋಪಗೊಂಡ ಅರ್ಜುನನ ಹದಿನಾರನೆಯ ಒಂದು ಕಲೆಗೂ (ಭಾಗಕ್ಕೂ) ಸಮರಾದವರಲ್ಲ.

ಉದ್ಯುಕ್ತಾ ಪೃಥಿವೀ ರಾಜನ್ ಸಸುರಾಸುರಮಾನವಾ ।
ಸರಾಕ್ಷಸಗಣಾ ಚೈವ ಸಕಿನ್ನರಮಹೋರಗಾ ।
ಜಂಗಮಸ್ಥಾವರೈಃ ಸಾರ್ಧಂ ನಾಲಂ ಪಾರ್ಥಸ್ಯ ಸಂಯುಗೇ ॥ ೩೩ ॥
ಏತತ್ ಜ್ಞಾತ್ವಾ ಮಹಾರಾಜ ಮೈತು ತೇ ಭೀರ್ಧನಂಜಯೇ ॥ ೩೪ ॥

ಎಲೈ ರಾಜನೇ, ಸುರಾಸುರ ಮಾನವರಿಂದ ಸಹಿತವಾದ, ರಾಕ್ಷಸ ಗಣಗಳಿಂದಲೂ, ಕಿನ್ನರ-ಮಹೋರಗಗಳಿಂದಲೂ, ಎಲ್ಲ ಸ್ಥಾವರ-ಜಂಗಮಗಳಿಂದಲೂ ಸಹಿತವಾದ ಈ ಭೂಮಿಯು ಯುದ್ಧದಲ್ಲಿ ಅರ್ಜುನನ ಸಾಮರ್ಥ್ಯದ ಎದುರಿನಲ್ಲಿ ಸಾಕಾಗುವುದಿಲ್ಲ. ಎಲೈ ಮಹಾರಾಜನೇ, ಇದನ್ನು ತಿಳಿದು ಧನಂಜಯನ ವಿಷಯದಲ್ಲಿ ಭಯವನ್ನು ಬಿಡು.

ಯತ್ರ ಕೃಷ್ಣೌ ಮಹೇಷ್ವಾಸೌ ಗತೌ ಸತ್ಯಪರಾಕ್ರಮೌ ।
ನ ತತ್ರ ಕರ್ಮಣೋ ವ್ಯಾಪತ್ ಕಥಂಚಿದಪಿ ವಿದ್ಯತೇ ॥ ೩೫ ॥

ಎಲ್ಲಿ ಸತ್ಯಪರಾಕ್ರಮಶಾಲಿಗಳೂ ಮತ್ತು ಮಹಾಧನುರ್ಧಾರಿಯೂ ಆದ ಕೃಷ್ಣಾರ್ಜುನರು ಹೋಗಿದ್ದಾರೆಯೋ ಅಲ್ಲಿ ಯಾವ ರೀತಿಯಿಂದಲೂ ಯಾವ ಕಾರ್ಯವೂ ಕೆಡುವುದಿಲ್ಲ.

ದೈವಂ ಕೃತಾಸ್ತ್ರತಾಂ ಯೋಗಮಮರ್ಷಂ ಶೌರ್ಯಮಾಹವೇ ।
ಕೃತಜ್ಞತಾಂ ದಯಾಂ ಚಾಪಿ ಭ್ರಾತುಸ್ತ್ವಮಪಿ ಚಿಂತಯ ॥ ೩೬ ॥

ನೀನು ನಿನ್ನ ತಮ್ಮನಾದ ಅರ್ಜುನನ ದೈವಬಲವನ್ನೂ, ಅಸ್ತ್ರಜ್ಞತೆಯನ್ನೂ, ವಿದ್ಯೆಯನ್ನೂ, ಕೋಪವನ್ನೂ, ಯುದ್ಧದಲ್ಲಿ ಶೌರ್ಯವನ್ನೂ, ಕೃತಜ್ಞತೆಯನ್ನೂ, ದಯೆಯನ್ನೂ ಚಿಂತಿಸುವವನಾಗು.

ಮಯಿ ಚಾಪ್ಯಪಯಾತೇ ತ್ವಂ ಗಚ್ಛಮಾನೇऽರ್ಜುನಂ ಪ್ರತಿ ।
ದ್ರೋಣೇ ಚಾಸ್ತ್ರಾಸ್ತ್ರತಾಂ ಸಂಖೇ ರಾಜಂಸ್ತ್ವಮನುಚಿಂತಯ ॥ ೩೭ ॥

ಎಲೈ ರಾಜನೇ, ನಾನು ನಿನ್ನನ್ನು ಬಿಟ್ಟು ಅರ್ಜುನನ ಬಳಿಗೆ ಹೋದರೆ ಯುದ್ಧದಲ್ಲಿ ದ್ರೋಣರ ಅಸ್ತ್ರಕೌಶಲವನ್ನು ನೀನು ಚಿಂತಿಸು.

ಆಚಾರ್ಯೋ ಹಿ ಭೃಶಂ ರಾಜನ್ ನಿಗ್ರಹೇ ತವ ಗೃದ್ಧ್ಯತಿ ।
ಪ್ರತಿಜ್ಞಾಮಾತ್ಮನೋ ರಕ್ಷನ್ ಸತ್ಯಾಂ ಕರ್ತುಂ ಚ ಭಾರತ ॥ ೩೮ ॥

ಎಲೈ ಭಾರತನೇ, ದ್ರೋಣಾಚಾರ್ಯರು ತಮ್ಮ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡಲು, ಯುದ್ಧದಲ್ಲಿ ನಿನ್ನನ್ನು ಹಿಡಿಯಲು ಬಹಳವಾಗಿ ಅಪೇಕ್ಷಿಸುತ್ತಾರೆ.

ಯಸ್ಯಾಹಂ ಪ್ರತ್ಯಯಾತ್ ಪಾರ್ಥ ಗಚ್ಛೇಯಂ ಫಲ್ಗುನಂ ಪ್ರತಿ ।
ಕುರುಷ್ವಾದ್ಯಾತ್ಮನೋ ಗುಪ್ತಿಂ ಕಸ್ಯೇ ಗೋಪ್ತಾ ಗತೇ ಮಯಿ ।
ಪ್ರತ್ಯಯೋ ನಹಿ ಮೇ ಪಾರ್ಥ ಯಾವದ್ ಗಚ್ಛಾಮಿ ಪಾಂಡವಮ್ ॥

ಎಲೈ ಯುಧಿಷ್ಠಿರನೇ, ನಾನು ಯಾರ ಮೇಲೆ ನಂಬಿಕೆಯಿಂದ ಅರ್ಜುನನ ಬಳಿಗೆ ಹೋದೇನು? ನೀನೇ ನಿನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗುವುದು. ನಾನು ಹೋದರೆ

ನಿನಗೆ ರಕ್ಷಕರು ಯಾರು? ನಾನು ಅರ್ಜುನನ ಬಳಿಗೆ ಹೋದರೆ ನಿನ್ನನ್ನು ಯಾರಾದರೂ ರಕ್ಷಿಸುವರೆಂಬ ನಂಬಿಕೆಯು ನನಗಿಲ್ಲ.

ತಸ್ಮಾದಹಂ ತ್ವಯಿ ಕೌರವ್ಯ ವಿನಿಕ್ಷಿಪ್ತೇ ಮಹಾರಥೇ ।
ಕಸ್ಮಿಂಶ್ಚಿತ್ ಸಂಪ್ರಯಾಸ್ಯಾಮಿ ಸತ್ಯಮೇತದ್ ಬ್ರವೀಮಿ ತೇ ॥೪೦॥

ಎಲೈ ಕೌರವ್ಯನೇ, ಹಾಗೆ ಯಾವನಲ್ಲಾದರೂ ಮಹಾರಥನಲ್ಲಿ ನಂಬಿಕೆಯಿದ್ದಿದ್ದರೆ ನಿನ್ನನ್ನು ಅವನಿಗೆ ಒಪ್ಪಿಸಿ ನಾನು ಹೋಗುತ್ತಿದ್ದೆ. ಈ ಮಾತನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ನ ಪಶ್ಯಾಮಿ ರಥಂ ಕಂಚಿದ್ ಯಸ್ತೇ ಗೋಪ್ತಾ ಭವೇದಿಹ ।
ಶಕ್ತಂ ಯಂ ಮನ್ಯಸೇ ರಾಜನ್ ಗೋಪ್ತಾರಂ ಪ್ರತಿ ಪಾಂಡವ ॥ ೪೧ ॥

ಎಲೈ ರಾಜನೇ, ಪಾಂಡವನೇ, ನೀನು ಯಾರನ್ನು ನಿನ್ನ ರಕ್ಷಕನೆಂದು ತಿಳಿಯುವಿಯೋ ಅಂತಹ ಯಾವ ರಕ್ಷಕನಾದ ಮಹಾರಥನನ್ನೂ ನಾನು ಇಲ್ಲಿ ಕಾಣುವುದಿಲ್ಲ.

ಏತದ್ ವಿಚಾರ್ಯ ಬಹುಶೋ ಬುದ್ಧ್ಯಾ ಬುದ್ಧಿಮತಾಂ ವರ ।
ದೃಷ್ಟ್ವಾ ಶ್ರೇಯಃ ಪರಂ ಬುದ್ಧ್ಯಾ ತತೋ ರಾಜನ್ ಪ್ರಶಾಧಿ ಮಾಮ್॥

ಮೇಧಾವಿಗಳಲ್ಲಿ ಶ್ರೇಷ್ಠನಾದವನೇ, ಇದನ್ನು ನಿನ್ನ ಬುದ್ಧಿಯಿಂದ ಬಹಳ ವಿಚಾರ ಮಾಡಿ, ಯಾವುದು ಶ್ರೇಯಸ್ಕರವೆಂದು ತಿಳಿದು ಎಲೈ ರಾಜನೇ, ನನಗೆ ಆದೇಶವನ್ನು ನೀಡುವವನಾಗು.

ಯುಧಿಷ್ಠಿರಃ

ಏವಮೇತನ್ಮಹಾಬಾಹೋ ಯಥಾ ವದಸಿ ಮಾಧವ ।
ನತು ಮೇ ಶುದ್ಧ್ಯತೇ ಭಾವಃ ಶ್ವೇತಾಶ್ವಂ ಪ್ರತಿ ಮಾರಿಷ ॥ ೪೩ ॥

ಯುಧಿಷ್ಠಿರ– ಎಲೈ ಮಾಧವನೇ, ಮಹಾಬಾಹುವೇ, ಇವೆಲ್ಲವೂ ನೀನು ಹೇಳಿದಂತೆಯೇ ಸರಿ. ಆದರೆ ಪೂಜ್ಯನೇ, ಅರ್ಜುನನ ವಿಷಯದಲ್ಲಿ ನನ್ನ ಮನಸ್ಸಿಗೆ ಸಮಾಧಾನವಿಲ್ಲ.

ಕರಿಷ್ಯೇ ಚ ಪರಂ ಯತ್ನಮಾತ್ಮನೋ ರಕ್ಷಣಂ ಪ್ರತಿ ।
ಗಚ್ಛ ತ್ವಂ ಸಮನುಜ್ಞಾತೋ ಯತ್ರ ಯಾತೋ ಧನಂಜಯಃ ॥ ೪೪ ॥

ನಾನು ನನ್ನ ರಕ್ಷಣೆಯ ವಿಷಯದಲ್ಲಿ ಪರಮಪ್ರಯತ್ನವನ್ನು ಮಾಡುವೆನು. ನಿನಗೆ ಅನುಮತಿಯನ್ನು ಕೊಟ್ಟಿದ್ದೇನೆ, ಅರ್ಜುನನು ಹೋದಲ್ಲಿಗೆ ನೀನು ಹೋಗು.

ಆತ್ಮಸಂರಕ್ಷಣಂ ಸಂಖೇ ಗಮನಂ ಚಾರ್ಜುನಂ ಪ್ರತಿ ।
ವಿಚಾರ್ಯೈತದ್ ದ್ವಯಂ ಬುದ್ಧ್ಯಾ ಗಮನಂ ತತ್ರ ರೋಚಯೇ ॥೪೫॥

ಯುದ್ಧದಲ್ಲಿ ನನ್ನ ರಕ್ಷಣೆ ಮತ್ತು ಅರ್ಜುನನ ಕಡೆಗೆ ಗಮನ, ಎರಡನ್ನೂ ಬುದ್ಧಿಯಿಂದ ವಿಚಾರ ಮಾಡಿ, ನೀನು ಅರ್ಜುನನಿದ್ದಲ್ಲಿಗೆ ಹೋಗುವುದನ್ನೇ ನಾನು ಬಯಸುತ್ತೇನೆ.

ಪೃಷ್ಠತಃ ಪುರುಷವ್ಯಾಘ್ರ ಭೀಮಸ್ತಾ ನುಗಮಿಷ್ಯತಿ ।
ಗಚ್ಛ ತ್ವಂ ಸಮನುಜ್ಞಾತೋ ಯತ್ರ ಯಾತೋ ಧನಂಜಯಃ ।
ಮಮಾಪಿ ರಕ್ಷಣಂ ಭೀಮಃ ಕರಿಷ್ಯತಿ ಮಹಾಬಲಃ ॥ ೪೬ ॥

ಎಲೈ ಪುರುಷವ್ಯಾಘ್ರನೇ, ನಿನ್ನನ್ನು ಭೀಮನು ಹಿಂಬಾಲಿಸುತ್ತಾನೆ. ನನ್ನಿಂದ ಅನುಮತಿಯನ್ನು ಪಡೆದವನಾಗಿ ನೀನು ಧನಂಜಯನಿದ್ದಲ್ಲಿಗೆ ಹೋಗು. ಮಹಾಬಲನಾದ ಭೀಮನು ನನ್ನ ರಕ್ಷಣೆಯನ್ನೂ ಮಾಡುವನು.

ಪಾರ್ಷತಶ್ಚ ಸಸೋದರ್ಯಃ ಪಾರ್ಥಿವಾಶ್ಚ ಮಹಾರಥಾಃ ।
ದ್ರೌಪದೇಯಾಶ್ಚ ಮಾಂ ತಾತ ರಕ್ಷಿಷ್ಯಂತಿ ನ ಸಂಶಯಃ ॥ ೪೭ ॥

ಕೇಕಯಾ ಭ್ರಾತರಃ ಪಂಚ ರಾಕ್ಷಸಶ್ಚ ಘಟೋತ್ಕಚಃ ।
ವಿರಾಟೋ ದ್ರುಪದಶ್ಚೈವ ಶಿಖಂಡೀ ಚ ಮಹಾರಥಃ ॥ ೪೮ ॥

ಧೃಷ್ಟಕೇತುಶ್ಚ ಬಲವಾನ್ ಕುಂತಿಭೋಜಶ್ಚ ಮಾತುಲಃ ।
ನಕುಲಃ ಸಹದೇವಶ್ಚ ಪಾಂಚಾಲಾಃ ಸೃಂಜಯಾಸ್ತಥಾ ।
ಏತೇ ಸಮಾಹಿತಾಸ್ತಾತ ರಕ್ಷಿಷ್ಯಂತಿ ನ ಸಂಶಯಃ ॥ ೪೯ ॥

ಎಲೈ ಪ್ರೀತಿಪಾತ್ರನೇ, ತನ್ನ ಸಹೋದರರಿಂದ ಕೂಡಿದ ಧೃಷ್ಟದ್ಯುಮ್ನ, ಮಹಾರಥರಾದ ರಾಜರು, ದ್ರೌಪದಿಯ ಐವರು ಪುತ್ರರು ನನ್ನನ್ನು ರಕ್ಷಿಸುವರು. ಇದರಲ್ಲಿ ಸಂಶಯವಿಲ್ಲ. ಕೇಕಯ ದೇಶದ ಐವರು ಸಹೋದರರು, ರಾಕ್ಷಸನಾದ

ಘಟೋತ್ಕಚ, ಮಹಾರಥರಾದ ವಿರಾಟ, ದ್ರುಪದ ಮತ್ತು ಶಿಖಂಡಿ, ಬಲಿಷ್ಠನಾದ ಧೃಷ್ಟಕೇತು, ಸೋದರಮಾವನಾದ ಕುಂತಿಭೋಜ, ನಕುಲ-ಸಹದೇವರು, ಪಾಂಚಾಲರು ಮತ್ತು ಸೃಂಜಯರು, ಎಲೈ ಪ್ರೀತಿಪಾತ್ರನೇ, ಇವರೆಲ್ಲರೂ ಎಚ್ಚರಿಕೆಯಿಂದ ನನ್ನನ್ನು ರಕ್ಷಿಸುವರು. ಇದರಲ್ಲಿ ಸಂಶಯವಿಲ್ಲ.

ನ ದ್ರೋಣಃ ಸಹ ಸೈನ್ಯೇನ ಕೃತವರ್ಮಾ ಚ ಸಂಯುಗೇ ।
ಸಮಾಸಾದಯಿತುಂ ಶಕ್ತೌ ನಚ ಮಾಂ ಧರ್ಷಯಿಷ್ಯತಃ ॥ ೫೦ ॥

ರಣರಂಗದಲ್ಲಿ ಸೈನ್ಯದಿಂದ ಕೂಡಿದ ದ್ರೋಣರಾಗಲೀ ಅಥವಾ ಕೃತವರ್ಮನಾಗಲೀ ನನ್ನ ಬಳಿಗೆ ಬರಲು ಸಮರ್ಥರಾಗುವುದಿಲ್ಲ. ಅವರು ನನ್ನನ್ನು ಪರಾಭವಗೊಳಿಸಲಾರರು.

ಧೃಷ್ಟದ್ಯುಮ್ನಸ್ತು ಸಮರೇ ದ್ರೋಣಂ ಕ್ರುದ್ಧಂ ಪರಂತಪಃ ।
ಧಾರಯಿಷ್ಯತಿ ವಿಕ್ರಮ್ಯ ವೇಲೇವ ಮಕರಾಲಯಮ್ ॥ ೫೧ ॥

ಪರಂತಪನಾದ ಧೃಷ್ಟದ್ಯುಮ್ನನಾದರೋ ಕೋಪಗೊಂಡವನಾಗಿ ಯುದ್ಧದಲ್ಲಿ ತೀರವು ಸಮುದ್ರವನ್ನು ತಡೆದಂತೆ ತನ್ನ ಪರಾಕ್ರಮದಿಂದ ದ್ರೋಣರನ್ನು ತಡೆಯುವನು.

ಯತ್ರ ಸ್ಥಾಸ್ಯತಿ ಸಂಗ್ರಾಮೇ ಪಾರ್ಷತಃ ಪರವೀರಹಾ ।
ನ ದ್ರೋಣಸ್ಯ ಬಲಂ ತಾತ ಕ್ರಾಮೇತ್ ತತ್ರ ಕಥಂಚನ ॥ ೫೨ ॥

ಎಲೈ ಪ್ರೀತಿಪಾತ್ರನೇ, ಪರವೀರಘಾತಕನಾದ ಧೃಷ್ಟದ್ಯುಮ್ನನು ರಣರಂಗದಲ್ಲಿ ಎಲ್ಲಿರುವನೋ ಅಲ್ಲಿ ದ್ರೋಣರ ಸೈನ್ಯವು ಯಾವ ರೀತಿಯಿಂದಲೂ ಪ್ರವೇಶಿಸಲಾರದು.

ಏಷ ದ್ರೋಣವಿನಾಶಾಯ ಸಮುತ್ಪನ್ನೋ ಹುತಾಶನಾತ್ ।
ಕವಚೀ ಸ ಶರೀ ಖಡ್ಗೀ ಧನ್ವೀ ಸ ರಥಭೂಷಣಃ ॥ ೫೩ ॥

ಈ ಧೃಷ್ಟದ್ಯುಮ್ನನು ಕವಚ, ಬಾಣಗಳು, ಖಡ್ಗ, ಧನುಸ್ಸುಗಳನ್ನು ಧರಿಸಿ, ರಥಭೂಷಣನಾಗಿ ಅಗ್ನಿಯಿಂದ ದ್ರೋಣರ ನಾಶಕ್ಕಾಗಿಯೇ ಜನಿಸಿದ್ದಾನೆ.

ಏಷ ದ್ರೋಣಂ ರಣೇ ಕ್ರುದ್ಧಂ ವಾರಯೇತ ಸ ವೈ ಪ್ರಭೋ ।
ಪಾಂಚಾಲಃ ಸಹಿತಃ ಸರ್ವೈಃ ಪಾಂಡವಾನಾಂ ಚ ಧನ್ವಿಭಿಃ ॥ ೫೪ ॥

ಎಲೈ ಪ್ರಭುವೇ, ಅಂತಹ ಈ ಧೃಷ್ಟದ್ಯುಮ್ನನು ಎಲ್ಲ ಪಾಂಚಾಲರ ಮತ್ತು ಪಾಂಡವರ ಧನುರ್ಧಾರಿಗಳಿಂದ ಸಹಿತನಾಗಿ ಕ್ರುದ್ಧನಾಗಿ ಯುದ್ಧದಲ್ಲಿ ದ್ರೋಣರನ್ನು ತಡೆಯುವನು.

ವಿಸ್ರಬ್ಧೋ ಗಚ್ಛ ಶೈನೇಯ ಮಾ ಕಾರ್ಷೀರ್ಮಯಿ ಸಂಭ್ರಮಮ್ ।
ಧೃಷ್ಟದ್ಯುಮ್ನೋ ರಣೇ ಕ್ರುದ್ಧಂ ನ ದ್ರೋಣಂ ವಾರಯಿಷ್ಯತಿ ॥ ೫೫ ॥

ಎಲೈ ಶೈನೇಯನೇ, ಧೈರ್ಯವಾಗಿ ಇಲ್ಲಿಂದ ಹೊರಡು. ನನ್ನ ವಿಷಯದಲ್ಲಿ ಆತಂಕಪಡಬೇಡ. ಯುದ್ಧದಲ್ಲಿ ಕೋಪಗೊಂಡ ಆ ಧೃಷ್ಟದ್ಯುಮ್ನನು ದ್ರೋಣರನ್ನು ತಡೆಯುವನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತನವತಿತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆಂಟನೆಯ ಅಧ್ಯಾಯ

ಸಂಜಯಃ

ಧರ್ಮರಾಜಸ್ಯ ತದ್ ವಾಕ್ಯಂ ನಿಶಮ್ಯ ಶಿನಿಪುಂಗವಃ ।
ಪಾರ್ಥಾಚ್ಚ ಭಯಮಾಶಂಕೀ ಪರಿತ್ಯಾಗಾನ್ಮಹೀಪತೇಃ ॥ ೧ ॥

ಅಪವಾದಂ ಹ್ಯಾತ್ಮನಶ್ಚ ಲೋಕಾದ್ ರಕ್ಷನ್ ವಿಶೇಷತಃ ।
ನ ಮಾಂ ಭೀತ ಇತಿ ಬ್ರೂಯಾತ್ ಪ್ರಯಾಂತಂ ಫಲ್ಗುನಂ ಪ್ರತಿ॥ ೨ ॥

ನಿಶ್ಚಿತ್ಯ ಬಹುಧೈವಂ ಸ ಸಾತ್ಯಕಿರ್ಯುದ್ಧದುರ್ಮದಃ ।
ನಾತಿವ್ಯಕ್ತಮಿವಾಭಾಷ್ಯ ಧರ್ಮರಾಜಂ ಮಹಾಯಶಾಃ ॥ ೩ ॥

ಶೋಕಗದ್ಗದಯಾ ವಾಚಾ ಶೋಕೋಪಹತಚೇತನಃ ।
ಯಥೇದಾನೀಮಿತಿ ಧ್ಯಾತ್ವಾ ಧರ್ಮರಾಜಮಥಾಬ್ರವೀತ್ ॥ ೪ ॥

ಸಂಜಯ– ಶಿನಿಪುಂಗವನಾದ ಸಾತ್ಯಕಿಯು ಧರ್ಮರಾಜನ ಆ ಮಾತನ್ನು ಕೇಳಿ, ರಾಜನನ್ನು ಪರಿತ್ಯಾಗ ಮಾಡಿದರೆ ಅರ್ಜುನನ ಆಸಮಾಧಾನದಿಂದ ಉಂಟಾಗುವ ಭಯವನ್ನೂ ಶಂಕಿಸಿ, ವಿಶೇಷವಾಗಿ ತನಗೆ ಒದಗಿ ಬರಬಹುದಾದ ಲೋಕಾಪವಾದವನ್ನು ಸ್ಮರಿಸಿಕೊಳ್ಳುತ್ತಾ, ಅರ್ಜುನನ ಬಳಿಗೆ ಹೋಗಲು ತನ್ನನ್ನು ಯಾರೂ ಭೀತನೆಂದು ಹೇಳಬಾರದು ಎಂದು ಯೋಚಿಸುತ್ತಾ, ಯುದ್ಧದುರ್ಮದನಾದ ಸಾತ್ಯಕಿಯು ಹೀಗೆಲ್ಲಾ ಬಹುರೀತಿಯಲ್ಲಿ ಯೋಚಿಸುತ್ತಾ, ಮಹಾಕೀರ್ತಿವಂತನಾದ ಅವನು ಧರ್ಮರಾಜನನ್ನು ಉದ್ದೇಶಿಸಿ ಶೋಕದಿಂದ ಕೂಡಿದ ಮನಸ್ಸುಳ್ಳವನಾಗಿ, ಶೋಕಗದ್ಗದ ಮಾತಿನಿಂದ ಹೇಗೆ ಧರ್ಮರಾಜನು ಇಲ್ಲಿಯೂ ರಕ್ಷಿಸಲ್ಪಡುವನು ಎಂದು ಚಿಂತಿಸಿ, ಧರ್ಮರಾಜನನ್ನು ಕುರಿತು ಅಸ್ಪಷ್ಟವಾಗಿ ಮಾತನಾಡಿದನು.

ಕೃತಾಂ ಚೇನ್ನಯೇ ರಕ್ಷಾಂ ಸ್ಪೃಹ ತೇಽಸ್ತು ವಿಶಾಂಪತೇ ।
ಅನುಯಾಸ್ಯಾಮಿ ಬೀಭತ್ಸುಂ ಕರಿಷ್ಯೇ ವಚನಂ ತವ ॥ ೫ ॥

ಎಲೈ ರಾಜನೇ, ನಿನಗೆ ರಕ್ಷಣೆಯು ಇರುವುದೆಂದು ಭಾವಿಸುವುದಾದರೆ, ನಿನಗೆ ಕ್ಷೇಮವಾಗಲಿ. ನಾನು ನಿನ್ನ ಆಜ್ಞೆಯನ್ನು ಅನುಸರಿಸಿ ಅರ್ಜುನನ ಬಳಿಗೆ ಹೋಗುವೆನು.

ನ ಹಿ ಮೇ ಪಾಂಡವಾತ್ ಕಶ್ಚಿತ್ ತ್ರಿಷು ಲೋಕೇಷು ವಿದ್ಯತೇ ।
ಯೋ ಮೇ ಪ್ರಿಯತರೋ ರಾಜನ್ ಸತ್ಯಮೇತದ್ ಬ್ರವೀಮಿ ತೇ ॥೬॥

ಎಲೈ ರಾಜನೇ, ನನಗೆ ಅರ್ಜುನನಿಗಿಂತ ಪ್ರಿಯನಾದವನು ಮೂರುಲೋಕಗಳಲ್ಲಿ ಯಾವನೂ ಇಲ್ಲ. ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ತಸ್ಯಾಹಂ ಪದವೀಂ ಯಾಸ್ಯೇ ಸಂದೇಶಾತ್ ತವ ಮಾನದ ।
ತ್ವತ್ಕೃತೇ ನ ಹಿ ಮೇ ಕಿಂಚಿತ್ ನ ಕರ್ತವ್ಯಂ ಕಥಂಚನ ॥ ೭ ॥

ಎಲೈ ಮಾನದನೇ, ನಿನ್ನ ಆಜ್ಞೆಯಂತೆ ನಾನು ಅರ್ಜುನನ ಮಾರ್ಗವನ್ನು ಹಿಡಿದು ಹೋಗುವೆನು. ನಿನ್ನ ಸಲುವಾಗಿ ನಾನು ಮಾಡಲಾರದುದು ಯಾವುದೂ ಇಲ್ಲ.

ಯಥಾ ಹಿ ಮೇ ಗುರೋರ್ವಾಕ್ಯಂ ವಿಶಿಷ್ಟಂ ದ್ವಿಪದಾಂವರ ।
ತಥಾ ತವಾಪಿ ವಚನಂ ವಿಶಿಷ್ಟತರಮೇವ ಮೇ ॥ ೮ ॥

ಎಲೈ ನರಶ್ರೇಷ್ಠನೇ, ಹೇಗೆ ನನಗೆ ಆಚಾರ್ಯನಾದ ಅರ್ಜುನನ ಮಾತು ವಿಶಿಷ್ಟವಾದುದೋ ಹಾಗೆಯೇ ನಿನ್ನ ವಚನವು ನನಗೆ ಅದಕ್ಕಿಂತಲೂ ವಿಶಿಷ್ಟವಾದುದು.

ಪ್ರಿಯೇ ಹಿ ತವ ವರ್ತೇತೇ ಭ್ರಾತರೌ ಕೃಷ್ಣಪಾಂಡವೌ ।
ತಯೋಃ ಪ್ರಿಯೇ ಸ್ಥಿತಂ ಚೈವ ವಿದ್ಧಿ ಮಾಂ ರಾಜಸತ್ತಮ ॥ ೯ ॥

ಎಲೈ ರಾಜಶ್ರೇಷ್ಠನೇ, ಸಹೋದರರಾದ ಕೃಷ್ಣಾರ್ಜುನರು ನಿನ್ನ ಹಿತದಲ್ಲಿಯೇ ಆಸಕ್ತರಾಗಿದ್ದಾರೆ. ನನ್ನನ್ನು ಅವರ ಪ್ರಿಯದಲ್ಲಿ ಆಸಕ್ತನಾದವನೆಂದು ತಿಳಿಯುವವನಾಗು.

ತ್ವದಾಜ್ಞಾಂ ಶಿರಸಾऽऽಧಾಯ ಪಾಂಡವಾರ್ಥಮಹಂ ಪ್ರಭೋ ।
ಭೇತ್ಸ್ಯಾಮಿ ದುರ್ಭಿದಂ ಸೈನ್ಯಂ ಪ್ರಯಾಸ್ಯೇ ರಾಜಸತ್ತಮ ॥ ೧೦ ॥

ಎಲೈ ಪ್ರಭುವೇ, ರಾಜಶ್ರೇಷ್ಠನೇ, ನಿನ್ನ ಆಜ್ಞೆಯನ್ನು ತಲೆಯ ಮೇಲೆ ಧರಿಸಿ, ಅರ್ಜುನನ ಸಲುವಾಗಿ ದುರ್ಭೇದ್ಯವಾದ ಆ ಸೈನ್ಯವನ್ನು ಭೇದಿಸಿ, ನಾನು ಪ್ರವೇಶಿಸುವೆನು.

ದ್ರೋಣಾನೀಕಂ ವಿಶಾಮ್ಯೇಷ ಕ್ರುದ್ಧೋ ದ್ರುಷ ಇವಾರ್ಣವಮ್ ।
ತತ್ರ ಯಾಮಿ ಚ ಯತ್ರಾಸೌ ರಾಜನ್ ರಾಜಾ ಜಯದ್ರಥಃ ॥ ೧೧ ॥

ಮೊಸಳೆಯು ಸಮುದ್ರವನ್ನು ಪ್ರವೇಶಿಸುವಂತೆ ಕ್ರುದ್ಧನಾದ ನಾನು ಇದೋ ದ್ರೋಣರ ಸೈನ್ಯವನ್ನು ಪ್ರವೇಶಿಸುತ್ತಿದ್ದೇನೆ. ಎಲೈ ರಾಜನೇ, ಈ ಜಯದ್ರಥನು ಎಲ್ಲಿದ್ದಾನೆಯೋ ಅಲ್ಲಿಗೆ ನಾನು ಹೋಗುತ್ತೇನೆ.

ಯತ್ರ ಸೇನಾಂ ಸಮಾಶ್ರಿತ್ಯ ಭೀತಸ್ತಿಷ್ಠತಿ ಪಾಂಡವಾತ್ ।
ಗುಪ್ತೋ ರಥವರಶ್ರೇಷ್ಠೈರ್ದ್ರೋಣಿಕರ್ಣಕೃಪಾದಿಭಃ ॥ ೧೨ ॥

ಎಲ್ಲಿ ಶ್ರೇಷ್ಠ ಮಹಾರಥರಾದ ಅಶ್ವತ್ಥಾಮ-ಕರ್ಣ-ಕೃಪಾದಿಗಳಿಂದ ರಕ್ಷಿತನಾಗಿ, ಅರ್ಜುನನಿಗೆ ಹೆದರಿ ಯಾವ ಸೈನ್ಯವನ್ನು ಆಶ್ರಯಿಸಿದಂತಿದ್ದಾನೆಯೋ (ಅಲ್ಲಿಗೆ ಹೋಗುತ್ತೇನೆ)

ಇತಸ್ತ್ರಿಯೋಜನಂ ಮನ್ಯೇ ತಮಧ್ವಾನಂ ವಿಶಾಂಪತೇ ।
ಯತ್ರ ತಿಷ್ಠತಿ ಪಾರ್ಥೋऽಸೌ ಜಯದ್ರಥವಧೋದ್ಯತಃ ॥ ೧೩ ॥

ಎಲೈ ರಾಜನೇ, ಜಯದ್ರಥನ ವಧೆಯಲ್ಲಿ ಉದ್ಯುಕ್ತನಾದ ಅರ್ಜುನನು ಎಲ್ಲಿದ್ದಾನೆಯೋ ಆ ಮಾರ್ಗವು ಇಲ್ಲಿಂದ ಮೂರುಯೋಜನ ದೂರವಾಗಿದೆ ಎಂದು ತಿಳಿಯುತ್ತೇನೆ.

ತ್ರಿಯೋಜನಗತಸ್ಯಾಪಿ ತತ್ರ ಯಾಸ್ಯಾಮ್ಯಹಂ ಪದಮ್ ।
ಆಸೈಂಧವವಧಾದ್ ರಾಜನ್ ಸುದೃಢೇನಾಂತರಾತ್ಮನಾ ॥ ೧೪ ॥

ಎಲೈ ರಾಜನೇ, ಅವನು ಮೂರು ಯೋಜನ ದೂರದಲ್ಲಿದ್ದರೂ ಸೈಂಧವನ ವಧೆಯಾಗುವವರೆಗೆ ದೃಢವಾದ ಮನಸ್ಸಿನಿಂದ ನಾನು ಅರ್ಜುನನ ಜೊತೆಯಲ್ಲಿಯೇ ಇರುವೆನು.

ಅನಾದಿಷ್ಟಸ್ತು ಗುರುಣಾ ಕೋ ನು ಯುದ್ಧ್ಯೇತ ಮಾನವಃ ।
ಆದಿಷ್ಟಶ್ಚ ತ್ವಯಾ ರಾಜನ್ ಕೋ ನ ಯುದ್ಧ್ಯೇತ ಮಾದೃಶಃ ॥ ೧೫ ॥

ಗುರುವಿನ ಆಜ್ಞೆಯಿಲ್ಲದೆ ಯಾವ ಮನುಷ್ಯ ಯುದ್ಧಮಾಡಿಯಾನು? ಎಲೈ ರಾಜನೇ, ನಿನ್ನಿಂದ ಆದಿಷ್ಟನಾದ ನನ್ನಂತಹ ಯಾವನು ಯುದ್ಧಮಾಡದೆ ಇದ್ದಾನು?

ಅಭಿಜಾನಾಮಿ ತಂ ದೇಶಮಿತಃ ಪೂರ್ಣಂ ತ್ರಿಯೋಜನಮ್ ।
ಯತ್ರ ತಿಷ್ಠತಿ ರಾಜಾಽಸೌ ಸೈಂಧವೋ ಬಾಲಘಾತಕಃ ॥ ೧೬ ॥

ಬಾಲಘಾತಕನಾದ, ರಾಜನಾದ ಸೈಂಧವನು ಎಲ್ಲಿದ್ದಾನೆಯೋ ಆ ಪ್ರದೇಶವು ಇಲ್ಲಿಂದ ಪೂರ್ಣವಾಗಿ ಮೂರು ಯೋಜನ ದೂರದಲ್ಲಿದೆ ಎಂದು ತಿಳಿದಿದ್ದೇನೆ.

ಸಾಗರಪ್ರತಿಮಂ ಸೈನ್ಯಂ ಗರ್ಜಂತಮಿವ ಸಾಗರಮ್ ।
ಹುಲಶಕ್ತಿರಥಪ್ರಾಸಗದಾಶಕ್ಯೃಷ್ಟಿ ತೋಮರಮ್ ।
ಇಷ್ವಾಸವರಸಂಬಾಧಂ ಕ್ಷೋಭಯಿತ್ವಾ ವ್ರಜಾಮ್ಯಹಮ್ ॥ ೧೭ ॥

ಸಾಗರವನ್ನು ಹೋಲುವ, ಸಾಗರದಂತೆ ಗರ್ಜಿಸುವ, ಹುಲ-ಶಕ್ತಿ-ರಥ-ಪ್ರಾಸ-ಗದಾ-ಋಷ್ಟಿ-ತೋಮರ-ಬಾಣಗಳು-ಧನುಸ್ಸುಗಳು ಇವುಗಳಿಂದ ನಿಬಿಡವಾದ ಸೈನ್ಯ ಸಾಗರವನ್ನು ಕ್ಷೋಭೆಗೊಳಿಸಿ ನಾನು ಮುಂದೆ ಹೋಗುತ್ತೇನೆ.

ಯದೇತತ್ ಕುಂಜರಾನೀಕಂ ಸಹಸ್ರಮನುಪಶ್ಯಸಿ ॥ ೧೮ ॥

ಕುಲಮಾಂಜನಕಂ ನಾಮ ಮತ್ತಾ ಹೈಮವತಾಃ ಸ್ಥಿತಾಃ ।
ಆಸ್ಥಿತಾ ಬಹುಭಿರ್ಮ್ಲೇಚ್ಛೈರ್ಯುದ್ಧಶೌಂಡೈಃ ಪ್ರಹಾರಿಭಿಃ ॥ ೧೯ ॥

ನೀನು ಯಾವ ಸಹಸ್ರ ಗಜಗಳ ಸೇನೆಯನ್ನು ನೋಡುತ್ತಿದ್ದೆಯೋ ಇವು ದಿಗ್ಗಜವಾದ ಅಂಜನ ಗಜದ ಕುಲದಲ್ಲಿ ಜನಿಸಿದವು. ಇವುಗಳ ಕುಲಕ್ಕೆ ಆಂಜನಕ ಎಂದು ಹೆಸರು. ಇವೆಲ್ಲವೂ ಮದಿಸಿದ ಸುವರ್ಣಾಲಂಕೃತವಾದ ಗಜಗಳು. ಯುದ್ಧಕುಶಲರೂ, ಪ್ರಹಾರಶೀಲರೂ ಆದ ಅನೇಕ ಮ್ಲೇಚ್ಛರು ಇವುಗಳನ್ನು ಏರಿದ್ದಾರೆ.

ನಾಗಾ ನಗನಿಭಾ ರಾಜನ್ ಕ್ಷರಂತ ಇವ ತೋಯದಾಃ ।
ನೈತೇ ಜಾತು ನಿವರ್ತೇರನ್ ಪ್ರೇಷಿತಾ ಹಸ್ತಿಸಾದಿಭಿಃ ।
ಅನ್ಯತ್ರ ಹಿ ವಧಾದೇಷಾಂ ನಾಸ್ತಿ ರಾಜನ್ ಪರಾಜಯಃ ॥ ೨೦ ॥

ಎಲೈ ರಾಜನೇ, ಇವು ನೀರನ್ನು ಸುರಿಸುವ ಮೋಡಗಳಂತೆ ಅಥವಾ ಪರ್ವತಗಳಂತೆ ಇವೆ. ಗಜಾರೋಹಿಗಳಿಂದ ಪ್ರೇರಿಸಲ್ಪಟ್ಟ ಇವು ಎಂದೂ ಹಿಂದಿರುಗುವುದಿಲ್ಲ. ಎಲೈ ರಾಜನೇ, ವಧೆಯನ್ನು ಬಿಟ್ಟು ಇವುಗಳಿಗೆ ಬೇರೆ ಪರಾಜಯವಿಲ್ಲ.

ಅಥ ಯಾನ್ ರಥಿನೋ ರಾಜನ್ ಸಮಂತಾದನುಪಶ್ಯಸಿ ।
ಏತೇ ರುಗ್ಮರಥಾ ನಾಮ ರಾಜಪುತ್ರಾ ಮಹಾರಥಾಃ ॥ ೨೧ ॥

ಎಲೈ ರಾಜನೇ, ಸುತ್ತಲೂ ನೀನು ಯಾವ ರಥಿಕರನ್ನು ನೋಡುತ್ತಿದ್ದೀಯೋ ಇವರು ರುಗ್ಮರಥರು ಎಂಬ ಹೆಸರಿನ ಮಹಾರಥರಾದ ರಾಜಪುತ್ರರು.

ರಥೇಷ್ವಸ್ತ್ರೇಷು ನಿಪುಣಾ ನಾಗೇಷು ಚ ವಿಶಾಂಪತೇ ।
ಧನುರ್ವೇದೇ ಗತಾಃ ಪಾರಂ ಮುಷ್ಟಿಯುದ್ಧೇ ಚ ಕೋವಿದಾಃ ॥ ೨೨ ॥

ಎಲೈ ರಾಜನೇ, ಇವರು ರಥಗಳಲ್ಲಿಯೂ ಅಸ್ತ್ರಗಳಲ್ಲಿಯೂ, ಗಜಗಳಲ್ಲಿಯೂ ನಿಪುಣರಾದವರು. ಧನುರ್ವೇದಪಾರಂಗತರಾದವರು ಮತ್ತು ಮುಷ್ಟಿಯುದ್ಧದಲ್ಲಿಯೂ ಕೋವಿದರಾದವರು.

ಗದಾಯುದ್ಧವಿಶೇಷಜ್ಞಾ ನಿಯುದ್ಧಕುಶಲಾಸ್ತಥಾ ।
ಖಡ್ಗಪ್ರಹರಣೇ ಯುಕ್ತಾಃ ಸಂಪಾತೇ ಚಾಸಿಚರ್ಮಣೋಃ ॥ ೨೩ ॥

ಇವರು ಗದಾಯುದ್ಧದಲ್ಲಿ ವಿಶಾರದರು. ಬಾಹುಯುದ್ಧದಲ್ಲಿಯೂ ಕುಶಲರು. ಖಡ್ಗಪ್ರಹಾರವನ್ನು ತಿಳಿದವರು, ಖಡ್ಗ-ಚರ್ಮಗಳನ್ನು ಬೀಸುವುದರಲ್ಲಿಯೂ ಕುಶಲರಾದವರು.

ಶೂರಾಶ್ಚ ಕೃತವಿದ್ಯಾಶ್ಚ ಸ್ಪರ್ಧಂತೇ ಚ ಪರಸ್ಪರಮ್ ।
ನಿತ್ಯಂ ಚ ಸಮರೇ ರಾಜನ್ ಜಿಗೀಷಂತೋ ರಣೇ ಸ್ಥಿತಾಃ ॥೨೪॥

ಎಲೈ ರಾಜನೇ, ಇವರು ಶೂರರು ಮತ್ತು ವಿದ್ಯಾವಂತರು. ಯುದ್ಧದಲ್ಲಿ ನಿಂತು ಜಯವನ್ನು ಬಯಸುತ್ತಾ ಇವರು ಪರಸ್ಪರವಾಗಿ ಯಾವಾಗಲೂ ಸ್ಪರ್ಧಿಸುತ್ತಾರೆ.

ಕರ್ಣೇನ ವಿಹಿತಾ ರಾಜನ್ ದುಃಶಾಸನಮನುವ್ರತಾಃ ।
ಏತಾನೇವ ರಥೋದಾರಾನ್ ವಾಸುದೇವಃ ಪ್ರಶಂಸತಿ ॥ ೨೫ ॥

ಎಲೈ ರಾಜನೇ, ಇವರು ಕರ್ಣನಿಂದ ಸಿದ್ಧಪಡಿಸಲ್ಪಟ್ಟು ದುಶ್ಶಾಸನನ ಅನುಯಾಯಿಗಳಾಗಿದ್ದಾರೆ. ಕೃಷ್ಣನು ಇವರನ್ನೇ ರಥಶ್ರೇಷ್ಠರೆಂದು ಪ್ರಶಂಸಿಸುತ್ತಾನೆ.

ಸತತಂ ಪ್ರಿಯಕಾಮಾ ಹಿ ಕರ್ಣಸ್ಯೈತೇ ವಶೇ ಸ್ಥಿತಾಃ ।
ತಸ್ಯೈವ ವಚನಾದ್ ರಾಜನ್ ನಿವೃತ್ತಾಃ ಶ್ವೇತವಾಹನಾತ್ ॥ ೨೬ ॥

ಇವರು ಸತತವೂ ರಾಜನಿಗೆ ಹಿತವನ್ನು ಮಾಡಲು ಬಯಸಿ ಕರ್ಣನ ವಶದಲ್ಲಿಯೇ ಇರುತ್ತಾರೆ. ಅರ್ಜುನನ ಮುಂದೆ ಯುದ್ಧ ಮಾಡುತ್ತಿದ್ದ ಇವರು ಕರ್ಣನ ವಚನದಂತೆಯೇ ಅರ್ಜುನನ ಹಿಂಭಾಗದಲ್ಲಿ ಬಂದು ನಿಂತಿದ್ದಾರೆ.

ತೇ ನ ಕ್ಷತಾ ನಚ ಶ್ರಾಂತಾ ದೃಢಾವರಣಕಾರ್ಮುಕಾಃ ।
ಮದರ್ಥಂ ವಿಷ್ಠಿತಾ ನೂನಂ ಧಾರ್ತರಾಷ್ಟ್ರಸ್ಯ ಶಾಸನಾತ್ ॥ ೨೭ ॥

ಅವರ ದೇಹದಲ್ಲಿ ವ್ರಣವಿಲ್ಲ. ಅವರಿಗೆ ಶ್ರಮವಿಲ್ಲ. ದೃಢವಾದ ಕವಚ ಮತ್ತು ಧನುಸ್ಸುಗಳನ್ನು ಧರಿಸಿದ್ದಾರೆ. ದುರ್ಯೋಧನನ ಶಾಸನದಂತೆ ನನ್ನ ಸಲುವಾಗಿ ಅವರು ಅಲ್ಲಿ ನಿಲ್ಲಿಸಲ್ಪಟ್ಟಿದ್ದಾರೆ.

ಏತಾನ್ ಪ್ರಮಥ್ಯ ಸಂಗ್ರಾಮೇ ಪ್ರಿಯಾರ್ಥಂ ತವ ಕೌರವ ।
ಪ್ರಯಾಸ್ಯಾಮಿ ತತಃ ಪಶ್ಚಾತ್ ಪದವೀಂ ಸವ್ಯಸಾಚಿನಃ ॥ ೨೮ ॥

ಎಲೈ ಕೌರವನೇ, ನಿನಗೆ ಪ್ರಿಯವನ್ನುಂಟು ಮಾಡುವ ಸಲುವಾಗಿ ಯುದ್ಧದಲ್ಲಿ ಇವರನ್ನು ಮರ್ದನ ಮಾಡಿ, ಅನಂತರ ಅರ್ಜುನನ ಮಾರ್ಗವನ್ನು ಹಿಡಿದು ಹೋಗುವೆನು.

ಯಾಂಸ್ತ್ವೇತಾನಪರಾನ್ ರಾಜನ್ ನಾಗಾನ್ ಸಪ್ತಶತಾನಿಹ ।
ಪ್ರೇಕ್ಷಸೇ ವರ್ಮಸಂಛನ್ನಾನ್ ಕಿರಾತೈಃ ಸಮಧಿಷ್ಠಿತಾನ್ ॥ ೨೯ ॥

ಕಿರಾತರಾಜೋ ಯಾನ್ ಪ್ರಾದಾದ್ ಗೃಹೀತಃ ಸವ್ಯಸಾಚಿನಾ ।
ಅಲಂಕೃತ್ಯ ತದಾ ಪ್ರೇಷ್ಯಾನ್ ಇಚ್ಛನ್ ಜೀವಿತಮಾತ್ಮನಃ ॥ ೩೦ ॥

ಆಸನ್ನೇತೇ ಪುರಾ ರಾಜನ್ ತವ ಕರ್ಮಕರಾ ದೃಢಮ್ ।
ತ್ವಾಮೇವಾದ್ಯ ಯುಯುತ್ಸಂತೇ ಪಶ್ಯ ಕಾಲಸ್ಯ ಪರ್ಯಯಮ್॥ ೩೧ ॥

ಎಲೈ ರಾಜನೇ, ಈ ಬೇರೆ ಯಾವ ಏಳುನೂರು ಗಜಗಳನ್ನು ನೋಡುತ್ತಿದ್ದಿಯೋ ಇವು ಕವಚಗಳಿಂದ ಆಚ್ಛಾದಿತವಾಗಿ ಕಿರಾತರಿಂದ ಏರಲ್ಪಟ್ಟವೆ. ಹಿಂದೆ ದಿಗ್ವಿಜಯ ಸಮಯದಲ್ಲಿ ಅರ್ಜುನನು ಇವನನ್ನು ಹಿಡಿದಾಗ ಕಿರಾತರಾಜನು ತನ್ನ ಜೀವನವನ್ನು ಬಯಸಿ ಇವುಗಳನ್ನು ಅಲಂಕರಿಸಿ ಅರ್ಜುನನಿಗೆ ಸೇವಕರಾದ ಕಿರಾತರ ಜೊತೆಯಲ್ಲಿ ನೀಡಿದನು. ಎಲೈ ರಾಜನೇ, ಇವರು ಹಿಂದೆ ನಿನ್ನ ಕರ್ಮಕರರಾಗಿದ್ದರು. ಈ ದಿನ ನಿನ್ನ ವಿರುದ್ಧವಾಗಿ ಯುದ್ಧವನ್ನು ಮಾಡಲು ಬಯಸುತ್ತಾರೆ. ಕಾಲದ ಗತಿಯನ್ನು ನೋಡು.

ತೇಷಾಮೇತೇ ಮಹಾಮಾತ್ರಾಃ ಕಿರಾತಾ ಯುದ್ಧದುರ್ಮದಾಃ ।
ಹಸ್ತಿಶಿಕ್ಷಾವಿದಶ್ಚೈವ ಸರ್ವೇ ಚೈವಾಗ್ನಿಯೋನಯಃ ॥ ೩೨ ॥

ಈ ಕಿರಾತರು ಅವರಲ್ಲಿ ಯುದ್ಧದುರ್ಮದರಾದ ಪ್ರಧಾನರಾದವರು. ಇವರೆಲ್ಲರೂ ಗಜಶಿಕ್ಷೆಯಲ್ಲಿ ಕುಶಲರು ಮತ್ತು ಅಗ್ನಿಕುಲದಲ್ಲಿ ಜನಿಸಿದವರು.

ಏತೇ ವಿನಿರ್ಜಿತಾಃ ಸರ್ವೇ ಸಂಗ್ರಾಮೇ ಸವ್ಯಸಾಚಿನಾ ।
ಮದರ್ಥಮದ್ಯ ಸಂಯತ್ತಾಃ ಸುಯೋಧನವಶೇ ಸ್ಥಿತಾಃ ॥ ೩೩ ॥

ಇವರೆಲ್ಲರೂ ಹಿಂದೆ ಅರ್ಜುನನಿಂದ ಯುದ್ಧದಲ್ಲಿ ಸೋಲಿಸಲ್ಪಟ್ಟಿದ್ದಾರೆ. ಈ ದಿನ ಸುಯೋಧನನ ವಶದಲ್ಲಿರುವ ಇವರು ನನ್ನನ್ನು ಎದುರಿಸಲು ಉದ್ಯುಕ್ತರಾಗಿದ್ದಾರೆ.

ಏತಾನ್ ಹತ್ವಾ ಶರೈ ರಾಜನ್ ಕಿರಾತಾನ್ ಯುದ್ಧದುರ್ಮದಾನ್ ।
ಸೈಂಧವಸ್ಯ ವಧೇ ಯುಕ್ತಂ ಅನುಯಾಸ್ಯಾಮಿ ಪಾಂಡವಮ್ ॥ ೩೪ ॥

ಎಲೈ ರಾಜನೇ, ಯುದ್ಧದುರ್ಮದರಾದ ಈ ಕಿರಾತರನ್ನು ನನ್ನ ಬಾಣಗಳಿಂದ ಕೊಂದು ಸೈಂಧವನ ವಧೆಯಲ್ಲಿ ಪ್ರಯತ್ನಶೀಲನಾದ ಅರ್ಜುನನ ಕಡೆಗೆ ಹೋಗುವೆನು.

ಏತೇ ಹಿ ಸುಮಹಾನಾಗಾ ಅಂಜನಸ್ಯ ಕುಲೋದ್ಭವಾಃ ।
ಕರ್ಕಶಾಶ್ಚ ವಿನೀತಾಶ್ಚ ಪ್ರಭಿನ್ನಕರಟಾಮುಖಾಃ ॥ ೩೫ ॥

ಈ ದೊಡ್ಡ ಗಜಗಳು ದಿಗ್ಗಜವಾದ ಅಂಜನನ ಕುಲದಲ್ಲಿ ಜನಿಸಿದವುಗಳು. ಇವುಗಳು ಚೆನ್ನಾಗಿ ಪಳಗಿದವು, ಒರಟಾಗಿರುವವು ಮತ್ತು ಕುಂಭಸ್ಥಳದಿಂದ ಮದೋದಕವನ್ನು ಸುರಿಸುತ್ತಿರುವಂತಹವುಗಳು.

ಜಾಂಬೂನದಮಯೈರೇತೇ ಭೂಷಣೈಃ ಸಮಲಂಕೃತಾಃ ।
ಲಬ್ಧಲಕ್ಷ್ಯಾ ರಣೇ ರಾಜನ್ನೈರಾವತಸಮಾ ಯುಧಿ ॥ ೩೬ ॥

ಇವು ಸುವರ್ಣಮಯವಾದ ಆಭರಣಗಳಿಂದ ಅಲಂಕೃತವಾಗಿದೆ. ಎಲೈ ರಾಜನೇ, ಯುದ್ಧದಲ್ಲಿ ಐರಾವತ ಗಜಕ್ಕೆ ಸಮವಾದ ಇವು ಎಂದೂ ತಮ್ಮ ಲಕ್ಷ್ಯವನ್ನು ತಪ್ಪುವುದಿಲ್ಲ.

ಆಸ್ಥಿತಾ ದಸ್ಯುಭಿಸ್ತೀಕ್ಷ್ಣೈಃ ಶೂರೈರುತ್ತಮಪಾರ್ವತೈಃ ।
ಕರ್ಕಶೈಃ ಪ್ರವರೈರ್ಯೋಧೈಃ ಕಾರ್ಷ್ಣಾಯಸತನುಚ್ಛದೈಃ ॥ ೩೭ ॥

ಇವು ಶೂರರೂ, ಉತ್ತಮ ಪರ್ವತ ಪ್ರದೇಶದಲ್ಲಿ ವಾಸಿಸುವವರೂ, ಕರ್ಕಶರೂ, ಶ್ರೇಷ್ಠವಾದ ಯೋಧರೂ, ಕ್ರೂರಿಗಳೂ, ಕಬ್ಬಿಣದ ಕವಚವನ್ನು ಧರಿಸಿದವರೂ, ದಸ್ಯುಗಳೂ ಆದ ಗಜಾರೋಹಿಗಳಿಂದ ಏರಲ್ಪಟ್ಟಿವೆ.

ಸಂತಿ ಗೋಯೋನಯಶ್ಚಾತ್ರ ಸಂತಿ ವಾನರಯೋನಯಃ ।
ಮಕ್ಷಿಕಾಯೋನಯಶ್ಚಾನ್ಯೇ ತಥಾ ವಾನರಯೋನಯಃ ॥ ೩೮ ॥

ಇಲ್ಲಿ ಗೋಯೋನಿಗಳು, ವಾನರಯೋನಿಗಳು, ಮಕ್ಷಿಕಾಯೋನಿಗಳೂ ಇದ್ದಾರೆ.

ಅನೀಕಮಸತಾಮೇತದ್ ಧೂಮವರ್ಣಮುದೀರ್ಯತೇ ।
ಮ್ಲೇಚ್ಛಾನಾಂ ಪಾಪಕರ್ಮ್ಮಣಾಂ ಹಿಮವದ್ದುರ್ಗ್ಗವಾಸಿನಾಮ್ ॥ ೩೯ ॥

ಈ ಅಸಜ್ಜನರ ಸೈನ್ಯ ಸಮೂಹವು ಧೂಮವರ್ಣದಿಂದ ಕೂಡಿದುದಾಗಿದೆ ಎಂದು ಹೇಳಲ್ಪಡುತ್ತದೆ. ಇದು ಹಿಮಾಲಯದ ದುರ್ಗವಾಸಿಗಳಾದ ಪಾಪಾಚಾರಿಗಳಾದ ಮ್ಲೇಚ್ಛರ ಸೇನೆ.

ಏತದ್ ದುರ್ಯೋಧನೋ ಲಬ್ಧ್ವಾ ಸಮಗ್ರಂ ನಾಗಮಂಡಲಮ್ ।
ಭೀಷ್ಮಂ ದ್ರೋಣಂ ಕೃಪಂ ಕರ್ಣಮಾವಂತ್ಯಮಥ ಸೈಂಧವಮ್ ॥ ೪೦ ॥

ದ್ರೌಣಿಂ ಚ ಸೌಮದತ್ತಿಂ ಚ ಪಾಂಡವಾನತಿ ಮನ್ಯತೇ ।
ಕೃತಾರ್ಥಮಥ ಚಾತ್ಮಾನಂ ಮನ್ಯತೇ ಕಾಲಚೋದಿತಃ ॥ ೪೧ ॥

ದುರ್ಯೋಧನನು ಈ ಸಮಗ್ರ ಗಜಸೇನೆಯನ್ನು ಹೊಂದಿ ಇದು ಭೀಷ್ಮರನ್ನೂ, ದ್ರೋಣರನ್ನೂ, ಕೃಪರನ್ನೂ, ಕರ್ಣನನ್ನೂ, ಅವಂತಿರಾಜನನ್ನೂ, ಸೈಂಧವನನ್ನೂ, ಅಶ್ವತ್ಥಾಮರನ್ನೂ, ಭೂರಿಶ್ರವನನ್ನೂ ಮತ್ತು ಪಾಂಡವರನ್ನೂ ಮೀರಿದುದು ಎಂದು ತಿಳಿದಿದ್ದಾನೆ. ಮೃತ್ಯುಚೋದಿತನಾದ ಅವನು ತನ್ನನ್ನು ಕೃತಾರ್ಥನೆಂದು ಭಾವಿಸಿದ್ದಾನೆ.

ತೇ ಚ ಸರ್ವೇ ತು ಸಂಪ್ರಾಪ್ತಾ ಮಮ ನಾರಾಚಗೋಚರಮ್ ।
ನ ಭವಿಷ್ಯಂತಿ ಕೌಂತೇಯ ಯದ್ಯಪಿ ಸ್ಯುರ್ಮನೋಜವಾಃ ॥ ೪೨ ॥

ಎಲೈ ಕೌಂತೇಯನೇ, ಇವರೆಲ್ಲರೂ ಮನೋಜವವನ್ನು ಹೊಂದಿದರೂ ನನ್ನ ನಾರಾಚದ ವ್ಯಾಪ್ತಿಗೆ ಸಿಲುಕಿದ ಇವರು ಉಳಿಯುವುದಿಲ್ಲ.

ತೇನ ಸಂಭಾವಿತಾ ನಿತ್ಯಂ ಪರವೀರ್ಯೋಪಜೀವಿನಾ ।
ವಿನಾಶಮುಪಯಾಸ್ಯಂತಿ ಮಚ್ಛರೌಘನಿಪೀಡಿತಾಃ ॥ ೪೩ ॥

ಇನ್ನೊಬ್ಬರ ಪರಾಕ್ರಮದಿಂದ ಜೀವಿಸುವ ದುರ್ಯೋಧನನಿಂದ ಯಾವಾಗಲೂ ಪೂಜಿಸಲ್ಪಟ್ಟ ಇವರು ನನ್ನ ಬಾಣಗಳ ಸಮೂಹದಿಂದ ಪೀಡಿತರಾಗಿ ವಿನಾಶವನ್ನು ಹೊಂದುವರು.

ಯ ಏತೇ ರಥಿನೋ ರಾಜನ್ ದೃಶ್ಯಂತೇ ಕಾಂಚನಧ್ವಜಾಃ ।
ಏತೇ ದುರ್ವಾರಣಾ ನಾಮ ಕಾಂಬೋಜಾ ಯದಿ ತೇ ಶ್ರುತಾಃ ॥೪೪॥

ಎಲೈ ರಾಜನೇ, ಸುವರ್ಣಮಯವಾದ ಧ್ವಜವುಳ್ಳ ಯಾವ ಈ ರಥಿಕರು ಕಾಣುತ್ತಿದ್ದಾರೆಯೋ ಇವರು ನೀನು ಕೇಳಿದ್ದರೆ ಕಾಂಬೋಜ ದೇಶದ ದುರ್ವಾರಣ ಎಂಬ ಹೆಸರುಳ್ಳವರು.

ಶೂರಾಶ್ಚ ಕೃತವಿದ್ಯಾಶ್ಚ ಧನುರ್ವೇದೇ ಚ ನಿಷ್ಠಿತಾಃ ।
ಸಂಹತಾಶ್ಚ ಭೃಶಂ ಹ್ಯೇತೇ ಅನ್ಯೋನ್ಯಸ್ಯ ಹಿತೈಷಿಣಃ ॥ ೪೫ ॥

ಇವರು ಶೂರರೂ, ವಿದ್ಯಾಪಾರಂಗತರೂ, ಧನುರ್ವೇದದಲ್ಲಿ ನಿಷ್ಠೆಯುಳ್ಳವರೂ, ಪರಸ್ಪರ ಹಿತವನ್ನು ಬಯಸುತ್ತಾ ಬಹಳ ಒಂದುಗೂಡಿ ಇರುವವರೂ ಆಗಿದ್ದಾರೆ.

ಅಕ್ಷೋಹಿಣ್ಯಶ್ಚ ಸಂರಬ್ಧಾ ಧಾರ್ತರಾಷ್ಟ್ರಸ್ಯ ಪಾರ್ಥಿವ ।
ಯತ್ತಾ ಮದರ್ಥಂ ತಿಷ್ಠಂತಿ ಕುರುವೀರಾಭಿರಕ್ಷಿತಾಃ ॥ ೪೬ ॥

ಎಲೈ ರಾಜನೇ, ದುರ್ಯೋಧನನ ಕೋಪಗೊಂಡ ಅಕ್ಷೋಹಿಣಿ ಸೈನ್ಯಗಳಿದೆ. ಅವು ಕುರುವೀರರಿಂದ ರಕ್ಷಿತವಾಗಿ ನನ್ನ ಸಲುವಾಗಿ ಎಚ್ಚರಿಕೆಯಿಂದ ನಿಂತಿವೆ.

ಅಪ್ರಮತ್ತಾ ಮಹಾರಾಜ ಮಾಮೇವ ಪ್ರತ್ಯುಪಸ್ಥಿತಾಃ ।
ತಾಂಸ್ತ್ವಹಂ ಪ್ರತಿಧಕ್ಷ್ಯಾಮಿ ತೃಣಾನೀವ ಹುತಾಶನಃ ॥ ೪೭ ॥

ಎಲೈ ಮಹಾರಾಜನೇ, ಅವು ಪ್ರಮಾದವನ್ನು ಮಾಡದೆ ನನ್ನ ವಿರುದ್ಧ ಯುದ್ಧ ಮಾಡುವ ಸಲುವಾಗಿಯೇ ಸಿದ್ಧವಾಗಿವೆ. ಅಗ್ನಿಯು ತೃಣವನ್ನು ಭಸ್ಮಮಾಡಿದಂತೆ ನಾನು ಅವುಗಳನ್ನು ದಹಿಸುವೆನು.

ತಸ್ಮಾತ್ ಸರ್ವಾನುಪಾಸಂಗಾನ್ ಸರ್ವೋಪಕರಣಾನಿ ಚ ।
ರಥೇ ಕುರುಂತು ಮೇ ರಾಜನ್ ಯಥಾವದ್ ರಥಕಲ್ಪಕಾಃ ॥ ೪೮ ॥

ಆದ್ದರಿಂದ ಎಲೈ ರಾಜನೇ, ರಥವನ್ನು ಸಿದ್ಧಮಾಡುವವರು ನನ್ನ ರಥದಲ್ಲಿ ಎಲ್ಲ ವಿಧವಾದ ಬತ್ತಳಿಕೆಗಳನ್ನೂ ಮತ್ತು ಉಳಿದ ಉಪಕರಣಗಳನ್ನೂ ತುಂಬಿ ಸಿದ್ಧಪಡಿಸುವವರಾಗಲಿ.

ಅಸ್ಮಿಂಸ್ತು ಖಲು ಸಂಗ್ರಾಮೇ ಗ್ರಾಹ್ಯಂ ವಿವಿಧಮಾಯುಧಮ್ ।
ಯಥೋಪದಿಷ್ಟಮಾಚಾರ್ಯೈಃ ಕಾರ್ಯಃ ಪಂಚಗುಣೋ ರಥಃ ॥೪೯॥

ಇಂತಹ ಯುದ್ಧದಲ್ಲಿ ಆಚಾರ್ಯರು ಉಪದೇಶ ಮಾಡಿದಂತೆ ವಿವಿಧವಾದ ಆಯುಧಗಳನ್ನು ತೆಗೆದುಕೊಂಡು, ಒಂದು ರಥದಲ್ಲಿ ಐದು ರಥಗಳಲ್ಲಿ ಇರುವಷ್ಟು ಸಲಕರಣೆಗಳು ಇರುವಂತೆ ಮಾಡಬೇಕು.

ಕಾಂಬೋಜೈರ್ಹಿ ಸಮೇಷ್ಯಾಮಿ ತೀಕ್ಷ್ಣೈರಾಶೀವಿಷೋಪಮೈಃ ।
ನಾನಾಶಸ್ತ್ರಸಮಾವಾಪೈರ್ವಿವಿಧಾಯುಧಯೋಧಿಭಿಃ ॥ ೫೦ ॥

ನಾನು ತೀಕ್ಷ್ಣರೂ, ಸರ್ಪಸದೃಶರೂ, ನಾನಾ ಶಸ್ತ್ರಗಳನ್ನು ಪ್ರಯೋಗಿಸಲು ಬಲ್ಲವರೂ, ಅನೇಕ ವಿಧವಾದ ಆಯುಧಗಳಿಂದ ಯುದ್ಧ ಮಾಡುವವರೂ ಆದ ಕಾಂಬೋಜರ ಜೊತೆಯಲ್ಲಿ ಸಮಾಗಮವನ್ನು ಹೊಂದುವೆನು.

ಕಿರಾತೈಶ್ಚ ಸಮೇಷ್ಯಾಮಿ ವಿಷಕಲ್ಪಪ್ರಹಾರಿಭಿಃ ।
ಪಾದಾತೈಃ ಸತತಂ ರಾಜನ್ ದುರ್ಯೋಧನಹಿತೈಷಿಭಿಃ ॥ ೫೧ ॥

ಎಲೈ ರಾಜನೇ, ವಿಷದಂತೆ ಪ್ರಹಾರಶೀಲರಾದ, ಯಾವಾಗಲೂ ದುರ್ಯೋಧನನ ಹಿತೈಷಿಗಳಾದ ಪದಾತಿಗಳಾದ ಕಿರಾತರ ಜೊತೆಯಲ್ಲಿ ಸಮಾಗಮವನ್ನು ಹೊಂದುವೆನು.

ಶಕೈಶ್ಚಾಪಿ ಸಮೇಷ್ಯಾಮಿ ಶಕ್ರತುಲ್ಯಬಲೈಃ ಸಹ ।
ಅಗ್ನಿಕಲ್ಪೈರ್ದುರಾಧರ್ಷೈಃ ಪ್ರದೀಪ್ತೈರಿವ ಪಾವಕೈಃ ॥ ೫೨ ॥

ಇಂದ್ರನಿಗೆ ಸಮಾನವಾದ ಬಲವುಳ್ಳ, ಅಗ್ನಿಗೆ ಸದೃಶರಾದ, ಸೋಲಿಸಲು ಕಷ್ಟಸಾಧ್ಯರಾದ, ಜ್ವಲಿಸುವ ಅಗ್ನಿಯಂತಿರುವ ಶಕರಿಂದಲೂ ಸಮಾಗಮವನ್ನು ಹೊಂದುವೆನು.

ತಥಾಽನ್ಯೈರ್ವಿವಿಧೈರ್ಯೋಧೈಃ ಕಾಲಕಲ್ಪೈರ್ದುರಾಸದೈಃ ।
ಸಮೇಷ್ಯಾಮಿ ರಣೇ ರಾಜನ್ ಬಹುಭಿರ್ಯುದ್ಧದುರ್ಮದೈಃ ॥ ೫೩ ॥

ಎಲೈ ರಾಜನೇ, ಹಾಗೆಯೇ ಮೃತ್ಯುಕಲ್ಪರೂ, ಸಮೀಪಿಸಲು ಕಷ್ಟಸಾಧ್ಯರೂ, ಯುದ್ಧದುರ್ಮದರೂ ಆದ ಇನ್ನೂ ಬಹುವಿಧವಾದ ಯೋಧರ ಜೊತೆಯಲ್ಲಿ ನಾನು ಸಮಾಗಮವನ್ನು ಹೊಂದುವೆನು.

ತ್ರಿಯೋಜನಗತಸ್ಯಾಹಂ ಪದವೀಂ ಸವ್ಯಸಾಚಿನಃ ।
ಯಾಸ್ಯಾಮಿ ರಥಿನಾಂ ಶ್ರೇಷ್ಠಂ ಪ್ರವರಂ ಚ ಧನುಷ್ಮತಾಮ್ ॥ ೫೪ ॥

ಮೂರು ಯೋಜನ ದೂರದಲ್ಲಿರುವ, ರಥಿಶ್ರೇಷ್ಠನಾದ, ಧನುರ್ಧಾರಿಗಳಲ್ಲಿಯೂ ಶ್ರೇಷ್ಠನಾದ ಅರ್ಜುನನ ಮಾರ್ಗವನ್ನು ಹಿಡಿದು ನಾನು ಹೋಗುವೆನು.

ಸೂರ್ಯೋದಯಗತಸ್ಯಾಹಂ ಪಾಂಡವಸ್ಯ ಗತಿಂ ಚರನ್ ।
ಅಪರಾಹ್ಣಂ ಗತೇ ಸೂರ್ಯೇ ಗಮಿಷ್ಯಾಮಿ ನ ಸಂಶಯಃ ॥ ೫೫ ॥

ನಾನು ಸೂರ್ಯೋದಯ ಕಾಲದಲ್ಲಿ ಹೊರಟ ಅರ್ಜುನನ ಮಾರ್ಗದಲ್ಲಿಯೇ ಸಂಚರಿಸುತ್ತಾ, ಸೂರ್ಯನು ಅಪರಾಹ್ಣ ತಲುಪಿರಲು ಅರ್ಜುನನನ್ನು ಹೋಗಿ ತಲುಪುವೆನು. ಇದರಲ್ಲಿ ಸಂಶಯವಿಲ್ಲ.

ತಸ್ಮಾನ್ಮೇ ವಾಜಿನೋ ಮುಕ್ತಾನ್ ವಿಶ್ರಾಂತಾಂಶ್ಚ ವಿಚಕ್ಷಣೈಃ ।
ಉಪಾವೃತ್ತಾಂಶ್ಚ ಪೀತಾಂಶ್ಚ ಪುನರ್ಯುಂಜಂತು ಮೇ ರಥೇ ॥ ೫೬ ॥

ಆದ್ದರಿಂದ ನನ್ನ ರಥದಿಂದ ಬಿಚ್ಚಿದ, ವಿಚಕ್ಷಣರಿಂದ ವಿಶ್ರಾಂತಿಯನ್ನು ಪಡೆದ, ನೀರನ್ನು ಕುಡಿದು ಹಿಂದಿರುಗಿದ ಅಶ್ವಗಳನ್ನು ಪುನಃ ನನ್ನ ರಥಕ್ಕೆ ನಿನ್ನ ಸೇವಕರು ಹೂಡಲಿ (ಎಂದು ಹೇಳಿದನು).

ಸಂಜಯಃ

ತಸ್ಯ ಸರ್ವಾನುಪಾಸಂಗಾನ್ ಸರ್ವೋಪಕರಣಾನಿ ಚ ।
ರಥೇ ಚಾಸ್ಥಾಪಯದ್ ರಾಜಾ ಶಸ್ತ್ರಾಣಿ ವಿವಿಧಾನಿ ಚ ॥ ೫೭ ॥

ಸಂಜಯ– ಆಗ ರಾಜನಾದ ಯುಧಿಷ್ಠಿರನು ಅವನ ಎಲ್ಲಾ ಬತ್ತಳಿಕೆಗಳನ್ನೂ ಮತ್ತು ಉಪಕರಣಗಳನ್ನೂ ಮತ್ತು ವಿವಿಧವಾದ ಶಸ್ತ್ರಗಳನ್ನು ರಥದಲ್ಲಿ ಇರಿಸಿದನು.

ತತಸ್ತಾನ್ ಸರ್ವತೋ ಮುಕ್ತ್ವಾ ಸದಶ್ವಾಂಶ್ಚತುರೋ ಜನಾಃ ।
ರಸವತ್ ಪಾಯಯಾಮಾಸುಃ ಪಾನಂ ಮದಸಮೀರಣಮ್ ॥ ೫೮ ॥

ಪೀತೋಪವೃತ್ತಾನ್ ಸ್ನಾತಾಂಶ್ಚ ಜಗ್ಧಾನ್ನಾನ್ ಸಮಲಂಕೃತಾನ್ ।
ವಿನೀತಶಲ್ಯಾಂಸ್ತುರಗಾಂಶ್ಚತುರೋ ಹೇಮಮಾಲಿನಃ ॥ ೫೯ ॥

ತಾನ್ ಯುಕ್ತಾನ್ ರೂಪ್ಯವರ್ಣಾಭಾನ್ ವಿನೀತಾನ್ ಶೀಘ್ರಗಾಮಿನಃ ।
ಸಂಹೃಷ್ಟಮನಸೋಽವ್ಯಗ್ರಾನ್ ವಿಧಿವತ್ ಕಲ್ಪಿತೇ ರಥೇ ॥ ೬೦ ॥

ಆಗ ಸೇವಕರು ಅವನ ಶ್ರೇಷ್ಠವಾದ ನಾಲ್ಕು ಅಶ್ವಗಳನ್ನು ಎಲ್ಲ ಕಡೆಯಿಂದಲೂ ಬಿಡಿಸಿ, ಮದಕಾರಿಯಾದ ರಸಭರಿತವಾದ ಪಾನವನ್ನು ಕುಡಿಸಿದರು. ಪಾನ ಮಾಡಿ, ಸ್ನಾನ ಮಾಡಿ, ಆಹಾರವನ್ನು ಸೇವಿಸಿ, ದೇಹಕ್ಕೆ ಚುಚ್ಚಿದ ಬಾಣಗಳನ್ನು ತೆಗೆದು, ಸಮಲಂಕೃತವಾದ ಹೇಮಮಾಲೆಗಳನ್ನು ಧರಿಸಿದ, ಬೆಳ್ಳಿಯ ಬಣ್ಣವನ್ನು ಹೊಂದಿದ, ವಿನಯಶೀಲಗಳಾದ, ಶೀಘ್ರಗಾಮಿಗಳಾದ, ಸಂತೋಷಗೊಂಡ ಮನಸ್ಸುಳ್ಳ, ವಿಶೇಷವಾಗಿ ಏಕಾಗ್ರತೆಯನ್ನು ಹೊಂದಿದ ನಾಲ್ಕು ಅಶ್ವಗಳನ್ನು ವಿಧಿಪ್ರಕಾರಕ್ಕೆ ಅನುಗುಣವಾಗಿ ರಥದಲ್ಲಿ ಹೂಡಿದರು.

ಮಹಾಧ್ವಜೇನ ಸಿಂಹೇನ ಹೇಮಕೇಸರಮಾಲಿನಾ ।
ಸಂವೃತೇ ಕೇತಕೈರ್ಹೈಮೈರ್ಮಣಿವಿದ್ರುಮಚಿತ್ರಿತೈಃ ॥ ೬೧ ॥

ಪಾಂಡರಾಭ್ರಪ್ರಕಾಶಾಭಿಃ ಪತಾಕಾಭಿರಲಂಕೃತೇ ।
ಹೇಮದಂಡೋಚ್ಛ್ರಿತಚ್ಛತ್ರೇ ಬಹುಶಸ್ತ್ರಪರಿಚ್ಛದೇ ॥ ೬೨ ॥

ಯೋಜಯಾಮಾಸ ವಿಧಿವದ್ದೇಮಭಾಂಡವಿಭೂಷಿತಾನ್ ॥ ೬೩ ॥

ಸುವರ್ಣಮಯವಾದ ಕೇಸರಮಾಲೆಯನ್ನು ಧರಿಸಿದ, ದೊಡ್ಡ ಸಿಂಹಧ್ವಜದಿಂದ ಕೂಡಿದ, ಸುವರ್ಣಮಣಿಗಳಿಂದ ಮತ್ತು ಹವಳಗಳಿಂದ ವಿಚಿತ್ರವಾದ ಕೇಸರಗಳಿಂದ ಕೂಡಿದ, ದಿವ್ಯಮೋಡದ ಕಾಂತಿಯನ್ನು ಹೊಂದಿದ ಪತಾಕೆಗಳಿಂದ ಅಲಂಕೃತವಾದ, ಸುವರ್ಣದಂಡದ ಮೇಲಕ್ಕೆತ್ತಿದ ಛತ್ರವನ್ನು ಹೊಂದಿದ್ದ, ಅನೇಕ ಶಸ್ತ್ರಸಲಕರಣೆಗಳನ್ನು ತುಂಬಿದ ರಥದಲ್ಲಿ ಶಾಸ್ತ್ರೋಕ್ತ ರೀತಿಯಲ್ಲಿ ಸುವರ್ಣಾಲಂಕೃತವಾದ ಅಶ್ವಗಳನ್ನು ಹೂಡಿದರು.

ದಾರುಕಸ್ಯಾನುಜೋ ಭ್ರಾತಾ ಸೂತಶ್ಚಾಸ್ಯ ಪ್ರಿಯಃ ಸಖಾ ।
ನ್ಯವೇದಯದ್ ರಥಂ ಯುಕ್ತಂ ವಾಸವಸ್ಯೇವ ಮಾತಲಿಃ ॥ ೬೪ ॥

ದಾರುಕನ ತಮ್ಮನೂ ಮತ್ತು ಧೃಷ್ಟದ್ಯುಮ್ನನ ಪ್ರಿಯ ಸ್ನೇಹಿತನೂ ಆದ ಸೂತನು ಮಾತಲಿಯು ಇಂದ್ರನಲ್ಲಿ ನಿವೇದಿಸುವಂತೆ ರಥವು ಸಿದ್ಧವಾಗಿದೆ ಎಂದು ನಿವೇದಿಸಿದನು.

ತತಃ ಸ್ನಾತಃ ಶುಚಿರ್ಭೂತ್ವಾ ಕೃತಕೌತುಕಮಂಗಲಃ ।
ಸ್ನಾತಕಾನಾಂ ಸಹಸ್ರಾಣಾಂ ಪ್ರತಿನಿಷ್ಕ್ರಾಮ್ಯದಾಪಯತ್ ॥ ೬೫ ॥

ಅನಂತರ ಸಾತ್ಯಕಿಯು ಸ್ನಾನ ಮಾಡಿ, ಶುಚಿಯಾಗಿ, ಮಂಗಳಾದಿಗಳನ್ನು ಮಾಡಿಸಿಕೊಂಡು, ಸಹಸ್ರ ಸ್ನಾತಕರಿಗೆ ಒಬ್ಬೊಬ್ಬರಿಗೂ ಒಂದೊಂದು ಸುವರ್ಣ ನಿಷ್ಕವನ್ನು ದಾನ ಮಾಡಿದನು.

ತತಃ ಸಮಧುಪರ್ಕಾಂಭಃ ಪೀತ್ವಾ ಕೈರಾತಕಂ ಮಧು ।
ಲೋಹಿತಾಕ್ಷೋ ಬಭೌ ತತ್ರ ಮದವಿಹ್ವಲಲೋಚನಃ ॥ ೬೬ ॥

ಅನಂತರ ಮಧುಪರ್ಕ ಜಲವನ್ನು ಕುಡಿದು, ಕೈರಾತಕ ಮಧುವನ್ನು ಪಾನ ಮಾಡಿ, ಮದದಿಂದ ವಿಹ್ವಲವಾದ ಕಣ್ಣುಳ್ಳವನಾಗಿ, ಲೋಹಿತಾಕ್ಷನಾಗಿ ಶೋಭಿಸಿದನು.

ಆಲಭ್ಯ ವೀರಃ ಕಾಂಸ್ಯಂ ಚ ಹರ್ಷೇಣ ಮಹತಾನ್ವಿತಃ ।
ದ್ವಿಗುಣೀಕೃತತೇಜೋಭಃ ಪ್ರಜ್ವಲನ್ನಿವ ಪಾವಕಃ ॥ ೬೭ ॥

ಉತ್ಸಂಗೇ ಧನುರಾದಾಯ ಸಶರಂ ರಥಿನಾಂ ವರಃ ।
ಆಶೀರ್ವಾದೈಃ ಪರಿಷ್ವಕ್ತಃ ಸಾತ್ಯಕಿಃ ಶ್ರೀಮತಾಂ ವರಃ ॥ ೬೮ ॥

ವೀರ ಕಾಂಸ್ಯವನ್ನು ಸ್ಪರ್ಶಿಸಿ, ಬಹಳ ಸಂತೋಷದಿಂದ ಕೂಡಿದವನಾಗಿ, ಇಮ್ಮಡಿಯಾದ ತೇಜಸ್ಸಿನಿಂದ ಜ್ವಲಿಸುವ ಅಗ್ನಿಯಂತೆ ಇದ್ದ ರಥಿಶ್ರೇಷ್ಠನಾದ, ಕಾಂತಿಯುಕ್ತರಲ್ಲಿ ಶ್ರೇಷ್ಠನಾದ ಸಾತ್ಯಕಿಯು ತನ್ನ ತೊಡೆಯ ಮೇಲೆ ಬಾಣಸಹಿತವಾದ ಧನುಸ್ಸನ್ನು ಹಿಡಿದುಕೊಂಡು ಆಶೀರ್ವಾದಗಳಿಂದ ಆಶೀರ್ವದಿಸಲ್ಪಟ್ಟವನಾದನು.

ಕೃತಸ್ವಸ್ತ್ಯಥ ವಿಪ್ರೈಃ ಚ ಕವಚೀ ಸಮಲಂಕೃತಃ ।
ಲಾಜೈರ್ಗಂಧೈಸ್ತಥಾ ಮಾಲ್ಯೈಃ ಕನ್ಯಾಭಿರಭಿನಂದಿತಃ ॥ ೬೯ ॥

ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು, ಕವಚವನ್ನು ಧರಿಸಿ, ಲಾಜ ಗಂಧಪುಷ್ಪಮಾಲೆಗಳಿಂದ ಅಲಂಕೃತನಾಗಿ ಕನ್ಯೆಯರಿಂದ ಅಭಿನಂದಿಸಲ್ಪಟ್ಟನು.

ಯುಧಿಷ್ಠಿರಸ್ಯ ಚರಣಾವಭಿವಾದ್ಯ ಕೃತಾಂಜಲಿಃ ।
ತೇನ ಮೂರ್ಧ್ನ್ಯುಪಾಘ್ರಾತಃ ಕೃತಸ್ವಸ್ತ್ಯಯನೋಽಪಿ ಚ ॥ ೭೦ ॥

ಆಶಿಷೋ ವಿಪುಲಾಃ ಶ್ರುತ್ವಾ ಧರ್ಮರಾಜಮುಖೋದ್ಗತಾಃ ।
ಹರ್ಷೇಣ ಮಹತಾ ಯುಕ್ತಸ್ತಾ ರುರೋಹ ರಥೋತ್ತಮಮ್ ॥ ೭೧ ॥

ಯುಧಿಷ್ಠಿರನ ಪಾದಗಳಿಗೆ ನಮಸ್ಕರಿಸಿ, ಕೈಗಳನ್ನು ಮುಗಿದು, ಅವನಿಂದ ಶಿರಸ್ಸಿನಲ್ಲಿ ಆಘ್ರಾಣಿಸಲ್ಪಟ್ಟು, ಕ್ಷೇಮವನ್ನು ಆಶಂಸಿಸಲ್ಪಟ್ಟನು. ಧರ್ಮರಾಜನ ಮುಖದಿಂದ ಬಂದ ಬಹಳವಾದ ಆಶೀರ್ವಾದ ವಚನಗಳನ್ನು ಕೇಳಿ ಬಹಳ ಹರ್ಷದಿಂದ ಕೂಡಿದವನಾಗಿ ತನ್ನ ಶ್ರೇಷ್ಠವಾದ ರಥವನ್ನು ಏರಿದನು.

ತತಸ್ತೇ ವಾಜಿನೋ ಹೃಷ್ಟಾಃ ಸುಪುಷ್ಟಾ ವಾತರಂಹಸಃ ।
ಆಜಾನೇಯಾ ಜೈತ್ರಮೂಹುರ್ವಿಕುರ್ವಾಣಾಶ್ಚ ಸೈಂಧವಾಃ ।
ಯಥಾ ಶಕ್ರರಥಂ ರಾಜನ್ನೂಹುಸ್ತೇ ಹರಯಃ ಪುರಾ ॥ ೭೨ ॥

ಆನಂತರ ಅವನ ಸಂತೋಷಗೊಂಡ, ಬಹಳ ಪುಷ್ಟವಾದ, ವಾಯುವೇಗವುಳ್ಳ, ಒಳ್ಳೆಯ ಜಾತಿಯಲ್ಲಿ ಜನಿಸಿದ, ಸಿಂಧುದೇಶದ ಅಶ್ವಗಳು ಜಯಶೀಲನಾದ ಅವನ ರಥವನ್ನು ಇಂದ್ರನ ರಥವನ್ನು ಹಿಂದೆ ಅಶ್ವಗಳು ಎಳೆದಂತೆ ವಿವಿಧವಾದ ಹೇಷಾರ ವರವನ್ನು ಮಾಡುತ್ತಾ ಎಳೆದುಕೊಂಡು ಹೋದವು.

ತಥೈವ ಭೀಮಸೇನೋಽಪಿ ಧರ್ಮರಾಜೇನ ಪೂಜಿತಃ ।
ಪ್ರಾಯಾತ್ ಸಾತ್ಯಕಿನಾ ಸಾರ್ಧಮಭವಾದ್ಯ ಯುಧಿಷ್ಠಿರಮ್ ॥ ೭೩ ॥

ಹಾಗೆಯೇ ಭೀಮಸೇನನೂ ಸಹ ಯುಧಿಷ್ಠಿರನಿಂದ ಪೂಜಿಸಲ್ಪಟ್ಟು ಅವನಿಗೆ ನಮಸ್ಕರಿಸಿ ಸಾತ್ಯಕಿಯ ಜೊತೆಯಲ್ಲಿ ಹೊರಟನು.

ಸನ್ನದ್ಧಂ ತ್ವನುಗಚ್ಛಂತಂ ಭೀಮಂ ಪ್ರೇಕ್ಷ್ಯ ಸ ಸಾತ್ಯಕಿಃ ।
ಅಥ ಹರ್ಷಪರೀತಾಂಗಃ ಸಾತ್ಯಕಿಃ ಸತ್ಯವಿಕ್ರಮಃ ।
ಅಭಿನಂದ್ಯಾಬ್ರವೀದ್ ವೀರಃ ತದಾ ಹರ್ಷಕರಂ ವಚಃ ॥ ೭೪ ॥

ಸನ್ನದ್ಧನಾಗಿ ತನ್ನನ್ನು ಹಿಂಬಾಲಿಸುತ್ತಿದ್ದ ಭೀಮನನ್ನು ನೋಡಿ ಸತ್ಯಪರಾಕ್ರಮನಾದ ಸಾತ್ಯಕಿಯು ಸಂತೋಷದಿಂದ ತುಂಬಿದ ದೇಹವುಳ್ಳವನಾಗಿ, ಅವನನ್ನು ಅಭಿನಂದಿಸಿ ಆಗ ಹರ್ಷಕರವಾದ ಮಾತುಗಳನ್ನು ಆಡಿದನು.

ತ್ವಂ ಭೀಮ ರಕ್ಷ ರಾಜಾನಮೇತತ್ ಕಾರ್ಯತಮಂ ಹಿ ತೇ ।
ಅಹಂ ಭಿತ್ತ್ವಾ ಪ್ರವೇಕ್ಷ್ಯಾಮಿ ಕಾಲಪಕ್ವಮಿದಂ ಬಲಮ್ ॥ ೭೫ ॥

ಎಲೈ ಭೀಮನೇ, ನೀನು ರಾಜನನ್ನು ರಕ್ಷಿಸು. ಇದು ಅವಶ್ಯವಾಗಿ ಮಾಡಬೇಕಾದ ಕಾರ್ಯ. ಕಾಲಪಕ್ವವಾದ ಈ ಸೈನ್ಯವನ್ನು ಭೇದಿಸಿ ನಾನು ಪ್ರವೇಶಿಸುವೆನು.

ಆಯತ್ಯಾಂ ಚ ತಥಾತ್ವೇ ಚ ಶ್ರೇಯೋ ರಾಜ್ಞೋಽಭಿರಕ್ಷಣಮ್ ।
ಜಾನೀಷೇ ಮಮ ವೀರ್ಯಂ ತ್ವಂ ತವ ಚಾಹಮರಿಂದಮ ॥ ೭೬ ॥

ತಸ್ಮಾದ್ ಭೀಮ ನಿವರ್ತಸ್ವ ಮಮ ಚೇದಿಚ್ಛಸಿ ಪ್ರಿಯಮ್ ॥ ೭೭ ॥

ವರ್ತಮಾನ ಕಾಲದಲ್ಲಿ ಮತ್ತು ಭವಿಷ್ಯತ್ ಕಾಲದಲ್ಲಿ ಧರ್ಮರಾಜನ ರಕ್ಷಣೆಯು ಶ್ರೇಯಸ್ಕರವಾದುದು. ಎಲೈ ಅರಿಂದಮನೇ, ನನ್ನ ಸಾಮರ್ಥ್ಯವನ್ನು ನೀನು ತಿಳಿದಿದ್ದೀಯೆ. ನಿನ್ನ ಸಾಮರ್ಥ್ಯವನ್ನು ನಾನೂ ತಿಳಿದಿದ್ದೇನೆ. ಆದ್ದರಿಂದ ಎಲೈ ಭೀಮನೇ, ನನಗೆ ಪ್ರಿಯವನ್ನು ಬಯಸುವುದಾದರೆ ನೀನು ಹಿಂದಿರುಗು.

ತಥೋಕ್ತಃ ಸಾತ್ಯಕಿಂ ಪ್ರಾಹ ವ್ರಜ ತ್ವಂ ಕಾರ್ಯಸಿದ್ಧಯೇ ।
ಅಹಂ ರಾಜ್ಞಃ ಕರಿಷ್ಯಾಮಿ ರಕ್ಷಾಂ ಪುರುಷಸತ್ತಮ ।
ಏವಮುಕ್ತಃ ಪ್ರತ್ಯುವಾಚ ಭೀಮಸೇನಂ ಸ ಮಾಧವಃ ॥ ೭೮ ॥

ಹಾಗೆ ಹೇಳಲ್ಪಟ್ಟ ಭೀಮಸೇನನು ಸಾತ್ಯಕಿಯನ್ನು ಕುರಿತು, ನೀನು ಕಾರ್ಯಸಿದ್ಧಿಗಾಗಿ ಹೊರಡು. ಎಲೈ ಪುರುಷಶ್ರೇಷ್ಠನೇ, ನಾನು ರಾಜನ ರಕ್ಷಣೆಯನ್ನು ಮಾಡುವೆನು ಎಂದು ಹೇಳಿದನು. ಆಗ ಸಾತ್ಯಕಿಯು ಭೀಮಸೇನನನ್ನು ಕುರಿತು ಮಾತನಾಡಿದನು.

ಸಾತ್ಯಕಿಃ

ಗಚ್ಛ ಗಚ್ಛ ದ್ರುತಂ ಪಾರ್ಥ ಧ್ರುವೋಽದ್ಯ ವಿಜಯೋ ಮಮ ।
ಯನ್ಮೇ ಸ್ನಿಗ್ಧೋಽನುರಕ್ತಶ್ಚ ತ್ವಮದ್ಯ ವಶಗಃ ಸ್ಥಿತಃ ॥ ೭೯ ॥

ಸಾತ್ಯಕಿ– ಎಲೈ ಪಾರ್ಥನೇ, ಬೇಗ ಹೊರಡು, ಹೊರಡು. ಈ ದಿನ ನನ್ನ ವಿಜಯವು ನಿಶ್ಚಿತವಾದುದು. ಏಕೆಂದರೆ ನನ್ನಲ್ಲಿ ಸ್ನೇಹಸಂಪನ್ನನಾದ ನೀನು ನನ್ನ ವಶವರ್ತಿಯಾಗಿದ್ದೀಯೆ.

ನಿಮಿತ್ತಾನಿ ಚ ಧನ್ಯಾನಿ ಯಥಾ ಭೀಮ ವದಂತಿ ಮೇ ।
ನಿಹತೇ ಸೈಂಧವೇ ಪಾಪೇ ಪಾಂಡವೇನ ಮಹಾತ್ಮನಾ ॥ ೮೦ ॥

ಪರಿಷ್ವಜೇಷ್ಯೇ ರಾಜಾನಂ ಧರ್ಮಾತ್ಮಾನಂ ನ ಸಂಶಯಃ ।
ಅಪ್ರಮಾದಶ್ಚ ತೇ ಕಾರ್ಯೋ ದ್ರೋಣಾಂ ಪ್ರತಿ ಮಹಾರಥಮ್॥ ೮೧ ॥

ಎಲೈ ಭೀಮನೇ, ಶುಭವಾದ ಶಕುನಗಳು ಹೇಳುತ್ತಿರುವಂತೆ ನನ್ನ ವಿಜಯವು ಇಂದು ಸ್ಥಿರವಾದುದು. ಮಹಾತ್ಮನಾದ ಪಾಂಡುಪುತ್ರನಾದ ಅರ್ಜುನನು ಪಾಪಿಯಾದ ಸೈಂಧವನನ್ನು ಕೊಂದಮೇಲೆ ನಾನು ಯುಧಿಷ್ಠಿರನನ್ನು ಆಲಿಂಗಿಸುವೆನು. ಇದರಲ್ಲಿ ಸಂಶಯವಿಲ್ಲ. ನೀನು ಮಹಾರಥರಾದ ದ್ರೋಣರ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು.

ಸಂಜಯಃ

ವಿತಾವದುಕ್ತ್ವಾ ಭೀಮಂ ತು ವಿಸೃಜ್ಯ ಚ ಮಹಾಮನಾಃ ।
ಸಂಪ್ರೈಕ್ಷತ್ ತಾವಕಂ ಸೈನ್ಯಂ ವ್ಯಾಘ್ರೋ ಮೃಗಗಣಾನಿವ ॥ ೮೨ ॥

ಸಂಜಯ– ಭೀಮನನ್ನು ಕುರಿತು ಇಷ್ಟು ಮಾತ್ರ ಮಾತನಾಡಿ, ಧೈರ್ಯಶಾಲಿಯಾದ ಅವನು ಭೀಮನನ್ನು ಕರುಹಿಸಿಕೊಟ್ಟು ವ್ಯಾಘ್ರವು ಜಿಂಕೆಗಳ ಸಮೂಹವನ್ನು ನೋಡಿದಂತೆ ನಿನ್ನ ಸೈನ್ಯವನ್ನು ನೋಡಿದನು.

ತಂ ದೃಷ್ಟ್ವಾ ಪ್ರತಿವೀಕ್ಷಂತಂ ಸೈನ್ಯಂ ತವ ಜನಾಧಿಪ ।
ಭೂಯ ಏವಾಭವನ್ಮೂಢಂ ಸುಭೃಶಂ ಚಾಪ್ಯಕಂಪತ ॥ ೮೩ ॥

ಎಲೈ ರಾಜನೇ, ಸಾತ್ಯಕಿಯು ನಿನ್ನ ಸೈನ್ಯವನ್ನು ನೋಡುತ್ತಿರುವುದನ್ನು ನೋಡಿ ನಿನ್ನ ಸೈನ್ಯವು ಪುನಃ ಕರ್ತವ್ಯಮೂಢವಾಗಿ ಬಹಳವಾಗಿ ನಡುಗಿತು.

ತತಃ ಪ್ರಯಾತಃ ಸಹಸಾ ತವ ಸೈನ್ಯಂ ಸ ಸಾತ್ಯಕಿಃ ।
ದಿದೃಕ್ಷುರರ್ಜುನಂ ರಾಜನ್ ಧರ್ಮರಾಜಸ್ಯ ಶಾಸನಾತ್ ॥ ೮೪ ॥

ಎಲೈ ರಾಜನೇ, ಅನಂತರ ತಕ್ಷಣ ಸಾತ್ಯಕಿಯು ಧರ್ಮರಾಜನ ಶಾಸನಕ್ಕೆ ಅನುಗುಣವಾಗಿ ಅರ್ಜುನನನ್ನು ನೋಡಲು ಬಯಸಿ, ನಿನ್ನ ಸೈನ್ಯವನ್ನು ಪ್ರವೇಶಿಸಿ ಸಾಗಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಸವತಿತಮೋಽಧ್ಯಾಯಃ ॥
॥ ಜಯದ್ರಥವಧಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂಬತ್ತನೆಯ ಅಧ್ಯಾಯ

ಅರ್ಜುನನ ಬಳಿಗೆ ಹೋಗುತ್ತಾ ಕೃತವರ್ಮನ ಜೊತೆಯಲ್ಲಿ ಸಾತ್ಯಕಿಯ ಯುದ್ಧ.

ಸಂಜಯಃ

ಪ್ರಯಾತೇ ತವ ಸೈನ್ಯಂ ತು ಯುಯುಧಾನೇ ಯುಯುತ್ಸಯಾ ।
ಧರ್ಮರಾಜೋ ಮಹಾರಾಜ ಸ್ವೇನಾನೀಕೇನ ಸಂವೃತಃ ।
ಪ್ರಾಯಾದ್ ದ್ರೋಣರಥಪ್ರೇಪ್ಸುಃ ಯುಯುಧಾನಸ್ಯ ಪೃಷ್ಠತಃ ॥ ೧ ॥

ಸಂಜಯ– ಎಲೈ ಮಹಾರಾಜನೇ, ಯುಯುಧಾನನು (ಸಾತ್ಯಕಿಯು) ಯುದ್ಧವನ್ನು ಮಾಡಲು ಬಯಸಿ ನಿನ್ನ ಸೈನ್ಯವನ್ನು ಪ್ರವೇಶಿಸುತ್ತಿರಲು ಧರ್ಮರಾಜನು ತನ್ನ ಸೈನ್ಯದಿಂದ ಕೂಡಿದವನಾಗಿ ದ್ರೋಣರ ರಥದ ಸಮೀಪಕ್ಕೆ ಹೋಗಲು ಬಯಸಿ ಸಾತ್ಯಕಿಯ ಹಿಂದೆ ಹೊರಟನು.

ತತಃ ಪಾಂಚಾಲರಾಜಸ್ಯ ಪುತ್ರಃ ಸಂಗ್ರಾಮದುರ್ಮದಃ ।
ಪ್ರಯಾತೇ ಮಾಧವೇ ರಾಜನ್ನಿದಂ ವಚನಮಬ್ರವೀತ್ ॥ ೨ ॥

ಆಗ ಪಾಂಚಾಲರಾಜನ ಪುತ್ರನೂ, ಸಂಗ್ರಾಮ ದುರ್ಮದನೂ ಆದ ವಸುದಾನನು ಸಾತ್ಯಕಿಯು ಹೊರಟು ಹೋಗುತ್ತಿರಲು ಈ ಮಾತುಗಳನ್ನು ಆಡಿದನು.

ಪ್ರಾಕ್ರೋಶತ್ ಪಾಂಡವಾನೀಕೇ ವಸುದಾನಶ್ಚ ಪಾರ್ಥಿವಃ ॥ ೩ ॥

ಆಗಚ್ಛತ ಪ್ರಹರತ ದ್ರುತಂ ವಿಪರಿಧಾವತ ।
ಯಥಾ ಸುಖೇನ ಗಚ್ಛೇತ ಸಾತ್ಯಕಿರ್ಯುದ್ಧದುರ್ಮದಃ ।
ಮಹಾರಥಾ ಹಿ ಬಹವೋ ಯತಿಷ್ಯಂತೇऽಸ್ಯ ನಿರ್ಜಯೇ ॥ ೪ ॥

ಬನ್ನಿ, ಪ್ರಹಾರವನ್ನು ಮಾಡಿ, ಯುದ್ಧದುರ್ಮದನಾದ ಸಾತ್ಯಕಿಯು ಸುಖವಾಗಿ ಹೋಗುವಂತೆ ಶೀಘ್ರವಾಗಿ ಸಂಚರಿಸಿ. ಅನೇಕ ಮಹಾರಥರು ಸಾತ್ಯಕಿಯನ್ನು ಜಯಿಸಲು ಪ್ರಯತ್ನ ಪಡುವರು ಎಂದು ವಸುದಾನನು ಪಾಂಡವ ಸೈನ್ಯದಲ್ಲಿ ಕಿರುಚಿದನು.

ಸಂಜಯಃ

ಸೇನಾಪತಿವಚಃ ಶ್ರುತ್ವಾ ಪಾಂಡವೇಯಾಃ ಸಮಂತತಃ ।
ಅಭ್ಯುದ್ಯಯುರ್ಮಹಾರಾಜ ತವ ಸೈನ್ಯಂ ಸಮಂತತಃ ॥ ೫ ॥

ಸಂಜಯ– ಎಲೈ ಮಹಾರಾಜನೇ, ಸೇನಾಪತಿಯ ವಚನವನ್ನು ಕೇಳಿ ಪಾಂಡವ ಸೇನೆಯ ಯೋಧರು ಎಲ್ಲ ಕಡೆಗಳಿಂದಲೂ ನಿನ್ನ ಸೈನ್ಯದ ಕಡೆಗೆ ನುಗ್ಗಿದರು.

ಜಹಿ ಪ್ರಹರ ಗೃಹ್ಣೀಹಿ ವಿಧ್ಯ ವಿದ್ರಾವಯಾದ್ರವ ।
ಇತಿ ಬ್ರುವಂತೋ ವೇಗೇನ ಸಮಾಪೇತುರ್ಬಲಂ ತವ ॥ ೬ ॥

ಕೊಲ್ಲು, ಪ್ರಹಾರವನ್ನು ಮಾಡು, ಹಿಡಿ, ಗಾಯಗೊಳಿಸು, ಓಡಿಸು, ಸಮೀಪಕ್ಕೆ ಓಡಿಹೋಗು ಎಂದು ಕಿರುಚುತ್ತಾ ವೇಗದಿಂದ ನಿನ್ನ ಸೈನ್ಯದ ಮೇಲೆ ಬಿದ್ದರು.

ವಯಂ ಪ್ರತಿಜಿಗೀಷಂತಸ್ತತ್ರ ತಾನ್ ಸಮಭಿದ್ರುತಾಃ ।
ಬಾಣಶಬ್ದರವಾನ್ ಕೃತ್ವಾ ವಿಮಿಶ್ರಾನ್ ಶಂಖನಿಸ್ವನೈಃ ॥ ೭ ॥

ಆಗ ನಾವು ಅವರನ್ನು ಗೆಲ್ಲಲು ಬಯಸಿ, ಶಂಖಧ್ವನಿಗಳಿಂದ ಮಿಶ್ರಿತವಾದ ಬಾಣಧ್ವನಿಗಳನ್ನು ಮಾಡಿ ಅವರ ಕಡೆಗೆ ಓಡಿದೆವು.

ಯುಯುಧಾನರಥಂ ದೃಷ್ಟ್ವಾ ತಾವಕಾ ಅಭಿದುದ್ರುವುಃ ।
ತತಃ ಶಬ್ದೋ ಮಹಾನಾಸೀದ್ ಯುಯುಧಾನರಥಂ ಪ್ರತಿ ॥ ೮ ॥

ಸಾತ್ಯಕಿಯ ರಥವನ್ನು ನೋಡಿ ನಿನ್ನ ಸೈನಿಕರು ಅವನ ಕಡೆಗೆ ಧಾವಿಸಿದರು. ಆಗ ಅವನ ರಥದ ಬಳಿ ದೊಡ್ಡ ಶಬ್ದವುಂಟಾಯಿತು.

ಪ್ರಕಂಪ್ಯಮಾನಾ ಮಹತೀ ತವ ಪುತ್ರಸ್ಯ ವಾಹಿನೀ ।
ಸಾತ್ವತೇನ ಮಹಾರಾಜ ಶತಧಾऽಭಿವ್ಯದೀರ್ಯತ ॥ ೯ ॥

ಎಲೈ ಮಹಾರಾಜನೇ, ಸಾತ್ಯಕಿಯಿಂದ ನಡುಗಿಸಲ್ಪಟ್ಟ ನಿನ್ನ ಪುತ್ರನ ದೊಡ್ಡ ಸೈನ್ಯವು ನೂರು ಭಾಗವಾಗಿ ಭಗ್ನವಾಯಿತು.

ತಸ್ಯಾಂ ವಿದೀರ್ಯಮಾಣಾಯಾಂ ಶಿನೇಃ ಪೌತ್ರೋ ಮಹಾರಥಃ ।
ಸಪ್ತ ವೀರಾನ್ ಮಹೇಷ್ವಾಸಾನ್ ಅಗ್ರಾನೀಕೇಷ್ವಪೋಥಯತ್ ॥ ೧೦ ॥

ನಿನ್ನ ಸೈನ್ಯವು ಹಾಗೆ ಭಗ್ನವಾಗುತ್ತಿರಲು ಶಿನಿಯ ಪೌತ್ರನೂ, ಮಹಾರಥನೂ ಆದ ಸಾತ್ಯಕಿಯು ನಿನ್ನ ಸೇನೆಯ ಅಗ್ರಭಾಗದಲ್ಲಿದ್ದ ಮಹಾಧನುರ್ಧಾರಿಗಳಾದ ಏಳು ವೀರರನ್ನು ಹೊಡೆದು ಉರುಳಿಸಿದನು.

ಅಥಾನ್ಯಾನಪಿ ರಾಜೇಂದ್ರ ನಾನಾಜನಪದೇಶ್ವರಾನ್ ।
ಶರೈರನಲಸಂಕಾಶೈರ್ನಿನ್ಯೇ ವೀರಾನ್ ಯಮಕ್ಷಯಮ್ ॥ ೧೧ ॥

ಎಲೈ ರಾಜೇಂದ್ರನೇ, ಅನಂತರ ವೀರರಾದ ಬೇರೆ ರಾಜರನ್ನೂ ಸಹ ಅಗ್ನಿ ಸದೃಶವಾದ ಬಾಣಗಳಿಂದ ಯಮಲೋಕಕ್ಕೆ ಕಳುಹಿಸಿದನು.

ಶತಮೇಕೇನ ವಿವ್ಯಾಧ ಶತೇನೈಕಂ ಚ ಪತ್ರಿಣಾ ।
ದ್ವಿಷಾರೋಹಾನ್ ದ್ವಿಷಾಂಶ್ಚೈವ ಹಯಾರೋಹಾನ್ ಹಯಾಂಸ್ತಥಾ ।
ರಥಿನಃ ಸಾಶ್ವಸೂತಾಂಶ್ಚ ಜಘಾನೇಶಃ ಪಶೂನಿವ ॥ ೧೨ ॥

ನೂರು ಬಾಣಗಳನ್ನು ಒಂದೇ ಬಾಣದಿಂದ ಯುದ್ಧಮಾಡಿ ಕೆಡವಿದನು. ಪತ್ರವುಳ್ಳ ನೂರು ಬಾಣಗಳಿಂದ ಒಂದು ಬಾಣವನ್ನು ಕೆಡವಿದನು. ಪಶುಪತಿಯು ಪಶುಗಳನ್ನು ಸಂಹರಿಸುವಂತೆ ಅವನು ಗಜಾರೋಹಿಗಳನ್ನು ಮತ್ತು ಗಜಗಳನ್ನು, ಅಶ್ವಾರೋಹಿಗಳನ್ನು ಮತ್ತು ಅಶ್ವಗಳನ್ನು, ರಥಿಕರನ್ನು ಮತ್ತು ಅಶ್ವಸಾರಥಿಗಳನ್ನು ಕೊಂದನು.

ತಂ ತಥಾಭೂತಕರ್ಮಾಣಂ ಶರಸಂಘಾತವರ್ಷಿಣಮ್ ।
ನ ಕೇಚನಾಭ್ಯಧಾವನ್ ವೈ ಸಾತ್ಯಕಿಂ ತವ ಸೈನಿಕಾಃ ॥ ೧೩ ॥

ಬಾಣಗಳ ಸಮೂಹವನ್ನು ಸುರಿಸುತ್ತಾ ಅಂತಹ ಕಾರ್ಯವನ್ನು ಎಸಗುತ್ತಿದ್ದ ಸಾತ್ಯಕಿಯ ಕಡೆಗೆ ನಿನ್ನ ಸೈನಿಕರು ಯಾರೂ ಮುಂದೆ ಹೋಗಲಿಲ್ಲ.

ತೇ ಭೀತ್ವಾ ಮೃದ್ಯಮಾನಾಶ್ಚ ಪ್ರಮೃಷ್ಟಾ ದೀರ್ಘಬಾಹುನಾ ।
ಆಯೋಧನಂ ಜಹುರ್ವೀರಾ ದೃಷ್ಟ್ವಾ ತಮತಿಪೌರುಷಮ್ ॥ ೧೪ ॥

ದೀರ್ಘಬಾಹುವಾದ ಸಾತ್ಯಕಿಯಿಂದ ಮರ್ದಿಸಲ್ಪಟ್ಟು, ವಿನಾಶಕ್ಕೆ ಒಳಗಾಗುತ್ತಿದ್ದ ಆ ವೀರರು ಭಯಗೊಂಡು ಸಾತ್ಯಕಿಯ ಅತಿಪೌರುಷವನ್ನು ನೋಡಿ ರಣರಂಗವನ್ನು ತೊರೆದರು.

ತಮೇಕಂ ಬಹುಧಾ ಪಶ್ಯನ್ ಮೋಹಿತಾಸ್ತಸ್ಯ ತೇಜಸಾ ।
ಸಂಗ್ರಾಮಕೋವಿದಂ ವೀರಂ ವಿಚರಂತಮಭೀತವತ್ ॥ ೧೫ ॥

ಅವನ ಪರಾಕ್ರಮದಿಂದ ಮೋಹಿತರಾಗಿ, ನಿರ್ಭೀತನಾಗಿ ರಣರಂಗದಲ್ಲಿ ಸಂಚರಿಸುವ ರಣಕೋವಿದನಾದ ವೀರನಾದ ಅವನನ್ನು ಒಬ್ಬನನ್ನೇ ಅನೇಕರೆಂದು ತಿಳಿದರು.

ರಥೈರ್ವಿಮಥಿತಾಕ್ಷೈಶ್ಚ ಭಗ್ನನೀಡೈಶ್ಚ ಮಾರಿಷ ।
ಚಕ್ರೈರ್ವಿಮಥಿತೈಶ್ಚಿನ್ನೈರ್ಧ್ವಜೈಶ್ಚ ವಿನಿಪಾತಿತೈಃ ॥ ೧೬ ॥

ಅನುಕರ್ಷೈಃ ಪತಾಕಾಭಿಃ ಶಿರಸ್ತ್ರಾಣೈಃ ಸಕಾಂಚನೈಃ ।
ಬಾಹುಭಿಶ್ಚಂದನಾದಿಗ್ಧೈಃ ಸಾಂಗದೈಶ್ಚ ವಿಶಾಂಪತೇ ॥ ೧೭ ॥

ಹಸ್ತಿಹಸ್ತೋಪಮೈಶ್ಚಾಪಿ ಭುಜಗಾಭೋಗಸನ್ನಿಭೈಃ ।
ಊರುಭಿಃ ಪೃಥಿವೀ ಚ್ಛನ್ನಾ ಮನುಜಾನಾಂ ನರೋತ್ತಮ ॥ ೧೯ ॥

ಎಲೈ ಪೂಜ್ಯನೇ, ನರಶ್ರೇಷ್ಠನೇ, ಆಕ್ಷಗಳು, ನೀಡಗಳು, ಚಕ್ರಗಳು ಮುರಿದು, ಧ್ವಜಗಳು ಭಗ್ನವಾಗಿ ಕೆಳಗೆ ಬಿದ್ದ ರಥಗಳಿಂದಲೂ, ಸಣ್ಣ ನೊಗಗಳು, ಪತಾಕೆಗಳು, ಶಿರಸ್ತ್ರಾಣಗಳಿಂದಲೂ, ಸುವರ್ಣಾಲಂಕೃತವಾದ ಭುಜಕೀರ್ತಿಗಳುಳ್ಳ ಮತ್ತು ಚಂದನ ಲೇಪಿತವಾದ ಬಾಹುಗಳಿಂದಲೂ, ಆನೆಯ ಸೊಂಡಿಲುಗಳನ್ನು ಹೋಲುವ, ಸರ್ಪಗಳ ಶರೀರವನ್ನು ಹೋಲುವ ವೀರರ ತೊಡೆಗಳಿಂದಲೂ ಭೂಮಿಯು ತುಂಬಿಹೋಯಿತು.

ಶಶಾಂಕಸದೃಶಾಕಾರೈಃ ವದನೈಶ್ಚ ಸಕುಂಡಲೈಃ ।
ಪತಿತೈರ್ವೃಷಭಾಕ್ಷಾಣಾಂ ಬಭೌ ಭಾರತ ಮೇದಿನೀ ॥ ೨೦ ॥

ಎಲೈ ಭಾರತನೇ, ಚಂದ್ರನನ್ನು ಹೋಲುವ ಆಕಾರವುಳ್ಳ ಕುಂಡಲಸಹಿತರಾದ ಪತಿತರಾದ ವೃಷಭಾಕ್ಷವುಳ್ಳ ವೀರರ ಮುಖಗಳಿಂದ ಭೂಮಿಯು ಶೋಭಿಸಿತು.

ಗಜೈಶ್ಚ ಬಹುಧಾ ಚ್ಛನ್ನೈಃ ಶಯಾನೈಃ ಪರ್ವತೋಪಮೈಃ ।
ರರಾಜಾತಿಭೃಶಂ ಭೂಮಿಃ ವಿಕೀರ್ಯೈರಿವ ಪರ್ವತೈಃ ॥ ೨೧ ॥

ಬಹಳವಾಗಿ ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದ ಪರ್ವತಸದೃಶವಾದ ಗಜಗಳಿಂದ ಭೂಮಿಯು ಪರ್ವತಗಳು ಚೆಲ್ಲಾಡಿದಂತೆ ಬಹಳವಾಗಿ ಶೋಭಿಸಿತು.

ತಪನೀಯಮಯೈರ್ಯೋಕ್ತ್ರೈರ್ಮುಕ್ತಾಜಾಲವಿಭೂಷಿತೈಃ ।
ಉರಶ್ಚದೈರ್ವಿಚಿತ್ರೈಶ್ಚ ವ್ಯರೋಚಂತ ತುರಂಗಮಾಃ ॥ ೨೨ ॥

ಗತಸತ್ತ್ವಾ ಮಹೀಂ ಪ್ರಾಪ್ತಾಃ ಪ್ರಮೃಷ್ಟಾ ದೀರ್ಘಬಾಹುನಾ ॥ ೨೩ ॥

ಸುವರ್ಣಮಯವಾದ ಕಡಗೂಟಗಳಿಂದಲೂ ಮತ್ತು ಮುತ್ತಿನ ಜಾಲಗಳಿಂದಲೂ, ವಿಚಿತ್ರವಾದ ವಕ್ಷಸ್ಥಲ ರಕ್ಷಣೆಗಳಿಂದಲೂ ಕೂಡಿದ ಆಶ್ವಗಳು ದೀರ್ಘಬಾಹುವಾದ ಸಾತ್ಯಕಿಯಿಂದ ವಿನಾಶಗೊಳಿಸಲ್ಪಟ್ಟು ಮೃತವಾಗಿ ಭೂಮಿಯ ಮೇಲೆ ಬಿದ್ದು ಶೋಭಿಸಿದವು.

ನಾನಾವಿಧಾನಿ ಸೈನ್ಯಾನಿ ತವ ಹತ್ವಾ ತು ಸಾತ್ವತಃ ।
ಪ್ರವಿಷ್ಟಸ್ತಾವಕಂ ಸೈನ್ಯಂ ದ್ರಾವಯಿತ್ವಾ ಚಮೂಂ ತವ ॥ ೨೪ ॥

ಸಾತ್ವತ ಕುಲಕ್ಕೆ ಸೇರಿದ ಸಾತ್ಯಕಿಯು ನಾನಾ ವಿಧವಾದ ಸೈನ್ಯಗಳನ್ನು ಸಂಹರಿಸಿ, ಓಡಿಸಿ, ನಿನ್ನ ಸೈನ್ಯದೊಳಗೆ ಇನ್ನೂ ಮುಂದೆ ಪ್ರವೇಶಿಸಿದನು.

ತತಸ್ತೇನೈವ ಮಾರ್ಗೇಣ ಯೇನ ಯಾತೋ ಧನಂಜಯಃ ।
ಇಯೇಷ ಸಾತ್ಯಕಿರ್ಗಂತುಂ ತತೋ ದ್ರೋಣೇನ ವಾರಿತಃ ॥ ೨೫ ॥

ಸಾತ್ಯಕಿಯು ಅರ್ಜುನನು ಹೋದ ಮಾರ್ಗದಲ್ಲಿಯೇ ಹೋಗಲು ಬಯಸಿದನು. ಆದರೆ ದ್ರೋಣರು ಅವನನ್ನು ತಡೆದರು.

ಭಾರದ್ವಾಜಂ ಸಮಾಸಾದ್ಯ ಯುಯುಧಾನಸ್ತು ಮಾರಿಷ ।
ನಾತ್ಯವರ್ತತ ಸಂಕ್ರುದ್ಧೋ ವೇಲಾಮಿವ ಜಲಾಶಯಃ ॥ ೨೬ ॥

ಎಲೈ ಪೂಜ್ಯನೇ, ದ್ರೋಣರನ್ನು ಸಮೀಪಿಸಿದ ಸಂಕ್ರುದ್ಧನಾದ ಯುಯುಧಾನನು ಜಲಾಶಯವು ದಡವನ್ನು ಮೀರಲು ಸಾಧ್ಯವಾಗದಂತೆ ಅವರನ್ನು ದಾಟಿ ಮುಂದೆ ಹೋಗಲಿಲ್ಲ.

ನಿಗೃಹ್ಯ ತು ರಣೇ ದ್ರೋಣೋ ಯುಯುಧಾನಂ ಮಹಾರಥಮ್ ।
ವಿವ್ಯಾಧ ನಿಶಿತೈರ್ಬಾಣೈಃ ಪಂಚಭಿರ್ಮರ್ಮಭೇದಿಭಿಃ ॥ ೨೭ ॥

ದ್ರೋಣರು ಮಹಾರಥನಾದ ಯುಯುಧಾನನನ್ನು ರಣರಂಗದಲ್ಲಿ ನಿಲ್ಲಿಸಿ, ಮರ್ಮಭೇದಿಗಳಾದ ತೀಕ್ಷ್ಣವಾದ ಐದು ಬಾಣಗಳಿಂದ ಅವನನ್ನು ಹೊಡೆದರು.

ಸಾತ್ಯಕಿಸ್ತು ರಣೇ ದ್ರೋಣಂ ರಾಜನ್ ವಿವ್ಯಾಧ ಸಪ್ತಭಿಃ ।
ಹೇಮಪುಂಖೈಃ ಶಿಲಾಧೌತೈಃ ಕಂಕಬರ್ಹಿಣವಾಜಿತೈಃ ।
ತಂ ಷಡ್ಭಿಃ ಸಾಯಕೈರ್ದ್ರೋಣಃ ಸಾಶ್ವಯಂತಾರಮಾರ್ದಯತ್ ॥ ೨೮ ॥

ಎಲೈ ರಾಜನೇ, ಸಾತ್ಯಕಿಯಾದರೂ ಸುವರ್ಣಮಯವಾದ ಪುಂಖಗಳನ್ನು ಹೊಂದಿದ್ದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಕಂಕಬರ್ಹಿಗರಿಗಳನ್ನು ಹೊಂದಿದ್ದ ಏಳು ಬಾಣಗಳಿಂದ ರಣರಂಗದಲ್ಲಿ ದ್ರೋಣರನ್ನು ಹೊಡೆದನು. ದ್ರೋಣರು ಆರು ಬಾಣಗಳನ್ನು ಪ್ರಯೋಗಿಸಿ ಸಾರಥಿ, ಅಶ್ವಗಳಿಂದ ಸಹಿತನಾದ ಅವನನ್ನು ಎದುರಿಸಿದರು.

ಸ ತಂ ನ ಮಮೃಷೇ ದ್ರೋಣಂ ಯುಯುಧಾನೋ ಮಹಾರಥಃ ।
ಸಿಂಹನಾದಂ ತತಃ ಕೃತ್ವಾ ದ್ರೋಣಂ ವಿವ್ಯಾಧ ಸಾತ್ಯಕಿಃ ॥ ೨೯ ॥

ದಶಭಿಃ ಸಾಯಕೈಶ್ಚಾನ್ಯೈಃ ಷಡ್ಭಿರಷ್ಟಾಭಿರೇವ ಚ ।
ಯುಯುಧಾನಃ ಪುನರ್ದ್ರೋಣಂ ವಿವ್ಯಾಧ ದಶಭಿಃ ಶರೈಃ ॥ ೩೦ ॥

ಮಹಾರಥನಾದ ಸಾತ್ಯಕಿಯು ದ್ರೋಣರು ಹಾಗೆ ಮಾಡುವುದನ್ನು ಸಹಿಸಲಿಲ್ಲ. ಆಗ ಸಿಂಹನಾದವನ್ನು ಮಾಡಿ ಅವನು ಬೇರೆ ಹತ್ತು ಬಾಣಗಳಿಂದ, ಪುನಃ ಆರು ಬಾಣಗಳಿಂದ, ಪುನಃ ಎಂಟು ಬಾಣಗಳಿಂದ ಮತ್ತು ಪುನಃ ಹತ್ತು ಬಾಣಗಳಿಂದ ದ್ರೋಣರನ್ನು ಹೊಡೆದನು.

ಏಕೇನ ಸಾರಥಿಂ ಚಾಸ್ಯ ಚತುರ್ಭಿಶ್ಚತುರೋ ಹಯಾನ್ ।
ಧ್ವಜಮೇಕೇನ ಬಾಣೇನ ಯುಧಿ ವಿವ್ಯಾಧ ಮಾರಿಷ ॥ ೩೧ ॥

ಎಲೈ ಪೂಜ್ಯನೇ, ಅವನು ಒಂದು ಬಾಣದಿಂದ ಸಾರಥಿಯನ್ನೂ, ನಾಲ್ಕು ಬಾಣಗಳಿಂದ ರಥದ ನಾಲ್ಕು ಕುದುರೆಗಳನ್ನೂ, ಒಂದು ಬಾಣದಿಂದ ರಥದ ಧ್ವಜವನ್ನೂ ಹೊಡೆದನು.

ತಂ ದ್ರೋಣಃ ಸಾಶ್ವಯಂತಾರಂ ಸರಥಧ್ವಜಮಾಶುಗೈಃ ।
ತ್ವರನ್ ಪ್ರಾಚ್ಛಾದಯದ್ ಬಾಣೈಃ ಶಲಭಾನಾಮಿವ ವ್ರಜೈಃ ॥ ೩೨ ॥

ದ್ರೋಣರು ಅಶ್ವ-ಸಾರಥಿಗಳಿಂದಲೂ, ಧ್ವಜ-ರಥಗಳಿಂದಲೂ ಕೂಡಿದ ಅವನನ್ನು ಶೀಘ್ರವಾಗಿ ವೇಗವಾಗಿ ಸಾಗುವ ಪತಂಗಗಳ ಸಮೂಹದಂತೆ ಇರುವ ಬಾಣಗಳಿಂದ ಮುಚ್ಚಹಾಕಿದರು.

ತಥೈವ ಯುಯುಧಾನೋಽಪಿ ದ್ರೋಣಂ ಬಹುಭಿರಾಶುಗೈಃ ।
ಪ್ರಾಚ್ಛಾದಯದಸಂಭ್ರಾಂತಃ ತ್ವರಮಾಣೋ ಮಹಾರಥಃ ॥ ೩೩ ॥

ಹಾಗೆಯೇ ಮಹಾರಥನಾದ ಸಾತ್ಯಕಿಯೂ ಸಹ ಯಾವ ಗಾಬರಿಯೂ ಇಲ್ಲದೆ ಶೀಘ್ರಗಾಮಿಗಳಾದ ಅನೇಕ ಬಾಣಗಳಿಂದ ದ್ರೋಣರನ್ನು ಮುಚ್ಚಹಾಕಿದನು.

ದ್ರೋಣಸ್ತು ಪರಮಕ್ರುದ್ಧಃ ಸಾತ್ಯಕಿಂ ಪರವೀರಹಾ ।
ಅವಾಕಿರಚ್ಛರೈರ್ಬಾಣೈರ್ವಾಸುದೇವಪರಾಕ್ರಮಮ್ ॥ ೩೪ ॥

ಪರವೀರಘಾತಕರಾದ ದ್ರೋಣರಾದರೋ ಬಹಳ ಕೋಪಗೊಂಡು ಕೃಷ್ಣನ ಪರಾಕ್ರಮದಂತೆ ಪರಾಕ್ರಮವನ್ನು ಹೊಂದಿದ್ದ ಸಾತ್ಯಕಿಯ ಮೇಲೆ ಹರಿತವಾದ ಬಾಣಗಳ ಮಳೆಯನ್ನು ಕರೆದರು.

ತಂ ತಥಾ ಶರಜಾಲೇನ ಪ್ರಚ್ಛಾದ್ಯ ಮಹತಾ ಪುನಃ ।
ದ್ರೋಣಃ ಪ್ರಹಸ್ಯ ಶೈನೇಯಮಿದಂ ವಚನಮಬ್ರವೀತ್ ॥ ೩೫ ॥

ದ್ರೋಣರು ಹಾಗೆ ಅವನನ್ನು ಬಾಣಗಳ ಸಮೂಹದಿಂದ ಮುಚ್ಚಹಾಕಿ ನಕ್ಕು ಸಾತ್ಯಕಿಯನ್ನು ಕುರಿತು ಈ ಮಾತನ್ನು ಆಡಿದರು.

ತವಾಚಾರ್ಯೋ ರಣಂ ಹಿತ್ವಾ ಯಾತಃ ಕಾಪುರುಷೋ ಯಥಾ ।
ಯೋಧಯಂತಂ ಹಿ ಹಿತ್ವಾಽಸೌ ಮಾಂ ಪ್ರದಕ್ಷಿಣತೋ ಬಲೀ ॥ ೩೬ ॥

ನಿನ್ನ ಬಲಿಷ್ಠನಾದ ಗುರುವು ಕೆಟ್ಟ ಪುರುಷನಂತೆ ನಡೆದುಕೊಂಡು ಯುದ್ಧ ಮಾಡುತ್ತಿದ್ದ ನನ್ನನ್ನು ಬಿಟ್ಟುನನಗೆ ಪ್ರದಕ್ಷಿಣೆಯನ್ನು ಮಾಡಿ ಹೊರಟು ಹೋದನು.

ತ್ವಂ ನ ಮೇ ಯುದ್ಧ್ಯಮಾನಸ್ಯ ಜೀವನ್ ಸಾತ್ಯಕ ಮೋಕ್ಷ್ಯಸೇ ।
ಯದಿ ಮಾಂ ತ್ವಂ ರಣೇ ಹಿತ್ವಾ ನ ಯಾಸ್ಯಾಚಾರ್ಯವದ್ ದ್ರುತಮ್ ॥

ನಿನ್ನ ಗುರುವಿನಂತೆ ಯುದ್ಧವನ್ನು ಬಿಟ್ಟು ಶೀಘ್ರವಾಗಿ ಓಡಿಹೋಗದಿದ್ದರೆ, ಎಲೈ ಸಾತ್ಯಕಿಯೇ, ಆದರೆ ಯುದ್ಧ ಮಾಡುತ್ತಿರುವ ನನ್ನಿಂದ ನೀನು ಜೀವ ಸಹಿತವಾಗಿ ತಪ್ಪಿಸಿಕೊಳ್ಳಲಾರೆ.

ಸಾತ್ಯಕಿಃ

ಧನಂಜಯಸ್ಯ ಪದವೀಂ ಧರ್ಮರಾಜಸ್ಯ ಶಾಸನಾತ್ ।
ಗಚ್ಛಾಮಿ ಸ್ವಸ್ತಿ ತೇ ಬ್ರಹ್ಮನ್ ನ ಮೇ ಕಾಲಾತ್ಯಯೋ ಭವೇತ್ ॥ ೩೮ ॥

ಆಚಾರ್ಯಾನುಗತೋ ಮಾರ್ಗಃ ಶಿಷ್ಯೈರನ್ವಾಸ್ಯತೇ ಸದಾ ।
ತಸ್ಮಾದೇವ ವ್ರಜಾಮ್ಯಾಶು ಯಥಾ ಮೇ ಸ ಗುರುರ್ಗತಃ ॥ ೩೯ ॥

ಸಾತ್ಯಕಿ– ಬ್ರಾಹ್ಮಣರೇ, ಧರ್ಮರಾಜನ ಆಜ್ಞೆಯಂತೆ ನಾನು ಅರ್ಜುನನ ಮಾರ್ಗವನ್ನು ಹಿಡಿದು ಹೋಗುತ್ತೇನೆ. ನಿಮಗೆ ಕ್ಷೇಮವಾಗಲಿ, ನನಗೆ ಕಾಲವು ಮೀರುವುದು ಬೇಡ. ಗುರುಗಳು ಹೋದ ಮಾರ್ಗದಲ್ಲಿಯೇ ಯಾವಾಗಲೂ ಶಿಷ್ಯರು ಹೋಗುತ್ತಾರೆ. ಆದ್ದರಿಂದ ನನ್ನ ಗುರು ಹೋದ ಮಾರ್ಗದಲ್ಲಿಯೇ ನಾನು ಶೀಘ್ರವಾಗಿ ಹೋಗುತ್ತೇನೆ.

ಸಂಜಯಃ

ಏವಮುಕ್ತ್ವಾ ತು ಶೈನೇಯ ಆಚಾರ್ಯಂ ಪರಿವರ್ಜಯನ್ ।
ಪ್ರಯಾತಃ ಸಹಸಾ ರಾಜನ್ ಸಾರಥಿಂ ಚೇದಮಬ್ರವೀತ್ ॥ ೪೦ ॥

ಸಂಜಯ– ಎಲೈ ರಾಜನೇ, ಸಾತ್ಯಕಿಯು ಹೀಗೆ ಹೇಳಿ ದ್ರೋಣರನ್ನು ಪರಿತ್ಯಜಿಸಿ ತಕ್ಷಣ ಹೊರಟವನಾಗಿ ಸಾರಥಿಯನ್ನು ಕುರಿತು ಈ ಮಾತನ್ನಾಡಿದನು.

ದ್ರೋಣಃ ಕರಿಷ್ಯತೇ ಯತ್ನಂ ಸರ್ವಥಾ ಮಮ ವಾರಣೇ ।
ಯತ್ತೋ ಯಾಹಿ ರಣೇ ಸೂತ ಶೃಣು ಚೇದಂ ವಚೋಽಪರಮ್ ॥

ಎಲೈ ಸೂತನೇ, ದ್ರೋಣರು ಎಲ್ಲ ರೀತಿಯಿಂದಲೂ ನನ್ನನ್ನು ತಡೆಯಲು ಪ್ರಯತ್ನವನ್ನು ಮಾಡುವರು. ಆದ್ದರಿಂದ ಎಚ್ಚರಿಕೆಯಿಂದ ಮುಂದೆ ಹೋಗು. ನನ್ನ ಈ ಇನ್ನೊಂದು ಮಾತನ್ನು ಕೇಳು.

ಏತದಾಲೋಕ್ಯತೇ ಸೈನ್ಯಮಾವಂತ್ಯಾನಾಂ ಮಹಾಪ್ರಭಮ್ ।
ಅಭೇದ್ಯಮರಿಭಿರ್ವೀರೈಃ ಸುಮಹದ್ದುರ್ಮಹದ್ ಬಲಮ್ ॥ ೪೨ ॥

ಅವಂತಿದೇಶದ ಮಹಾಪ್ರಭೆಯುಳ್ಳ, ವೀರರಾದ ಅನೇಕ ಶತ್ರುಗಳಿಂದ ಕೂಡಿದ, ಭೇದಿಸಲು ಸಾಧ್ಯವಿಲ್ಲದ ಈ ದೊಡ್ಡ ಸೈನ್ಯವು ಕಾಣುತ್ತಿದೆ.

ಅಸ್ಯಾನಂತರತಶ್ಚೈತದ್ ಬಾಹ್ಲೀಕಾನಾಂ ಮಹದ್ ಬಲಮ್ ।
ತದನಂತರಮೇವೈತದ್ ದಾಕ್ಷಿಣಾತ್ಯಂ ಮಹದ್ ಬಲಮ್ ॥ ೪೩ ॥

ಬಾಹ್ಲೀಕಾಭ್ಯಾಶಸಂಯುಕ್ತಂ ಕರ್ಣಸ್ಯಾಪಿ ಮಹದ್ ಬಲಮ್ ॥ ೪೪ ॥

ಈ ಸೈನ್ಯದ ಅನಂತರ ಬಾಹ್ಲೀಕರ ದೊಡ್ಡ ಸೈನ್ಯವಿದೆ. ಅದರ ಅನಂತರ ದಾಕ್ಷಿಣಾತ್ಯರ ದೊಡ್ಡ ಸೈನ್ಯವಿದೆ. ಬಾಹ್ಲೀಕರ ಸೈನ್ಯದ ಸಮೀಪದಲ್ಲಿ ಕರ್ಣನ ದೊಡ್ಡ ಸೈನ್ಯವೂ ಇದೆ.

ಅನ್ಯೋನ್ಯೇನ ಚ ಸೈನ್ಯಾನಿ ಭಿನ್ನಾನ್ಯೇತಾನಿ ಸಾರಥೇ ।
ಅನ್ಯೋನ್ಯಂ ಸಮುಪಾಶ್ರಿತ್ಯ ನ ತ್ಯಕ್ಷ್ಯಂತಿ ರಣಾಜಿರಮ್ ॥ ೪೫ ॥

ಎಲೈ ಸಾರಥಿಯೇ, ಈ ಸೈನ್ಯಗಳು ಪರಸ್ಪರವಾಗಿ ಸ್ವಲ್ಪ ಅಂತರದಿಂದ ಕೂಡಿವೆ. ಒಂದಕ್ಕೊಂದು ಬಲವನ್ನು ನೀಡುತ್ತಾ ಇವು ರಣರಂಗವನ್ನು ಬಿಡುವುದಿಲ್ಲ.

ಏತದಂತರಮಾಸಾದ್ಯ ಚೋದಯಾಶ್ವಾನ್ ಪ್ರಹೃಷ್ಟವತ್ ।
ಮಧ್ಯಮಂ ಜವಮಾಸ್ಥಾಯ ವಹ ಮಾಮತ್ರ ಸಾರಥೇ ॥ ೪೬ ॥

ಬಾಹ್ಲಿಕಾ ಯತ್ರ ದೃಶ್ಯಂತೇ ನಾನಾಪ್ರಹರಣೋದ್ಯತಾಃ ।
ದಾಕ್ಷಿಣಾತ್ಯಾಶ್ಚ ಬಹುಶಃ ಸೂತಪುತ್ರಪುರೋಗಮಾಃ ॥ ೪೭ ॥

ಎಲೈ ಸಾರಥಿಯೇ, ಈ ಮಧ್ಯದ ಅಲ್ಪದೇಶವನ್ನು ತಲುಪಿ, ಸಂತೋಷದಿಂದ ಮಧ್ಯಮವೇಗವನ್ನು ಆಶ್ರಯಿಸಿ, ಆಶ್ವಗಳನ್ನು ಪ್ರಚೋದಿಸಿ ನನ್ನನ್ನು ಎಲ್ಲಿ ಅನೇಕ ಆಯುಧಗಳನ್ನು ಹಿಡಿದು ಉದ್ಯುಕ್ತರಾದ ಬಾಹ್ಲೀಕರು ಮತ್ತು ಕರ್ಣನೇ ಮೊದಲಾದ ಅನೇಕ ದಾಕ್ಷಿಣಾತ್ಯರು ಕಾಣುತ್ತಾರೆಯೋ ಅಲ್ಲಿಗೆ ಕರೆದುಕೊಂಡು ಹೋಗು.

ಹಸ್ತ್ಯಶ್ವರಥ ಸಂಬಾಧಂ ಯತ್ಸಾನೀಕಂ ವಿಲೋಕ್ಯತೇ ।
ನಾನಾದೇಶಸಮುತ್ಥೈಶ್ಚ ಪದಾತಿಭಿರಧಿಷ್ಠಿತಮ್ ॥ ೪೮ ॥

ಗಜಗಳಿಂದಲೂ, ಅಶ್ವಗಳಿಂದಲೂ ಮತ್ತು ರಥಗಳಿಂದಲೂ ನಿಬಿಡವಾದ, ನಾನಾ ದೇಶದಿಂದ ಬಂದ ಪದಾತಿಗಳಿಂದಲೂ ಅಧಿಷ್ಠಿತವಾದ ಸೈನ್ಯವು ಕಂಡು ಬರುವಲ್ಲಿಗೆ (ನನ್ನನ್ನು ಕರೆದುಕೊಂಡು ಹೋಗು).

ತತಃ ಶಕ್ಯೋ ಮಹಾವ್ಯೂಹೋ ಭೇತ್ತುಂ ಸ್ಮ ಸಹಸಾ ರಣೇ ।
ತಂ ದೇಶಂ ತ್ವರಿತಾ ಯಾಮೋ ಮೃದ್ನಂತೋ ಯುಧಿ ಶಾತ್ರವಾನ್ ।
ತತ್ರೈತೇ ಸಂಪ್ರಹೃಷ್ಟಾಸ್ತ್ವಾಸ್ಮಾನ್ ಪ್ರತಿ ಯುಯುತ್ಸವಃ ॥ ೪೯ ॥

ಆಗ ರಣರಂಗದಲ್ಲಿ ಈ ದೊಡ್ಡ ವ್ಯೂಹವನ್ನು ಭೇದಿಸಲು ತಕ್ಷಣ ಸಾಧ್ಯವಾಗುತ್ತದೆ. ಶತ್ರುಗಳನ್ನು ಮರ್ದಿಸುತ್ತಾ ಆ ಪ್ರದೇಶಕ್ಕೆ ಶೀಘ್ರವಾಗಿ ಹೋಗೋಣ. ಇವರೆಲ್ಲರೂ ಸಂತೋಷದಿಂದ ಕೂಡಿರುವುದರಿಂದ ನಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತಿಲ್ಲ.

ಅಯುದ್ಧ್ಯಮಾನೋ ಬಹುಭಿರೇಕಂ ಪ್ರಾಪ್ಯ ಸುದುರ್ಬಲಮ್ ।
ಬಲಂ ಪ್ರಮಥ್ಯ ಗಚ್ಛಾಮಿ ಮಿಷತಾಂ ಸರ್ವಧನ್ವಿನಾಮ್ ॥ ೫೦ ॥

ಬಹಳ ಯೋಧರ ಜೊತೆಯಲ್ಲಿ ಯುದ್ಧವನ್ನು ಮಾಡದೆ ಒಬ್ಬ ದುರ್ಬಲನನ್ನು ಸಮೀಪಿಸಿ ಸೈನ್ಯವನ್ನು ಮರ್ದಿಸಿ, ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆ ಮುಂದೆ ಹೋಗುತ್ತೇನೆ.

ಸವ್ಯತೋ ಯಾಹಿ ಯತ್ರೋಗ್ರಂ ಕರ್ಣಸ್ಯ ಸುಮಹದ್ ಬಲಮ್ ।
ಯತ್ರೈತೇ ಪರಮಕ್ರುದ್ಧಾ ದಾಕ್ಷಿಣಾತ್ಯಾ ಮಹಾರಥಾಃ ॥ ೫೧ ॥

ಏತಾನ್ ವಿಜಿತ್ಯ ಸಂಗ್ರಾಮೇ ತತೋ ಯಾಮೋ ಧನಂಜಯಮ್ ॥

ಎಲ್ಲಿ ಕರ್ಣನ ಉಗ್ರವಾದ ಸೈನ್ಯವಿದೆಯೋ ಮತ್ತು ಪರಮಕ್ರುದ್ಧರಾದ ದಕ್ಷಿಣದೇಶದ ಮಹಾರಥರು ಇದ್ದಾರೆಯೋ ಅಲ್ಲಿಗೆ ಎಡಭಾಗದಿಂದ ಹೋಗುವವನಾಗು. ಇವರನ್ನು ಯುದ್ಧದಲ್ಲಿ ಗೆದ್ದು ಅನಂತರ ಅರ್ಜುನನಿದ್ದಲ್ಲಿಗೆ ಹೋಗೋಣ.

ಸಂಜಯಃ

ಯುಯುಧಾನವಚಃ ಶ್ರುತ್ವಾ ಯುಯುಧಾನಸ್ಯ ಸಾರಥಿಃ ।
ಯಥೋಕ್ತಮಗಮದ್ ರಾಜನ್ ವರ್ಜಯನ್ ದ್ರೋಣಮಾಹವೇ ॥

ಸಂಜಯ– ಯುಯುಧಾನನ ಮಾತನ್ನು ಕೇಳಿ ಅವನ ಸಾರಥಿಯು ಎಲೈ ರಾಜನೇ, ದ್ರೋಣರನ್ನು ತಪ್ಪಿಸಿ ಯುಯುಧಾನನು ಹೇಳಿದಂತೆಯೇ ಮುಂದೆ ಹೋದನು.

ತಂ ದ್ರೋಣೋಽನುಯಯೌ ಕ್ರುದ್ಧೋ ವಿಕಿರನ್ನಿಶಿತಾನ್ ಶರಾನ್ ।
ಯುಯುಧಾನಂ ಮಹಾಬಾಹುಂ ಗಚ್ಛಂತಮನಿವರ್ತಿನಮ್ ॥ ೫೪ ॥

ಹಿಂದೆ ತಿರುಗದೆ ಮುಂದೆ ಸಾಗುತ್ತಿದ್ದ ಮಹಾಬಾಹುವಾದ ಸಾತ್ಯಕಿಯನ್ನು ಹಿಂಬಾಲಿಸುತ್ತಾ ಕ್ರುದ್ಧರಾದ ದ್ರೋಣರು ಹರಿತವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದರು.

ಸ ಚ ಸೈನ್ಯಂ ಮಹದ್ ಭಿತ್ತ್ವಾ ದಾಕ್ಷಿಣಾತ್ಯಬಲಂ ಚ ತತ್ ।
ಕರ್ಣಸ್ಯ ಸೈನ್ಯಂ ಸುಮಹನ್ನಿಹತ್ಯ ಚ ಶಿತೈಃ ಶರೈಃ ।
ಪ್ರಾವಿಶದ್ ಭಾರತೀಂ ಸೇನಾಮಪರ್ಯಂತಾಂ ಸ ಸಾತ್ಯಕಿಃ ॥ ೫೫ ॥

ಸಾತ್ಯಕೋ ಹಿ ತತಃ ಸೈನ್ಯಂ ದ್ರಾವಯನ್ ಸ ಸಮಂತತಃ ॥೫೬॥

ಸಾತ್ಯಕಿಯು ಆ ದಾಕ್ಷಿಣಾತ್ಯರ ದೊಡ್ಡ ಸೈನ್ಯವನ್ನು ಭೇದಿಸಿ, ಕರ್ಣನ ದೊಡ್ಡ ಸೈನ್ಯವನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದು ಅಗಾಧವಾದ ಭಾರತರ ಸೈನ್ಯವನ್ನು ಪ್ರವೇಶಿಸಿದನು. ಅನಂತರ ಅವನು ಆ ಸೈನ್ಯವನ್ನು ಓಡುವಂತೆ ಮಾಡಿದನು.

ವಿದ್ರುತೇ ತು ಬಲೇ ತಸ್ಮಿನ್ ಭಗ್ನೇ ಭಾರತ ಭಾರತೇ ।
ಅಮರ್ಷೀ ಕೃತವರ್ಮಾ ತು ಸಾತ್ಯಕಿಂ ಪರ್ಯವಾರಯತ್ ॥ ೫೭ ॥

ಎಲೈ ಭಾರತನೇ, ಭಾರತರಾದ ನಿನ್ನ ಆ ಸೈನ್ಯವು ಭಗ್ನಗೊಂಡು ಓಡಿ ಹೋಗುತ್ತಿರಲು ರೋಷಾವಿಷ್ಟನಾದ ಕೃತವರ್ಮನೊಬ್ಬನು ಸಾತ್ಯಕಿಯನ್ನು ತಡೆದನು.

ತಮಾಪತಂತಂ ವಿಶಿಖೈಃ ಷಡ್ಭಿರಾಹತ್ಯ ಸಾತ್ಯಕಿಃ ।
ಚತುರ್ಭಿರಶ್ವತುರೋಽಸ್ಯಾಶ್ವಾನಾಜಘಾನಾಶು ವೀರ್ಯವಾನ್ ॥ ೫೮ ॥

ಸಾತ್ಯಕಿಯು ತನ್ನ ಮೇಲೆ ಎರಗುತ್ತಿದ್ದ ಕೃತವರ್ಮನನ್ನು ಆರು ಬಾಣಗಳಿಂದ ಹೊಡೆದು, ಪರಾಕ್ರಮಿಯಾದ ಅವನು ನಾಲ್ಕು ಬಾಣಗಳಿಂದ ಕೃತವರ್ಮನ ರಥದ ನಾಲ್ಕು ಅಶ್ವಗಳನ್ನು ಕೊಂದನು.

ತತಃ ಪುನಃ ಷೋಡಶಭಿರ್ನತಪರ್ವಭಿರಾಶುಗೈಃ ।
ಸಾತ್ಯಕಿಃ ಕೃತವರ್ಮಾಣಂ ಪ್ರತ್ಯವಿಧ್ಯತ್ ಸ್ತನಾಂತರೇ ॥ ೫೯ ॥

ಅನಂತರ ಶೀಘ್ರಗಾಮಿಗಳಾದ ಬಾಗಿದ ತುದಿಯುಳ್ಳ ಹದಿನಾರು ಬಾಣಗಳಿಂದ ಸಾತ್ಯಕಿಯು ಪುನಃ ಕೃತವರ್ಮನನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ಸ ತುದ್ಯಮಾನೋ ವಿಶಿಖೈರ್ಬಹುಭಿಸ್ತಿಗ್ಮತೇಜನೈಃ ।
ಸಾತ್ವತೇನ ಮಹಾರಾಜ ಕೃತವರ್ಮಾ ನ ಚಕ್ಷಮೇ ॥ ೬೦ ॥

ಎಲೈ ಮಹಾರಾಜನೇ, ಕ್ರೂರವಾದ ತೇಜಸ್ಸುಳ್ಳ ಅನೇಕ ಬಾಣಗಳಿಂದ ಸಾತ್ಯಕಿಯಿಂದ ಹಿಂಸಿಸಲ್ಪಟ್ಟ ಕೃತವರ್ಮನು ಅದನ್ನು ಸಹಿಸಲಿಲ್ಲ.

ಸ ವತ್ಸದಂತಂ ಸಂಧಾಯ ಜಿಹ್ಮಗಾನಲಸನ್ನಿಭಮ್ ।
ಆಕೃಷ್ಯ ರಾಜನ್ನಾರ್ಕಣಂ ವಿವ್ಯಾಧೋರಸಿ ಸಾತ್ಯಕಿಮ್ ॥ ೬೧ ॥

ಎಲೈ ರಾಜನೇ, ಅವನು ಸರ್ಪದಂತೆ ಮತ್ತು ಅಗ್ನಿಯಂತಿದ್ದ ಒಂದು ವತ್ಸದಂತವನ್ನು ಧನುಸ್ಸಿನಲ್ಲಿ ಹೂಡಿ, ತನ್ನ ಕಿವಿಯವರೆಗೂ ಎಳೆದು ಸಾತ್ಯಕಿಯನ್ನು ಎದೆಯಲ್ಲಿ ಹೊಡೆದನು.

ಸ ತಸ್ಯ ದೇಹಾವರಣಂ ಭಿತ್ತ್ವಾ ದೇಹಂ ಚ ಸಾಯಕಃ ।
ಸಪತ್ರಪುಂಖಃ ಪೃಥಿವೀಂ ವಿವೇಶ ರುಧಿರೋಕ್ಷಿತಃ ॥ ೬೨ ॥

ಆ ಬಾಣವು ಸಾತ್ಯಕಿಯ ಕವಚವನ್ನು ಮತ್ತು ಶರೀರವನ್ನು ಭೇದಿಸಿ ರಕ್ತಸಿಕ್ತವಾಗಿ ಪತ್ರಪುಂಖಸಹಿತವಾಗಿ ಭೂಮಿಯನ್ನು ಪ್ರವೇಶಿಸಿತು.

ಅಥಾಸ್ಯ ಬಹುಭಿರ್ಬಾಣೈರಾಚ್ಚಿನತ್ ಪರಮಾಸ್ತ್ರವಿತ್ ।
ಸಮಾರ್ಗಣಗುಣಂ ಚಾಪಂ ಕೃತವರ್ಮಾ ಮಹಾರಥಃ ॥ ೬೩ ॥

ಅನಂತರ ಮಹಾರಥನೂ ಮತ್ತು ಪರಮಾಸ್ತ್ರವೇತ್ತನೂ ಆದ ಕೃತವರ್ಮನು ಅನೇಕ ಬಾಣಗಳನ್ನು ಪ್ರಯೋಗಿಸಿ ಹೆದೆಯಿಂದ ಕೂಡಿದ ಅವನ ಧನುಸ್ಸನ್ನು ಕತ್ತರಿಸಿದನು.

ವಿವ್ಯಾಧ ಚ ರಣೇ ರಾಜನ್ ಸಾತ್ಯಕಿಂ ಸತ್ಯವಿಕ್ರಮಮ್ ।
ದಶಭಿರ್ವಿಶಿಖೈಶ್ಚಾಪಿ ಸುಶಿತೈಸ್ತಂ ಸ್ತನಾಂತರೇ ॥ ೬೪ ॥

ಎಲೈ ರಾಜನೇ, ಬಹಳ ತೀಕ್ಷ್ಣವಾದ ಹತ್ತು ಬಾಣಗಳಿಂದ ಸತ್ಯವಿಕ್ರಮನಾದ ಸಾತ್ಯಕಿಯನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ತತಃ ಪ್ರಶೀರ್ಣೇ ಧನುಷಿ ಶಕ್ತ್ಯಾ ಶಕ್ತಿಮತಾಂ ವರಃ ।
ಅಭ್ಯಹನ್ದ್ ದಕ್ಷಿಣಂ ಬಾಹುಂ ಸಾತ್ಯಕಿಃ ಕೃತವರ್ಮಣಃ ॥ ೬೫ ॥

ಅನಂತರ ಶಕ್ತಿವಂತರಲ್ಲಿ ಶ್ರೇಷ್ಠನಾದ ಸಾತ್ಯಕಿಯು ತನ್ನ ಧನುಸ್ಸು ಕೃತವರ್ಮನು ಪ್ರಯೋಗಿಸಿದ ಶಕ್ತಿಯಿಂದ ನಾಶ ಹೊಂದುತ್ತಿರಲು ಕೃತವರ್ಮನ ದಕ್ಷಿಣಬಾಹುವನ್ನು ಬಾಣದಿಂದ ಹೊಡೆದನು.

ತತೋಽನ್ಯತ್ ಸುದೃಢಂ ವೀರೋ ಧನುರಾದಾಯ ಸಾತ್ಯಕಿಃ ।
ವ್ಯಸೃಜದ್ ವಿಶಿಖಾನ್ಶೂರ್ಣಂ ಶತಶೋಽಥ ಸಹಸ್ರಶಃ ॥ ೬೬ ॥

ಅನಂತರ ವೀರನಾದ ಸಾತ್ಯಕಿಯು ಇನ್ನೊಂದು ದೃಢವಾದ ಧನುಸ್ಸನ್ನು ತೆಗೆದುಕೊಂಡು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸಿದನು.

ಸರಥಂ ಕೃತವರ್ಮಾಣಂ ಸಮಂತಾತ್ ಪರ್ಯವಾಕಿರತ್ ।
ತೇ ಶರಾಃ ಸಾತ್ವತೇನಾಸ್ತಾಃ ಕೃತವರ್ಮಾಣಮಾಹವೇ ।
ಛಾದಯಾಂಚಕ್ರಿರೇ ವೃಕ್ಷಂ ಶಲಭಾ ಇವ ಘೋಷಿಣಃ ॥ ೬೭ ॥

ಅವನು ರಥಸಹಿತನಾದ ಕೃತವರ್ಮನನ್ನು ಎಲ್ಲಕಡೆಗಳಿಂದಲೂ ಮುಚ್ಚಿಹಾಕಿದನು. ಸಾತ್ಯಕಿಯು ಪ್ರಯೋಗಿಸಿದ ಆ ಬಾಣಗಳು ಘೋಷಸಹಿತವಾದ ಪತಂಗಗಳು ವೃಕ್ಷವನ್ನು ಮುತ್ತುವಂತೆ ರಣರಂಗದಲ್ಲಿ ಕೃತವರ್ಮನನ್ನು ಆವರಿಸಿದವು.

ಛಾದಯಿತ್ವಾ ರಣೇ ರಾಜನ್ ಹಾರ್ದಿಕ್ಯಂ ತು ಸ ಸಾತ್ಯಕಿಃ ।
ಅಥಾಸ್ಯ ಭಲ್ಲೇನ ಶಿರಃ ಸಾರಥೇಃ ಸಮಕೃಂತತ ॥ ೬೮ ॥

ಎಲೈ ರಾಜನೇ, ಸಾತ್ಯಕಿಯು ಹಾರ್ದಿಕ್ಯನನ್ನು ಹೀಗೆ ಬಾಣಗಳಿಂದ ಮುಚ್ಚಿ ಅವನ ಸಾರಥಿಯ ಶಿರಸ್ಸನ್ನು ಭಲ್ಲದಿಂದ ಕತ್ತರಿಸಿದನು.

ಸ ಪಪಾತ ಹತಃ ಸೂತೋ ಹಾರ್ದಿಕ್ಯಸ್ಯ ಮಹಾರಥಾತ್ ।
ತತಸ್ತೇ ಯಂತರಿ ಹತೇ ಪ್ರಾದ್ರವಂಸ್ತುರಗಾ ಭೃಶಮ್ ॥ ೬೯ ॥

ಆ ಸೂತನು ಹೊಡೆಯಲ್ಪಟ್ಟು ಹಾರ್ದಿಕ್ಯನ ಮಹಾರಥದಿಂದ ಬಿದ್ದನು. ಸಾರಥಿಯು ಹತನಾಗುತ್ತಿರಲು ಆ ಅಶ್ವಗಳು ಓಡಿ ಹೋದವು.

ಅಥ ಭೋಜಸ್ತ ಸಂಭ್ರಾಂತೋ ನಿಗೃಹ್ಯ ತುರಗಾನ್ ಸ್ವಯಮ್ ।
ತಸ್ಥೌ ಶರಧನುಷ್ಪಾಣಿಸ್ತತ್ ಸೈನ್ಯಂ ಪ್ರತ್ಯಪೂಜಯತ್ ॥ ೭೦ ॥

ಆಗ ಭೋಜನಾದ ಕೃತವರ್ಮನು ಗಾಬರಿಗೊಳ್ಳದೆ ಅಶ್ವಗಳನ್ನು ತಾನೇ ಹಿಡಿದು ನಿಯಂತ್ರಿಸುತ್ತಾ ಬಿಲ್ಲುಬಾಣಗಳನ್ನು ಹಿಡಿದು ನಿಂತನು. ಅದನ್ನು ಸೈನ್ಯವು ಪೂಜಿಸಿತು.

ಸ ಮುಹೂರ್ತಮಿವಾಶ್ವಸ್ಯ ಸದಶ್ವಾನಭ್ಯಚೋದಯತ್ ।
ವ್ಯಪೇತಭೀರಮಿತ್ರಾಣಾಮಾದಧತ್ ಸುಮಹದ್ ಭಯಮ್ ॥ ೭೧ ॥

ಅವನು ಆ ಒಳ್ಳೆಯ ಅಶ್ವಗಳನ್ನು ಒಂದು ಮುಹೂರ್ತದವರೆಗೆ ಸಮಾಧಾನಪಡಿಸಿ, ಭಯವನ್ನು ಹೊಂದದೆ ಶತ್ರುಗಳಿಗೆ ದೊಡ್ಡ ಭಯವನ್ನು ಉಂಟುಮಾಡುತ್ತಾ, ಅಶ್ವಗಳನ್ನು ಪುನಃ ಪ್ರಚೋದಿಸಿದನು.

ಸಾತ್ಯಕಿಂ ನಾಭ್ಯಯಾತ್ ತಸ್ಮಾತ್ ಸ ತು ಭೀಮಮುಪಾದ್ರವತ್ ।
ಯುಯುಧಾನೋಽಪಿ ರಾಜೇಂದ್ರ ಭೋಜಾನೀಕಮತಿಕ್ರಮನ್

ಪ್ರಯಯೌ ತ್ವರಿತಸ್ತೂರ್ಣಂ ಕಾಂಬೋಜಾನಾಂ ಮಹಾಚಮೂಮ್ ॥

ಆ ಕಾರಣದಿಂದ ಅವನು ಸಾತ್ಯಕಿಯ ಕಡೆಗೆ ಹೋಗದೆ ಭೀಮಸೇನನ ಕಡೆಗೆ ಹೋದನು. ಎಲೈ ರಾಜನೇ, ಯುಯುಧಾನನೂ ಸಹ ಕೃತವರ್ಮನ ಸೈನ್ಯವನ್ನು ದಾಟಿ ಕಾಂಬೋಜರ ದೊಡ್ಡ ಸೈನ್ಯದ ಕಡೆಗೆ ಹೊರಟನು.

ಸ ತತ್ರ ಬಹುಭಿಃ ಶೂರೈಃ ಸನ್ನಿರುದ್ಧೋ ಮಹಾರಥೈಃ ।
ನ ಚಚಾಲ ಮಹಾರಾಜ ಸಾತ್ಯಕಿಃ ಸತ್ಯವಿಕ್ರಮಃ ॥ ೭೩ ॥

ಎಲೈ ಮಹಾರಾಜನೇ, ಅವನು ಅಲ್ಲಿ ಶೂರರಾದ ಅನೇಕ ಮಹಾರಥರಿಂದ ತಡೆಯಲ್ಪಟ್ಟರೂ ಸತ್ಯವಿಕ್ರಮನಾದ ಅವನು ಅಲುಗಾಡಲಿಲ್ಲ.

ಸಂಧಾಯ ಚ ಚಮೂಂ ದ್ರೋಣೋ ಭೋಜೇ ಭಾರಂ ನಿವೇಶ್ಯ ಚ ।
ಆನ್ದ್ರಾವದ್ ರಣೇ ಯತ್ತೋ ಯುಯುಧಾನಂ ಯುಯುತ್ಸಯಾ ॥

ದ್ರೋಣರು ತಮ್ಮ ಸೈನ್ಯವನ್ನು ಒಂದುಗೂಡಿಸಿ, ಕೃತವರ್ಮನ ಮೇಲೆ ಸೈನ್ಯದ ರಕ್ಷಣೆಯ ಭಾರವನ್ನು ಹೊರಿಸಿ, ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ರಣರಂಗದಲ್ಲಿ ಎಚ್ಚರಿಕೆಯಿಂದ ಅವನ ಕಡೆಗೆ ಧಾವಿಸಿದರು.

ತಥಾ ತಮನುಧಾವಂತಂ ಯುಯುಧಾನಸ್ಯ ಪೃಷ್ಠತಃ ।
ನ್ಯವಾರಯಂತ ಸಂಕ್ರುದ್ಧಾಃ ಪಾಂಡುಸೈನ್ಯೇ ಬೃಹತ್ತಮಾಃ ॥ ೭೫ ॥

ಹೀಗೆ ಸಾತ್ಯಕಿಯ ರಥದ ಹಿಂದೆ ಅವನನ್ನು ಹಿಡಿಯಲು ಧಾವಿಸಿದಂತಹ ದ್ರೋಣರನ್ನು ಪಾಂಡುಸೈನ್ಯದ ಸಂಕ್ರುದ್ಧರಾದ ದೊಡ್ಡ ವೀರರು ತಡೆದರು.

ಸಮಾಸಾದ್ಯ ತು ಹಾರ್ದಿಕ್ಯಂ ರಥಿನಾಂ ಪ್ರವರಂ ರಥಮ್ ।
ಪಾಂಚಾಲಾ ವಿಗತೋತ್ಸಾಹಾ ಭೀಮಸೇನಪುರೋಗಮಾಃ ।
ವಿಕ್ರಮ್ಯ ವಾರಿತಾ ರಾಜನ್ ವೀರೇಣ ಕೃತವರ್ಮಣಾ ॥ ೭೬ ॥

ಭೀಮಸೇನ ಮೊದಲಾದ ಪಾಂಚಾಲರು ಮಹಾರಥರಲ್ಲಿ ಶ್ರೇಷ್ಠನಾದ ಹಾರ್ದಿಕ್ಯನನ್ನು ಸಮೀಪಿಸಿ, ವೀರನಾದ ಅವನಿಂದ ಪರಾಕ್ರಮದಿಂದ ತಡೆಯಲ್ಪಟ್ಟು ಯುದ್ಧದಲ್ಲಿ ತಮ್ಮ ಉತ್ಸಾಹವನ್ನು ಕಳೆದುಕೊಂಡರು.

ಯತಮಾನಾಂಸ್ತು ತಾನ್ ಸರ್ವಾನ್ ದ್ವಿಷತೋ ಗತಚೇತಸಃ ।
ಅಭಿತಸ್ತಾನ್ ಶರೌಘೇಣ ಕ್ಷಾಂತರೂಪಾನವಾರಯತ್ ॥ ೭೭ ॥

ಸರಿಯಾದ ಪ್ರಜ್ಞೆಯಿಲ್ಲದ, ದಣಿದ, ತನ್ನ ಮೇಲೆ ಯುದ್ಧ ಮಾಡಲು ಪ್ರಯತ್ನ ಪಡುತ್ತಿದ್ದ ಆ ಶತ್ರುಗಳನ್ನು ಕೃತವರ್ಮನು ಎಲ್ಲ ಕಡೆಗಳಲ್ಲಿಯೂ ತನ್ನ ಬಾಣ ಸಮೂಹಗಳಿಂದ ತಡೆದನು.

ನಿಗೃಹೀತಾಸ್ತು ಭೋಜೇನ ಭೋಜಾನೀಕೇಷ್ವವೋ ರಣೇ ।
ಅತಿಷ್ಠನ್ನಾಹವೇ ವೀರಾಃ ಪ್ರಾರ್ಥಯಂತೋ ಮಹದ್ ಯಶಃ ॥ ೭೮ ॥

ಹಾರ್ದಿಕ್ಯಂ ಸಮರೇ ಯತ್ತಾ ನ ಶೇಕುಃ ಪ್ರತಿವೀಕ್ಷಿತುಮ್ ॥ ೭೯ ॥

ಕೃತವರ್ಮನ ಸೈನ್ಯವನ್ನು ಸಮೀಪಿಸಲು ಬಯಸಿ ಅವನಿಂದ ತಡೆಯಲ್ಪಟ್ಟ ವೀರರು ಯುದ್ಧದಲ್ಲಿ ದೊಡ್ಡ ಕೀರ್ತಿಯನ್ನು ಬಯಸುತ್ತಾ ರಣರಂಗದಲ್ಲಿ ಸ್ಥಿರವಾಗಿ ನಿಂತರು. ಅವರು ಯುದ್ಧದಲ್ಲಿ ಸನ್ನದ್ಧನಾಗಿದ್ದರೂ ಕೃತವರ್ಮನನ್ನು ಪ್ರತಿಯಾಗಿ ನೋಡಲೂ ಸಾಧ್ಯವಾಗಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ತೊಂಬತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರನೆಯ ಅಧ್ಯಾಯ

ತನ್ನ ಸೈನ್ಯದ ಪರಾಜಯವನ್ನು ಕೇಳಿ ಧೃತರಾಷ್ಟ್ರನ ಶೋಕ.
ಅವನನ್ನು ನಿಂದಿಸಿ ಸಂಜಯನಿಂದ ಕೃತವರ್ಮನ ಪರಾಕ್ರಮದ ವರ್ಣನೆ.

ಧೃತರಾಷ್ಟ್ರಃ

ಏವಂ ಬಹುವಿಧಂ ಸೈನ್ಯಮೇವಂ ಪ್ರವಿಚಿತಂ ಪರಮ್ ।
ವ್ಯೂಢಮೇವಂ ಯಥಾನ್ಯಾಯಮೇವಂ ಬಹು ಚ ಸಂಜಯ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ನಮ್ಮ ಸೈನ್ಯವು ಹೀಗೆ ಬಹುವಿಧವಾಗಿದೆ. ಹೀಗೆ ಆರಿಸಿ, ಆರಿಸಿ ಸೇರಿಸಲ್ಪಟ್ಟಿದೆ. ಶಾಸ್ತ್ರೋಕ್ತವಾಗಿ ವ್ಯೂಹಮಾಡಲ್ಪಟ್ಟಿದೆ ಮತ್ತು ವಿಸ್ತಾರವಾಗಿದೆ.

ನಿತ್ಯಂ ಪೂಜಿತಮಸ್ಮಾಭಿಃ ಅಭಿರಾಮಂ ಚ ನಃ ಸದಾ ।
ಪ್ರೌಢಮತ್ಯದ್ಭುತಾಕಾರಂ ಪುರಸ್ತಾದ್ ದೃಢವಿಕ್ರಮಮ್ ॥ ೨ ॥

ನಮ್ಮಿಂದ ಯಾವಾಗಲೂ ಗೌರವಿಸಲ್ಪಟ್ಟಿದೆ. ಯಾವಾಗಲೂ ನಮ್ಮಲ್ಲಿ ಸಂತೋಷದಿಂದ ಕೂಡಿದೆ. ಆದ್ಭುತವಾದ ಆಕಾರವನ್ನು ಹೊಂದಿ, ವಿವೇಕದಿಂದ ಕೂಡಿರುವುದಾಗಿದೆ ಮತ್ತು ಮೊದಲಿನಿಂದಲೂ ದೃಢವಾದ ಪರಾಕ್ರಮವನ್ನು ಹೊಂದಿದ್ದಾಗಿದೆ.

ನಾತಿವೃದ್ಧಮಬಾಲಂ ಚ ನ ಕೃಶಂ ನಾತಿಪೀವರಮ್ ।
ಲಘುವೃತ್ತಾಯತಪ್ರಾಯಂ ಸಾರಯೋಧಸಮನ್ವಿತಮ್ ॥ ೩ ॥

ಬಹಳ ವೃದ್ಧರಾಗಲೀ ಅಥವಾ ಬಾಲಕರಾಗಲೀ ಇಲ್ಲ. ಕೃಶವಾದ ಯೋಧರಿಂದ ಅಥವಾ ಬಹಳ ಸ್ಥೂಲವಾದ ಯೋಧರಿಂದ ಕೂಡಿರದೆ ಎತ್ತರವಾದ, ಮಧ್ಯಪ್ರಮಾಣದ ಸುತ್ತಳತೆಯುಳ್ಳ ಬಲಿಷ್ಠರಾದ ಯೋಧರಿಂದ ಕೂಡಿದುದಾಗಿದೆ.

ಆತ್ತಸನ್ನಾಹಸಂಪನ್ನಂ ಬಹುಶಸ್ತ್ರಪರಿಗ್ರಹಮ್ ।
ಅಸ್ತ್ರಗ್ರಹಣವಿದ್ಯಾಸು ಬಹ್ವೀಷು ಪರಿನಿಷ್ಠಿತಮ್ ॥ ೪ ॥

ಕವಚಾದಿ ಸಲಕರಣೆಗಳಿಂದ ಸಂಪನ್ನವಾಗಿದೆ. ಅನೇಕ ಶಸ್ತ್ರಗಳನ್ನು ಹೊಂದಿದೆ. ಅನೇಕ ಅಸ್ತ್ರವಿದ್ಯೆಗಳಲ್ಲಿ ಪರಿಣತವಾಗಿದೆ.

ಆರೋಹೇ ಪರ್ಯವಸ್ಕಂದೇ ಸರಣೇ ಸೋತ್ತರಪ್ಲುತೇ ।
ಸಮ್ಯಕ್ ಪ್ರಹರಣೇ ಯಾನೇ ವ್ಯಪಯಾನೇ ಚ ಕೋವಿದಮ್ ॥ ೫ ॥

ಅಶ್ವಾದಿಗಳ ಆರೋಹಣದಲ್ಲಿ, ಅವರೋಹಣದಲ್ಲಿ, ಮುಂದೆ ಸಾಗುವುದರಲ್ಲಿ, ದಾಟಿ ಮುಂದೆ ಹೋಗುವುದರಲ್ಲಿ, ಚೆನ್ನಾಗಿ ಪ್ರಹಾರ ಮಾಡುವುದರಲ್ಲಿ, ಪ್ರಯಾಣ ಮಾಡುವುದರಲ್ಲಿ ಮತ್ತು ಹಿಂದೆ ಸರಿಯುವುದರಲ್ಲಿ ಪರಿಣತವಾಗಿದೆ.

ನಾಗೇಷ್ವಶ್ವೇಷು ಬಹುಶೋ ರಥೇಷು ಚ ಪರೀಕ್ಷಿತಮ್ ।
ಚರ್ಮನಿಸ್ತ್ರಿಂಶಯುದ್ಧೇ ಚ ನಿಯುದ್ಧೇ ಚ ವಿಶಾರದಮ್ ।
ಪರೀಕ್ಷ್ಯ ಚ ಯಥಾನ್ಯಾಯಂ ವೇತನೇನೋಪಪಾದಿತಮ್ ॥ ೬ ॥

ರಥಗಳಲ್ಲಿ, ಗಜಗಳಲ್ಲಿ ಮತ್ತು ಅಶ್ವಗಳಲ್ಲಿ ಅನೇಕ ಬಾರಿ ಪರೀಕ್ಷೆಗೆ ಒಳಪಡಿಸಲಾಗಿದೆ. ಖಡ್ಗ-ಚರ್ಮಯುದ್ಧದಲ್ಲಿಯೂ, ಬಾಹುಯುದ್ಧದಲ್ಲಿಯೂ

ವಿಶಾರದವಾಗಿದೆ. ಯೋಧರನ್ನು ಪರೀಕ್ಷಿಸಿ ಉಚಿತವಾದ ವೇತನದಿಂದ ಸಂಗ್ರಹಿಸಲಾಗಿದೆ.

ನ ಗೋಷ್ಯಾ ನೋಪಕಾರೇಣ ನ ಸಂಬಂಧನಿಮಿತ್ತತಃ ।
ನಾನಾಭೃತಂ ನಾನ್ಯಭೃತಂ ಮಮ ಸೈನ್ಯಂ ಬಭೂವ ಹ ॥ ೭ ॥

ಸಮೂಹದಲ್ಲಿ ಸಂಗ್ರಸಿದವರಾಗಲೀ, ಕೃತಜ್ಞತೆಯ ನಿಮಿತ್ತದಿಂದ ಅಥವಾ ಸಂಬಂಧ ನಿಮಿತ್ತದಿಂದ ಸಂಗ್ರಹಿಸಿದವರಾಗಲೀ ಯಾರೂ ಇರುವುದಿಲ್ಲ. ನನ್ನ ಸೈನ್ಯವು ವೇತನರಹಿತವಾಗಿಲ್ಲ ಮತ್ತು ಇನ್ನೊಬ್ಬರಿಂದಲೂ ವೇತನವನ್ನು ಸ್ವೀಕರಿಸುವುದಿಲ್ಲ.

ಕುಲೀನಾಭಿಜನೋಪೇತಂ ತುಷ್ಟಪುಷ್ಟಮನುದ್ಧತಮ್ ।
ಕೃತಮಾನೋಪಚಾರಂ ಚ ಯಶಸ್ವಿ ಚ ಮನಸ್ವಿ ಚ ॥ ೮ ॥

ಒಳ್ಳೆಯ ಕುಲದಲ್ಲಿ ಜನಿಸಿದ ಯೋಧರಿಂದ ಕೂಡಿದೆ. ಸಂತುಷ್ಟರಾದ ಮತ್ತು ಪುಷ್ಟರಾದ ಉದ್ಧತರಲ್ಲದ ಯೋಧರಿಂದ ಕೂಡಿದೆ. ಕೀರ್ತಿಶಾಲಿಯೂ ಮತ್ತು ಧೈರ್ಯಶಾಲಿಯೂ ಆದ ಸೈನ್ಯವು ಅನೇಕ ಮಾನ ಮತ್ತು ಉಪಚಾರಗಳಿಂದ ಗೌರವಿಸಲ್ಪಟ್ಟಿದೆ.

ಸಚಿವೈಶ್ಚಾಪರೈರ್ಮುಖ್ಯೈರ್ಬಹುಭಿರ್ಮುಖ್ಯಕರ್ಮಭಿಃ ।
ಲೋಕಪಾಲೋಪಮೈಸ್ತಾತ ಪಾಲಿತಂ ನರಸತ್ತಮೈಃ ॥ ೯ ॥

ಎಲೈ ಪ್ರೀತಿಪಾತ್ರನೇ, ಶ್ರೇಷ್ಠವಾದ ಕಾರ್ಯಗಳನ್ನು ಮಾಡುವ ಅನೇಕ ಮುಖ್ಯರಾದ, ಲೋಕಪಾಲಕರನ್ನು ಹೋಲುವ, ನರಶ್ರೇಷ್ಠರಾದ ಸಚಿವರಿಂದ ಪಾಲಿತವಾಗಿದೆ.

ಬಹುಭಿಃ ಪಾರ್ಥಿವೈರ್ಗುಪ್ತಮಸ್ಮತ್ಪ್ರಿಯಚಿಕೀರ್ಷುಭಿಃ ।
ಆತ್ಮನಭಿಸೃತೈಃ ಕಾಮಾತ್ ಸಬಲೈಃ ಸಪದಾನುಗೈಃ ॥ ೧೦ ॥

ತಮ್ಮ ಸ್ವಂತ ಇಚ್ಛೆಯಿಂದ ತಮ್ಮ ಸೈನ್ಯ ಮತ್ತು ಅನುಯಾಯಿಗಳಿಂದ ಸಹಿತರಾಗಿ ನಮ್ಮ ಬಳಿಗೆ ಬಂದು ನಮಗೆ ಪ್ರಿಯವನ್ನು ಮಾಡಲು ಇಚ್ಛಿಸುವ ಅನೇಕ ರಾಜರುಗಳಿಂದ ರಕ್ಷಿತವಾಗಿದೆ.

ಮಹೋದಧಿಮಿವಾಪೂರ್ಣಮಾಪಗಾಭಿಃ ಸಮಂತತಃ ।
ಅಪಕ್ಷೈಃ ಪಕ್ಷಿಸಂಕಾಶೈ ರಥೈರಶ್ವೈಶ್ಚ ಸಂವೃತಮ್ ॥ ೧೧ ॥

ಪ್ರಭಿನ್ನಕರಟೈಶ್ಚೈವ ದ್ವಿರದೈರಾವೃತಂ ಮಹತ್ ।
ಯದಹನ್ಯತ ಮೇ ಸೈನ್ಯಂ ಕಿಮನ್ಯದ್ ಭಾಗಧೇಯತಃ ॥ ೧೨ ॥

ನದಿಗಳಿಂದ ಎಲ್ಲ ಕಡೆಗಳಿಂದಲೂ ಪೂರ್ಣವಾದ ದೊಡ್ಡ ಸಾಗರದಂತಿದೆ. ರೆಕ್ಕೆಗಳಿಲ್ಲದ ಪಕ್ಷಿಗಳಂತಿರುವ ರಥ ಮತ್ತು ಅಶ್ವಗಳಿಂದ ಕೂಡಿದೆ. ಕುಂಭಸ್ಥಲದಿಂದ ಮದೋದಕವನ್ನು ಸುರಿಸುವ ಅನೇಕ ದೊಡ್ಡ ಗಜಗಳಿಂದ ತುಂಬಿದೆ. ಇಂತಹ ನನ್ನ ಸೈನ್ಯವು ಪ್ರಹಾರಕ್ಕೆ ಒಳಗಾಗುತ್ತಿದೆ ಎಂದರೆ ಅದೃಷ್ಟವನ್ನು ಬಿಟ್ಟು ಬೇರೆ ಯಾವ ಕಾರಣವಿದೆ?

ಯೋಧಾಕ್ಷಯ್ಯಜಲಂ ಭೀಮಂ ವಾಹನೋರ್ಮಿತರಂಗಿಣಮ್ ।
ಕ್ಷೇಪಣ್ಯಸಿಗದಾಶಕ್ತಿಶರಪ್ರಾಸಝಷಾಕುಲಮ್ ॥ ೧೩ ॥

ಧ್ವಜಾಗ್ರಮಣಿಸಂಬಾಧಂ ರತ್ನಪಟ್ಟಸುಸಂವೃತಮ್ ।
ವಾಹನೈಃ ಪರಿಧಾವದ್ಭಿರ್ವಾಯುವೇಗೈರ್ವಿಕಲ್ಪಿತಮ್ ॥ ೧೪ ॥

ದ್ರೋಣಗಂಭೀರಪಾತಾಳಂ ಕೃತವರ್ಮಮಹಾಹ್ರದಮ್ ।
ಜಲಸಂಧಮಹಾಗ್ರಾಹಂ ಕರ್ಣಚಂದ್ರೋದಯೋದ್ಧತಮ್ ॥ ೧೫ ॥

ಯೋಧರೆಂಬ ಅಕ್ಷಯ ಜಲವನ್ನು ಹೊಂದಿದೆ. ಭಯಂಕರವಾದ ವಾಹನಗಳೆಂಬ ಊರ್ಮಿಗಳನ್ನೂ ಮತ್ತು ತರಂಗವನ್ನೂ ಹೊಂದಿದೆ, ಕ್ಷಿಪಣಿ-ಖಡ್ಗ-ಗದೆ-ಶಕ್ತಿ-ಬಾಣ-ಪ್ರಾಸ ಮೊದಲಾದ ಮೊಸಳೆಗಳಿಂದ ನಿಬಿಡವಾದ, ಧ್ವಜಗಳ ಮೇಲಿನ ಶ್ರೇಷ್ಠವಾದ ಮಣಿಗಳಿಂದ ಪೂರ್ಣವಾದ, ರತ್ನಪಟ್ಟಗಳಿಂದ ಚೆನ್ನಾಗಿ ಮುಚ್ಚಲ್ಪಟ್ಟ, ವಾಯುವೇಗವನ್ನು ಹೊಂದಿ ಧಾವಿಸುವ ವಾಹನಗಳಿಂದ ಸಿದ್ಧಗೊಳಿಸಿದ, ದ್ರೋಣರೆಂಬ ಗಂಭೀರವಾದ ಪಾತಾಳವನ್ನು ಹೊಂದಿದ, ಕೃತವರ್ಮನೆಂಬ ದೊಡ್ಡ ಮಡುವನ್ನು ಹೊಂದಿದ, ಜಲಸಂಧನೆಂಬ ದೊಡ್ಡ ಮೊಸಳೆಯಿಂದ ಕೂಡಿದ, ಕರ್ಣನೆಂಬ ಚಂದ್ರೋದಯದಿಂದ ಉಬ್ಬಿದ (ನನ್ನ ಸೈನ್ಯವು ನಾಶ ಹೊಂದುತ್ತದೆಂದರೆ ಅದೃಷ್ಟವನ್ನು ಬಿಟ್ಟು ಬೇರೆ ಯಾವ ಕಾರಣವಿದೆ?)

ಗತೇ ಸೈನ್ಯಾರ್ಣವಂ ಭಿತ್ತ್ವಾ ತರಸಾ ಪಾಂಡವರ್ಷಭೇ ।
ಸಂಜಯೈಕರಥೇನೈವ ಯುಯುಧಾನೇ ಚ ಮಾಮಕಮ್ ॥ ೧೬ ॥

ತತ್ರ ಶೇಷಂ ನ ಪಶ್ಯಾಮಿ ಪ್ರವಿಷ್ಟೇ ಸವ್ಯಸಾಚಿನಿ ।
ಸಾತ್ವತೇ ಚ ರಥೋದಾರೇ ಮಮ ಸೈನ್ಯಸ್ಯ ಸಂಜಯ ॥ ೧೭ ॥

ಎಲೈ ಸಂಜಯನೇ, ಪಾಂಡವ ಶ್ರೇಷ್ಠನಾದ ಯುಯುಧಾನನು ಒಂದು ರಥದಿಂದ ನನ್ನ ಸೈನ್ಯ ಸಾಗರವನ್ನು ಶೀಘ್ರವಾಗಿ ಭೇದಿಸಿ ಹೋದಮೇಲೆ ಅರ್ಜುನನೂ ಮತ್ತು ರಥಶ್ರೇಷ್ಠನಾದ ಸಾತ್ಯಕಿಯೂ ನನ್ನ ಸೈನ್ಯವನ್ನು ಪ್ರವೇಶಿಸುತ್ತಿರಲು ನನ್ನ ಸೈನ್ಯದಲ್ಲಿ ಯಾರೂ ಉಳಿಯುವುದಿಲ್ಲವೆಂದು ಭಾವಿಸುತ್ತೇನೆ.

ತೌ ತತ್ರ ಸಮತಿಕ್ರಾಂತೌ ದೃಷ್ಟ್ವಾ ವೀರೌ ತರಸ್ವಿನೌ ।
ಸಿಂಧುರಾಜಂ ಚ ಸಂಪ್ರೇಕ್ಷ್ಯ ಗಾಂಡೀವಸ್ಯೈವ ಗೋಚರಮ್ ॥ ೧೮ ॥

ಕಿಂ ತದಾ ಕುರವಃ ಕೃತ್ಯಂ ವಿದಧುಃ ಕಾಲಚೋದಿತಾಃ ।
ದಾರುಣೈಕಾಯನೇ ಕಾಲೇ ಕಥಂ ವಾ ಪ್ರತಿಪೇದಿರೇ ॥ ೧೯ ॥

ವೇಗಶಾಲಿಗಳಾದ ಆ ಇಬ್ಬರು ವೀರರು ತಮ್ಮನ್ನು ದಾಟಿದುದನ್ನು ನೋಡಿ ಸೈಂಧವನೂ ಸಹ ಅರ್ಜುನನ ಬಾಣದ ವ್ಯಾಪ್ತಿಯಲ್ಲಿ ಸಿಲುಕಿರುವುದನ್ನು ನೋಡಿ, ಮೃತ್ಯುಚೋದಿತರಾದ ಕುರುಗಳು ಆಗ ಏನು ಮಾಡಿದರು? ಭಯಂಕರವಾದ ಫಲವನ್ನು ಕೊಡುವ ಆ ಕಾಲದಲ್ಲಿ ಹೇಗೆ ವರ್ತಿಸಿದರು?

ಗ್ರಸ್ತಾನ್ ಹಿ ಕೌರವಾನ್ ಮನ್ಯೇ ಮೃತ್ಯುನಾ ತಾತ ಸಂಗತಾನ್ ।
ವಿಕ್ರಮೋಽಪಿ ರಣೇ ತೇಷಾಂ ನ ತಥಾ ದೃಶ್ಯತೇಽದ್ಯ ವೈ ॥ ೨೦ ॥

ಎಲೈ ಪ್ರೀತಿಪಾತ್ರನೇ, ಎಲ್ಲ ಕೌರವರೂ ಒಟ್ಟಿಗೆ ಮೃತ್ಯುಗ್ರಸ್ತರಾಗಿದ್ದಾರೆಂದು ಭಾವಿಸುತ್ತೇನೆ. ಅವರ ಪರಾಕ್ರಮವೂ ಸಹ ಹಿಂದೆ ಇದ್ದಂತೆ ಈಗ ಕಂಡುಬರುವುದಿಲ್ಲ.

ಅಕ್ಷತೌ ಸಂಯುಗೇ ತತ್ರ ಪ್ರವಿಷ್ಟೌ ಕೃಷ್ಣಪಾಂಡವೌ ।
ನ ಚ ವಾರಯಿತಾ ಕಶ್ಚಿನ್ಮಮ ಸೈನ್ಯೇಽಸ್ತಿ ಸಂಜಯ ॥ ೨೧ ॥

ಎಲೈ ಸಂಜಯನೇ, ರಣರಂಗದಲ್ಲಿ ಗಾಯಗೊಳ್ಳದೇ ಪ್ರವೇಶಿಸಿದ ಕೃಷ್ಣಾರ್ಜುನರನ್ನು ತಡೆಯುವವರು ನನ್ನ ಸೈನ್ಯದಲ್ಲಿ ಯಾರೂ ಇಲ್ಲ.

ಭೃತಾಶ್ಚ ಬಹವೋ ಯೋಧಾಃ ಪರೀಕ್ಷ್ಯೈವ ತು ಸಂಜಯ ।
ವೇತನೇನ ಯಥಾಯೋಗ್ಯಂ ಪ್ರಿಯವಾದೇನ ಚಾಪರೇ ॥ ೨೨ ॥

ಎಲೈ ಸಂಜಯನೇ, ಅನೇಕ ಯೋಧರನ್ನು ಪರೀಕ್ಷೆ ಮಾಡಿಯೇ ಅವರಿಗೆ ಉಚಿತವಾದ ವೇತನವನ್ನು ಕೊಟ್ಟುಮತ್ತು ಇನ್ನು ಕೆಲವರಿಗೆ ಪ್ರಿಯವಾದ ಮಾತುಗಳನ್ನು ಆಡಿ ಅವರೆಲ್ಲರೂ ನಮ್ಮಿಂದ ಪೂಜಿಸಲ್ಪಟ್ಟಿದ್ದಾರೆ.

ಅಕಾರಣಭೃತಸ್ತತ್ರ ಮಮ ಸೈನ್ಯೇ ನ ವಿದ್ಯತೇ ।
ಕರ್ಮಣಾ ಹ್ಯನುರೂಪೇಣ ಲಭ್ಯತೇ ಭಕ್ತವೇತನಮ್ ॥ ೨೩ ॥

ನಿಷ್ಕಾರಣವಾಗಿ ಪೂಜಿಸಲ್ಪಡುವ ಯಾವನೂ ನನ್ನ ಸೈನ್ಯದಲ್ಲಿ ಇಲ್ಲ. ಅವರು ಮಾಡುವ ಕರ್ಮಕ್ಕೆ ಅನುಗುಣವಾಗಿ ಅವರು ಆಹಾರ ಮತ್ತು ವೇತನಗಳನ್ನು ಪಡೆಯುತ್ತಾರೆ.

ನ ಚ ಯೋದ್ಧಾಭವತ್ ಕಶ್ಚಿನ್ಮಮ ಸೈನ್ಯೇಷು ಸಂಜಯ ।
ನಾಲ್ಪದಾನಭೃತಸ್ತಾತ ನ ಕೋಽಪ್ಯಭೃತಕೋ ನರಃ ॥ ೨೪ ॥

ಎಲೈ ಸಂಜಯನೇ, ನನ್ನ ಸೈನ್ಯದಲ್ಲಿ ಅಲ್ಪವೇತನವನ್ನು ಪಡೆಯುವ ಯೋಧನಾಗಲೀ, ವೇತನವನ್ನು ಪಡೆಯದ ಯೋಧನಾಗಲೀ ಯಾವನೂ ಇಲ್ಲ.

ಪೂಜಿತೋ ಹಿ ಯಥಾಶಕ್ತಿ ದಾನಮಾನಾಸನೈರ್ಮಯಾ ।
ತಥಾ ಪುತ್ರೈಶ್ಚ ಮೇ ತಾತ ಜ್ಞಾತಿಭಿಶ್ಚ ಸಬಾಂಧವೈಃ ॥ ೨೫ ॥

ಎಲೈ ಪ್ರೀತಿಪಾತ್ರನೇ, ನನ್ನಿಂದಲೂ, ನನ್ನ ಪುತ್ರರಿಂದಲೂ ಮತ್ತು ನನ್ನ ಜ್ಞಾತಿ ಬಾಂಧವರಿಂದಲೂ ನಮ್ಮ ಶಕ್ತಿಗೆ ಅನುಗುಣವಾಗಿ ಅವರು ಗೌರವಿಸಲ್ಪಟ್ಟಿದ್ದಾರೆ.

ತೇ ಚಾವಾಪ್ಯ ಚ ಸಂಗ್ರಾಮೇ ನಿರ್ಜಿತಾಃ ಸವ್ಯಸಾಚಿನಾ ।
ಶೈನೇಯೇನ ಚ ಸಮ್ಮೃಷ್ಟಾಃ ಕಿಮನ್ಯದ್ ಭಾಗಧೇಯತಃ ॥ ೨೬ ॥

ಅಂತಹ ಅವರು ರಣರಂಗಕ್ಕೆ ಬಂದು ಅರ್ಜುನನಿಂದಲೂ ಮತ್ತು ಸಾತ್ಯಕಿಯಿಂದಲೂ ಪರಾಜಿತರಾಗಿದ್ದಾರೆ. ಅದೃಷ್ಟವನ್ನು ಬಿಟ್ಟು ಇದಕ್ಕೆ ಬೇರೆ ಏನು ಕಾರಣವಿದೆ?

ರಕ್ಷ್ಯತೇ ಯಶ್ಚ ಸಂಗ್ರಾಮೇ ಯೇ ಚ ಸಂಜಯ ರಕ್ಷಿಣಃ ।
ಏಕಃ ಸಾಧಾರಣಃ ಪಂಥಾ ರಕ್ಷ್ಯಸ್ಯ ಸಹ ರಕ್ಷಿಭಿಃ ॥ ೨೭ ॥

ಎಲೈ ಸಂಜಯನೇ, ಯುದ್ಧದಲ್ಲಿ ಯಾರು ರಕ್ಷಣೆಯನ್ನು ಮಾಡುತ್ತಾರೆಯೋ ಮತ್ತು ಯಾವನು ರಕ್ಷಿಸಲ್ಪಡುತ್ತಾನೆಯೋ ಅವರಿಬ್ಬರಿಗೂ ಸಾಧಾರಣವಾದ ಒಂದೇ ಮಾರ್ಗವಿದೆ.

ಅರ್ಜುನಂ ಸಮರೇ ದೃಷ್ಟ್ವಾ ಸೈಂಧವಸ್ಯಾಗ್ರತಃ ಸ್ಥಿತಮ್ ।
ಪುತ್ರೋ ಮಮ ಭೃಶಂ ಮೂಢಃ ಕಿಂ ಕಾರ್ಯಂ ಪ್ರತ್ಯಪದ್ಯತ ॥ ೨೮ ॥

ಸೈಂಧವನ ಮುಂಭಾಗದಲ್ಲಿದ್ದ ಅರ್ಜುನನನ್ನು ರಣರಂಗದಲ್ಲಿ ನೋಡಿ ಬಹಳ ಮೂಢನಾದ ನನ್ನ ಪುತ್ರನು ಏನು ಮಾಡಬೇಕೆಂದು ಇಚ್ಛಿಸಿದನು?

ಸಾತ್ಯಕಿಂ ಚ ರಣೇ ದೃಷ್ಟ್ವಾ ಪ್ರವಿಶಂತಮಭೀತವತ್ ।
ಕಿನ್ನು ದುರ್ಯೋಧನಃ ಕೃತ್ಯಂ ಪ್ರಾಪ್ತಕಾಲಮಮನ್ಯತ ॥ ೨೯ ॥

ರಣರಂಗದಲ್ಲಿ ಅಭೀತನಾಗಿ ಪ್ರವೇಶಿಸುವ ಸಾತ್ಯಕಿಯನ್ನು ನೋಡಿ ದುರ್ಯೋಧನನು ಏನು ಮಾಡಿದರೆ ಯೋಗ್ಯವೆಂದು ಭಾವಿಸಿದನು?

ಸರ್ವಶಕ್ತ್ಯಧಿಕೌ ಸೇನಾಂ ಪ್ರವಿಷ್ಟೌ ರಥಸತ್ತಮೌ ।
ದೃಷ್ಟ್ವಾ ಕಾಂ ವೈ ಧೃತಿಂ ಯುದ್ಧೇ ಪ್ರತ್ಯಪದ್ಯಂತ ಮಾಮಕಾಃ ॥ ೩೦ ॥

ಎಲ್ಲ ಶಕ್ತಿಗಳಿಂದಲೂ ಅಧಿಕರಾದ, ರಥಶ್ರೇಷ್ಠರಾದ ಅರ್ಜುನ-ಸಾತ್ಯಕಿಯರು ನಮ್ಮ ಸೈನ್ಯವನ್ನು ಪ್ರವೇಶ ಮಾಡುವುದನ್ನು ನೋಡಿ, ನನ್ನವರು ಯುದ್ಧದಲ್ಲಿ ಯಾವ ಧೈರ್ಯವನ್ನು ಹೊಂದಿದರು?

ದೃಷ್ಟ್ವಾ ತು ಕೃಷ್ಣಂ ವಾರ್ಷ್ಣೇಯಮರ್ಜುನಾರ್ಥೇ ವ್ಯವಸ್ಥಿತಮ್ ।
ಶಿನೀನಾಮೃಷಭಂ ಚೈವ ಮನ್ಯೇ ಶೋಚಂತಿ ಪುತ್ರಕಾಃ ॥ ೩೧ ॥

ಅರ್ಜುನನ ಹಿತದಲ್ಲಿ ಬದ್ಧನಾಗಿ ನಿರತರಾಗಿರುವ ವಾರ್ಷ್ಣೇಯನಾದ ಕೃಷ್ಣನನ್ನೂ, ಶಿನಿಪುಂಗವನಾದ ಸಾತ್ಯಕಿಯನ್ನೂ ನೋಡಿ ನನ್ನ ಮಕ್ಕಳು ಶೋಕಪಡುತ್ತಾರೆ.

ದೃಷ್ಟ್ವಾ ಸೇನಾಂ ವ್ಯತಿಕ್ರಾಂತಾಂ ಸಾತ್ವತೇನಾರ್ಜುನೇನ ಚ ।
ಪಲಾಯಮಾನಾಂಶ್ಚ ಕುರೂನ್ ಮನ್ಯೇ ಶೋಚಂತಿ ಪುತ್ರಕಾಃ ॥ ೩೨ ॥

ಸಾತ್ಯಕಿ ಮತ್ತು ಅರ್ಜುನರು ನಮ್ಮ ಸೈನ್ಯವನ್ನು ದಾಟಿದುದನ್ನು ನೋಡಿ ಮತ್ತು ಕುರುಗಳು ಪಲಾಯನ ಮಾಡುವುದನ್ನು ನೋಡಿ ನನ್ನ ಪುತ್ರರು ಶೋಕಪಡುವರೆಂದು ಭಾವಿಸುತ್ತೇನೆ.

ವಿದ್ರುತಾನ್ ರಥಿನೋ ದೃಷ್ಟ್ವಾ ನಿರುತ್ಸಾಹಾನ್ ದ್ವಿಷಜ್ಜಯೇ ।
ಪಲಾಯನಕೃತೋತ್ಸಾಹಾನ್ ಮನ್ಯೇ ಶೋಚಂತಿ ಪುತ್ರಕಾಃ ॥ ೩೩ ॥

ನಮ್ಮ ರಥಿಗಳು ಶತ್ರುಗಳ ಜಯದಲ್ಲಿ ಉತ್ಸಾಹವನ್ನು ಕಳೆದುಕೊಂಡು ಪಲಾಯನದಲ್ಲಿ ಉತ್ಸಾಹವನ್ನು ಹೊಂದಿ ಓಡುವುದನ್ನು ನೋಡಿ ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ಶೂನ್ಯಾನ್ ಕೃತಾನ್ ರಥೋಪಸ್ಥಾನ್ ಸಾತ್ಯಕೇನಾರ್ಜುನೇನ ಚ ।
ಹತಾಂಶ್ಚ ಯೋಧಾನ್ ಸಂದೃಶ್ಯ ಮನ್ಯೇ ಶೋಚಂತಿ ಪುತ್ರಕಾಃ ॥ ೩೪ ॥

ಸಾತ್ಯಕಿ ಮತ್ತು ಅರ್ಜುನರಿಂದ ಶೂನ್ಯಗೊಳಿಸಲ್ಪಟ್ಟ ರಥಪೀಠಗಳನ್ನೂ, ಹತರಾದ ಯೋಧರನ್ನೂ ನೋಡಿ ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ವ್ಯಶ್ವನಾಗರಥಾನ್ ದೃಷ್ಟ್ವಾ ತತ್ರ ಧೀರಾನ್ ಸಹಸ್ರಶಃ ।
ಧಾವತಶ್ಚ ರಣೇ ವ್ಯಗ್ರಾನ್ ಮನ್ಯೇ ಶೋಚಂತಿ ಪುತ್ರಕಾಃ ॥ ೩೫ ॥

ಅಶ್ವ-ಗಜ-ರಥಗಳನ್ನು ಕಳೆದುಕೊಂಡು ಧೀರರಾದ ವೀರರು ಸಹಸ್ರಸಂಖ್ಯೆಯಲ್ಲಿ ವ್ಯಗ್ರರಾಗಿ ರಣರಂಗದಲ್ಲಿ ಓಡುವುದನ್ನು ನೋಡಿ ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ವಿವೀರಾಂಶ್ಚ ರಥೇಭಾಶ್ವಾನ್ ವಿರಥಾಂಶ್ಚ ಕೃತಾನ್ ನರಾನ್ ।
ತತ್ರ ಸಾತ್ಯಕಿಪಾರ್ಥಾಭ್ಯಾಂ ಮನ್ಯೇ ಶೋಚಂತಿ ಪುತ್ರಕಾಃ ॥ ೩೬ ॥

ರಣರಂಗದಲ್ಲಿ ಸಾತ್ಯಕಿ ಮತ್ತು ಅರ್ಜುನರಿಂದ ಯೋಧರಿಲ್ಲದಂತೆ ಮಾಡಲ್ಪಟ್ಟ ರಥ-ಗಜಾಶ್ವಗಳನ್ನೂ, ರಥ-ಗಜಾಶ್ವಗಳಿಲ್ಲದಂತೆ ಮಾಡಲ್ಪಟ್ಟ ಯೋಧರನ್ನೂ ನೋಡಿ ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ಮಹಾನಾಗಾನ್ ವಿದ್ರವತೋ ದೃಷ್ಟ್ವಾರ್ಜುನಶರಾಹತಾನ್ ।
ಪತಿತಾಂಶ್ಚ ತತಶ್ಚಾನ್ಯಾನ್ ಮನ್ಯೇ ಶೋಚಂತಿ ಪುತ್ರಕಾಃ ॥೩೭॥

ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟು ಓಡುವ ಮತ್ತು ಬೀಳುವ ಮಹಾಗಜಗಳನ್ನು ನೋಡಿ ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ಹಯೌಘಾನ್ ವಿದ್ರುತಾನ್ ದೃಷ್ಟ್ವಾ ದ್ರಾವ್ಯಮಾಣಾಂಸ್ತತಸ್ತತಃ ।
ರಣೇ ಸಾತ್ವತಪಾರ್ಥಾಭ್ಯಾಂ ಮನ್ಯೇ ಶೋಚಂತಿ ಪುತ್ರಕಾಃ ॥ ೩೮ ॥

ಅರ್ಜುನ-ಸಾತ್ಯಕಿಯರಿಂದ ರಣರಂಗದಲ್ಲಿ ಓಡಿಸಲ್ಪಡುವ ನಮ್ಮ ಅಶ್ವ ಸಮೂಹಗಳನ್ನು ನೋಡಿ ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ಪತ್ತಿಸಂಘಾನ್ ರಣೇ ದೃಷ್ಟ್ವಾ ಧಾವಮಾನಾಂಶ್ಚ ಸರ್ವಶಃ ।
ನಿರಾಶಾ ವಿಜಯೇ ಸರ್ವೇ ಮನ್ಯೇ ಶೋಚಂತಿ ಪುತ್ರಕಾಃ ॥ ೩೯ ॥

ಪದಾತಿಗಳ ಸಮೂಹಗಳು ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ಓಡಿ ಹೋಗುವುದನ್ನು ನೋಡಿ, ತಮ್ಮ ಜಯದ ಆಸೆಯನ್ನು ತೊರೆದು ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ದ್ರೋಣಸ್ಯ ಸಮತಿಕ್ರಾಂತಾವನೀಕಮಪರಾಜಿತೌ ।
ಕ್ಷಣೇನ ದೃಷ್ಟ್ವಾ ತೌ ವೀರೌ ಮನ್ಯೇ ಶೋಚಂತಿ ಪುತ್ರಕಾಃ ॥ ೪೦ ॥

ಆ ಇಬ್ಬರು ವೀರರು ಅಪರಾಜಿತರಾಗಿ ಒಂದು ಕ್ಷಣದಲ್ಲಿ ದ್ರೋಣರ ಸೈನ್ಯವನ್ನು ದಾಟಿ ಹೋದುದನ್ನು ನೋಡಿ ನನ್ನ ಪುತ್ರರು ಶೋಕಪಡುತ್ತಾರೆಂದು ಭಾವಿಸುತ್ತೇನೆ.

ಸಮ್ಮೂಢೋಽಸ್ಮಿ ಭೃಶಂ ತಾತ ಶ್ರುತ್ವಾ ಕೃಷ್ಣಧನಂಜಯೌ ।
ಪ್ರವಿಷ್ಟೌ ಮಾಮಕಂ ಸೈನ್ಯಂ ಸಾತ್ವತೇನ ಸಹಾಚ್ಯುತೌ ॥ ೪೧ ॥

ಎಲೈ ಪ್ರೀತಿಪಾತ್ರನೇ, ಕೃಷ್ಣಾರ್ಜುನರು ಸಾತ್ಯಕಿಯ ಜೊತೆಯಲ್ಲಿ ತಮ್ಮ ಸಾಮರ್ಥ್ಯ ಕಡಿಮೆಯಾಗದೆ ನಮ್ಮ ಸೈನ್ಯವನ್ನು ಪ್ರವೇಶಿಸಿದರೆಂದು ಕೇಳಿ ನಾನು ಬಹಳ ಮೂಢನಾಗಿದ್ದೇನೆ.

ತಸ್ಮಿನ್ ಪ್ರವಿಷ್ಟೇ ಪೃತನಾಂ ಶಿನೀನಾಂ ಪ್ರವರೇ ರಥೇ ।
ಭೋಜಾನೀಕಂ ವ್ಯತಿಕ್ರಾಂತೇ ಕಥಮಾಸನ್ ಹಿ ಕೌರವಾಃ ॥ ೪೨ ॥

ಶಿನಿಗಳ ಶ್ರೇಷ್ಠ ರಥನಾದ ಸಾತ್ಯಕಿಯು ನಮ್ಮ ಸೈನ್ಯವನ್ನು ಪ್ರವೇಶಿಸಿ, ಕೃತವರ್ಮನ ಸೈನ್ಯವನ್ನು ದಾಟಿ ಹೋದಾಗ ಕೌರವರು ಹೇಗಿದ್ದರು?

ತಥಾ ದ್ರೋಣೇನ ಸಮರೇ ನಿಗೃಹೀತೇಷು ಪಾಂಡುಷು ।
ಕಥಂ ಯುದ್ಧಮಭೂತ್ ತೇಷಾಂ ತನ್ಮಾಚಕ್ಷ್ವ ಸಂಜಯ ॥ ೪೩ ॥

ಹಾಗೆಯೇ ಪಾಂಡವರು ದ್ರೋಣರಿಂದ ರಣರಂಗದಲ್ಲಿ ತಡೆಯಲ್ಪಟ್ಟಾಗ ಅವರ ಜೊತೆಯಲ್ಲಿ ಹೇಗೆ ಯುದ್ಧವು ನಡೆಯಿತು? ಎಲೈ ಸಂಜಯನೇ, ಅದನ್ನು ನನಗೆ ಹೇಳು.

ದ್ರೋಣೋ ಹಿ ಬಲವಾನ್ ಶೂರಃ ಕೃತಾಸ್ತ್ರೋ ದೃಢವಿಕ್ರಮಃ ।
ಪಾಂಚಾಲಾಸ್ತಂ ಮಹೇಷ್ವಾಸಂ ಪ್ರತ್ಯಯುದ್ಧ್ಯನ್ ಕಥಂ ರಣೇ ॥ ೪೪ ॥

ದ್ರೋಣರು ಬಲಿಷ್ಠರಾದವರು, ಶೂರರು, ಅಸ್ತ್ರಪಾರಂಗತರು ಮತ್ತು ದೃಢ ಪರಾಕ್ರಮವುಳ್ಳವರು. ಪಾಂಚಾಲರು ಆ ಮಹಾಧನುರ್ಧಾರಿಗಳ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದರು?

ಬದ್ಧವೈರಾಸ್ತಥಾ ದ್ರೋಣೇ ಧರ್ಮರಾಜಜಯೈಷಿಣಃ ।
ಭಾರದ್ವಾಜಸ್ತಥಾ ತೇಷು ದೃಢವೈರೋ ಮಹಾಬಲಃ ॥ ೪೫ ॥

ಪಾಂಚಾಲರು ಧರ್ಮರಾಜನ ಜಯವನ್ನು ಬಯಸುತ್ತಾ ದ್ರೋಣರಲ್ಲಿ ಬದ್ಧವೈರ ಉಳ್ಳವರು. ಹಾಗೆಯೇ ಮಹಾಬಲರಾದ ದ್ರೋಣರೂ ಸಹ ಪಾಂಚಾಲರಲ್ಲಿ ದೃಢವಾದ ವೈರವುಳ್ಳವರು.

ಅರ್ಜುನಶ್ಚಾಪಿ ಯಚ್ಚಕ್ತೇ ಸಿಂಧುರಾಜವಧಂ ಪ್ರತಿ ।
ತನ್ಮೇ ಸರ್ವಂ ಸಮಾಚಕ್ಷ್ವ ಕುಶಲೋ ಹ್ಯಸಿ ಸಂಜಯ ॥ ೪೬ ॥

ಎಲೈ ಸಂಜಯನೇ, ಸಿಂಧುರಾಜನ ವಧೆಯ ವಿಷಯದಲ್ಲಿ ಅರ್ಜುನನಾದರೂ ಏನು ಮಾಡಿದನು ಎಂದು ನನಗೆ ಎಲ್ಲವನ್ನೂ ಹೇಳು. ನೀನು ವರ್ಣನೆ ಮಾಡುವುದರಲ್ಲಿ ಕುಶಲನಾಗಿದ್ದೀಯೆ.

ಸಂಜಯಃ

ಆತ್ಮಾಪರಾಧಸಂಭೂತಂ ವ್ಯಸನಂ ಭರತರ್ಷಭ ।
ಪ್ರಾಪ್ಯ ಪ್ರಾಕೃತವದ್ ಧೀರ ನ ತ್ವಂ ಶೋಚಿತುಮರ್ಹಸಿ ॥ ೪೭ ॥

ಸಂಜಯ– ಎಲೈ ಭರತಶ್ರೇಷ್ಠನೇ, ಧೀರನೇ, ಈ ವ್ಯಸನವು ನಿನಗೆ ನಿನ್ನ ಅಪರಾಧದಿಂದ ಉಂಟಾಗಿದೆ. ಅಂತಹ ವ್ಯಸನವನ್ನು ಹೊಂದಿ ನೀನು ಸಾಮಾನ್ಯ ಮನುಷ್ಯನಂತೆ ಶೋಕವನ್ನು ಪಡಬಾರದು.

ಪುರಾ ಯದುಚ್ಯಸೇ ಪ್ರಾಜ್ಞೈಃ ಸುಹೃದ್ಭಿರ್ವಿದುರಾದಿಭಃ ।
ಮಾ ಹಾರ್ಷೀಃ ಪಾಂಡವಾನ್ ರಾಜನ್ನಿತಿ ತನ್ನ ತ್ವಯಾ ಕೃತಮ್ ॥೪೮॥

ಹಿಂದೆ ನಿನ್ನ ಹಿತೈಷಿಗಳೂ, ಪ್ರಾಜ್ಞರೂ ಆದ ವಿದುರಾದಿಗಳು ರಾಜನೇ, ಪಾಂಡವರನ್ನು ದ್ಯೂತದಲ್ಲಿ ಸೋಲಿಸಬೇಡ ಎಂದು ಹೇಳಿದರು. ಅದನ್ನು ನೀನು ನಡೆಸಲಿಲ್ಲ(ಕೇಳಲಿಲ್ಲ).

ಸುಹೃದಾಂ ಹಿತಕಾಮಾನಾಂ ವಾಕ್ಯಂ ಯೋ ನ ಶೃಣೋತಿ ಹ ।
ಸ ಮಹದ್ ವ್ಯಸನಂ ಪ್ರಾಪ್ಯ ಶೋಚತೇ ವೈ ಯಥಾ ಭವಾನ್ ॥೪೯॥

ಯಾವನು ಹಿತವನ್ನು ಬಯಸುವ ಸುಹೃದರ ಮಾತನ್ನು ಕೇಳುವುದಿಲ್ಲವೋ ಅವನು ನಿನ್ನಂತೆ ದೊಡ್ಡ ವ್ಯಸನಕ್ಕೆ ಈಡಾಗಿ ಶೋಕಪಡುತ್ತಾನೆ.

ಯಾಚತೋಽಸಿ ಪುರಾ ರಾಜನ್ ದಾಶಾರ್ಹೇಣ ಶಮಂ ಪ್ರತಿ ।
ನಚ ತಂ ಲಬ್ಧವಾನ್ ಕಾಮಂ ತತ್ತಃ ಕೃಷ್ಣೋ ಮಹಾಯಶಾಃ ॥೫೦॥

ಎಲೈ ರಾಜನೇ, ದಾಶಾರ್ಹನಾದ ಕೃಷ್ಣನು ಹಿಂದೆ ನಿನ್ನನ್ನು ಸಂಧಿಗಾಗಿ ಬೇಡಿದನು. ಆದರೆ ಮಹಾಕೀರ್ತಿವಂತನಾದ ಕೃಷ್ಣನು ನಿನ್ನಿಂದ ಅವನು ಬಯಸಿದ ಸಂಧಿಯನ್ನು ಪಡೆಯಲಿಲ್ಲ.

ತವ ನಿರ್ಗುಣತಾಂ ಮತ್ವಾ ಪಕ್ಷಪಾತಂ ಸುತೇಷು ಚ ।
ದ್ವೈಧೀಭಾವಂ ಪೃಥಗ್ ಧರ್ಮೇ ಪಾಂಡವೇಷು ಚ ಮತ್ಸರಮ್ ॥೫೧॥

ಆರ್ತಪ್ರಲಾಪಾಂಶ್ಚ ಬಹೂನ್ ಮನುಜಾಧಿಪಸತ್ತಮ ।
ತವ ಜಿಹ್ಮಮತಿಂ ಚೈವ ವಿದಿತ್ವಾ ಪಾಂಡವಾನ್ ಪ್ರತಿ ।
ಸರ್ವಲೋಕಸ್ಯ ತತ್ತ್ವಜ್ಞಃ ಸರ್ವಲೋಕಗುರುಃ ಪ್ರಭುಃ ॥ ೫೨ ॥

ವಾಸುದೇವಸ್ತತೋ ಯುದ್ಧಂ ಕುರೂಣಾಮಕರೋನ್ಮಹತ್ ।
ಆತ್ಮಾಪರಾಧಾತ್ ಸುಮಹಾನ್ ಪ್ರಾಪ್ತಸ್ತೇ ವಿಪುಲಃ ಕ್ಷಯಃ ।
ನೈವ ದುರ್ಯೋಧನೇ ದೋಷಾನ್ ವಕ್ತುಮರ್ಹಸಿ ಮಾನದ ॥ ೫೩ ॥

ನಿನ್ನ ನಿರ್ಗುಣತ್ವವನ್ನು ತಿಳಿದು, ನಿನಗೆ ಮಕ್ಕಳಲ್ಲಿರುವ ಪಕ್ಷಪಾತವನ್ನು ತಿಳಿದು, ಧರ್ಮಾಚರಣೆಯಲ್ಲಿ ನಿನಗಿರುವ ಎರಡು ರೀತಿಯನ್ನೂ ಮತ್ತು ಪಾಂಡವರ ಮೇಲಿರುವ ಮತ್ಸರವನ್ನೂ ತಿಳಿದು, ಎಲೈ ಮನುಜಶ್ರೇಷ್ಠನೇ, ಸತ್ತಮನೇ, ನಿನ್ನ ಅನೇಕ ವಿಧವಾದ ಆರ್ತಪ್ರಲಾಪವನ್ನು ಕೇಳಿ ಪಾಂಡವರ ವಿಷಯದಲ್ಲಿ ನಿನಗಿರುವ ಕುಟಿಲ ಬುದ್ಧಿಯನ್ನು ಕೇಳಿ, ಸರ್ವಲೋಕದ ಜ್ಞಾನವುಳ್ಳವನೂ, ಸರ್ವಲೋಕದ ಗುರುವೂ, ಪ್ರಭುವೂ ಆದ ವಾಸುದೇವನು ಕುರುಗಳಲ್ಲಿ ದೊಡ್ಡ ಯುದ್ಧವಾಗುವಂತೆ ಮಾಡಿದನು. ನಿನ್ನ ಅಪರಾಧದಿಂದಲೇ ಕುರುಗಳ ದೊಡ್ಡ ವಿನಾಶವು ಉಂಟಾಗಿದೆ. ಎಲೈ ಮಾನದನೇ, ಈ (ಎಲ್ಲ) ದೋಷಗಳನ್ನು ದುರ್ಯೋಧನನ ಮೇಲೆ ಹಾಕಬೇಡ.

ನಹಿ ತೇ ಸುಕೃತಂ ಕಿಂಚಿದಾದೌ ಮಧ್ಯೇ ಚ ಭಾರತ ।
ದೃಶ್ಯತೇ ಪೃಷ್ಠತಶ್ಚೈವ ತನ್ನೂಲೋ ಹಿ ಪರಾಜಯಃ ॥ ೫೪ ॥

ಎಲೈ ಭಾರತನೇ, ನೀನು ಮೊದಲಾಗಲೀ, ಮಧ್ಯದಲ್ಲಾಗಲೀ ಅಥವಾ ಕೊನೆಯಲ್ಲಾಗಲೀ ಯಾವ ಒಳ್ಳೆಯ ಕಾರ್ಯವನ್ನೂ ಮಾಡಲಿಲ್ಲ. ಈ ಪರಾಜಯಕ್ಕೆ ನೀನು ಕಾರಣನಾದವನು.

ಆರ್ತಪ್ರಲಾಪಾನಿಹ ತು ಕುರುಷೇ ಭರತರ್ಷಭ ।
ನೈತದ್ ವೃದ್ಧಸ್ಯ ತೇ ಸಾಧು ಗತಾಸೋರಿವ ಮಂಡನಮ್ ॥ ೫೫ ॥

ಎಲೈ ಭರತರ್ಷಭನೇ, ಈಗ ಆರ್ತಪ್ರಲಾಪವನ್ನು ಮಾಡುತ್ತಿದ್ದೀಯೆ. ಶವಕ್ಕೆ ಅಲಂಕಾರ ಮಾಡಿದಂತೆ ಈ ಆರ್ತಪ್ರಲಾಪಗಳು ಭೂಷಣವಲ್ಲ.

ತಸ್ಮಾದದ್ಯ ಸ್ಥಿರೋ ಭೂತ್ವಾ ಜ್ಞಾತ್ವಾ ಲೋಕಸ್ಯ ನಿರ್ಣಯಮ್ ।
ಶೃಣು ಯುದ್ಧಂ ಯಥಾವೃತ್ತಂ ಘೋರಂ ದೇವಾಸುರೋಪಮಮ್ ॥

ಆದ್ದರಿಂದ ಈ ದಿನ ಮನಸ್ಸಿನಲ್ಲಿ ಸ್ಥೈರ್ಯವನ್ನು ತೆಗೆದುಕೊಂಡು, ಲೋಕದ ನಿರ್ಣಯವನ್ನು ತಿಳಿದು, ದೇವಾಸುರ ಯುದ್ಧಕ್ಕೆ ಸದೃಶವಾದ ಘೋರವಾದ ಯುದ್ಧವು ಹೇಗೆ ನಡೆಯಿತೆಂಬುದನ್ನು ಕೇಳು.

ಪ್ರವಿಷ್ಟೇ ತವ ಸೈನ್ಯಂ ತು ಶೈನೇಯೇ ಸತ್ಯವಿಕ್ರಮೇ ।
ಭೀಮಸೇನಮುಖಾಃ ಪಾರ್ಥಾಃ ಪ್ರತೀಯುರ್ವಾಹಿನೀಂ ತವ ॥ ೫೭ ॥

ಸತ್ಯವಿಕ್ರಮನಾದ ಸಾತ್ಯಕಿಯು ನಿನ್ನ ಸೈನ್ಯವನ್ನು ಪ್ರವೇಶಿಸುತ್ತಿರಲು ಭೀಮಸೇನ ಮೊದಲಾದ ಪಾಂಡವರು ನಿನ್ನ ಸೈನ್ಯದ ಕಡೆಗೆ ಧಾವಿಸಿದರು.

ಆಗಚ್ಛತಸ್ತಾನ್ ಸಹಸಾ ಕ್ರುದ್ಧರೂಪಾನ್ ಸಹಾನುಗಾನ್ ।
ದಧಾರೈಕೋ ರಣೇ ಪಾಂಡೂನ್ ಕೃತವರ್ಮಾ ಮಹಾರಥಃ ॥ ೫೮ ॥

ಕ್ರುದ್ಧರೂಪವನ್ನು ಧರಿಸಿ ತಮ್ಮ ಅನುಯಾಯಿಗಳ ಜೊತೆಯಲ್ಲಿ ವೇಗವಾಗಿ ಸಾಗಿ ಬರುತ್ತಿದ್ದ ಆ ಪಾಂಡವರನ್ನು ರಣರಂಗದಲ್ಲಿ ಮಹಾರಥನಾದ ಕೃತವರ್ಮನೊಬ್ಬನೇ ತಡೆದನು.

ಯಥೋದ್ಭೂತಂ ವಾರಯತೇ ವೇಲೇವ ಸಲಿಲಾರ್ಣವಮ್ ।
ಪಾಂಡುಸೈನ್ಯಂ ತಥಾ ಸಂಖೇ ಹಾರ್ದಿಕ್ಯಃ ಸಮವಾರಯತ್ ॥ ೫೯ ॥

ಕ್ಷೋಭೆಗೊಂಡ ಸಮುದ್ರವನ್ನು ದಡವು ತಡೆದಂತೆ ರಣರಂಗದಲ್ಲಿ ಕೃತವರ್ಮನು ಪಾಂಡವರ ಸೈನ್ಯವನ್ನು ತಡೆದನು.

ತತ್ರಾದ್ಭುತಮಮನ್ಯಂತ ಹಾರ್ದಿಕ್ಯಸ್ಯ ಪರಾಕ್ರಮಮ್ ।
ಯದೇನಂ ಸಹಿತಾಃ ಪಾರ್ಥಾ ನಾತಿಚಕ್ರಮುರಾಹವೇ ॥ ೬೦ ॥

ಪಾಂಡವರು ಒಟ್ಟುಗೂಡಿ ರಣರಂಗದಲ್ಲಿ ಕೃತವರ್ಮನನ್ನು ದಾಟಿ ಹೋಗಲಾರದ ಅವನ ಪರಾಕ್ರಮವನ್ನು ನೋಡಿ ಎಲ್ಲರೂ ಅದನ್ನು ಅದ್ಭುತವೆಂದು ತಿಳಿದರು.

ತತೋ ಭೀಮಸ್ತ್ರಿಭಿರ್ವಿದ್ಧ್ವಾ ಕೃತವರ್ಮಾಣಮಾಯಸೈಃ ।
ಶಂಖಂ ದಧ್ಮೌ ಮಹಾಬಾಹುರ್ಹರ್ಷಯನ್ ಸರ್ವಪಾಂಡವಾನ್ ॥

ಆಗ ಮಹಾಬಾಹುವಾದ ಭೀಮನು ಮೂರು ಕಬ್ಬಿಣದ ಬಾಣಗಳಿಂದ ಕೃತವರ್ಮನನ್ನು ಹೊಡೆದು ಎಲ್ಲ ಪಾಂಡವರಿಗೆ ಸಂತೋಷವನ್ನುಂಟು ಮಾಡುತ್ತಾ ತನ್ನ ಶಂಖವನ್ನು ಊದಿದನು.

ಸಹದೇವಸ್ತು ವಿಂಶತ್ಯಾ ಧರ್ಮರಾಜಸ್ತು ಪಂಚಭಿಃ ।
ನಕುಲಸ್ತು ಶತೇನೈವ ಹಾರ್ದಿಕ್ಯಂ ಸಮವಿದ್ಧ್ಯತ ॥ ೬೨ ॥

ಸಹದೇವನು ಇಪ್ಪತ್ತು ಬಾಣಗಳಿಂದಲೂ, ಧರ್ಮರಾಜನು ಐದು ಬಾಣಗಳಿಂದಲೂ, ನಕುಲನು ನೂರು ಬಾಣಗಳಿಂದಲೂ ಕೃತವರ್ಮನನ್ನು ಹೊಡೆದರು.

ದ್ರೌಪದೇಯಾಸ್ತ್ರಿಸಪ್ತತ್ಯಾ ಸಪ್ತಭಿಶ್ಚ ಘಟೋತ್ಕಚಃ ।
ಧೃಷ್ಟದ್ಯುಮ್ನಸ್ತ್ರಿಭಿರ್ಬಾಣೈಃ ಕೃತವರ್ಮಾಣಮಾರ್ದಯತ್ ॥ ೬೩ ॥

ದ್ರೌಪದಿಯ ಪುತ್ರರು ಎಪ್ಪತ್ಮೂರು ಬಾಣಗಳಿಂದಲೂ, ಘಟೋತ್ಕಚನು ಏಳು ಬಾಣಗಳಿಂದಲೂ, ಧೃಷ್ಟದ್ಯುಮ್ನನು ಮೂರು ಬಾಣಗಳಿಂದಲೂ ಕೃತವರ್ಮನನ್ನು ಪೀಡಿಸಿದರು.

ವಿರಾಟಃ ಪಂಚದಶಭಿರ್ದ್ರುಪದಶ್ಚೈವ ಪಂಚಭಿಃ ।
ಶಿಖಂಡೀ ಚೈವ ಹಾರ್ದಿಕ್ಯಂ ವಿದ್ಧ್ವಾ ಪಂಚಭಿರಾಶುಗೈಃ ।
ಪುನರ್ವಿವ್ಯಾಧ ವಿಂಶತ್ಯಾ ಸಾಯಕಾನಾಂ ಹಸನ್ನಿವ ॥ ೬೪ ॥

ವಿರಾಟನು ಹದಿನೈದು ಬಾಣಗಳಿಂದಲೂ, ದ್ರುಪದನು ಐದು ಬಾಣಗಳಿಂದಲೂ ಪೀಡಿಸಿದರು. ಶಿಖಂಡಿಯು ಶೀಘ್ರಗಾಮಿಗಳಾದ ಐದು ಬಾಣಗಳಿಂದ ಕೃತವರ್ಮನನ್ನು ಹೊಡೆದು ಪುನಃ ನಗುತ್ತಾ ಇಪ್ಪತ್ತು ಬಾಣಗಳಿಂದ ಅವನನ್ನು ಹೊಡೆದರು.

ಕೃತವರ್ಮಾ ತತೋ ರಾಜನ್ ಸರ್ವತಸ್ತಾನ್ ಮಹಾರಥಾನ್ ।
ಏಕೈಕಂ ಪಂಚಭಿರ್ವಿದ್ಧ್ವಾ ಭೀಮಂ ವಿವ್ಯಾಧ ಸಪ್ತಭಿಃ ॥ ೬೫ ॥

ಧನುರ್ಧ್ವಜಂ ಚ ಸಂಯತ್ತೋ ರಥಾದ್ ಭೂಮಾವಪಾತಯತ್ ॥

ಎಲೈ ರಾಜನೇ, ಆಗ ಕೃತವರ್ಮನು ಆ ಮಹಾರಥರಲ್ಲಿ ಎಲ್ಲರನ್ನೂ ಒಬ್ಬೊಬ್ಬರನ್ನು ಐದು ಬಾಣಗಳಿಂದ ಹೊಡೆದು, ಭೀಮನನ್ನು ಏಳು ಬಾಣಗಳಿಂದ ಹೊಡೆದನು. ಭೀಮಸೇನನ ಧ್ವಜ ಮತ್ತು ಧನುಸ್ಸನ್ನು ಪ್ರಯತ್ನಪೂರ್ವಕವಾಗಿ ರಥದಿಂದ ಭೂಮಿಯ ಮೇಲೆ ಕೆಡವಿದನು.

ಅಥೈನಂ ಭಿನ್ನಧನ್ವಾನಂ ತ್ವರಮಾಣೋ ಮಹಾರಥಃ ।
ಆಜಘಾನೋರಸಿ ಕ್ರುದ್ಧಃ ಸಪ್ತತ್ಯಾ ನಿಶಿತೈಃ ಶರೈಃ ॥ ೬೭ ॥

ಭೀಮಸೇನನ ಧನುಸ್ಸು ಕತ್ತರಿಸಲ್ಪಡುತ್ತಿರಲು ಮಹಾರಥನಾದ ಕೃತವರ್ಮನು ತ್ವರೆಯಿಂದ ಕೂಡಿದವನಾಗಿ ಕೋಪದಿಂದ ಎಪ್ಪತ್ತು ತೀಕ್ಷ್ಣವಾದ ಬಾಣಗಳಿಂದ ಭೀಮಸೇನನನ್ನು ಅವನ ಎದೆಯಲ್ಲಿ ಹೊಡೆದನು.

ಸ ಗಾಢವಿದ್ಧೋ ಬಲವಾನ್ ಹಾರ್ದಿಕ್ಯಸ್ಯ ಶರೋತ್ತಮೈಃ ।
ಚಚಾಲ ರಥಮಧ್ಯಸ್ಥಃ ಕ್ಷಿತಿಕಂಪೇ ಯಥಾऽಚಲಃ ॥ ೬೮ ॥

ಕೃತವರ್ಮನ ಶ್ರೇಷ್ಠವಾದ ಬಾಣಗಳಿಂದ ಗಾಢವಾಗಿ ಹೊಡೆಯಲ್ಪಟ್ಟ ಬಲಿಷ್ಠನಾದ ಭೀಮನು ಭೂಕಂಪದ ಸಮಯದಲ್ಲಿ ಪರ್ವತವು ನಡುಗುವಂತೆ ರಥಮಧ್ಯದಲ್ಲಿ ನಡುಗಿದನು.

ಭೀಮಸೇನಂ ತಥಾ ದೃಷ್ಟ್ವಾ ಧರ್ಮರಾಜಪುರೋಗಮಾಃ ।
ವಿಸೃಜಂತಃ ಶರಾನ್ ಘೋರಾನ್ ಕೃತವರ್ಮಾಣಮಾರ್ದಯನ್ ॥೬೯॥

ಭೀಮಸೇನನು ಹಾಗಿರುವುದನ್ನು ನೋಡಿ ಧರ್ಮರಾಜ ಮೊದಲಾದವರು ಘೋರವಾದ ಬಾಣಗಳನ್ನು ಪ್ರಯೋಗಿಸುತ್ತಾ ಕೃತವರ್ಮನನ್ನು ಪೀಡಿಸಿದರು.

ತಂ ತಥಾ ಕೋಷ್ಠಕೀಕೃತ್ಯ ರಥವಂಶೇನ ಮಾರಿಷ ।
ವಿವ್ಯಧುಃ ಸಾಯಕೈರ್ಹೃಷ್ಟಾ ರಕ್ಷಾರ್ಥಂ ಮಾರುತೇರ್ಮೃಧೇ ॥ ೭೦ ॥

ಎಲೈ ಪೂಜ್ಯನೇ, ಅವರು ರಣರಂಗದಲ್ಲಿ ಭೀಮನನ್ನು ರಕ್ಷಿಸುವ ಸಲುವಾಗಿ ತಮ್ಮ ರಥಗಳ ಸಮೂಹದಿಂದ ಕೃತವರ್ಮನನ್ನು ಕೂಡಿಹಾಕಿಕೊಂಡು ಸಂತುಷ್ಟರಾಗಿ ಬಾಣಗಳಿಂದ ಅವನನ್ನು ಹೊಡೆದರು.

ಪ್ರತಿಲಭ್ಯ ತತಃ ಸಂಜ್ಞಾಂ ಭೀಮಸೇನೋ ಮಹಾಬಲಃ ।
ಶಕ್ತಿಂ ಜಗ್ರಾಹ ಸಮರೇ ಸ್ವರ್ಣದಂಡಾಮಯಸ್ಮಯೀಮ್ ॥ ೭೧ ॥

ಚಿಕ್ಷೇಪ ಚ ರಥಾತ್ ತೂರ್ಣಂ ಕೃತವರ್ಮರಥಂ ಪ್ರತಿ ॥ ೭೨ ॥

ಮಹಾಬಲನಾದ ಭೀಮಸೇನನು ಅನಂತರ ಪ್ರಜ್ಞೆಯನ್ನು ಮರಳಿ ಪಡೆದು ಸ್ವರ್ಣ ದಂಡವಿರುವ ಕಬ್ಬಿಣದಿಂದ ಮಾಡಿದ ಒಂದು ಶಕ್ತ್ಯಾಯುಧವನ್ನು ತೆಗೆದುಕೊಂಡು, ತನ್ನ ರಥದಲ್ಲಿಯೇ ನಿಂತು ಶೀಘ್ರವಾಗಿ ಅದನ್ನು ಕೃತವರ್ಮನ ರಥದ ಮೇಲೆ ಎಸೆದನು.

ಸಾ ಭೀಮಭುಜನಿರ್ಮುಕ್ತಾ ನಿರ್ಮುಕ್ತೋರಗಸನ್ನಿಭಾ ।
ಕೃತವರ್ಮಾಣಮಭಿತಃ ಪ್ರಜಜ್ವಾಲ ಸುದಾರುಣಾ ॥ ೭೩ ॥

ಭೀಮಸೇನನ ಭುಜದಿಂದ ಪ್ರಯೋಗಿಸಲ್ಪಟ್ಟ ಆ ಶಕ್ತಿಯು ನಿರ್ಮುಕ್ತವಾದ ಸರ್ಪದಂತೆ ಕೃತವರ್ಮನ ಸುತ್ತಲೂ ಬಹಳ ದಾರುಣವಾದ ಜ್ವಾಲೆಗಳನ್ನು ಉಂಟು ಮಾಡಿತು.

ತಾಮಾಪತಂತೀಂ ಸಹಸಾ ಯುಗಾಂತಾಗ್ನಿಸಮಪ್ರಭಾಮ್ ।
ದ್ವಾಭ್ಯಾಂ ಶರಾಭ್ಯಾಂ ಹಾರ್ದಿಕ್ಯೋ ನಿಚಕರ್ತ ತ್ರಿಧಾ ತದಾ ॥ ೭೪ ॥

ಯುಗಾಂತಾಗ್ನಿಯ ಕಾಂತಿಯನ್ನು ಹೊಂದಿ ತನ್ನ ಕಡೆಗೆ ಬರುತ್ತಿದ್ದ ಆ ಶಕ್ತಿಯನ್ನು ಕೃತವರ್ಮನು ತಕ್ಷಣ ಎರಡು ಬಾಣಗಳಿಂದ ಮೂರು ಭಾಗಗಳಾಗಿ ಕತ್ತರಿಸಿದನು.

ಸಾ ಚ್ಛಿನ್ನಾ ಪತಿತಾ ಭೂಮೌ ಶಕ್ತಿಃ ಕನಕಭೂಷಣಾ ।
ದ್ಯೋತಯಂತೀ ದಿಶೋ ರಾಜನ್ ಮಹೋಲ್ಕೇವ ದಿವಶ್ಚ್ಯುತಾ ।
ಶಕ್ತಿಂ ವಿನಿಹತಾಂ ದೃಷ್ಟ್ವಾ ಭೀಮಶ್ಚುಕ್ರೋಧ ವೈ ಭೃಶಮ್ ॥ ೭೫ ॥

ಎಲೈ ರಾಜನೇ, ಕನಕಭೂಷಿತವಾದ ಆ ಶಕ್ತಿಯು ಆಕಾಶದಿಂದ ಬೀಳುವ ದೊಡ್ಡ ಉಲ್ಕೆಯಂತೆ ಎಲ್ಲ ದಿಕ್ಕುಗಳನ್ನೂ ಬೆಳಗುತ್ತಾ ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದಿತು. ಶಕ್ತಿಯು ವಿನಾಶಗೊಂಡುದನ್ನು ನೋಡಿ ಭೀಮಸೇನನು ಬಹಳ ಕೋಪಗೊಂಡನು.

ತತೋಽನ್ಯದ್ ಧನುರಾದಾಯ ವೇಗವತ್ ಸುಮಹಾಸ್ವನಮ್ ।
ಭೀಮಸೇನೋ ರಣೇ ಕ್ರುದ್ಧೋ ಹಾರ್ದಿಕ್ಯಂ ಸಮವಾರಯತ್ ॥ ೭೬ ॥

ಆಗ ಭೀಮಸೇನನು ರಣರಂಗದಲ್ಲಿ ಕ್ರುದ್ಧನಾಗಿ ವೇಗಶಾಲಿಯೂ, ಮಹಾಸ್ತ್ರವುಳ್ಳದ್ದೂ ಆದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಆದರಿಂದ ಕೃತವರ್ಮನನ್ನು ತಡೆದನು.

ಅಥೈನಂ ಪಂಚಭಿರ್ಬಾಣೈರಾಜಘಾನ ಸ್ತನಾಂತರೇ ।
ಭೀಮೋ ಭೀಮಬಲೋ ರಾಜನ್ ತವ ದುರ್ಮಂತ್ರಿತೇನ ಹ ॥ ೭೭ ॥

ಅನಂತರ ಎಲೈ ರಾಜನೇ, ನಿನ್ನ ದುರ್ಮಂತ್ರಣದ ಫಲವಾಗಿ ಭಯಂಕರ ಬಲವುಳ್ಳ ಭೀಮಸೇನನು ಐದು ಬಾಣಗಳಿಂದ ಕೃತವರ್ಮನನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ಭೋಜಸ್ತು ಕ್ಷತಸರ್ವಾಂಗೋ ಭೀಮಸೇನೇನ ಮಾರಿಷ ।
ರಕ್ತಾಶೋಕ ಇವೋತ್ಫುಲ್ಲೋ ವ್ಯಭ್ರಾಜತ ರಣಾಂಕಣೇ ॥ ೭೮ ॥

ಎಲೈ ಪೂಜ್ಯನೇ, ಕೃತವರ್ಮನು ಭೀಮಸೇನನಿಂದ ಸರ್ವಾವಯವಗಳಲ್ಲಿಯೂ ಗಾಯಗೊಳಿಸಲ್ಪಟ್ಟು ಅರಳಿದ ರಕ್ತಾಶೋಕಪುಷ್ಪದಂತೆ ರಣಾಂಗಣದಲ್ಲಿ ಶೋಭಿಸಿದನು.

ತತಃ ಕ್ರುದ್ಧಸ್ತ್ರಿಭಿರ್ಬಾಣೈರ್ಭೀಮಸೇನಂ ತ್ವರಾನ್ವಿತಃ ।
ಆಹತ್ಯ ರಭಸೋ ಯುದ್ಧೇ ತಾನ್ ಸರ್ವಾನ್ ಪ್ರತ್ಯವಿಧ್ಯತ ॥ ೭೯ ॥

ತ್ರಿಭಿಸ್ತ್ರಿಭಿರ್ಮಹೇಷ್ವಾಸೋ ಯತಮಾನಾನ್ ಮಹಾರಥಾನ್ ।
ತೇಽಪಿ ತಂ ಪ್ರತ್ಯವಿಧ್ಯಂತ ಸಪ್ತಭಿಃ ಸಪ್ತಭಿಃ ಶರೈಃ ॥ ೮೦ ॥

ಆಗ ಅವನು ಕೋಪಗೊಂಡು ಶೀಘ್ರವಾಗಿ ಭೀಮಸೇನನನ್ನು ಮೂರು ಬಾಣದಿಂದ ಹೊಡೆದು ವೇಗಶಾಲಿಯಾದ ಅವನು ಯುದ್ಧದಲ್ಲಿ ಪ್ರಯತ್ನಪಡುತ್ತಿದ್ದ ಮಹಾರಥರಾದ ಅವರೆಲ್ಲರನ್ನೂ ಮೂರು ಮೂರು ಬಾಣಗಳಿಂದ ಹೊಡೆದನು. ಅವರೂ ಸಹ ಪ್ರಯತ್ನಪಡುತ್ತಿದ್ದ ಅವನನ್ನು ಏಳು ಏಳು ಬಾಣಗಳಿಂದ ಹೊಡೆದರು.

ಶಿಖಂಡಿನಃ ತತಃ ಕ್ರುದ್ಧಃ ಕ್ಷುರಪ್ರೇಣ ಮಹಾರಥಃ ।
ಧನುಶ್ಚಿಚ್ಛೇದ ಸಮರೇ ಪ್ರಹಸನ್ನಿವ ಭಾರತ ॥ ೮೧ ॥

ಎಲೈ ಭಾರತನೇ, ಕೋಪಗೊಂಡ ಮಹಾತ್ಮನಾದ ಅವನು ಕ್ಷುರಪ್ರದಿಂದ ನಗುತ್ತಾ ಶಿಖಂಡಿಯ ಧನುಸ್ಸನ್ನು ಕತ್ತರಿಸಿದನು.

ಶಿಖಂಡೀ ತು ತತಃ ಕ್ರುದ್ಧಃ ಛಿನ್ನೇ ಧನುಷಿ ಸತ್ವರಮ್ ।
ಅಸಿಂ ಜಗ್ರಾಹ ಸಮರೇ ಶತಚಂದ್ರಂ ಚ ಭಾಸ್ವರಮ್ ॥ ೮೨ ॥

ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಶಿಖಂಡಿಯು ಶೀಘ್ರವಾಗಿ ಖಡ್ಗವನ್ನೂ ಮತ್ತು ಶತಚಂದ್ರಗಳಿಂದ ಕೂಡಿದ ಪ್ರಕಾಶಮಾನವಾದ ಗುರಾಣಿಯನ್ನೂ ತೆಗೆದುಕೊಂಡನು.

ಭ್ರಾಮಯಿತ್ವಾ ಮಹಚ್ಚರ್ಮ ಚಾಮೀಕರವಿಭೂಷಿತಮ್ ।
ತಮಸಿಂ ಪ್ರೇಷಯಾಮಾಸ ಕೃತವರ್ಮರಥಂ ಪ್ರತಿ ॥ ೮೩ ॥

ಸುವರ್ಣಭೂಷಿತವಾದ ಆ ಗುರಾಣಿಯನ್ನು ತಿರುಗಿಸಿ ಆ ಖಡ್ಗವನ್ನು ಕೃತವರ್ಮನ ರಥದ ಮೇಲೆ ಎಸೆದನು.

ಸ ತಸ್ಯ ಸಶರಂ ಚಾಪಂ ಛಿತ್ತ್ವಾ ರಾಜನ್ ಮಹಾಸಿಃ ।
ಅಭ್ಯಗಾದ್ ಧರಣೀಂ ರಾಜನ್ ಚ್ಯುತಂ ಜ್ಯೋತಿರಿವಾಂಬರಾತ್ ॥೮೪॥

ಎಲೈ ರಾಜನೇ, ಆ ದೊಡ್ಡ ಖಡ್ಗವು ಕೃತವರ್ಮನ ಬಾಣವನ್ನೂ ಮತ್ತು ಧನುಸ್ಸನ್ನೂ ಕತ್ತರಿಸಿ ಆಕಾಶದಿಂದ ಬಿದ್ದ ಜ್ಯೋತಿಯಂತೆ ಭೂಮಿಯನ್ನು ಪ್ರವೇಶಿಸಿತು.

ಏತಸ್ಮಿನ್ನೇವ ಕಾಲೇ ತು ತ್ವರಮಾಣಾ ಮಹಾರಥಾಃ ।
ವಿವ್ಯಧುಃ ಸಾಯಕೈರ್ಗಾಢಂ ಕೃತವರ್ಮಾಣಮಾಹವೇ ॥ ೮೫ ॥

ಆ ಕಾಲದಲ್ಲಿಯೇ ತ್ವರೆ ಮಾಡಿದ ಮಹಾರಥರು ರಣರಂಗದಲ್ಲಿ ಕೃತವರ್ಮನನ್ನು ಬಾಣಗಳಿಂದ ಗಾಢವಾಗಿ ಹೊಡೆದರು.

ಅಥಾನ್ಯದ್ ಧನುರಾದಾಯ ತ್ಯಕ್ತ್ವಾ ತಚ್ಚ ಮಹದ್ ಧನುಃ ।
ವಿಶೀರ್ಣಂ ಭರತಶ್ರೇಷ್ಠ ಹಾರ್ದಿಕ್ಯಃ ಪರವೀರಹಾ ॥ ೮೬ ॥

ವಿವ್ಯಾಧ ಪಾಂಡವಾನ್ ಭೂಯಃ ತ್ರಿಭಿಸ್ತ್ರಿಭಿರಜಿಹ್ಮಗೈಃ ।
ಶಿಖಂಡಿನಂ ಚ ವಿವ್ಯಾಧ ತ್ರಿಭಿಃ ಪಂಚಭಿರೇವ ಚ ॥ ೮೭ ॥

ಎಲೈ ಭರತಶ್ರೇಷ್ಠನೇ, ಪರವೀರಘಾತಕನಾದ ಹಾರ್ದಿಕ್ಯನು ಕತ್ತರಿಸಲ್ಪಟ್ಟು ನಾಶ ಹೊಂದಿದ ಆ ದೊಡ್ಡ ಧನುಸ್ಸನ್ನು ಬಿಟ್ಟು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು

ನೇರವಾಗಿ ಸಾಗುವ ಮೂರು-ಮೂರು ಬಾಣಗಳಿಂದ ಪುನಃ ಪಾಂಡವರನ್ನು ಹೊಡೆದನು ಮತ್ತು ಶಿಖಂಡಿಯನ್ನು ಮೂರು ಬಾಣಗಳಿಂದಲೂ ಮತ್ತು ಐದು ಬಾಣಗಳಿಂದಲೂ ಹೊಡೆದನು.

ಧನುರನ್ಯತ್ ಸಮಾದಾಯ ಶಿಖಂಡೀ ತು ಮಹಾಯಶಾಃ ।
ಅವಾರಯತ್ ಕೂರ್ಮನಖೈರಾಶುಗೈರ್ಹೃದಿಕಾತ್ಮಜಮ್ ॥ ೮೮ ॥

ಮಹಾಕೀರ್ತಿವಂತನಾದ ಶಿಖಂಡಿಯಾದರೂ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಶೀಘ್ರಗಾಮಿಯಾದ ಕೂರ್ಮನಖಾಕಾರವನ್ನು ಹೊಂದಿದ ಬಾಣಗಳಿಂದ ಕೃತವರ್ಮನನ್ನು ತಡೆದನು.

ತತಃ ಕ್ರುದ್ಧೋ ಮಹಾರಾಜ ಹೃದಿಕಸ್ಯಾತ್ಮಸಂಭವಃ ।
ಅಭದುದ್ರಾವ ವೇಗೇನ ಯಾಜ್ಞಸೇನಿಂ ಮಹಾರಥಮ್ ॥ ೮೯ ॥

ಎಲೈ ಮಹಾರಾಜನೇ, ಆಗ ಹೃದಿಕನ ಪುತ್ರನಾದ ಕೃತವರ್ಮನು ಕ್ರುದ್ಧನಾಗಿ ವೇಗದಿಂದ ಮಹಾರಥನಾದ ಶಿಖಂಡಿಯನ್ನು ಕುರಿತು ಧಾವಿಸಿದನು.

ಭೀಷ್ಮಸ್ಯ ಸಮರೇ ರಾಜನ್ ಮೃತ್ಯೋರ್ಹೇತುಂ ಮಹಾತ್ಮನಃ ।
ವಿದರ್ಶಯನ್ ಬಲಂ ಘೋರಂ ಶಾರ್ದೂಲ ಇವ ಕುಂಜರಮ್ ॥೯೦॥

ಎಲೈ ರಾಜನೇ, ಮಹಾತ್ಮರಾದ ಭೀಷ್ಮರ ಮೃತ್ಯುವಿಗೆ ಕಾರಣನಾದ ಅವನ ಮೇಲೆ ತನ್ನ ಘೋರವಾದ ಬಲವನ್ನು ತೋರಿಸುತ್ತಾ, ವ್ಯಾಘ್ರವು ಗಜದ ಮೇಲೆ ನುಗ್ಗಿದಂತೆ (ಅವನು ನುಗ್ಗಿದನು).

ತೌ ದಿಶಾಗಜಸಂಕಾಶೌ ಜ್ವಲಂತಾವಿವ ಪಾವಕೌ ।
ಸಮಾಸೇದತುರನ್ಯೋನ್ಯಂ ಶರಸಂಘೈರರಿಂದಮೌ ॥ ೯೧ ॥

ವಿಧೂನ್ವಾನೌ ಧನುಃಶ್ರೇಷ್ಠೇ ಸಂದಧಾನೌ ಚ ಸಾಯಕಾನ್ ।
ವಿಸೃಜಂತೌ ಚ ಶತಧಾ ಗಭಸ್ತೀನಿವ ಭಾಸ್ಕರೌ ॥ ೯೨ ॥

ದಿಗ್ಗಜಗಳನ್ನು ಹೋಲುವ ಆವರಿಬ್ಬರೂ ತಮ್ಮ ಶ್ರೇಷ್ಠವಾದ ಧನುಸ್ಸುಗಳನ್ನು ತೂಗಾಡಿಸುತ್ತಾ, ಬಾಣಗಳನ್ನು ಹೂಡುತ್ತಾ, ಸೂರ್ಯನು ಕಿರಣಗಳನ್ನು ಚೆಲ್ಲಿದಂತೆ ನೂರಾರು ಬಾಣಗಳನ್ನು ಪ್ರಯೋಗಿಸುತ್ತಾ, ಜ್ವಲಿಸುವ ಎರಡು ಅಗ್ನಿಗಳಂತೆ

ಅರಿಂದಮರಾದ ಅವರು ಬಾಣಸಮೂಹಗಳನ್ನು ಪರಸ್ಪರವಾಗಿ ಪ್ರಯೋಗಿಸುತ್ತಾ ಒಬ್ಬರನ್ನೊಬ್ಬರು ಸಂಧಿಸಿದರು.

ತಾಪಯಂತೌ ಶರೈಸ್ತೀಕ್ಷ್ಣೈರನ್ಯೋನ್ಯಂ ತೌ ಮಹಾರಥೌ ।
ಯುಗಾಂತಪ್ರತಿಮೌ ವೀರೌ ರೇಜತುರ್ಭಾಸ್ಕರಾವಿವ ॥ ೯೩ ॥

ಮಹಾರಥರಾದ ಆ ವೀರರಿಬ್ಬರು ಯುಗಾಂತ ಕಾಲದ ಎರಡು ಸೂರ್ಯರಂತೆ ತೀಕ್ಷ್ಣವಾದ ತಮ್ಮ ಬಾಣಗಳಿಂದ ಪರಸ್ಪರವಾಗಿ ಸಂತಾಪಗೊಳಿಸುತ್ತಾ ಶೋಭಿಸಿದರು.

ಕೃತವರ್ಮಾ ಸರಭಸಂ ಯಾಜ್ಞಸೇನಿಂ ಮಹಾರಥಮ್ ।
ವಿದ್ಧ್ವಾ ತತಸ್ತ್ರಿಸಪ್ತತ್ಯಾ ಪುನರ್ವಿವ್ಯಾಧ ಸಪ್ತಭಿಃ ॥ ೯೪ ॥

ಕೃತವರ್ಮನು ವೇಗಶಾಲಿಯಾದ, ಮಹಾರಥನಾದ ಶಿಖಂಡಿಯನ್ನು ಎಪ್ಪತ್ಮೂರು ಬಾಣಗಳಿಂದ ಹೊಡೆದು ಪುನಃ ಏಳು ಬಾಣಗಳಿಂದ ಹೊಡೆದನು.

ಸ ಗಾಢವಿದ್ಧೋ ವ್ಯಥಿತೋ ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ ಮೂರ್ಚ್ಛಯಾ ಚ ಪರಿಪ್ಲುತಃ ॥ ೯೫ ॥

ಗಾಢವಾಗಿ ಹೊಡೆಯಲ್ಪಟ್ಟ ಶಿಖಂಡಿಯು ತನ್ನ ಧನುಸ್ಸು ಮತ್ತು ಬಾಣಗಳನ್ನು ತ್ಯಜಿಸಿ, ಮೂರ್ಛೆಯಿಂದ ಆವೃತನಾಗಿ ರಥದ ಮಧ್ಯದಲ್ಲಿ ವ್ಯಥೆಯಿಂದ ಕುಳಿತನು.

ತಂ ವಿಷಣ್ಣಂ ರಣೇ ದೃಷ್ಟ್ವಾ ತಾವಕಾ ಭರತರ್ಷಭ ।
ಹಾರ್ದಿಕ್ಯಂ ಪೂಜಯಾಮಾಸುರ್ವಾಸಾಂಸ್ಯಾದುಧುವುಶ್ಚ ಹ ॥ ೯೬ ॥

ಎಲೈ ಭರತಶ್ರೇಷ್ಠನೇ, ವಿಷಣ್ಣನಾದ ಶಿಖಂಡಿಯನ್ನು ನೋಡಿ ನಿನ್ನವರು ಕೃತವರ್ಮನನ್ನು ಪೂಜಿಸಿ ತಮ್ಮ ವಸ್ತ್ರಗಳನ್ನು ಬೀಸಿದರು.

ಶಿಖಂಡಿನಂ ತಥಾ ಜ್ಞಾತ್ವಾ ಹಾರ್ದಿಕ್ಯಶರಪೀಡಿತಮ್ ।
ಅಪೋವಾಹ ರಣಾದ್ ಯಂತಾ ತ್ವರಮಾಣೋ ಮಹಾರಥಮ್ ॥೯೭॥

ಕೃತವರ್ಮನ ಬಾಣಗಳಿಂದ ಪೀಡಿತನಾದ ಶಿಖಂಡಿಯು ಹಾಗಿರುವುದನ್ನು ತಿಳಿದು, ಅವನ ಸಾರಥಿಯು ಶೀಘ್ರವಾಗಿ ಮಹಾರಥನಾದ ಅವನನ್ನು ರಣರಂಗದಿಂದ ಹೊರಗೆ ಕರೆದುಕೊಂಡು ಹೋದನು.

ಸಾದಿತಂ ತು ರಥೋಪಸ್ಥೇ ದೃಷ್ಟ್ವಾ ಪಾರ್ಥಾಃ ಶಿಖಂಡಿನಮ್ ।
ಪರಿವವ್ರೂ ರಥೈಸ್ತೂರ್ಣಂ ಕೃತವರ್ಮಾಣಮಾಹವೇ ॥ ೯೮ ॥

ಪಾಂಡವರು ಶಿಖಂಡಿಯು ರಥಮಧ್ಯದಲ್ಲಿ ಕುಸಿದುದನ್ನು ನೋಡಿ ಶೀಘ್ರವಾಗಿ ರಣರಂಗದಲ್ಲಿ ಕೃತವರ್ಮನನ್ನು ಸುತ್ತುವರಿದರು.

ತತ್ರಾದ್ಭುತಂ ಪರಂ ಚಕ್ರೇ ಕೃತವರ್ಮಾ ಮಹಾರಥಃ ।
ಯದೇಕಃ ಸಮರೇ ಪಾರ್ಥಾನ್ ವಾರಯಾಮಾಸ ಸಂಯುಗೇ ॥ ೯೯ ॥

ಆಗ ಮಹಾರಥನಾದ ಕೃತವರ್ಮನೊಬ್ಬನೇ ಯುದ್ಧದಲ್ಲಿ ಪಾಂಡವರನ್ನು ತಡೆದು ರಣ ರಂಗದಲ್ಲಿ ಅದ್ಭುತವಾದ ಕಾರ್ಯವನ್ನು ಮಾಡಿದನು.

ಪಾರ್ಥಾನ್ ಜಿತ್ವಾऽಜಯಚ್ಚೇದೀನ್ ಪಾಂಚಾಲಾನ್ ಸೃಂಜಯಾನಪಿ ।
ಕೇಕಯಾಂಶ್ಚ ಮಹಾವೀರ್ಯಾನ್ ಕೃತವರ್ಮಾ ಮಹಾರಥಃ ॥ ೧೦೦ ॥

ಮಹಾರಥನಾದ ಕೃತವರ್ಮನು ಪಾಂಡವರನ್ನು ಗೆದ್ದು, ಚೇದಿಗಳನ್ನೂ, ಪಾಂಚಾಲರನ್ನೂ, ಸೃಂಜಯರನ್ನೂ, ಮಹಾವೀರರಾದ ಕೇಕಯರನ್ನೂ ಜಯಿಸಿದನು.

ತೇ ವಧ್ಯಮಾನಾಃ ಸಮರೇ ಹಾರ್ದಿಕ್ಯೇನ ಸ್ಮ ಪಾಂಡವಾಃ ।
ಇತಶ್ಚೇತಶ್ಚ ಧಾವಂತೋ ನಹಿ ಜಗ್ಮುರ್ಧೃತಿಂ ಕ್ವಚಿತ್ ॥ ೧೦೧ ॥

ಕೃತವರ್ಮನಿಂದ ಯುದ್ಧದಲ್ಲಿ ಹೊಡೆಯಲ್ಪಡುತ್ತಿದ್ದ ಪಾಂಡವರು ಇಲ್ಲಿಂದಲ್ಲಿಗೆ ಓಡುತ್ತಾ ಎಲ್ಲಿಯೂ ಧೈರ್ಯವನ್ನು ಹೊಂದಲಿಲ್ಲ.

ಜಿತ್ವಾ ಪಾಂಡುಸುತಾನ್ ಯುದ್ಧೇ ಭೀಮಸೇನಪುರೋಗಮಾನ್ ।
ಹಾರ್ದಿಕ್ಯಃ ಸಮರೇऽತಿಷ್ಠದ್ ವಿಧೂಮ ಇವ ಪಾವಕಃ ॥ ೧೦೨ ॥

ಕೃತವರ್ಮನು ಭೀಮಸೇನ ಮೊದಲಾದ ಪಾಂಡುಪುತ್ರರನ್ನು ಯುದ್ಧದಲ್ಲಿ ಗೆದ್ದು ರಣರಂಗದಲ್ಲಿ ಧೂಮವಿಲ್ಲದ ಅಗ್ನಿಯಂತೆ ನಿಂತನು.

ತೇ ದ್ರಾವ್ಯಮಾಣಾಃ ಸಮರೇ ಹಾರ್ದಿಕ್ಯೇನ ಮಹಾರಥಾಃ ।
ವಿಮುಖಾಃ ಸಮಪದ್ಯಂತ ಶರವೃಷ್ಟಿಭಿರಾಹತಾಃ ।
ಲಜ್ಜಯಾವನತಾಶ್ಚೈವ ನ ಕಿಂಚಿತ್ ಪ್ರತಿಪೇದಿರೇ ॥ ೧೦೩ ॥

ಹಾರ್ದಿಕ್ಯನಿಂದ ಯುದ್ಧದಲ್ಲಿ ಓಡಿಸಲ್ಪಟ್ಟ ಆ ಮಹಾರಥರು ಬಾಣಗಳ ಮಳೆಯಿಂದ ತಾಡಿತರಾಗಿ ಯುದ್ಧದಲ್ಲಿ ವಿಮುಖರಾದರು. ಲಜ್ಜೆಯಿಂದ ತಲೆಯನ್ನು ತಗ್ಗಿಸಿ ಏನು ಮಾಡಬೇಕೆಂದು ತಿಳಿಯದಾದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವ್ಯಾಸಿಕ್ಯಾಂ
ದ್ರೋಣಪರ್ವಣಿ ಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ (ಅಧ್ಯಾಯ-೨೬)

ವಿನೈವ ವೃಷ್ಣೀನ್ ವಿಜಯೇ ವರೋ ಯ-
ದಮುಷ್ಯ ತೇನಾಸ್ಯ ಹಯಾನ್ ಸ ಸಾತ್ಯಕಿಃ ।
ನಿಹತ್ಯ ಬಾಣೈರತುದತ್ ಸ ಯಾನ-
ಮನ್ಯತ್ ಸಮಾಸ್ಥಾಯ ತತೋಽಪಜಗ್ಮಿವಾನ್ ॥

ಯಾದವರನ್ನು ಹೊರತುಪಡಿಸಿಯೇ ಸರ್ವತ್ರ ಜಯಗಳಿಸುವ ವಿಷಯದಲ್ಲಿ ಕೃತವರ್ಮನಿಗೆ ಕೃಷ್ಣನ ವರವಿದ್ದುದರಿಂದ ಸಾತ್ಯಕಿ ಕೃತವರ್ಮನ ಕುದುರೆಗಳನ್ನು ಕೊಂದು ಅವನನ್ನು ಬಾಣಗಳಿಂದ ಪೀಡಿಸಿದನು. ಕೃತವರ್ಮನು ಬೇರೆ ರಥವನ್ನೇರಿ ಅಲ್ಲಿಂದ ಹೊರಟುಹೋದನು.

ತದಾ ಹರಿಃ ಪಾಂಚಜನ್ಯಂ ಸುಘೋಷ-
ಮಾಪೂರಯಾಮಾಸ ಜಯೇಽಭಯುದ್ಯತಿ ।
ಕರ್ಣಾದಿಭಿರ್ದ್ರೋಣಿಮುಖೈ ರಿಪೂಣಾಂ
ಬಲಪ್ರಹಾಣಾಯ ಪರಃ ಪರೇಭ್ಯಃ ॥

ಕರ್ಣ ಮುಂತಾದವರೊಡನೆಯೂ ಅಶ್ವತ್ಥಾಮ ಮುಂತಾದವರೊಡನೆಯೂ ಅರ್ಜುನನು ಯುದ್ಧಮಾಡುತ್ತಿದ್ದಾಗಸರ್ವೋತ್ತಮನಾದ ಕೃಷ್ಣನು ಶತ್ರುಗಳ ಬಲವನ್ನು ಕುಂದಿಸುವುದಕ್ಕಾಗಿ ಉತ್ತಮ ಧ್ವನಿ ಉಳ್ಳ ಪಾಂಚಜನ್ಯಶಂಖವನ್ನು ಮೊಳಗಿಸಿದನು.

ಸ ಪಾಂಚಜನ್ಯೋಽಚ್ಯುತವಕ್ತ್ರವಾಯುನಾ
ಭೃಶಂ ಸುಪೂರ್ಣೋದರನಿಸ್ಸ್ವನದ್ವನಿಃ ।
ಜಗದ್ ವಿರಿಂಚೀಶಸುರೇಂದ್ರಪೂರ್ವಕಂ
ಪ್ರಕಮ್ಪಯಾಮಾಸ ಯುಗಾತ್ಯಯೇ ಯಥಾ ॥

ಆ ಪಾಂಚಜನ್ಯ ಕೃಷ್ಣನ ಬಾಯಿಯ ಗಾಳಿಯಿಂದ ಒಳಗೆ ತುಂಬಿಕೊಂಡಾಗ ಜೋರಾಗಿ ಧ್ವನಿಯನ್ನು ಹೊರಡಿಸಿ ಪ್ರಲಯಕಾಲದಲ್ಲಿ ಹೇಗೋ ಹಾಗೆ ಬ್ರಹ್ಮ, ರುದ್ರ, ಇಂದ್ರಾದಿ ಲೋಕವನ್ನು ನಡುಗಿಸಿತು.

ಗಾಂಡೀವಘೋಷೇ ಚ ತದಾಽಭಿಭೂತೇ
ಯುಧಿಷ್ಠಿರೋ ಭೀತಭೀತಸ್ತದೇತ್ಯ ।
ಶೈನೇಯಮೂಚೇ ಪರಸೈನ್ಯಮಗ್ನೇ
ಪಾರ್ಥೇ ಸ್ವಯಂ ಯುದ್ಧ್ಯತಿ ಕೇಶವಃ ಸ್ಮ ॥

ಆಗ ಗಾಂಡೀವಧ್ವನಿ ಕೇಳಿಸದಂತಾಗಿರಲು ಧರ್ಮರಾಜ ಬಹಳ ಭಯಗೊಂಡು ಸಾತ್ಯಕಿಯ ಬಳಿಗೆ ಹೋಗಿ 'ಏನು, ಶತ್ರುಸೈನ್ಯದಲ್ಲಿ ಅರ್ಜುನ ಮುಳುಗಿ ಹೋಗಿರಲು ಕೃಷ್ಣನೇ ಸ್ವತಃ ಯುದ್ಧಮಾಡುತ್ತಿರುವನೇ? ಎಂದು ಕೇಳಿದನು.

ನ ಶ್ರೂಯತೇ ಗಾಂಡಿವಸ್ಯಾದ್ಯ ಘೋಷಃ
ಸಂಶ್ರೂಯತೇ ಪಾಂಚಜನ್ಯಸ್ಯ ಘೋಷಃ ।
ತದ್ ಯಾಹಿ ಜಾನೀಹಿ ತಮದ್ಯ ಪಾರ್ಥಂ
ಯದಿ ಸ್ಮ ಜೀವತ್ಯಸಹಾಯ ಏಷಃ ॥

ಈಗ ಗಾಂಡೀವದ ಧ್ವನಿ ಕೇಳಿಬರುತ್ತಿಲ್ಲ. ಪಾಂಚಜನ್ಯ ಧ್ವನಿಯೇ ಕೇಳಿಬರುತ್ತಿದೆ. ಆದ್ದರಿಂದ ನೀನು ಈಗಲೇ ಕೃಷ್ಣನ ಬಳಿಗೆ ಹೋಗು. ಅರ್ಜುನನು ಬದುಕಿರುವನೋ ಎಂದು ತಿಳಿದುಕೊಂಡು ಬಾ. ಬದುಕಿದ್ದರೆ ಅಸಹಾಯಕನಾಗಿದ್ದರೆ ನೀನು ಸಹಾಯಕನಾಗು ಎಂದು ಹೇಳಿದನು.

ಇತೀರಿತಃ ಸಾತ್ಯಕಿರತ್ರ ವಿಪ್ರಾನ್
ಸಂಪೂಜ್ಯ ವಿತ್ತೈಃ ಪರಮಾಶಿಷಶ್ಚ ।

ಜಯಾಯ ತೇಭ್ಯಃ ಪ್ರತಿಗೃಹ್ಯ ಸೇನಾ
ಮುಖಂ ಯಯೌ ಭೀಮಸೇನಾನುಯಾತಃ ॥

ಧರ್ಮರಾಜನು ಹೀಗೆ ಹೇಳಿದಾಗ ಸಾತ್ಯಕಿಯು ಬ್ರಾಹ್ಮಣರನ್ನು ದ್ರವ್ಯಗಳಿಂದ ಚೆನ್ನಾಗಿ ಸತ್ಕರಿಸಿ ಯುದ್ಧದಲ್ಲಿ ಜಯಕ್ಕಾಗಿ ಅವರಿಂದ ಉತ್ತಮ ಆಶೀರ್ವಾದಗಳನ್ನು ಹೊಂದಿ ಸೈನ್ಯದ ದ್ವಾರಕ್ಕೆ ಹೊರಟನು. ಅವನಿಗೆ ತಡೆ ಉಂಟಾಗದಿರಲೆಂದು ಭೀಮನು ಅವನನ್ನು ಹಿಂಬಾಲಿಸಿದನು.

ಭೀಮಸ್ತು ಸೇನಾಮುಖಮಾಶು ಭಿತ್ತ್ವಾ
ಪ್ರಾವೇಶಯದ್ ಯುಯುಧಾನಂ ಚಮೂಂ ತಾಮ್ ।
ಸ ಯುದ್ಧ್ಯಮಾನೋ ಗುರುಣಾಽಭ್ಯಪೇಕ್ಷಿತಃ
ಸೂತಂ ನಿಹತ್ಯ ದ್ರಾವಯಾಮಾಸ ಚಾಶ್ವಾನ್ ॥

ಭೀಮನು ಬೇಗನೆ ಸೈನ್ಯದ ದ್ವಾರವನ್ನು ಭೇದಿಸಿ ಸಾತ್ಯಕಿಯನ್ನು ಸೈನ್ಯದೊಳಗೆ ಪ್ರವೇಶ ಮಾಡಿಸಿದನು. ಸಾತ್ಯಕಿಯು ದ್ರೋಣರೊಡನೆ ಯುದ್ಧ ಮಾಡಿದನು. ದ್ರೋಣರು ಉಪೇಕ್ಷೆ ಮಾಡಿ ಬಿಟ್ಟದ್ದರಿಂದ ಸಾತ್ಯಕಿಯು ಅವರ ಸಾರಥಿಯನ್ನು ಕೊಂದು ಕುದುರೆಗಳನ್ನು ಓಡಿಸಿದನು.

ಬಲಂ ವಿವೃದ್ಧಂ ಚ ತದಾಽಸ್ಯ ಸಾತ್ಯಕೇ-
ರ್ವಿಪ್ರಾಶೀರ್ಭಿಃ ಕೃಷ್ಣವರಾದಪಿ ಸ್ಮ ।
ಬಲಸ್ಯ ವೃದ್ಧಿರ್ಹಿ ಪುರಾಽಸ್ಯ ದತ್ತಾ
ಕೃಷ್ಣೇನ ತುಷ್ಟೇನ ದಿನೇ ಹಿ ತಸ್ಮಿನ್ ॥

ಆಗ ಸಾತ್ಯಕಿಯ ಬಲ ಬ್ರಾಹ್ಮಣರ ಆಶೀರ್ವಾದಗಳಿಂದಲೂ, ಕೃಷ್ಣನ ವರದಿಂದಲೂ ವೃದ್ಧಿಹೊಂದಿತ್ತು. ಆ ದಿನದಲ್ಲಿ ಸಾತ್ಯಕಿಗೆ ಬಲ ವೃದ್ಧಿಯಾಗಲೆಂದು ಸಂತುಷ್ಟನಾದ ಶ್ರೀಕೃಷ್ಣನಿಂದ ಹಿಂದೆ ವರ ನೀಡಲ್ಪಟ್ಟಿತ್ತು.

ತತೋ ವಿವೃದ್ಧೋರುಬಲಾತ್ ಸ ಸಾತ್ಯಕಿಃ
ಸಂಸ್ಥಾಪ್ಯ ಭೀಮಂ ಪ್ರಯಯೌ ರಥೇನ ।
ತಂ ಬಾಣವರ್ಷೈಃ ಪೃತನಾಂ ಸಮಂತಾ-
ನ್ನಿಘ್ನಂತಮಾಜೌ ಹೃದಿಕಾತ್ಮಜೋಽಭ್ಯಯಾತ್ ॥

ಅದರಿಂದ ವೃದ್ಧಿಹೊಂದಿದ ಮಹಾಬಲದಿಂದ ಸಾತ್ಯಕಿಯು ಭೀಮನನ್ನು ಸೇನೆಯ ದ್ವಾರದಲ್ಲಿ ನಿಲ್ಲಿಸಿ, ರಥದಿಂದ ಒಳಗೆ ಪ್ರವೇಶಿಸಿದನು, ಯುದ್ಧದಲ್ಲಿ ಬಾಣಗಳ ಮಳೆಗಳಿಂದ ಸೈನ್ಯಗಳನ್ನು ಎಲ್ಲೆಡೆಗಳಲ್ಲಿ ನಾಶಮಾಡತೊಡಗಿದಾಗ ಕೃತವರ್ಮ ಎದುರಾದನು.

ತಯೋರಭೂದ್ ಯುದ್ಧಮತೀವ ದಾರುಣಂ
ತತ್ರಾಕರೋತ್ ತಂ ವಿರಥಂ ಸ ಸಾತ್ಯಕಿಃ ।
ವಿಜಿತ್ಯ ತಂ ಸಾತ್ಯಕಿರುಗ್ರಧನ್ವಾ
ಯಯಾವತೀತ್ಯೈವ ಶಿರಾಂಸಿ ಯೂನಾಮ್ ॥

ಕೃಂತನ್ ಶರೈಸ್ತಂ ಜಲಸಂಧ ಆಗಮದ್
ರಣೇ ಗಜಸ್ಕಂಧಗತೋಽಭಿಯೋದ್ಧುಮ್ ।
ನಿವಾರಯಂತಂ ತಮಸಹ್ಯವಿಕ್ರಮಂ
ನಿಹತ್ಯ ಬಾಣೈಃ ಸಮರೇ ಸ ಸಾತ್ಯಕಿಃ ।
ವಿಲೋಲಯಾಮಾಸ ಬಲಂ ಕುರೂಣಾಂ
ನಿಘ್ನನ್ ಗಜಸ್ಕಂದನವಾಜಿಪತ್ತಿನಃ ॥

ಸಾತ್ಯಕಿ-ಕೃತವರ್ಮರಿಗೆ ಭೀಕರವಾದ ಯುದ್ಧನಡೆಯಿತು. ಆ ಯುದ್ಧದಲ್ಲಿಸಾತ್ಯಕಿ ಕೃತವರ್ಮನನ್ನು ವಿರಥನನ್ನಾಗಿ ಮಾಡಿದನು. ಭಯಂಕರ ಧನುರ್ಧಾರಿ ಸಾತ್ಯಕಿಯು ಅವನನ್ನು ಪರಾಭವಗೊಳಿಸಿ ದಾಟಿ ಯುವಕರ ತಲೆಗಳನ್ನು ಕತ್ತರಿಸುತ್ತಾ ನಡೆದನು. ಅವನೊಡನೆ ಹೋರಾಡಲು ಆನೆಯ ಹೆಗಲನ್ನೇರಿ ಜಲಸಂಧನು ಬಂದನು. ತನನ್ನು ತಡೆಯುತ್ತಿದ್ದ ಅಸಹನೀಯ ಪರಾಕ್ರಮಿಯಾದ ಆ ಜಲಸಂಧನನ್ನು ಸಾತ್ಯಕಿಯು ಯುದ್ಧದಲ್ಲಿ ಬಾಣಗಳಿಂದ ಕೊಂದು ಕೌರವರ ಆನೆ, ರಥ, ಕುದುರೆ, ಕಾಲಾಳು ಚತುರಂಗ ಸೇನೆಯ ಬಲವನ್ನು ಹೊಡೆಯುತ್ತ ನಾಶಮಾಡಿದನು.

ಸ ಪಾರ್ವತೇಯಾಂಶ್ಚ ಶಿಲಾಪ್ರವರ್ಷಿಣೋ
ನಿಹತ್ಯ ವಿದ್ರಾಪ್ಯ ಚ ಸರ್ವಸೈನಿಕಾನ್ ।
ಸಮಾಸದತ್ ಕೇಶವಫಲ್ಗುನೌ ಚ
ಬಲೀ ತಮಾರಾಽಶು ಚ ಯೂಪಕೇತುಃ ॥

ತಯೋರಭೂದ್ ಯುದ್ಧಮತೀವ ಘೋರಂ
ಚಿರಂ ವಿಚಿತ್ರಂ ಚ ಮಹದ್ ವಿಭೀಷಣಮ್ ॥

ಸಾತ್ಯಕಿ ಕಲ್ಪಿನ ಮಳೆ ಸುರಿಸುತ್ತಿದ್ದ ಗುಡ್ಡಗಾಡಿನವರನ್ನು ಸಂಹರಿಸಿ ಎಲ್ಲ ಸೈನಿಕರನ್ನು ಓಡಿಸಿ ಕೃಷ್ಣಾರ್ಜುನರ ಕಡೆಗೆ ಮುಂದುವರಿದನು. ಆಗ ಬಲಿಷ್ಠನಾದ ಭೂರಿಶ್ರವನು ಸಾತ್ಯಕಿಯನ್ನು ತಡೆದನು. ಅವರಿಬ್ಬರಿಗೆ ಅತ್ಯಂತ ಘೋರ, ಮಹಾಭಯಂಕರ, ವಿಚಿತ್ರವಾದ ಯುದ್ಧವು ಬಹಳಕಾಲ ನಡೆಯಿತು.

ಪರಸ್ಪರಂ ತೌ ತುರಗಾನ್ ನಿಹತ್ಯ
ನಿಪಾತ್ಯ ಸೂತೌ ಧನುಷೀ ನಿಕೃತ್ಯ ॥
ಸಮೀಯತುಶ್ಚರ್ಮವರಾಸಿಧಾರಿಣೌ
ವಿಚಿತ್ರಮಾರ್ಗಾನ್ ಯುಧಿ ಸಂಚರಂತೌ ॥

ಸಾತ್ಯಕಿಯು ಭೂರಿಶ್ರವರು ಒಬ್ಬ ಇನ್ನೊಬ್ಬರ ಕುದುರೆಗಳನ್ನು ಕೊಂದು ಸಾರಥಿಗಳನ್ನೂ ಬೀಳಿಸಿ ಬಿಲ್ಲುಗಳನ್ನೂ ಕಡಿದು ಕತ್ತಿ ಗುರಾಣಿಗಳನ್ನು ಹಿಡಿದು ವಿಚಿತ್ರವಾದ ವರಸೆಗಳನ್ನು ಯುದ್ಧದಲ್ಲಿ ತೋರುತ್ತ ಹೋರಾಡಿದರು.

ಸ ಸೌಮದತ್ತಿರ್ಭೂವಿ ಸಾತ್ಯಕಿಂ ರಣೇ
ನಿಪಾತ್ಯ ಕೇಶೇಷು ಚ ಸಂಪ್ರಗೃಹ್ಯ ।
ಪದಾಽಸ್ಯ ವಕ್ಷಸ್ಯಧಿರುಹ್ಯ ಖಡ್ಗ-
ಮುದಗ್ರಹೀದಾಶು ಶಿರೋಽಪಹರ್ತುಮ್ ॥

ಭೂರಿಶ್ರವನು ಯುದ್ಧದಲ್ಲಿ ಸಾತ್ಯಕಿಯನ್ನು ನೆಲದಲ್ಲಿ ಕೆಡವಿ ಕೂದಲುಗಳಲ್ಲಿ ಹಿಡಿದು ಎದೆಯ ಮೇಲೆ ಕಾಲಿನಿಂದ ಮೆಟ್ಟಿ ನಿಂತು ಶಿರಶ್ಛೇದ ಮಾಡಲು ಬೇಗನೆ ಖಡ್ಗವನ್ನೆತ್ತಿದನು.

ತದ್ ವಾಸುದೇವಸ್ತು ನಿರೀಕ್ಷ್ಯ ವಿಶ್ವತ
ಶ್ಚಕ್ಷುರ್ಜಗಾದಾಶು ಧನಂಜಯಂ ರಣೇ ।
ತ್ರಾಯಸ್ವ ಶೈನೇಯಮಿತಿ ಸ್ಮ ಸೋಽಪಿ
ಭಲ್ಲೇನ ಚಿಚ್ಛೇದ ಭುಜಂ ಪರಸ್ಯ ॥

ವಿಶ್ವತಶ್ಚಕ್ಷುವಾದ ಶ್ರೀಕೃಷ್ಣನು ಅದನ್ನು ಕಂಡು ಬೇಗನೆ ಅರ್ಜುನನಿಗೆ ಹೇಳಿದ 'ಯುದ್ಧದಲ್ಲಿ ಸಾತ್ಯಕಿಯನ್ನು ಕಾಪಾಡು' ಎಂದು. ಒಡನೆಯೇ ಅರ್ಜುನನು ಒಂದು ಭಲ್ಲದಿಂದ ಭೂರಿಶ್ರವನ ತೋಳನ್ನು ಕತ್ತರಿಸಿದನು.

ಸ ತೇನ ಚೋತ್ಕೃತ್ತಸಖಡ್ಗಬಾಹು
ರ್ನಿಂದ್ಯ ಪಾರ್ಥಂ ನಿಪಸಾದ ಭೂಮೌ ।
ಪ್ರಾಯೋಪವಿಷ್ಟಃ ಶರಸಂಸ್ತರೇ ಹರಿಂ
ಧ್ಯಾಯನ್ ವಿನಿಂದನ್ನಸುರಪ್ರವೇಶಾತ್ ॥

ಭೂರಿಶ್ರವನು ತನ್ನ ಕತ್ತಿ ಎತ್ತಿದ್ದ ಬಾಹು ಕಡಿದು ಹೋದಾಗ ಅರ್ಜುನನನ್ನು ನಿಂದಿಸಿ ನೆಲದ ಮೇಲೆ ಕುಳಿತನು. ಅಸುರಾವೇಶದಿಂದ ಶ್ರೀಕೃಷ್ಣನನ್ನು ನಿಂದಿಸುತ್ತ ಶ್ರೀಹರಿಯನ್ನು ಧ್ಯಾನಿಸುತ್ತ ಬಾಣಗಳ ಹಾಸಿನ ಮೇಲೆ ಪ್ರಾಯೋಪ್ರವೇಶಕ್ಕೆ ಕುಳಿತನು.

ಗತೇऽಸುರಾವೇಶ ಉತಾತಿಭಕ್ತ್ಯಾ
ಧ್ಯಾಯತ್ಯಮುಷ್ಮಿನ್ ಗರುಡಧ್ವಜಂ ತಮ್ ।
ಶೈನೇಯ ಉತ್ಥಾಯ ನಿವಾರ್ಯಮಾಣಃ
ಕೃಷ್ಣಾರ್ಜುನಾದ್ಯೈರಹರಚ್ಛಿರೋऽಸ್ಯ ॥

ಅಸುರಾವೇಶ ಹೋದ ಬಳಿಕ ಒಳ್ಳೆಯ ಭಕ್ತಿಯಿಂದಲೇ ಭೂರಿಶ್ರವ ಶ್ರೀಕೃಷ್ಣನನ್ನು ಧ್ಯಾನಿಸುತ್ತಿದ್ದಾಗ ಸಾತ್ಯಕಿಯು ಎದ್ದು, ಶ್ರೀಕೃಷ್ಣ ಅರ್ಜುನ ಮುಂತಾದವರು ತಡೆಯುತ್ತಿದ್ದಂತೆಯೇ ಭೂರಿಶ್ರವನ ತಲೆಯನ್ನು ಕಡಿದು ಹಾಕಿದನು.

ತದಾ ಸ್ವಕೀಯಂ ರಥಮೇತದರ್ಥಂ
ಕ್ಲೃಪ್ತಂ ದದೌ ಸಾತ್ಯಕಯೇ ಸಸೂತಮ್ ।
ಕೃಷ್ಣೋऽಥ ಪಾರ್ಥಸ್ಯ ಹಯಾಶ್ಚತುರ್ಭಿರ್ದಿತಾ
ಸ್ತದಾऽಸೃಜದ್ ವಾರುಣಾಸ್ತ್ರಂ ಸ ಪಾರ್ಥಃ ॥

ಸಾತ್ಯಕಿಗಾಗಿಯೇ ಸಿದ್ಧಗೊಳಿಸಲ್ಪಟ್ಟ ತನ್ನ ರಥವನ್ನು ಶ್ರೀಕೃಷ್ಣ ಆಗ ಸಾರಥಿ ಸಮೇತವಾಗಿ ಸಾತ್ಯಕಿಗೆ ಕೊಟ್ಟನು. ಆಗ ಅರ್ಜುನನ ಕುದುರೆಗಳು ಬಾಯಾರಿದ್ದವು. ಅರ್ಜುನ ವಾರುಣಾಸ್ತ್ರವನ್ನು ಪ್ರಯೋಗಿಸಿದನು.

ತೇನೈವ ತೀರ್ಥಂ ಪರಮಂ ಚಕಾರ
ತಥಾऽಶ್ವಶಾಲಾಮಪಿ ಬಾಣರೂಪಾಮ್ ।
ತತೋ ವಿಮುಚ್ಯಾತ್ರ ಹಯಾನಪಾಯಯದ್
ಹರಿಸ್ತದಾ ವಾಸವಿರಾರ್ದಯತ್ ಪರಾನ್ ॥

ವಾರುಣಾಸ್ತ್ರದಿಂದ ಅರ್ಜುನನು ಉತ್ತಮವಾದ ಜಲಾಶಯವನ್ನು ನಿರ್ಮಿಸಿದನು ಮತ್ತು ಬಾಣರೂಪ ಅಶ್ವಶಾಲೆಯನ್ನೂ ನಿರ್ಮಿಸಿದನು. ಶ್ರೀಕೃಷ್ಣನು ಕುದುರೆಗಳನ್ನು ರಥದಿಂದ ಬಿಚ್ಚಿ ನೀರು ಕುಡಿಸಿದನು. ಅರ್ಜುನನು ಆಗ ನೆಲದ ಮೇಲೆ ನಿಂತೇ ಶತ್ರುಗಳೊಡನೆ ಹೋರಾಡುತ್ತಲೇ ಇದ್ದನು.

ಯುಯೋಜ ಕೃಷ್ಣಸ್ತುರಗಾನ್ ರಥೇ ಪುನ-
ರ್ಗತಶ್ರಮಾನುದ್ಧೃತಸಾಯಕಾನ್ ಪ್ರಭುಃ ।
ಪ್ರಚೋದಿತೇ ತೇನ ರಥೇ ಸ್ಥಿತಃ ಪುನ-
ಸ್ತಥೈವ ಬೀಭತ್ಸುರರೀನಯೋಧಯತ್ ॥

ಪ್ರಭು ಶ್ರೀಕೃಷ್ಣನು ಕುದುರೆಗಳ ಮೈಯಲ್ಲಿ ನೆಟ್ಟಿದ್ದ ಬಾಣಗಳನ್ನು ಕಿತ್ತು ತೆಗೆದು ಹಾಕಿ ಮೈದಡವಿ ಅವುಗಳ ಆಯಾಸವನ್ನು ಪರಿಹರಿಸಿ ತಿರುಗಿ ರಥಕ್ಕೆ ಕಟ್ಟಿದ. ಬಳಿಕ ಅವನು ರಥವನ್ನು ನಡೆಸಲು ಸಿದ್ಧನಾದಾಗ ಅರ್ಜುನನು ಅದನ್ನೇರಿ ಪುನಃ ಹಿಂದಿನಂತೆಯೇ ಜಯದ್ರಥನ ಕಡೆಗೆ ಮುನ್ನುಗ್ಗುತ್ತ ಶತ್ರುಗಳೊಡನೆ ಹೋರಾಡಿದನು.

ಶಿನಿಪ್ರವೀರೇ ತು ಗತೇ ಯುಧಿಷ್ಠಿರಃ
ಪುನಶ್ಚ ಚಿಂತಾಕುಲಿತೋ ಬಭೂವ ಹ ।
ಜಗಾದ ಭೀಮಂ ಚ ನ ಗಾಂಡಿವಧ್ವನಿಃ
ಸಂಶ್ರೂಯತೇ ಪಾಂಚಜನ್ಯಸ್ಯ ರಾವಃ ॥

ಸಾತ್ಯಕಿಯು ಅತ್ತ ಹೋದ ಬಳಿಕ ಪುನಃ ಧರ್ಮರಾಜ ಚಿಂತಾಗ್ರಸ್ಥನಾದನು. ಭೀಮನಿಗೆ ಹೇಳಿದ 'ಗಾಂಡಿವ ಧ್ವನಿ ಇಲ್ಲ. ಪಾಂಚಜನ್ಯ ಧ್ವನಿ ಮಾತ್ರ ಕೇಳಿ ಬರುತ್ತಿದೆ' ಎಂದು.

ಮಯಾ ನಿಯುಕ್ತಶ್ಚ ಗತಃ ಸ ಸಾತ್ಯಕಿ-
ರ್ಭಾರಂ ಚ ತಸ್ಯಾಧಿಕಮೇವ ಮನ್ಯೇ ।

ತತ್ ಪಾಹಿ ಪಾರ್ಥಂ ಯುಯುಧಾನಮೇವ
ತ್ವಂ ಭೀಮ ಗತ್ವಾ ಯದಿ ಜೀವತಸ್ತೌ ॥

'ನನ್ನ ಆದೇಶ ಪಡೆದು ಸಾತ್ಯಕಿಯು ಅರ್ಜುನನಿಗೆ ಸಹಾಯ ಮಾಡಲು ಹೋಗಿದ್ದಾನೆ. ಆದರೆ ಆತನಿಗೆ ಆ ಕಾರ್ಯಭಾರ ಪ್ರಾಯಃ ಅಧಿಕವಾಯಿತೆಂದು ನನಗೆ ತೋರುತ್ತಿದೆ. ಆದರಿಂದ ಭೀಮನೇ, ನೀನೇ ಹೋಗಿ ಅರ್ಜುನನನ್ನೂ, ಸಾತ್ಯಕಿಯನ್ನೂ ಅವರು ಬದುಕಿದ್ದರೆ ಕಾಪಾಡು' ಎಂದು.

ಇತೀರಿತಃ ಪ್ರಾಹ ವೃಕೋದರಸ್ತಂ
ನ ರಕ್ಷಿತಂ ವಾಸುದೇವೇನ ಪಾರ್ಥಮ್ ।
ಬ್ರಹ್ಮೇಶಾನಾವಪಿ ಜೇತುಂ ಸಮರ್ಥೌ
ಕಿಂ ದ್ರೌಣಿಕರ್ಣಾದಿಧನುರ್ಧ್ಯತೋಽತ್ರ ॥

ಹೀಗೆ ಧರ್ಮರಾಜನು ಹೇಳಿದಾಗ ಭೀಮನು ಅವನಿಗೆ ಹೇಳಿದ, 'ಕೃಷ್ಣನಿಂದ ರಕ್ಷಿತನಾದ ಅರ್ಜುನನನ್ನು ಬ್ರಹ್ಮರುದ್ರರೂ ಕೂಡ ಗೆಲ್ಲಲು ಸಮರ್ಥರಲ್ಲ. ಇನ್ನು ಈ ಅಶ್ವತ್ಥಾಮರು, ಕರ್ಣ ಮುಂತಾದ ಧನುರ್ಧಾರಿಗಳ ಬಗ್ಗೆ ಏನು ಹೇಳಬೇಕು?

ಅತೋ ಭಯಂ ನಾಸ್ತಿ ಧನಂಜಯಸ್ಯ
ನ ಸಾತ್ಯಕೇಶ್ಚೈವ ಹರೇಃ ಪ್ರಸಾದಾತ್ ।
ರಕ್ಷ್ಯಸ್ತ್ವಮೇವಾತ್ರ ಮತೋ ಮಮಾದ್ಯ
ದ್ರೋಣೋ ಹ್ಯಯಂ ಯತತೇ ತ್ವಾಂ ಗ್ರಹೀತುಮ್ ॥

ಆದರಿಂದ ಅರ್ಜುನನಿಗೂ ಸಾತ್ಯಕಿಗೂ ಕೃಷ್ಣನ ಅನುಗ್ರಹದಿಂದ ಏನೂ ಭಯವಿಲ್ಲ. ನಿನ್ನ ರಕ್ಷಣೆಯೊಂದೇ ನಾನು ಮಾಡಬೇಕಾಗಿರುವ ಕಾರ್ಯವೆಂದು ನಾನು ಈಗ ಭಾವಿಸಿದ್ದೇನೆ. ಏಕೆಂದರೆ ದ್ರೋಣರು ನಿನ್ನನ್ನು ಸೆರೆ ಹಿಡಿಯಲು ಯತ್ನಿಸುತ್ತಿದ್ದಾರೆ.

ಇತೀರಿತಃ ಪ್ರಾಹ ಯುಧಿಷ್ಠಿರಸ್ತಂ
ನ ಜೀವಮಾನೇ ಯುಧಿ ಮಾಂ ಘಟೋತ್ಕಚೇ ।
ಧೃಷ್ಟದ್ಯುಮ್ನೇ ಚಾಸ್ತ್ರವಿದಾಂ ವರಿಷ್ಠೇ
ದ್ರೋಣೋ ವಶಂ ನೇತುಮಿಹ ಪ್ರಭುಃ ಕ್ವಚಿತ್ ॥

ಭೀಮ ಹೀಗೆ ಹೇಳಿದಾಗ ಧರ್ಮರಾಜನೆಂದ, 'ಘಟೋತ್ಕಚನೂ, ಅಸ್ತ್ರವೇತ್ತರಲ್ಲಿ ಅಗ್ರಗಣ್ಯನಾದ ಧೃಷ್ಟದ್ಯುಮ್ನನೂ ಬದುಕಿರುವಾಗ ದ್ರೋಣರು ನನ್ನನ್ನು ವಶಪಡಿಸಿಕೊಳ್ಳಲು ಎಂದೂ ಶಕ್ತರಲ್ಲ.

ಯದಿ ಪ್ರಿಯಂ ಕರ್ತುಮಿಹೇಚ್ಛಸಿ ತ್ವಂ
ಮಮ ಪ್ರಯಾಹ್ಯಾಶು ಚ ಪಾರ್ಥಸಾತ್ಯಕೀ ।
ರಕ್ಷಸ್ವ ಸಂಜ್ಞಾಮಪಿ ಸಿಂಹನಾದಾತ್
ಕುರುಷ್ವ ಮೇ ಪಾರ್ಥಶೈನೇಯದೃಷ್ಟೌ ॥

'ನೀನು ನನಗೆ ಇಷ್ಟವಾದುದನ್ನು ಮಾಡಲು ಬಯಸುವಿಯಾದರೆ ಅರ್ಜುನ, ಸಾತ್ಯಕಿಯರ ಬಳಿಗೆ ಹೋಗು. ಅವರನ್ನು ರಕ್ಷಿಸು. ಅವರನ್ನು ಕಂಡೊಡನೆ ಸಿಂಹನಾದದಿಂದ ಅದರ ಬಗ್ಗೆ ನನಗೆ ಸೂಚನೆ ನೀಡು.

ತಥಾ ಹತೇ ಚೈವ ಜಯದ್ರಥೇ ಮೇ
ಕುರುಷ್ವ ಸಂಜ್ಞಾಮಿತಿ ತೇನ ಭೀಮಃ ।
ಉಕ್ತಸ್ತು ಹೈಡಿಂಬಮಮುಷ್ಯ ರಕ್ಷಣೇ
ವ್ಯಧಾಚ್ಚ ಸೇನಾಪತಿಮೇವ ಸಮ್ಯಕ್ ॥

'ಹಾಗೇ ಜಯದ್ರಥನು ಹತನಾದಾಗಲೂ ನನಗೆ ಸೂಚನೆ ನೀಡು' ಹೀಗೆ ಧರ್ಮರಾಜ ಹೇಳಿದಾಗ ಭೀಮನು ಅವನ ರಕ್ಷಣೆಯ ಕಾರ್ಯದಲ್ಲಿ ಘಟೋತ್ಕಚನನ್ನೂ, ಸೇನಾಪತಿ ಧೃಷ್ಟದ್ಯುಮ್ನನನ್ನೂ ಚೆನ್ನಾಗಿ ನೇಮಿಸಿದನು.

ಸ ಚಾऽಹ ಸೇನಾಪತಿರತ್ರ ಭೀಮಂ
ಪ್ರಯಾಹಿ ತೌ ಯತ್ರ ಚ ಕೇಶವಾರ್ಜುನೌ ।
ನ ಜೀವಮಾನೇ ಮಯಿ ಧರ್ಷಿತುಂ ಕ್ಷಮೋ
ದ್ರೋಣೋ ನೃಪಂ ಮೃತ್ಯುರಹಂ ಚ ತಸ್ಯ ॥

ಸೇನಾಪತಿ ಧೃಷ್ಟದ್ಯುಮ್ನನೂ ಭೀಮನಿಗೆ ಹೇಳಿದ 'ನೀನು ಕೃಷ್ಣಾರ್ಜುನರಿರುವಲ್ಲಿಗೆ ಹೋಗು. ನಾನು ಬದುಕಿರುವಾಗ ನನ್ನ ಬಳಿ ಇರುವ ಯುಧಿಷ್ಠಿರನನ್ನು ಬಲಾತ್ಕರಿಸಲು ದ್ರೋಣರು ಸಮರ್ಥರಾಗುವುದಿಲ್ಲ. ಏಕೆಂದರೆ ನಾನು ಅವರಿಗೆ ಮೃತ್ಯು.

ಇತಿ ಬ್ರುವಾಣೇ ಪ್ರಣಿಧಾಯ ಭೀಮಃ
ಪುನಃಪುನಸ್ತಂ ನೃಪತಿಂ ಗದಾಧರಃ ।
ಯಯೌ ಪರಾನೀಕಮಧಿಜ್ಯಧನ್ವಾ
ನಿರಂತರಂ ಪ್ರವಮನ್ ಬಾಣಪೂಗಾನ್ ॥

ಹೀಗೆ ಧೃಷ್ಟದ್ಯುಮ್ನನು ಮತ್ತೆ ಮತ್ತೆ ಹೇಳಿದಾಗ ಗದಾಧಾರಿಯಾದ ಭೀಮನು ಧರ್ಮರಾಜನನ್ನು ಅವನ ರಕ್ಷಣೆಯಲ್ಲಿರಿಸಿ ಬಿಲ್ಲಿಗೆ ಹೆದೆಯೇರಿಸಿ ಒಂದೇ ಸಮನೆ ಬಾಣಸಮೂಹಗಳನ್ನು ಚೆಲ್ಲುತ್ತ ಶತ್ರು ಸೈನ್ಯವನ್ನು ಹೊಕ್ಕನು.

ನ್ಯವಾರಯತ್ ತಂ ಶರವರ್ಷಧಾರೋ
ದ್ರೋಣೋ ವಚಶ್ಚೇದಮುವಾಚ ಭೀಮಮ್ ।
ಶಿಷ್ಯಸ್ನೇಹಾದ್ ವಾಸವಿಃ ಸಾತ್ಯಕಿಶ್ಚ
ಮಯಾ ಪ್ರಮುಕ್ತೋ ಭೃಶಮಾನತೌ ಮಯಿ ॥

ಭೀಮನನ್ನು ದ್ರೋಣರು ಬಾಣಗಳ ಮಳೆಗೆರೆಯುತ್ತ ತಡೆದರು. ಭೀಮನಿಗೆ ಈ ಮಾತನ್ನು ಹೇಳಿದರು. 'ಶಿಷ್ಯ ವಾತ್ಸಲ್ಯದಿಂದ ನಾನು ಅರ್ಜುನನನ್ನೂ ಸಾತ್ಯಕಿಯನ್ನೂ ಬಿಟ್ಟೆ. ಏಕೆಂದರೆ ಅವರು ನನ್ನಲ್ಲಿ ಬಹಳ ವಿನೀತರಾಗಿದ್ದಾರೆ.

ಸ್ವೀಯಾ ಪ್ರತಿಜ್ಞಾಽಪಿ ಹಿ ಸೈಂಧವಸ್ಯ
ಗುಪ್ತೌ ಮಯಾ ಪಾರ್ಥಕೃತೇ ವಿಸೃಷ್ಟಾ ।
ದಾಸ್ಯೇ ನ ತೇ ಮಾರ್ಗಮಹಂ ಕಥಂಚಿತ್
ಪಶ್ಯಾಸ್ತ್ರವೀರ್ಯಂ ಮಮ ದಿವ್ಯಮದ್ಭುತಮ್ ॥

ಸೈಂಧವನ ರಕ್ಷಣೆಯ ವಿಷಯದಲ್ಲಿ ನಾನು ಮಾಡಿದ್ದ ಪ್ರತಿಜ್ಞೆಯನ್ನೂ ಕೂಡ ಅರ್ಜುನನಿಗಾಗಿ ಬಿಟ್ಟುಬಿಟ್ಟೆ. ಆದರೆ ನಿನಗೆ ನಾನು ಯಾವ ರೀತಿಯಿಂದಲೂ ದಾರಿ ಕೊಡಲಾರೆ. ನನ್ನ ಅಲೌಕಿಕ ಅದ್ಭುತ ಅಸ್ತ್ರಸಾಮರ್ಥ್ಯವನ್ನು ನೋಡು.

ಇತ್ಯುಕ್ತವಾಕ್ಯಃ ಸ ಗದಾಂ ಸಮಾದದೇ
ಚಿಕ್ಷೇಪ ತಾಂ ದ್ರೋಣರಥಾಯ ಭೀಮಃ ।
ಉವಾಚ ಚಾಹಂ ಪಿತೃವನ್ಮಾನಯೇ ತ್ವಾಂ
ಸದಾ ಮೃದುಸ್ತ್ವಂ ಪ್ರತಿ ನಾನ್ಯಥಾ ಕ್ವಚಿತ್ ॥

ದ್ರೋಣರು ಹೀಗೆ ಹೇಳಿದಾಗ ಭೀಮನು ಗದೆಯನ್ನೆತ್ತಿಕೊಂಡನು. ಅದನ್ನು ದ್ರೋಣರ ರಥಕ್ಕೆ ಎಸೆದು ಈ ಮಾತನ್ನು ಹೇಳಿದನು. 'ನಾನು ನಿಮ್ಮನ್ನು ತಂದೆಯಂತೆ ಕಾಣುತ್ತೇನೆ. ಆದರಿಂದ ನಿಮ್ಮದುರಿನಲ್ಲಿನಾನು ಸದಾ ಮೃದುವಾಗಿ ಹೋರಾಡುತ್ತೇನೆ ಹೊರತು ಎಂದೂ ಕಠಿಣವಾಗಿ ಹೋರಾಡುವುದಿಲ್ಲ.

ಆಮಾರ್ದವೇ ಪಶ್ಯ ಚ ಯಾದೃಶಂ ಬಲಂ
ಮಮೇತಿ ತಸ್ಯಾಽಶು ವಿಚೂರ್ಣಿತೋ ರಥಃ ।
ಗದಾಭಿಪಾತೇನ ವೃಕೋದರಸ್ಯ
ಸಸೂತವಾಜಿಧ್ವಜಯನ್ತ್ರಕೂಬರಃ ॥

'ಮೃದುವಾಗಿ ಆಲ್ಲದಿದ್ದರೆ, ನೋಡಿ ನನ್ನ ಬಲ ಯಾವ ರೀತಿಯದು ಎಂದು'. ಹೀಗೆ ಭೀಮನು ಹೇಳಿ ಒಡನೆಯೇ ಗದೆ ಏಟಿನಿಂದ ದ್ರೋಣರ ರಥದ ಸಾರಥಿ, ಕುದುರೆ, ಧ್ವಜ, ಚಕ್ರ, ನೊಗಗಳಿಂದ ಸಹಿತವಾಗಿ ಪುಡಿಪುಡಿಯಾಯಿತು.

ದ್ರೋಣೋ ಗದಾಮಾಪತತೀಂ ನಿರೀಕ್ಷ್ಯ
ತ್ವವಪ್ಲುತೋ ಲಾಘವತೋ ಧರಾತಳೇ ।
ತದೈವ ದುರ್ಯೋಧನಯಾಪಿತಂ ರಥಂ
ಪರಂ ಸಮಾಸ್ಥಾಯ ಶರಾನ್ ವವರ್ಷ ಹ ॥

ಭೀಮನ ಗದೆಯು ತನ್ನೆಡೆಗೆ ಬರುತ್ತಿದ್ದುದನ್ನು ಕಂಡೇ ದ್ರೋಣವರು ತ್ವರಿತದಿಂದ ನೆಲದಲ್ಲಿ ಹಾರಿ ನಿಂತಿದ್ದರು. ತಕ್ಷಣವೇ ದುರ್ಯೋಧನನು ಕಳುಹಿಸಿದ ಇನ್ನೊಂದು ರಥವನ್ನೇರಿ ಬಾಣಗಳ ಮಳೆಗೆರೆದರು.

ಶರೈಸ್ತದೀಯೈಃ ಪರಮಾಸ್ತ್ರಮಂತ್ರಿತೈಃ
ಪ್ರವೃಷ್ಯಮಾಣೋ ಜಗದೀರಕಾತ್ಮಜಃ ।
ಶಿರೋ ನಿಧಾಯಾಽಶು ಪುರೋ ವೃಷೋ
ಯಥಾ ತಮಭ್ಯಯಾದೇವ ರಥಾದವಪ್ಲುತಃ ॥

ಮಹಾ ಅಸ್ತ್ರಮಂತ್ರಗಳಿಂದ ಅಭಿಮಂತ್ರಿತವಾದ ದ್ರೋಣರ ಬಾಣಗಳ ಮಳೆಯು ತನ್ನ ಮೇಲೆ ಬೀಳುತ್ತಿದ್ದಂತೆಯೇ ಭೀಮನು ಬೇಗನೆ ರಥದಿಂದ ಕೆಳಗೆ ಹಾರಿ ತಲೆಯನ್ನು ಮುಂದೆ ಮಾಡಿಕೊಂಡು ಗೂಳಿಯಂತೆ ದ್ರೋಣರ ಕಡೆಗೆ ಧಾವಿಸಿದನು.

ಮನೋಜವಾದೇವ ತಮಾಪ್ಯ ಭೀಮೋ
ರಥಂ ಗೃಹೀತ್ವಾಽಂಬರ ಆಪ್ಲವತ್ ಕ್ಷಣಾತ್ ।
ಶಕ್ತೋಽಹಂ ತ್ವಾಂ ನ ನಿಹನ್ಮಿ ಗೌರವಾ
ದಿತ್ಯೇವ ಸುಜ್ಞಾಪಯಿತುಂ ತದಸ್ಯ ॥

ನಾನು ಶಕ್ತನಾದರೂ ಗೌರವ ಭಾವನೆಯಿಂದಲೇ ನಿಮ್ಮನ್ನು ಕೊಲ್ಲದೆ ಬಿಡುತ್ತಿದ್ದೇನೆ ಎಂದು ದ್ರೋಣರಿಗೆ ತಿಳಿಸುವುದಕ್ಕಾಗಿ ಭೀಮನು ಮನೋವೇಗದಿಂದ ದ್ರೋಣರ ಬಳಿಗೆ ಬಂದು ಕ್ಷಣದಲ್ಲಿ ರಥವನ್ನೆತ್ತಿ ಆಕಾಶಕ್ಕೆ ಹಾರಿಸಿದನು.

ಸವಾಜಿಸೂತಃ ಸ ರಥಃ ಕ್ಷಿತೌ ಪತನ್
ವಿಚೂರ್ಣಿತೋಽಸ್ಯಾದ್ ಗುರುರಪ್ಯವಪ್ಲುತಃ ।
ತದಾ ವಿಶೋಕೋಽಸ್ಯ ರಥಂ ಸಮಾನಯತ್
ತಮಾರುಹದ್ ಭೀಮ ಉದಾರವಿಕ್ರಮಃ ॥

ಕುದುರೆ, ಸಾರಥಿ ಸಹಿತವಾಗಿ ದ್ರೋಣರ ರಥ ನೆಲದಲ್ಲಿ ಬಿದ್ದು ಪುಡಿ ಪುಡಿಯಾಯಿತು. ಹಾಗಾಗುವುದರೊಳಗೆ ದ್ರೋಣರು ನೆಲಕ್ಕೆ ಹಾರಿದರು. ಆಗ ವಿಶೋಕ ಭೀಮನ ಬಳಿಗೆ ರಥವನ್ನು ತಂದನು. ಮಹಾಪರಾಕ್ರಮಿಯಾದ ಭೀಮನು ಅದನ್ನೇರಿದನು.

ದ್ರೋಣೋಽಪಿ ದುರ್ಯೋಧನದತ್ತಮನ್ಯಂ
ರಥಂ ಸಮಾಸ್ಥಾಯ ಯುಧಿಷ್ಠಿರಂ ಯಯೌ ।
ಗೃಹೀತುಕಾಮಂ ನೃಪತಿಂ ಪ್ರಯಾಂತಂ
ನ್ಯವಾರಯತ್ ಸಂಯತಿ ವಾಹಿನೀಪತಿಃ ॥

ದ್ರೋಣರೂ ದುರ್ಯೋಧನನಿತ್ತ ಇನ್ನೊಂದು ರಥವನ್ನೇರಿ ಯುಧಿಷ್ಠಿರನ ಕಡೆಗೆ ಹೊರಟು ಹೋದರು. ಯುಧಿಷ್ಠಿರನನ್ನು ಸೆರೆ ಹಿಡಿಯಲು ಬಯಸಿದ್ದ ಅವರನ್ನು ಯುದ್ಧದಲ್ಲಿ ಧೃಷ್ಟದ್ಯುಮ್ನನು ತಡೆದನು.

ವಿದ್ರಾವಿತಾಂ ದ್ರೋಣಶರೈಃ ಸ್ವಸೇನಾಂ
ಸಂಸ್ಥಾಪ್ಯ ಭೂಯೋ ದ್ರುಪದಾತ್ಮಜಃ ಶರೈಃ ।

ದ್ರೋಣಂ ನಿವಾರ್ಯೈವ ಚಮೂಂ ಪರೇಷಾಂ
ವಿದ್ರಾವಯಾಮಾಸ ಚ ತಸ್ಯ ಪಶ್ಯತಃ ॥

ಧೃಷ್ಟದ್ಯುಮ್ನನು ದ್ರೋಣರ ಬಾಣಗಳಿಂದ ಓಡಿಸಲ್ಪಡುತ್ತಿದ್ದ ತನ್ನ ಸೈನ್ಯವನ್ನು ತಡೆದು ನಿಲ್ಲಿಸಿ ಪುನಃ ಬಾಣಗಳಿಂದ ದ್ರೋಣರನ್ನು ತಡೆದು ಅವರು ನೋಡುತ್ತಿದ್ದಂತೆಯೇ ಕೌರವರ ಸೈನ್ಯವನ್ನು ಓಡಿಸಿದನು.

ತಯೋರಭೂದ್ ಯುದ್ಧಮತೀವ ರೌದ್ರಂ
ಜಯೈಷಿಣೋಃ ಪಾಂಡವಧಾರ್ತರಾಷ್ಟ್ರಯೋಃ ।
ಅತ್ಯದ್ಭುತಂ ಸಂತತಬಾಣವರ್ಷ-
ಮನಾರತಂ ಸುಚಿರಂ ನಿರ್ವಿಶೇಷಮ್ ॥

ಪಾಂಡವ-ಕೌರವರ ಜಯೇಚ್ಛುಗಳಾದ ಧೃಷ್ಟದ್ಯುಮ್ನ-ದ್ರೋಣರಿಗೆ ಅತ್ಯಂತ ಭೀಕರವಾದ ಯುದ್ಧವು ನಡೆಯಿತು. ಅದು ಅತ್ಯಂತ ಅದ್ಭುತವಾಗಿತ್ತು. ಸತತವಾದ ಬಾಣಗಳ ಮಳೆಯಿಂದ ಕೂಡಿದ್ದು ತಡೆಯೇ ಇಲ್ಲದೆ ಬಹುಕಾಲ ನಡೆಯಿತು. ಯಾರು ಹೆಚ್ಚು ಯಾರು ಕಡಿಮೆ ಎನ್ನಲಾಗದಂತಿತ್ತು.

ತತಃ ಪ್ರಾಯಾದ್ ಭೀಮಸೇನೋಽಮಿತೌಜಾ
ಮೃದ್ನನ್ ಶರೈಃ ಕೌರವರಾಜಸೇನಾಮ್ ।
ವಿಂದಾನುವಿಂದಪ್ರಮುಖಾ ಧಾರ್ತರಾಷ್ಟ್ರಾ-
ಸ್ತಮಾಸೇದುರ್ದ್ವಾದಶ ವೀರಮುಖ್ಯಾಃ ॥

ಆಗ ಅಮಿತ ಪರಾಕ್ರಮಿಯಾದ ಭೀಮಸೇನ ಬಾಣಗಳಿಂದ ದುರ್ಯೋಧನನ ಸೈನ್ಯವನ್ನು ನಾಶಪಡಿಸುತ್ತ ಮುಂದೆ ನಡೆದನು. ಅವನನ್ನು ವಿಂದ ಅನುವಿಂದರನ್ನು ಮುಂದೆ ಮಾಡಿಕೊಂಡು ವೀರರಲ್ಲಿ ಮುಖ್ಯರಾದ ಹನ್ನೆರಡು ಮಂದಿ ಧೃತರಾಷ್ಟ್ರ ಪುತ್ರರು ಎದುರಿಸಿದರು.

ವಿದ್ಧಃ ಶರೈಸ್ತೈರ್ಬಹುಭಿರ್ವೃಕೋದರಃ
ಶರಾಂಸಿ ತೇಷಾಂ ಯುಗಪಚ್ಚಕರ್ತ ॥
ಹತೇಷು ತೇಷು ಪ್ರವರೇಷು ಧನ್ವಿನಾಂ
ಸತ್ಯವ್ರತಃ ಪುರುಮಿತ್ರೋ ಜಯಶ್ಚ ।

ವೃಂದಾರಕಃ ಪೌರವಶ್ಚೇತ್ಯಮಾತ್ಯಾಃ
ಸಮಾಸೇದುರ್ಧಾರ್ತರಾಷ್ಟ್ರಸ್ಯ ಭೀಮಮ್ ॥

ಅವರು ಬಹುಬಾಣಗಳಿಂದ ಹೊಡೆಯುತ್ತಿದ್ದಂತೆಯೇ ಭೀಮನು ಅವರೆಲ್ಲರ ತಲೆಗಳನ್ನೂ ಒಮ್ಮೆಲೆ ಕತ್ತರಿಸಿದನು. ಬಿಲ್ಲುಗಾರರಲ್ಲಿ ಶ್ರೇಷ್ಠರಾದ ಅವರು ಸತ್ತಾಗ ಸತ್ಯವ್ರತ, ಪುರಮಿತ್ರ, ಜಯ, ವೃಂದಾರಕ, ಪೌರವ ಎಂಬ ದುರ್ಯೋಧನನ ಮಂತ್ರಿಗಳು ಭೀಮನನ್ನು ಎದುರಿಸಿದರು.

ಸ ತೈಃ ಪೃಷತ್ಕೈರವಕೀರ್ಯಮಾಣಃ
ಶಿತಾನ್ ವಿಪಾಠಾನ್ ಯುಗಪತ್ ಸಮಾದದೇ ।
ಜಹಾರ ತೈರೇವ ಶಿರಾಂಸಿ ತೇಷಾಂ
ಹತೇಷು ತೇಷ್ವೇವ ಪರೇ ಪ್ರದುದ್ರುವುಃ ॥

ಅವರು ಬಾಣಗಳಿಂದ ಭೀಮನನ್ನು ಮುಚ್ಚುತ್ತಿದ್ದಂತೆಯೇ ಅವನು ಹರಿತವಾದ ಬಾಣಗಳನ್ನು ಒಮ್ಮೆಲೆ ಹೂಡಿದನು. ಅವುಗಳಿಂದಲೇ ಅವರ ತಲೆಗಳನ್ನು ಹಾರಿಸಿದನು. ಅವರು ಹತರಾದಾಗ ಉಳಿದವರು ಪಲಾಯನಗೈದರು.

ಸ ಸಿಂಹವತ್ ಕ್ಷುದ್ರಮೃಗಾನ್ ಸಮಂತತೋ
ವಿದ್ರಾಪ್ಯ ಶತ್ರೂನ್ ಹೃದಿಕಾತ್ಮಜಂ ರಣೇ ।
ಅಭ್ಯಾಗಮತ್ ತೇನ ನಿವಾರಿತಃ ಶರೈಃ
ಕ್ಷಣೇನ ಚಕ್ರೇ ವಿರಥಾಶ್ವಸೂತಮ್ ॥

ಸಿಂಹವು ಕ್ಷುದ್ರ ಮೃಗಗಳನ್ನು ಓಡಿಸಿದಂತೆ ಭೀಮನು ಶತ್ರುಗಳನ್ನು ಎಲ್ಲ ಕಡೆಗಳಲ್ಲಿಯೂ ಓಡಿಸಿ ಯುದ್ಧರಂಗದಲ್ಲಿ ಕೃತವರ್ಮನ ಕಡೆಗೆ ಮುನ್ನುಗ್ಗಿದನು. ಕೃತವರ್ಮನು ಬಾಣಗಳಿಂದ ತಡೆದಾಗ ಅವನನ್ನು ಕ್ಷಣದಲ್ಲಿ ರಥ, ಅಶ್ವ, ಸಾರಥಿಗಳಿಂದ ರಹಿತನನ್ನಾಗಿ ಮಾಡಿದನು.

ಸ ಗಾಢವಿದ್ಧಸ್ತು ವೃಕೋದರೇಣ
ರಣಂ ವಿಸೃಜ್ಯಾಪಯಯೌ ಕ್ಷಣೇನ ।
ವಿಜೇತ್ಯ ಹಾರ್ದಿಕ್ಯಮಥಾऽಶು ಭೀಮೋ
ವಿದ್ರಾವಯಾಮಾಸ ವರೂಥಿನೀಂ ತಾಮ್ ।

ಸಂಪ್ರೇಷಯನ್ ಸರ್ವನರಾಶ್ವಕುಂಜರಾನ್
ಯಮಾಯ ಯಾತೋ ಹರಿಪಾರ್ಥಪಾರ್ಶ್ವಮ್ ॥

ಕೃತವರ್ಮನು ಭೀಮನಿಂದ ಗಾಢವಾಗಿ ಹೊಡೆಸಿಕೊಂಡು ಕ್ಷಣದಲ್ಲಿ ಯುದ್ಧವನ್ನು ತೊರೆದು ಪಲಾಯನ ಮಾಡಿದನು. ಭೀಮನು ವೇಗನೆ ಕೃತವರ್ಮನನ್ನು ಗೆದ್ದು ಒಡನೆ ಆ ಸೈನ್ಯವನ್ನು ಓಡಿಸಿದನು. ಎಲ್ಲ ಪದಾತಿಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ ಯಮನಿಗೆ ಕಳಿಸುತ್ತ ಕೃಷ್ಣಾರ್ಜುನರ ಬಳಿಗೆ ನಡೆದನು.

ದೃಷ್ಟ್ವೈವ ಕೃಷ್ಣವಿಜಯೌ ಪರಮಪ್ರಹೃಷ್ಟ-
ಸ್ತಾಭ್ಯಾಂ ನಿರೀಕ್ಷಿತ ಉತ ಪ್ರತಿಭಾಷಿತಶ್ಚ ।
ಸಂಜ್ಞಾಂ ನೃಪಸ್ಯ ಸ ದದಾವಪಿ ಸಿಂಹನಾದಾನ್
ಶ್ರುತ್ವಾ ಪರಾಂ ಮುದಮವಾಪ ಸ ಚಾಗ್ರ್ಯಬುದ್ಧಿಃ ॥

ಭೀಮಸೇನನು ಕೃಷ್ಣಾರ್ಜುನರನ್ನು ಕಂಡೊಡನೆ ಬಹಳ ಆನಂದಿತನಾದನು. ಅವರೂ ಭೀಮಸೇನನನ್ನು ಕಂಡರು. ಸಂಭಾಷಣೆ ನಡೆಸಿದರು. ಈ ಬಗ್ಗೆ ಸಿಂಹನಾದದಿಂದ ಧರ್ಮರಾಜನಿಗೆ ಸೂಚನೆಯನ್ನು ಭೀಮನು ನೀಡಿದನು. ಉತ್ತಮ ಬುದ್ಧಿಶಾಲಿಯಾದ ಧರ್ಮರಾಜನು ಅದನ್ನು ಕೇಳಿ ಬಹಳ ಆನಂದ ಹೊಂದಿದನು.

ಭೀಮಸ್ಯ ನಾನದತ ಏವ ಮಹಾಸ್ವನೇನ
ವಿಗ್ಮೂತ್ರಶೋಣಿತಮಥೋ ಮೃತಿಮಾಪುರೇಕೇ ।
ಭೀತೇಷು ಸರ್ವನೃಪತಿಷ್ವಮುಮಾಪ ತೂರ್ಣಂ
ಕರ್ಣೋ ವಿಕರ್ಣಮುಖರಾ ಅಪಿ ಧಾರ್ತರಾಷ್ಟ್ರಾಃ ॥

ಭೀಮಸೇನನು ಸಿಂಹನಾದ ಮಾಡುತ್ತಿದ್ದಂತೆ ಆ ಮಹಾನಾದದಿಂದ ಹಲವು ಕೌರವ ಸೈನಿಕರು ಮಲಮೂತ್ರ ವಿಸರ್ಜನೆ ಮಾಡಿದರು. ರಕ್ತಕಾರಿದರು. ಮರಣವನ್ನೂ ಹೊಂದಿದರು. ಎಲ್ಲರಾಜರೂ ಭಯಗೊಂಡಿದ್ದಾಗ ಭೀಮನ ಎದುರಿಗೆ ಬೇಗನೆ ಕರ್ಣ ಬಂದನು. ವಿಕರ್ಣ ಮುಂತಾದ ಧೃತರಾಷ್ಟ್ರಪುತ್ರರೂ ಬಂದರು.

ಹತ್ವಾ ವಿಕರ್ಣಮುತ ತತ್ರ ಚ ಚಿತ್ರಸೇನಂ
ಸಂಚೂರ್ಣಿತಂ ಚ ವಿದಧೇ ರಥಮರ್ಕಸೂನೋಃ ।

ಘೋರೈಃ ಶರೈಃ ಪುನರಪಿ ಸ್ಮ ಸಮರ್ದ್ಯಮಾನಃ
ಕರ್ಣೋಽಪಯಾನಮಕರೋದ್ ದ್ರುತಮೇವ ಭೀಮಾತ್ ॥

ಭೀಮಸೇನನು ಆ ಯುದ್ಧದಲ್ಲಿ ವಿಕರ್ಣನನ್ನೂ ಚಿತ್ರಸೇನನನ್ನೂ ಕೊಂದು ಕರ್ಣನ ರಥವನ್ನು ಪುಡಿಪುಡಿ ಮಾಡಿದನು. ಕರ್ಣನು ಭೀಮನ ಭಯಂಕರ ಬಾಣಗಳಿಂದ ಮತ್ತೆ ಮತ್ತೆ ಜರ್ಜರಿತನಾಗಿ ಭೀಮನ ಎದುರಿನಿಂದ ಕೂಡಲೇ ಪಲಾಯನವನ್ನೇ ಮಾಡಿದನು.

ಆಶ್ವಾಸ್ಯ ಚೈವ ಸುಚಿರಂ ಪುನರೇವ ಭೀಮಂ
ಯುದ್ಧಾಯ ಯಾತಿ ಧೃತರಾಷ್ಟ್ರಸುತೈಸ್ತಥಾಽನ್ಯೈಃ ।
ತಾಂಶ್ಚೈವ ತತ್ರ ವಿನಿಹತ್ಯ ತಥೈವ ಕರ್ಣೋ
ವ್ಯಶ್ವಾಯುಧಃ ಕೃತ ಉತಾಪಯಯೌ ಕ್ಷಣೇನ ॥

ಕರ್ಣನು ದೀರ್ಘಕಾಲ ವಿಶ್ರಾಂತಿ ಪಡೆದು ಧೃತರಾಷ್ಟ್ರನ ಇತರ ಮಕ್ಕಳನ್ನು ಕೂಡಿಕೊಂಡು ಪುನಃ ಭೀಮನೊಡನೆ ಯುದ್ಧಕ್ಕೆ ಬಂದನು. ಭೀಮನು ಧೃತರಾಷ್ಟ್ರನ ಮಕ್ಕಳನ್ನು ಕೊಂದು ಹಿಂದಿನಂತೆಯೇ ಕರ್ಣನ ಕುದುರೆಗಳನ್ನೂ, ಆಯುಧಗಳನ್ನೂ ನಾಶಪಡಿಸಿದನು. ಕರ್ಣ ಕ್ಷಣದಲ್ಲಿ ಪಲಾಯನ ಮಾಡಿದನು.

ವಿಕರ್ಣಚಿತ್ರಸೇನಾದ್ಯಾ ಏವಂ ವೀರತಮಾಃ ಸುತಾಃ ।
ಕರ್ಣಸ್ಯ ಪಶ್ಯತೋ ಭೀಮಬಾಣಕೃತ್ತಶಿರೋಧರಾಃ ॥

ನಿಪೇತುರ್ಧರಾತರಾಷ್ಟ್ರಸ್ಯ ರಥೇಭ್ಯಃ ಪೃಥಿವೀತಳೇ ।
ತ್ರಯೋವಿಂಶತಿರೇವಾತ್ರ ಕರ್ಣಸಾಹಾಯ್ಯಕಾರಿಣಃ ॥

ಹೀಗೆ ಕರ್ಣ ನೋಡುತ್ತಿದ್ದಂತೆಯೇ ಕರ್ಣನಿಗೆ ಸಹಾಯ ಮಾಡಲು ಬಂದಿದ್ದ ವಿಕರ್ಣ, ಚಿತ್ರಸೇನ ಮುಂತಾದ ಇಪ್ಪತ್ತಮೂರು ಮಂದಿ ಮಹಾವೀರರಾದ ಧೃತರಾಷ್ಟ್ರ ಪುತ್ರರೂ ಕೂಡ ಭೀಮನ ಬಾಣಗಳಿಂದ ಶಿರಶ್ಛೇದ ಹೊಂದಿ ರಥಗಳಿಂದ ನೆಲದಲ್ಲಿ ಬಿದ್ದರು.

ಏಕವಿಂಶತಿವಾರಂ ಚ ವ್ಯಶ್ವಸೂತರಥಧ್ವಜಃ ।
ಗಾಢಮಭ್ಯರ್ಹಿತಸ್ತೀಕ್ಷ್ಣೈಃ ಶರೈರ್ಭೀಮೇನ ಸಂಯುಗೇ ॥

ಪ್ರಾಣಸಂಶಯಮಾಪನ್ನಃ ಸರ್ವೋಕಸ್ಯ ಪಶ್ಯತಃ ।
ರಣಂ ತ್ಯಕ್ತ್ವಾ ಪ್ರದುದ್ರಾವ ರುದನ್ ದುಃಖಾತ್ ಪುನಃಪುನಃ ॥

ಇಪ್ಪತ್ತೊಂದು ಬಾರಿ ಯುದ್ಧದಲ್ಲಿ ಭೀಮನಿಂದ ತೀಕ್ಷ್ಣವಾದ ಬಾಣಗಳಿಂದ ಗಾಢವಾಗಿ ಪೀಡಿತನಾದ ಕರ್ಣನು ಕುದುರೆ, ಸಾರಥಿ, ರಥ, ಧ್ವಜಗಳನ್ನು ಕಳೆದುಕೊಂಡು ಪ್ರಾಣಕ್ಕೇ ಅಪಾಯ ಬಂದಾಗ ಎಲ್ಲ ಜನ ನೋಡುತ್ತಿದ್ದಂತೆಯೇ ದುಃಖದಿಂದ ಮತ್ತೆ ಮತ್ತೆ ಅಳುತ್ತ ಯುದ್ಧವನ್ನು ಬಿಟ್ಟು ಓಡಿಹೋದನು.

ದ್ವಾವಿಂಶತಿಮಯುದ್ದೇ ತು ರಾಮದತ್ತಂ ಸುಭಾಸ್ವರಮ್ ।
ಅಭೇದ್ಯಂ ರಥಮಾರುಹ್ಯ ವಿಜಯಂ ಧನುರೇವ ಚ ॥

ತದತ್ರಮೇವ ಸಂಗೃಹ್ಯ ತೂಣೇ ಚಾಕ್ಷಯಸಾಯಕೌ ।
ಆಸಸಾದ ರಣೇ ಭೀಮಂ ಕರ್ಣೋ ವೈಕರ್ತನೋ ವೃಷಾ ॥

ಇಪ್ಪತ್ತೆರಡನೆ ಯುದ್ಧದಲ್ಲಿ ಕರ್ಣನು ಚೆನ್ನಾಗಿ ಹೊಳೆಯುವ ಅಭೇದ್ಯವಾದ ಪರಶುರಾಮನಿತ್ತ ರಥವನ್ನೇರಿ ಪರಶುರಾಮನು ನೀಡಿದ್ದ ವಿಜಯ ಎಂಬ ಬಿಲ್ಲನ್ನೂ, ಅಕ್ಷಯ ಬಾಣಗಳ ಬತ್ತಳಿಕೆಯನ್ನೂ ಹಿಡಿದು ಯುದ್ಧರಂಗದಲ್ಲಿ ಕೋಪದಿಂದ ಭೀಮನನ್ನು ಎದುರಿಸಿದನು.

ಸುಘೋರ ಆಸೀತ್ ಸ ತಯೋರ್ವಿಮರ್ದೋ
ಭೀಮಸ್ಯ ಕರ್ಣಸ್ಯ ಚ ದೀರ್ಘಕಾಲಮ್ ।
ಆಕಾಶಮಾಚ್ಛಾದಯತೋಃ ಶರೌಘೈಃ
ಪರಸ್ಪರಂ ಚೈವ ಸುರಕ್ತನೇತ್ರಯೋಃ ॥

ಬಲು ಕೆಂಪಾದ ಕಣ್ಣುಗಳುಳ್ಳ ಆ ಭೀಮ-ಕರ್ಣರೊಳಗೆ ಪರಸ್ಪರವಾಗಿ ದೀರ್ಘಕಾಲದವರೆಗೆ ಬಲು ಘೋರವಾದ ಕಾಳಗ ನಡೆಯಿತು.ಅವರು ಬಾಣ ಸಮೂಹಗಳಿಂದ ಆಕಾಶವನ್ನು ಮುಚ್ಚಿದರು.

ತತೋ ಭೀಮೋ ಮಹಾಬಾಹುಃ ಸಹಜಾಭ್ಯಾಂ ಚ ಸಂಯುತಮ್ ।
ತ್ವಾಂ ತು ಕುಂಡವರ್ಮಭ್ಯಾಂ ಶಕ್ನುಯಾಂ ಹಂತುಮಂಜಸಾ ॥

ಇತಿ ಜ್ಞಾಪಯಿತುಂ ತಸ್ಯ ಕುಂಡಲೇ ಕವಚಂ ತಥಾ ।
ಶರೈರುತ್ಕೃತ್ಯ ಸಮರೇ ಪಾತಯಾಮಾಸ ಭೂತಳೇ ॥

ಆಗ ಮಹಾಬಾಹುವಾದ ಭೀಮನು 'ಕರ್ಣನೇ, ನೀನು ಸಹಜವಾದ ಕುಂಡಲ ಕವಚಗಳಿಂದ ಯುಕ್ತನಾಗಿದ್ದರೂ ನಿನ್ನನ್ನು ಕೊಲ್ಲಲು ನಾನು ಬಲು ಸಮರ್ಥನಾಗಿದ್ದೇನೆ' ಎಂದು ತಿಳಿಸುವುದಕ್ಕಾಗಿ ಯುದ್ಧದಲ್ಲಿ ಅವನ ಕುಂಡಲಗಳನ್ನೂ, ಕವಚವನ್ನೂ ಬಾಣಗಳಿಂದ ಕತ್ತರಿಸಿ ನೆಲದಲ್ಲಿ ಬೀಳಿಸಿದನು.

ಏವಂ ತಾನ್ಯಪಕೃಷ್ಯಾಹಂ ಹನ್ಯಾಂ ತ್ವಾಮಿತಿ ವೇದಯನ್ ।
ಪುನಶ್ಚ ಬಹುಭಿಸ್ತೀಕ್ಷ್ಣೈಃ ಶರೈರೇನಂ ಸಮಾರ್ದಯತ್ ॥

ನಿನ್ನ ಆ ಸಹಜ ಕವಚ-ಕುಂಡಲಗಳನ್ನೂ ಕೂಡ ಕಿತ್ತು ಹೀಗೆಯೇ ನಿನ್ನನ್ನು ಕೊಲ್ಲಬಲ್ಲೆ ಎಂದು ತಿಳಿಸಲು ಭೀಮನು ಪುನಃ ತೀಕ್ಷ್ಣವಾದ ಅನೇಕ ಬಾಣಗಳಿಂದ ಕರ್ಣನನ್ನು ಪೀಡಿಸಿದನು.

ತತಸ್ತು ಭೀಮಸ್ಯ ಬಭೂವ ಬುದ್ಧಿ-
ರಸ್ಪರ್ಧಿನಃ ಸರ್ವಜಯೋ ಹಿ ದತ್ತಃ ।
ಅಮುಷ್ಯ ರಾಮೇಣ ನ ಚ ಸ್ಪರ್ಧಾಕಯಂ
ಕರ್ಣೋ ಮಯಾ ಯುದ್ಧ್ಯತಿ ಕೃಚ್ಛ್ರಗೋ ಹ್ಯಯಮ್ ॥

ಬಳಿಕ ಭೀಮನಿಗೆ ಹೀಗೆ ಆಲೋಚನೆಯುಂಟಾಯಿತು. 'ಕರ್ಣನಿಗೆ ಪರಶುರಾಮ ವರನೀಡಿದ್ದಾರೆ. ಸ್ಪರ್ಧೆ ಮಾಡದಿದ್ದರೆ ಎಲ್ಲರನ್ನೂ ಗೆಲ್ಲುತ್ತಿ' ಎಂದು. ಈಗ ಕರ್ಣನು ಸ್ಪರ್ಧೆಯಿಂದ ನನ್ನೊಡನೆ ಯುದ್ಧ ಮಾಡುತ್ತಿಲ್ಲ. ಏಕೆಂದರೆ ಅವನು ಪ್ರಾಣಾಪಾಯಕ್ಕೆ ಒಳಗಾಗಿದ್ದಾನೆ.

ತಥಾಽಪಿ ಮೇ ಭಗವಾನತ್ಯನುಗ್ರಹಾ-
ಜ್ಜಯಂ ದದಾತ್ಯಾತ್ಮವಚೋಪಹಾಯ ।
ಮಯಾ ತು ಮಾನ್ಯಂ ವಚನಂ ಹರೇಃ ಸದಾ
ತಸ್ಮಾದ್ ದಾಸ್ಯೇ ವಿವರಂ ತದ್ಧ ಶತ್ರೋಃ ॥

ಆದರೂ ಭಗವಾನ್ ಪರಶುರಾಮರು ನನ್ನ ಮೇಲಿನ ಪರಮಾನುಗ್ರಹದಿಂದ ತನ್ನ ವರವನ್ನೂ ಬಿಟ್ಟುಕೊಟ್ಟು ನನಗೆ ಜಯ ನೀಡುತ್ತಾರೆ. ಆದರೂ ನಾನು ಹರಿಯ ವರವನ್ನು ಸದಾ ಗೌರವಿಸಲೇಬೇಕು. ಆದರಿಂದ ನಾನು ಈಗ ಕರ್ಣನಿಗೆ ಅವಕಾಶ ನೀಡುವೆನು.

ಏವಂ ಸ್ಮತ್ವಾ ತೇನ ರಂಧ್ರೇ ಪ್ರದತ್ತೇ
ಕರ್ಣೋಽಸ್ತ್ರವೀರ್ಯೇಣ ಧನುರ್ನ್ಯಕೃಂತತ್ ।
ರಶ್ಮೀನ್ ಹಯಾನಾಂ ಚ ತತೋ ರಥಂ ಸ
ತತ್ಯಾಜ ನೈಜಂ ಬಲಮೇವ ವೇದಯನ್ ॥

ಹೀಗೆ ಆಲೋಚಿಸಿ ಭೀಮನು ಅವಕಾಶ ಕೊಟ್ಟೊಡನೆ ಕರ್ಣ ತನ್ನ ಅಸ್ತ್ರ ಸಾಮರ್ಥ್ಯದಿಂದ ಭೀಮನ ಬಿಲ್ಲನ್ನು ಕತ್ತರಿಸಿದನು. ಕುದುರೆಗಳ ಹಗ್ಗವನ್ನೂ ತುಂಡರಿಸಿದನು. ಆಗ ಭೀಮನು ತನ್ನ ನೈಜವಾದ ಬಲವನ್ನು ತೋರುವುದಕ್ಕಾಗಿ ರಥವನ್ನು ಬಿಟ್ಟುಬಿಟ್ಟನು.

ನ ಮೇ ರಥಾದ್ಯೈರ್ಧನುಷಾಽಪಿ ಕಾರ್ಯ-
ಮಿತ್ಯೇವ ಸಂಜ್ಞಾಪಯಿತುಂ ವೃಕೋದರಃ ।
ಖಮುತ್ಪಪಾತೋತ್ತಮವೀರ್ಯತೇಜಾ
ರಥಂ ಚ ಕರ್ಣಸ್ಯ ಸಮಾಸ್ಥಿತಃ ಕ್ಷಣಾತ್ ॥

ರಥ ಮುಂತಾದವುಗಳಿಂದಾಗಿ ಬಿಲ್ಲಿನಿಂದಲಾಗಲಿ ನಾನು ಯಾವುದೇ ಕಾರ್ಯ ಸಾಧಿಸಬೇಕಾಗಿಲ್ಲ ಎಂದು ತಿಳಿಸಲು ಉತ್ತಮ ವೀರ್ಯ ಪರಾಕ್ರಮ ಉಳ್ಳ ಭೀಮನು ಆಕಾಶಕ್ಕೆ ನೆಗೆದನು. ಕ್ಷಣದಲ್ಲಿ ಕರ್ಣನ ರಥದ ಮೇಲೆಯೇ ಬಂದು ನಿಂತನು.

ಭೀತಸ್ತು ಕರ್ಣೋ ರಥಕೂಬರೇ ತದಾ
ವ್ಯಲೀಯತಾತಃ ಸ ವೃಕೋದರೋ ರಥಾತ್ ।
ಅವಪ್ಲುತೋ ಜ್ಞಾಪಯಿತುಂ ಸ್ವಶಕ್ತಿಂ
ನಿರಾಯುಧತ್ವೇಪ್ಯರಿನಿಗ್ರಹಾದೌ ॥

ಕರ್ಣನು ಭೀತನಾಗಿ ರಥದ ನೊಗದ ಕೆಳಗೆ ಅಡಗಿ ನಿಂತನು. ಭೀಮನು ತಾನು ನಿರಾಯುಧನಾದರೂ ಶತ್ರುನಿಗ್ರಹಾದಿಗಳಲ್ಲಿ ತನಗೆ ಶಕ್ತಿ ಇದೆ ಎಂಬುದನ್ನು ತೋರುವುದಕ್ಕಾಗಿ ಕರ್ಣನ ರಥವೇರಿದ್ದನು. ಈಗ ರಥದಿಂದ ಕೆಳಗೆ ಹಾರಿದನು.

ನೈಚ್ಛದ್ ಗೃಹೀತುಂ ವಿನಿಹಂತುಮೇವ ವಾ
ರಥಂ ಧನುರ್ವಾऽಸ್ಯ ರಣೇಪಹರ್ತುಮ್ ।
ದ್ರೋಣಸ್ಯ ಯದ್ವತ್ ಪೂರ್ವಮತೀವ ಶಕ್ತೋऽ
ಪ್ಯಮಾನಯದ್ ರಾಮವಚೋಸ್ಯ ಭಕ್ಷ್ಯಾ ॥

ಭೀಮನು ಅತ್ಯಂತ ಶಕ್ತನಾದರೂ ಶಕ್ತಿಯನ್ನು ಮೆರೆಸುವುದಕ್ಕಾಗಿಯೇ ಕರ್ಣನನ್ನು ಸೆರೆಹಿಡಿಯುವುದಕ್ಕಾಗಲಿ ಕೊಲ್ಲುವುದಕ್ಕಾಗಲಿ ಬಯಸಲಿಲ್ಲ. ರಥ ಆಯುಧ ರಹಿತನಾದರೂ ರಥವನ್ನಾಗಲಿ ಧನುಸ್ಸನ್ನಾಗಲಿ ಅಪಹರಿಸುವುದಕ್ಕೆ ಬಯಸಲಿಲ್ಲ. ಅತ್ಯಂತ ಶಕ್ತನಾದರೂ ಹಿಂದೆ ದ್ರೋಣರ ವಿಷಯದಲ್ಲಿ ಹೇಗೋ ಹಾಗೆ ಕರ್ಣನ ವಿಷಯದಲ್ಲಿಯೂ ಪರಶುರಾಮನ ವಚನವನ್ನು ಭಕ್ತಿಯಿಂದ ಮಾನಿಸಿದನು.

ಸತ್ಯಾಂ ಕರ್ತುಂ ವಾಸವೇಶ್ಚ ಪ್ರತಿಜ್ಞಾಂ
ಸಮ್ಮಾನಯನ್ ವೈಷ್ಣವತ್ವಾಚ್ಚ ಕರ್ಣಮ್ ।
ದಾತುಂ ರಂಧ್ರಂ ಸೂರ್ಯಜಸ್ಯ ಪ್ರಯಾತಃ
ಶರಕ್ಷೇಪಾರ್ಹಂ ದೂರಮತಿಷ್ಠದತ್ರ ॥

ಅರ್ಜುನನ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡುವುದಕ್ಕೂ, ಕರ್ಣ ವಿಷ್ಣುಭಕ್ತನಾದ್ದರಿಂದ ಅವನನ್ನು ಮಾನಿಸುವುದಕ್ಕೂ ಭೀಮನು ಕರ್ಣನನ್ನು ಕೊಲ್ಲದೆ ಬಿಟ್ಟನು. ಅವನಿಗೆ ತನ್ನ ಮೇಲೆ ಬಾಣಬಿಡಲು ಅವಕಾಶ ನೀಡುವುದಕ್ಕಾಗಿ ರಥದಿಂದ ಸ್ವಲ್ಪ ದೂರಕ್ಕೆ ಹೋಗಿ ಅಲ್ಲಿ ನಿಂತನು.

ತತಃ ಕರ್ಣೋ ದೂರಗತಂ ವೃಕೋದರಂ
ಸಮ್ಮಾನಯಂತಂ ರಾಮವಾಕ್ಯಂ ವಿಜಾನನ್ ।
ಶರೈರವಿದ್ಧ್ಯತ್ ಸ ಚ ತಾನವಾರಯದ್
ಗಜೈರ್ಮೃತೈಸ್ತಾಂಶ್ಚ ಚಕರ್ತ ಕರ್ಣಃ ॥

ಭೀಮನು ಪರಶುರಾಮರ ವರವನ್ನು ಮಾನಿಸುವುದಕ್ಕಾಗಿ ದೂರದಲ್ಲಿನಿಂತಿದ್ದಾನೆ ಎಂಬುದನ್ನು ಕರ್ಣನು ತಿಳಿದು ಅವನನ್ನು ಬಾಣಗಳಿಂದ ಹೊಡೆದನು. ಭೀಮನು ಅರ್ಜುನನ ಬಾಣಗಳಿಂದ ಸತ್ತಿದ್ದ ಆನೆಗಳನ್ನು ಎತ್ತಿ ಎಸೆದು ಆ ಬಾಣಗಳನ್ನು ತಡೆದನು. ಆ ಸತ್ತ ಆನೆಗಳನ್ನು ಕರ್ಣನು ಕತ್ತರಿಸಿ ಹಾಕಿದನು.

ವ್ಯಸೂನ್ ಗಜಾನ್ ಪ್ರಕ್ಷಿಪಂತಂ ಸಮೇತ್ಯ
ಸಂಸ್ಮೃತ್ಯ ಚಾಪೇನ ವಚಶ್ಚ ದುಷ್ಟಮ್ ।
ಸಂಶ್ರಾವಯಾಮಾಸ ಸುಯೋಧನಸ್ಯ
ಪ್ರೀತ್ಯೈ ಪ್ರದಾನನ್ನಪಿ ತಸ್ಯ ವೀರ್ಯಮ್ ॥

ಸತ್ತ ಆನೆಗಳನ್ನು ಎಸೆಯುತ್ತಿದ್ದ ಭೀಮನ ಬಳಿಗೆ ಕರ್ಣನು ಬಂದು ಬಿಲ್ಲಿನ ಕೊನೆಯಿಂದ ತಿವಿದು ಅವನ ಪರಾಕ್ರಮವನ್ನು ತಿಳಿದೂ ದುರ್ಯೋಧನನ ಸಂತೋಷಕ್ಕಾಗಿ ಕೆಟ್ಟಮಾತನ್ನಾಡಿದನು.

ಸಂಶ್ರಾವಯಂತಂ ವಚನಾನಿ ರೂಕ್ಷಾ-
ಣ್ಯಪಾಹನದ್ ಬಾಣವರೈಸ್ತದಾऽರ್ಜುನಃ ।
ಸ ವರ್ಮಹೀನಃ ಪಾರ್ಥಬಾಣಾಭಿತಪ್ತೋ
ವ್ಯಪಾಗಮದ್ ಭೀಮ ಆಪಾತ್ಯಯಾನಮ್ ॥

ಭೀಮನ ಮುಂದೆ ಕೆಟ್ಟಮಾತುಗಳನ್ನಾಡುತ್ತಿದ್ದ ಕರ್ಣನನ್ನು ಅರ್ಜುನನು ಬಾಣ ಸಮೂಹಗಳಿಂದ ಹೊಡೆದನು. ಆಗ ಕವಚರಹಿತನಾಗಿದ್ದ ಕರ್ಣನು ಅರ್ಜುನನ ಬಾಣಗಳಿಂದ ಬಹಳ ನೋವನ್ನು ಅನುಭವಿಸಿ ಪಲಾಯನ ಮಾಡಿದನು. ಭೀಮನು ತನ್ನ ರಥವನ್ನೇರಿದನು.

ಕರ್ಣೋ ಭೀಮೇ ವಾಸವೀಂ ನೈವ ಶಕ್ತಿಂ
ವಿಮೋಕ್ತುಮೈಚ್ಛನ್ಸೈವ ಬೀಭತ್ಸುತೋऽನ್ಯಾನ್ ।
ಹನ್ಯಾಮಿತಿ ಪ್ರಾಹ ಯತಃ ಸ ಕುಂತ್ಯೈ
ಯದ್ಯಪ್ಯವಧ್ಯಃ ಸ ತಯಾऽಪಿ ಭೀಮಃ ॥

ಭೀಮನನ್ನು ಶಕ್ತಾಯುಧದಿಂದಲೂ ಕೊಲ್ಲಲು ಸಾಧ್ಯವಿರಲಿಲ್ಲ. ಆದರೂ ಅರ್ಜುನನನ್ನು ಹೊರತು ಬೇರೆ ಪಾಂಡವರನ್ನು ಕೊಲ್ಲುವುದಿಲ್ಲವೆಂದು ಕರ್ಣ ಕುಂತಿಗೆ

ಮಾತುಕೊಟ್ಟದ್ದರಿಂದ ಇಂದ್ರನ ಶಕ್ತ್ಯಾಯುಧವನ್ನು ಭೀಮನಲ್ಲಿ ಪ್ರಯೋಗಿಸಲು ಅವನು ಬಯಸಲಿಲ್ಲ.

ನಾರಾಯಣಾಸ್ತ್ರಂ ಶಿರಸಿ ಪ್ರಪಾತಿತಂ
ನ ಯಸ್ಯ ರೋಮಾಪ್ಯದಹಚ್ಛರಾರ್ಚಿತಮ್ ।
ಕಿಂ ತಸ್ಯ ಶಕ್ತಿಃ ಪ್ರಕರೋತಿ ವಾಸವೀ
ತಥಾಽನ್ಯದಪ್ಯಸ್ತ್ರಶಸ್ತ್ರಂ ಮಹಚ್ಚ ॥

ಅಶ್ವತ್ಥಾಮರು ಹಾಕಿದ ನಾರಾಯಣಾಸ್ತ್ರವೂ ಕೂಡ ಭೀಮನ ತಲೆಯ ಮೇಲೆ ಬಹಳ ಹೊತ್ತು ನಿಂತೂ ಅವನ ಒಂದು ರೋಮವನ್ನೂ ಸುಡಲಿಲ್ಲ. ಅವನಿಗೆ ಇಂದ್ರನ ಶಕ್ತ್ಯಾಯುಧ ಏನು ಮಾಡಬಲ್ಲದು? ಇದೇ ರೀತಿ ಬೇರೆ ಮಹಾಶಸ್ತ್ರವೂ ಕೂಡ ಭೀಮನ ಮೇಲೆ ಏನು ಪರಿಣಾಮ ಮಾಡಬಲ್ಲದು?

ಭೀಮಃ ಕರ್ಣರಥಂ ಪ್ರಾಪ್ತಃ ಶಕ್ತಿಂ ನಾಽದಾತುಮೈಚ್ಛತ ।
ಅಭಿಪ್ರಾಯಂ ಕೇಶವಸ್ಯ ಜಾನನ್ ಹೈಡಿಂಬಮೃತ್ಯವೇ ॥

ಭೀಮನು ಕರ್ಣನ ರಥಕ್ಕೆ ಬಂದೂ ಅವನ ಶಕ್ತ್ಯಾಯುಧವನ್ನು ಅಪಹರಿಸಲು ಬಯಸಲಿಲ್ಲ. ಏಕೆಂದರೆ ಅದು ಮುಂದೆ ಘಟೋತ್ಕಚನ ವಧೆಗೆ ಕಾರಣವಾಗಲೆಂಬ ಕೃಷ್ಣನ ಸಂಕಲ್ಪವನ್ನು ಅವನು ತಿಳಿದಿದ್ದನು.

ತತಃ ಕರ್ಣೋಽನ್ಯಮಾಸ್ಥಾಯ ರಥಮರ್ಜುನಮಭ್ಯಯಾತ್ ।
ದಿವ್ಯಂ ರಥಂ ಧನುಶ್ಚೈವ ಕೃಷ್ಣಾಯುದ್ಧ್ಯಾಽರ್ಜುನೋ ಹರೇತ್ ॥

ಇತಿ ಭೀತಸ್ತು ತಾಂ ಶಕ್ತಿಮಾದಾಯಾರ್ಜುನಮೃತ್ಯವೇ ।
ಯುದ್ಧಾಯಾಯಾದ್ ರಥಂ ಚಾಪಂ ಶಕ್ತಿಂ ಚೈಕತ್ರ ನಾಕರೋತ್ ॥

ಏಕಂ ಹೃತಂ ಚೇದನ್ಯತ್ ಸ್ಯಾದಿತಿ ಮತ್ವಾ ಭಯಾಕುಲಃ ।
ಬಿಭೇತಿ ಸರ್ವದಾ ನೀತೇಃ ಕೃಷ್ಣಸ್ಯಾಮಿತತೇಜಸಃ ॥

ಬಳಿಕ ಕರ್ಣನು ಬೇರೆ ಸಾಮಾನ್ಯ ರಥವನ್ನೇರಿ ಅರ್ಜುನನನ್ನು ಎದುರಿಸಿದನು. ಪರಶುರಾಮನಿತ್ತ ದಿವ್ಯರಥವನ್ನೂ ದಿವ್ಯ ಧನುಸ್ಸನ್ನೂ ತಂದರೆ ಅವುಗಳನ್ನು ಕೃಷ್ಣನು

ಹೇಳಿಕೊಡುವ ಉಪಾಯದಿಂದ ಅರ್ಜುನನು ಅಪಹರಿಸಬಹುದೆಂದು ಭಯಪಟ್ಟ ಕರ್ಣನು ಶಕ್ತ್ಯಾಯುಧವನ್ನು ಮಾತ್ರವೇ ಅರ್ಜುನನ ವಧೆಗಾಗಿ ಯುದ್ಧಕ್ಕೆ ಹಿಡಿದು ಬಂದಿದ್ದನು. ಮೂರರಲ್ಲಿ ಒಂದನ್ನು ಅರ್ಜುನನು ಅಪಹರಿಸಿದರೂ ಇನ್ನೆರಡಾದರೂ ತನಗೆ ಉಳಿದೀತೆಂದು ಭಯಾಕುಲನಾಗಿದ್ದ ಕರ್ಣನು ದಿವ್ಯ ರಥ, ದಿವ್ಯಬಿಲ್ಲು, ಶಕ್ತ್ಯಾಯುಧ ಈ ಮೂರನ್ನೂ ಒಂದೇ ಕಡೆ ಎಂದೂ ತರುತ್ತಿರಲಿಲ್ಲ. ಅಪರಿಮಿತ ಶಕ್ತನಾದ ಕೃಷ್ಣನ ಯುದ್ಧನೀತಿಗೆ ಅವನು ಸದಾ ಭಯಪಡುತ್ತಿದ್ದನು.

ನಿಶ್ಚಿತೋ ಮರಣಾಯೈವ ಮೃತಿಕಾಲೇ ತು ತಂ ರಥಮ್ ।
ಆರುಹ್ಯಾಗಾದ್ಧಿ ಪೂರ್ವಂ ತು ನ ಕಾಲಂ ಮನ್ಯತೇ ಮೃತೇಃ ॥

ಮರಣ ಕಾಲದಲ್ಲಿ ಮಾತ್ರ ಕರ್ಣ ಮರಣ ಹೊಂದಲು ನಿಶ್ಚಯಿಸಿಕೊಂಡೇ ಆ ದಿವ್ಯ ರಥವೇರಿ ಬಂದ. ಆದಕ್ಕಿಂತ ಪೂರ್ವದಲ್ಲಿ ಆ ಕಾಲವನ್ನು ತನ್ನ ಮರಣ ಕಾಲವೆಂದು ಆತ ನಿಶ್ಚಯಿಸಿರಲಿಲ್ಲ.

ಶಕ್ತಂ ತು ತದ್ರಥಗತಾಂ ಪ್ರಸಮೀಕ್ಷ್ಯ ಕೃಷ್ಣಃ
ಸಂಸ್ಥಾಪ್ಯ ಪಾರ್ಥಮಪಿ ಸಾತ್ಯಕಮೇವ ಯೋದ್ಧುಮ್ ।
ದತ್ತಾ ಸ್ವಕೀಯರಥಮೇವ ವಿರೋಚನಸ್ಯ
ಪುತ್ರೇಣ ಸೋಽದಿಶದಮುಷ್ಯ ಬಲಂ ಪ್ರದಾಯ ॥

ಕರ್ಣನ ರಥದಲ್ಲಿ ಶಕ್ತ್ಯಾಯುಧವನ್ನು ಕಂಡು ಕೃಷ್ಣ ಅರ್ಜುನನನ್ನು ತಡದು ಸಾತ್ಯಕಿಗೆ ತನ್ನ ರಥವನ್ನು ಕೊಟ್ಟು ಬಲವನ್ನೂ ನೀಡಿ ಕರ್ಣನೊಡನೆ ಹೋರಾಡಲು ಅವನಿಗೆ ಆದೇಶ ನೀಡಿದನು.

ಶಿಷ್ಯಂ ತ್ವಶಕ್ತಮಿಹ ಮೇ ಪ್ರತಿಯೋಧನಾಯ
ಪಾರ್ಥೋ ಹ್ಯದಾದಿತಿ ಸ ಸಾತ್ಯಕಿಮೀಕ್ಷಮಾಣಃ ।
ಸಂಸ್ಪರ್ಧಯೈವ ಯುಯುಧೇ ವಿರಥಂ ಚಕಾರ
ತೇನೈವ ಸಾತ್ಯಕಿರಮುಂ ಹರಿಯಾನಸಂಸ್ಥಃ ॥

ಅರ್ಜುನನು ನನ್ನೊಡನೆ ಹೋರಾಡಲು ದುರ್ಬಲನಾದ ತನ್ನ ಶಿಷ್ಯನನ್ನು ಕಳಿಸಿಕೊಟ್ಟಿದ್ದಾನೆ ಎಂದು ಕರ್ಣನು ಸಾತ್ಯಕಿಯನ್ನು ದಿಟ್ಟಿಸುತ್ತ ಸ್ಪರ್ಧೆಯಿಂದಲೇ ಯುದ್ಧ

ಮಾಡಿದನು. ಆದರಿಂದ ಕೃಷ್ಣನ ರಥದಲ್ಲಿ ಕುಳಿತಿದ್ದ ಸಾತ್ಯಕಿ ಅವನನ್ನು ವಿರಥನನ್ನಾಗಿ ಮಾಡಿದನು.

ನ ಕೇಶವರಥೇ ಕಶ್ಚಿತ್ ಸ್ಥಿತೋ ಯಾತಿ ಪರಾಜಯಮ್ ।
ಅತಶ್ಚ ಸಾತ್ಯಕಿರ್ನಾऽಪ ಕರ್ಣೇನಾತ್ರ ಪರಾಜಯಮ್ ॥

ಶ್ರೀಕೃಷ್ಣನ ರಥದಲ್ಲಿ ಕುಳಿತವನು ಯಾರೂ ಯುದ್ಧದಲ್ಲಿ ಪರಾಜಯ ಹೊಂದುವುದಿಲ್ಲ. ಆದರಿಂದಲೂ ಸಾತ್ಯಕಿ ಕರ್ಣನಿಂದ ಪರಾಜಯ ಹೊಂದಲಿಲ್ಲ.

ಶಸ್ತ್ರಸಂಗ್ರಹಕಾಲೇ ತು ಕುಮಾರಾಣಾಂ ವ್ರತಂ ಭವೇತ್ ।
ಇತ್ಯುಕ್ತಂ ಜಾಮದಗ್ನ್ಯೇನ ಧನುರ್ವಿದ್ಯಾಪುರಾಕೃತಾ ॥

ಧನುರ್ವಿದ್ಯೆಯ ಪ್ರಥಮ ಆಚಾರ್ಯನಾದ ಪರಶುರಾಮ ಶಿಷ್ಯರಿಗೆ ಹೇಳಿದ್ದ 'ಶಿಷ್ಯರಿಗೆ ಶಸ್ತ್ರವಿದ್ಯಾಭ್ಯಾಸ ಮಾಡಿಸುವ ಕಾಲದಲ್ಲಿ ನೀವು ಕುಮಾರರಿಂದ ಒಂದು ವ್ರತವನ್ನು ಸ್ವೀಕಾರ ಮಾಡಿಸಬೇಕು.

ತಚ್ಛತ್ರುವಧರೂಪಂ ಚ ಪೂರ್ವಾಸಿದ್ಧಂ ಚ ಗೂಹಿತಮ್ ।
ಅವಿರುದ್ಧಂ ಚ ಧರ್ಮಸ್ಯ ಕಾರ್ಯಂ ರಾಮಸ್ಯ ತುಷ್ಟಿದಮ್ ॥

ಅನುಪದ್ರವಂ ಚ ಲೋಕಸ್ಯೇತ್ಯತೋ ಭೀಮೋ ವ್ರತಂ ತ್ವಿದಮ್ ।
ಚಕಾರ ತೂಬರೇತ್ಯುಕ್ತೇ ಹನ್ಯಾಮಿತಿ ರಹಃ ಪ್ರಭುಃ ॥

'ಆ ವ್ರತ ಶತ್ರುವಧದ ವ್ರತವಾಗಿರಬೇಕು. ಹಿಂದೆ ಯಾರೂ ಮಾಡದಿದ್ದುದಾಗಿರಬೇಕು. ಗೋಪ್ಯವಾಗಿರಬೇಕು. ಧರ್ಮಕ್ಕೆ ಅವಿರುದ್ಧವಾಗಿರಬೇಕು. ನನಗೆ ಸಂತೋಷದಾಯಕವಾಗಿರಬೇಕು. ಲೋಕಕ್ಕೆ ಉಪದ್ರವವಾಗದಂತಿರಬೇಕು' ಎಂದು. ಆದರಿಂದ ಸರ್ವಶಕ್ತನಾದ ಭೀಮಸೇನ ರಹಸ್ಯವಾಗಿ ಈ ಒಂದು ವ್ರತವನ್ನು ತೊಟ್ಟನು. ನನ್ನನ್ನು ಯಾರು ತೂಬರ, ಹರಕುಗಡ್ಡದವನೆನ್ನುವನೋ ಅವನನ್ನು ಕೊಲ್ಲುವೆ' ಎಂದು.

ಅನುಪದ್ರವಾಯ ಲೋಕಸ್ಯ ಸುವ್ಯಕ್ತಶ್ಮಶ್ರುಮಂಡಲಃ ।
ಸುಶ್ಮಶ್ರುಂ ಮಾಂ ನ ಕಶ್ಚಿದ್ಧಿ ತಥಾ ಬ್ರೂಯಾದಿತಿ ಸ್ಫುಟಮ್ ।
ತದರ್ಜುನೋ ವಿಜಾನಾತಿ ಸ್ನೇಹಾದ್ ಭೀಮೋದಿತಂ ರಹಃ ॥

ಸೊಂಪಾಗಿ ಬೆಳೆದ ಗಡ್ಡ ಉಳ್ಳ ಭೀಮನು ಲೋಕಕ್ಕೆ ಉಪದ್ರವವಾಗದಂತೆ ಈ ಪ್ರತಿಜ್ಞೆಗೈದನು. ಏಕೆಂದರೆ ಒಳ್ಳೆಯ ಗಡ್ಡ ಉಳ್ಳ ನನ್ನನ್ನು ಯಾರು ಹರಕಲು ಗಡ್ಡದವನೆಂದು ಹೇಳಲಾರರು ಎಂದು. ಭೀಮನು ಏಕಾಂತದಲ್ಲಿ ಸ್ವೀಕರಿಸಿದ ಈ ಪ್ರತಿಜ್ಞೆಯನ್ನು ಅರ್ಜುನನು ಸೋದರ ಸ್ನೇಹ ಪ್ರಯುಕ್ತ ತಿಳಿದುಕೊಂಡಿದ್ದಾನೆ.

ಅರ್ಜುನಸ್ಯಾಪಿ ಗಾಂಡೀವಂ ದೇಹೀತ್ಯುಕ್ತೋ ನಿಹನ್ಮಿತಮ್ ।
ಗಾಂಡೀವಸ್ಯಾಽಗಮಂ ಪೂರ್ವಂ ಜಾನಾತ್ಯೇವ ಹಿ ನಾರದಾತ್ ॥

'ನಿನ್ನ ಗಾಂಡೀವವನ್ನು ಬೇರೆಯವರಿಗೆ ಕೊಡು' ಎಂದು ಹೇಳಿದರೆ ಅವನನ್ನು ಕೊಲ್ಲುವೆನೆಂದು ಅರ್ಜುನನದೂ ಪ್ರತಿಜ್ಞೆ ಇದ್ದಿತು. ಗಾಂಡೀವ ಪ್ರಾಪ್ತಿಯ ಬಗ್ಗೆ ನಾರದರ ಮಾತಿನಿಂದ ಅರ್ಜುನ ಮೊದಲೇ ತಿಳಿದಿದ್ದ.

ಇತಿ ತಚ್ಚ ವಿಜಾನಾತಿ ಭೀಮ ಏಕೋ ನ ಚಾಪರಃ ॥

ಹೀಗೆ ಅರ್ಜುನ ಪ್ರತಿಜ್ಞೆ ಮಾಡಿದ್ದನ್ನು ಭೀಮನೊಬ್ಬನೇ ತಿಳಿದಿದ್ದ. ಇನ್ನಾರೂ ತಿಳಿದಿರಲಿಲ್ಲ.

ಪ್ರತಿಜ್ಞಾಂ ಭೀಮಸೇನಸ್ಯ ಬ್ರುವತಃ ಫಲ್ಗುನೇ ರಹಃ ।
ದುರ್ಯೋಧನಸ್ತು ಶುಶ್ರಾವ ತಾಂ ಚ ಕರ್ಣಾಯ ಸೋಽಬ್ರವೀತ್ ॥

ಭೀಮಸೇನನು ತನ್ನ ಪ್ರತಿಜ್ಞೆಯನ್ನು ಗೋಪ್ಯವಾಗಿ ಅರ್ಜುನನಿಗೆ ಹೇಳುತ್ತಿದ್ದಾಗ ದುರ್ಯೋಧನನು ಅದನ್ನು ಕದ್ದಾಲಿಸಿದ. ಅವನು ಅದನ್ನು ಕರ್ಣನಿಗೆ ಹೇಳಿದನು.

ಅತೂಬರೋಽಪಿ ತೇನಾಸೌ ತಸ್ಮಾತ್ ತೂಬರ ಇತ್ಯಲಮ್ ।
ಉಕ್ತಃ ಪ್ರಕೋಪನಾಯೈವ ತಸ್ಮಾದರ್ಜುನಮಬ್ರವೀತ್ ॥

ಭೀಮನಿಗೆ ಕೋಪ ಬರಿಸಲೆಂದೇ ಕರ್ಣನು ತೂಬರನಲ್ಲದವನನ್ನು ತೂಬರ ಎಂದು ನಿಂದಿಸಿದನು. ಆದರಿಂದ ಭೀಮನು ಅರ್ಜುನನಿಗೆ ಹೇಳಿದನು.

ಜಾನಾಸಿ ಮತ್ಪ್ರತಿಜ್ಞಾಂ ತ್ವಂ ತ್ವತ್ಪ್ರತಿಜ್ಞಾಮಹಂ ತಥಾ ।
ತತ್ರ ಹಂತವ್ಯತಾಂ ಪ್ರಾಪ್ತೋ ಮಮ ವೈಕರ್ತನೋಽತ್ರ ಹಿ ॥

ಪ್ರತಿಜ್ಞಾತೋ ವಧಶ್ಚಾಸ್ಯ ತ್ವಯಾऽಪಿ ಮದನುಜ್ಞಯಾ ।
ಅತಸ್ತ್ವಯಾ ಮಯಾ ವಾಯಂ ಹಂತವ್ಯಃ ಸೂತನಂದನಃ ॥

ನನ್ನ ಪ್ರತಿಜ್ಞೆಯನ್ನು ನೀನು ತಿಳಿದುರುವಿ. ನಿನ್ನ ಪ್ರತಿಜ್ಞೆಯನ್ನು ನಾನು ತಿಳಿದಿದ್ದೇನೆ. ಈಗ ಕರ್ಣನು ನನಗೆ ವಧ್ಯನೆನಿಸಿದ್ದಾನೆ. ನೀನೂ ಅವನನ್ನು ವಧಿಸುವ ಪ್ರತಿಜ್ಞೆ ಮಾಡಿರುವಿ. ಅದು ನನ್ನ ಅನುಜ್ಞೆಯಿಂದ. ಹೀಗಾಗಿ ನೀನು ಅಥವಾ ನಾನು ಕರ್ಣನನ್ನು ಕೊಲ್ಲಬೇಕಾಗಿದೆ.

ಇತ್ಯುಕ್ತೋ ವಾಸವಿಃ ಪ್ರಾಹ ಹಂತವ್ಯೋऽಯಂ ಮಯೈವ ಹಿ ।
ತ್ವದೀಯೋऽಹಂ ಯತಸ್ತೇನ ಮತೃತಂ ತ್ವತೃತಂ ಭವೇತ್ ॥

ನ ತ್ವತೃತಂ ಮತೃತಂ ಸ್ಯಾದ್ ಗುರುರ್ಮಮ ಯತೋ ಭವಾನ್ ।
ಅತೋ ಮಯೈವ ಹಂತವ್ಯ ಇತ್ಯುಕ್ತ್ವಾ ಕರ್ಣಮಬ್ರವೀತ್ ॥

ಭೀಮನು ಹೀಗೆ ಹೇಳಿದಾಗ ಅರ್ಜುನನೆಂದ 'ನಾನೇ ಕರ್ಣನನ್ನು ಕೊಲ್ಲುವುದು ಉಚಿತ. ಏಕೆಂದರೆ ನಾನು ನಿನ್ನವನು. ನಾನು ಮಾಡಿದರೆ ನೀನು ಮಾಡಿದಂತೆಯೇ ಆಗುತ್ತದೆ. ನೀನು ಮಾಡಿದರೆ ನಾನು ಮಾಡಿದಂತಾಗುವುದಿಲ್ಲ. ಏಕೆಂದರೆ ನೀನು ನನಗೆ ಹಿರಿಯ. ಅದರಿಂದ ನಾನೇ ಕರ್ಣನನ್ನು ಕೊಲ್ಲಬೇಕು' ಹೀಗೆ ಹೇಳಿ ಅರ್ಜುನನು ಕರ್ಣನಿಗೆ ಹೇಳಿದನು.

ರೂಕ್ಷಾ ವಾಚಃ ಶ್ರಾವಿತೋऽಯಂ ಭೀಮಃ ಕೃಷ್ಣಸ್ಯ ಶೃಣ್ವತಃ ।
ಯಚ್ಚಾಭಿಮನ್ಯುರ್ಯಷ್ಟಾಭಿರೇಕಃ ಸಂಭೂಯ ಪಾತಿತಃ ॥

'ಕರ್ಣನೇ, ನೀನು ಕೃಷ್ಣ ಕೇಳುತ್ತಿರುವಂತೆಯೇ ಭೀಮನಿಗೆ ಕೆಟ್ಟ ಮಾತುಗಳನ್ನಾಡಿರುವಿ ಮತ್ತು ನೀವೆಲ್ಲರೂ ಸೇರಿ ಒಬ್ಬ ಅಭಿಮನ್ಯುವನ್ನು ಕೊಂದಿರುವಿರಿ.

ಅತಸ್ತ್ವಾಂ ನಿಹನಿಷ್ಯಾಮಿ ತತ್ತುತ್ತಂ ಚ ತವಾಗ್ರತಃ ।
ಇತ್ಯುಕ್ತೋऽನ್ಯರಥಂ ಪ್ರಾಪ್ಯ ಕರ್ಣ ಆವೀಜ್ಜಯದ್ರಥಮ್ ॥

'ಅದರಿಂದ ನಾನು ನಿನ್ನನ್ನು ಕೊಲ್ಲುತ್ತೇನೆ. ನಿನ್ನ ಸಮ್ಮುಖದಲ್ಲಿಯೇ ನಿನ್ನ ಮಗನಾದ ವೃಷಸೇನನನ್ನೂ ಕೊಲ್ಲುತ್ತೇನೆ' ಎಂದು ಅರ್ಜುನನು ಹೇಳಿದಾಗ ಕರ್ಣನು ಇನ್ನೊಂದು ರಥವನ್ನೇರಿ ಜಯದ್ರಥನ ರಕ್ಷಣೆಗೆ ಹೊರಟು ಹೋದನು.

ದ್ರೌಣಿಕರ್ಣಾಭಿಗುಪ್ತಂ ತಂ ನಾಶಕದ್ಭಂತುಮರ್ಜುನಃ ।
ತತ್ರ ವೇಗಂ ಪರಂ ಚಕ್ರೇ ದ್ರೌಣಿಃ ಪಾರ್ಥನಿವಾರಣೇ ॥

ಅಶ್ವತ್ಥಾಮರು ಮತ್ತು ಕರ್ಣನಿಂದ ರಕ್ಷಿತನಾಗಿದ್ದ ಜಯದ್ರಥನನ್ನು ಕೊಲ್ಲಲು ಅರ್ಜುನನು ಶಕ್ತನಾಗಲಿಲ್ಲ. ಆಗ ಅಶ್ವತ್ಥಾಮರು ಅರ್ಜುನನನ್ನು ತಡೆಯಲು ಬಹಳ ಪರಾಕ್ರಮ ತೋರಿದರು.

ನ ಚೈನಮಶಕತ್ ತರ್ತುಂ ಯತ್ನವಾನಪಿ ಫಲ್ಗುನಃ ।
ತಯೋರಾಸೀದ್ವಿರಂ ಯುದ್ಧಂ ಚಿತ್ರಂ ಲಘು ಚ ಸುಷ್ಠು ಚ ॥

ಅರ್ಜುನನು ಎಷ್ಟು ಪ್ರಯತ್ನಮಾಡಿದರೂ ಅಶ್ವತ್ಥಾಮರನ್ನು ಅತಿಕ್ರಮಿಸಿ ಹೋಗಲು ಶಕ್ತನಾಗಲಿಲ್ಲ. ಅವಿಬ್ಬರೂಳಗೆ ಹಸ್ತ ಚಮತ್ಕಾರದಿಂದ ಕೂಡಿದ ಉತ್ತಮವಾದ ಯುದ್ಧ ಬಹುಕಾಲದವರೆಗೆ ನಡೆಯಿತು.

ತದ್ ದೃಷ್ಟ್ವಾ ಭಗವಾನ್ ಕೃಷ್ಣೋ ಲೋಹಿತಾಯತಿ ಭಾಸ್ಕರೇ ।
ಅಜತೇ ದ್ರೋಣತನಯೇ ತ್ವಹತೇ ಚ ಜಯದ್ರಥೇ ।
ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜ ತಮ ಊರ್ಜಿತಮ್ ॥

ಅದನ್ನು ನೋಡಿ ಭಗವಾನ್ ಶ್ರೀಕೃಷ್ಣನು ಸೂರ್ಯ ಕೆಂಪಾಗುತ್ತಿರುವಾಗ ಇನ್ನೂ ಅಶ್ವತ್ಥಾಮರನ್ನು ಹಿಮ್ಮೆಟ್ಟದಿರುವಾಗ ಜಯದ್ರಥ ಹತನಾಗದಿದ್ದಾಗ ಅರ್ಜುನನ ಜಯಾಕಾಂಕ್ಷಿಯಾಗಿ ಶಕ್ತಶಾಲಿಯಾದ ಕತ್ತಲನ್ನು ಸೃಷ್ಟಿಸಿದನು.

ತಮೋವ್ಯಾಪ್ತೇ ಗಗನೇ ಸೂರ್ಯಮಸ್ತಂ
ಗತಂ ಮತ್ವಾ ದ್ರೌಣಿಪೂರ್ವಾಃ ಸಮಸ್ತಾಃ ।
ವಿಶಶ್ರಮುಃ ಸೈಂಧವಶ್ಚಾರ್ಜುನಸ್ಯ
ಹತಪ್ರತಿಜ್ಞಸ್ಯ ಮುಖಂ ಸಮೈಕ್ಷತ ॥

ಆಕಾಶದಲ್ಲಿ ಕತ್ತಲು ಹರಡಿದಾಗ ದ್ರೋಣರು ಮೊದಲಾದವರೆಲ್ಲರೂ ಸೂರ್ಯಾಸ್ತವಾಯಿತೆಂದು ತಿಳಿದು ಯುದ್ಧನಿಲ್ಲಿಸಿ ವಿಶ್ರಾಂತಿ ಪಡೆದರು. ಅರ್ಜುನನು ತನ್ನ ಪ್ರತಿಜ್ಞೆಯನ್ನು ಪೂರೈಸಲಿಲ್ಲ ಎಂದು ಭಾವಿಸಿ ಅವನ ಮುಖವನ್ನು ಜಯದ್ರಥ ನೋಡಲು ತೊಡಗಿದನು.

ತದಾ ಹರೇರಾಜ್ಞಯಾ ಶಕ್ರಸೂನು-
ಶ್ಚಕರ್ತ ಬಾಣೇನ ಜಯದ್ರಥಸ್ಯ ।
ಅಗ್ನಿಂ ವಿವಿಕ್ಷನ್ನಿವ ದರ್ಶಿತಃ ಶರ-
ಸ್ತದಾ ವಚಃ ಪ್ರಾಹ ಜನಾರ್ದನಸ್ತಮ್ ॥

ವಹ್ನಿಪ್ರವೇಶ ಮಾಡಲು ಹೊರಟಂತೆ ಕಾಣಿಸಿಕೊಂಡ ಅರ್ಜುನನು ಕೃಷ್ಣನ ಆದೇಶದಂತೆ ಜಯದ್ರಥನ ಶಿರವನ್ನು ಬಾಣದಿಂದ ತರಿದನು. ಆಗ ಕೃಷ್ಣನು ಅವನಿಗೆ ಈ ಮಾತನ್ನು ಅನುಡಿದನು.

ನೈತಚ್ಛಿರಃ ಪಾತಯ ಭೂತಳೇ ತ್ವ-
ಮಿತೀರಿತಃ ಪಾಶುಪತಾಸ್ತ್ರತೇಜಸಾ ।
ದಧಾರ ಬಾಣೈರನುಪುಂಖಿಪುಂಖೈಃ
ಪುನಸ್ತಮೂಚೇ ಗರುಡಧ್ವಜೋ ವಚಃ ॥

'ನೀನು ಈ ಶಿರವನ್ನು ನೆಲದಲ್ಲಿ ಬೀಳಗೊಡಬೇಡ' ಕೃಷ್ಣನು ಹೀಗೆ ಹೇಳಿದಾಗ ಅರ್ಜುನನು ಪಾಶುಪತಾಸ್ತ್ರದ ಪ್ರಭಾವದಿಂದ ಪುಂಖಾನುಪುಂಖವಾಗಿ ಬಾಣಗಳನ್ನು ಹೊರಡಿಸಿ ಶಿರಸ್ಸು ನೆಲಕ್ಕೆ ಬೀಳದಂತೆ ತಡೆಹಿಡಿದನು. ಆಗ ಪುನಃ ಕೃಷ್ಣನು ನುಡಿದ.

ಇದಂ ಪಿತುಸ್ತಸ್ಯ ಕರೇ ನಿಪಾತ್ಯತಾಂ
ವರೋಽಸ್ಯ ದತ್ತೋ ಹಿ ಪುರಾಽಮುನಾಽಯಮ್ ।
ಶಿರೋ ನಿಕೃತ್ತಂ ಭುವಿ ಪಾತಯೇದ್ ಯ-
ಸ್ತವಾಸ್ಯ ಭೂಯಾಚ್ಚ ಶಿರಃ ಸಹಸ್ರಧಾ ॥

'ಈ ಶಿರಸ್ಸನ್ನು ಜಯದ್ರಥನ ತಂದೆಯ ಕೈಯಲ್ಲಿ ಬೀಳಿಸು. ಏಕೆಂದರೆ ಅವನು ಜಯದ್ರಥನಿಗೆ ವರ ನೀಡಿದ್ದಾನೆ. 'ಯಾರು ಛಿನ್ನವಾದ ನಿನ್ನ ಶಿರವನ್ನು ನೆಲದಲ್ಲಿ ಬೀಳಿಸುವನೋ ಅವನ ಶಿರ ಸಾವಿರ ಹೋಳಾಗಲಿ' ಎಂದು.

ಇತಿ ಸ್ಮ ವಧ್ಯಃ ಸ ಪಿತಾಽಪಿ ತೇನೇ-
ತ್ಯುದೀರಿತೇ ತಸ್ಯ ಸಂಧ್ಯಾಕ್ರಿಯಸ್ಯ ।
ಅಂಕೇ ವ್ಯಧಾತ್ ತಚ್ಛಿರ ಆಶು ವಾಸವಿಃ
ಸ ಸಂಭ್ರಮಾತ್ ತದ್ ಭುವಿ ಚ ನ್ಯಪಾತಯತ್ ॥

'ಈ ರೀತಿ ವರ ನೀಡಿದ್ದರಿಂದ ಜಯದ್ರಥನ ತಂದೆಯೂ ಕೂಡ ವಧಾರ್ಹನಾಗಿದ್ದಾನೆ' ಎಂದು ಶ್ರೀಕೃಷ್ಣನು ಹೇಳಿದಾಗ ಸಂಧ್ಯಾವಂದನೆ ಮಾಡುತ್ತಿದ್ದ ತಂದೆಯ ತೊಡೆಯ ಮೇಲಿದ್ದ ಕೈಯಲ್ಲಿ ಜಯದ್ರಥನ ಶಿರವನ್ನು ಬೇಗನೆ ಅರ್ಜುನನು ಹಾಕಿದನು. ತಂದೆ ಗಾಬರಿಯಿಂದ ಆ ಶಿರವನ್ನು ನೆಲದಲ್ಲಿ ಬೀಳಿಸಿದನು.

ತತೋऽಭವತ್ ತಸ್ಯ ಶಿರಃ ಸಹಸ್ರಧಾ
ಹರಿಶ್ಚ ಚಕ್ರೇ ತಮಸೋ ಲಯಂ ಪುನಃ ।
ತದೈವ ಸೂರ್ಯೇ ಸಕೈಶ್ಚ ದೃಷ್ಟೇ
ಹಾಹೇತಿ ವಾದಃ ಸುಮಹಾನಥಾऽಸೀತ್ ॥

ಆಗ ತಂದೆಯ ಶಿರಸ್ಸನ್ನು ಸಾವಿರ ಹೋಳಾಯಿತು. ಬಳಿಕ ಕೃಷ್ಣನು ಕತ್ತಲನ್ನು ಕರಗಿಸಿದನು. ಒಡನೆಯೇ ಸೂರ್ಯ ಎಲ್ಲರಿಗೂ ಕಾಣಿಸಿಕೊಂಡಾಗ ಕೌರವ ಸೈನ್ಯದಲ್ಲಿ ಬಲು ದೊಡ್ಡ ಹಾಹಾಕಾರ ಉಂಟಾಯಿತು.

ಭೀಮಸ್ತದಾ ಶಲ್ಯಸುಯೋಧನಾದೀನ್
ಕೃಪಂ ಚ ಜಿತ್ವಾ ವ್ಯನದತ್ ಸುಭೈರವಮ್ ।
ಕುರ್ವನ್ ಸಾಹಾಯ್ಯಂ ಫಲ್ಗುನಸ್ಯೈವ ತುಷ್ಟೋ
ಬಭೂವ ಶೈನೇಯ ಉತೋ ಹತೇ ರಿಪೌ ॥

ಆಗಲೇ ಭೀಮಸೇನನು ಶಲ್ಯದುರ್ಯೋಧನ ಮುಂತಾದವರನ್ನೂ, ಕೃಪರನ್ನೂ ಗೆದ್ದು ಭಯಂಕರವಾಗಿ ಸಿಂಹನಾದ ಗೈದನು. ಅರ್ಜುನನಿಗೆ ಸಹಾಯ ಮಾಡಲು ಬಂದಿದ್ದ ಭೀಮನೂ, ಸಾತ್ಯಕಿಯೂ ಶತ್ರು ಹತನಾದನೆಂದು ಸಂತುಷ್ಟರಾದರು.

ಅಪೂರಯತ್ ಪಾಂಚಜನ್ಯಂ ಚ ಕೃಷ್ಣೋ
ಮುದಾ ತದಾ ದೇವದತ್ತಂ ಚ ಪಾರ್ಥಃ ।
ಭೀಮಸ್ಯ ನಾದಂ ಸಹಪಾಂಚಜನ್ಯ
ಘೋಷಂ ಶ್ರುತ್ವಾ ನಿಹತಂ ಸಿಂಧುರಾಜಮ್ ॥

ಜ್ಞಾತ್ವಾ ರಾಜಾ ಧರ್ಮಸುತೋ ಮುಮೋದ
ದುರ್ಯೋಧನಶ್ಚಾಸ್ಯ ಸುದುಃಖಿತಸ್ತದಾ ॥

ಶ್ರೀಕೃಷ್ಣನು ಸಂತೋಷದಿಂದ ಪಾಂಚಜನ್ಯ ಶಂಖವನ್ನು ಮೊಳಗಿಸಿದನು. ಅರ್ಜುನನೂ ದೇವದತ್ತ ಶಂಖವನ್ನು ಮೊಳಗಿಸಿದನು. ಪಾಂಚಜನ್ಯನಾದದೊಂದಿಗೆ ಭೀಮನು ಸಿಂಹನಾದವನ್ನೂ ಕೇಳಿ ಧರ್ಮರಾಜನು ಜಯದ್ರಥನು ಹತನಾದನೆಂದು ತಿಳಿದು ಆನಂದಗೊಂಡನು. ದುರ್ಯೋಧನನು ಬಹಳ ದುಃಖಿತನಾದನು.

ತತೋ ದ್ರೌಣಿಮುಖಾಂ ಸೇನಾಂ
ಸರ್ವಾಂ ಭೀಮೋಭ್ಯವರ್ತತ ।
ಪಾರ್ಥಃ ಕರ್ಣಮುಖಾನ್ ಶಿಷ್ಟಾನ್
ತತೋऽಭ್ಯಯಾತ ತದ್ ಬಲಮ್ ॥

ಬಳಿಕ ಅಶ್ವತ್ಥಾಮರ ನೇತೃತ್ವದಲ್ಲಿ ಎದುರಾದ ಸಮಸ್ತ ಸೈನ್ಯವನ್ನು ಭೀಮನು ಎದುರಿಸಿದನು. ಕರ್ಣನ ನೇತೃತ್ವದಲ್ಲಿ ಬಂದ ಉಳಿದ ಸೈನ್ಯವನ್ನು ಅರ್ಜುನನು ಎದುರಿಸಿದನು. ಆಗ ಕರ್ಣ-ಅಶ್ವತ್ಥಾಮರ ಸೈನ್ಯವೇ ಸೋತಿತು.

ಶೀರ್ಣಾಂ ಸೇನಾಂ ಪ್ರವಿವಿಶುರ್ಧೃಷ್ಟದ್ಯುಮ್ನಪುರೋಗಮಾಃ ।
ತತಸ್ತಂ ದೇಶಮಾಪುಸ್ತೇ ಯತ್ರ ಭೀಮಧನಂಜಯೌ ॥

ಹೀಗೆ ಸೋತ ಕೌರವ ಸೈನ್ಯವನ್ನು ಧೃಷ್ಟದ್ಯುಮ್ನ ಮುಂತಾದವರೂ ಹೊಕ್ಕರು. ಭೀಮಾರ್ಜುನರಿದ್ದಲ್ಲಿಗೆ ಬಂದರು.

ತತ ಏಕೀಕೃತಾಃ ಸರ್ವೇ ಪಾಂಡವಾಃ ಸಹಸೋಮಕಾಃ ।
ಪರಾನ್ ವಿದ್ರಾವಯಾಮಾಸುಸ್ತೇ ಭೀತಾಃ ಪ್ರಾದ್ರವನ್ ದಿಶಃ ॥

ಬಳಿಕ ಪಾಂಡವರೂ ಪಾಂಚಾಲರೂ ಎಲ್ಲರೂ ಒಂದಾಗಿ ಶತ್ರುಗಳನ್ನು ಓಡಿಸಿದರು. ಶತ್ರುಗಳು ಹೆದರಿ ಎಲ್ಲ ದಿಕ್ಕುಗಳಿಗೆ ಪಲಾಯನ ಮಾಡಿದರು.

ವಿದ್ರಾವ್ಯಮಾಣಂ ಸೈನ್ಯಂ ತಂ ದೃಷ್ಟ್ವಾ ದುರ್ಯೋಧನೋ ನೃಪಃ ।
ಜಯದ್ರಥವಧಾಚ್ಚೈವ ಕುಪಿತೋऽಭ್ಯದ್ರವತ್ ಪರಾನ್ ॥

ತನ್ನ ಸೈನ್ಯವು ಹೀಗೆ ಓಡಿಸಲ್ಪಡುವುದನ್ನು ಕಂಡು ರಾಜಾ ದುರ್ಯೋಧನನು ಕುಪಿತನಾದನು. ಜಯದ್ರಥನ ವಧೆಯಿಂದ ಮೊದಲೇ ಕುಪಿತನಾಗಿದ್ದ ಆತ ಶತ್ರುಗಳಿಗೆ ಎದುರಾದರು.

ಸ ಭೀಮಸೇನಂ ಚ ಧನಂಜಯಂ ಚ
ಯುಧಿಷ್ಠಿರಂ ಮಾದ್ರವತೀಸುತೌ ಚ ।
ಧೃಷ್ಟದ್ಯುಮ್ನಂ ಸಾತ್ಯಕಿಂ ದ್ರೌಪದೇಯಾನ್
ಸರ್ವಾನೇಕಃ ಶರವರ್ಷೈರ್ವವರ್ಷ ॥

ಭೀಮಸೇನ, ಅರ್ಜುನ, ಯುಧಿಷ್ಠಿರ, ನಕುಲ, ಸಹದೇವ, ಧೃಷ್ಟದ್ಯುಮ್ನ, ಸಾತ್ಯಕಿ, ದ್ರೌಪದೀಪುತ್ರರು ಇವರೆಲ್ಲರ ಮೇಲೆ ದುರ್ಯೋಧನನೊಬ್ಬನೇ ಬಾಣಗಳ ಮಳೆಗರೆದನು.

ತೇ ವಿವ್ಯಧುಸ್ತಂ ಬಹುಭಿಃ ಶಿಲೀಮುಖೈಃ
ಸ ತಾನನಾದೃತ್ಯ ಚಕರ್ತ ಬಾಣೈಃ ।
ಧನೂಂಷಿ ಚತ್ರಾಣಿ ಮಹಾರಥಾನಾಂ
ಚಕಾರ ಸಂಖ್ಯೇ ವಿರಥೌ ಯಮೌ ಚ ॥

ಭೀಮಾರ್ಜುನ ಮುಂತಾದವರು ಬಹಳ ಬಾಣಗಳಿಂದ ದುರ್ಯೋಧನನನ್ನು ಹೊಡೆದರು. ಅವನು ಅವುಗಳನ್ನು ಲೆಕ್ಕಿಸದೆ ಬಾಣಗಳಿಂದ ಮಹಾರಥರ ನಾನಾ ಬಗೆಯ ಧನುಸ್ಸುಗಳನ್ನೂ ಕತ್ತರಿಸಿದನು. ನಕುಲ, ಸಹದೇವರನ್ನು ವಿರಥರನ್ನಾಗಿ ಮಾಡಿದನು.

ಆದಾಯ ಚಾಪಾನಿ ಪರಾಣಿ ತೇऽಪಿ
ದುರ್ಯೋಧನಂ ವವೃಷುಃ ಸಾಯಕೌಘೈಃ ।
ಅಚಿಂತಯಿತ್ವೈವ ಶರಾನ್ ಸ ಏಕೋ
ನ್ಯವಾರಯತ್ ತಾನಖಿಲಾಂಶ್ಚ ಬಾಣೈಃ ॥

ಮಹಾರಥರೂ ಕೂಡ ಬೇರೆ ಬಿಲ್ಲುಗಳನ್ನೆತ್ತಿಕೊಂಡು ದುರ್ಯೋಧನನ ಮೇಲೆ ಬಾಣಗಳ ಮಳೆಗರೆದರು. ಒಬ್ಬನೇ ದುರ್ಯೋಧನ ಅವುಗಳನ್ನೂ ಲೆಕ್ಕಿಸದೆ ಎಲ್ಲವನ್ನೂ ಬಾಣಗಳಿಂದ ತಡೆದನು.

ತಂ ಗಾಹಮಾನಂ ದ್ವಿಷತಾಂ ಬಹೂನಾಂ
ಮಧ್ಯೇ ದ್ರೋಣದ್ರೌಣಿಕೃಪಪ್ರಧಾನಾಃ ।
ದೃಷ್ಟ್ವಾ ಸರ್ವೇ ಜುಗುಪುಃ ಸ್ವಾತ್ತಚಾಪಾ
ಅನಾರತಂ ಬಾಣಗಣಾನ್ ಸೃಜಂತಃ ॥

ಬಹುಮಂದಿ ಶತ್ರುಗಳ ನಡುವೆ ದುರ್ಯೋಧನನು ಮುಳುಗುತ್ತಿದ್ದುದನ್ನು ಕಂಡು ದ್ರೋಣ-ಅಶ್ವತ್ಥಾಮ-ಕೃಪ ಮುಂತಾದವರೆಲ್ಲರೂ ಬಿಲ್ಲನ್ನು ಧರಿಸಿ ಎಡೆಬಿಡದೆ ಬಾನ ಸಮೂಹಗಳನ್ನೆಸೆಯುತ್ತ ದುರ್ಯೋಧನನನ್ನು ಕಾಪಾಡಿಕೊಂಡರು.

ಸುಯೋಧನಃ ಕರ್ಣಮಾಹ ಜಹಿ ಭೀಮಮಿಮಂ ಯುಧಿ ।
ಸ ಆಹ ನೈಷ ಶಕ್ಯೋ ಹಿ ಜೇತುಂ ದೇವೈಃ ಸವಾಸವೈಃ ॥

'ದುರ್ಯೋಧನನು ಕರ್ಣನಿಗೆ ಹೇಳಿದ, 'ಈ ಭೀಮನನ್ನು ಯುದ್ಧದಲ್ಲಿ ಸಂಹರಿಸು'. ಅದಕ್ಕೆ ಕರ್ಣನು 'ಭೀಮನನ್ನು ಗೆಲ್ಲಲು ಇಂದ್ರಾದಿ ದೇವತೆಗಳಿಂದಲೂ ಶಕ್ಯವಿಲ್ಲ'.

ದೈವಾಜ್ಜೀವಾಮ್ಯಹಂ ರಾಜನ್ ಯುದ್ಧ್ಯನೇನಾತಿಪೀಡಿತಃ ।
ಅತೋ ಘಟಾಮಹೇ ಶಕ್ಯಾ ಜಯೋ ದೈವೇ ಸಮಾಹಿತಃ ॥

'ರಾಜನೇ, ನಾನು ಭೀಮನೊಡನೆ ಯುದ್ಧಮಾಡುತ್ತ ಬಹಳ ಪೀಡಿತನಾಗಿ ದೈವಾತ್ ಬದುಕಿ ಉಳಿದಿದ್ದೇನೆ. ಅದರಿಂದ ಇನ್ನು ಮುಂದೆ ಶಕ್ಯಾಯುಧದಿಂದ ಹೋರಾಡುತ್ತೇನೆ. ಜಯ ದೈವಾಧೀನ' ಎಂದು ಹೇಳಿದನು.

★ ★ ★ ★ ★

ನೂರ ಒಂದನೆಯ ಅಧ್ಯಾಯ

ಸಾತ್ಯಕಿಯಿಂದ ಜಲಸಂಧನ ವಧೆ.

ಸಂಜಯಃ

ಶೃಣುಷ್ವೈಕಮನಾ ರಾಜನ್ ಯನ್ಮಾಂ ತ್ವಂ ಪರಿಪೃಚ್ಛಸಿ ।
ದ್ರಾವ್ಯಮಾಣೇ ಬಲೇ ತಸ್ಮಿನ್ ಹಾರ್ದಿಕ್ಯೇನ ಮಹಾತ್ಮನಾ ॥ ೧ ॥

ಲಜ್ಜಯಾऽವನತೇ ಚಾಪಿ ಪ್ರಹೃಷ್ಟೈಶ್ಚೈವ ತಾವಕೈಃ ।
ದ್ವೀಪೋ ಯ ಆಸೀತ್ ಪಾಂಡೂನಾಮಗಾಧೇ ಗಾಧಮಿಚ್ಛತಾಮ್ ॥೨॥

ಸಂಜಯ– ಎಲೈ ರಾಜನೇ, ಮಹಾಬಲನಾದ ಕೃತವರ್ಮನಿಂದ ಪಾಂಡವರ ಸೈನ್ಯವು ಚದುರಿಸಲ್ಪಟ್ಟು ಪಾಂಡವಯೋಧರು ನಾಚಿಕೆಯಿಂದ ತಲೆತಗ್ಗಿಸಿರಲು ಮತ್ತು

ನಿನ್ನ ಯೋಧರು ಸಂತೋಷಗೊಂಡಿರಲು ಅಗಾಧವಾದ ಸಮಾಗಮದಲ್ಲಿ ನೆಲೆಯನ್ನು ಬಯಸುವ ಪಾಂಡವರಿಗೆ ಯಾರು ರಕ್ಷಕರಾದರು ಎಂದು ಕೇಳುತ್ತಿರುವಿಯಷ್ಟೆ? ಅದನ್ನು ಒಂದೇ ಮನಸ್ಸಿನಿಂದ ಕೇಳುವವನಾಗು.

ಶ್ರುತ್ವಾ ತು ನಿನದಂ ಭೀಮಂ ತಾವಕಾನಾಂ ಮಹಾಹವೇ ।
ಶೈನೇಯಸ್ತ್ವರಿತೋ ರಾಜನ್ ಕೃತವರ್ಮಾಣಮಭ್ಯಯಾತ್ ॥ ೩ ॥

ಎಲೈ ರಾಜನೇ, ಆ ದೊಡ್ಡ ಯುದ್ಧದಲ್ಲಿ ನಿನ್ನವರ ಭಯಂಕರವಾದ ಹರ್ಷನಾದವನ್ನು ಕೇಳಿ ಸಾತ್ಯಕಿಯು ಶೀಘ್ರವಾಗಿ ಕೃತವರ್ಮನ ಮೇಲೆ ಧಾವಿಸಿ ಬಂದನು.

ಕೃತವರ್ಮಾ ತು ಹಾರ್ದಿಕ್ಯಃ ಶೈನೇಯಂ ನಿಶಿತೈಃ ಶರೈಃ ।
ಅವಾಕಿರತ್ ಸುಸಂಕ್ರುದ್ಧಸ್ತೋऽಕ್ರುದ್ಧ್ಯತ್ ಸ ಸಾತ್ಯಕಿಃ ॥ ೪ ॥

ಹೃದಿಕನ ಪುತ್ರನಾದ ಕೃತವರ್ಮನು ಬಹಳ ಕೋಪಗೊಂಡು ಸಾತ್ಯಕಿಯ ಮೇಲೆ ಹರಿತವಾದ ಬಾಣಗಳ ಮಳೆಯನ್ನು ಸುರಿಸಿದನು. ಆಗ ಸಾತ್ಯಕಿಯು ಕೋಪಗೊಂಡನು.

ತತಃ ಸುನಿಶಿತಂ ಭಲ್ಲಂ ಶೈನೇಯಃ ಕೃತವರ್ಮಣೇ ।
ಪ್ರೇಷಯಾಮಾಸ ಸಮರೇ ಶರಾಂಶ್ಚ ಚತುರೋऽಪರಾನ್ ॥ ೫ ॥

ತೇ ತಸ್ಯ ಜಘ್ನಿರೇ ವಾಹಾನ್ ಭಲ್ಲೇನಾಸ್ಯಾಚ್ಛಿನದ್ ಧನುಃ ।
ಪೃಷ್ಠರಕ್ಷಂ ತಥಾ ಸೂತಮವಿಧ್ಯನ್ನಿಶಿತೈಃ ಶರೈಃ ॥ ೬ ॥

ಆಗ ಸಾತ್ಯಕಿಯು ಕೃತವರ್ಮನನ್ನು ತೀಕ್ಷ್ಣವಾದ ಭಲ್ಲದಿಂದಲೂ ಮತ್ತು ಬೇರೆ ನಾಲ್ಕು ಬಾಣಗಳಿಂದಲೂ ಹೊಡೆದನು. ಆ ಬಾಣಗಳು ಕೃತವರ್ಮನ ರಥದ ನಾಲ್ಕು ಅಶ್ವಗಳನ್ನು ಕೊಂದವು. ಭಲ್ಲವು ಅವನ ಧನುಸ್ಸನ್ನು ಕತ್ತರಿಸಿತು. ಸಾತ್ಯಕಿಯು ಬೇರೆ ಬಾಣಗಳನ್ನು ಪ್ರಯೋಗಿಸಿ ಹಿಂದಿನಿಂದ ಅವನಿಗೆ ರಕ್ಷಣೆಯನ್ನು ಕೊಡುವವನನ್ನು ಮತ್ತು ಅವನ ರಥದ ಸೂತನನ್ನು ಹೊಡೆದು ಕೊಂದನು.

ತತಸ್ತಂ ವಿರಥಂ ಕೃತ್ವಾ ಸಾತ್ಯಕಿಃ ಸತ್ಯವಿಕ್ರಮಃ ।
ಸೇನಾಮಸ್ಯಾರ್ದಯಾಮಾಸ ಶರೈಃ ಸನ್ನತಪರ್ವಭಿಃ ॥ ೭ ॥

ಸತ್ಯಪರಾಕ್ರಮವುಳ್ಳ ಸಾತ್ಯಕಿಯು ಆಗ ಕೃತವರ್ಮನನ್ನು ರಥಹೀನನನ್ನಾಗಿ ಮಾಡಿ, ಬಾಗಿದ ತುದಿಯುಳ್ಳ ಬಾಣಗಳಿಂದ ಅವನ ಸೈನ್ಯವನ್ನು ಪೀಡಿಸಿದನು.

ಸಾಭಜ್ಯತಾಥ ಪೃತನಾ ಶೈನೇಯಶರಪೀಡಿತಾ ।
ತತಃ ಪ್ರಾಯಾದ್ ವೈ ತ್ವರಿತಃ ಸಾತ್ಯಕಿಃ ಸತ್ಯವಿಕ್ರಮಃ ॥ ೮ ॥

ಶೃಣು ರಾಜನ್ ಯದಕರೋತ್ತವ ಸೈನ್ಯೇಷು ವೀರ್ಯವಾನ್ ।
ಅತೀತ್ಯ ಸ ಮಹಾರಾಜ ದ್ರೋಣಾನೀಕಮಹಾರ್ಣವಮ್ ॥ ೯ ॥

ಸಾತ್ಯಕಿಯ ಬಾಣಗಳಿಂದ ಪೀಡಿತವಾದ ಆ ಸೈನ್ಯವು ಭಗ್ನವಾಯಿತು. ಎಲೈ ರಾಜನೇ, ಸತ್ಯಪರಾಕ್ರಮವುಳ್ಳ ಶೂರನಾದ ಸಾತ್ಯಕಿಯು ಅಲ್ಲಿಂದ ಹೊರಟು ದ್ರೋಣರ ಸೈನ್ಯದ ಮಹಾಸಮುದ್ರವನ್ನು ದಾಟಿ ನಿನ್ನ ಸೈನ್ಯದಲ್ಲಿ ಏನು ಮಾಡಿದನೆಂಬುದನ್ನು ಕೇಳು.

ಪರಾಜಿತ್ಯ ಚ ಸಂಹೃಷ್ಟಃ ಕೃತವರ್ಮಾಣಮಾಹವೇ ।
ಯಂತಾರಮಬ್ರವೀಚ್ಛೂರಃ ಶನೈರ್ಯಾಹೀತ್ಯಸಂಭ್ರಮಮ್ ॥ ೧೦ ॥

ಶೂರನಾದ ಸಾತ್ಯಕಿಯು ಯುದ್ಧದಲ್ಲಿ ಕೃತವರ್ಮನನ್ನು ಸೋಲಿಸಿ ಸಂತೋಷಗೊಂಡು ತನ್ನ ಸಾರಥಿಯನ್ನು ಕುರಿತು ಗಾಬರಿಯಿಲ್ಲದೆ ನಿಧಾನವಾಗಿ ಹೋಗು ಎಂದು ಹೇಳಿದನು.

ದೃಷ್ಟ್ವಾ ತು ತವ ತತ್ ಸೈನ್ಯಂ ರಥಾಶ್ವದ್ವಿಪಸಂಕುಲಮ್ ।
ಪದಾತಿಜನಸಂಪೂರ್ಣಮಬ್ರವೀತ್ ಸಾರಥಿಂ ಪುನಃ ॥ ೧೧ ॥

ರಥಾಶ್ವ-ಗಜ-ಪದಾತಿಗಳಿಂದ ತುಂಬಿದ್ದ ನಿನ್ನ ಆ ಸೈನ್ಯವನ್ನು ನೋಡಿ ಪುನಃ ತನ್ನ ಸಾರಥಿಯನ್ನು ಕುರಿತು ಹೇಳಿದನು.

ಯದೇತನ್ಮೇಘಸಂಕಾಶಂ ದ್ರೋಣಾನೀಕಸ್ಯ ಸವ್ಯತಃ ।
ಸುಮಹತ್ ಕುಂಜರಾನೀಕಂ ಯಸ್ಯ ರುಗ್ಮರಥೋ ಮುಖಮ್ ॥ ೧೨॥

ಏತೇ ಹಿ ಬಹವಃ ಸೂತ ದುರ್ನಿವಾರ್ಯಾಶ್ಚ ಸಂಯುಗೇ ।
ದುರ್ಯೋಧನಸಮಾದಿಷ್ಟಾ ತದರ್ಥೇ ತ್ಯಕ್ತಜೀವಿತಾಃ ।
ರಾಜಪುತ್ರಾ ಮಹೇಷ್ವಾಸಾಃ ಸರ್ವೇ ಏಕ್ರಾಂತಯೋಧಿನಃ ॥ ೧೩ ॥

ತ್ರಿಗರ್ತಾನಾಂ ರಥೋದಾರಾಃ ಸುವರ್ಣವಿಕೃತಧ್ವಜಾಃ ।
ಮಾಮೇವಾಭಿಮುಖಾ ವೀರಾ ಯೋತ್ಸ್ಯಮಾನಾ ವ್ಯವಸ್ಥಿತಾಃ ॥ ೧೪ ॥

ದ್ರೋಣರ ಸೈನ್ಯದ ಎಡಭಾಗದಲ್ಲಿ ರುಗ್ಮರಥನನ್ನು ಮುಂದಿಟ್ಟುಕೊಂಡಿರುವ ಮೋಡಗಳನ್ನು ಹೋಲುವ ದೊಡ್ಡ ಗಜಸೇನೆ ಇದೆಯಷ್ಟೆ? ಎಲೈ ಸೂತನೇ, ಇವರೆಲ್ಲರೂ ಮಹಾಧನುರ್ಧಾರಿಗಳಾದ ರಾಜಪುತ್ರರು. ಪರಾಕ್ರಮದಿಂದ ಯುದ್ಧವನ್ನು ಮಾಡುವವರು. ಯುದ್ಧದಲ್ಲಿ ತಡೆಯಲು ಕಷ್ಟಸಾಧ್ಯರಾದವರು. ದುರ್ಯೋಧನನ ಆಜ್ಞೆಯಂತೆ ಅವನ ಸಲುವಾಗಿ ಪ್ರಾಣಗಳನ್ನು ಬಿಡಲು ಸಿದ್ಧರಾದವರು. ಸುವರ್ಣಾಲಂಕೃತವಾದ ಧ್ವಜಗಳನ್ನು ಹೊಂದಿರುವ ಇವರು ತ್ರಿಗರ್ತರ ರಥಶ್ರೇಷ್ಠರು. ವೀರರಾದ ಇವರು ನನ್ನ ಜೊತೆಯಲ್ಲಿಯೇ ಯುದ್ಧಮಾಡಲು ನನಗೆ ಅಭಿಮುಖವಾಗಿ ನಿಂತಿದ್ದಾರೆ.

ಅತ್ರ ಮಾಂ ಪ್ರಾಪಯ ಕ್ಷಿಪ್ರಮಶ್ವಾಂಶ್ಚೋದಯ ಸಾರಥೇ ।
ತ್ರಿಗರ್ತೈಃ ಸಹ ಯೋತ್ಸ್ಯಾಮಿ ಭಾರದ್ವಾಜಸ್ಯ ಪಶ್ಯತಃ ॥ ೧೫ ॥

ಎಲೈ ಸಾರಥಿಯೇ, ಅಲ್ಲಿಗೆ ಅಶ್ವಗಳನ್ನು ಪ್ರಚೋದಿಸಿ, ನನ್ನನ್ನು ಬೇಗ ಕರೆದುಕೊಂಡು ಹೋಗು. ದ್ರೋಣರು ನೋಡುತ್ತಿರುವಂತೆಯೇ ನಾನು ತ್ರಿಗರ್ತರ ಜೊತೆಯಲ್ಲಿ ಯುದ್ಧವನ್ನು ಮಾಡುವೆನು (ಎಂದು ಹೇಳಿದನು).

ಸಂಜಯಃ

ತತಃ ಪ್ರಾಯಾಚ್ಛನೈಃ ಸೂತಃ ಸಾತ್ವತಸ್ಯ ಮತೇ ಸ್ಥಿತಃ ।
ರಥೇನಾದಿತ್ಯವರ್ಣೇನ ಭಾಸ್ವರೇಣ ಪತಾಕಿನಾ ॥ ೧೬ ॥

ಸಂಜಯ– ಆಗ ಸಾರಥಿಯು ಪ್ರಕಾಶಮಾನವಾದ ಸೂರ್ಯವರ್ಣದ ಪತಾಕೆಗಳಿಂದ ಕೂಡಿದ ರಥವನ್ನು ಸಾತ್ಯಕಿಯ ಅಭಿಪ್ರಾಯದಂತೆ ಸಧಾನವಾಗಿ ಮುಂದೆ ತೆಗೆದುಕೊಂಡು ಹೋದನು.

ತಮೂಹುಃ ಸಾರಥೇರ್ವಶ್ಯಾ ವಲ್ಗಮಾನಾ ಹಯೋತ್ತಮಾಃ ।
ವಾಯುವೇಗಸಮಾಃ ಸಂಖೇ ಕುಂದೇಂದುರಜತಪ್ರಭಾಃ ॥ ೧೭ ॥

ವಾಯುವೇಗಕ್ಕೆ ಸಮಾನವಾದ ವೇಗವನ್ನು ಹೊಂದಿದ, ಕುಂದ ಪುಷ್ಪಗಳ, ಚಂದ್ರನ ಮತ್ತು ರಜತದ ಕಾಂತಿಯನ್ನು ಹೊಂದಿದ, ಸಾರಥಿಯ ವಶವಾದ ಅವನ ಶ್ರೇಷ್ಠವಾದ ಕುದುರೆಗಳು ರಣರಂಗದಲ್ಲಿ ಕೆನೆಯುತ್ತಾ ಅವನನ್ನು ಎಳೆದುಕೊಂಡು ಹೋದವು.

ಆಪತಂತಂ ರಥಂ ತಂ ತು ಶಂಖವರ್ಣೈರ್ಹಯೋತ್ತಮೈಃ ।
ಪರಿವವ್ರುಸ್ತತಃ ಶೂರಾ ಗಜಾನೀಕೇನ ಸರ್ವತಃ ।
ಕಿರಂತೋ ವಿವಿಧಾಂಸ್ತೀಕ್ಷ್ಣಾನ್ ಸಾಯಕಾಲ್ಲಘುವೇಧಿನಃ ॥ ೧೮ ॥

ಶಂಖವರ್ಣದ ಶ್ರೇಷ್ಠ ಅಶ್ವಗಳಿಂದ ಕೂಡಿದ ಆ ರಥವು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿ, ಶೂರರೂ, ಕ್ಷಿಪ್ರವಾಗಿ ಬಾಣಗಳನ್ನು ಪ್ರಯೋಗಿಸುವವರೂ ಆದ ನಿನ್ನ ಯೋಧರು ಅನೇಕ ವಿಧವಾದ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಗಜಸೇನೆಯ ಜೊತೆಯಲ್ಲಿ ಎಲ್ಲ ಕಡೆಗಳಲ್ಲಿಯೂ ಅವನನ್ನು ಸುತ್ತುವರಿದರು.

ಸಾತ್ವತೋಽಪಿ ಶಿತೈರ್ಬಾಣೈರ್ಗಜಾನೀಕಮಯೋಧಯತ್ ।
ಪರ್ವತಾನಿವ ವರ್ಷೇಣ ತಪಾಂತೇ ಜಲದೋ ಮಹಾನ್ ॥ ೧೯ ॥

ಬೇಸಿಗೆಯು ಕಳೆದು ಮಳೆಗಾಲವು ಬಂದಾಗ ದೊಡ್ಡ ಮೋಡವು ಪರ್ವತಗಳ ಮೇಲೆ ಮಳೆಯನ್ನು ಸುರಿಸುವಂತೆ ಸಾತ್ಯಕಿಯೂ ಕೂಡ ಹರಿತವಾದ ಬಾಣಗಳಿಂದ ಗಜಸೇನೆಯನ್ನು ಹೊಡೆದನು.

ವಜ್ರಾಶನಿಸಮಸ್ಪರ್ಶೈರ್ವಧ್ಯಮಾನಾಃ ಶರೈರ್ಗಜಾಃ ।
ಪ್ರಾದ್ರವನ್ ರಣಮುತ್ಸೃಜ್ಯ ಶಿನಿವೀರ್ಯಸಮೀರಿತೈಃ ॥ ೨೦ ॥

ಸಾತ್ಯಕಿಯಿಂದ ಶ್ರೇಷ್ಠ ಬಲದಿಂದ ಪ್ರಯೋಗಿಸಲ್ಪಟ್ಟು ವಜ್ರಾಯುಧಕ್ಕೆ ಮತ್ತು ಸಿಡಿಲಿಗೆ ಸಮಾನವಾದ ಸ್ಪರ್ಶವುಳ್ಳ ಬಾಣಗಳಿಂದ ಹೊಡೆಯಲ್ಪಟ್ಟ ಗಜಗಳು ಯುದ್ಧ ಭೂಮಿಯನ್ನು ಬಿಟ್ಟು ಓಡಿಹೋದವು.

ಶೀರ್ಣದಂತಾ ವಿರುಧಿರಾ ಭಿನ್ನಮಸ್ತಕಪಿಂಡಕಾಃ ।
ವಿಶೀರ್ಣಕರ್ಣಾಸ್ಯಕರಾ ವಿನಿಯನ್ನಪತಾಕಿನಃ ॥ ೨೧ ॥

ಸಂಭಿನ್ನವರ್ಮಘಂಟಾಶ್ಚ ಸನಿಕೃತ್ತಮಹಾಧ್ವಜಾಃ ।
ಹತಾರೋಹಾ ದಿಶೋ ರಾಜನ್ ಭೇಜಿರೇ ಭ್ರಷ್ಟಕಂಬಳಾಃ ॥ ೨೨ ॥

ತಮ್ಮ ದಂತಗಳು ಮುರಿಯಲ್ಪಟ್ಟು, ಶಿರಸ್ಸುಗಳು ಮತ್ತು ಶರೀರವು ಭೇದಿಸಲ್ಪಟ್ಟು, ಕರ್ಣಗಳು, ಸೊಂಡಿಲು ಮತ್ತು ಮುಖಗಳು ಭಗ್ನಗೊಳಿಸಲ್ಪಟ್ಟು, ಸಾರಥಿ ಮತ್ತು ಪತಾಕೆಗಳಿಂದ ಹೀನಗಳಾಗಿ, ಕವಚಗಳು ಮತ್ತು ಗಂಟೆಗಳು ಭೇದಿಸಲ್ಪಟ್ಟು, ಬೆನ್ನಿನ ಮೇಲೆ ಹಾಸಿದ ಕಂಬಳಿಗಳು ಜಾರಿಹೋಗಿ, ಧ್ವಜಗಳು ಕತ್ತರಿಸಲ್ಪಟ್ಟು ಗಜಾರೋಹಿಗಳು ಮೃತರಾಗಿ, ಆ ಗಜಗಳು ದಿಕ್ಕುದಿಕ್ಕುಗಳಿಗೆ ಓಡಿಹೋದವು.

ರುವಂತೋ ವಿವಿಧಾನ್ ರಾವಾನ್ ಜಲದೋಪಮನಿಸ್ವನಾಃ ।
ನಾರಾಚೈರ್ವತ್ಸದಂತೈಶ್ಚ ಸಾತ್ವತೇನ ವಿದಾರಿತಾಃ ॥
ಕ್ಷರಂತೋಸೃಕ್ ತಥಾ ಮೂತ್ರಂ ಪುರೀಷಂ ಚ ಪ್ರದುದ್ರುವುಃ ।
ಬಭ್ರಮುಶ್ಚಾಸ್ಖಲಂಶ್ಚಾನ್ಯೇ ಮಮ್ರುಶ್ಚೈವ ತಥಾಪರೇ ॥
ಏವಂ ತತ್ಕುಂಜರಾನೀಕಂ ಯುಯುಧಾನೇನ ಪಾತಿತಮ್ ।
ಶರೈರಗ್ನ್ಯರ್ಕಸಂಕಾಶೈಃ ಪ್ರದುದ್ರಾವ ಸಮಂತತಃ ॥ ೨೩ ॥

ಸಾತ್ವತ ಕುಲದ ಸಾತ್ಯಕಿಯಿಂದ ನಾರಾಚಗಳಿಂದಲೂ ಮತ್ತು ವತ್ಸದಂತಗಳಿಂದಲೂ ಸೀಳಲ್ಪಟ್ಟ, ಮೇಘಗರ್ಜನೆಯಂತಹ ಘೋಷವನ್ನು ಹೊಂದಿದ ಆ ಗಜಗಳು ವಿಧವಿಧವಾಗಿ ಕಿರುಚುತ್ತಾ ರಕ್ತವನ್ನು, ಮಲ-ಮೂತ್ರಗಳನ್ನೂ ಸ್ರವಿಸುತ್ತಾ ಓಡಿಹೋದವು. ಕೆಲವು ಅಲ್ಲಿಯೇ ತಿರುಗಾಡಿದವು, ಇನ್ನು ಕೆಲವು ಎಡವಿದವು, ಇನ್ನು ಕೆಲವು ಮೃತವಾದವು. ಹೀಗೆ ಸಾತ್ಯಕಿಯಿಂದ ಅಗ್ನಿ-ಸೂರ್ಯರಿಗೆ ಸಮನಾದ ಕಾಂತಿಯುಳ್ಳ ಬಾಣಗಳಿಂದ ಹೊಡೆಯಲ್ಪಟ್ಟ ಆ ಗಜಸೇನೆಯು ಎಲ್ಲಕಡೆಯಲ್ಲಿಯೂ ಓಡಿಹೋಯಿತು.

ತಸ್ಮಿನ್ ದ್ರುತೇ ಗಜಾನೀಕೇ ಜಲಸಂಧೋ ಮಹಾರಥಃ ।
ಯತ್ತಃ ಸಂಪ್ರಾಪಯನ್ನಾಗಂ ರಜತಾಶ್ವರಥಂ ಪ್ರತಿ ॥ ೨೪ ॥

ಆ ಗಜಸೇನೆಯು ಆ ರೀತಿಯಲ್ಲಿ ಓಡಿಹೋಗುತ್ತಿರಲು ಮಹಾರಥನಾದ ಜಲಸಂಧನು ರಜತಬಣ್ಣದ ಅಶ್ವಗಳನ್ನು ಹೂಡಿದ ರಥವನ್ನು ಹೊಂದಿದ್ದ ಸಾತ್ಯಕಿಯ ಮೇಲೆ ಪ್ರಯತ್ನಪೂರ್ವಕವಾಗಿ ತನ್ನ ಗಜವನ್ನು ಪ್ರೇರಿಸಿದನು.

ರುಗ್ಮವರ್ಣಕರಃ ಶೂರಸ್ತಪನೀಯಾಂಗದಃ ಶುಚಿಃ ।
ಕುಂಡಲೀ ಮುಕುಟೀ ಶಂಖೀ ರಕ್ತಚಂದನರೂಷಿತಃ ॥ ೨೫ ॥

ಶಿರಸಾ ಧಾರಯನ್ ದೀಪ್ತಾಂ ತಪನೀಯಮಯೀಂ ಸ್ರಜಮ್ ।
ಉರಸಾ ಧಾರಯನ್ನಿಷ್ಕಂ ಕಂಠಸೂತ್ರಂ ಚ ಭಾಸ್ವರಮ್ ॥ ೨೬ ॥

ಚಾಪಂ ಚ ರುಗ್ಮವಿಕೃತಂ ವಿಧುನ್ವನ್ ಗಜಮೂರ್ಧನಿ ।
ಅಶೋಭತ ಮಹಾರಾಜ ಸವಿದ್ಯುದಿವ ತೋಯದಃ ॥ ೨೭ ॥

ಸುವರ್ಣಮಯವಾದ ಕವಚವನ್ನು ಧರಿಸಿದ, ಸುವರ್ಣಮಯವಾದ ಅಂಗದವನ್ನು ಧರಿಸಿದ, ಕುಂಡಲಗಳನ್ನೂ ಕಿರೀಟವನ್ನೂ ಧರಿಸಿ ರಕ್ತಚಂದನದಿಂದ ಲೇಪಿತನಾದ, ಕೈಯಲ್ಲಿ ಶಂಖವನ್ನು ಹಿಡಿದ, ಶುಚಿಯಾದ, ಶಿರಸ್ಸಿನಲ್ಲಿ ಸುವರ್ಣಮಯವಾದ ಪ್ರಕಾಶಮಾನವಾದ ಮಾಲೆಯನ್ನು ಧರಿಸಿದ, ಎದೆಯಲ್ಲಿ ನಿಷ್ಕಗಳನ್ನೂ ಮತ್ತು ಪ್ರಕಾಶಮಾನವಾದ ಕಂಠಸೂತ್ರವನ್ನೂ ಧರಿಸಿದ, ಶೂರನಾದ ಜಲಸಂಧನು ಎಲೈ ಮಹಾರಾಜನೇ, ತನ್ನ ಗಜದ ಶಿರಸ್ಸಿನಲ್ಲಿ ಸುವರ್ಣಾಲಂಕೃತವಾದ ಧನುಸ್ಸನ್ನು ಕಂಪಿಸುತ್ತಾ, ಮಿಂಚುಗಳಿಂದ ಕೂಡಿದ ಮೋಡದಂತೆ ಶೋಭಿಸಿದನು.

ತಮಾಪತಂತಂ ಸಹಸಾ ಮಾಗಧಸ್ಯ ಗಜೋತ್ತಮಮ್ ।
ಸಾತ್ಯಕಿರ್ವಾರಯಾಮಾಸ ವೇಲೇವೋದ್ವರ್ತಮಾರ್ಣವಮ್ ॥ ೨೮ ॥

ವೇಗವಾಗಿ ಬರುತ್ತಿದ್ದ ಮಗಧರಾಜನ ಶ್ರೇಷ್ಠವಾದ ಆ ಗಜವನ್ನು ಕ್ರುದ್ಧವಾದ ಸಮುದ್ರವನ್ನು ತೀರವು ತಡೆದಂತೆ ಸಾತ್ಯಕಿಯು ತಡೆದನು.

ನಾಗಂ ನಿವಾರಿತಂ ದೃಷ್ಟ್ವಾ ಶೈನೇಯಸ್ಯ ಶರೋತ್ತಮೈಃ ।
ಅಕ್ರುದ್ಧ್ಯತ ರಣೇ ರಾಜನ್ ಜಲಸಂಧೋ ಮಹಾಬಲಃ ॥ ೨೯ ॥

ಸಾತ್ಯಕಿಯ ಶ್ರೇಷ್ಠ ಬಾಣಗಳಿಂದ ತನ್ನ ಗಜವು ತಡೆಯಲ್ಪಟ್ಟುದನ್ನು ನೋಡಿ ಎಲೈ ರಾಜನೇ, ಮಹಾಬಲನಾದ ಜಲಸಂಧನು ರಣರಂಗದಲ್ಲಿ ಕೋಪಗೊಂಡನು.

ತತಃ ಕ್ರುದ್ಧೋ ಮಹೇಷ್ವಾಸೋ ಮಾರ್ಗಣೈರ್ಭಾರಸಾಧನೈಃ ।
ಅವಿದ್ಧತ ಶಿನೇಃ ಪೌತ್ರಂ ಜಲಸಂಧೋ ಮಹೋರಸಿ ।
ಸ ವಾರ್ಯಮಾಣೋ ಬಾಣೌಘೈಃ ಶೈನೇಯೇನಾಥ ವೀರ್ಯವಾನ್ ॥

ಸಾತ್ಯಕಿಯು ಪ್ರಯೋಗಿಸಿದ ಬಾಣಗಳ ಸಮೂಹದಿಂದ ತಡೆಯಲ್ಪಟ್ಟ ಪರಾಕ್ರಮಶಾಲಿಯಾದ ಮಹಾಧನುರ್ಧಾರಿಯಾದ ಜಲಸಂಧನು ಕೋಪಗೊಂಡು

ಗುರುತರಕಾರ್ಯವನ್ನು ಮಾಡುವ ತನ್ನ ಬಾಣಗಳಿಂದ ಸಾತ್ಯಕಿಯನ್ನು ಅವನ ವಿಶಾಲವಾದ ವಕ್ಷಸ್ಥಲದಲ್ಲಿ ಹೊಡೆದನು.

ತತೋಪರೇಣ ಭಲ್ಲೇನ ಪೀತೇನ ನಿಶಿತೇನ ಚ ।
ಅಸ್ಯತೋ ವೃಷ್ಣಿವೀರಸ್ಯ ನಿಚಕರ್ತ ಶರಾಸನಮ್ ॥ ೩೧ ॥

ಆನಂತರ ನೀರನ್ನು ಕುಡಿಸಿ ತೀಕ್ಷ್ಣಗೊಳಿಸಿದ ಇನ್ನೊಂದು ಭಲ್ಲದಿಂದ ಬಾಣವನ್ನು ಪ್ರಯೋಗಿಸಲು ಉದ್ಯುಕ್ತನಾಗಿದ್ದ ವೃಷ್ಣಿವೀರನಾದ ಸಾತ್ಯಕಿಯ ಧನುಸ್ಸನ್ನು ಕತ್ತರಿಸಿದನು.

ಸಾತ್ಯಕಿಂ ಛಿನ್ನಧನ್ವಾನಂ ಪ್ರಹಸನ್ನಿವ ಭಾರತ ।
ಅವಿಧ್ಯನ್ಮಾಗಧೋ ವೀರಃ ಪಂಚಭಿರ್ನಿಶಿತೈಃ ಶರೈಃ ॥ ೩೨ ॥

ಎಲೈ ಭಾರತನೇ, ಧನುಸ್ಸು ಕತ್ತರಿಸಲ್ಪಟ್ಟ ಸಾತ್ಯಕಿಯ ಮೇಲೆ ವೀರನಾದ, ಮಗಧರಾಜನಾದ ಅವನು ನಗುವವನಂತೆ ತೀಕ್ಷ್ಣವಾದ ಐದು ಬಾಣಗಳನ್ನು ಪ್ರಯೋಗಿಸಿದನು.

ಸ ವಿದ್ಧೋ ಬಹುಭಿರ್ಬಾಣೈರ್ಜಲಸಂಧೇನ ವೀರ್ಯವಾನ್ ।
ನಾಕಂಪತ ಮಹಾಬಾಹುಸ್ತದದ್ಭುತಮಿವಾಭವತ್ ॥ ೩೩ ॥

ಜಲಸಂಧನಿಂದ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟರೂ ಪರಾಕ್ರಮಶಾಲಿಯೂ ಮಹಾಬಾಹುವೂ ಆದ ಸಾತ್ಯಕಿಯು ಅಲುಗಾಡಲಿಲ್ಲ. ಅದು ಅದ್ಭುತವಾಗಿದ್ದಿತು.

ಅಚಿಂತಯನ್ ವೈ ಸ ಶರಾನ್ನಾತ್ಯರ್ಥಂ ಸಂಭ್ರಮಾದ್ ಬಲೀ ।
ಧನುರನ್ಯತ್ ಸಮಾದಾಯ ತಿಷ್ಠ ತಿಷ್ಠೇತ್ಯುವಾಚ ಹ ॥ ೩೪ ॥

ಬಲಿಷ್ಠನಾದ ಸಾತ್ಯಕಿಯು ಆ ಬಾಣಗಳನ್ನು ಗಣನೆಗೇ ತೆಗೆದುಕೊಳ್ಳದೆ ಬಹಳ ಗಾಬರಿಯನ್ನು ಹೊಂದದೆ, ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಜಲಸಂಧನನ್ನು ಕುರಿತು ನಿಲ್ಲು, ನಿಲ್ಲು ಎಂದು ಹೇಳಿದನು.

ಏತಾವದುಕ್ತ್ವಾ ಶೈನೇಯೋ ಜಲಸಂಧಂ ಮಹೋರಸಿ ।
ವಿವ್ಯಾಧ ಷಷ್ಟ್ಯಾ ಸುಭೃಶಂ ಶರಾಣಾಂ ಪ್ರಹಸನ್ನಿವ ॥ ೩೫ ॥

ಹೀಗೆ ಹೇಳಿ ಸಾತ್ಯಕಿಯು ನಗುವವನಂತೆ ಆರವತ್ತು ತೀಕ್ಷ್ಣವಾದ ಬಾಣಗಳಿಂದ ಜಲಸಂಧನನ್ನು ಅವನ ಎದೆಯಲ್ಲಿ ಹೊಡೆದನು.

ಕ್ಷುರಪ್ರೇಣ ಚ ಪೀತೇನ ಮುಷ್ಪಿದೇಶೇ ಮಹದ್ಧನುಃ ।
ಜಲಸಂಧಸ್ಯ ಚಿಚ್ಛೇದ ವಿವ್ಯಾಧ ಚ ತ್ರಿಭಿಃ ಶರೈಃ ॥ ೩೬ ॥

ನೀರನ್ನು ಕುಡಿಸಿ ಹದಮಾಡಿದ ಒಂದು ಕ್ಷುರಪ್ರದಿಂದ ಜಲಸಂಧನ ದೊಡ್ಡ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿ ಅವನನ್ನು ಮೂರು ಬಾಣಗಳಿಂದ ಹೊಡೆದನು.

ಜಲಸಂಧಸ್ತು ತತ್ ತ್ಯಕ್ತ್ವಾ ಸಶರಂ ವೈ ಶರಾಸನಮ್ ।
ತೋಮರಂ ವ್ಯಸೃಜತ್ ತೂರ್ಣಂ ಸಾತ್ಯಕಿಂ ಪ್ರತಿ ಮಾರಿಷ ॥ ೩೭ ॥

ಎಲೈ ಪೂಜ್ಯನೇ, ಜಲಸಂಧನು ಆ ಧನುಸ್ಸನ್ನು ಮತ್ತು ಬಾಣವನ್ನು ಬಿಟ್ಟು ತೋಮರವನ್ನು ತೆಗೆದುಕೊಂಡು, ಆದನ್ನು ಸಾತ್ಯಕಿಯ ಮೇಲೆ ಶೀಘ್ರವಾಗಿ ಪ್ರಯೋಗಿಸಿದನು.

ಸ ನಿರ್ಭಿದ್ಯ ಭುಜಂ ಸವ್ಯಂ ಮಾಧವಸ್ಯ ಮಹಾರಣೇ ।
ಅಭ್ಯಗಾದ್ ಧರಣೀಂ ಘೋರಃ ಶ್ವಸನ್ನಿವ ಮಹೋರಗಃ ॥ ೩೮ ॥

ಘೋರವಾದ ಆ ತೋಮರವು ದೊಡ್ಡ ರಣರಂಗದಲ್ಲಿ ಮಧುಕುಲದಲ್ಲಿ ಜನಿಸಿದ ಸಾತ್ಯಕಿಯ ಎಡಭುಜವನ್ನು ಭೇದಿಸಿಕೊಂಡು ಭುಸುಗುಟ್ಟುವ ದೊಡ್ಡ ಸರ್ಪದಂತೆ ಭೂಮಿಯೊಳಗೆ ಇಳಿಯಿತು.

ನಿರ್ಭಿನ್ನೇ ತು ಭುಜೇ ಸವ್ಯೇ ಸಾತ್ಯಕಿಃ ಸತ್ಯವಿಕ್ರಮಃ ।
ತ್ರಿಂಶದ್ಭಿರ್ವಿಶಿಖೈಸ್ತೀಕ್ಷ್ಣೈರ್ಜಲಸಂಧಮತಾಡಯತ್ ॥ ೩೯ ॥

ತನ್ನ ಭುಜವು ಬಹಳ ಗಾಯಗೊಳ್ಳುತ್ತಿರಲು ಸತ್ಯವಿಕ್ರಮನಾದ ಸಾತ್ಯಕಿಯು ಮೂವತ್ತು ತೀಕ್ಷ್ಣವಾದ ಬಾಣಗಳಿಂದ ಜಲಸಂಧನನ್ನು ಹೊಡೆದನು.

ಪ್ರಗೃಹ್ಯ ತು ತತಃ ಖಡ್ಗಂ ಜಲಸಂಧೋ ಮಹಾಬಲಃ ।
ಆರ್ಷಭಂ ಚರ್ಮ ಚ ಮಹಚ್ಛತಚಂದ್ರಮಲಂಕೃತಮ್ ।
ತತ ಆವಿಧ್ಯ ತಂ ಖಡ್ಗಂ ಸಾತ್ವತಾಯೋತ್ಸಸರ್ಜ ಹ ॥ ೪೦ ॥

ಆಗ ಮಹಾಬಲನಾದ ಜಲಸಂಧನು ಖಡ್ಗವನ್ನು ಮತ್ತು ವೃಷಭಚರ್ಮದ ಹಿಡಿಯುಳ್ಳ ಶತಚಂದ್ರಚಿಹ್ನೆಗಳಿಂದ ಅಲಂಕೃತವಾದ ದೊಡ್ಡ ಗುರಾಣಿಯನ್ನು ತೆಗೆದುಕೊಂಡು, ಖಡ್ಗವನ್ನು ತಿರುಗಿಸಿ ಅದನ್ನು ಸಾತ್ಯಕಿಯ ಮೇಲೆ ಎಸೆದನು.

ಶೈನೇಯಸ್ಯ ಧನುಶ್ಛಿತ್ತ್ವಾ ಸ ಖಡ್ಗೋ ನ್ಯಪತನ್ಮಹೀಮ್ ।
ಅಲಾತಚಕ್ರವಚ್ಚೈವ ವ್ಯರೋಚತ ಮಹೀಂ ಗತಃ ॥ ೪೧ ॥

ಆ ಖಡ್ಗವು ಸಾತ್ಯಕಿಯ ಧನುಸ್ಸನ್ನು ಕತ್ತರಿಸಿ ಭೂಮಿಯ ಮೇಲೆ ಬಿದ್ದಿತು. ಭೂಮಿಯ ಮೇಲೆ ಬಿದ್ದ ಆ ಖಡ್ಗವು ಅಲಾತಚಕ್ರದಂತೆ ಶೋಭಿಸಿತು.

ಅಥಾನ್ಯದ್ಧನುರಾದಾಯ ಸರ್ವಕಾಯಾವದಾರಣಮ್ ।
ಸಾಲಸ್ಕಂಧಪ್ರತೀಕಾಶಮಿಂದ್ರಾಶನಿಸಮಸ್ವನಮ್ ।
ವಿಸ್ಫಾರ್ಯ ವಿವ್ಯಧೇ ಕ್ರುದ್ಧೋ ಜಲಸಂಧಂ ಶರೇಣ ಹ ॥ ೪೨ ॥

ಆಗ ಸಾತ್ಯಕಿಯು ಎಲ್ಲ ಶರೀರವನ್ನೂ ಭೇದಿಸುವ, ಸಾಲವೃಕ್ಷದ ಸ್ಕಂಧದಂತೆ ಸ್ಥೂಲವಾಗಿದ್ದ, ಇಂದ್ರನ ವಜ್ರಾಯುಧಕ್ಕೆ ಸಮವಾದ ಘೋಷವುಳ್ಳ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಕ್ರುದ್ಧನಾಗಿ ಅದನ್ನು ಎಳೆದು ಜಲಸಂಧನನ್ನು ಬಾಣದಿಂದ ಹೊಡೆದನು.

ತತಃ ಸಾಭರಣೌ ಬಾಹೂ ಕ್ಷುರಾಭ್ಯಾಂ ಪರಿಘೋಪಮೌ ।
ಸಾಂಗದೌ ಜಲಸಂಧಸ್ಯ ಚಿಚ್ಛೇದ ಪ್ರಹಸನ್ನಿವ ॥ ೪೩ ॥

ಆನಂತರ ನಗುತ್ತಲೇ ಎರಡು ಕ್ಷುರಗಳಿಂದ ಆಭರಣಗಳಿಂದ ಅಲಂಕೃತವಾಗಿದ್ದ, ಭುಜಕೀರ್ತಿಯನ್ನು ಹೊಂದಿದ್ದ, ಕಬ್ಬಿಣದ ಒನಕೆಯಂತಿದ್ದ ಜಲಸಂಧನ ಎರಡು ಬಾಹುಗಳನ್ನು ಕತ್ತರಿಸಿದನು.

ತೌ ಬಾಹೂ ಪರಿಘಪ್ರಖ್ಯೌ ಪೇತತುರ್ಗಜಸತ್ತಮಾತ್ ।
ವಸುಂಧರಧರಾದ್ ಭ್ರಷ್ಟೌ ಪಂಚಶೀರ್ಷಾವಿವೋರಗೌ ॥ ೪೪ ॥

ಪರ್ವತದಿಂದ ಬಿದ್ದ ಐದು ಹೆಡೆಯ ಎರಡು ಸರ್ಪಗಳಂತೆ ಒನಕೆಗಳಂತಿದ್ದ ಆ ಬಾಹುಗಳು ಆ ಶ್ರೇಷ್ಠವಾದ ಗಜದಿಂದ ಕೆಳಗೆ ಬಿದ್ದವು.

ತತಃ ಸುದಂಷ್ಟ್ರಂ ಸುಹನು ಚಾರುಕುಂಡಲಮುನ್ನಸಮ್ ।
ಕ್ಷುರೇಣಾಸ್ಯ ತೃತೀಯೇನ ಶಿರಶ್ಚಿಚ್ಛೇದ ಸಾತ್ಯಕಿಃ ॥ ೪೫ ॥

ಅನಂತರ ಸಾತ್ಯಕಿಯು ಮೂರನೆಯ ಕ್ಷುರವನ್ನು ಪ್ರಯೋಗಿಸಿ ಒಳ್ಳೆಯ ದಂತಗಳನ್ನು ಹೊಂದಿದ್ದ, ಒಳ್ಳೆಯ ಗಲ್ಲವನ್ನು ಹೊಂದಿದ್ದ, ಮನೋಹರವಾದ ಕುಂಡಲಗಳನ್ನು ಧರಿಸಿದ, ಎತ್ತರವಾದ ಮೂಗನ್ನು ಹೊಂದಿದ್ದ ಜಲಸಂಧನ ಶಿರಸ್ಸನ್ನು ಕತ್ತರಿಸಿದನು.

ತತ್ಪಾತಿತಶಿರೋಬಾಹು ಕಬಂಧಂ ಭೀಮದರ್ಶನಮ್ ।
ದ್ವಿರದಂ ಜಲಸಂಧಸ್ಯ ರುಧಿರೇಣಾಭ್ಯಷಿಂಚತ ॥ ೪೬ ॥

ಶಿರಸ್ಸು ಮತ್ತು ಬಾಹುಗಳು ಕತ್ತರಿಸಲ್ಪಟ್ಟ ಘೋರದರ್ಶನವಾದ ಜಲಸಂಧನ ರುಂಡವು ಅವನ ಗಜವನ್ನು ರಕ್ತದಿಂದ ತೋಯಿಸಿತು.

ಜಲಸಂಧಂ ನಿಹತ್ಯಾಜೌ ತ್ವರಮಾಣಸ್ತು ಸಾತ್ವತಃ ।
ನೈಷಾದಿಂ ಪಾತಯಾಮಾಸ ಗಜಸ್ಕಂಧಾದ್ ವಿಶಾಂಪತೇ ॥ ೪೭ ॥

ಎಲೈ ರಾಜನೇ, ಸಾತ್ಯಕಿಯು ತ್ವರೆಮಾಡುತ್ತಾ ಯುದ್ಧದಲ್ಲಿ ಜಲಸಂಧನನ್ನು ಕೊಂದು ನಿಷಾದಾಧಿಪತಿಯನ್ನು ಆನೆಯ ಕತ್ತಿನಿಂದ ಕೆಳಗೆ ಉರುಳಿಸಿದನು.

ರುಧಿರೇಣಾವಸಿಕ್ತಾಂಗೋ ಜಲಸಂಧಸ್ಯ ಕುಂಜರಃ ।
ವಿಲಂಬಮಾನಮವಹತ್ ಕಬಂಧಂ ಶ್ಲಿಷ್ಟಮಾಸನೇ ॥ ೪೮ ॥

ಜಲಸಂಧನ ಗಜವಾದರೋ ತನ್ನ ಎಲ್ಲ ಶರೀರವೂ ರಕ್ತದಿಂದ ತೋಯಿಸಲ್ಪಟ್ಟು ಬೆನ್ನಿನ ಮೇಲೆ ಆಸನದಲ್ಲಿ ಚೆನ್ನಾಗಿ ಕಟ್ಟಲ್ಪಟ್ಟ ಜಲಸಂಧನ ರುಂಡವು ನೇತಾಡುತ್ತಿರುವಂತೆ ಅವನನ್ನು ಹೊರಗೆ ಕರೆದುಕೊಂಡು ಹೋಯಿತು.

ಶರಾರ್ದಿತಃ ಸಾತ್ವತೇನ ಮರ್ದಮಾನಃ ಸ್ವವಾಹಿನೀಮ್ ।
ಘೋರಮಾರ್ತಸ್ವರಂ ಕೃತ್ವಾ ವಿದುದ್ರಾವ ಮಹಾಗಜಃ ॥ ೪೯ ॥

ಆ ಮಹಾಗಜವು ಸಾತ್ಯಕಿಯ ಬಾಣಗಳಿಂದ ಪೀಡಿತವಾಗಿ ಘೋರವಾದ ಆರ್ತನಾದವನ್ನು ಮಾಡುತ್ತಾ, ತನ್ನ ಸೈನ್ಯವನ್ನೇ ತುಳಿದುಕೊಂಡು ಓಡಿಹೋಯಿತು.

ಹಾಹಾಕಾರೋ ಮಹಾನಾಸೀತ್ತವ ಸೈನ್ಯಸ್ಯ ಮಾರಿಷ ।
ಜಲಸಂಧಂ ಹತಂ ದೃಷ್ಟ್ವಾ ವೃಷ್ಣೀನಾಮೃಷಭೇಣ ಹ ॥ ೫೦ ॥

ಎಲೈ ಪೂಜ್ಯನೇ, ವೃಷ್ಣಿಗಳಲ್ಲಿ ಶ್ರೇಷ್ಠನಾದ ಸಾತ್ಯಕಿಯಿಂದ ಜಲಸಂಧನು ಹತನಾದುದನ್ನು ನೋಡಿ ನಿನ್ನ ಸೈನ್ಯದಲ್ಲಿ ದೊಡ್ಡ ಹಾಹಾಕಾರವು ಉಂಟಾಯಿತು.

ವಿಮುಖಾಶ್ಚಾಭ್ಯಧಾವಂತ ತವ ಯೋಧಾಃ ಸಮಂತತಃ ।
ಪಲಾಯನೇ ಕೃತೋತ್ಸಾಹಾ ನಿರುತ್ಸಾಹಾ ದ್ವಿಷಜ್ಜಯೇ ॥ ೫೧ ॥

ನಿನ್ನ ಯೋಧರು ಶತ್ರುಜಯದ ವಿಷಯದಲ್ಲಿ ಉತ್ಸಾಹವನ್ನು ಕಳೆದುಕೊಂಡು ಪಲಾಯನ ಮಾಡುವುದರಲ್ಲಿ ಉತ್ಸಾಹಭರಿತರಾಗಿ ಯುದ್ಧವಿಮುಖರಾಗಿ ಎಲ್ಲ ಕಡೆಗಳಲ್ಲಿಯೂ ಓಡಿಹೋದರು.

ಏತಸ್ಮಿನ್ನಂತರೇ ರಾಜನ್ ದ್ರೋಣಃ ಶಸ್ತ್ರಭೃತಾಂ ವರಃ ।
ಆಭ್ಯಯಾಜ್ಜವನೈರಶ್ವೈರ್ಯುಯುಧಾನಂ ಮಹಾರಥಮ್ ॥ ೫೨ ॥

ಎಲೈ ರಾಜನೇ, ಈ ಮಧ್ಯದಲ್ಲಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ವೇಗಶಾಲಿಗಳಾದ ಅಶ್ವಗಳಿಂದ ಮಹಾರಥನಾದ ಯುಯುಧಾನನ ಮೇಲೆ ಎರಗಿದರು.

ತಮುದೀರ್ಣಂ ತಥಾ ದೃಷ್ಟ್ವಾ ಶೈನೇಯಂ ಕುರುಪುಂಗವಾಃ ।
ದ್ರೋಣೇನೈವ ಸಹ ಕ್ರುದ್ಧಾಃ ಸಾತ್ಯಕಿಂ ಪರ್ಯವಾರಯನ್ ॥ ೫೩ ॥

ಸಾತ್ಯಕಿಯು ಹಾಗೆ ಬಲದಿಂದ ಅಭ್ಯವೃದ್ಧಿಯನ್ನು ಹೊಂದಿದುದನ್ನು ನೋಡಿ ಕುರುಪುಂಗವರು ಕೋಪಗೊಂಡು ದ್ರೋಣರ ಜೊತೆಯಲ್ಲಿಯೇ ಸಾತ್ಯಕಿಯನ್ನು ಸುತ್ತುವರಿದರು.

ತತಃ ಪ್ರವವೃತೇ ಯುದ್ಧಂ ಕುರೂಣಾಂ ಸಾತ್ವತಸ್ಯ ಚ ।
ದ್ರೋಣಸ್ಯ ಚ ರಣೇ ರಾಜನ್ ಘೋರಂ ದೇವಾಸುರೋಪಮಮ್ ॥

ಎಲೈ ರಾಜನೇ, ಆನಂತರ ಕೌರವರಿಗೂ, ದ್ರೋಣರಿಗೂ ಮತ್ತು ಸಾತ್ಯಕಿಗೂ ದೇವಾಸುರರಿಗೆ ಸದೃಶವಾದ ಘೋರವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಪಂಚಪಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★